ಭಾರತದಲ್ಲಿ ಕೋಳಿಸಾಕಣೆ

ಮೂಲ

ಪಿ ಎಮ್ ಎನ್ ನಾಯ್ಡು

ಅನುವಾದ

ಕೆ ಎಸ್ ಪ್ರತಾಪ್ ಕುಮಾರ್

1976

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–24

ಪ್ರಕಟಣೆ: 44

ಭಾರತದಲ್ಲಿ ಕೋಳಿಸಾಕಣೆ

ಮೂಲ

ಪಿ. ಎಮ್. ಎಸ್. ನಾಯ್ಡು

ಅನುವಾದ

ಕೆ. ಎಸ್. ಪ್ರತಾಪ್ ಕುಮಾರ್

1976

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560 024.

ಮೂಲ–**ಪೌಲ್ಟ್ರಿ ಕೀಪಿಂಗ್ ಇನ್ ಇಂಡಿಯ,** ಶ್ರೀ ಪಿ. ಎಮ್. ಎನ್. ನಾಯ್ಡು ಅವರು ಬರೆದು ಭಾರತೀಯ ಕೃಷಿ ಸಂಶೋಧನ ಪರಿಷತ್ ಪ್ರಕಾಶಿತ ಭಾಷಾಂತರ–**ಭಾರತದಲ್ಲಿ ಕೋಳಿಸಾಕಣೆ** (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ), ಪ್ರಥಮ ಮುದ್ರಣ 1976, ಪ್ರತಿಗಳು 1000, ಪುಟಗಳು xiv + 358 ಬೆಲೆ: ಸಾದಾ ಪ್ರತಿ ರೂ 18–00
ಕ್ಯಾಲಿಕೊ ಪ್ರತಿ ರೂ 22–00

ಪ್ರಧಾನ ಸಂಪಾದನೆ
ಪ್ರಾ| ವೀ. ಜಿ. ಹಿತ್ತಲಮನಿ

ಭಾಷಾಂತರ ಪರಿಶೀಲನೆ
ಶ್ರೀ ಎಚ್. ಕೆ. ನರಸಿಂಹೇಗೌಡ

ಪರಿಷ್ಕೃತ ಬೆಲೆ
ಸಾದಾಪ್ರತಿ ರೂ. 22-50
ಕ್ಯಾಲಿಕೊಪ್ರತಿ ರೂ. 27-50

ಮುದ್ರಕರು: ಡಬ್ಲ್ಯು. ಕ್ಯು. ಜಡ್ಜ್ ಪ್ರೆಸ್, ಬೆಂಗಳೂರು-560025.

ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅವರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ, ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತದೆ. ಈ ಕಾರ್ಯಸಾಧನೆಯಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೇ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ. ಬೆಳೆದುಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವ ವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು ಕೃಷಿ ಶಿಕ್ಷಣ ಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿ ಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಕೆ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭವಾದ ಅಲ್ಪಾವಧಿಯಲ್ಲಿ ಕಾಲುಶತ ಗ್ರಂಥಗಳು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿ ವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡಿಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024
ತಾ॥ 15-10-1976

ಹ. ರಾ. ಅರಕೇರಿ
ಕುಲಪತಿಗಳು

ಸಂಪಾದಕರ ಮಾತು

ಕೃಷಿ ವಿಜ್ಞಾನ ಕ್ಷೇತ್ರದ ಹರವು ವಿಸ್ತಾರವಾಗಿದೆ. ಅದರಲ್ಲಿ ಪಶುಸಂಗೋಪನೆಯೂ ಒಂದು ಮುಖ್ಯ ವಿಭಾಗ. ಹೈನುಗಾರಿಕೆಯಂತೆ ಕೋಳಿಸಾಕಣೆ ಉದ್ಯಮವು ಇಂದು ಅತ್ಯಂತ ಜನಪ್ರಿಯ ವೃತ್ತಿಯಾಗಿ ಪರಿಣಮಿಸಿದೆ. ಪೌಷ್ಟಿಕ ಆಹಾರ ಪೂರೈಕೆಯಲ್ಲಿ ಮೊಟ್ಟೆಗಳ ಕೊಡುಗೆ ಅದ್ವಿತೀಯ. ಕೋಳಿಸಾಕಣೆಗೆ ಮಾರ್ಗದರ್ಶನವೀಯಲು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯು ಆಂಗ್ಲಭಾಷೆಯಲ್ಲಿ **'ಪೌಲ್ಟ್ರಿ ಕೀಪಿಂಗ್ ಇನ್ ಇಂಡಿಯ'** ಪುಸ್ತಕವನ್ನು ಶ್ರೀ ಪಿ. ಎಂ. ಎನ್. ನಾಯ್ಡು ಅವರಿಂದ ಬರೆಯಿಸಿ ಪ್ರಕಟಿಸಿತು. ಅದು ಅನೇಕ ಭಾರತೀಯ ಭಾಷೆಗಳಲ್ಲಿ ಅನುವಾದಗೊಂಡಿದೆ. ಇದರ ಪ್ರಯೋಜನವು ಕನ್ನಡ ಜನತೆಗೂ ಮುಟ್ಟಲೆಂದು ಅನುವಾದಿಸಿ **'ಭಾರತದಲ್ಲಿ ಕೋಳಿಸಾಕಣೆ'** ಎಂಬ ಹೆಸರಿನಲ್ಲಿ ಪ್ರಸಿದ್ಧಿಸಿ ಓದುಗರ ಕೈಯಲ್ಲಿ ಇಡುತ್ತಿದ್ದೇನೆ.

ಈ ಪುಸ್ತಕ ಹೊರಬರಲು ಅನೇಕರು ನೆರವಾಗಿದ್ದಾರೆ. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಇಂಗ್ಲಿಷ್ ಪುಸ್ತಕ ಅನುವಾದಿಸಿ, ಪ್ರಕಟಿಸಲು ಅಪ್ಪಣೆ ಕೊಟ್ಟುದರ ಜತೆಗೆ ಪಡಿಯಚ್ಚುಗಳನ್ನು ನೀಡಿ ಸಹಕರಿಸಿದೆ. ಈ ಪುಸ್ತಕದ ಕರಡೋದುವಿಕೆಯನ್ನು ನಮ್ಮ ವಿಭಾಗದ ಸಂಶೋಧನಾ ಸಹಾಯಕರಾದ ಶ್ರೀಮತಿ ಸಿ. ಕೆ. ಕುಮುದಿನಿ ಹಾಗೂ ಕಲಾವಿದರಾದ ಶ್ರೀ ಬಿ. ಜಿ. ರಮೇಶ್ ನೆರವೇರಿಸಿದ್ದಾರೆ. ಅಚ್ಚಿಗೆ ಪ್ರತಿಯನ್ನು ಸಿದ್ಧಪಡಿಸಲು ನೆರವಾದವರು ನಮ್ಮ ವಿಭಾಗದ ಕನ್ನಡ ಬೆರಳಚ್ಚುಗಾರರಾದ ಶ್ರೀ ಟಿ. ಎಸ್. ಚಂಪಕ್‌ರವರು. ಅವರಿಗೆಲ್ಲ ಹೃತ್ಪೂರ್ವಕ ವಂದನೆಗಳು.

ಈ ಗ್ರಂಥವು ಕೋಳಿಸಾಕಣೆ ಬಗ್ಗೆ ಅಭ್ಯಾಸಿಸುವ ವಿದ್ಯಾರ್ಥಿಗಳು, ಈ ವಿಷಯವನ್ನು ಕಲಿಸುವ ಅಧ್ಯಾಪಕರು, ಹಲವಾರು ಕೋಳಿಸಾಕಣೆದಾರರು ಹಾಗೂ ಕೋಳಿಸಾಕಣೆ ಒಳವರಿವಸ್ತು ಪೂರೈಕೆದಾರರು ಇವರಿಗೆ ಉಪಯುಕ್ತವಾಗಿರುತ್ತದೆ. ಇವರೆಲ್ಲ ಇದರ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ.

ಅಶ್ವಯುಜ ಮಾಸ, ನಳನಾಮ ಸಂವತ್ಸರ,
ಶಾಲಿವಾಹನ ಶಕ 1898
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿಗಳು

ಪರಿವಿಡಿ

ಚಿತ್ರಗಳ ಪಟ್ಟಿ

ಭಾರತದಲ್ಲಿ ಕೋಳಿಸಾಕಣೆ

ಅಧ್ಯಾಯ 1

ಭಾರತದಲ್ಲಿ ಕೋಳಿ

'ಕೋಳಿ' ಈ ಪದ ಮಾಂಸ, ಮೊಟ್ಟೆ ಅಥವಾ ಪುಕ್ಕಗಳಿಗಾಗಿ ಸಾಕಿದ ಪಕ್ಷಿಗಳಿಗೆಲ್ಲ ಅನ್ವಯಿಸುತ್ತದೆ. ಇದರಲ್ಲಿ ಕಣಜದ ಕೋಳಿ, ಪಾರಿವಾಳ, ಬಾತು, ಹೆಬ್ಬಾತು, ಟರ್ಕಿಕೋಳಿ, ಗಿನಿಯಕೋಳಿ, ನವಿಲು ಮುಂತಾದವುಗಳೆಲ್ಲ ಸೇರುತ್ತವೆ. ಇವುಗಳಲ್ಲಿ ಕಣಜದ ಕೋಳಿ ಅಥವಾ ಕೋಳಿ ಬಹಳ ಮುಖ್ಯವಾದದ್ದು. ಈ ಪುಸ್ತಕದಲ್ಲಿ ಈ ಕೋಳಿಯ ಬಗ್ಗೆ ಉಲ್ಲೇಖವಿದೆ.

ಪೌರ್ವಾತ್ಯ ದೇಶಗಳಲ್ಲಿ ಕೋಳಿಸಾಕಾಣಿಕೆ ಬಹಳ ಹಿಂದಿನಿಂದಲೂ ನಡೆದು ಬಂದಿದೆ. ಇಂದಿನ ಸಾಕುಕೋಳಿಗಳಿಗೆ ಮೂಲವಾದ ಕಾಡುಕೋಳಿಗಳ ಆದ್ಯಸ್ಥಾನ ಭಾರತ ಮತ್ತು ಅದರ ಸುತ್ತುಮುತ್ತಿನ ದೇಶಗಳೆಂದು ಪರಿಗಣಿಸಲಾಗಿದೆ. ಪುರಾತನ ಚರಿತ್ರೆಗಳಲ್ಲಿ ಕೂಡ ಭಾರತದ ಕೋಳಿಸಾಕಾಣಿಕೆಯ ಬಗ್ಗೆ ಈ ತೆರದ ಉಲ್ಲೇಖವಿದೆ. ಅಸೀಲ್ ಎಂಬ ಭಾರತದ ಕೋಳಿ ಜಾತಿಯು ಪ್ರಪಂಚದಾದ್ಯಂತ ಹುಂಜಕಾಳಗದಲ್ಲಿ ಆಸಕ್ತಿ ಇರುವವರೆಲ್ಲರಿಂದ ಮನ್ನಣೆಪಡೆದಿತ್ತು. ಆದರೂ ಉದ್ಯಮವಾಗಿ ವ್ಯವಸ್ಥಿತ ರೀತಿಯ ಕೋಳಿಸಾಕಾಣಿಕೆ ನಮ್ಮಲ್ಲಿ ಜಾರಿಯಲ್ಲಿರಲಿಲ್ಲ. ಇಂದಿಗೂ ಈ ದೇಶದಲ್ಲಿ ಕೋಳಿಸಾಕಾಣಿಕೆ ಅವ್ಯವಸ್ಥಿತ ಉದ್ಯೋಗವಾಗಿಯೇ ಮುಂದುವರೆದಿದೆ. ಕೋಳಿಗಳನ್ನು ಹೆಚ್ಚಾಗಿ ಹಳ್ಳಿಗಳಲ್ಲಿ ಸಣ್ಣಸಣ್ಣ ಗುಂಪುಗಳನ್ನಾಗಿ ಮಾಡಿ ಅವುಗಳ ವಸತಿ, ಸಂತಾನೋತ್ಪತ್ತಿ, ಆರೋಗ್ಯ ಮತ್ತು ಮಾರಾಟಗಳ ಕಡೆಗೆ ಹೆಚ್ಚಿನ ಗಮನ ಕೊಡದೆ ಸಾಕುತ್ತಾರೆ. ಅವುಗಳ ಆಹಾರದ ಕಡೆಗೂ ಸಾಕಷ್ಟು ಲಕ್ಷ್ಯಕೊಡುವುದಿಲ್ಲ. ಇದರಿಂದಾಗಿ ವಂಶದ ಅವನತಿ, ನಿಧಾನವಾದ ಬೆಳವಣಿಗೆ, ಕಡಮೆ ಉತ್ಪಾದನೆ ಮತ್ತು ಹೆಚ್ಚಿನ ಸಾವುನೋವುಗಳು ಸ್ವಾಭಾವಿಕ.

ದೇಶದ ಪೌಷ್ಟಿಕ ಆಹಾರದ ಕೊರತೆಯನ್ನು ಉತ್ತಮಪಡಿಸುವಲ್ಲಿ ಕೋಳಿಸಾಕಾಣಿಕೆಯ ಪ್ರಾಮುಖ್ಯತೆಯ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಕೋಳಿಮೊಟ್ಟೆ ಮತ್ತು ಮಾಂಸ ಇವುಗಳ ಸಸಾರಜನಕವನ್ನುಳ್ಳ, ಸಂಪದ್ಭರಿತ ಮೂಲಗಳಲ್ಲಿ ಮುಖ್ಯವಾದುವೆಂಬುದು ಸರ್ವವಿದಿತ. ಮೊಟ್ಟೆಯಲ್ಲಿ ಎ, ಡಿ, ಬಿ$_1$, ಬಿ$_2$ ಜೀವಸತ್ವಗಳು ಹಾಗೂ ಪಾಂಟೊಥೆನಿಕ್ ಆಮ್ಲವು ಸಮೃದ್ಧಿಯಾಗಿದೆ. ಥಯಾಮಿನ್ ರಿಬೋಫ್ಲೇವಿನ್ ಮತ್ತು ಪಾಂಟೊಥೆನಿಕ್ ಆಮ್ಲಗಳು ಕೋಳಿಮಾಂಸದಲ್ಲಿ ಹೇರಳವಾಗಿವೆ. 1, 2 ಮತ್ತು 3ನೆಯ ಕೋಷ್ಟಕಗಳನ್ನು ಪರಿಶೀಲಿಸಿದರೆ ಕೋಳಿ ಉತ್ಪನ್ನಗಳಲ್ಲಿನ ಪೌಷ್ಟಿಕಾಂಶಗಳ ಮಹತ್ವ ವ್ಯಕ್ತವಾಗುತ್ತದೆ.

ಕೋಷ್ಟಕ 1

ಅಕ್ಕಿ, ಹಾಲು, ಕೋಳಿಮಾಂಸ ಮತ್ತು ತಿನ್ನಬಹುದಾದ ಮೊಟ್ಟೆಯ ಭಾಗ ಇವುಗಳ ಸರಾಸರಿ ಸಂಯೋಜನೆ

ಘಟಕಗಳು		ಅಕ್ಕಿ	ಹಸುವಿನ ಹಾಲು	ಮೊಟ್ಟೆಗಳು		ಕೋಳಿ ಮಾಂಸ
				ಕೋಳಿ	ಬಾತು	
ನೀರು	(ಶೇಕಡಾಂಶ)	13.0	87.3	74.0	71.0	66.0
ಸಸಾರಜನಕ	,,	7.1	3.5	12.4	13.0	20.2
ಕೊಬ್ಬು	,,	1.1	3.5	11.7	14.5	12.2
ಶರ್ಕರಪಿಷ್ಟ	,,	78.0	5.0	0.9	0.5	—
ನಾರು	,,	0.7	0.0	—	—	—
ಬೂದಿ	,,	0.8	0.7	1.0	1.0	1.0
ಶಾಖ (ಕ್ಯಾಲೊರಿಗಳಲ್ಲಿ 100 ಗ್ರಾಮ್‌ಗಳಿಗೆ)		359.0	65.0	163.0	189.0	200.0

ಕೋಷ್ಟಕ 2

ಅಕ್ಕಿ, ಹಾಲು, ಮೊಟ್ಟೆ, ಮತ್ತು ಕೋಳಿಮಾಂಸಗಳಲ್ಲಿ ಸಸಾರಜನಕದ ಸಂಯೋಜನೆ

ಅಮೈನೋ ಆಮ್ಲಗಳು		ಅಕ್ಕಿ	ಹಸುವಿನ ಹಾಲು	ಕೋಳಿ ಮೊಟ್ಟೆಗಳು	ಕೋಳಿ ಮಾಂಸ
ಆರ್ಜಿನಿನ್	(ಶೇಕಡಾಂಶ)	7.2	4.2	6.6	7.1
ಹಿಸ್ಟಿಡಿನ್	,,	1.7	2.6	2.4	2.3
ಲೈಸಿನ್	,,	3.2	8.7	7.0	8.4
ಟೈರೊಸಿನ್	,,	5.7	6.0	4.5	4.3
ಟ್ರಿಪ್ಟೋಫೇನ್	,,	1.3	1.5	1.5	1.2
ಫಿನೈಲ್ ಆಲನಿನ್	,,	5.0	5.5	6.3	4.6
ಸಿಸ್ಟಿನ್	,,	1.3	1.0	2.4	1.3
ಮೆಥಿಯೋನಿನ್	,,	3(?)	3.2	4.0	3.2
ಥ್ರಿಯೋನಿನ್	,,	3.8	4.7	4.3	4.7
ಸೆರಿನ್	,,	—	4.3	—	4.7
ಲ್ಯೂಸಿನ್	,,	8.2	11.3	9.2	—
ಐಸೋಲ್ಯೂಸಿನ್	,,	5.2	7.5	7.7	—
ವಾಲೀನ್	,,	6.2	7.0	7.2	—

ಕೋಷ್ಟಕ 3

ಅಕ್ಕಿ, ಹಾಲು, ಮೊಟ್ಟೆ ಮತ್ತು ಕೋಳಿಮಾಂಸಗಳ ಸರಾಸರಿ ಜೀವಸತ್ವಗಳು (100 ಗ್ರಾಮ್‌ಗಳಲ್ಲಿ)

ಜೀವಸತ್ವ	ಪಾಲಿಷ್‌ಮಾಡಿದ ಅಕ್ಕಿ	ಹಸುವಿನ ಹಾಲು	ಕೋಳಿಮೊಟ್ಟೆಗಳ ದ್ರವ	ಕೋಳಿ ಮಾಂಸ
A ಜೀವಸತ್ವ (I. U)	(0)	140.0	1,300.0	—
D ಜೀವಸತ್ವ (I. U)	—	—	50.0	—
B_1 ಜೀವಸತ್ವ (ಮಿ.ಗ್ರಾಮ್)	0.22	0.04	0.26	0.2
B_2 ಜೀವಸತ್ವ (ಮಿ.ಗ್ರಾಮ್)	0.04	0.18	1.3	0.3
ಪಾಂಟೋಥೆನಿಕ್ ಆಮ್ಲ (ಮಿ.ಗ್ರಾಮ್)	—	0.31	2.5	0.7

ಕೋಳಿಗಳ ವ್ಯಾಪನೆ: ಪಂಜಾಬ್, ರಾಜಸ್ಥಾನ್, ಮಧ್ಯ ಮತ್ತು ಪಶ್ಚಿಮದ ರಾಜ್ಯಗಳನ್ನು ಬಿಟ್ಟು ಭಾರತದ ಉಳಿದೆಲ್ಲ ಭಾಗಗಳಲ್ಲೂ ಕೋಳಿಗಳು ತೃಪ್ತಿಕರವಾಗಿ ಹರಡಿಕೊಂಡಿವೆ (ಕೋಷ್ಟಕ 4). ದನಗಳು ಸರಿಯಾಗಿ ಊರ್ಜಿತವಾಗದೆಡೆಗಳಲ್ಲಿ ಕೋಳಿಗಳು ಚೆನ್ನಾಗಿ ಏಳಿಗೆಹೊಂದುತ್ತವೆ. ಕೋಳಿಗಳು ಆ ಪ್ರದೇಶಗಳಲ್ಲಿನ ಪ್ರಾಣಿಜನ್ಯ ಸಸಾರಜನಕಗಳ ಕೊರತೆಯನ್ನು ತುಂಬಿಕೊಡುತ್ತವೆ.

ಭಾರತದಲ್ಲಿ ಕೋಳಿಗಳು ಹೆಚ್ಚಾಗಿ 'ದೇಶಿ ಜಾತಿ' ಎಂದು ಕರೆಯಲ್ಪಡುವ ಅಜ್ಞಾತಳಿಯ ಅಥವಾ ಯಾವ ಒಂದೂ ನಿರೂಪಣಾ ಲಕ್ಷಣಗಳಿಲ್ಲದ ವಿವಿಧತೆಗೆ ಸೇರಿವೆ. ದೇಶದ ಒಟ್ಟು ಕೋಳಿಗಳಲ್ಲಿ ಆಮದಾದ ಇಷ್ಟಗುಣಗಳುಳ್ಳ ಉತ್ತಮ ಕೋಳಿಗಳ ಪ್ರಮಾಣ ಕೇವಲ ಶೇಕಡ 1.4 ಮಾತ್ರ. 'ವೈಟ್ ಲೆಗ್ ಹಾರ್ನ್' ಮತ್ತು 'ರೋಡ್ ಐಲೆಂಡ್ ರೆಡ್' ಇವು ಹೊರದೇಶದಿಂದ ಆಮದು ಮಾಡಿಕೊಂಡು ಭಾರತದಲ್ಲಿ ಸಾಕುತ್ತಿರುವ ಮುಖ್ಯ ತಳಿಗಳು. ಕೆಲವು ಸಾಕುತಾಣಗಳಲ್ಲಿ 'ಬ್ಲಾಕ್ ಮೈನಾರ್ಕ್', 'ಪ್ಲೈಮೂತ್‌ರಾಕ್', 'ಆಸ್ಟ್ರಲಾರ್ಪ್', 'ನ್ಯೂಹಾಂಪ್‌ಶೈರ್', 'ಲೈಟ್‌ಸಸೆಕ್ಸ್', 'ಬ್ರೌನ್ ಲೆಗ್‌ಹಾರ್ನ್' ಮತ್ತು ಇತರ ತಳಿಗಳನ್ನೂ ಕಡಮೆ ಸಂಖ್ಯೆಯಲ್ಲಿ ಸಾಕಲು ಪ್ರಾರಂಭ ಮಾಡಿದ್ದಾರೆ. ಪ್ರದರ್ಶನಕ್ಕೆ ಯೋಗ್ಯವಾದ ಕೆಲವು ತಳಿಗಳ ಸಾಕಾಣಿಕೆಯೂ ಇತ್ತೀಚೆಗೆ ಪ್ರಾಮುಖ್ಯತೆಯನ್ನು ಪಡೆದಿದೆ. 'ಹುಂಜಕಾಳಗ' ಬಹಳಷ್ಟು ಕಡಮೆಯಾಗುತ್ತಿರುವುದರಿಂದ ಒಂದು ಕಾಲದಲ್ಲಿ ಬಹಳ ಪ್ರಸಿದ್ಧಿಪಡೆದಿದ್ದ 'ಅಸೀಲ್' ಜಾತಿಯು ಇಂದು ತೀವ್ರವಾಗಿ ಕ್ಷಯಿಸಿದೆ.

ಭಾರತದಲ್ಲಿ ಬಡ ಬೇಸಾಯಗಾರರೇ ಪ್ರಾಮುಖ್ಯವಾಗಿ ಮೊಟ್ಟೆ ಇಡುವ 5–6 ದೇಶಿ ಕೋಳಿಗಳನ್ನು ಸಾಕುತ್ತಿರುವುದು ಸಾಮಾನ್ಯ ನೋಟ. ಇವುಗಳನ್ನು ಬಹಳ ಪುರಾತನ ಪದ್ಧತಿಯ ಮನೆ ಆಹಾರ ಕೊಡುವಿಕೆ ಮತ್ತು ಮೇಲ್ವಿಚಾರಣೆಗಳನ್ವಯ

ಸಾಕಲಾಗುತ್ತದೆ. ಇವುಗಳಿಗಾಗಿ ಅವರೂ ಒಂದು ಬಿಡಿಕಾಸೂ ವೆಚ್ಚಮಾಡುವುದಿಲ್ಲ. ಮೊಟ್ಟೆ ಮತ್ತು ಹೆಚ್ಚಿನ ಮರಿಕೋಳಿಗಳನ್ನು ಮಾರುವುದರಿಂದ ಬರುವ ಪುಡಿಗಾಸು ರೈತನ ಹೆಂಡತಿಯ ಕೈವೆಚ್ಚದ ಹಣ. ಆಕೆ, ತನ್ನ ದೈನಂದಿನ ಅವಶ್ಯಕ ವಸ್ತುಗಳನ್ನು ಕೊಂಡುಕೊಳ್ಳಲು ಈ ಹಣ ಬಳಸುತ್ತಾಳೆ. ಹೀಗೆ, ಆರೆಗಮನ ಮತ್ತು ಪುರಸ್ಕಾರಗಳನ್ನು ಪಡೆಯುವ ದೇಶಿಕೋಳಿಯು ತೀರ ಕಡಮೆ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ಅದೂ ಕೂಡ ರೈತನ ಮನೆಯ ಒಂದು ಪ್ರಮುಖ ಅಂಗವಾಗಿ ಜೀವನ ಸಾಗಿಸಿದೆ.

ಚಿಕ್ಕ, ಚುರುಕು ಸ್ವಭಾವದ, ಆದರ್ಶಪ್ರಾಯವಾದ ಕಾವುಕೊಡುವ, ಹಳ್ಳಿಯ ಕೋಳಿಗಳಿಗೆ ಅಭಿವೃದ್ಧಿ ಹೊಂದಿದ ಜಾತಿಗಳು ಸುಲಭವಾಗಿ ತುತ್ತಾಗುವ 'ಏವಿಯನ್ ಲ್ಯುಕೋಸಿಸ್' ಕಾಹಿಲೆ, ಸಾಮಾನ್ಯವಾಗಿ ತಗಲುವುದಿಲ್ಲ. ಇವುಗಳ ಆನುವಂಶೀಯ ರಚನೆಯು, ಬದುಕಿನ ಹೋರಾಟಕ್ಕೆ ಇವು ಚೆನ್ನಾಗಿ ಹೊಂದಿಕೊಳ್ಳುವಂತೆ ಸಹಾಯಕವಾಗಿದೆ. ಉಚಿತ ವಾತಾವರಣ ಮತ್ತು ಉತ್ತಮ ಮೇಲ್ವಿಚಾರಣೆಯಲ್ಲಿ ದೇಶಿಯ ಕೋಳಿಗಳೂ ಮೊಟ್ಟೆಗಳ ಗಾತ್ರ ಮತ್ತು ಉತ್ಪಾದನೆಗಳಲ್ಲಿ ಗಮನಾರ್ಹ ಪ್ರತಿಫಲ ನೀಡಬಲ್ಲವೆಂಬ ಅಂಶವನ್ನು ಭಾರತದ ಪಶು ಸಂಶೋಧನಾಸಂಸ್ಥೆಯ ಪ್ರಯೋಗಗಳು ತೋರಿಸಿಕೊಟ್ಟಿವೆ. ಇವುಗಳ ಮಾಂಸವೂ ರುಚಿ. ಆದಕಾರಣ ದೇಶಿ ಕೋಳಿಗಳನ್ನು ಆಮದುಮಾಡಿಕೊಂಡ ಶ್ರೇಷ್ಠಗುಣಗಳುಳ್ಳ ಕೋಳಿಗಳಿಂದ ಅಭಿವೃದ್ಧಿಪಡಿಸುವ ಯಾವುದೇ ಕಾರ್ಯಕ್ರಮವನ್ನು ರೂಪಿಸುವಲ್ಲಿ, ದೇಶಿಯ ಕೋಳಿಗಳಲ್ಲಿನ ಮೆಚ್ಚುಗೆಯ ಗುಣವುಳ್ಳ ವಂಶವಾಹಿಯನ್ನು ಉಳಿಸಿಕೊಳ್ಳುವಲ್ಲಿ ಗಮನ ಅವಶ್ಯಕ. ಇದಕ್ಕಾಗಿ ಸ್ಥಳೀಯ ಜಾತಿಯನ್ನು ಪರಿಶುದ್ಧ ಸ್ಥಿತಿಯಲ್ಲಿ ತಳಿ ಅಭಿವೃದ್ಧಿಯ ಮೂಲದ್ರವ್ಯವಾಗಿ ಸಾಕಷ್ಟು ಸಂಖ್ಯೆಯಲ್ಲಿ ಸಂರಕ್ಷಿಸಿಕೊಂಡು ಬರಬೇಕು.

ಕೋಳಿ ಉತ್ಪಾದನೆಯ ಅರ್ಥಿಕತೆ: ಕೋಳಿ ಉತ್ಪನ್ನಗಳಿಗೆ ತೀವ್ರವಾಗಿ ಹೆಚ್ಚುತ್ತಿರುವ ಬೇಡಿಕೆ ಮತ್ತು ಸರ್ಕಾರದ ಅಭಿವೃದ್ಧಿ ಯೋಜನೆಗಳು ಕೊಡುತ್ತಿರುವ ಉತ್ತೇಜನ ಇವೆರಡೂ ಸೇರಿ ಇತ್ತೀಚಿನ ವರ್ಷಗಳಲ್ಲಿ ಹಳ್ಳಿ ಮತ್ತು ಪಟ್ಟಣಗಳೆರಡರಲ್ಲೂ ಕೋಳಿಸಾಕಾಣಿಕೆಗೆ ಹೆಚ್ಚಿನ ಜನರನ್ನು ಆಕರ್ಷಿಸಿವೆ. ಈ ಹೆಚ್ಚುತ್ತಿರುವ ಆಸಕ್ತಿ ಈ ಉದ್ಯಮದ ಎಲ್ಲ ಮುಖಗಳ ಬಗ್ಗೆ ಸ್ಪಷ್ಟವಾದ ತಿಳಿವಳಿಕೆಯ ಅವಶ್ಯಕತೆಯನ್ನುಂಟುಮಾಡಿದೆ.

ಕೋಳಿಸಾಕಾಣಿಕೆಯಲ್ಲಿನ ಯಶಸ್ಸು ಮುಖ್ಯವಾಗಿ ವ್ಯಾಪಾರೀ ಶಕ್ತಿ, ಮಾರುಕಟ್ಟೆ ಅನುಕೂಲತೆಗಳು, ತಿಳಿವಳಿಕೆ ಮತ್ತು ಅನುಭವ, ಬಂಡವಾಳ, ಕೋಳಿಯ ತಳಿ, ಮತ್ತು ಸಾಮಗ್ರಿಗಳನ್ನು ಅವಲಂಬಿಸಿರುತ್ತದೆ. ವ್ಯಾಪಾರೀ ಶಕ್ತಿ ಅವಶ್ಯಕ ತಿಳಿವಳಿಕೆ ಮತ್ತು ಅನುಭವಗಳ ಕೊರತೆಯಿಂದಾಗಿ ಹೆಚ್ಚಿನ ಪ್ರಮಾಣದ ವಿಫಲತೆಗಳು ಸಂಭವಿಸುತ್ತವೆಂದು ತಿಳಿದುಬಂದಿದೆ. ಇದೇರೀತಿ ಸಾಕಾಗದಂತಿರುವ ಬಂಡವಾಳ, ಸಾಮಗ್ರಿ ಮತ್ತು ತಕ್ಕನಾದ ಶುದ್ಧತಳಿ ಕೋಳಿಗಳು ಕೋಳಿಸಾಕಾಣಿಕೆಯ ಅಭಿವೃದ್ಧಿಗೆ ತೀವ್ರ ಅಡ್ಡಿಯುಂಟುಮಾಡುತ್ತವೆ. ಸರಿಯಾದ ಪ್ರಾರಂಭಮಾಡಲು ಒಂದು ಗೊತ್ತಾದ ಕನಿಷ್ಠ

ಬಂಡವಾಳ ಮತ್ತು ಸಲಕರಣೆಗಳು ಅವಶ್ಯಕ. ಮೊದಲನೇ ಎರಡು ವರ್ಷಗಳಲ್ಲಿ ಖರ್ಚು ಗಣನೀಯವಾಗಿದ್ದು ಬರುವ ಆದಾಯವು ಅತ್ಯಲ್ಪವಾಗಿರುತ್ತದೆ. ಇದಕ್ಕೆ ಸಿದ್ಧವಾಗಿರುವುದು ಅವಶ್ಯಕ. ಆದ್ದರಿಂದಾಗಿ ಉತ್ತಮವಾದ ಪ್ರಾರಂಭಕ್ಕೆ ಒಳ್ಳೆಯ

ಕೋಷ್ಟಕ 4

ಭಾರತದಲ್ಲಿ ಕೋಳಿ ಸಂಖ್ಯೆ (1961)

ಕ್ರಮ ಸಂಖ್ಯೆ	ರಾಜ್ಯ	ಕೋಳಿ ಸಂಖ್ಯೆ
1	ಆಂಧ್ರಪ್ರದೇಶ	16,248,132
2	ಅಸ್ಸಾಂ	11,251,211
3	ಬಿಹಾರ್	12,357,834
4	ಗುಜರಾತ್	2,047,061
5	ಜಮ್ಮು ಮತ್ತು ಕಾಶ್ಮೀರ	1,608,422
6	ಕೇರಳ	9,106,320
7	ಮಧ್ಯಪ್ರದೇಶ	6,525,289
8	ಮದರಾಸು	11,296,370
9	ಮಹಾರಾಷ್ಟ್ರ	10,769,635
10	ಮೈಸೂರು	9,522,155
11	ಒರಿಸ್ಸ	6,547,672
12	ಪಂಜಾಬ್	2,237,123
13	ರಾಜಸ್ಥಾನ್	7,18,015
14	ಉತ್ತರಪ್ರದೇಶ	3,254,310
15	ಪಶ್ಚಿಮಬಂಗಾಳ	11,674,758
16	ದೆಹಲಿ	7,8,677
17	ಹಿಮಾಚಲಪ್ರದೇಶ	90,690
18	ಮಣಿಪುರ	7,85,509
19	ತ್ರಿಪುರ	703,172
20	ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು	76,655
21	ಲಕ್ಕದೀವ್, ಮಿನಿಕಾಯ್ ಅಮಿನ್‌ದೀವ್ ದ್ವೀಪಗಳು	15,119
	ಒಟ್ಟು :	116,914,129

ಯೋಜನೆ ಮುಂದಾಲೋಚನೆ ಮತ್ತು ಗುರಿಯ ಬಗ್ಗೆ ಹಟವಿರಬೇಕು. ಇದರ ಜೊತೆಯಲ್ಲಿಯೇ ಸರಿಯಾದ ರೀತಿಯ ತಳಿಗಳ ಆಯ್ಕೆಯ ಕಡೆಗೂ ಹೆಚ್ಚಿನ ಮಹತ್ವ ಕೊಡಬೇಕು.

ಪಟ್ಟಣಗಳು ಮತ್ತು ದೊಡ್ಡ ಊರುಗಳ ಸಮೀಪದಲ್ಲಿರುವ ಹಳ್ಳಿಗಳಲ್ಲಿ ಅವಶ್ಯಕವಾದ ಸಾಕಣೆ ಸೌಲಭ್ಯವು ದೊರೆತು ಮಾರಾಟಕ್ಕೆ ಅನುಕೂಲವಾಗುವುದರಿಂದ ಕೋಳಿಮಾಂಸದ ಉತ್ಪಾದನೆಗಿಂತ ಮೊಟ್ಟೆ ಉತ್ಪಾದನೆ ಹೆಚ್ಚು ಲಾಭದಾಯಕ. ಆದ್ದರಿಂದ ಇಂತಹ ಸ್ಥಳಗಳಲ್ಲಿ ಕೋಳಿಗಳ ಮೊಟ್ಟೆ ಉತ್ಪಾದನಾಸಾಮರ್ಥ್ಯದ ಕಡೆಗೆ ವಿಶೇಷ ಗಮನವನ್ನು ಕೊಡಬೇಕು. ಆದರೆ ಮೊಟ್ಟೆ ಬಹಳ ಬೇಗ ಹಾಳಾಗುವ ಪದಾರ್ಥವಾಗಿದ್ದು ಮಾರಾಟದ ಸಮಸ್ಯೆ ಉಂಟಾಗುವುದರಿಂದ ಒಳನಾಡಿನ ಪ್ರದೇಶಗಳಲ್ಲಿ ಕೋಳಿಗಳನ್ನು, ಮೊಟ್ಟೆಗಿಂತ ಮಾಂಸದ ಉತ್ಪಾದನೆಗೆ ಸಾಕುವುದಕ್ಕೆ ಪ್ರಾಧಾನ್ಯತೆಯನ್ನು ಕೊಡಬೇಕು. ಇಂತಹ ಸ್ಥಳಗಳಿಂದ ಕೋಳಿಗಳನ್ನು ಹೆಚ್ಚಿನ ನಷ್ಟವಿಲ್ಲದಂತೆ ಸಾಗಿಸಬಹುದು ಮತ್ತು ಬೇಸಾಯಗಾರನು ಒಳ್ಳೆಯ ಧಾರಣೆಗಾಗಿ ಕಾಯಬಹುದು. ಆದ್ದರಿಂದ ತಳಿ ಎಬ್ಬಿಸುವ ಕ್ರಮಗಳ ಬಗ್ಗೆ ಪೂರ್ಣ ತಿಳುವಳಿಕೆ ಅಗತ್ಯವೆಂಬುದು ನಿರ್ವಿವಾದ.

ಈ ತಿಳಿವಳಿಕೆ ಇಲ್ಲದೆ ಎಷ್ಟೇ ಉತ್ತಮವಾದ ಆಹಾರ ಮತ್ತು ಮೇಲುಸ್ತುವಾರಿಯಿಂದ ಕೋಳಿಸಾಕಾಣಿಕನು ತನ್ನ ಉದ್ಯಮದಲ್ಲಿ ಯಶಸ್ವಿಯಾಗುವುದು ಸಾಧ್ಯವಿಲ್ಲ. ಹೀಗೆ ಹೇಳಿದ ಮಾತ್ರಕ್ಕೆ ಪೋಷಣೆ ಮೇಲ್ವಿಚಾರಣೆಗಳು ಅಪ್ರಧಾನವಾದವುಗಳೆಂದು ಭಾವಿಸಬಾರದು. ಒಳ್ಳೆಯ ಪೋಷಣೆಯಿಂದ ಮಾತ್ರ ಉತ್ತಮ ತಳಿಯ ಕೋಳಿಗಳ ಗುಂಪು ಪರಿಣಾಮಕಾರಿಯಾದ ಪ್ರತಿಕ್ರಿಯೆ ಕೊಡಬಲ್ಲದು. ಮೊಟ್ಟೆಗಳನ್ನು ಮರಿ ಮಾಡುವ ವಿಧಾನ, ಸಾಕುವುದು. ವಸತಿ ಸೌಲಭ್ಯ ಮತ್ತು ನಿರ್ಮಲೀಕರಣ ವ್ಯವಸ್ಥೆಗಳನ್ನೊಳಗೊಂಡ ಸರಿಯಾದ ಮೇಲ್ವಿಚಾರಣೆಯೂ ಅತಿಮುಖ್ಯವಾದುದು. ವಿಶಾಲ ತಳಹದಿಯ ಮೇಲೆ ಎಲ್ಲ ಅವಶ್ಯಕತೆಗಳೂ ಇರುವ ಕೋಳಿ ಸಾಕಣೆಕೇಂದ್ರವೂ ಸುಭದ್ರವಾದ ಮಾರಾಟದ ವ್ಯವಸ್ಥೆಗಳನ್ನು ಮಾಡಿಕೊಳ್ಳದೆ ಹೋದಲ್ಲಿ ವಿಫಲಗೊಳ್ಳುತ್ತದೆ. ಮೊಟ್ಟೆ ಅಥವಾ ಮಾಂಸ ಯಾವುದೇ ಆಗಲಿ ಸಾಕಷ್ಟು ಪ್ರಮಾಣದಲ್ಲಿದ್ದಾಗ ಮಾತ್ರ ಮಾರಾಟವನ್ನು ಲಾಭದಾಯಕವಾಗಿ ಮಾಡಬಹುದು. ಈ ಕಾರಣದಿಂದಾಗಿ ಒಂದು ನಿರ್ದಿಷ್ಟ ಜಾಗದಲ್ಲಿ ಕೋಳಿ ಸಾಕುವವರು ಯಾವುದಾದರೊಂದು ವಿಧದ ಸಹಕಾರಿ ಅಥವಾ ಸಾಮೂಹಿಕ ಸಂಸ್ಥೆ ಮಾಡಿಕೊಳ್ಳಬೇಕು.

ಈ ಒಂದು ಉದ್ಯಮದಲ್ಲಿನ ಯಶಸ್ಸು ಮೇಲೆ ಹೇಳಿದ ಎಲ್ಲ ಅವಶ್ಯಕತೆಗಳನ್ನು ಎಷ್ಟರಮಟ್ಟಿಗೆ ಅತ್ಯುತ್ತಮ ಮಟ್ಟದಲ್ಲಿ ಹೊಂದಿಸಬಹುದು ಎಂಬುದನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಪೋಷಣಾವಿಧಾನಗಳು ಒಂದು ತಳಿಗೆ ಸರಿಯಾಗಿ ಹೊಂದದೇ ಹೋದಲ್ಲಿ ನಷ್ಟವಾಗುತ್ತದೆ. ಲೆಗ್‌ಹಾರ್ನ್‌ಹೇಂಟೆಗಳು ವರ್ಷಕ್ಕೆ ಸುಮಾರಾಗಿ ಸರಾಸರಿ 150 ಮೊಟ್ಟೆಗಳನ್ನಿಡುತ್ತವೆ ಮತ್ತು ವರ್ಷಕ್ಕೆ 70 ರಿಂದ 85 ಪೌಂಡ್ ಧಾನ್ಯವನ್ನು ತಿನ್ನುತ್ತವೆ. ಆದರೆ ಇಷ್ಟೇ ಮೊಟ್ಟೆಗಳನ್ನು ಕೊಡುವ ಪ್ಲೈಮೂತ್‌ರಾಕ್, ರ್‍ಹೋಡ್ ಐಲೆಂಡ್ ರೆಡ್, ವ್ಯಾಂಡ್ಯೊ ಜಾತಿಯವು 80 ರಿಂದ 85 ಪೌಂಡ್ ಧಾನ್ಯವನ್ನು ತಿನ್ನುತ್ತವೆ. ಆದ್ದರಿಂದಾಗಿ ಕೋಳಿಗಳಿಗೆ ಒದಗಿಸಬೇಕಾದ ಆಹಾರದ ಪರಿಮಾಣದ ಬಗ್ಗೆ ಯಾವ ಒಂದು ಸೂತ್ರವನ್ನೂ ಪಾಲಿಸುವುದು

ಸಾಧ್ಯವಿಲ್ಲ. ಮೊಟ್ಟೆ ಉತ್ಪಾದನೆಯಲ್ಲಿ ಕಾಲಮಾನಕ್ಕನುಗುಣವಾಗಿ ಆಗುವ ಬದಲಾವಣೆಗಳಿಗೆ ತಕ್ಕಂತೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದನ್ನು ನೆನಪಿನಲ್ಲಿಟ್ಟಿರಬೇಕು. ಹೀಗಾಗಿ ಡಿಸೆಂಬರ್ ಅಥವಾ ಜನವರಿಯಲ್ಲಿ ಉತ್ಪಾದಿಸಿದ 10 ಮೊಟ್ಟೆಗಳು ಬೇಸಿಗೆಯ ಕಾಲದಲ್ಲಿ ಉತ್ಪಾದಿಸಿದ 15 ರಿಂದ 20 ಮೊಟ್ಟೆಗಳಿಗೆ ಸಮ.

ಮುಂಬರುವ ಅಧ್ಯಾಯಗಳಲ್ಲಿ ಕೋಳಿಸಾಕಾಣಿಕೆಯ ಅತಿ ಮುಖ್ಯ ಅಂಶಗಳ ಬಗ್ಗೆ ವೈಜ್ಞಾನಿಕ ವಿಚಾರಗಳನ್ನು ಒದಗಿಸುವ ಪ್ರಯತ್ನ ಮಾಡಲಾಗಿದೆ. ಏನೇ ಆದರೂ ಯಾವುದೂ ಸ್ವಂತ ಅನುಭವಕ್ಕೆ ಸಮನಾಗಲಾರದು. ಆದುದರಿಂದ ಪ್ರತಿಯೊಬ್ಬ ಕೋಳಿ ಬೇಸಾಯಗಾರನೂ ತನ್ನ ಸ್ವಂತ ವಾತಾವರಣಕ್ಕೆ ಹೊಂದುವಂತೆ ತನ್ನದೇ ಆದ ಪದ್ಧತಿಯನ್ನು ರೂಪಿಸಿಕೊಳ್ಳುವುದು ಅಗತ್ಯ. ಸಣ್ಣಪ್ರಮಾಣದಲ್ಲಿ ಪ್ರಾರಂಭಮಾಡುವುದು ಕೋಳಿಸಾಕಣೆ ಉದ್ಯಮವನ್ನು ಪ್ರಾರಂಭಮಾಡುವ ಅತ್ಯುತ್ತಮ ವಿಧಾನವೆಂದು ಸಾಮಾನ್ಯ ಅಭಿಪ್ರಾಯ. ಸ್ವಾಭಾವಿಕವಾಗಿಯೇ ವಿಸ್ತರಣ ಮತ್ತು ಅಭಿವೃದ್ಧಿ ಮುಂದುವರಿಯುತ್ತದೆ ಮತ್ತು ವ್ಯಾಪಾರವೂ ಕ್ರಮೇಣ ಬೆಳೆಯುತ್ತದೆ.

ಅಧ್ಯಾಯ 2

ಕೋಳಿಮರಿ ತಳಿಗಳು(ಬ್ರೀಡ್ಸ್) ಮತ್ತು ವಿವಿಧತೆಗಳು(ವೆರೈಟೀಸ್)

ಕೋಳಿಗಳಿಗೆ ಸಂಬಂಧಪಟ್ಟಂತೆ ತಳಿ ಎಂದರೆ ಸರ್ವಸಮವಾದ ಪಿತೃವರ್ಗವುಳ್ಳ ಒಂದೇ ಬಗೆಯ ರೂಪ ಆಕಾರಗಳನ್ನುಳ್ಳ ಮತ್ತು ಸಂತಾನೋತ್ಪಾದನೆಯಲ್ಲಿ ತನ್ನದೇ ರೂಪ, ಆಕಾರದ ಮರಿಗಳನ್ನು ಉತ್ಪಾದಿಸುವ ಶಕ್ತಿಯುಳ್ಳ ಕೋಳಿಗಳ ಗುಂಪು ಎಂದು ಹೇಳಬಹುದು. ಒಂದೊಂದು ತಳಿಯೂ ತನ್ನದೇ ಆದ ವಿಶಿಷ್ಟ ಗುಣವನ್ನು ಹೊಂದಿದ್ದು ಒಂದು ವಿಶೇಷ ಉದ್ದೇಶಕ್ಕಾಗಿ ಬೆಳಸಲ್ಪಡುತ್ತದೆ. ಉದಾಹರಣೆಗೆ ಕೆಲವು ಕೋಳಿಗಳು ತಮ್ಮ ಮೊಟ್ಟೆ ಉತ್ಪಾದನಾಸಾಮರ್ಥ್ಯಕ್ಕೆ ಹೆಸರುವಾಸಿಯಾದರೆ, ಕೆಲವು ತಮ್ಮ ಗಡಸುತನ ಮತ್ತು ಕಷ್ಟಕರ ಸ್ಥಿತಿಗಳಲ್ಲಿಯೂ ಚೆನ್ನಾಗಿ ಗಟ್ಟಿಮುಟ್ಟಾಗಿರುವ ಸಾಮರ್ಥ್ಯಕ್ಕೆ ಹೆಸರು ಪಡೆದಿವೆ; ಕೆಲವು ತಮ್ಮ ಗಾತ್ರ ಮತ್ತು ಮಾಂಸ ಉತ್ಪಾದನಾ ಸಾಮರ್ಥ್ಯಕ್ಕೆ ಪ್ರಸಿದ್ಧಿ ಪಡೆದಿವೆ. ತಳಿ ಗುಣಗಳನ್ನು ನಿರ್ಣಯಿಸುವಲ್ಲಿ ಬಾಹ್ಯಗುಣಗಳಾದ, ಗರಿ, ಕಾಲು, ಜುಟ್ಟು, ಜೋಲುಮಾಂಸಲ ಮತ್ತು ಕಿವಿಯ ಹಾಲೆಗಳ ಬಣ್ಣವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಕೋಳಿಗಳಲ್ಲಿ ಆರವತ್ತರಿಂದ ಎಪ್ಪತ್ತರವರೆಗೆ ವಿಭಿನ್ನ ತಳಿಗಳನ್ನು ಪಟ್ಟಿಮಾಡಲಾಗಿದೆಯಾದರೂ ಇಪ್ಪತ್ತು, ಇಪ್ಪತ್ತೈದಕ್ಕಿಂತ ಹೆಚ್ಚಿನವು ಆರ್ಥಿಕ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದಿಲ್ಲ. ವಿವಿಧ ತಳಿಗಳನ್ನು ವಿವರಿಸಲು ಪ್ರಾರಂಭಿಸುವ ಮೊದಲು 'ಸಾಕುಕೋಳಿ' ಎಂದು ಜನಜನಿತವಾಗಿರುವ ಕೋಳಿಯ ಉಗಮದ ಸಂಕ್ಷಿಪ್ತ ಚರಿತ್ರೆಯನ್ನು ಕೊಡುವುದು ಉಪಯೋಗಕಾರಿ.

ಪುರಾತನ ಕಾಲದಿಂದಲೂ ಮಾನವನು ಕೋಳಿಗಳತ್ತ ಆಕರ್ಷಿತನಾಗಿದ್ದಾನೆ. ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಶಾಂತಸಾಗರದ ದ್ವೀಪಗಳಲ್ಲಿನ ಪುರಾತನ ಬುಡಕಟ್ಟಿನ ಜನ ಬಹಳ ಹಿಂದಿನಿಂದಲೂ ಕೋಳಿಗಳನ್ನು ಸಾಕುತ್ತಬಂದಿದ್ದಾರೆ. ಕೆಲವು ಪಂಗಡಗಳು ಪ್ರಾರಂಭದಲ್ಲಿ ಅವನ್ನು ಹೇಗೆ ಪಡೆದರೆಂಬುದು ಇನ್ನೂ ಗುಟ್ಟಿನ ವಿಷಯವೇ ಆಗಿದೆ. ಚಾರಿತ್ರಿಕ ಕಾಲಕ್ಕೂ ಮೊದಲು ಆಗ್ನೇಯ ಏಷ್ಯದಲ್ಲಿ ಕಾಡುಕೋಳಿಗಳನ್ನು ಪಳಗಿಸಿರಬಹುದೆಂದು ಊಹಿಸಲಾಗಿದೆ. ಕಾಡುಕೋಳಿಗಳನ್ನು ಆಹಾರಕ್ಕಾಗಿ ಬೇಟೆಯಾಡುತ್ತಿದ್ದರು. ಕೋಳಿಗಳ ಜಗಳಗಂಟಿತನ ಹಾಗೂ ಹುಂಜಕಾಳಗ ಸಣ್ಣ ಸ್ವಭಾವಗಳು ಅವುಗಳ ಅಭಿವೃದ್ಧಿಗೆ ಮಾರ್ಗಮಾಡಿಕೊಟ್ಟವು. ಅದೇ ಕ್ರೀಡಾಹವ್ಯಾಸವಾಗಿ ಪರಿಣಮಿಸಿತು. ಕೋಳಿಗಳನ್ನು ಪಳಗಿಸುವಲ್ಲಿ ಮತ್ತು ಅವುಗಳ ಪ್ರಸಾರದಲ್ಲಿ ಹುಂಜಕಾಳಗ ಕ್ರೀಡೆಯು ಮಹತ್ತರ ಪಾತ್ರವಹಿಸಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಹಲವು ರಾಷ್ಟ್ರಗಳ ಸಾಹಿತ್ಯದಲ್ಲಿ ಈ ಮನೋರಂಜಕಕ್ರೀಡೆಯು ಉಲ್ಲೇಖವಿದೆ.

ಆಹಾರಕ್ಕಾಗಿ ಕೋಳಿಗಳನ್ನು ಸಾಕುತ್ತಿರುವಂತೆ ಹುಂಜಕಾಳಗದ ಕ್ರೀಡೆಗಾಗಿಯೂ ಕೋಳಿಗಳನ್ನು ಸಾಕಿ ಪಳಗಿಸಲಾಗುತ್ತಿದೆ. ಅದರಲ್ಲಿಯೂ ಕ್ರೀಡೆಯು ಕೋಳಿಗಳ ಬಹುಮುಖಿ ಪ್ರಸಾರಕ್ಕೆ ಮುಖ್ಯ ಕಾರಣವಾಗಿದೆ. ಭಾರತವೂ ಸೇರಿದಂತೆ ಕೆಲವು ದೇಶಗಳಲ್ಲಿ ಹುಂಜಕಾಳಗವು ಅಡೆತಡೆಯಿಲ್ಲದೆ ನಿಶ್ಶಬ್ದವಾಗಿ ಇಂದಿಗೂ ಮುಂದುವರಿಯುತ್ತಿದೆ.

ವಲಸೆ ಮತ್ತು ಪ್ರಸಾರ: ಕ್ರಿ.ಪೂ. 3200ರಷ್ಟು ಹಿಂದೆಯೇ ಕೋಳಿ ಪೌರ್ವಾತ್ಯ ಚಿತ್ರಲಿಪಿಯಲ್ಲಿತ್ತೆಂದು ಹೆಸರಾಂತ ಪ್ರಾಣಿವಿಜ್ಞಾನಿ ವಿಲಿಯಂ ಬೀಬ್ ಉಲ್ಲೇಖಿಸುತ್ತಾನೆ. ಕ್ರಿ.ಪೂ. 1000 ದಲ್ಲಿಯೇ ಹುಂಜವು ಭಾರತೀಯರಿಗೆ ತಿಳಿದಿತ್ತು. ಶತಮಾನಗಳ ಕಾಲ ಭಾರತದಿಂದ ಕೋಳಿಯು ಉತ್ತರಾಭಿಮುಖಿ ಹಾಗೂ ಪಶ್ಚಿಮಾಭಿಮುಖಿವಾಗಿ ಪ್ರಸಾರವಾಯಿತು. ಕೊನೆಗೆ ಕ್ರಿ.ಪೂ. 525ರಲ್ಲಿ ಗ್ರೀಸ್ ತಲುಪಿತು. ತರುವಾಯ, ಇರಾನ್, ಪರ್ಶಿಯ ಮತ್ತು ಪ್ಯಾಲೆಸ್ಟೈನ್‌ಗಳಿಗೆ ಹರಡಿತು. ಪ್ಯಾಲೆಸ್ಟೈನಿನ ಯಹೂದಿ ದೊಡ್ಡವ್ಯಾಪಾರಿಗಳು ನಂತರ ಶೀಘ್ರದಲ್ಲಿ ಬ್ರಿಟಿಷ್ ದ್ವೀಪಗಳನ್ನು ತಲುಪುವಂತೆ ಮಾಡಿದರು. ಅಲ್ಲಿಂದ ಮಧ್ಯ ಇಟಲಿ ಹಾಗೂ ಯೂರೋಪಿನ ಹಲವಾರು ಭಾಗಗಳಿಗೆ ಹಬ್ಬಿತು. ಕ್ರಿಸ್ತಶಕದ ಪ್ರಾರಂಭದ ವೇಳೆಗೆ ಇದು ಏಷ್ಯದ ಪಶ್ಚಿಮ ಭಾಗ ಮತ್ತು ಯೂರೋಪಿನ ಪೂರ್ವಭಾಗಗಳಿಗೆ ಹರಡಿತ್ತು. ಇಲ್ಲಿಂದ ಕ್ರಮೇಣ ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಜಪಾನ್, ರಷ್ಯ ಮತ್ತು ಅಮೆರಿಕ ಮೊದಲಾದ ಹಲವಾರು ದೇಶಗಳಿಗೆ ತಲುಪಿತು.

ದಕ್ಷಿಣ ಹಾಗೂ ಮಧ್ಯಭಾರತ, ಅಸ್ಸಾಂ, ಬರ್ಮ, ಸಿಲೋನ್ ಮತ್ತು ಇತರ ದಕ್ಷಿಣ ಏಷ್ಯದೇಶಗಳ ವಿಶಾಲ ಭೂಭಾಗದಲ್ಲಿ ವಾಸವಾಗಿದ್ದ ಕಾಡುಕೋಳಿಗಳೇ ಇಂದಿನ ಎಲ್ಲ ಕೋಳಿ ತಳಿಗಳ ಉಗಮಕ್ಕೆ ಕಾರಣವೆಂದು ಖಚಿತವಾಗಿ ತಿಳಿದುಬಂದಿದೆ. ಸಾವಿರಾರು ವರ್ಷಗಳ ಹಿಂದೆ ಕಾಡುಕೋಳಿಗಳು ವಾಸವಾಗಿದ್ದ ಕಾಡುಗಳಲ್ಲಿ ಅವುಗಳನ್ನು ಇಂದಿಗೂ ಕಾಣಬಹುದು.

ಕಾಡುಕೋಳಿಗಳಲ್ಲಿ ನಾಲ್ಕು ಪ್ರಭೇದಗಳಿರುವಂತೆ ತಿಳಿದುಬಂದಿದೆ. ಅವುಗಳೆಂದರೆ:

(1) **ಗಾಲಸ್ ಗಾಲಸ್** ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಕೆಂಪು ಕಾಡುಕೋಳಿ, (2) **ಗಾಲಸ್ ಲಾಫಯೆಟ್ರಿ** – ಸಿಲೋನಿನ ಕಾಡುಕೋಳಿ, (3) **ಗಾಲಸ್ ಸೊನ್ನೆರಾಟಿ** ಬೂದು ಕಾಡುಕೋಳಿ, (4) **ಗಾಲಸ್ ವೇರಿಯಸ್** – ಜಾವ ಕಾಡುಕೋಳಿ. ಸಾಕು ಕೋಳಿಯ ಎಲ್ಲ ತಳಿಗಳೂ ಕೆಂಪುಕಾಡುಕೋಳಿ (**ಗಾಲಸ್ ಗಾಲಸ್**) ಯಿಂದ ಜನಿಸಿದವೆಂದೂ ಉಳಿದ ಮೂರು ಪ್ರಭೇದಗಳು ಇದರಲ್ಲಿ ಯಾವ ಭಾಗವನ್ನೂ ವಹಿಸಿಲ್ಲವೆಂಬುದು ಸಾಮಾನ್ಯವಾದ ನಂಬಿಕೆ. ಕೆಂಪುಕಾಡುಕೋಳಿಗಳಲ್ಲಿ ಐದು ಉಪ ಪ್ರಭೇದಗಳಿವೆ. ಇವುಗಳಲ್ಲಿ ಸುಸ್ಪಷ್ಟ ವ್ಯತ್ಯಾಸಗಳಿದ್ದರೂ ಹೆಚ್ಚಿನ ವ್ಯತ್ಯಾಸಗಳಿಲ್ಲ. ಆ ಉಪ ಪ್ರಭೇದಗಳೆಂದರೆ: (1) **ಗಾಲಸ್ ಗಾಲಸ್ ಬಾಂಕಿವ** ಅಥವಾ ಜಾವದ ಕೆಂಪು

ಕಾಡುಕೋಳಿ, (2) **ಗಾಲಸ್ ಗಾಲಸ್ ಜಬೌಲಿ** ಅಥವಾ ಟಾಂಗನೀಕದ ಕೆಂಪು ಕಾಡುಕೋಳಿ, (3) **ಗಾಲಸ್ ಗಾಲಸ್ ಮುರ್ಘೆ** ಅಥವಾ ಭಾರತದ ಕೆಂಪು ಕಾಡು ಕೋಳಿ, (4) **ಗಾಲಸ್ ಗಾಲಸ್ ಗಾಲಸ್** ಅಥವಾ ಕೋಚಿನ್ – ಚೀನ ಕೆಂಪುಕಾಡು ಕೋಳಿ, (5) **ಗಾಲಸ್ ಗಾಲಸ್ ಸ್ಪೇಡೇಸಸ್** ಅಥವಾ ಬರ್ಮಾ ಕೆಂಪು ಕಾಡುಕೋಳಿ. ವನ್ಯಸ್ಥಿತಿಯಲ್ಲಿ ಈ ಪ್ರಭೇದಗಳ ಭೌಗೋಳಿಕ ಹಂಚಿಕೆ ವಾಯುವ್ಯ ಭಾರತದಿಂದ ಅಸ್ಸಾಮ್, ಬ್ರಹ್ಮದೇಶ, ಥೈಲಾಂಡ್, ಮಲಯ ಮುಖಾಂತರ ಪೂರ್ವಕ್ಕೆ ಇಂಡೋ ಚೀನ, ಚೀನದ ದಕ್ಷಿಣದ ತುದಿ, ಹೈನಾನ್ ಸುಮಾತ್ರ ಮತ್ತು ಜಾವಗಳಿಗೆ ಹಬ್ಬಿದೆ.

ಭಾರತದ ಕೆಂಪು ಕಾಡುಕೋಳಿ (ಚಿತ್ರ 3) ಸಾಮಾನ್ಯವಾಗಿ ಈ ದೇಶದ ಉತ್ತರ ಮತ್ತು ಈಶಾನ್ಯ ಭಾಗಗಳಿಗೆ ಸೀಮಿತವಾಗಿದೆ. ದಕ್ಷಿಣ ಕಾಶ್ಮೀರದಿಂದ ಅಸ್ಸಾಮಿನ ವರೆಗಿನ ಹಿಮಾಲಯ ತಪ್ಪಲಿನಲ್ಲಿ, ಉತ್ತರ ಮತ್ತು ಪೂರ್ವ ಮಧ್ಯಪ್ರದೇಶ, ಬಂಗಾಲ, ಗೋದಾವರಿಯ ದಕ್ಷಿಣ ಪ್ರದೇಶ ಒರಿಸ್ಸಾ, ಗಂಜಾಂ, ವಿಶಾಖಪಟ್ಟಣ ಮತ್ತು ಗೋದಾವರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಇವುಗಳನ್ನು ಕಾಣಬಹುದು.

ಭಾರತದಲ್ಲಿ ಬೂದು ಕಾಡುಕೋಳಿಗಳೂ (**ಗಾಲಸ್ ಸೊನ್ನೆರಾಟಿ**)ಕಂಡು ಬರುತ್ತವೆ. ಇವು ಪಶ್ಚಿಮ ಮತ್ತು ದಕ್ಷಿಣ ಭಾರತದಲ್ಲಿ ಅಬೂಪರ್ವತದವರೆಗೆ ಗೋದಾವರಿ ನದಿಯ ವಾಯುವ್ಯ ಮತ್ತು ಪೂರ್ವಕ್ಕೆ ಮಧ್ಯಭಾರತ ಮತ್ತು ರಾಜ ಸ್ತಾನ್ ಪ್ರದೇಶಗಳಿಗೆ ಸೀಮಿತವಾಗಿವೆ. ಕೆಂಪು ಕಾಡುಕೋಳಿಗಳ ಸಂಕರ ತಳಿಗಳು ಫಲಶಕ್ತಿಯುಳ್ಳವುಗಳು. ಸಾಕುಕೋಳಿಗಳ ಪಿತೃವರ್ಗದಲ್ಲಿ **ಗ್ಯಾಲಸ್ ಸೊನ್ನೆರಾಟಿ** (ಬೂದು ಕಾಡುಕೋಳಿ)ಗೆ ಯಾವ ಸ್ಥಾನವೂ ಇಲ್ಲವೆಂಬುದು ಸಾಮಾನ್ಯವಾದ ನಂಬಿಕೆ. ವನ್ಯ ಉಪಪ್ರಭೇದದಲ್ಲಿರುವಂತೆ ಚಮಕಿಯುಂತಹ ಮಚ್ಚೆಗಳಿರುವ ಸಾಕುಕೋಳಿಗಳ ಪಿತೃವರ್ಗದಲ್ಲೂ ಬೂದು ಕಾಡುಕೋಳಿಗಳಿಲ್ಲವೆಂದು ಕೆಲವು ಲೇಖಕರ ಸಾಮಾನ್ಯವಾದ ನಂಬಿಕೆ.

ಮುಖ್ಯವಾದ ಗುಂಪುಗಳು

ಸಾಕು ಕೋಳಿಗಳನ್ನು 'ದೇಶಿ' ಅಥವಾ 'ಸ್ಥಳಜನ್ಯ' ಮತ್ತು 'ವಿದೇಶಿ' ಅಥವಾ 'ಅಭಿವೃದ್ಧಿಪಡಿಸಿದ' ಎಂದು ಎರಡು ದೊಡ್ಡ ಗುಂಪುಗಳಾಗಿ ವಿಭಾಗಿಸಬಹುದು.

ದೇಶಿ ತಳಿಗಳು

ತಮ್ಮದೇ ಆದ ನಿರ್ದಿಷ್ಟ ವೈಶಿಷ್ಟ್ಯಗಳು ಮತ್ತು ಸ್ಥಳೀಯ ಹೆಸರುಗಳಿದ್ದರೂ ಕೂಡ, 'ದೇಶಿ' ಪದವನ್ನು ಎಲ್ಲ ಸ್ಥಳ ಜನ್ಯಕೋಳಿಗಳಿಗೂ ಅನ್ವಯಿಸುವಂತೆ ಉಪಯೋಗಿಸ ಲಾಗುತ್ತದೆ. ಟೆನಿಸ್, ನೇಕೆಡ್‌ನೆಕ್, ಚಿತ್ತಗಾಂಗ್, ಪಂಜಾಬ್ ಬ್ರೌನ್, ಅಸೀಲ್, ಫಾಗಸ್, ಲೊಲಾಬ್, ಕಾಶ್ಮೀರ್ ಫೆವೆರೊಲೆಸ್, ಟಿಟ್ರೆ, ಬರ್ಸ, ಕರಕ್‌ನಾಥ್, ಡೆಂಕಿ (ಚಿತ್ರ 6), ಟೆಲ್ಲಿಚೆರ್ರಿ (ಚಿತ್ರ 7) ಕಾಳಹಸ್ತಿ ಮೊದಲಾದವು ಸ್ಥಳೀಯ ತಳಿಗಳಾದರೂ

ಶತಮಾನಗಳಿಂದ ಹಿಡಿತದಲ್ಲಿಲ್ಲದ ಹಳ್ಳಿಯ ಪರಿಸ್ಥಿತಿಯಲ್ಲಿ ಸಂಕೀರ್ಣ ಸಂತಾನವೃದ್ಧಿಗೊಂಡು ಇಂದು ಶುದ್ಧತಳಿಗಳಾಗಿ ಉಳಿದಿಲ್ಲ.

ದೇಶಿಕೋಳಿಗಳು ತಮ್ಮ ಗಾತ್ರ ಮತ್ತು ಆಕಾರದಲ್ಲಿ ಬಹಳಷ್ಟು ವಿಭಿನ್ನತೆಗಳನ್ನು ಹೊಂದಿವೆ. ಒಂದು ಅತಿ ಸಣ್ಣ ಗುಂಪಿನಲ್ಲಿಯೂ ಅನೇಕ ಬಣ್ಣ, ಆಕಾರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಆದರೂ ಇವು ಭಾರತದ ಕೋಳಿ ಸಂಖ್ಯೆಯ ಬಹು ದೊಡ್ಡ ಅಂಗವಾಗಿವೆ ಮತ್ತು ತತ್ತಿ ಉತ್ಪಾದನೆಯಲ್ಲಿ ಇವುಗಳ ಮೌಲ್ಯ ಅತ್ಯಲ್ಪ. ಹಾಗಿದ್ದರೂ ದೇಶಿಕೋಳಿ ಸಾಮಾನ್ಯವಾಗಿ ಅತ್ಯುತ್ತಮವಾದ ತಾಯಿ ಮತ್ತು ಆದರ್ಶ ಪ್ರಾಯವಾದ ಕಾವು ಕೊಡುವ ಕೋಳಿ. ಇವು ಬಹಳ ಜಾಗರೂಕ ಕೋಳಿಗಳು ಮತ್ತು ಒಳ್ಳೆಯ ಆಕ್ರಮಣಕಾರಿ. ದೇಶಿತಳಿಯಲ್ಲಿ ತಕ್ಕಮಟ್ಟಿಗೆ ಶುದ್ಧವಾದವುಗಳೆಂದರೆ, ಅಸೀಲ್, ಚಿಟ್ಟಗಾಂಗ್ ಮತ್ತು ಫಾಗಸ್.

ಅಸೀಲ್: ಅಸೀಲ್ ಎಂದರೆ 'ನೈಜ' ಅಥವಾ 'ಪ್ರಾಮಾಣಿಕ' ಎಂದರ್ಥ. ಈ ಸ್ಥಳಜನ್ಯಕೋಳಿತಳಿಗೆ ಅದರ ಶ್ರೇಷ್ಠ ಹೊಡೆದಾಟದ ಗುಣಗಳಿಗಾಗಿ ಈ ಹೆಸರನ್ನು ಕೊಟ್ಟಿದೆ. ಮೂಲ 'ಅಸೀಲ್' ಮಧ್ಯಮ ಗಾತ್ರದ ಕೋಳಿ. ಇದನ್ನು ಸಾಮಾನ್ಯವಾಗಿ 'ರೆಜ' ಅಥವಾ 'ಟಿಕ್ರ' ಎಂದು ಕರೆಯುತ್ತಾರೆ. ಮೊದಲೇ ಗ್ರಹಿಸಲ್ಪಟ್ಟ ಇದರ ಹೊಡೆದಾಟದ ಮನೋಭಾವ ಮತ್ತು ಇದರ ಸಹಿಷ್ಣುತೆ ಹುಂಜಕಾಳಗಗಳ ಕ್ರೀಡೆಯ ಬೆಳವಣಿಗೆಗೆ ದಾರಿಯಾಯಿತು.

ರಾಜಮನೆತನದವರೂ ಸೇರಿದಂತೆ ಶ್ರೀಮಂತವರ್ಗದವರು ಈ ಹುಂಜಕಾಳಗಕ್ಕೆ ಪೋಷಕರಾಗಿದ್ದರು. ಅವರು ತಮ್ಮ ಮನಸ್ಸಂತೋಷಕ್ಕಾಗಿ ಈ ಕ್ರೀಡೆಯಲ್ಲಿ ಅತ್ಯಾಸಕ್ತರಾಗಿದ್ದರು. ಈ ತಳಿಯನ್ನು ಗಾತ್ರ ಮತ್ತು ತೂಕದಲ್ಲಿ ಅಭಿವೃದ್ಧಿಪಡಿಸಿದ ಯಶಸ್ಸು ಅವರಿಗೆ ಸೇರಿದ್ದು. ಕೊಕ್ಕಿನಿಂದ ಪಾದದವರೆಗೆ ಸುಮಾರು 28 ಅಂಗುಲವಿರುವ ಮತ್ತು 9 ಪೌಂಡುಗಳಿಗಿಂತಲೂ ಹೆಚ್ಚಿನ ತೂಕವಿರುವ ಉತ್ತಮ ಮಾದರಿಯ ಅಸೀಲ್ ಕೋಳಿಗಳನ್ನು ಕಾಣಬಹುದು. ಕಾಳಗದ ವಿಷಮ ಸ್ಥಿತಿಯಲ್ಲಿಯೂ ಅಸೀಲ್ ಕೋಳಿಯ ಅಸಾಧಾರಣವಾದ ಸಹಿಷ್ಣುತೆಯು ಲೋಕಪ್ರಸಿದ್ಧವಾಗಿದೆ. ಏಕೆಂದರೆ ಇದು ಕೊನೆಯವರೆಗೂ ಹೋರಾಡುತ್ತದೆ ಮತ್ತು ಕಣದಿಂದ ಹಿಂದೆಗೆಯುವುದಕ್ಕಿಂತ ಅಲ್ಲಿಯೇ ಮಡಿಯಲು ಇಷ್ಟಪಡುತ್ತದೆ.

ಅಸೀಲ್ ಭಾರತೀಯ ಒಂದು 'ಕ್ರೀಡೆ' ಎಂಬ ಬಗ್ಗೆ ಸಾಕಷ್ಟು ವಿವಾದಗಳಿವೆ. ಅಸೀಲ್ ಶುದ್ಧವಾದ 'ಕ್ರೀಡೆ' ಎಂದು ಕೆಲವರು ಅಭಿಪ್ರಾಯಪಟ್ಟರೆ, ಮತ್ತೆ ಕೆಲವರು ಇದು ಸಂಪೂರ್ಣವಾಗಿ 'ಕ್ರೀಡೆ' ವರ್ಗಕ್ಕೆ ಸೇರುವುದಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಭಾರತದ ಹಲವು ಭಾಗಗಳಲ್ಲಿ ಈ ಹುಂಜಕಾಳಗ ನಿಷೇಧಿಸಲ್ಪಟ್ಟಿದೆ. ಪರಿಣಾಮವಾಗಿ, ಜನರ ಆಸಕ್ತಿ ಕಡಿಮೆಯಾಗಿದೆ. ಒಂದು ಪ್ರಾಮುಖ್ಯ ತಳಿಯಾಗಿದ್ದ ಅಸೀಲ್ ಇಂದು ಪ್ರಾಮುಖ್ಯತೆ ಕಳೆದುಕೊಂಡಿದೆ. ಅಸೀಲ್ ಶುದ್ಧ ಮಾದರಿಯ ಕೋಳಿಗಳನ್ನು

ಕಾಣುವುದೂ ಇಂದು ಅಪರೂಪವಾಗಿದೆ. ಬಹುಕಾಲದಿಂದ ಒಳತಳಿಯೆಬ್ಬಿಕೆ ನಡೆದು ಈ ತಳಿಯ ಗಾತ್ರ ಮತ್ತು ದೇಹರಚನೆಗೆ ಬಹಳ ಹಾನಿಉಂಟಾಗಿದೆ. ಹಲವಾರು ಊರುಗಳಲ್ಲಿ ಅಸೀಲ್ ಎಂದು ಮಾರುವ ಕೋಳಿ ಶುದ್ಧ ಅಸೀಲ್ ಮತ್ತು ಸ್ಥಳಜನ್ಯ ಕೋಳಿಗಳ ಸಂಕರತಳಿ. ಶುದ್ಧ ತಳಿಯಲ್ಲ. ಹುಂಜಗಳು ಹಗುರಾಗಿ, ಹೆಚ್ಚು ಚುರುಕಾಗಿರಲು ಈ ರೀತಿ ಮಿಶ್ರತಳಿಯನ್ನು ಉತ್ಪಾದಿಸುತ್ತಾರೆ. ಅಸೀಲ್ ಬೇರೆ ತಳಿಗಳೊಡನೆ ಸಂಕರವಾದಾಗ ಅವುಗಳಿಗೆ ದಾರ್ಢ್ಯ ಒದಗುತ್ತದೆ. ಅದರಲ್ಲೂ ಪರದೇಶದ ತಳಿಗಳೊಡನೆ ಸಂಕರವಾದಾಗ ಮಾಂಸದ ರುಚಿ ಮತ್ತು ಗುಣಮಟ್ಟ ಉತ್ತಮಗೊಳ್ಳುತ್ತದೆ.

ಶುದ್ಧ ಅಸೀಲ್ ದೊಡ್ಡದಾದ, ಉಜ್ವಲವಾಗಿ ಕಾಣುವ, ಗಾಂಭೀರ್ಯಯುಕ್ತವಾದ ಕೋಳಿ. ಅತ್ಯುತ್ತಮವಾದ ಮಾದರಿಗಳು ಬಹಳ ವಿರಳವಾಗಿದ್ದರೂ ಆಂಧ್ರ ಪ್ರದೇಶದ ಕೆಲವು ಆಸಕ್ತ ಜನರ ಬಳಿ ಈಗಲೂ ಇವು ಕಾಣಸಿಗುತ್ತವೆ (ಚಿತ್ರ 5). ಎಷ್ಟಾದರೂ ಇದು ಆರ್ಥಿಕವಾಗಿ ಉಪಯೋಗಿ ಕೋಳಿಯಲ್ಲ. ಇದರ ಮೊಟ್ಟೆ ಉತ್ಪಾದನೆ ಅತ್ಯಂತ ಕಡಮೆ. ಸಾಕಷ್ಟು ರುಚಿಕರವಾದ ಮಾಂಸವಿರುವುದರಿಂದ ಆಹಾರಕ್ಕೆ ಇದು ಅತ್ಯುತ್ತಮವಾದವುಗಳಲ್ಲಿ ಒಂದಾಗಿದೆ. ಕೋಳಿಯು ಒಳ್ಳೆಯ ಕಾವುಕೊಡುವಂತಹುದು ಮತ್ತು ಅತ್ಯುತ್ತಮವಾದ ತಾಯಿ. ಉಗ್ರವಾದ ಹೊಡೆದಾಟದ ಮನೋಭಾವ ಹೊಂದಿರುವ ಇದನ್ನು ಸಾಕುವುದು ಕಷ್ಟ. ಈ ತಳಿಯ ಎಳೆಮರಿಗಳು ಸ್ವಲ್ಪಮಟ್ಟಿಗೆ ಸೂಕ್ಷ್ಮ; ಬೇರೆ ತಳಿಯ ಮರಿಗಳ ಜೊತೆ ಇವು ಸರಿಯಾಗಿ ಬೆಳೆಯದೇ ಇರುವ ಕಾರಣ ಇವುಗಳ ಬಗ್ಗೆ ಹೆಚ್ಚಿನ ಗಮನ ಅಗತ್ಯ; ವಿಶೇಷ ಸ್ವಾತಂತ್ರ್ಯ ನೀಡಿ ಇವುಗಳನ್ನು ಬೆಳೆಸಬೇಕಾಗುತ್ತದೆ.

ಅಸೀಲ್‌ಗೆ ಸ್ವಲ್ಪಮಟ್ಟಿಗೆ ಅಗಲವಾದ ತಲೆಗೆ ಹೊಂದಿ, ಸಣ್ಣಗಟ್ಟಿ ಕೊಕ್ಕು ಇರುತ್ತದೆ. ಜುಟ್ಟು ಬಟಾಣಿಯಾಕಾರದ್ದಿರುತ್ತದೆ ಮತ್ತು ಸಣ್ಣದಾಗಿರುತ್ತದೆ. ಮುಖ ತೆಳ್ಳಗೆ ಸ್ವಲ್ಪಮಟ್ಟಿಗೆ ಉದ್ದವಾಗಿರುತ್ತದೆ ಮತ್ತು ಇದು ಪುಕ್ಕಗಳಿಂದ ಆವೃತವಾಗಿಲ್ಲ. ಅಚ್ಚುಕಟ್ಟಾದ ಕಣ್ಣು – ಉತ್ತಮವಾಗಿ ಜೋಡಿಸಲ್ಪಟ್ಟಿದ್ದು ದಿಟ್ಟನೋಟವನ್ನು ಕೊಡುತ್ತದೆ. ಜೋಲುಮಾಂಸಲಗಳು ಅಪೂರ್ಣಾವಸ್ಥೆಯಲ್ಲಿರುತ್ತವೆ ಮತ್ತು ಬಹಳಮಟ್ಟಿಗೆ ಕಾಣುವುದಿಲ್ಲ. ಕೊರಳು ಉದ್ದವಾಗಿ ಸಮಾನಗಾತ್ರದ್ದಾಗಿರುತ್ತದೆ. ಆದರೆ ಮಾಂಸ ಯುಕ್ತವಾಗಿರುವುದಿಲ್ಲ. ಶರೀರವು ತಕ್ಕಮಟ್ಟಿಗೆ ಗುಂಡಗೆ, ಮೋಟಾಗಿರುತ್ತದೆ ಮತ್ತು ಅಗಲವಾದ ಎದೆ, ನೇರ ಬೆನ್ನು ಮತ್ತು ಒತ್ತಾಗಿ ಇರಿಸಿದ ಬಲವಾದ ಬಾಲ ಮೂಲವಿರುತ್ತವೆ. ಸಾಮಾನ್ಯವಾಗಿ ಗರಿಯ ರಚನೆ ಒತ್ತಾಗಿದ್ದು, ವಿರಳ ಮತ್ತು ಎದೆ, ತೊಡೆ ಮತ್ತು ರೆಕ್ಕೆಯ ಮೊದಲನೇ ಕೀಲುಗಳ ಮೇಲೆ ಇಲ್ಲವೆನ್ನುವಷ್ಟು ಅತಿ ವಿರಳ. ಗರಿಗಳಲ್ಲಿ ತುಪ್ಪಳವಿರುವುದಿಲ್ಲ ಮತ್ತು ಗರಿ ಗಟ್ಟಿಯಾಗಿರುತ್ತದೆ ಹಾಗೂ ಮುರಿಯಲು ಕಷ್ಟ. ಬಾಲ ಸಣ್ಣದಾಗಿರುತ್ತದೆ ಮತ್ತು ನೆಲದಿಂದ ಕೆಲವೇ ಅಂಗುಲಗಳ ಅಂತರದಲ್ಲಿ ಜೋತುಬಿದ್ದಿರುತ್ತದೆ. ಕಾಲುಗಳು ಗಟ್ಟಿಮುಟ್ಟಾಗಿ, ನೇರವಾಗಿ, ನೀಳವಾಗಿ ಮತ್ತು ಒಳ್ಳೆಯ ಅಂತರದಲ್ಲಿರುತ್ತವೆ. ಈ ಕೋಳಿಯು ಶಕ್ತಿ ಮತ್ತು ಜಾಗರೂಕತೆಯನ್ನು

ಸೂಚಿಸುವ ನೇರವಾದ, ಯುದ್ಧೋಚಿತ ನಡಿಗೆಯನ್ನು ತೋರಿಸುತ್ತದೆ. ಆದರ್ಶ ತೂಕ ಹುಂಜ 9 ರಿಂದ 10, ಹೇಂಟೆ 7 ರಿಂದ 8 ಪೌಂಡುಗಳು.

ಅಸೀಲ್ ತಳಿಯ ಹಲವು ವಿವಿಧತೆಗಳು ಗಮನಾರ್ಹವಾಗಿವೆ. ಅವುಗಳಲ್ಲಿ ಬಹು ಹೆಸರಾಂತವುಗಳೆಂದರೆ: (1) 'ಇರಾನ್' ಈ ಹೆಸರು ಇದಕ್ಕೆ ಹುಟ್ಟುದೇಶವಾದ ಇರಾನ್‌ದಿಂದ ಬಂದಿದೆ. ಇದನ್ನು ಇರಾನಿ ಪಂಗಡದ ಜನ ಭಾರತಕ್ಕೆ ತಂದರು. (2) ಹೈದರಾಬಾದ್ ಪೀಲಾ (ಕೆಂಪು), (3) ನ್ಯೂರಿ (ಬಿಳಿ), (4) ಯಾಖುದ್ (ಕಪ್ಪು ಮತ್ತು ಕೆಂಪು), (5) ದುಮ್ಮ್ಯಾರ್ (ಮಾಸಲು ಕಂದು) (6) ಬೀಕರ್ (ಕಂದು), (7) ಜಾವ (ಲೇಸಡ್), (8) ಪಟ್ಟೆದ (ಒಂಟಿ ಜುಟ್ಟಿನ) ಮತ್ತು (9) ಕವ್ವಲ್ (ಗಡ್ಡ ಯುಕ್ತ) ಇವಲ್ಲದೆ, ಕಪ್ಪು, ಬಾತುರೆಕ್ಕೆ ಮತ್ತು ಚುಕ್ಕೆಗಳ ವಿವಿಧತೆಗಳೂ ಕಾಣಸಿಗುತ್ತವೆ.

ಚಿತ್ತಗಾಂಗ್ ಅಥವಾ ಮಲ್ಬೆ: ಹೆಚ್ಚಾಗಿ ಚಿತ್ತಗಾಂಗ್‌ನಲ್ಲಿಯೇ ಈ ತಳಿ ಅಭಿವೃದ್ಧಿಹೊಂದಿರುವುದರಿಂದ ಇದಕ್ಕೆ ಚಿತ್ತಗಾಂಗ್ ತಳಿ ಎಂದು ಹೆಸರು ಬಂದಿದೆ. ಇದು ಮೂಲತಃ ಮಲಯನ್ ಪೆನಿನ್‌ಸುಲ ನಿವಾಸಿಯಾದುದರಿಂದ ಇದನ್ನು ಮಲ್ಬೆ ಎಂದೂ ಕರೆಯುತ್ತಾರೆ. ಚಿತ್ತಗಾಂಗ್ ದೊಡ್ಡ ಕೋಳಿಯಾಗಿದ್ದು ಹುಂಜವು ಕೆಲವು ಸಾರಿ ಕೊಕ್ಕಿನಿಂದ ಕಾಲಿನತನಕದ ಅಳತೆ 30 ಅಂಗುಲವಿರುತ್ತದೆ. ಇದರ ತೂಕ ಹುಂಜ 8 ರಿಂದ 10 ಪೌಂಡುಗಳು; ಹೇಂಟೆ 6 ರಿಂದ 9 ಪೌಂಡುಗಳು.

ಹೇಂಟೆಗಳು ಚೆನ್ನಾಗಿ ಮೊಟ್ಟೆಯಿಡುತ್ತವೆ. ಆದರೆ ಒಳ್ಳೆಯ ತಾಯಿಗಳಲ್ಲ. ಎಳೆಯ ಮರಿಗಳು ಮೊದಲಿನ ಒಂದೆರಡು ತಿಂಗಳು ಸ್ವಲ್ಪಮಟ್ಟಿಗೆ ದುರ್ಬಲವಾಗಿರುತ್ತವೆ. ಆ ಸಮಯದಲ್ಲಿ ಅವುಗಳತ್ತ ಒಳ್ಳೆಯ ಗಮನಕೊಡಬೇಕು. ವಯಸ್ಸಿಗೆ ಬಂದ ಕೋಳಿಗಳು ಬಲವಾಗಿ ಮತ್ತು ಗಟ್ಟಿಯಾಗಿರುತ್ತವೆ. ಇವುಗಳ ಜಗಳಗಂಟಿತನದಿಂದಾಗಿ ಪ್ರತ್ಯೇಕವಿಟ್ಟಾಗಲೇ ಬೇರೆ ತಳಿಗಳ ಮರಿಗಳ ಜೊತೆಗಿಂತ ಈ ಮರಿಗಳು ಚೆನ್ನಾಗಿ ಅಭಿವೃದ್ಧಿಹೊಂದುತ್ತವೆ. ಬಂಧನದೊಳಗಿರುವುದನ್ನು ಅವು ಇಷ್ಟಪಡುವುದಿಲ್ಲ. ಸ್ವತಂತ್ರತೆ, ಯುಕ್ತ ಆಹಾರ ಮತ್ತು ತೇವರಹಿತ ವಾತಾವರಣ ಒದಗಿಸಿದಲ್ಲಿ ಚೆನ್ನಾಗಿ ಏಳಿಗೆ ಹೊಂದುತ್ತವೆ. ಚಿತ್ತಗಾಂಗ್ ತಳಿ ಬೇಗನೆ ಬೆಳೆಯುತ್ತದೆ; ಭೋಜನಕ್ಕೆ ಒಳ್ಳೆಯ ಕೋಳಿಗಳಿವು. ಇವುಗಳ ಮಾಂಸ ಅತ್ಯುತ್ತಮವಾದುದು.

ಚಿತ್ತಗಾಂಗ್ ಕೋಳಿಗಳಿಗೆ ಸಣ್ಣ ಬಟಾಣಿಯಾಕಾರದ ಜುಟ್ಟಿರುತ್ತದೆ. ಇದು ಸಣ್ಣ ಗಂಟಿಗಳ ಮುದ್ದೆಯಂತೆ ಕಾಣುತ್ತದೆ. ತಲೆ ಉದ್ದವಾಗಿರುತ್ತದೆ. ಕೊಕ್ಕು ಉದ್ದವಾಗಿ, ಹಳದಿ ಬಣ್ಣದ್ದಾಗಿರುತ್ತದೆ. ಮಾಂಸಲಗಳು ಕೆಂಪಗೆ ಬಹಳ ಸಣ್ಣವಿರುತ್ತವೆ. ಹೇಂಟೆಗಳಲ್ಲಿ ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿರುತ್ತವೆ. ಕಿವಿಹಾಲೆಗಳು ಸಣ್ಣವು. ಸಾಮಾನ್ಯವಾಗಿ ಬಣ್ಣ ಕೆಂಪು, ಕೆಲವು ಸಾರಿ ಸ್ವಲ್ಪ ಬಿಳುಪು ಜೊತೆಗೂಡಿರುತ್ತದೆ. ಕಣ್ಣುಗಳು ಬಿಳಿ ಅಥವಾ ತಿಳಿ ಹಳದಿ; ಹುಬ್ಬು ಎದ್ದುಕಾಣುವಂತಿರುತ್ತದೆ ಮತ್ತು

ಚಾಚಿಕೊಂಡಿರುತ್ತದೆ. ಇದರಿಂದಾಗಿ ತಲೆ ಅಗಲವಾಗಿ ಕಾಣುತ್ತದೆ; ಕತ್ತು ಉದ್ದವಾಗಿರುತ್ತದೆ. ಎದೆ ಅಗಲವಾಗಿ ದೀರ್ಘವಾಗಿ ಮಾಂಸಯುಕ್ತವಾಗಿರುತ್ತದೆ; ಭುಜಗಳು ಅಗಲವಾಗಿ, ಟೊಂಕ ಸ್ವಲ್ಪಮಟ್ಟಿಗೆ ಕಿರಿದಾಗಿ, ಬೆನ್ನು ಬಾಲದವರೆಗೆ ಇಳಿಜಾರಾಗಿ, ಬಾಲ ಸಣ್ಣದಾಗಿ ತುಂಬಿಕೊಂಡಿರುತ್ತದೆ. ಮತ್ತು ಹುಂಜಗಳಲ್ಲಿ ಸ್ವಲ್ಪ ಜೋತು ಬಿದ್ದಿರುತ್ತದೆ. ರೆಕ್ಕೆ ಭುಜದಲ್ಲಿ ಮುಂದೆ ಚಾಚಿಕೊಂಡು ಮೇಲಕ್ಕಿರುತ್ತದೆ. ಕಾಲುಗಳ ಬಣ್ಣ ಹಳದಿ, ಪುಕ್ಕಗಳಿರುವುದಿಲ್ಲ; ಅವು ನೇರವಾಗಿ, ಉದ್ದವಾಗಿ, ಮತ್ತು ಗಟ್ಟಿಯಾಗಿವೆ. ಪುಕ್ಕ ಮೈಯಿಗೆ ಹತ್ತಿದಂತೆ, ಬಿಗಿಯಾಗಿ, ಮೋಟಾಗಿ, ನುಣುಪಾಗಿರುತ್ತದೆ. ಪುಕ್ಕಕ್ಕೆ ಯಾವುದೂ ನಿಗದಿಯಾದ ಬಣ್ಣವಿರುವುದಿಲ್ಲ. ಆದರೆ ಮಾಸಲು ಹಳದಿ, ಬಿಳಿ, ಕರಿ, ದಟ್ಟಕಂದು ಮತ್ತು ಬೂದುಬಣ್ಣದವುಗಳೇ ಹೆಚ್ಚು. ಮಾಸಲು ಹಳದಿ, ಬಂಗಾರದ ಬಣ್ಣ ಮತ್ತು ತಿಳಿಹಳದಿಬಣ್ಣಗಳು ಬಹಳ ಪ್ರಸಿದ್ಧಿ ಪಡೆದಿವೆ.


ಘಾಗಸ್: ಘಾಗಸ್ ಹೊರನೋಟಕ್ಕೆ ಘಾಘರೊಲೆಯನ್ನು ಹೋಲುವ ಆದರೆ ಕಾಲುಗಳ ಮೇಲೆ ಪುಕ್ಕವಿರುವ ಭಾರತದ ಒಂದು ವಿಶಿಷ್ಟ ತಳಿ. ಇದು ಗಟ್ಟಿಯಾದದ್ದು. ಬಂಧನವನ್ನು ಇಷ್ಟಪಡುವುದಿಲ್ಲ. ತಕ್ಕಮಟ್ಟಿಗೆ ಮೊಟ್ಟೆ ಉತ್ಪಾದಕ ಹಾಗೂ ಭೋಜನಕ್ಕೆ ಒಳ್ಳೆಯ ತಳಿ. ಹೇಂಟೆ ಒಳ್ಳೆಯ ಕಾವುಕೊಡುವ, ಸುಸ್ವಭಾವದ ತಾಯಿ.

ಜುಟ್ಟು ಒಂಟಿ ಅಥವಾ ಬಟಾಣಿಯಾಕಾರದ್ದು ಮತ್ತು ಆಕಾರದಲ್ಲಿ ಸಣ್ಣದು. ಮಾಂಸಲ ಮತ್ತು ಕಿವಿಹಾಲೆಗಳು ಸಣ್ಣವು ಮತ್ತು ಕತ್ತು ದಪ್ಪನಾದುದು. ಗಂಟಲು ಸಡಿಲವಾಗಿ ಚೀಲದಂತಿರುತ್ತದೆ. ಕೆಲವಕ್ಕೆ ಗಡ್ಡಮೀಸೆಗಳಿರುತ್ತವೆ. ಶರೀರ ದೊಡ್ಡದು ಮತ್ತು ಚೌಕಾಕೃತಿಯಾಗಿರುತ್ತದೆ. ಕಾಲುಗಳು ಉದ್ದವಾಗಿ, ನೇರವಾಗಿ ಮತ್ತು ಗಟ್ಟಿಯಾಗಿರುತ್ತವೆ. ಅವುಗಳ ಬಣ್ಣ ಹಳದಿ ಅಥವಾ ಹಸುರುಯುಕ್ತ ಹಳದಿ. ಪುಕ್ಕದ ಬಣ್ಣ ಕೆಂಪು, ಕಪಿಲ, ಕಂದು ಕಪ್ಪು ಮತ್ತು ಬೂದುಬಣ್ಣ. ಘಾಗಸ್ ವಿರಳವಾಗುತ್ತ ಬಂದಿರುತ್ತದೆ ಮತ್ತು ಬೇಗನೆ ನಶಿಸಿಹೋಗಬಹುದೆಂದೂ ಕಾಣುತ್ತದೆ. ದಕ್ಷಿಣದ ಅಲೆಮಾರಿಗಳಲ್ಲಿ ಅತ್ಯುತ್ತಮ ಮಾದರಿಗಳನ್ನು ಕೆಲವು ಸಾರಿ ಕಾಣಬಹುದು.

ಅಭಿವೃದ್ಧಿಪಡಿಸಿದ ಅಥವಾ ವಿದೇಶಿ ತಳಿಗಳು

'ಅಭಿವೃದ್ಧಿಪಡಿಸಿದ' ಎಂಬ ಪದವು ಸಾಮಾನ್ಯವಾಗಿ ಹೊರದೇಶದ ಮತ್ತು ಇಲ್ಲಿಗೆ ಆಮದುಮಾಡಿಕೊಂಡು ಇಲ್ಲಿಯೇ ವಂಶಾಭಿವೃದ್ಧಿಮಾಡಿ ಇಲ್ಲಿನ ಪರಿಸರಕ್ಕೆ ಹೊಂದಿಸಿರುವ ಆಧುನಿಕ ತಳಿಯ ಕೋಳಿಗಳಿಗೆ (ವ್ಹೈಟ್ ಲೆಗ್‌ಹಾರ್ನ್, ರ್‍ಹೋಡ್ ಐಲೆಂಡ್ ರೆಡ್ ಮೊದಲಾದ) ಅನ್ವಯಿಸುತ್ತದೆ. ಹೊರದೇಶದ ತಳಿಕೋಳಿಗಳನ್ನು ಭಾರತಕ್ಕೆ ಧರ್ಮಪ್ರಚಾರಕರು, ತೋಟಗಾರರು, ಮತ್ತು ಆಡಳಿತ ಅಧಿಕಾರಿಗಳಂತಹ ಯೂರೋಪಿನ ನಿವಾಸಿಗಳು ಪ್ರಥಮಬಾರಿಗೆ ತಂದರು. ಅವರು ತಮ್ಮ ಜೊತೆಯಲ್ಲಿ ತಮ್ಮ ಮಾತೃಭೂಮಿಯ ಕೆಲವು ಒಳ್ಳೆಯ ಕೋಳಿಗಳನ್ನು ತಂದರು. ಪರದೇಶದಿಂದ

ತಂದ ತಳಿಗಳು ಸಾಕಷ್ಟು ಜನಪ್ರಿಯವಾಗಿವೆ. ಹೊರದೇಶದಿಂದ ಆಮದುಮಾಡಿಕೊಂಡ ಶುದ್ಧ ತಳಿಕೋಳಿಗಳ ಸಂಖ್ಯೆ ಬಹಳ ಕಡಮೆ. ಅದು ದೇಶದ ಒಟ್ಟು ಕೋಳಿ ಸಂಖ್ಯೆಯ ಶೇಕಡ 1.4 ಭಾಗ ಮಾತ್ರ.



ಚಿತ್ರ 1: ವಿವಿಧ ನಮೂನೆಗಳ ಶರೀರ ರಚನೆ
1 ದ್ವಿವಿದೋದ್ದೇಶ 2 ಕ್ರೀಡಾ 3 ಮೊಟ್ಟೆಯಿಡುವ 4 ಭಾರ

ಈ ಆಧುನಿಕ ತಳಿಗಳಲ್ಲಿ ಹಲವನ್ನು ಅಲಂಕಾರಿಕ ಮತ್ತು ವ್ಯಾಪಾರಿ ಉದ್ದೇಶಗಳಿಗಾಗಿ ಬೆಳೆಸಿದ್ದಾರೆ. ಅವುಗಳನ್ನು ವಿವಿಧ ಪಂಗಡಗಳಾಗಿ ವಿಭಾಗಿಸಲಾಗಿದೆ.

ಕೋಳಿಗಳ ವರ್ಗೀಕರಣ

ಕೋಳಿಗಳನ್ನು ಹಲವಾರು ವರ್ಗಗಳು ಮತ್ತು ನಮೂನೆಗಳಾಗಿ ವಿಭಾಗಿಸಲಾಗಿದೆ. ಪ್ರತಿಯೊಂದು ವರ್ಗದಲ್ಲಿಯೂ ನಾನಾವಿವಿಧತೆಗಳುಳ್ಳ ಹಲವು ತಳಿಗಳಿವೆ, ಪ್ರತಿ ಒಂದು ವಿವಿಧತೆಯಲ್ಲೂ ಬಗೆಬಗೆಯ ವಿಭೇದ (ಸ್ಟ್ರೇನ್)ಗಳಿವೆ.

ನಮೂನೆ—ಇದು ಬೆಲೆಯುಳ್ಳ ವಾಣಿಜ್ಯ ಉತ್ಪನ್ನವನ್ನು ಉತ್ಪಾದಿಸುವ ವಿಶಿಷ್ಟ ಉದ್ದೇಶಕ್ಕಾಗಿ ಸಾಕಿದ ಕೋಳಿಗಳ ಉತ್ಪಾದನಾ ಶಕ್ತಿಯನ್ನವಲಂಬಿಸಿ ಮಾಡಿದ ವರ್ಗೀಕರಣಕ್ಕೆ ಅನ್ವಯಿಸುತ್ತದೆ. ನಮೂನೆಯ ಪ್ರಕಾರ ವರ್ಗೀಕರಣವು ಮೊಟ್ಟೆ, ಮಾಂಸ, ಮತ್ತು ಕೋಳಿಯು ಉಭಯೋದ್ದೇಶದ್ದೇ ಅಥವಾ ನಾನಾಪ್ರಕಾರದ (ಕಲಬೆರಕೆಯ) ಕೋಳಿಯೇ ಎಂಬ ಅಂಶಗಳ ಆಡಿಪಾಯದ ಮೇಲಾಗಿರುತ್ತದೆ. ನಮೂನೆ ವರ್ಗೀಕರಣವನ್ನು, ಉಪಯುಕ್ತತೆಯ ವರ್ಗೀಕರಣವೆಂದೂ ಕರೆಯುತ್ತಾರೆ.

ಚಿತ್ರ 1 ಬೇರೆ ಬೇರೆ ನಮೂನೆಗಳಾಗಿ ವರ್ಗೀಕರಿಸಿದ ಕೋಳಿಗಳ ಸಾಮಾನ್ಯ ಶರೀರ ಆಕೃತಿಯನ್ನು ವಿಶದೀಕರಿಸುತ್ತದೆ ಹಾಗೂ ಕೋಷ್ಟಕ 5 ಈ ನಮೂನೆಗಳ ಸಾಮಾನ್ಯ ವೈಶಿಷ್ಟ್ಯಗಳ ಸಾರಾಂಶವನ್ನು ಕೊಡುತ್ತದೆ.

ಕೋಷ್ಟಕ 5

ವಿವಿಧ ನಮೂನೆಯ ಕೋಳಿಗಳ ಸಾಮಾನ್ಯ ವೈಶಿಷ್ಟ್ಯಗಳು

ಅ. ಸು.	ನಮೂನೆ	ಮೊಟ್ಟೆ ಉತ್ಪಾದಕವಾಗಿ	ಕಾವುಕೊಡು ಹೇಂಟೆಯಾಗಿ	ಆಹಾರದ ಕೋಳಿಗಳಾಗಿ	ಸಾಮಾನ್ಯ ಷರಾ
1.	ಮೊಟ್ಟೆ ಉತ್ಪಾದಕ	ಅತ್ಯುತ್ತಮ	ಕೀಳು	ಕೀಳು	ಹಗುರವಾದ ಶರೀರ, ಚುರುಕಾದದ್ದು
2.	ಉಭಯೋದ್ದೇಶ	ಉತ್ತಮ	ಉತ್ತಮ	ಉತ್ತಮ	—
3.	(ಅ) ಮಾಂಸ ಅಥವಾ ದೊಡ್ಡದಾದ	ಕೀಳು	ಉತ್ತಮ	ಅತ್ಯುತ್ತಮ	ದೊಡ್ಡ ಶರೀರ, ಎದೆಯ ಮೇಲೆ ಸಾಕಷ್ಟುಮಾಂಸ
	(ಆ) ಕ್ರೀಡೆ	ಕೀಳು	ಉತ್ತಮ	ಅತ್ಯುತ್ತಮ	ಶಕ್ತಿಯುತ ರಚನೆ.
4.	ಇತರ	ಕೀಳು	ಉದಾಸೀನ	ಅತಿಕೀಳು	ಸೂಕ್ಷ್ಮರಚನೆ, ಹೊಳಪುಳ್ಳ ಪುಕ್ಕಗಳು ಸಣ್ಣಗಾತ್ರ ಅಥವಾ ಶೋಕಿ ಇಲ್ಲವೆ ಮನರಂಜನೆಗೆ ಬೇಕಾದ ಗುಣಗಳೆಲ್ಲ ವನ್ನೂ ಹೊಂದಿರುತ್ತವೆ.
5.	ಸ್ಥಳೀಯ ಅಥವಾ ದೇಶಿ	ಕೀಳು	ಅತಿಕೀಳು	ಕೀಳು	—

ವರ್ಗ—ಇದು, ವ್ಯಾಪಕವಾಗಿ ಅವುಗಳು ಮೂಲತಹ ಏಳಿಗೆ ಹೊಂದಿದ ಭೌಗೋಳಿಕ ಪ್ರದೇಶಗಳ ಆಧಾರದ ಮೇಲೆ ಕೋಳಿಗಳನ್ನು ವಿವಿಧಗುಂಪುಗಳಾಗಿ ಗುರುತಿಸುವ ಅಧಿಕೃತ ಅಥವಾ 'ಆದರ್ಶ' ವರ್ಗೀಕರಣಕ್ಕೆ ಅನ್ವಯಿಸುತ್ತದೆ. ಉದಾಹರಣೆಗೆ ಅಮೆರಿಕಾವರ್ಗವು ಅಮೆರಿಕದಲ್ಲಿ ಏಳಿಗೆ ಪಡಿಸಿದ ತಳಿಗಳನ್ನು ಒಳಗೊಳ್ಳುತ್ತದೆ. ಹನ್ನೆರಡು ವರ್ಗಗಳ ಕೋಳಿಗಳಲ್ಲಿ 50 ತಳಿಗಳಿವೆ ಮತ್ತು ಇವನ್ನು ಹಲವಾರು ವಿವಿಧತೆಗಳಾಗಿ ಪುನರ್ವಿಭಾಗಿಸಲಾಗಿದೆ.

ಅಮೆರಿಕ, ಏಷ್ಯಾಖಂಡ, ಇಂಗ್ಲೆಂಡ್ ಮತ್ತು ಮೆಡಿಟರೇನಿಯನ್ನಿನ ವರ್ಗಗಳು ಬಹು ಮುಖ್ಯವಾದವು.


ತಳಿ—ಮೊದಲೇ ಹೇಳಿದಂತೆ ತಳಿಯು ನಮೂನೆ ಅಥವಾ ವರ್ಗದ ಕೆಳಗೆ ಬರುವ ಉಪವಿಭಾಗ, ರ್‍ಹೋಡ್ ಐಲೆಂಡ್ ಮತ್ತು ಲೆಗ್‌ಹಾರ್ನ್‌ಗಳು ತಳಿಗೆ ಉದಾಹರಣೆಗಳು.

ವಿವಿಧತೆ—ವಿವಿಧತೆ, ತಳಿಯ ಉಪವಿಭಾಗ. ಪುಕ್ಕಗಳ ವಿಶಿಷ್ಟ ಬಣ್ಣ ಮತ್ತು ಜುಟ್ಟಿನ ವಿಶೇಷವಾದ ರಚನೆ ಇವುಗಳ ಆಧಾರದ ಮೇಲೆ ವಿವಿಧತೆಯ ನಿರೂಪಣೆಯಾಗುತ್ತದೆ. ವಿವಿಧತೆಗೆ ಉದಾಹರಣೆಯಾಗಿ ಬಿಳಿ, ಕಂದು, ಕಪ್ಪು ಮತ್ತು ಮಾಸಲು ಹಳದಿ ಲೆಗ್‌ಹಾರ್ನ್‌ಗಳು, ಗುಲಾಬಿ ಜುಟ್ಟು, ಒಂಟಿಜುಟ್ಟು ಉಳ್ಳ ರ್‍ಹೋಡ್ ಐಲೆಂಡ್ ರೆಡ್ ತಳಿಗಳಿವೆ. ವಿವಿಧತೆಯನ್ನು ನಿರ್ಣಯಿಸುವ ಹಲವು ರೀತಿಯ ಜುಟ್ಟುಗಳಿವೆ. ಒಂಟಿ, ಬಟಾಣಿ, ಗುಲಾಬಿ, ಸ್ಟ್ರಾಬೆರಿ ಮತ್ತು V-ಆಕಾರದ ಜುಟ್ಟುಳ್ಳ ಬೇರೆ ಬೇರೆ ವಿವಿಧತೆಗಳನ್ನು ಚಿತ್ರ 2ರಲ್ಲಿ ತೋರಿಸಲಾಗಿದೆ.


ವಿಭೇದ—ವಿಭೇದವೆಂಬುದು ವಿವಿಧತೆಯೊಳಗಿನ ಕೋಳಿಗಳ ಒಂದು ಗುಂಪಿಗೆ ಅನ್ವಯಿಸುತ್ತದೆ. ವಿಭೇದ ಸಾಮಾನ್ಯವಾಗಿ ಅದರ ಅಭಿವೃದ್ಧಿಗೆ ಕಾರಣನಾದ ಪೋಷಕನ ಹೆಸರಿನ ಆಧಾರದಿಂದಿರುತ್ತದೆ. ಉದಾಹರಣೆಗೆ: ವೈಟ್‌ಲೆಗ್ ಹಾರ್ನ್ ಬಾಬ್‌ಕಾಕ್‌ನ ವಿಭೇದವನ್ನು ಸ್ವಲ್ಪಮಟ್ಟಿಗೆ, ಗಾತ್ರ, ಪ್ರಾಯಕ್ಕೆ ಬರುವುದು ಅಥವಾ ಉತ್ಪಾದನೆ ಮೊದಲಾದ ವಿಶೇಷ ಗುಣಗಳಿಗಾಗಿ ಅಭಿವೃದ್ಧಿಪಡಿಸಿದ ವಂಶವೆಂದು ಪರಿಗಣಿಸಬಹುದು.

ಮೊಟ್ಟೆ ನಮೂನೆ: ಮೊಟ್ಟೆ ತಳಿಗೆ ಸೇರಿದ ಕೋಳಿಗಳು ವ್ಯಾಪಕವಾಗಿ ಹರಡಿರುವ ಮತ್ತು ಜನಪ್ರಿಯವಾಗಿರುವ ಗುಂಪಿಗೆ ಸೇರಿರುತ್ತವೆ. ಉತ್ತಮ ಸಂಖ್ಯೆಯಲ್ಲಿ ದೊಡ್ಡ ಮೊಟ್ಟೆಗಳನ್ನು ಉತ್ಪಾದಿಸುವ ಕೆಲವು ತಳಿಗಳ ಶಕ್ತಿಯಿಂದಾಗಿ 'ಮೊಟ್ಟೆ ತಳಿ' ಎಂಬ ಹೆಸರನ್ನು ಉಪಯೋಗಿಸಲಾಗಿದೆ. ಆದ್ದರಿಂದ ವಾಣಿಜ್ಯ ಮೊಟ್ಟೆ ಉತ್ಪಾದನಾಕೇಂದ್ರದ ಕೋಳಿ ತಳಿ ಆಯ್ಕೆ ಈ ನಮೂನೆಗೆ ಸೀಮಿತವಾಗಿರಬೇಕು. ಅವುಗಳನ್ನು ದೊಡ್ಡ ತಂಡಗಳಲ್ಲಿಟ್ಟರೂ ಒಂದೆಂಬಂತೆ ನೋಡಿಕೊಳ್ಳಬಹುದು. ಇದರಿಂದಾಗಿ ಅವಶ್ಯಕವಾದ ಗಮನ ಮತ್ತು ಮೇಲ್ವಿಚಾರಣೆಯನ್ನು ಅತ್ಯಂತ ಕಡಮೆ ಪರಿಶ್ರಮದಲ್ಲಿ ಒದಗಿಸಬಹುದು. ತುಲನಾತ್ಮಕವಾಗಿ ಇವುಗಳ ಶರೀರ ಸಣ್ಣದು. ಇದರಿಂದ ಅವುಗಳ ಮೊಟ್ಟೆ ಉತ್ಪಾದನಾ ಪ್ರಮಾಣಕ್ಕನುಗುಣವಾಗಿ ಅವುಗಳು ಸೇವಿಸುವ ಆಹಾರ ಕಡಮೆ.

ಮೊಟ್ಟೆ ನಮೂನೆ ಎಂದು ವರ್ಗೀಕರಿಸಿದ ತಳಿಗಳಲ್ಲಿ ಲೆಗ್‌ಹಾರ್ನ್, ಮೈನಾರ್ಕಾ, ಅನ್‌ಕೊನಾಸ್, ಕಾಂಪೈನ್‌ಸ್ ಮೊದಲಾದವುಗಳಿವೆ. ಇವುಗಳಲ್ಲಿ ಮೊದಲನೆಯದು ಅತ್ಯಂತ ಜನಪ್ರಿಯವಾದುದು.



ಹುಂಜದ ತಲೆಗಳು : 1 ಒಂಟಿ (ಪ್ಲೈಮೂತ್‌ರಾಕ್): 2 ಮತ್ತು 3 ಬಟಾಣಿ (ಬಹ್ಮ); 4 ಗುಲಾಬಿ (ವ್ಯಾಂಡೊಟ್ಟೆ): 5 ಒಂಟಿ (ಮೈನಾರ್ಕ); 6 ಒಂಟಿ (ಲೆಗ್‌ಹಾರ್ನ್; 7 V–ಆಕಾರದ (ಹೌದಾನ್): 8 ಗುಲಾಬಿ (ಹ್ಯಾಂಬರ್ಗ್); 9. ಸ್ಟ್ರಾಬೆರಿ (ಮಲ್ಯ)



ಹೇಂಟೆತಲೆಗಳು : 1 ಒಂಟಿ (ಪ್ಲೈಮೂತ್‌ರಾಕ್ ಮತ್ತು ರ್‍ಹೋಡೆ ಐಲೆಂಡ್ ರೆಡ್); 2 ಬಟಾಣಿ (ಬ್ರಹ್ಮ); 3 ಗುಲಾಬಿ (ವ್ಯಾಂಡೊಟ್ಟ); 4 ಒಂಟಿ (ಮೈನಾರ್ಕ); 5 ಒಂಟಿ (ಲೆಗ್‌ಹಾರ್ನ್): 6 ಗುಲಾಬಿ (ರ್‍ಹೋಡೇ ಐಲೆಂಡ್ ರೆಡ್)

ಚಿತ್ರ 2 : ಹುಂಜ ಹಾಗೂ ಹೇಂಟೆಗಳ ಜುಟ್ಟಿನ ವಿವಿಧ ನಮೂನೆಗಳು.

(ಮಾರ್ಲೆ ಎ. ಫುಲ್ ಅವರ 'ಪೌಲ್ಟ್ರಿಹಸ್ಬೆಂಡ್ರಿ' ಇಂದ)

ಮಾಂಸ ನಮೂನೆ: ಮಾಂಸ ನಮೂನೆಯು ದೊಡ್ಡಮೈಕಟ್ಟುಳ್ಳ ಮತ್ತು ದೊಡ್ಡಅಸ್ಥಿಪಂಜರವುಳ್ಳ ತಳಿಗಳನ್ನು ಒಳಗೊಂಡಿದೆ. ಮಾಂಸದಿಂದ ಮೈತುಂಬಿ ಕೊಳ್ಳುವ ಅವುಗಳ ಶಕ್ತಿಯೇ ಅವುಗಳ ವಾಣಿಜ್ಯ ಪ್ರಯೋಜನ. ಈ ಗುಂಪಿಗೆ ಸೇರಿದ ಕೋಳಿಗಳು ಸಾಮಾನ್ಯವಾಗಿ ಗಾತ್ರದಲ್ಲಿ ದೊಡ್ಡದಾಗಿಯೂ ಮತ್ತು ತೂಕವಾಗಿಯೂ ಇರುತ್ತವೆ. ಅವುಗಳ ಪುಕ್ಕ ಸಡಿಲವಾಗಿರುವುದರಿಂದ ಅವು ಗುಂಡಗೆ ತುಂಬಿಕೊಂಡಂತೆ ಕಾಣುತ್ತವೆ. ಮಾಂಸ ಮೃದುವಾದುದು, ಇದಕ್ಕೆ ಬಹುಶಃ ಇದರ ನಿಧಾನವಾದ ಬೆಳವಣಿಗೆ ಮತ್ತು ರಚನಾಕ್ರಮ ಕಾರಣ. ಉದ್ದವಾದ ದೊಡ್ಡಮೂಳೆಗಳಿಂದಾಗಿ ಮರಿಗಳು ಅವಲಕ್ಷಣವಾಗಿ ವಕ್ರವಾಗಿರುತ್ತವೆ. ಆದರೆ ವಯಸ್ಸಿಗೆ ಬಂದಾಗ ಅವು ಮಾಂಸದಿಂದ ಕೊಬ್ಬುತ್ತವೆ. ಹೆಚ್ಚಿನ ಮಾಂಸವು ಎದೆ, ತೊಡೆ ಮತ್ತು ಬೆನ್ನಿನ ಮೇಲಿರುತ್ತದೆ.

'ಮಾಂಸ ತಳಿ' ಬ್ರಹ್ಮ, ಕೋಚಿನ್, ಲಾಂಗ್‌ಶಾನ್, ಕಾರ್‌ನಿಶ್, ಗೇಮ್, ಜೆರ್ಸಿಜಯಂಟ್, ಅಸೀಲ್ ಮತ್ತು ಚಿತ್ತಗಾಂಗ್‌ಗಳನ್ನು ಒಳಗೊಳ್ಳುತ್ತದೆ.

ಉಭಯೋದ್ದೇಶ ಅಥವಾ ಸಾಮಾನ್ಯ ಉದ್ದೇಶದ ನಮೂನೆ: ಉಭಯೋದ್ದೇಶ ನಮೂನೆ, ಒಳ್ಳೆಯ ಸಂಖ್ಯೆಯ ಮೊಟ್ಟೆಗಳ ಜೊತೆಗೆ ಉತ್ಕೃಷ್ಟ ಗುಣಮಟ್ಟದ ಮಾಂಸವನ್ನು ಉತ್ಪಾದಿಸುವ ಶಕ್ತಿಯಿಂದ ಪ್ರಾಮುಖ್ಯತೆಯನ್ನು ಪಡೆದಿರುವ ತಳಿಗಳನ್ನು ಒಳಗೊಳ್ಳುತ್ತದೆ. ನಗರ ಪ್ರದೇಶಗಳಲ್ಲಿ ಮನೆ ಹಿತ್ತಲುಗಳಲ್ಲಿ ಸಾಕುವಂತಹ ಸಣ್ಣ ಗುಂಪುಗಳಿಗೆ ಈ ನಮೂನೆ ಅತಿ ಸೂಕ್ತವಾದುದು. ಸಾಧಾರಣವಾಗಿ ಒಂದು ವರ್ಷಕ್ಕೆ ಕೋಳಿಯಾಗುವವರೆಗೆ ಒಳ್ಳೆಗಾತ್ರದ ಮೊಟ್ಟೆಗಳನ್ನು ಸುಮಾರಾಗಿ ಒಳ್ಳೆಯ ಸಂಖ್ಯೆಯಲ್ಲಿ ಕೊಡುತ್ತದೆ. ಅನಂತರ ಅವನ್ನು ಊಟಕ್ಕಾಗಲೀ, ಮಾರಾಟಕ್ಕಾಗಲೀ ಉಪಯೋಗಿಸಬಹುದು. ಅವುಗಳು 12 ರಿಂದ 15 ವಾರ ವಯಸ್ಸಿನಲ್ಲಿ ನುಣುಪಾಗಿ ಕೊಬ್ಬಿರುತ್ತವೆ ಮತ್ತು ಮಾಂಸ ತಳಿಗಳಂತೆ ದೊಡ್ಡದಾದ ಅಸ್ಥಿಪಂಜರವನ್ನು ಹೊಂದಿರುವುದಿಲ್ಲ. ಸರಿಯಾದ ಪೋಷಣೆ ಕೊಟ್ಟಲ್ಲಿ ಮೊಟ್ಟೆ ಇಡುವ ತಳಿಗಳು ಗರಿ ಉದುರಿಸಲು ತೊಡಗುವ ಮಾಗಿ ಮತ್ತು ಮಳೆಗಾಲಗಳೂ ಸೇರಿದಂತೆ ಎಲ್ಲ ಕಾಲಗಳಲ್ಲೂ ಮೊಟ್ಟೆ ಇಡುತ್ತವೆ. ಎಚ್ಚರಿಕೆಯಿಂದ ಆಹಾರ ಕೊಟ್ಟು, ಮೇಲ್ವಿಚಾರಣೆವಹಿಸಿಕೊಳ್ಳದೇ ಹೋದಲ್ಲಿ ಮಾಂಸ, ಕೊಬ್ಬಿನಿಂದ ಮೈತುಂಬಿಕೊಳ್ಳುವ ಪ್ರವೃತ್ತಿ ಇವಕ್ಕೆ ಇದ್ದು ಮೊಟ್ಟೆ ಉತ್ಪಾದನೆ ಕಿಳಮುಖವಾಗುತ್ತದೆ.

ರ್‍ಹೋಡ್ ಐಲೆಂಡ್ ರೆಡ್, ಪ್ಲೈಮೂತ್‌ರಾಕ್, ನ್ಯೂಹ್ಯಾಂಪ್‌ಶೈರ್, ವ್ಯಾನ್‌ಡೊಟ್ಟೆ, ಆಸ್ಟ್ರಲಾರ್ಪ್, ಆರ್‌ಪಿಂಗ್‌ಟನ್ ಮತ್ತು ಡಾರ್‌ಕಿಂಗ್ ಇವು ಸಾಮಾನ್ಯವಾದ ಉಭಯೋದ್ದೇಶದ ತಳಿಗಳು.

ಇತರ ನಮೂನೆ: ಮೊಟ್ಟೆ, ಮಾಂಸ ಮತ್ತು ಉಭಯೋದ್ದೇಶ ತಳಿಗಳಾವುದಕ್ಕೂ ಸೇರದಂತಹ ತಳಿಗಳು ನಾನಾಮುಖಿ ನಮೂನೆಯಲ್ಲಿ ಸೇರುತ್ತವೆ. ಇವು ಯಾವು ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದಿಲ್ಲ. ಬೆಲೆಬಾಳುವ ಪ್ರದರ್ಶನೀಯ ಕೋಳಿ ಮತ್ತು ಮುದ್ದಿನ ಪ್ರಾಣಿಯಾಗಲು ಯೋಗ್ಯವಾದ ಸುಂದರವಾದ ಮಾದರಿ ಗರಿಗಳನ್ನು

ಹೊಂದಿರುವುದೇ ಮೊದಲಾದ ವಿಶೇಷ ಗುಣಗಳಿಗಾಗಿ ಇವುಗಳನ್ನು ಕೆಲವು ಕೋಳಿ ಸಾಕಾಣೆದಾರರು ಇಷ್ಟಪಡುತ್ತಾರೆ.

ಶೋಕಿ ತಳಿಗಳು: ಪೋಲಿಶ್, ಹ್ಯಾಂಬರ್ಗ್ ಮತ್ತು ಅಂಡಲುಸಿಯನ್ ನಂತಹ ಕೆಲವು ತಳಿಗಳು ತಮ್ಮ ಸುಂದರವಾದ ಗರಿ ಮತ್ತು ಬೇರೆ ಶೋಕಿ ಗುಣ ಗಳಿಂದ ಆಸಕ್ತಿಯನ್ನುಂಟುಮಾಡುತ್ತವೆ. ಇವು ಅಲಂಕಾರಿಕವಾದವುಗಳು, ಕೋಳಿ ಪ್ರದರ್ಶನಗಳಲ್ಲಿ ಉಪಯೋಗಿಕ ತಳಿಗಳು ಪ್ರಧಾನ ಪಾತ್ರವಹಿಸಿದರೂ ಕೆಲವು ಪ್ರದರ್ಶನ ಗಳಲ್ಲಿ ಶೋಕಿ ತಳಿಗಳೂ ಸ್ಥಾನ ಪಡೆಯುತ್ತವೆ.

ಆನಂದಕ್ಕಾಗಿ ಇಟ್ಟ ಕೋಳಿಗಳು: ಬಾಂಟಮ್‌ನಂತಹ ಕೆಲವು ತಳಿಗಳನು ಕೇವಲ ಅವುಗಳನ್ನು ಸಾಕುವುದರಿಂದಾಗುವ ಸಂತೋಷಕ್ಕಾಗಿ ಸಾಕುತ್ತಾರೆ. ಬಣ್ಣ ಮತ್ತು ದೇಹ ನಮೂನೆಯಲ್ಲಿ ಇವು ದೊಡ್ಡ ತಳಿಗಳ ಸೂಕ್ಷ್ಮ ಪ್ರತಿರೂಪ ಮತ್ತು ಮಕ್ಕಳಿಗೆ ಅತ್ಯುತ್ತಮವಾದ ಮುದ್ದಿನ ಪ್ರಾಣಿಯಾಗುತ್ತವೆ. ಬಾಂಟಮ್ ಅನ್ನು 'ಕ್ರೀಡೆಯ' ಮತ್ತು 'ಅಲಂಕಾರಿಕ' ಎಂಬ ಎರಡು ಗುಂಪುಗಳಾಗಿ ವಿಭಾಗಿಸಿದೆ. ಕ್ರೀಡಾ ಬಾಂಟಮ್ ಅನ್ನು ಆಕಾರ ಮತ್ತು ಬಣ್ಣಗಳಲ್ಲಿ ಆದರ್ಶ ಕ್ರೀಡಾಕೋಳಿಗಳಂತೆಯೇ ಇರುವ ಹಲವಾರು ನಮೂನೆಗಳಿಗೆ ಪುನರ್‌ವಿಭಾಗಿಸಲಾಗಿದೆ. ಸಣ್ಣ ಕ್ರೀಡಾಬಾಂಟಮ್ ಕೆಲವು ಔನ್ಸ್ ತೂಕವಿದ್ದರೂ ಸಹ ದೊಡ್ಡ ಕ್ರೀಡಾ ಕೋಳಿಗಳಲ್ಲಿ ಕಂಡುಬರುವ ಬೆಡಗು, ಸಮತೆ ಮತ್ತು ಜಾಗರೂಕತೆಗಳನ್ನು ಹೊಂದಿರುತ್ತದೆ. ಅಲಂಕಾರಿಕ ಬಾಂಟಮ್ ಗುಂಪು ಸಣ್ಣ ವಯಸ್ಸಿನವರಿಗೆ ಬಹಳ ಆಸಕ್ತಿಕಾರಿ. ವಿಷ್ಟದ ಬಾಂಟಮ್ ಗಳಾದ ಬ್ರಹ್ಮ ಮತ್ತು ಮಾಸಲು ಹಳದಿ ಕೋಚಿನ್‌ಗಳೆರಡು ಈ ಗುಂಪಿನಲ್ಲಿ ಅತ್ಯಂತ ಜನಪ್ರಿಯವಾದ ತಳಿಗಳು. ಬಾಂಟಮ್ ಕೋಚಿನ್‌ಗಳು ದೊಡ್ಡ ಮಾಸಲು ಹಳದಿಯ ಕೋಚಿನ್ನಿನ ವಿಶಿಷ್ಟ ದೇಹರಚನೆ ಮತ್ತು ಬಣ್ಣವನ್ನು ಹೊಂದಿರುತ್ತವೆ. ಆದರೆ ದೊಡ್ಡ ಕೋಚಿನ್ನಿನ 8 ಅಥವಾ 9 ಪೌಂಡ್ ತೂಕಕ್ಕೆ ಪ್ರತಿಯಾಗಿ ಕೇವಲ ಹದಿನಾಲ್ಕು ಔನ್ಸ್ ತೂಗುತ್ತವೆ. ಸಂತೋಷಕ್ಕಾಗಿ ಸಾಕುವ ಮತ್ತು ಪ್ರದರ್ಶನಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಆಕರ್ಷಿಸುವ ಮತ್ತೊಂದು ಗುಂಪೆಂದರೆ ಗುಲಾಬಿ ಜುಟ್ಟಿನ ಬಾಂಟಮ್.

ಕೆಲವು ತಳಿಗಳು ಕೋಳಿಸಾಕಾಣಿಕರ ಗಮನವನ್ನು ಆಕರ್ಷಿಸುವಂತಹ ಕೆಲವು ವಿಶಿಷ್ಟ ಆಕಾರಗಳು ಮತ್ತು ಮಚ್ಚೆಗಳನ್ನು ಹೊಂದಿರುತ್ತವೆ. ಉದಾಹರಣೆಗೆ ಹೆಚ್ಚಿನ ಆಸಕ್ತಿಯನ್ನು ಉಂಟುಮಾಡುವ ಬಿಳಿಯ ಮುಖ, ಸ್ಪಾನಿಷ್ ಕೋಳಿಗಳಲ್ಲಿ ಮಾತ್ರ ಇದೆ. ಪೋಲಿಶ್ ಮತ್ತು ಹೌದಾನ್‌ಗಳಲ್ಲಿ ಬೇರೆ ವಿಧಗಳಿಂದ ಇವನ್ನು ಗುರುತಿಸು ವಂತಹ ಪ್ರಧಾನವಾದ ಶಿಖೆ ಇದೆ. ಸಿಲ್ಕಗಳು ತಮ್ಮ ಕೂದಲು ಅಥವಾ ದಾರದ ಕುಚ್ಚನ್ನು ಹೋಲುವ ಗರಿಗಳಿಂದ ಕೋಳಿಗಳ ಗುಂಪಿನಲ್ಲಿ ಪ್ರತ್ಯೇಕವಾಗಿ ಎದ್ದುಕಾಣು ತ್ತವೆ. ಈ ತಳಿಯ ಪುಕ್ಕದ ಬಣ್ಣ ಬಿಳಿ ಅಥವಾ ಬೂದು, ಚರ್ಮ ಮತ್ತು ಮುಖದ ಬಣ್ಣ ಊದಾ. ಇದನ್ನು ವೂಲಿ ಅಥವಾ ಡೌನಿ ಕೋಳಿ ಎಂದೂ ಕರೆಯುತ್ತಾರೆ. ಅದರ ಗುಂಗುರು ಗರಿಗಳಿಂದಾಗಿ ಮತ್ತೊಂದು ವಿಲಕ್ಷಣ ತಳಿಗೆ 'ಫ್ರಿಜಲ್' ಎಂದು ಹೆಸರು ಕೊಟ್ಟಿದ್ದಾರೆ. ಗರಿಯ ಟೊಳ್ಳು ಕಾಂಡವು ಶರೀರದ ಮೇಲೆ ಚಪ್ಪಟೆಯಾಗಿರುವ ಬದಲು ಮೇಲಕ್ಕೆ ಬಾಗಿ ಹಕ್ಕಿಯ ತಲೆಯ ಕಡೆಗೆ ತಿರುಗಿರುತ್ತದೆ. ಇದು ಗರಿಗಳನ್ನು

ಕೃತ್ರಿಮವಾಗಿ ಗುಂಗುರುವಮಾಡಿದಂತೆ ಕಾಣುವಂತೆ ಮಾಡುತ್ತದೆ. 'ಫ್ರಿಜಲ್'ನ ಜನಪ್ರಿಯವಾದ ಬಣ್ಣ ತಿಳಿ.

ವರ್ಗಗಳು ಮತ್ತು ತಳಿಗಳು

ಆದರ್ಶವರ್ಗೀಕರಣದ ಪ್ರಕಾರ ಕೋಳಿಗಳನ್ನು ಹನ್ನೊಂದು ವರ್ಗಗಳಾಗಿ ವಿಭಾಗಿಸಿದೆ. ಇವನ್ನು ಮತ್ತೆ 50 ತಳಿಗಳಿಗಾಗಿ ಪುನರ್‌ವಿಭಾಗಿಸಲಾಗಿದೆ (ಕೋಷ್ಟಕ 6). ಪ್ರತಿಯೊಂದು ತಳಿಯನ್ನೂ, ಗರಿ ಬಣ್ಣ ಮತ್ತು ಜುಟ್ಟಿನಲ್ಲಿ ಒಂದಸ್ನೊಂದು ಹೋಲದಿರುವ ಹಲವು ವಿವಿಧತೆಗಳಾಗಿ ವಿಭಾಗಿಸಲಾಗಿದೆ. ಇವುಗಳಲ್ಲಿ ಸುಮಾರು 150 ವಿವಿಧತೆಗಳಿವೆ.

ಕೋಷ್ಟಕ 6

ಕೋಳಿಗಳ ಪ್ರಮಾಣಿತ ವರ್ಗಗಳು, ತಳಿಗಳು ಮತ್ತು ವಿವಿಧತೆಗಳು

ವರ್ಗ	ತಳಿಗಳು	ವಿವಿಧತೆಗಳು
1. ಅಮೆರಿಕ	ರ್ಹೋಡ್ ಐಲೆಂಡ್ ರೆಡ್	ಒಂಟಿ ಜುಟ್ಟು, ಗುಲಾಬಿ ಜುಟ್ಟು
	ರ್ಹೋಡ್ ಐಲೆಂಡ್ ವೈಟ್	—
	ಪ್ಲೈಮೂತ್ ರಾಕ್	ಪಟ್ಟೆಯುತ, ಬಿಳಿ, ಬೂದು, ಬೆಳ್ಳಿ ಗೀಟಿನ, ಪಾರ್ಟ್ರಿಡ್ಜ್, ಕೊಲಂಬಿಯನ್, ನೀಲಿ.
	ನ್ಯೂ ಹ್ಯಾಂಪ್‌ಶೈರ್	—
	ವ್ಯಾಂಡೊಟ್ಟೆ	ಬೆಳ್ಳಿಗೂಡಿದ, ಚಿನ್ನಗೂಡಿದ, ಬಿಳಿ, ಬೂದು, ಕರಿ, ಪಾರ್ಟ್ರಿಡ್ಜ್, ಬೆಳ್ಳಿ ಗೀಟಿನ, ಕೊಲಂಬಿಯನ್
	ಜರ್ಸಿ ಬ್ಲಾಕ್ ಜಯಂಟ್	—
	ದೋಮಿನಿಕ್ಯು	—
	ಜಾವ	ಕರಿ, ಚುಕ್ಕೆಗಳುಳ್ಳ
	ಕಾಂಟಿಕ್ಲೀರ್	ಬಿಳಿ, ಪಾರ್ಟ್ರಿಡ್ಜ್
	ಲಮೋನ	—
2. ಏಷ್ಯ	ಬ್ರಹ್ಮ	ತಿಳಿ, ದಟ್ಟ, ಬೂದು
	ಕೋಚಿನ್	ಬೂದು, ಪಾರ್ಟ್ರಿಡ್ಜ್, ಬಿಳಿ, ಕರಿ
	ಲಾಂಗ್‌ಶಾನ್	ಕರಿ, ಬಿಳಿ
3. ಇಂಗ್ಲಿಷ್	ಸಸೆಕ್ಸ್	ಮಚ್ಚೆಗೂಡಿದ, ಕೆಂಪು, ತಿಳಿ
	ಆಸ್ಟ್ರಲಾರ್ಪ್	—
	ಆರ್ಪಿಂಗ್‌ಟನ್	ಬೂದು, ಕರಿ, ಬಿಳಿ, ನೀಲಿ
	ಡಾರ್ಕಿಂಗ್	ಬಿಳಿ, ಬೆಳ್ಳಿ, ನೆರೆ, ಬಣ್ಣಗೂಡಿದ
	ಕಾರ್ನಿಶ್	ದಟ್ಟ, ಬಿಳಿ,ಬಿಳಿಗೂಡಿದಕೆಂಪು, ಬೂದು

ವರ್ಗ	ತಳಿಗಳು	ವಿವಿಧತೆಗಳು
	ರೆಡ್‌ಕ್ಯಾಪ್	—
		ಒಂಟಿ ಜುಟ್ಟು
		ದಟ್ಟಕಂದು, ತಿಳಿಕಂದು
4. ಮೆಡಿಟರೇನಿಯನ್	ಲೆಗ್‌ಹಾರ್ನ್	ಬಿಳಿ, ಬೂದು, ಕರಿ, ಬೆಳ್ಳಿ, ಕೆಂಪು, ಕಪ್ಪುಬಾಲದಕೆಂಪು ಕೊಲಂಬಿಯನ್
		ಗುಲಾಬಿಜುಟ್ಟು: ಕಂದು, ಬಿಳಿ
		ಒಂಟಿ ಜುಟ್ಟು:
	ಮೈನಾರ್ಕ	ಕಪ್ಪು, ಬಿಳಿ, ಬೂದು
		ಗುಲಾಬಿ ಜುಟ್ಟು: ಕಪ್ಪು, ಬಿಳಿ
	ಅಂಕೋನ	ಒಂಟಿ ಜುಟ್ಟು, ಗುಲಾಬಿ ಜುಟ್ಟು
	ಸ್ಪಾನಿಶ್	—
	ಅಂಡಾಲ್ಯುಸಿಯಾನ್	—
	ಬಟರ್ ಕಪ್	—
		ಬಿಳಿ ಅಂಚುಗಟ್ಟಿದ ಕಪ್ಪು
5. ಪೋಲಿಶ್	ಪೋಲಿಶ್	ಗಡ್ಡಯುಕ್ತ: ಚಿನ್ನ, ಬೆಳ್ಳಿ, ಬಿಳಿ ಮತ್ತು ಬೂದುಬೂಡಿದ;
		ಗಡ್ಡರಹಿತ: ಚಿನ್ನ, ಬೆಳ್ಳಿ, ಬಿಳಿ ಮತ್ತು ಬೂದುಗೂಡಿದ
6. ಹ್ಯಾಂಬರ್ಗ್	ಹ್ಯಾಂಬರ್ಗ್	ಚಿನ್ನದ ಥಳುಕಿನ, ಬೆಳ್ಳಿ ಥಳುಕಿನ, ಚಿನ್ನಗೀಟಿನ, ಬೆಳ್ಳಿಗೀಟಿನ, ಬಿಳಿ, ಕಪ್ಪು
7. ಫ್ರೆಂಚ್	ಹೌದಾನ್	ಚುಕ್ಕೆಗಳ, ಬಿಳಿ
	ಕ್ರಿವೆ ಕೋಯರ್	—
	ಲಾ ಫ್ಲೆಚೆ	—
	ಫೆವೆರೊಲ್ಲೆ	—
8. ಕಾಂಟಿನೆಂಟಲ್	ಕೇಪೈನ್	ಬೆಳ್ಳಿ, ಚಿನ್ನ
	ಲಾಕೆನ್‌ವೆಲ್ಡರ್	—
9. ಕ್ರೀಡೆ	ಕ್ರೀಡೆ	ಕರಿಎದೆಯ ಕೆಂಪು, ಕಂದುಗೆಂಪು ಗೋಲ್ಡನ್ ಡಕ್‌ವಿಂಗ್, ಸಿಲ್ವರ್ ಡಕ್‌ವಿಂಗ್, ಬಿರ್‌ಚೆನ್, ಕೆಂಪು ಪೈಲೆ, ಬಿಳಿ, ಕಪ್ಪು
10. ಓರಿಯೆಂಟಲ್	ಸುಮಾತ್ರ	ಕಪ್ಪು
	ಮಲಯ	ಕರಿ ಎದೆಯ ಕೆಂಪು
	ಕ್ಯೂಬಾಲಯ	ಕರಿ ಎದೆಯ ಕೆಂಪು, ಬಿಳಿ ಕಪ್ಪು
11. ಇತರ	ಸುಲ್ತಾನ್	—
	ಫ್ರಿಜಲ್	—



ಚಿತ್ರ 3: ಭಾರತದ ಕೆಂಪು ಕಾಡುಕೋಳಿಗಳ ಒಂದು ಜತೆ



ಚಿತ್ರ 4: ತಿಳಿ ಸಸೆಕ್ಸ್‌ನ ಒಂದು ಜತೆ

ಕೋಷ್ಟಕ 7

ಕೆಲವು ಪ್ರಾತಿನಿಧಿಕ ಕೋಳಿ ತಳಿಗಳ

ತಳಿ	ಸರಾಸರಿ ತೂಕ (ಪೌಂಡುಗಳಲ್ಲಿ)			
	ಹುಂಜ	ಮರಿ ಹುಂಜ	ಹೇಂಟೆ	ಮರಿಹೇಂಟೆ
ಅಮೆರಿಕ ತಳಿಗಳು				
ಪ್ಲೈಮೂತ್ ರಾಕ್	9½	8	7½	6
ವ್ಯಾಂಡೊಟ್ಟೆ	8½	7½	6½	5½
ರ್‍ಹೋಡ್ ಐಲೆಂಡ್‌ರೆಡ್	8½	7½	6½	5½
ರ್‍ಹೋಡ್ ಐಲೆಂಡ್ ವೈಟ್	8½	7½	6½	5½
ಜೆರ್ಸಿ ಬ್ಲಾಕ್ ಜಯಂಟ್	13	11	10	8
ನ್ಯೂ ಹ್ಯಾಂಪ್‌ಶೈರ್	8½	7½	6½	5½
ಏಷ್ಯ ತಳಿಗಳು				
ಬ್ರಹ್ಮ (ತಿಳಿ)	12	10	9½	8
ಕೋಚಿನ್	11	9	8½	7
ಲಾಂಗ್‌ಶಾನ್ (ಕಪ್ಪು)	9½	8	7½	6½
ಇಂಗ್ಲಿಷ್ ತಳಿಗಳು				
ಆಸ್ಟ್ರಲಾರ್ಪ್	8½	7½	6½	5½
ಕಾರ್ನಿಶ್ (ದಟ್ಟ)	10½	8½	8	6½
ಡಾರ್ಕಿಂಗ್ (ಬೆಳ್ಳಿ-ನೆರೆ)	9	8	7	6
ಆರ್ಪಿಂಗ್‌ಟನ್ (ಬೂದು ಮತ್ತು ಬಿಳಿ)	10	8½	8	7
ಸಸೆಕ್ಸ್ (ತಿಳಿ)	9	7½	7	6
ಮೆಡಿಟರೇನಿಯನ್ ತಳಿಗಳು				
ಲೆಗ್‌ಹಾರ್ನ್	6	5	4½	4
ಮೈನಾರ್ಕ್	9	7½	7½	6½
ಅಂಕೋನ	6	5	4½	4
ಅಂಡಾಲ್ಯೂಸಿಯನ್ (ನೀಲಿ)	7	6	5½	4½

ಮುಖ್ಯ ಗುಣ ಲಕ್ಷಣಗಳು

ಜುಟ್ಟಿನ ರೀತಿ	ಕಿವಿಹಾಲೆಯ ಬಣ್ಣ	ಚರ್ಮದ ಬಣ್ಣ	ಕಾಲುಗಳ ಬಣ್ಣ	ಕಾಲುಗಳಲ್ಲಿ ಪುಕ್ಕ	ಮೊಟ್ಟೆಯ ಬಣ್ಣ
ಒಂಟಿ	ಕೆಂಪು	ಹಳದಿ	ಹಳದಿ	ಇಲ್ಲ	ಕಂದು
ಗುಲಾಬಿ	ಕೆಂಪು	ಹಳದಿ	ಹಳದಿ	ಇಲ್ಲ	ಕಂದು
ಒಂಟಿ ಮತ್ತು ಗುಲಾಬಿ	ಕೆಂಪು	ಹಳದಿ	ಹಳದಿ	ಇಲ್ಲ	ಕಂದು
ಗುಲಾಬಿ	ಕೆಂಪು	ಹಳದಿ	ಹಳದಿ	ಇಲ್ಲ	ಕಂದು
ಒಂಟಿ	ಕೆಂಪು	ಹಳದಿ	ಕಪ್ಪು	ಇಲ್ಲ	ಕಂದು
ಒಂಟಿ	ಕೆಂಪು	ಹಳದಿ	ಹಳದಿ	ಇಲ್ಲ	ಕಂದು
ಬಟಾಣಿ	ಕೆಂಪು	ಹಳದಿ	ಹಳದಿ	ಇದೆ	ಕಂದು
ಒಂಟಿ	ಕೆಂಪು	ಹಳದಿ	ಹಳದಿ	ಇದೆ	ಕಂದು
ಒಂಟಿ	ಕೆಂಪು	ಬಿಳಿ	ನೀಲಿಮಿಶ್ರ ಕಪ್ಪು	ಇದೆ	ಕಂದು
ಬಟಾಣಿ	ಕೆಂಪು	ಬಿಳಿ	ದಟ್ಟ ಸ್ಲೇಟ್	ಇಲ್ಲ	ಕಂದು
ಒಂಟಿ	ಕೆಂಪು	ಹಳದಿ	ಹಳದಿ	ಇಲ್ಲ	ಕಂದು
ಒಂಟಿ	ಕೆಂಪು	ಬಿಳಿ	ಬಿಳಿ	ಇಲ್ಲ	ಕಂದು
ಒಂಟಿ	ಕೆಂಪು	ಬಿಳಿ	ಬಿಳಿ	ಇಲ್ಲ	ಕಂದು
ಒಂಟಿ	ಕೆಂಪು	ಬಿಳಿ	ಬಿಳಿ	ಇಲ್ಲ	ಕಂದು
ಒಂಟಿ ಮತ್ತು ಗುಲಾಬಿ	ಬಿಳಿ	ಹಳದಿ	ಹಳದಿ	ಇಲ್ಲ	ಬಿಳಿ
ಒಂಟಿ ಮತ್ತು ಗುಲಾಬಿ	ಬಿಳಿ	ಬಿಳಿ	ದಟ್ಟ ಸ್ಲೇಟ್	ಇಲ್ಲ	ಬಿಳಿ
ಒಂಟಿ	ಬಿಳಿ	ಹಳದಿ	ಹಳದಿ	ಇಲ್ಲ	ಬಿಳಿ
ಒಂಟಿ	ಬಿಳಿ	ಬಿಳಿ	ಸ್ಲೇಟ್ ಮಿಶ್ರಿತ ನೀಲಿ	ಇಲ್ಲ	ಬಿಳಿ

'ಅಮೆರಿಕನ್', 'ಏಷ್ಯಾಟಿಕ್', 'ಇಂಗ್ಲಿಷ್' ಮತ್ತು 'ಮೆಡಿಟರೇನಿಯನ್' ಮುಖ್ಯವಾದ ಕೋಳಿ ವರ್ಗಗಳು. 'ಏಷ್ಯಾಟಿಕ್' ವಿನಹ ಉಳಿದೆಲ್ಲ ವರ್ಗಗಳೂ ಹೆಚ್ಚಿನ ವಾಣಿಜ್ಯ



ಚಿತ್ರ 5: ಅಸೀಲ್ (ಎರಡು ಹೇಂಟೆಗಳೊಂದಿಗೆ ಒಂದು ಹುಂಜ)



ಚಿತ್ರ 6: ಡೇಂಕಿಕೋಳಿಗಳ ಒಂದು ಜತೆ (ಡೇಂಕಿ)

ಪ್ರಾಮುಖ್ಯತೆಯನ್ನು ಹೊಂದಿವೆ. ಈ ವರ್ಗಗಳ ಪ್ರತಿನಿಧಿ ತಳಿಗಳ ಕೋಳಿಗಳ ಪ್ರಮುಖ ರೂಪಗಳನ್ನು ಕೋಷ್ಟಕ 7ರಲ್ಲಿ ಕೊಡಲಾಗಿದೆ.

ಅಮೆರಿಕ ವರ್ಗ

ಈ ವರ್ಗದಲ್ಲಿ ಹನ್ನೊಂದು ತಳಿಗಳಿವೆ, ಇವುಗಳಲ್ಲಿ ಅತಿ ಮುಖ್ಯವಾದವು 'ಪ್ಲೈಮೂತ್ ರಾಕ್' 'ವ್ಯಾಂಡೊಟ್ಟೆ' 'ರ್ಹೋಡ್ ಐಲೆಂಡ್ ರೆಡ್' ಮತ್ತು 'ನ್ಯೂ ಹ್ಯಾಂಪ್‌ಶೈರ್', 'ಮೆಡಿಟರೇನಿಯನ್'ನಿಂದ ತಂದ ಚುರುಕಾದ ಸಣ್ಣಕೋಳಿ ಮತ್ತು ಏಷ್ಯದ ದೊಡ್ಡ ನಿಧಾನ ಪ್ರಕೃತಿಯ ಕೋಳಿಗಳ ಸಂಕರದಿಂದ ಅಮೆರಿಕದಲ್ಲಿ ಈ ಎಲ್ಲ ತಳಿಗಳನ್ನು ಅಭಿವೃದ್ಧಿಪಡಿಸಲಾಯಿತೆಂದು ಹೇಳಲ್ಪಟ್ಟಿದೆ.



ಚಿತ್ರ 7: ದೇಶಿಕೋಳಿಗಳ ಒಂದು ಜತೆ (ತೆಲ್ಲಚೆರಿ)

ಅಮೆರಿಕ ವರ್ಗದ ತಳಿಗಳು ಕೆಳಕಂಡ ಸಾಮಾನ್ಯ ಗುಣಗಳನ್ನು ಹೊಂದಿರುತ್ತವೆ. ಗಾತ್ರದಲ್ಲಿ ಅವು ಮೆಡಿಟರೇನಿಯನ್ ಮತ್ತು ಏಷ್ಯದ ತಳಿಗಳಿಗೆ ಮಧ್ಯಮವಾಗಿರುತ್ತವೆ. ಪೂರ್ವದ ಹೆಚ್ಚು ತೂಕದ ತಳಿಗಳಿಗಿಂತ ಬೇಗ ವಯಸ್ಸಿಗೆ ಬರುತ್ತವೆ. ಆದರೆ ಮೆಡಿಟರೇನಿಯನ್ನಿನ ಹಗುರ ತಳಿಗಳಷ್ಟು ಬೇಗ ಬರುವುದಿಲ್ಲ. ಇವು ಚೆನ್ನಾಗಿ ಆಹಾರ ತಿನ್ನುತ್ತವೆ ಮತ್ತು ಒಳ್ಳೆಯ ಕಾವುಕೊಡುವ ಕೋಳಿಗಳಾಗಿವೆ. ಅಲ್ಲದೆ, ಸುಲಭವಾಗಿ ಕೊಬ್ಬುತ್ತವೆ. ಇವು 'ಸ್ವಚ್ಛವಾದ ಕಾಲುಳ್ಳವು': ಅಂದರೆ ಕಾಲುಗಳು ಗರಿಗಳಿಂದ ಮುಕ್ತವಾಗಿವೆ. ಹಳದಿ ಚರ್ಮ ಮತ್ತು ಕರಿಯ ಕಾಲುಗಳನ್ನು ಹೊಂದಿರುವ ಜಾವ ಮತ್ತು ಜೆರ್ಸಿ ಬ್ಲಾಕ್ ಜೆಯಂಟಸ್‌ಗಳನ್ನು ಬಿಟ್ಟು ಉಳಿದೆಲ್ಲವೂ ಹಳದಿ ಕಾಲು ಮತ್ತು ಚರ್ಮವನ್ನು ಹೊಂದಿರುತ್ತವೆ. ಎಲ್ಲವೂ ಕೆಂಪು ಕಿವಿಹಾಲೆಗಳನ್ನು ಪಡೆದಿವೆ. ಇವು ಕಂದು ಚಿಪ್ಪಿನ ಮೊಟ್ಟೆಗಳನ್ನಿಡುತ್ತವೆ ಮತ್ತು ಇವುಗಳನ್ನು ಕಾವಿಗೆ ಕುಳಿತುಕೊಳ್ಳುವ ಇಚ್ಛೆಯುಳ್ಳವೆಂದು ವರ್ಗೀಕರಿಸಲಾಗಿದೆ.

ಅಮೆರಿಕದ ತಳಿಗಳೆಲ್ಲವನ್ನೂ ಸಾಮಾನ್ಯ ಅಥವಾ ಉಭಯೋದ್ದೇಶ ತಳಿಗಳೆಂದು ವರ್ಗೀಕರಿಸಬಹುದು ಮತ್ತು ಮೊಟ್ಟೆ ಹಾಗೂ ಮಾಂಸ ಎರಡರ ದೃಷ್ಟಿಯಿಂದಲೂ ಬೆಲೆ ಬಾಳುವಂತಹವು. ಸುಟ್ಟ ಮಾಂಸಕ್ಕೆ ಮೊಟ್ಟೆ ಮತ್ತು ಮಾಂಸ ನಮೂನೆಗಿಂತ ಮರಿ ಹುಂಜ ಹೆಚ್ಚಿನ ಬೆಲೆ ಪಡೆಯುತ್ತದೆ. ಇವು ಅತ್ಯುತ್ತಮವಾದ ಬೀಜ ತೆಗೆದು ಬಲಿಸಿದ ಹುಂಜವಾಗುತ್ತವೆ. ಈ ಎಲ್ಲ ಕಾರಣಗಳಿಂದಾಗಿ ಸಾಮಾನ್ಯವಾಗಿ ಅಮೆರಿಕದ ತಳಿಗಳು ಉಳಿದ ತಳಿಗಳಿಗಿಂತ ಹೆಚ್ಚು ಜನಪ್ರಿಯವಾಗಿವೆ ಮತ್ತು ಇವು ಸರಾಸರಿ ರೈತ ಅಥವಾ ಕೋಳಿ ಸಾಕಾಣಿಕನ ಅವಶ್ಯಕತೆಗಳನ್ನು ಬಹು ಚೆನ್ನಾಗಿ ಹೊಂದುತ್ತವೆ.

ಪ್ಲೈಮೂತ್ ರಾಕ್: ಮುಖ್ಯವಾಗಿ ಅದರ ಒಳ್ಳೆಯ ಗಾತ್ರ, ಅತ್ಯುತ್ತಮವಾದ ಮಾಂಸ ಮತ್ತು ಒಳ್ಳೆಯ ಮೊಟ್ಟೆ ಉತ್ಪಾದನಾ ಸಾಮರ್ಥ್ಯದಿಂದಾಗಿ ಪ್ಲೈಮೂತ್ ರಾಕ್ ಅಮೆರಿಕದಲ್ಲೇ ಅತ್ಯಂತ ಜನಪ್ರಿಯವಾದ ತಳಿಗಳಲ್ಲಿ ಒಂದು. ಕೋಳಿಗಳು ಸ್ವಲ್ಪಮಟ್ಟಿಗೆ ಉದ್ದವಾಗಿಯೂ ಅಗಲವಾಗಿಯೂ ಇರುತ್ತವೆ. ಪ್ರಧಾನವಾದ ಎದೆ ಮತ್ತು ಒಳ್ಳೆಯ ಆಳವಾದ ಶರೀರವನ್ನು ಹೊಂದಿರುತ್ತವೆ. ಈ ತಳಿ ಒಂಟಿ ಜುಟ್ಟನ್ನು ಹೊಂದಿರುತ್ತದೆ. ಆದರ್ಶತೂಕ ಹುಂಜ 9½, ಹೇಂಟೆ 7½, ಮರಿಹುಂಜ 8, ಮರಿ ಹೇಂಟೆ 6 ಪೌಂಡುಗಳು.

ಪಟ್ಟೆಯುಕ್ತ ಪ್ಲೈಮೂತ್‌ರಾಕ್‌ನ ಬಣ್ಣ ಕಂದುಯುಕ್ತ ಬಿಳಿ. ಪ್ರತಿ ಗರಿಯೂ ಸಮ ಅಗಲದ, ನೇರವಾದ ಕೆಳಗೆ ಚರ್ಮದವರೆಗೂ ಮುಂದುವರಿಯುವ ಕಪ್ಪು ಪಟ್ಟೆಗಳನ್ನು ಹೊಂದಿವೆ. ಗಂಡಿನಲ್ಲಿ ಕಪ್ಪು ಪಟ್ಟೆ ಕೊರಳ ಗರಿ ಮತ್ತು ಬೆನ್ನುಗಳ ಮೇಲೆ ಉಳಿದ ಭಾಗಗಳಿಗಿಂತ ಕಿರಿದಾಗಿರುತ್ತವೆ. ಈ ವಿವಿಧತೆಯ ಎಲ್ಲ ವಿಭೇದಗಳಲ್ಲೂ ಕೆಲವು ಕೋಳಿಗಳಲ್ಲಿ ಅಚ್ಚ ಕಪ್ಪು ಅಥವಾ ತಿಳಿಕಪ್ಪಿನ ಗರಿಗಳು ಕಂಡುಬರುತ್ತವೆ. ಆದರೆ, ಅವುಗಳ ಇರುವಿಕೆ ಆ ಕೋಳಿಯ ಅಶುದ್ಧತೆಯ ಕುರುಹು ಎನ್ನುವಂತಿಲ್ಲ. ಸಾಮಾನ್ಯವಾಗಿ ಹೇಂಟೆಯಲ್ಲಿ ಕಾಲುಗಳ ಮೇಲೆ ಕಪ್ಪು ಮಚ್ಚೆಗಳನ್ನು ಕಾಣಬಹುದು. ಆದರೆ ಇದು ಅಶುದ್ಧತೆಯನ್ನು ಸೂಚಿಸುವುದಿಲ್ಲ.

ಈ ಕೋಳಿಗಳ ಅನುಕ್ರಮಿಕ ಸಾಕಾಣಿಕೆಯಿಂದ ಹುಂಜ ಹೇಂಟೆಗಿಂತ ಬಣ್ಣದಲ್ಲಿ ತಿಳಿಯಾಗುತ್ತದೆ. ಹುಂಜಗಳಲ್ಲಿ ಕಪ್ಪು ಮತ್ತು ಬಿಳಿಪಟ್ಟೆಗಳು ಸಮಾನ ಅಗಲವಾಗಿರಬೇಕು. ಆದರೆ ಹೇಂಟೆಯಲ್ಲಿ ಕಪ್ಪು ಬಿಳಿಯದರ ಒಂದುವರೆ ಪಟ್ಟು ದೊಡ್ಡದಾಗಿರುತ್ತದೆ. ಅತ್ಯಂತ ಕಿರಿದಾದ ಪಟ್ಟೆಗಳಿರುವ ಕೋಳಿಗಳಿಂದ ತಳಿ ಎಬ್ಬಿಸಿದಾಗ ಸಾಮಾನ್ಯವಾಗಿ ನಿಧಾನವಾದ ಬೆಳವಣಿಗೆ, ಎಳೆ ವಯಸ್ಸಿನಲ್ಲಿ ಕಡಮೆ ಪುಕ್ಕ ಮತ್ತು ಬೆಳೆದ ಕೋಳಿಗಳಲ್ಲಿ ರೆಕ್ಕೆ ಮತ್ತು ಬಾಲಗಳಲ್ಲಿ ದೋಷ ಕಂಡುಬರುತ್ತದೆ. ಒಳ್ಳೆಯ ಅಗಲವಾದ ಪಟ್ಟೆಗಳಿರುವ ಹುಂಜ ಹೇಂಟೆಗಳನ್ನು ಜೊತೆಗೂಡಿಸುವುದು ಕೋಳಿಯ ಗುಣವನ್ನು ಹೆಚ್ಚಿಸುತ್ತದೆ. ರ್‍ಹೋಡ್ ಐಲೆಂಡ್ ರೆಡ್‌ನಂತೆಯೇ ಪಟ್ಟೆಯುಕ್ತ ಪ್ಲೈಮೂತ್ ರಾಕ್ ಹುಂಜಗಳು ಹಳ್ಳಿಯ ಸಾಮಾನ್ಯ ಅಥವಾ ದೇಶಿ ಕೋಳಿಗಳನ್ನು ಮೇಲ್ಪಡಿಸಲು ಉತ್ತಮವಾದವು.

ಪ್ಲೈಮೂತ್‌ರಾಕ್ ತಳಿಯ ಇತರ ವಿವಿಧತೆಗಳು, ಬಿಳಿ, ಮಾಸಲು ಹಳದಿ, ಸಿಲ್ವರ್ ಪೆನ್ಸಿಲ್‌ಡ್, ಪಾರ್ಟ್ರಿಡ್ಜ್, ಕೋಲಂಬಿಯನ್ ಮತ್ತು ನೀಲಿ. ಇತ್ತೀಚಿನ ವರ್ಷಗಳಲ್ಲಿ ಬಿಳಿಯ ವಿವಿಧತೆ ವಿಶೇಷವಾಗಿ ಅಮೆರಿಕದಲ್ಲಿ ಜನಪ್ರಿಯತೆಯನ್ನು ಗಳಿಸುತ್ತಿದೆ ಮತ್ತು ಇದರಿಂದ ಮೊಟ್ಟೆ ಹಾಗೂ ಮಾಂಸ ಉತ್ಪಾದನೆಯ ಒಳ್ಳೆಯ ವಿಭೇದಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇತ್ತೀಚೆಗೆ ಈ ತಳಿಯನ್ನು ಭಾರತದಲ್ಲಿಯೂ ಪ್ರಾರಂಭಿಸಿದ್ದಾರೆ ಮತ್ತು ಪ್ರತಿಫಲ ಆಶಾಜನಕವಾಗಿ ಕಂಡುಬರುತ್ತಿದೆ.

ವ್ಯಾಂಡೊಟ್ಟೆ: ವ್ಯಾಂಡೊಟ್ಟೆ ವಿಶಿಷ್ಟ ಬೆಡಗಿನ ಬಾಗುಗಳಿರುವ ತಳಿ ಮತ್ತು ತುಲನಾತ್ಮಕವಾಗಿ ಗುಂಪಾದ ನೆಲಕ್ಕೆ ಹತ್ತಿರವಾಗಿರುವ ಶರೀರವಿದೆ. ಇದು ಸ್ವಲ್ಪ ಮಟ್ಟಿಗೆ ಸಡಿಲವಾದ ಗರಿಗಳನ್ನೂ, ಮೋಟುಬೆನ್ನು, ಗುಲಾಬಿ ಜುಟ್ಟು ಮತ್ತು ಹಳದಿ ಚರ್ಮವನ್ನು ಹೊಂದಿದೆ. ಪ್ಲೈಮೂತ್ ರಾಕ್‌ನಂತೆಯೇ ಒಳ್ಳೆಯ ಸಾಮಾನ್ಯ ಉದ್ದೇಶದ ತಳಿ, ಮಾಂಸ ಉತ್ಪಾದನೆಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ; ಮೊಟ್ಟೆ ಉತ್ಪಾದನೆಗೆ ಸಾಕಿದಾಗ ಚೆನ್ನಾಗಿ ಮೊಟ್ಟೆ ಇಡುತ್ತದೆ. ಇದರ ಆದರ್ಶ ತೂಕ ಹುಂಜ 8½, ಹೇಂಟೆ 6½, ಮರಿಹುಂಜ 7½, ಮರಿ ಹೇಂಟೆ 5½ ಪೌಂಡುಗಳು.

ವ್ಯಾಂಡೊಟ್ಟೆ ಬಿಳಿ, ಮಾಸಲುಹಳದಿ, ಸಿಲ್ವರ್ ಲೇಸಡ್, ಗೋಲ್ಡನ್ ಲೇಸಡ್, ಪಾರ್ಟ್ರಿಡ್ಜ್, ಸಿಲ್ವರ್ ಪೆನ್ಸಿಲ್‌ಡ್, ಕೋಲಂಬಿಯನ್ ಮತ್ತು ಕಪ್ಪು, ಈ ವಿಶಿಷ್ಟತೆಗಳನ್ನು ಹೊಂದಿದೆ.

ರ್ಹೋಡ್ ಐಲೆಂಡ್ ರೆಡ್: ರ್ಹೋಡ್ ಐಲೆಂಡ್ ರೆಡ್ ಕೋಳಿಯು ಸ್ವಲ್ಪ ಮಟ್ಟಿಗೆ ಉದ್ದವಾದ ಆಯಾಕಾರದ ಶರೀರವನ್ನು ಹೊಂದಿದೆ. ಶರೀರವು ಅಗಲವಾಗಿಯೂ ಆಳವಾಗಿಯೂ ಇದೆ. ಬೆನ್ನು ಚಪ್ಪಟೆಯಾಗಿದ್ದು ಎದೆ ಮುಂಚಾಚಿಕೊಂಡಿದೆ. ಈ ಗುಣವು ಇದನ್ನು ಒಳ್ಳೆಯ ಮಾಂಸ ಉತ್ಪಾದಕ ಕೋಳಿಯನ್ನಾಗಿ ಮಾಡುತ್ತದೆ. ಸರಿಯಾದ ಸಾಕುವಿಕೆಯಿಂದ ಈ ತಳಿಯ ಕೋಳಿಗಳನ್ನು ಒಳ್ಳೆಯ, ದೊಡ್ಡ, ಕಂದುಬಣ್ಣದ ಮೊಟ್ಟೆಗಳನ್ನು ಕೊಡುವಂತೆ ಸಹ ಅಭಿವೃದ್ಧಿಪಡಿಸಿದ್ದಾರೆ. ವಾಸ್ತವಿಕವಾಗಿ ಅತ್ಯುತ್ತಮ ಸರ್ವೋಪಯೋಗಿ ತಳಿಗಳಲ್ಲಿ ಇದೂ ಒಂದು. ಈ ದೇಶದಲ್ಲಿ ತಂದಿರುವ, ಪರದೇಶೀಯ ತಳಿಗಳಲ್ಲಿ ಇದು ಅತ್ಯಂತ ಜನಪ್ರಿಯವಾದುದು.

ರ್ಹೋಡ್ ಐಲೆಂಡ್ ರೆಡ್ ಪುಕ್ಕದ ಬಣ್ಣ ದಟ್ಟ ಕೆಂಪು ಅಥವಾ ಕಂದು ಮಿಶ್ರ ಕೆಂಪು. ಇದು ಶರೀರದ ಎಲ್ಲ ಭಾಗಗಳ ಮೇಲೆ ಸಮಾನವಾಗಿ ಹಂಚಲ್ಪಟ್ಟಿದೆ ಮತ್ತು ಒಳ್ಳೆಯ ಹೊಳಪಿನಿಂದ ಕೂಡಿದೆ. ರೆಕ್ಕೆ ಹರಡಿದಾಗ ಮೊದಲನೇ ಮತ್ತು ಎರಡನೆಯ ದೆರಡರಲ್ಲೂ ಕಪ್ಪು ಕಂಡುಬರುತ್ತದೆ. ಬಾಲ ಕಾಪು ಕುಡು ಗರಿಗಳು ಮತ್ತು ಮುಖ್ಯ ಬಾಲದ ಗರಿಗಳು ಕೂಡ ಕಪ್ಪಗಿರುತ್ತವೆ. ಹೇಂಟೆಯ ಕೆಳಕೊರಳಿನ ಪುಕ್ಕಗಳ ಮೂಲದಲ್ಲಿ ಸ್ವಲ್ಪ ಕಪ್ಪುಮಚ್ಚೆಯಿದೆ. ಸಾಮಾನ್ಯವಾಗಿ ಈ ತಳಿಯ ಬಣ್ಣ ನಿಸ್ಸಂಶಯವಾಗಿ ಕಂದುಮಿಶ್ರಿತ ಕೆಂಪು; ಆದರೆ, ಮಾಸಲುಹಳದಿ, ಬಿಳಿ ಮತ್ತು ಕಂದುಬಣ್ಣಗಳನ್ನು ಕಾಣಬಹುದು. ದಟ್ಟಕಂದು ಬಣ್ಣವು ಉಜ್ವಲಕೆಂಪು ಬಣ್ಣದ ಸ್ಥಾನಪಲ್ಲಟನೆ ಹಾದಿ

ಯಲ್ಲಿರುವುದರಿಂದ ಈಗ ಅಚ್ಚದಟ್ಟ ಕೆಂಪು ಛಾಯೆಯನ್ನು ಕಾಣುವುದು ದುಸ್ಸಾಧ್ಯ. ಗರಿಗಳ ವರ್ಣ ದಟ್ಟವಾಗುವ ಪ್ರವೃತ್ತಿ ಈ ತಳಿಯ ಒಂದು ಸಾಮಾನ್ಯ ಗುಣ. ಈ ರೀತಿಯ ಕೋಳಿಗಳು ಪ್ರದರ್ಶನೋದ್ದೇಶಕ್ಕೆ ಒಳ್ಳೆಯದಲ್ಲದಿದ್ದರೂ ಸಾಕಾಣಿಕೆಗೆ ಬಹಳ ಒಳ್ಳೆಯವು.

ರ್ಹೋಡ್ ಐಲೆಂಡ್ ರೆಡ್‌ನಲ್ಲಿ ಎರಡು ವಿವಿಧತೆಗಳಿವೆ. ಅವುಗಳೆಂದರೆ ಒಂಟಿ ಜುಟ್ಟು ಮತ್ತು ಗುಲಾಬಿ ಜುಟ್ಟು. ಈ ಎರಡು ವಿವಿಧತೆಗಳು ಉಳಿದೆಲ್ಲ ರೀತಿ ಯಲ್ಲೂ ಒಂದೇ ರೀತಿಯಿವೆ. ಒಂಟಿ ಜುಟ್ಟಿನ ವಿವಿಧತೆ ಈ ಎರಡರಲ್ಲಿ ಹೆಚ್ಚು ಜನ ಪ್ರಿಯವಾದುದು. ಹಾಲೆಗಳು ಕೆಂಪಗಿವೆ ಹಾಗೆಯೇ ಕಣ್ಣುಗಳೂ ಸಹ. ಕಾಲು ಮತ್ತು ಪಾದಗಳ ಬಣ್ಣ ತೀವ್ರ ಹಳದಿ ಅಥವಾ ಕೆಂಪುಮಿಶ್ರಿತ ಕೊಂಬಿನ ಬಣ್ಣ, ಕೊಕ್ಕು ಕೆಂಪುಮಿಶ್ರಿತ ಕೊಂಬಿನ ಬಣ್ಣ.

ಎಲ್ಲ ತಳಿಗಳ ಪೈಕಿ ರ್ಹೋಡ್ ಐಲೆಂಡ್ ರೆಡ್ ಒಂದು ಅಂಗೀಕೃತ ಗಟ್ಟಿ ತಳಿ. ಮರಿಗಳು ಬೇಗನೆ ಬೆಳೆಯುತ್ತವೆ ಮತ್ತು ಸಾಕಲು ಸುಲಭ ಮತ್ತು ಯಾವ ಹವಾ ಮಾನವೂ ಅವಕ್ಕೆ ಹೆಚ್ಚಿನ ಹಾನಿಯುಂಟುಮಾಡುವಂತೆನ್ನಿಸುವುದಿಲ್ಲ. ಅವು ಛಳಿ ಮತ್ತು ತೇವಾಂಶವನ್ನು ಚೆನ್ನಾಗಿ ಸಹಿಸುತ್ತವೆ. ಆದರಿಂದ ತೇವದಿಂದ ಕೂಡಿದ ಮಲೆನಾಡಿನ ಪ್ರದೇಶಗಳಿಗೆ ಬಹಳ ಸೂಕ್ತ. ಆದರ್ಶತೂಕ, ಹುಂಜ 8½, ಹೇಂಟೆ 6½, ಮರಿಹುಂಜ 7½, ಮರಿಹೇಂಟೆ 5½ ಪೌಂಡುಗಳು.

ರ್ಹೋಡ್ ಐಲೆಂಡ್ ವೈಟ್ ಎನ್ನುವ ಮತ್ತೊಂದು ವಿವಿಧತೆಯೂ ಕಂಡು ಬಂದಿದೆ. ಆದರೆ ಇದು ಹೆಚ್ಚು ಜನಪ್ರಿಯವಾಗಿಲ್ಲ.

ನ್ಯೂಹ್ಯಾಂಪ್‌ಶೈರ್: ನ್ಯೂ ಹ್ಯಾಂಪ್‌ಶೈರ್ ಎಂಬುದು ರ್ಹೋಡ್ ಐಲೆಂಡ್ ರೆಡ್ ವಂಶದಿಂದ ಅಭಿವೃದ್ಧಿಪಡಿಸಿದ ಅಮೆರಿಕ ವರ್ಗದ ಒಂದು ಇತ್ತೀಚಿನ ತಳಿ. ಶರೀರದ ಆಕಾರ ರ್ಹೋಡ್ ಐಲೆಂಡ್ ರೆಡ್‌ನಷ್ಟು ಆಯಾಕಾರವಾಗಿಲ್ಲ. ಇದರ ಅಸಾಮಾನ್ಯ ಗಟ್ಟಿತನದಿಂದಾಗಿ ಇದು ಇತ್ತೀಚಿನ ಕೆಲವು ವರ್ಷಗಳಲ್ಲಿ ಅತಿ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿದೆ. ಗರಿಯ ವರ್ಣ ದಟ್ಟಕೆಂಗೆಂದು. ಆದರೆ ಇದು ರ್ಹೋಡ್ ಐಲೆಂಡ್ ರೆಡ್‌ನಷ್ಟು ಚೆನ್ನಾಗಿ ನೆಲೆಯೂರಿಲ್ಲ. ಇದು ಒಂಟಿ ಜುಟ್ಟನ್ನು ಹೊಂದಿದೆ. ಈ ತಳಿ ದೊಡ್ಡ ಕಂದುಬಣ್ಣದ ಮೊಟ್ಟೆಗಳ ಒಳ್ಳೆಯ ಉತ್ಪಾದಕ. ಆದರ್ಶತೂಕ ಹುಂಜ 8½, ಹೇಂಟೆ 6, ಮರಿಹುಂಜ 7½, ಮರಿಹೇಂಟೆ 5½ ಪೌಂಡುಗಳು.

ಏಷ್ಯ ವರ್ಗ

ಈ ವರ್ಗದ ಮುಖ್ಯ ತಳಿಗಳೆಂದರೆ ಬ್ರಹ್ಮ, ಕೋಚಿನ್ ಮತ್ತು ಲಾಂಗ್‌ಶಾನ್ ಗಳು. ಅವುಗಳ ಮಾಂಸಕ್ಕೆ ವಿದೇಶಗಳಲ್ಲಿ ಅಧಿಕ ಬೆಲೆ ಇದೆ. ಮೆಡಿಟರೇನಿಯನ್ನಿನ ವರ್ಗದವುಗಳ ಜೊತೆಗೆ ಇವು ಹೊಸತಳಿಗಳು ಮತ್ತು ವಿವಿಧತೆಗಳ ಅಭಿವೃದ್ಧಿಗೆ ಮೂಲ ದ್ರವ್ಯವಾಗುತ್ತವೆ.

ಈ ವರ್ಗದ ಕೋಳಿಗಳು ನಿಧಾನವಾಗಿ ವಯಸ್ಸಿಗೆ ಬರುತ್ತವೆ. ಚೆನ್ನಾಗಿ ಆಹಾರ ತಿನ್ನುವುದಿಲ್ಲ. ಇವು ದೃಢವಾದ ಕಾವುಕೊಡುವ ಕೋಳಿಗಳಾಗಿವೆ. ಸಾಮಾನ್ಯವಾಗಿ ಇವು ನಾಜೂಕು ಕೋಳಿಗಳಲ್ಲ. ಸೋಮಾರಿ; ರಚನಾಕ್ರಮದಲ್ಲಿ ಜಡತೆಯನ್ನು ತೋರುತ್ತವೆ. ಇವುಗಳಿಗೆ ಪುಕ್ಕ ಯುಕ್ತವಾದ ಕಾಲುಗಳಿರುತ್ತವೆ. ಇವು ಕಂದುಬಣ್ಣದ ಮೊಟ್ಟೆಗಳನ್ನಿಡುತ್ತವೆ.

ಬ್ರಹ್ಮ: ಪುರಾತನ ಬ್ರಹ್ಮ ಭಾರತದ ಬ್ರಹ್ಮಪುತ್ರ ಪ್ರದೇಶದಿಂದ ಬಂದಿತೆಂದು ಹೇಳಲಾಗುತ್ತದೆ. ಇಲ್ಲಿ ಸಾಮಾನ್ಯವಾಗಿ ಬೂದು ಚಿತ್ತಗಾಂಗ್ ಎನ್ನುವ ಮೂಲ ರೀತಿಯ ಕೋಳಿಗಳನ್ನು ಇಂದಿಗೂ ಕಾಣಬಹುದು. ಬ್ರಹ್ಮಕೋಳಿ ನೋಟಕ್ಕೆ ಬಹು ಗಾತ್ರದ್ದು. ಇದು ಅತಿದೊಡ್ಡ ಸಾಕುಕೋಳಿಗಳಲ್ಲಿ ಒಂದಾಗಿದೆ. ಇದರ ಗರಿ ವರ್ಣ, ತಿಳಿ, ದಟ್ಟ ಅಥವಾ ಮಾಸಲು ಹಳದಿ. ಇದರ ಶರೀರ ಅಗಲ ಹಾಗೂ ಆಳ. ಶರೀರ ಸಡಿಲವಾದರೂ ಚೆನ್ನಾಗಿ ಗರಿಗಳಿರುತ್ತವೆ. ಇದು ಕೋಳಿಗೆ ಮರದ ಅಚ್ಚಿನ ರೂಪವನ್ನು ಕೊಡುತ್ತದೆ. ಬಟಾಣಿ ಜುಟ್ಟು, ಕಾಲು ಮತ್ತು ಪಾದಗಳ ಮೇಲೆ ಪುಕ್ಕ, ಇವು ಈ ತಳಿಯ ವಿಶೇಷ ಗುಣಗಳು. ಹಗುರ ಬ್ರಹ್ಮದ ಆದರ್ಶ ತೂಕ ಹುಂಜ 12, ಹೇಂಟೆ 9½, ಮರಿಹುಂಜ 10, ಮರಿಹೇಂಟೆ 8 ಮತ್ತು ದಟ್ಟ ಬ್ರಹ್ಮ ಹುಂಜ 11, ಹೇಂಟೆ 8½, ಮರಿಹುಂಜ 9, ಮರಿಹೇಂಟೆ 7 ಪೌಂಡುಗಳು.

ಕೋಚಿನ್: ಕೋಚಿನ್ ಮೂಲತಹ ಚೀನದ ಶಂಘೈ ಜಿಲ್ಲೆಯಿಂದ ಬಂದಿದೆ. ಅಂತೆಯೇ ಇದು 'ಶಂಘೈ ಕೋಳಿ' ಎಂದೂ ಪರಿಚಿತವಾಗಿದೆ. ಇದರ ಪ್ರಮುಖವಾದ ಗುಣಗಳೆಂದರೆ ಸ್ಥೂಲ ನೋಟ ಮತ್ತು ಪುಕ್ಕಯುಕ್ತ ಕಾಲುಗಳು. ಎದೆ ಕೆಳಮುಖವಾಗಿದೆ ಮತ್ತು ಹೇಂಟೆಗಳ ಬಾಲದ ಬುಡದಲ್ಲಿ ಒಂದು ಪ್ರಧಾನವಾದ ಮೆತ್ತೆಯಿದೆ. ಗರಿಗಳು ಉದ್ದವಾಗಿಯೂ ಧಾರಾಳವಾಗಿಯೂ ಇವೆ. ಇದರಿಂದ ಕೋಳಿ ನಿಜವಾಗಿ ಇರುವುದಕ್ಕಿಂತ ದೊಡ್ಡದಾಗಿ ಕಾಣುತ್ತದೆ. ಈ ತಳಿ ಮಾಸಲು ಹಳದಿ, ಬಿಳಿ, ಕಪ್ಪು ಅಥವಾ ಬಣ್ಣದ ಮಚ್ಚೆಯುಕ್ತವಾಗಿರಬಹುದು. ಈ ಕೋಳಿಗೆ ಒಂಟಿ ಜುಟ್ಟಿದೆ. ಆದರ್ಶ ತೂಕ ಹುಂಜ 11, ಹೇಂಟೆ 8½, ಮರಿಹುಂಜ 9, ಮರಿಹೇಂಟೆ 7 ಪೌಂಡುಗಳು.

ಲಾಂಗ್ ಶಾನ್: ಲಾಂಗ್‌ಶಾನ್‌ನ ಮೂಲ ಚೀನದ ಲಾಂಗ್‌ಶಾನ್ ಜಿಲ್ಲೆ. ಬ್ರಹ್ಮ ಮತ್ತು ಕೋಚಿನ್ನಿನೊಡನೆ ಹೋಲಿಸಿದರೆ, ಲಾಂಗ್‌ಶಾನ್ ಮೋಟಾದ ಆಳವಾದ ಶರೀರವನ್ನೂ ಉದ್ದವಾದ ಕಾಲುಗಳನ್ನೂ ಮತ್ತು ಬಾಲದಮೇಲೆ ಉದ್ದವಾದ ಗರಿಗಳನ್ನೂ ಹೊಂದಿದೆ. ಇದು ಚೆನ್ನಾಗಿ ನಿಂತುಕೊಳ್ಳುತ್ತದೆ. ಶರೀರ ಪ್ರಮಾಣಬದ್ಧವಾಗಿದೆ ಮತ್ತು ನೋಟಕ್ಕೆ ಬೆಡಗಿನಿಂದ ಕೂಡಿದೆ. ಇದಕ್ಕೆ ಒಂಟಿಜುಟ್ಟಿದೆ. ಆದರ್ಶ ತೂಕ ಹುಂಜ 8½, ಹೇಂಟೆ 7½, ಮರಿಹುಂಜ 8, ಮರಿ ಹೇಂಟೆ 6½ ಪೌಂಡುಗಳು.

ಇಂಗ್ಲಿಷ್ ವರ್ಗ

ಈ ವರ್ಗದಲ್ಲಿ ಆರು ತಳಿಗಳಿವೆ. ಅವುಗಳಲ್ಲಿ ಹೆಚ್ಚು ಜನಪ್ರಿಯವಾದವುಗಳು ಸಸೆಕ್ಸ್, ಆರ್ಪಿಂಗ್‌ಟನ್, ಆಸ್ಟ್ರಲಾರ್ಪ್ ಮತ್ತು ಕಾರ್ನಿಶ್.

ಇಂಗ್ಲಿಷ್ ತಳಿಗಳು ಅವುಗಳ ಉತ್ಕೃಷ್ಟ ಮೈಗೂಡುವ ಗುಣಗಳಿಗೆ ಪ್ರಸಿದ್ಧಿ ಪಡೆದ ಉಪಯುಕ್ತತೆಯ ನಮೂನೆಯವು. ಕಾರ್ನಿಶ್ ಬಿಟ್ಟು ಉಳಿದೆಲ್ಲವೂ ಬಿಳಿ ಚರ್ಮವನ್ನೂ ಕೆಂಪು ಕಿವಿಹಾಲೆಗಳನ್ನೂ ಹೊಂದಿವೆ. ಡೋರ್ಕಿಂಗ್ ಮತ್ತು ರೆಡ್ ಕಾಪ್ ವಿನಹ ಉಳಿದೆಲ್ಲವೂ ಕಂದುಕೋಶದ ಮೊಟ್ಟೆಗಳನ್ನಿಡುತ್ತವೆ. ಎಲ್ಲವೂ ಒಳ್ಳೆಯ ಕಾವುಕೊಡುವ ಕೋಳಿಗಳು.

ಸಸೆಕ್ಸ್: ಸಸೆಕ್ಸ್ ಭುಜಗಳ ಬಳಿ ಅಗಲವಾದ, ಮುಂದಿನಿಂದ, ಹಿಂದಿನವರೆಗೂ ಒಳೆಯ ಆಳವುಳ್ಳ ಉದ್ದವಾದ ಶರೀರವನ್ನು ಹೊಂದಿವೆ. ಎದೆ ಚೆನ್ನಾಗಿ ಬೆಳವಣಿಗೆ ಹೊಂದಿ ಪ್ರಮುಖವಾಗಿದೆ ಮತ್ತು ಕೋಳಿಯ ಒಳ್ಳೆಯ ಮಾಂಸದಿಂದ ಮೈಗೂಡುವ ಗುಣವನ್ನು ಹೊಂದಿದೆ. ಈ ತಳಿಯ ಕೋಳಿಗಳು ಒಂಟಿ ಜುಟ್ಟು ಕೊಂಬಿನ ಬಣ್ಣದ ಮತ್ತು ಕಾಲು ಮತ್ತು ಪಾದಗಳನ್ನು ಹೊಂದಿವೆ. ಸಸೆಕ್ಸ್‌ನಲ್ಲಿ, ಹಗುರ ಸಸೆಕ್ಸ್, ಕೆಂಪು ಸಸೆಕ್ಸ್ ಮತ್ತು ಮಚ್ಚೆಗಳುಳ್ಳ ಸಸೆಕ್ಸ್ ಎಂಬ ಮೂರು ವಿವಿಧತೆಗಳಿವೆ.

ಇವುಗಳಲ್ಲಿ ಹಗುರ ಸಸೆಕ್ಸ್ (ಚಿತ್ರ 4) ಅತಿ ಹೆಚ್ಚು ಜನಪ್ರಿಯವಾದುದು. ಮೂಲತಹ ಮಾಂಸತಳಿಯಾದರೂ ಕಾಲಕ್ರಮೇಣ ಒಳ್ಳೆಯ ಮೊಟ್ಟೆಯಿಡುವ ವಿಭೇದ ಗಳನ್ನು ಇದರಿಂದ ಅಭಿವೃದ್ಧಿಪಡಿಸಿರುವುದರಿಂದ ಇದು ಒಳ್ಳೆಯ ಸರ್ವೋಪಯೋಗಿ ಕೋಳಿಯಾಗಿದೆ. ಆದರ್ಶ ತೂಕ ಹುಂಜ 9, ಹೇಂಟೆ 7, ಮರಿಹುಂಜ $7\frac{1}{2}$, ಮರಿ ಹೇಂಟೆ 6 ಪೌಂಡುಗಳು.

ಆರ್ಪಿಂಗ್‌ಟನ್: ಆರ್ಪಿಂಗ್‌ಟನ್‌ನ ಶರೀರದ ಗಾತ್ರ ಮತ್ತು ಆಕಾರ ವಿಶಿಷ್ಟ ವಾದುದು. ಇದು ತುಂಬಿದ ಎದೆ, ಅಗಲವಾದ ಬೆನ್ನುಗಳನ್ನೊಳಗೊಂಡಿದ ಉದ್ದವಾದ ಆಳವಾದ ಮತ್ತು ಗುಂಡಗಿರುವ ಶರೀರವನ್ನು ಹೊಂದಿದೆ. ಇದರ ಶರೀರವು ಕೆಳಮಟ್ಟ ದಲ್ಲಿದೆ ಹಾಗೂ ಮೂಳೆಗಳು ಭಾರವಾಗಿವೆ ಮತ್ತು ಇದರ ಗರಿ ರಚನೆ ಅಮೆರಿಕವರ್ಗದ ತಳಿಗಳಿಗಿಂತ ಸ್ವಲ್ಪಹೆಚ್ಚಿಗೆ ಸಡಿಲವಾದುದು. ಇದು ಸಾಮಾನ್ಯವಾಗಿ ಭೋಜನಕ್ಕೆ ಸುಯೋಗ್ಯವಾದ ಕೋಳಿ ಆದರೆ ಆಯ್ಕೆಮಾಡಿ ಸಾಕುವುದು ಮತ್ತು ವಂಶಾಭಿವೃದ್ಧಿ ಯಿಂದ ಒಳ್ಳೆಯ ಮೊಟ್ಟೆಯಿಡುವ ವಿಭೇದಗಳನ್ನೂ ಅಭಿವೃದ್ಧಿಪಡಿಸಲಾಗಿದೆ. ಜುಟ್ಟು ಒಂಟಿ ಕೋಳಿಗಳು ಮಾಸಲು ಹಳದಿ, ಬಿಳಿ ಅಥವಾ ನೀಲಿಯಾಗಿರಬಹುದು. ಇವು ಗಳಲ್ಲಿ ಮಾಸಲು ಹಳದಿಯ ವಿವಿಧತೆ ಬಹಳ ಜನಪ್ರಿಯವಾದುದು. ಹೆಚ್ಚಿಗೆ ಜನ ಪ್ರಿಯತೆಯನ್ನು ಗಳಿಸುತ್ತಿರುವ ಈ ವರ್ಗ ತಳಿ — ಅಸ್ಟ್ರಲಾರ್ಪ್‌ನ ಅಭಿವೃದ್ಧಿಗೆ ಕಾರಣವಾದುದರಿಂದ ಕಪ್ಪು ವಿವಿಧತೆ ಗಮನಾರ್ಹವಾದುದು. ಆದರ್ಶ ತೂಕ ಹುಂಜ 10, ಹೇಂಟೆ ಮರಿಹುಂಜ $8\frac{1}{2}$, ಮರಿಹೇಂಟೆ 7 ಪೌಂಡುಗಳು.

ಆಸ್ಟ್ರಲಾರ್ಪ್: ಹೆಸರೇ ಸೂಚಿಸುವಂತೆ ಅಸ್ಟ್ರಲಾರ್ಪ್ ಆಸ್ಟ್ರೇಲಿಯದಲ್ಲಿ ಕಪ್ಪು ಆರ್ಪಿಂಗ್‌ಟನ್‌ನಿಂದ ಅಭಿವೃದ್ಧಿಪಡಿಸಲಾಗಿದೆ. ಇದು ಕಪ್ಪು ಆರ್ಪಿಂಗ್‌ಟನ್‌ಗಿಂತ

ಹೆಚ್ಚು ನೇರವಾಗಿಯೂ ಮತ್ತ ನೋಟಕ್ಕೆ ಕಡಮೆ ಗಾತ್ರವಾಗಿಯೂ ಇರುತ್ತದೆ. ಇದನ್ನು ಮೊಟ್ಟೆ ಉತ್ಪಾದಕವಾಗಿ ಅಭಿವೃದ್ಧಿಪಡಿಸಲಾಗಿದೆ. ಇದರ ಶರೀರದ ಮೇಲೆ ಸಾಕಷ್ಟು ಮಾಂಸ ಕೂಡ ಇರುವುದರಿಂದ ಇದು ಒಳ್ಳೆಯ ಉಭಯೋದ್ದೇಶ ತಳಿಯಾಗಿದೆ. ಬೆನ್ನು ಸ್ವಲ್ಪಮಟ್ಟಿಗೆ ಉದ್ದವಾಗಿದೆ ಮತ್ತು ಶರೀರ ಬಾಲದ ಕಡೆಗೆ ಕ್ರಮೇಣ ಇಳಿಜಾರಾಗಿದೆ. ಶರೀರವು ಒಳ್ಳೆಯ ಆಳವಾಗಿದೆ ಮತ್ತು ಗರಿಗಳು ಆರ್ಪಿಂಗ್ಟನ್‌ಗಿಂತ ಹೆಚ್ಚು ಹತ್ತಿರವಾಗಿ ಕಚ್ಚಿಕೊಂಡಿವೆ. ಜುಟ್ಟು, ಒಂಟಿ, ಕೊಕ್ಕು ಕಪ್ಪು, ಕಾಲು ಮತ್ತು ಪಾದಗಳು ಕಪ್ಪು ಅಥವಾ ಎಳೆಗೆಂಪಿನಿಂದ ಕೂಡಿದ ಪಾದವಿರುವ ಸೀಸದ ಕಪ್ಪುಕಾಲುಗಳು ಗರಿವರ್ಣ ಎಲ್ಲ ಭಾಗಗಳಲ್ಲೂ ಹೊಳಪಿನಿಂದ ಕೂಡಿದ ಹಸರುಮಿಶ್ರ ಕಪ್ಪು. ಕೆಳಮಟ್ಟದ ವರ್ಣವೆಂದರೆ ಮಂಕುಕಪ್ಪು.

ಭಾರತದಲ್ಲಿ ಆಸ್ಟ್ರಲಾರ್ಪ್ ಅತಿ ಶೀಘ್ರವಾಗಿ ಜನಪ್ರಿಯತೆಯನ್ನು ಗಳಿಸುತ್ತಿದೆ. ರ್ಹೋಡ್ ಐಲೆಂಡ್ ರೆಡ್‌ನಂತೆಯೇ ಮನೆ ಹಿತ್ತಲಿನ ಸಣ್ಣಪ್ರಮಾಣದ ಕೋಳಿ ಸಾಕಾಣಿಕೆಯಲ್ಲಿ ವಿಶೇಷತಃ ತೇವಾಂಶದಿಂದ ಕೂಡಿದ ಹೆಚ್ಚಿನ ಮಳೆ ಬೀಳುವ ಪ್ರದೇಶಗಳಿಗೆ ಬಹು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಇತ್ತೀಚಿನ ವರ್ಷಗಳಲ್ಲಿ ಆಸ್ಟ್ರಲಾರ್ಪ್ ಹುಂಜ ಮತ್ತು ವೈಟ್ ಲೆಗ್‌ಹಾರ್ನ್ ಹೇಂಟೆಯ ಸಂಕರ ತಳಿಯಾದ 'ಆಸ್ಟ್ರೊವೈಟ್', ಒಳ್ಳೆಯ ಸತ್ವ ಯುಕ್ತವಾದ, ಹೆಚ್ಚಿನ ಮೊಟ್ಟೆಗಳನ್ನಿಡುವ ಅತ್ಯುತ್ತಮವಾದ ತಳಿ ಎಂದು ಕಂಡುಬಂದಿದೆ ಮತ್ತು ಇದನ್ನು ವ್ಯಾಪಾರೀ ಮೊಟ್ಟೆ ಕೇಂದ್ರಗಳಲ್ಲಿ ದೊಡ್ಡ ಗುಂಪುಗಳಾಗಿ ಪಾಲಿಸುತ್ತಿದ್ದಾರೆ. ಆದರ್ಶ ತೂಕ ಹುಂಜ 8½, ಹೇಂಟೆ 6½, ಮರಿಹುಂಜ 7½, ಮರಿಹೇಂಟೆ 5½ ಪೌಂಡುಗಳು.

ಕಾರ್ನಿಶ್: ಮೂಲತಃ 'ಭಾರತದ ಕ್ರೀಡಾ ಕಾರ್ನಿಶ್' ಎಂದು ಹೆಸರು ಪಡೆದಿರುವ ಕಾರ್ನಿಶ್, ಇಂಗ್ಲೆಂಡಿನಲ್ಲಿ ಭಾರತದ 'ಅಸೀಲ್', 'ಮಲೈ' ಮತ್ತು ಇಂಗ್ಲಿಷ್ ಕ್ರೀಡಾ ತಳಿಗಳನ್ನೊಳಗೊಂಡ ಸಂಕರದಿಂದ ಅಭಿವೃದ್ಧಿಪಡಿಸಲಾಯಿತೆಂದು ಹೇಳಲಾಗುತ್ತದೆ. ಬಿಳಿ ಚರ್ಮವನ್ನು ಹೊಂದಿರುವ ಸಾಮಾನ್ಯ ಇಂಗ್ಲಿಷ್ ತಳಿಗಳಂತಿರದೆ, ಕಾರ್ನಿಶ್ ಹಳದಿ ಚರ್ಮವನ್ನು ಪಡೆದಿದೆ. ಈ ಕಾರಣಕ್ಕಾಗಿ ಹಾಗೂ ಇದರ ಅತ್ಯುತ್ತಮವಾಗಿ ಮೈತುಂಬುವ ಗುಣಗಳಿಗಾಗಿ ಈ ತಳಿ ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಜನಪ್ರಿಯತೆಯನ್ನು ಗಳಿಸಿದೆ.

ಕಾರ್ನಿಶ್ ತನ್ನ ಒತ್ತಾದ ಗರಿಗಳು ಮತ್ತು ವಿಶೇಷ ಆಕಾರದ ಚೆನ್ನಾಗಿ ಮಾಂಸ ಯುಕ್ತವಾದ, ಕಿರಿದಾದ ಶರೀರಕ್ಕೆ ಪ್ರಖ್ಯಾತಿ ಪಡೆದಿದೆ. ಭುಜಗಳಿಗೆ ಹೆಚ್ಚಿನ ಅಗಲವನ್ನು ಕೊಡುವಂತೆ ಬಹಳ ಆಳ ಮತ್ತು ವಿಶಾಲವಾದ ಎದೆ ಇದೆ. ಎಲ್ಲ ಕಾರ್ನಿಶ್ ಕೋಳಿಗಳೂ ಬಟಾಣಿ ಜುಟ್ಟನ್ನು ಹೊಂದಿವೆ. ದಟ್ಟ ಮತ್ತು ಬಿಳಿ ವಿವಿಧತೆಗಳ ಆದರ್ಶ ತೂಕ ಹುಂಜ 10, ಹೇಂಟೆ 7½, ಮರಿಹುಂಜ 8, ಮರಿಹೇಂಟೆ 6 ಪೌಂಡುಗಳು ಮತ್ತು ಬಿಳಿ ಮಿಶ್ರಿತ ಕೆಂಪು ವಿವಿಧತೆಯ ಆದರ್ಶ ತೂಕ ಹುಂಜ 8, ಹೇಂಟೆ 6, ಮರಿಹುಂಜ 7, ಮರಿಹೇಂಟೆ 5 ಪೌಂಡುಗಳು.

ಡಾರ್ಕಿಂಗ್: ಡಾರ್ಕಿಂಗ್, ಸಸೆಕ್ಸ್‌ನಂತೆಯೇ ಉದ್ದವಾದ, ಅಗಲವಾದ, ಆಳವಾದ ಮತ್ತು ಕೆಳಮಟ್ಟದ ಶರೀರದ ವೈಶಿಷ್ಟ್ಯವನ್ನು ಹೊಂದಿದೆ. ಬಿಳಿ ಡಾರ್ಕಿಂಗ್ ಗುಲಾಬಿ ಜುಟ್ಟು ಪಡೆದಿದೆ. ಉಳಿದೆರಡು ವಿವಿಧತೆಗಳು ಒಂಟಿ ಜುಟ್ಟು ಪಡೆದಿವೆ. ಎಲ್ಲ ಡಾರ್ಕಿಂಗ್‌ಗಳೂ ಐದು ಬೆರಳುಗಳನ್ನು ಹೊಂದಿವೆ. ಬಿಳಿ ಡಾರ್ಕಿಂಗ್‌ಗಳ ಆದರ್ಶ ತೂಕ ಹುಂಜ 7½, ಹೇಂಟೆ 6, ಮರಿಹುಂಜ 6½, ಮರಿಹೇಂಟೆ 5 ಪೌಂಡುಗಳು ಮತ್ತು ಬೆಳ್ಳಿಕಂದು ಮತ್ತು ಬಣ್ಣಯುಕ್ತ ವಿವಿಧತೆಗಳ ಆದರ್ಶ ತೂಕ ಹುಂಜ 9, ಹೇಂಟೆ 7, ಮರಿಹುಂಜ 8, ಮರಿಹೇಂಟೆ 6 ಪೌಂಡುಗಳು.

ರೆಡ್‌ಕ್ಯಾಪ್: ರೆಡ್‌ಕ್ಯಾಪ್ ಎಂಬ ಹೆಸರು ಈ ತಳಿಯ ವಿಶೇಷ ಗುಣವಾದ ದೊಡ್ಡ ಗುಲಾಬಿ ಜುಟ್ಟಿನಿಂದ ಉದ್ಭವಿಸಿದೆ. ಇದು ಸುಮಾರಾಗಿ ಉದ್ದವಾದ ಶರೀರ ಮತ್ತು ತಕ್ಕಮಟ್ಟಿಗೆ ಪ್ರಮುಖವಾದ ಎದೆಯನ್ನು ಹೊಂದಿರುವ ಮಧ್ಯಮ ಗಾತ್ರದ ಕೋಳಿ. ಆದರ್ಶ ತೂಕ ಹುಂಜ 7½, ಹೇಂಟೆ 6, ಮರಿಹುಂಜ 6½, ಮರಿಹೇಂಟೆ 5 ಪೌಂಡುಗಳು.

ಮೆಡಿಟರೇನಿಯನ್ ವರ್ಗ

ಮೆಡಿಟರೇನಿಯನ್ ಪ್ರದೇಶದಲ್ಲಿ ಉತ್ಪತ್ತಿಯಾದ ಮೆಡಿಟರೇನಿಯನ್ ವರ್ಗದಲ್ಲಿ, ಲೆಗ್‌ಹಾರ್ನ್, ಮೈನಾರ್ಕ್, ಅನ್‌ಕೋನ್, ಸ್ಪಾನಿಷ್, ಅಂಡಾಲುಸಿಯನ್ ಮತ್ತು ಬಟರ್‌ಕಪ್ ಹೀಗೆ ಆರು ತಳಿಗಳಿವೆ. ಈ ವರ್ಗದ ಎಲ್ಲ ತಳಿಗಳಲ್ಲಿ ಲೆಗ್‌ಹಾರ್ನ್ ಅತ್ಯಂತ ಜನಪ್ರಿಯವಾದುದು. ಮೆಡಿಟರೇನಿಯನ್ನಿನ ಎಲ್ಲ ತಳಿಗಳೂ ಗರಿರಹಿತ ಕಾಲುಗಳನ್ನೂ ಮತ್ತು ಬಿಳಿ ಅಥವಾ ನಸು ಹಳದಿ ಮಿಶ್ರಿತ ಬಿಳಿಬಣ್ಣದ ಕಿವಿಹಾಲೆಗಳನ್ನೂ ಪಡೆದಿವೆ. ಮೈನಾರ್ಕ್ ಒಂದನ್ನು ಬಿಟ್ಟು ಈ ವರ್ಗದ ಉಳಿದೆಲ್ಲ ಕೋಳಿಗಳೂ ಗಾತ್ರದಲ್ಲಿ ಸಣ್ಣವು. ಇವು ಬೇಗ ವಯಸ್ಸಿಗೆ ಬರುತ್ತವೆ ಮತ್ತು ಒಳ್ಳೆಯ ಆಹಾರ ಸಂಗ್ರಾಹಕ ಕೋಳಿ. ಇವು ತಟ್ಟನೆ ಕೆರಳುವ, ಜಾಗರೂಕತೆಯ ಮನೋಧರ್ಮವನ್ನು ಹೊಂದಿವೆ ಮತ್ತು ಕಾವು ಕೂರುವುದಿಲ್ಲ. ಇವುಗಳು ಜೀವನಾಧಾರ ಮತ್ತು ಉತ್ಪಾದನೆಗೆ ಉಳಿದ ಮೂರು ವರ್ಗಗಳ ತಳಿಗಳಿಗಿಂತ ಕಡಮೆ ಆಹಾರ ಅವಶ್ಯಕತೆಯನ್ನು ಹೊಂದಿವೆ. ಇವು ಒಳ್ಳೆಯ ಮೊಟ್ಟೆ ಉತ್ಪಾದಕಗಳು. ಮೊಟ್ಟೆಗಳ ಚಿಪ್ಪು ಬಿಳಿಯದು.

ಲೆಗ್‌ಹಾರ್ನ್: ಈ ತಳಿ ಸಣ್ಣದು, ಚುರುಕಾದುದು ಮತ್ತು ವಿವಿಧ ಭಾಗಗಳ ಹೊಂದಾಣಿಕೆಗೆ ಪ್ರಸಿದ್ಧಿಯಾದುದು. ನೋಟಕ್ಕೆ ಎಲ್ಲ ಕೋಳಿಗಳಿಗಿಂತಲೂ ಲೆಗ್‌ಹಾರ್ನ್ ಅಚ್ಚುಕಟ್ಟಾಗಿದೆ. ರಚನೆಯಲ್ಲಿ ಇದು ಸಣ್ಣದು ಮತ್ತು ಬಹಳ ಸಂಕ್ಷಿಪ್ತವಾದುದು. ಬಾಲವನ್ನು ಕೆಳಮಟ್ಟದಲ್ಲಿ ಧರಿಸಿದೆ ಮತ್ತು ಚೆನ್ನಾಗಿ ಕೂರಿಸಿದ ಜುಟ್ಟು ಮತ್ತು ಜೋಲು ಮಾಂಸಲವುಳ್ಳ, ಸಣ್ಣ ತಲೆಯನ್ನು ಹೊಂದಿದೆ. ಇವು ಉದ್ದವಾದ ಬೆನ್ನು, ಪ್ರಧಾನವಾದ ಎದೆ ಮತ್ತು ಉಳಿದವುಗಳಿಗಿಂತ ಉದ್ದವಾದ ಕಾಲುಗಳನ್ನು ಹೊಂದಿವೆ. ಲೆಗ್‌ಹಾರ್ನ್ ಸಾಮಾನ್ಯ ವಿವಿಧತೆಗಳೆಂದರೆ ಬಿಳಿ, ಕಂದು, ಕಪ್ಪು ಮತ್ತು ಮಾಸಲು

ಹಳದಿ. ಬೆಳ್ಳಿ, ಕೆಂಪು, ಕರಿಬಾಲದ ಕೆಂಪು ಮತ್ತು ಕೊಲಂಬಿಯನ್ ಎಂಬ ಕಡಮೆ ಸಾಮಾನ್ಯವಾದ ವಿವಿಧತೆಗಳೂ ಇವೆ. ಕಳೆದ ಕೆಲವು ವರ್ಷಗಳಲ್ಲಿ ಬಿಳಿ ವಿವಿಧತೆ ಪ್ರಪಂಚದಾದ್ಯಂತ ಜನಪ್ರಿಯತೆಯನ್ನು ಗಳಿಸಿದೆ. ಕಂದು ಮತ್ತು ಕರಿಯವು ಜನ ಪ್ರಿಯತೆಯಲ್ಲಿ ಎರಡನೆ ಹಾಗೂ ಮೂರನೆ ಸ್ಥಾನಗಳನ್ನು ಪಡೆದಿವೆ.

ಗುಲಾಬಿ ಅಥವಾ ಒಂಟಿ ಜುಟ್ಟು ಪಡೆದಿವೆಯೇ ಎಂಬ ಗುಣದ ಆಧಾರದ ಮೇಲೆ ಬಿಳಿ, ಮಾಸಲು ಹಳದಿ ಮತ್ತು ಕಂದು ವಿವಿಧತೆಗಳನ್ನು ಪುನರ್ವಿಭಾಗಿಸಲಾಗಿದೆ. ಎಲ್ಲ ವಿವಿಧತೆಗಳೂ ಹಳದಿ ಕೊಕ್ಕು, ಚರ್ಮ, ಕಾಲು ಮತ್ತು ಬೆರಳುಗಳನ್ನು ಪಡೆದಿವೆ. ಅವು ಗಾತ್ರ ಆಕಾರದಲ್ಲಿ ಒಂದೇ ರೀತಿಯಿದ್ದು ಗರಿ ರಚನೆ ಮತ್ತು ಜುಟ್ಟಿನ ರೀತಿಯಲ್ಲಿ ಮಾತ್ರ ಬೇರೆಯಾಗುತ್ತವೆ. ಆದರ್ಶ ತೂಕ ಹುಂಜ 6, ಹೇಂಟೆ 4½, ಮರಿಹುಂಜ 5, ಮರಿಹೇಂಟೆ 4 ಪೌಂಡುಗಳು.

ಹುಂಜಗಳಲ್ಲಿ ಒಂಟಿ ಜುಟ್ಟು ಮಧ್ಯಮ ಅಳತೆಯದು ಮತ್ತು ನೇರವಾಗಿ ನಿಲ್ಲುತ್ತದೆ. ಸಮವಾದ ಗರಗಸದಂತಹ ಹಲ್ಲುಗಳನ್ನು ಆಳವಾಗುಳ್ಳ ಐದು ಮೊನೆ ಗಳಿವೆ, ಜುಟ್ಟಿನ ಹಿಂಭಾಗ ತಲೆಯಿಂದ ನೇರವಾಗಿ ಮುಂದುವರಿದಿದೆ. ಹೇಂಟೆಗಳಲ್ಲಿ ಮುಂದಿನ ಮೊನೆಯ ಮುಂಭಾಗ ನೇರವಾಗಿ ನಿಲ್ಲುತ್ತದೆ; ಆದರೆ, ಉಳಿದ ಜುಟ್ಟು ಒಂದು ಕಡೆಗೆ ಜೋತುಬಿದ್ದಿದೆ. ಎರಡೂ ಲಿಂಗಗಳಲ್ಲಿ ಜುಟ್ಟು ಸುಕ್ಕುಗಳು, ಹೆಬ್ಬೆರಳ ಗುರುತು ಅಥವಾ ಮಡಿಕೆ ರಹಿತವಾಗಿವೆ.

ಗುಲಾಬಿ ಜುಟ್ಟಿನ ವಿವಿಧತೆಯಲ್ಲಿ ಜುಟ್ಟು ಮಧ್ಯಮ ಆಕಾರದ್ದಾಗಿದ್ದು ಮುಂದುಗಡೆ ಚೌಕಾಕಾರವಾಗಿಯೂ, ಚೆನ್ನಾಗಿ ತುಂಬಿಕೊಂಡು ತಗ್ಗು, ಟೊಳ್ಳುಗಳಿಲ್ಲ ದಂತೆ ಇದೆ. ಮೊನೆ ಚೆನ್ನಾಗಿ ಬೆಳೆದಿದೆ ಮತ್ತು ತಲೆಯಿಂದ ನೇರವಾಗಿ ಮುಂದು ವರಿದಿದೆ. ಹೇಂಟೆಯಲ್ಲಿ ಜುಟ್ಟು ಸಣ್ಣದು ಮತ್ತು ನಾಜೋಕಾಗಿದೆ; ಅಲ್ಲದೆ, ಗಂಡಿನ ಜುಟ್ಟನ್ನು ಹೋಲುತ್ತದೆ.

ಲೆಗ್‌ಹಾರ್ನ್ ಒಳ್ಳೆಯ ವಾಣಿಜ್ಯ ಮೊಟ್ಟೆಗಳನ್ನು ಉತ್ಪಾದಿಸುತ್ತದೆ. ಆದುದ ರಿಂದ ಇದು ವಾಣಿಜ್ಯ ಮೊಟ್ಟೆ ಕೇಂದ್ರಗಳಿಗೆ ಆದರ್ಶಪ್ರಾಯವಾಗಿದೆ.

ಅತ್ಯುತ್ತಮವಾಗಿ ಮೊಟ್ಟೆ ಇಡುವ ಗುಣದಿಂದಾಗಿ ವ್ಹೈಟ್ ಲೆಗ್‌ಹಾರ್ನ್ ಅತಿ ಪ್ರಿಯವಾದ ವಿವಿಧತೆ. ಮಾಂಸ ಉತ್ಪಾದನೆಗೆ ಪ್ರಸಿದ್ಧಿಯಾದ ಸಸೆಕ್ಸ್, ರ್‍ಹೋಡ್ ಐಲೆಂಡ್‌ರೆಡ್ ಮತ್ತು ಅಶೀಲ್‌ನಂತೆ ಈ ತಳಿ ಮಾಂಸ ಉತ್ಪಾದನೆಗೆ ಸೂಕ್ತವಾದುದಲ್ಲ. ಹಾಗಿದ್ದರೂ, ವಿಶೇಷತಹ ಮೊದಲಹಂತದಲ್ಲಿನ ಅದರ ವೇಗವಾದ ಬೆಳವಣಿಗೆಯಿಂದಾಗಿ ಪೆಟಿಟ್ ಪ್ರುಸಿನಸ್ ಎಂಬ ಹೆಸರಿನಲ್ಲಿ ಇದನ್ನು ಅಮೆರಿಕದಲ್ಲಿ ಭೋಜನಕ್ಕಾಗಿ ಬಹಳ ವಾಗಿ ಉಪಯೋಗಿಸುತ್ತಾರೆ. ಸರಿಯಾಗಿ ಪೋಷಿಸಿದಾಗ 6–8 ವಾರಗಳ ಮರಿಗಳು 12 ರಿಂದ 24 ಔನ್ಸ್ ತೂಗುತ್ತವೆ ಮತ್ತು ಇದರ ಮಾಂಸ ಮೃದುವಾಗಿಯೂ ತಿನ್ನಲು ರುಚಿಕಟ್ಟಾಗಿಯೂ ಇರುತ್ತದೆ.

ಅಮೆರಿಕದಲ್ಲಿ ಈ ತಳಿಯ ಕೋಳಿಗಳು 1 ರಿಂದ 2 ಪೌಂಡು ತೂಗುವಾಗ ಮಾಂಸ ವ್ಯಾಪಾರಕ್ಕಾಗಿ ಬಹಳವಾಗಿ ಬಳಸುತ್ತಾರೆ. ಕೋಳಿಗಳ ವಯಸ್ಸು ಹೆಚ್ಚಿದಂತೆ ಮುಂಡದ ತೂಕ ತೃಪ್ತಿಕರವಾಗಿ ಹೆಚ್ಚುವುದಿಲ್ಲ. ಏಕೆಂದರೆ 24 ವಾರಗಳ ನಂತರ ಬೆಳವಣಿಗೆಯ ವೇಗ ಕುಗ್ಗುತ್ತದೆ. ವೈಟ್ ಲೆಗ್‌ಹಾರ್ನ್ 5½ ಇಂದ 6 ತಿಂಗಳ ಅವಧಿಯಲ್ಲಿ ವಯಸ್ಸಿಗೆ ಬರುತ್ತದೆ. ಆಗ ಹೇಂಟೆಗಳು ಮೊಟ್ಟೆ ಇಡಲು ಪ್ರಾರಂಭಿಸುತ್ತವೆ.

ಭಾರತದಲ್ಲಿ ವಿಶೇಷತಹ ಒಣ ಪ್ರದೇಶಗಳಲ್ಲಿ ವೈಟ್ ಲೆಗ್‌ಹಾರ್ನ್ ಅತ್ಯುತ್ತಮವಾದ ಫಲಿತಾಂಶವನ್ನು ಕೊಟ್ಟಿದೆ. ಆದರೆ ಗಟ್ಟಿ ಭೂಮಿ ಮತ್ತು ತೇವಾಂಶ ಜಾಗಗಳಲ್ಲಿ ಇದು ಚೆನ್ನಾಗಿ ಏಳಿಗೆ ಹೊಂದಿ, ಉತ್ಪಾದಿಸುವಂತೆ ಕಂಡುಬಂದಿಲ್ಲ. ಈ ತಳಿಯನ್ನು ವಿದೇಶೀಯ ಧಾರ್ಮಿಕ ಗುರುಗಳು ಮತ್ತು ಯೂರೋಪ್ ತೋಟಗಾರರು ಈ ದೇಶಕ್ಕೆ ಅರ್ಧ ಶತಮಾನದಷ್ಟು ಹಿಂದೆ ತಂದರು.

ವೈಟ್ ಲೆಗ್‌ಹಾರ್ನ್ ನಂತರ, ಕಂದು ವಿವಿಧತೆಯು ಒಳ್ಳೆಯ ಫಲಿತಾಂಶಗಳನ್ನು ಕೊಟ್ಟಿರುವ, ಭೂ ಖಂಡಗಳಲ್ಲಿ ಜನಪ್ರಿಯತೆಯನ್ನು ಗಳಿಸುತ್ತಿದೆ. ತೀರ ಇತ್ತೀಚೆಗೆ ಈ ವಿವಿಧತೆಯನ್ನು ಈ ದೇಶದಲ್ಲಿ ಮೊದಲಬಾರಿಗೆ ಸೇರಿಸಲಾಗಿದೆ ಮತ್ತು ಇದು ಭರವಸೆಗಳಿಂದ ತುಂಬಿದೆ. ತಿಳಿ ಮತ್ತು ದಟ್ಟ ಕಂದು ಲೆಗ್‌ಹಾರ್ನ್‌ಗಳಿವೆ. ಈ ಎರಡರಲ್ಲೂ ಹೇಂಟೆಗಿಂತ ಹುಂಜ ದಟ್ಟ ಬಣ್ಣವನ್ನು ಹೊಂದಿವೆ. ಆದಾಗ್ಯೂ ಕಂದು ಲೆಗ್‌ಹಾರ್ನ್, ಅದರಲ್ಲೂ ವಿಶೇಷತಹ ಹುಂಜ ಕೆಂಪು ಕಾಡುಕೋಳಿಯನ್ನು ಹೋಲುವ ಆಕರ್ಷಕ ಗರಿವರ್ಣದಿಂದ ಹೆಚ್ಚು ಜನಪ್ರಿಯವಾಗಿವೆ. ವಾಸ್ತವಿಕವಾಗಿ ಕಂದು ಲೆಗ್‌ಹಾರ್ನ್ ಬಹುಮಟ್ಟಿಗೆ ಸಾಮಾನ್ಯ ದೇಶಿಕೋಳಿಯಂತಿದೆ. ಆದುದರಿಂದ ಬಿಳಿ ಬಣ್ಣದ ಕೋಳಿಗಳ ವಿರುದ್ಧ ದುರಭಿಪ್ರಾಯವಿರುವ ನಿರ್ದಿಷ್ಟ ಜಾಗಗಳಲ್ಲಿ ಈ ತಳಿಯನ್ನು ಪ್ರಾರಂಭಿಸುವುದು ಅತಿಸೂಕ್ತ. ಈ ತಳಿ ವೈಟ್ ಲೆಗ್‌ಹಾರ್ನ್‌ಗಿಂತ ಗಟ್ಟಿಯಾಗಿರುವಂತೆ ಕಾಣುತ್ತದೆ, ಇವುಗಳ ಬಣ್ಣ ವಿಶೇಷತಹ ಮರಿಗಳಲ್ಲಿ ಮಾಂಸಾಹಾರಿ ದಾಳಿಗಾರರ ವಿರುದ್ಧ ಸ್ವಾಭಾವಿಕವಾದ ಛದ್ಮವಾಗಿ ಕೆಲಸಮಾಡುತ್ತದೆ. ಈ ದೇಶದಲ್ಲಿ ವಿಸ್ತಾರವಾಗಿ ಪ್ರಯೋಗಿಸಲು ಇದು ಯೋಗ್ಯವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಕಪ್ಪು ಲೆಗ್‌ಹಾರ್ನ್ ಇಂಗ್ಲೆಂಡಿನಲ್ಲಿ ಜನಪ್ರಿಯತೆಯನ್ನು ಗಳಿಸುತ್ತಿದೆ. ಇದನ್ನು ಭಾರತಕ್ಕೆ ಕೂಡ ಸಣ್ಣ ಪ್ರಮಾಣದಲ್ಲಿ ಆಮದುಮಾಡಿಕೊಳ್ಳಲಾಗಿದೆ. ಇದು ಬಿಳಿ ಮತ್ತು ಕಂದು ವಿವಿಧತೆಗಳಷ್ಟು ಒಳ್ಳೆಯ ಮೊಟ್ಟೆ ಇಡುವ ಕೋಳಿಯಲ್ಲಿ ಮತ್ತು ಕಪ್ಪು ಮೈನಾರ್ಕ್‌ದೊಂದಿಗೆ ತಪ್ಪು ಗ್ರಹಿಕೆಯಾಗುತ್ತದೆ. ಆದರೆ ಲೆಗ್‌ಹಾರ್ನ್‌ನ ಲಾಕ್ಷಣಿಕ ತಲೆ ಮತ್ತು ಶರೀರ ರಚನೆ, ಹಳದಿ ಕೊಕ್ಕು, ಚರ್ಮ, ಕಾಲುಗಳು ಮತ್ತು ಬೆರಳುಗಳು ಕಪ್ಪು ಲೆಗ್‌ಹಾರ್ನ್ ಅನ್ನು ಮೈನಾರ್ಕ್‌ದಿಂದ ವಿಂಗಡಿಸುತ್ತದೆ. ಈ ವಿವಿಧತೆ ಇದೇ ತಳಿಯ ಉಳಿದೆರಡು ವಿವಿಧತೆಗಳಿಗಿಂತ ಯಾವ ವಿಶೇಷ ಉಪಯೋಗವನ್ನೂ ಹೊಂದಿಲ್ಲ.

ಮೈನಾರ್ಕ್: ಮೈನಾರ್ಕ್ ತನ್ನ ಉದ್ದವಾದ ಶರೀರ, ದೊಡ್ಡ ಜುಟ್ಟು ಮತ್ತು ಉದ್ದವಾದ ಜೋಲು ಮಾಂಸಲಗಳಿಗೆ ಪ್ರಸಿದ್ಧಿಯಾಗಿದೆ. ವಾಸ್ತವಿಕವಾಗಿ ಮೆಡಿಟರೇನಿಯನ್ ತಳಿಗಳಲ್ಲಿ ಇವೇ ಅತಿ ದೊಡ್ಡವು. ಚೆನ್ನಾಗಿ ಹರಡಿಕೊಂಡು ಕೆಳಮಟ್ಟದಲ್ಲಿರುವ ಉದ್ದವಾದ ಬೆನ್ನು ಭುಜದಿಂದ ಬಾಲದ ಮೂಲದವರೆಗೆ ಗಮನಾರ್ಹವಾಗಿ ಇಳಿಜಾರಾಗಿದೆ.

ಇದರಲ್ಲಿ ಕಪ್ಪು, ಬಿಳಿ ಮತ್ತು ಮಾಸಲು ಹಳದಿ ವಿವಿಧತೆಗಳಿವೆ. ಕರಿ ಮತ್ತು ಬಿಳಿ ವಿವಿಧತೆಗಳನ್ನು ಮತ್ತೆ ಒಂಟಿ ಮತ್ತು ಗುಲಾಬಿ ಜುಟ್ಟಿನ ವಿವಿಧತೆಗಳಾಗಿ ಪುನರ್ ವಿಂಗಡಿಸಲಾಗಿದೆ. ಆದಾಗ್ಯೂ ಲೋಹ ಕಪ್ಪಿನ ಆಕರ್ಷಕ ಗರಿವರ್ಣ ಮತ್ತು ಅಸಾಮಾನ್ಯವಾಗಿ ದೊಡ್ಡದಾಗಿರುವ ಜುಟ್ಟನ್ನು ಹೊಂದಿರುವ ಒಂಟಿ ಜುಟ್ಟಿನ ಕಪ್ಪು ಮೈನಾರ್ಕ್ ಅತ್ಯಂತ ಹೆಚ್ಚು ಜನಪ್ರಿಯವಾದುದು. ಲೆಗ್‌ಹಾರ್ನ್‌ನಂತೆಯೇ ಜುಟ್ಟು ನೇರವಾಗಿದೆ, ಆದರೆ ಸಮವಾದ ಗರಗಸದಂತಹ ಆಳವಾದ ಹಲ್ಲುಗಳುಳ್ಳ ಆರು ಮೊನೆಗಳಿವೆ. ಜುಟ್ಟಿನ ಅಲಗು ಕತ್ತನ್ನು ಅನುಸರಿಸುವ ಪ್ರವೃತ್ತಿಯನ್ನು ಹೊಂದಿವೆ. ಹೇಂಟೆಯಲ್ಲೂ ಜುಟ್ಟು ದೊಡ್ಡದಾಗಿ ಆರು ಮೊನೆಗಳನ್ನು ಹೊಂದಿವೆ, ಮುಂದಿನ ಮೊನೆ ತಲೆಯ ಒಂದು ಕಡೆಗೂ ಉಳಿದ ಮೊನೆಗಳು ಅದರ ಮತ್ತೊಂದು ಪಕ್ಕಕ್ಕೂ ಮಡಿಚಿಕೊಂಡಿರುತ್ತವೆ. ಕೊಕ್ಕು ಕಪ್ಪಾಗಿದೆ, ಕಾಲು ಮತ್ತು ಬೆರಳುಗಳು ಕಪ್ಪು ಅಥವಾ ದಟ್ಟವಾದ ಹಸರು ಛಾಯೆಯ ಬೂದು ಬಣ್ಣವಾಗಿರುತ್ತದೆ.

ಒಂದು ಕಾಲದಲ್ಲಿ ಉತ್ತಮವಾದ ಗಾತ್ರ ಮತ್ತು ಬಿಳಿಯ ಮೊಟ್ಟೆಗಳಿಂದಾಗಿ ಲೆಗ್‌ಹಾರ್ನ್‌ಗಳಿಗಿಂತ ಹೆಚ್ಚು ಜನಪ್ರಿಯವಾಗಿದ್ದ ಈ ತಳಿ ಈಗ ಬಹುಶಃ ಅವುಗಳ ಉತ್ಪಾದನೆಯಲ್ಲಿನ ಇಳಿಮುಖದಿಂದಾಗಿ ಮೆಚ್ಚಿಗೆಯನ್ನು ಕಳೆದುಕೊಳ್ಳುತ್ತಿದೆ. ಆದರ್ಶ ತೂಕ ಹುಂಜ 8, ಹೇಂಟೆ 6½, ಮರಿಹುಂಜ 6½, ಮರಿಹೇಂಟೆ 5½ ಪೌಂಡುಗಳು.

ಅಂಕೋನ: ಅಂಕೋನ ಸಾಮಾನ್ಯ ರೀತಿಯಲ್ಲಿ ಲೆಗ್‌ಹಾರ್ನ್‌ನಂತೆಯೇ ಇದೆ. ಈ ತಳಿ ಒಂಟಿ ಜುಟ್ಟು ಮತ್ತು ಗುಲಾಬಿ ಜುಟ್ಟಿನ ಎರಡು ವಿವಿಧತೆಗಳನ್ನು ಹೊಂದಿದೆ. ಒಟ್ಟಿನಲ್ಲಿ ಈ ತಳಿ ಲೆಗ್‌ಹಾರ್ನ್‌ನಷ್ಟು ಮೆಚ್ಚಿಗೆಯನ್ನು ಪಡೆಯದಿದ್ದರೂ ಈ ಎರಡು ವಿವಿಧತೆಗಳಲ್ಲಿ ಒಂಟಿ ಜುಟ್ಟಿನದು ಹೆಚ್ಚು ಜನಪ್ರಿಯವಾಗಿದೆ.

ಅಂಕೋನದ ಗರಿವರ್ಣ ಹೊಳಪಿನಿಂದ ಕೂಡಿದ ಕಪ್ಪು. ಕೆಲವು ಗರಿಗಳು ಬಿಳಿ ತುದಿ ಹೊಂದಿರುವುದರಿಂದ ಕೋಳಿ ಚುಕ್ಕೆಗಳಿಂದ ಕೂಡಿದಂತೆ ಕಾಣುತ್ತದೆ. ಹೊರ ಮೈಯಿನ ಕಪ್ಪುಬಣ್ಣ ಹುಂಜಗಳಲ್ಲಿ ಹಸುರು ಹೊಳಪನ್ನು ಹೊಂದಿದೆ. ಆದರೆ ಇದು ಹೇಂಟೆಯಲ್ಲಿಲ್ಲ. ಹುಂಜದ ಬಾಲದ ಮುಖ್ಯ ಗರಿಗಳೂ, ಕುಡುಗರಿಗಳೂ ಮತ್ತು ಹೇಂಟೆಯ ಬಾಲದ ಮುಖ್ಯ ಗರಿಗಳೂ ಬಿಳಿ ತುದಿಯನ್ನು ಹೊಂದಿವೆ. ಮೊದಲನೆಯ ಮತ್ತು ಎರಡನೆಯ ರೆಕ್ಕೆಗರಿಗಳೂ ಬಿಳಿ ತುದಿಯನ್ನು ಹೊಂದಿವೆ. ಒಳಗಿನ ಬಣ್ಣ ದೇಹದಾದ್ಯಂತ ದಟ್ಟ ಹಸುರು ಛಾಯೆಯ ಬೂದು ಬಣ್ಣ, ಕೊಕ್ಕು ಹಳದಿ. ಮೇಲಿನ

ದವಡೆ ಸ್ವಲ್ಪಮಟ್ಟಿಗೆ ಕಪ್ಪು ಛಾಯೆಯನ್ನು ಪಡೆದಿದೆ. ಕಾಲು ಮತ್ತು ಬೆರಳುಗಳು ಹಳದಿ ಅಥವಾ ಕಪ್ಪು ಚುಕ್ಕೆಗಳಿಂದ ಕೂಡಿದ ಹಳದಿ ವರ್ಣವಾಗಿದೆ. ಆದರ್ಶ ತೂಕ ಹುಂಜ 6, ಹೇಂಟೆ 4½, ಮರಿಹುಂಜ 5, ಮರಿಹೇಂಟೆ 4 ಪೌಂಡುಗಳು.

ಅಧ್ಯಾಯ 3

ಒಂದು ತಳಿಯ ಆಯ್ಕೆ

ಕೋಳಿಸಾಕಾಣಿಕಾ ಕೇಂದ್ರದ ಏಳಿಗೆಗೆ ಸರಿಯಾದ ತಳಿಯ ಆಯ್ಕೆ ಪೂರ್ವಾಪೇಕ್ಷಿತವಾದುದು. ಸ್ವಾಭಾವಿಕವಾಗಿಯೇ ಅಭಿವೃದ್ಧಿ ಹೊಂದುತ್ತಿರುವ ಪ್ರತಿ ಒಬ್ಬ ಕೋಳಿಸಾಕಣೆದಾರನಿಗೆ 'ಯಾವ ತಳಿಯನ್ನು ಸಾಕಬೇಕು' ಎನ್ನುವ ಸಮಸ್ಯೆ ಎದುರಾಗುತ್ತದೆ. ಹೊಂದುವ ತಳಿಗಳ ಆಯ್ಕೆ ವೈಯಕ್ತಿಕ ಇಚ್ಛೆ ಮತ್ತು ಅವಶ್ಯಕತೆಗಳ ವಿಷಯ ಮಾತ್ರವಲ್ಲ, ಆದರೆ ಪರಿಸರ, ಸಂಗೋಪನಾ ಪರಿಸ್ಥಿತಿಗಳು, ಮಾರುಕಟ್ಟೆಯ ಅನುಕೂಲತೆಗಳು ಮತ್ತು ಸ್ಥಳೀಯ ಪೂರ್ವಾಗ್ರಹಗಳೇ ಮೊದಲಾದ ಅಂಶಗಳ ಅಡಚಣೆಯೊಳಗಿನ ಆಯ್ಕೆ. ಅನನುಭವಿಯು ಈ ಅತಿಮುಖ್ಯ ಅಂಶಗಳನ್ನು ಕೀಳಾಗಿ ಕಂಡು ಮೊಟ್ಟೆ ಇಡುವ ಶಕ್ತಿ ಅಥವಾ ವೈಯಕ್ತಿಕ ಅಭಿಲಾಷೆಗಳ ಮೇಲೆ ಆಯ್ಕೆಯನ್ನು ಮಾಡುವುದು ಸಹಜ. ಆದರೆ ಮಾಡಿದ ಆಯ್ಕೆ ತಪ್ಪು ಎಂಬುದನ್ನು ಮುಂದೆ ತಿಳಿದುಕೊಳ್ಳುತ್ತಾನೆ.

ಅವನ ಅವಶ್ಯಕತೆಗಳಿಗೆ ಹೊಂದುವಂತೆ ಆಯ್ಕೆಮಾಡಿಕೊಳ್ಳಲು ಹಲವಾರು ನಮೂನೆ, ತಳಿ, ವಿವಿಧತೆ ಮತ್ತು ವಿಭೇದಗಳಿರುವುದು ಕೋಳಿಸಾಕಣೆದಾರನ ಅದೃಷ್ಟ. ಆದ್ದರಿಂದ ಪ್ರತಿಯೊಬ್ಬ ಕೋಳಿಸಾಕಣೆದಾರನೂ ಬೇರೆ ಬೇರೆ ತಳಿಗಳ ಗುಣವಿಶೇಷಗಳು ಮತ್ತು ಸಾಧ್ಯತೆಗಳನ್ನು ತಿಳಿದಿರುವುದು ಸೂಕ್ತ. ಅನೇಕ ನಮೂನೆಗಳು ಮತ್ತು ತಳಿಗಳ ವಿವರಣೆ ಮತ್ತು ಸಾಮರ್ಥ್ಯಗಳನ್ನು ಎರಡನೇ ಅಧ್ಯಾಯದಲ್ಲಿಯೇ ವಿವರಿಸಲಾಗಿದೆ.

ಒಂದು ತಳಿಯ ಆಯ್ಕೆಯಲ್ಲಿ ಅತಿಮುಖ್ಯವಾದ ವಿಚಾರವೆಂದರೆ — ಅದು ಶುದ್ಧ ತಳಿಯಾಗಿರಬೇಕು ಮತ್ತು ಒಳ್ಳೆಯ ವಿಭೇದದ ಕೋಳಿಯಾಗಿರಬೇಕು. ಶುದ್ಧ ವಂಶದ ಗುಂಪನ್ನು, ಆಕಾರ, ಬಣ್ಣ ಮತ್ತು ಉತ್ಪಾದನೆಗಳಲ್ಲಿನ ಸಾಮ್ಯಕ್ಕೆ ಅವಲಂಬಿಸಬಹುದು; ಏಕೆಂದರೆ ಅವುಗಳನ್ನು ಪೀಳಿಗೆಯಿಂದ ಪೀಳಿಗೆಗೆ ಈ ಗುಣಗಳಿಗಾಗಿಯೇ ಅಭಿವೃದ್ಧಿಪಡಿಸಿರುತ್ತಾರೆ. ಉತ್ತಮವಾದ ಸಂಗೋಪನಾವಿಧಾನಗಳಿಂದ ಅಡ್ಡತಳಿಗಳೂ ಕೂಡ ಒಂದು ಮಿತಿಯೊಳಗೆ ತಮ್ಮ ಉತ್ಪಾದನೆಯನ್ನು ಹೆಚ್ಚಿಸುವ ನಿರೀಕ್ಷೆಯಿದ್ದರೂ ಸಹ, ಪೋಷಣೆಗೆ ಶುದ್ಧವಂಶಿ ಕೋಳಿಯಷ್ಟೇ ವೆಚ್ಚವಾಗುವ ಆದರೆ ಅದಕ್ಕಿಂತ ಸಾಕಷ್ಟು ಸಣ್ಣ ಪ್ರಮಾಣದ ಪ್ರತಿಫಲವನ್ನು ಕೊಡುವ ಅಡ್ಡತಳಿ ಅಥವಾ ಇಬ್ಬಂದಿ ಕೋಳಿಗಳೊಂದಿಗೆ ನಷ್ಟ ಸಂಭವಕ್ಕೆ ತಲೆಕೊಡುವುದರಲ್ಲಿ ಯಾವ ಅರ್ಥವೂ ಇಲ್ಲ. ಪ್ರತಿ ಒಂದು ತಳಿಯೂ ಹಲವಾರು ವಿಭೇದಗಳನ್ನು ಹೊಂದಿವೆ. ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಗಮನಕ್ಕೆ ತೆಗೆದುಕೊಂಡಲ್ಲಿ ಕೆಲವು ಉಳಿದವುಗಳಿಗಿಂತ ಅಧಿಕವಾಗಿ

ಹೆಚ್ಚು ಲಾಭದಾಯಕವಾದವು. ಒದಗಿಸುವ ಪರಿಸರಗಳಲ್ಲಿ ಅತಿ ಹೆಚ್ಚಿನ ಪ್ರತಿಫಲ ವನ್ನು ಕೊಡುವ ಶಕ್ತಿಯುಳ್ಳ ಅತ್ಯುತ್ತಮ ವಿಭೇದಗಳನ್ನು ಮಾತ್ರವೇ ಆಯ್ಕೆಮಾಡ ಬೇಕು. ಒಂದು ಅಥವಾ ಎರಡು ತಳಿಗಳಲ್ಲಿ ವಿಶೇಷ ಪರಿಶ್ರಮ ಪಡೆಯುವ ಸೂಕ್ತತೆಯ ಬಗ್ಗೆ ಎರಡು ಅಭಿಪ್ರಾಯವಿರುವುದು ಸಾಧ್ಯವೇ ಇಲ್ಲ. ತಳಿಗಳ ಸಂಖ್ಯೆಯನ್ನು ಮಿತ ಗೊಳಿಸುವುದರಿಂದ ವಸತಿ, ವಂಶಾಭಿವೃದ್ಧಿ ಮತ್ತು ಕೋಳಿಗಳ ಸಾಕಾಣಿಕೆಯ ತೊಡಕು ಸರಳವಾಗುತ್ತವೆ.

ತಳಿಯ ಆಯ್ಕೆ

ಮೊಟ್ಟೆ ಉತ್ಪಾದನೆಗಾಗಿ: ಸ್ವಾಭಾವಿಕವಾಗಿ ತಳಿಯ ಆಯ್ಕೆ ಉದ್ದೇಶವನ್ನು ಅವಲಂಬಿಸುತ್ತದೆ. ಬರೀ ಮೊಟ್ಟೆ ಉತ್ಪಾದನೆಯೇ ಗುರಿಯಾದಲ್ಲಿ, ಒಳ್ಳೆ ಮೊಟ್ಟೆ ಉತ್ಪಾದಕ ಕೋಳಿಯ ಗುಣಗಳಾದ, ಬೇಗ ವಯಸ್ಸಿಗೆ ಬರುವುದು, ದೃಢತೆ ಮತ್ತು ಆದರ್ಶಗಾತ್ರದ ಮೊಟ್ಟೆಗಳನ್ನು ಉತ್ಪಾದಿಸುವ ಸಾಮರ್ಥ್ಯ ಮೊದಲಾದವೆಲ್ಲವನ್ನು ಹೊಂದಿರುವ ತಳಿಗಳನ್ನು ಮಾತ್ರ ಪೋಷಿಸಬೇಕು. ಲೆಗ್‌ಹಾರ್ನ್‌ಗಳು ಒಳ್ಳೆಯ ಮೊಟ್ಟೆ ಉತ್ಪಾದಕಗಳು. ಪ್ರಚಲಿತ ಭಾರತದ ಪರಿಸ್ಥಿತಿಯ ಪ್ರಕರಣದಲ್ಲಿ ಆದರ್ಶ ಗಾತ್ರದ ಮೊಟ್ಟೆಯೆಂದರೆ $1\frac{1}{2}$ ಯಿಂದ 2 ಔನ್ಸ್ ತೂಗುತ್ತದೆ. ಎರಡು ಔನ್ಸ್‌ಗಿಂತ ಹೆಚ್ಚಿಗೆ ತೂಗುವ ಮೊಟ್ಟೆಗಳು ಉತ್ಪಾದನೆ, ವಿಶೇಷತಹ ಅವುಗಳ ಉತ್ಪಾದನೆ ಸಂಖ್ಯೆ ಗಳ ತ್ಯಾಗದಿಂದ ಆಗುವುದಾದರೆ ಅದರಿಂದ ಯಾವ ವಿಶೇಷ ಪ್ರಯೋಜನವೂ ಇಲ್ಲ. ಏಕೆಂದರೆ ಅವುಗಳು ತಮ್ಮ ಗಾತ್ರಕ್ಕೆ ಅನುಗುಣವಾಗಿ ಹೆಚ್ಚಿನ ಬೆಲೆಗೆ ಮಾರಾಟವಾಗುವ ಸಾಧ್ಯತೆಯಿಲ್ಲ.

ಆಹಾರೋದ್ದೇಶಕಾಗಿ: ಮಾಂಸ ಅಥವಾ ಆಹಾರ ತಳಿಗಳೆಂದು ವರ್ಗೀಕರಿಸಿದ ತಳಿಗಳಿವೆ. ನ್ಯೂಹ್ಯಾಂಪ್‌ಶೈರ್ ಈ ತರದ ಒಂದು ತಳಿ. ಇವು ಸಾಮಾನ್ಯವಾಗಿ ಸಾಕಷ್ಟು ಮಾಂಸಯುಕ್ತವಾದ ಭಾರವಾದ ಕೋಳಿಗಳು ಆದರೆ ಒಳ್ಳೆಯ ಉತ್ಪಾದಕ ವಲ್ಲ. ಅವುಗಳ ಸಾಕಾಣಿಕಾ ವೆಚ್ಚಕ್ಕೆ ತಕ್ಕ ಪ್ರತಿಫಲವನ್ನು ಕೊಡದೇ ಇರುವುದರಿಂದ ಇವು ಈ ದೇಶದಲ್ಲಿ ಹೆಚ್ಚು ಜನಪ್ರಿಯವಾಗಿಲ್ಲ.

ಉಭಯೋದ್ದೇಶ ತಳಿಗಳು: ಒಳ್ಳೆಯ ಮೊಟ್ಟೆ ಉತ್ಪಾದನೆಯ ಜೊತೆಗೆ ಆಹಾರೋದ್ದೇಶಕ್ಕೂ ಲಾಭದಾಯಕವಾಗಿರುವ ಉಭಯೋದ್ದೇಶದ ತಳಿಗಳು ಬಹಳ ಜನಪ್ರಿಯವಾದವುಗಳು. ರೋಡ್ ಐಲೆಂಡ್ ರೆಡ್ ಮತ್ತು ಆಸ್ಟ್ರಲಾರ್ಪ್‌ಗಳು ಉಭಯೋದ್ದೇಶ ತಳಿಗಳಿಗೆ ಉತ್ತಮ ಉದಾಹರಣೆಗಳು.

ಭಾರತಕ್ಕೆ ಆಹಾರಕೋಳಿಯ ಅತಿಸೂಕ್ತವಾದ ತೂಕ $3\frac{1}{2}$ ಯಿಂದ 4 ಪೌಂಡು ಗಳೆಂದು ಪರಿಗಣಿಸಬಹುದು. ಭಾರವಾದ ಕೋಳಿಗಿಂತ ಈ ತೂಕವುಳ್ಳ ಸಣ್ಣದಾದ, ಅಡಕವಾದ ಕೋಳಿ ಹೆಚ್ಚು ಮೆಚ್ಚುಗೆಯನ್ನು ಪಡೆಯುತ್ತದೆ. ಏಕೆಂದರೆ ಮೊದಲನೆಯ ದಾಗಿ ಇದು ಹೋಲಿಕೆಯಲ್ಲಿ ಕಡಮೆ ಬೆಲೆಯದಾಗಿರುವುದರಿಂದ ದೇಶದ ಸಾಮಾನ್ಯ

ಗ್ರಾಹಕನ ಮಿತಿಯೊಳಗಿರುತ್ತದೆ ಮತ್ತು ಎರಡನೆಯದಾಗಿ ಇದು ಸಾಮಾನ್ಯಗಾತ್ರದ ಸಂಸಾರದ ಒಂದು ಊಟಕ್ಕೆ ಬೇಕಾಗುವಷ್ಟು ಮಾಂಸವನ್ನು ಮಾತ್ರ ಒದಗಿಸುವುದರಿಂದ ಅಪವ್ಯಯವನ್ನು ತಪ್ಪಿಸುತ್ತದೆ. ಪಾಶ್ಚಾತ್ಯ ದೇಶಗಳಲ್ಲಿರುವಂತೆ ಶೀತ ಉಗ್ರಾಣ ಅನುಕೂಲತೆಗಳಿಲ್ಲದಿರುವುದರಿಂದ, ಕೋಳಿಸಾಕಣೆ ಮತ್ತು ಉಪಯೋಗದಲ್ಲಿ ಇದು ಅತಿಮುಖ್ಯವಾದ ಅಂಶ.


ಪರಿಸರದ ಅಂಶಗಳು: ಹವಾಮಾನ, ಮಣ್ಣು ಮತ್ತು ಸುತ್ತುಮುತ್ತಿನ ಸನ್ನಿವೇಶದಂತಹ ಪರಿಸರದ ಅಂಶಗಳು ಕೂಡ, ತಳಿಯ ಆಯ್ಕೆ ಮತ್ತು ನಿರ್ವಹಣಾ ತಂತ್ರಗಳ ಮೇಲೆ ಪ್ರಭಾವ ಬೀರುತ್ತವೆ. ಬಿಸಿಗಾಳಿಯ ಪ್ರದೇಶಗಳಲ್ಲಿ ಏಳಿಗೆ ಹೊಂದುವ ತಳಿಗಳು ತೇವಾಂಶವುಳ್ಳ ಪ್ರದೇಶಗಳಲ್ಲಿ ಏಳಿಗೆ ಹೊಂದಿರಬಹುದು. ಇದರಿಂದಾಗಿ ಸಮಶೀತೋಷ್ಣ ಹವಾಮಾನ ಮತ್ತು ಅತ್ಯುತ್ತಮ ಸಂಗೋಪನಾ ವಿಧಾನಗಳಲ್ಲಿ ಚೆನ್ನಾಗಿ ಏಳಿಗೆ ಹೊಂದುವ ತಳಿಗಳನ್ನು, ಬೇರೆ ಪ್ರದೇಶಕ್ಕೆ ಆ ಪ್ರದೇಶದ ವಿಶಿಷ್ಟ ಪರಿಸ್ಥಿತಿಗೆ ಇವುಗಳ ಹೊಂದಾಣಿಕೆ ಬಗ್ಗೆ ಪರೀಕ್ಷೆಮಾಡದೇ ತೆಗೆದುಕೊಂಡು ಹೋಗಬಾರದು.

ಸ್ಥಳೀಯ ಪೂರ್ವಾಗ್ರಹಗಳು: ಸಂಪೂರ್ಣವಾಗಿ ಸ್ಥಳೀಯ ರೀತಿಯ ಕೆಲವು ವಿಚಾರಗಳನ್ನು ಕೂಡ ತಳಿಗಳ ಬಗ್ಗೆ ತೀರ್ಮಾನಿಸುವಾಗ ಅಲಕ್ಷಿಸುವಂತಿಲ್ಲ. ಜನಸಂಖ್ಯೆ ಹೆಚ್ಚಾಗಿ ಶುದ್ಧ ಶಾಖಾಹಾರಿಗಳಿರುವ ಕೆಲವು ಪ್ರದೇಶಗಳಲ್ಲಿ ಮಾಂಸ ಮತ್ತು ಮೊಟ್ಟೆಯ ಉಪಯೋಗ ನಿಷಿದ್ಧ. ಇಂತಹ ಪ್ರದೇಶಗಳಲ್ಲಿ ಕೋಳಿಸಾಕಾಣಿಕೆ ಜಯಶೀಲ ಉದ್ಯಮವಾಗುವುದು ಸಾಧ್ಯವಿಲ್ಲ. ಇನ್ನೂ ಕೆಲವು ಪ್ರದೇಶಗಳಲ್ಲಿ ಕೋಳಿ ಮತ್ತು ಕೋಳಿ ಉತ್ಪನ್ನಗಳ ಉಪಯೋಗದ ಬಗ್ಗೆ ಯಾವ ಅಡ್ಡಿ ಇಲ್ಲದಿದ್ದರೂ, ಬಿಳಿ ಕೋಳಿಸಾಕಾಣಿಕೆಯ ವಿರುದ್ಧ ಅವುಗಳ ಗುಣಸಾಮರ್ಥ್ಯಗಳು ಏನೇ ಇದ್ದರೂ ಪೂರ್ವಾಗ್ರಹ ಇದೆ. ಈ ಪೂರ್ವಾಗ್ರಹ ದೇಶದಲ್ಲಿ ಕೋಳಿಗಳ ಸಾಮಾನ್ಯ ಶತ್ರುವಾದ ಮಾಂಸಾಹಾರಿ ಪಕ್ಷಿಗಳಿಂದ ವಿಶೇಷವಾಗಿ ಬಿಳಿಯ ಕೋಳಿಗಳು ಹೆಚ್ಚಿನ ಹಾನಿಯನ್ನನುಭವಿಸುತ್ತವೆ — ಎಂಬ ಭಯದಿಂದ ಉಂಟಾದುದು. ಹಳ್ಳಿಗಳಲ್ಲಿ ದೇಶಿ ಗುಂಪೂ ಸೇರಿದಂತೆ ಬಣ್ಣದ ಮತ್ತು ಬಿಳಿಯ ಕೋಳಿಗಳ ಗುಂಪಿನಲ್ಲಿ ಸಾಮಾನ್ಯವಾಗಿ ಬಿಳಿಯ ಕೋಳಿಗಳು ಸುಲಭವಾಗಿ ಬಲಿಯಾಗುತ್ತವೆ. ಬಹುಶಹ ಅವುಗಳು ಬಹಳ ಸುಲಭವಾಗಿ ಗುರುತಿಸಲ್ಪಡುವುದೇ ಇದಕ್ಕೆ ಕಾರಣವಾಗಿರಬೇಕು. ಇದು ಬಹುಮಟ್ಟಿಗೆ ಅತಿಶತೆಯ ಅಂಚಿಗೆ ಬಿಳಿಯ ಬಣ್ಣ ಅದೃಷ್ಟಹೀನ ಎಂಬ ನಂಬಿಕೆಯನ್ನುಂಟುಮಾಡಿದೆ. ಆದ್ದರಿಂದ ಕೋಳಿಸಾಕಾಣಿಕೆಕಾರರು ಬಿಳಿಬಣ್ಣದ ತಳಿಗಳನ್ನು ಆಯ್ಕೆಮಾಡಿಕೊಳ್ಳಲು ಹಿಂತೆಗೆಯುತ್ತಾರೆ. ಬಿಳಿ ಲೆಗ್‌ಹಾರ್ನ್ ವಿರುದ್ಧ ಪೂರ್ವಾಗ್ರಹವಿರುವ ಪ್ರದೇಶಗಳಲ್ಲಿ ಕಂದು ಲೆಗ್‌ಹಾರ್ನ್ ಜನಸಾಮಾನ್ಯರ ಒಪ್ಪಿಗೆಯನ್ನು ಪಡೆಯಬಹುದು. ಇದೇ ರೀತಿ ಕೆಲವು ಪ್ರದೇಶ ಅಥವಾ ಸ್ಥಳಗಳಲ್ಲಿ ಬಿಳಿಯ ಮೊಟ್ಟೆ, ಕಂದು ಅಥವಾ ಛಾಯೆಯಿಂದ ಕೂಡಿದ ಮೊಟ್ಟೆಗಳಷ್ಟು ಜನಪ್ರಿಯವಾಗಿಲ್ಲ ಮತ್ತು ಎರಡನೆಯದು ಮೊದಲನೆಯದಕ್ಕಿಂತ ಹೆಚ್ಚಿನ ಬೆಲೆ ದೊರಕಿಸಿಕೊಳ್ಳುತ್ತವೆ. ಇಂತಹ ಪ್ರದೇಶಗಳಲ್ಲಿ ಬಿಳಿಮೊಟ್ಟೆ ಇಡುವ ತಳಿ ಹಾನಿಕರ.

ಅಧ್ಯಾಯ 4

ಕೋಳಿಯ ರಚನೆ ಮತ್ತು ಮೊಟ್ಟೆಯ ನಿರ್ಮಾಣ

ರಚನಾತ್ಮಕವಾಗಿ ಕೋಳಿ ಆಸಕ್ತಿ ಉಂಟುಮಾಡುವ ಪ್ರಾಣಿ, ಮತ್ತು ಇದು ಅತಿಹೆಚ್ಚಿನ ವೈಶಿಷ್ಟ್ಯವುಳ್ಳ ಕಶೇರುಕಗಳಲ್ಲಿ ಒಂದು. ಬೇರೆ ಹಕ್ಕಿಗಳಂತೆಯೇ ಇದೂ



ಚಿತ್ರ 8: ಕೋಳಿಯ ದೇಹಭಾಗಗಳು (ಮಾರ್ಲೆ ಎ. ಫುಲ್. ಅವರ 'ಪೌಲ್ಟ್ರಿಹಸ್ಬೆಂಡ್ರಿ' ಇಂದ)

Points=ತುದಿಗಳು, Base=ಬುಡ, Blade=ಅಲಗು, Eye=ಕಣ್ಣು, Bomb=ಜುಟ್ಟು Ear=ಕಿವಿ, Beak=ಕೊಕ್ಕು, Earlobes=ಕಿವಿ ಹಾಲೆಗಳು, Wattles=ಜೋಲು ಮಾಂಸಲ, Hackle=ಹ್ಯಾಕಲ್, Sickles=ಕುಡುಗರಿ, Saddle Back Cape=ಬೆನ್ನು ಕೇಪ್, Main Tail=ಮುಖ್ಯ ಬಾಲ, Wingbow=ರೆಕ್ಕೆಪಟ್ಟಿ, Lesser Sickles=ಕಿರಿಕುಡುಗರಿ, Saddle Feathers=ಜೀನುಗರಿ, Primariesor Flight Feathers=ಪ್ರಾಥಮಿಕ ಅಥವಾ ಹಾರಾಟದಗರಿ, Wing Bar Secondaries=ರೆಕ್ಕೆ ಪಟ್ಟಿ ದ್ವಿತೀಯಗರಿ, Breast=ಎದೆ, Fluff=ತುಪ್ಪಳ, Body=ಶರೀರ, Thigh=ತೊಡೆ, Shank=ಕಾಲು, Hock=ಹಾಕ್, Spur=ಗಡುಸುಚಾಚು, Claw=ಪಂಜ


ಗರಿಗಳ ಹೊರಪದರವನ್ನು ಹೊಂದಿದೆ. ಹಲ್ಲುಗಳಿಲ್ಲ, ನೋಟಕ್ಕೆ ಗಿಡ್ಡನಾಗಿ 'ಕಾಲುಚೀಲ' ದಂತಿದೆ ಮತ್ತು ಕಾಲುಗಳ ಮೇಲೆ ಗಡುಸಾದ ಹೊರ ಚಾಚು ಇವೆ (ಚಿತ್ರ 8). ಬೇರೆ ಪಕ್ಷಿಗಳಿಂದ ಪ್ರತ್ಯೇಕಿಸುವ ಜುಟ್ಟು ಇದೆ. ಇದರ ಜೀವಾವಧಿ ಚಿಕ್ಕದು. ಉಸಿರಾಟ, ನಾಡಿ ಪ್ರಮಾಣ ಹೆಚ್ಚು ಮತ್ತು ವಯಸ್ಸಿಗೆ ಬಂದ ಕೋಳಿಗಳಲ್ಲಿ ದೇಹದ ಶಾಖ 105°F ಇಂದ 109°F.

ಗರಿಗಳು: ಗರಿಗಳು ಕೋಳಿಯನ್ನು ದೈಹಿಕ ಪೆಟ್ಟಿನಿಂದ ರಕ್ಷಿಸುತ್ತವೆ ಮತ್ತು ಶರೀರವನ್ನು ಬಿಸಿಯಾಗಿಡುತ್ತವೆ. ರೆಕ್ಕೆಯ ಗರಿಗಳು ಹಾರಾಟಕ್ಕೆ ಅವಶ್ಯಕ. ಕೋಳಿಯ ವಯಸ್ಸು ಮತ್ತು ಲಿಂಗವನ್ನವಲಂಬಿಸಿ ಗರಿಗಳು ಶರೀರದ ಶೇಕಡಾ 4 ರಿಂದ 9 ಭಾಗ ತೂಗುವುದರಿಂದ, ಸಾಮಾನ್ಯವಾಗಿ 'ಗರಿಯುದುರ್ಕು' ಎಂದು ಪ್ರಸಿದ್ಧಿ ಯಾಗಿರುವ ಪ್ರತಿ ವರ್ಷದ ಗರಿಗಳ ನವೀಕರಣ ಕೋಳಿಗೆ ಶಾರೀರಕವಾಗಿ ಹೆಚ್ಚಿನ ಶ್ರಮವನ್ನುಂಟು ಮಾಡುತ್ತದೆ.

ಚರ್ಮ: ಬಾಲಮೂಲದಲ್ಲಿರುವ ಒಂಟಿ ಎಣ್ಣೆ ಗ್ರಂಥಿಯನ್ನು ಬಿಟ್ಟರೆ ಉಳಿದ ಚರ್ಮವು ಗ್ರಂಥಿರಹಿತವಾಗಿದೆ. ಜುಟ್ಟು, ಜೋಲು ಮಾಂಸಲ, ಕಿವಿಹಾಲೆಗಳು ಹಾಗೂ ಕಾಲು ಮತ್ತು ಬೆರಳುಗಳ ಮೇಲಿರುವ ಶಲ್ಕಗಳ ಚರ್ಮದ ವಿಶೇಷ ಬೆಳವಣಿಗೆ ಅಥವಾ ಹೊರಚಾಚುಗಳು. 'ಲಿಪೋಕ್ರೋಮ್' ಎಂಬ ವರ್ಣದ್ರವ್ಯವು ತನ್ನ ಇರುವಿಕೆ ಯಿಂದ ಚರ್ಮಕ್ಕೆ ಹಳದಿ ಬಣ್ಣವನ್ನು ಕೊಡುತ್ತದೆ. ಇದರ ರಾಹಿತ್ಯವು ಬಿಳಿಬಣ್ಣಕ್ಕೆ ಎಡೆಗೊಡುತ್ತದೆ. ಹೊರಚರ್ಮದಲ್ಲಿನ ಮೆಲನಿನ್ ಎಂಬ ವರ್ಣದ್ರವ್ಯವು ಕಾಲುಗಳ ಕಪ್ಪು ಬಣ್ಣಕ್ಕೆ ಕಾರಣ.

ಅಸ್ಥಿಪಂಜರ: ಕೋಳಿಯ ಅಸ್ಥಿಪಂಜರ ಅಡಕವಾದುದು. ತೂಕದಲ್ಲಿ ಹಗುರ ವಾಗಿದ್ದರೂ ಬಹಳಗಟ್ಟಿ (ಚಿತ್ರ 9). ಅನೇಕ ಉದ್ದ ಎಲುವುಗಳು ಟೊಳ್ಳಾದುದರಿಂದ ಹಗುರವಾಗಿವೆ. ಅವುಗಳಲ್ಲಿ ಹಲವು ಎಲುವುಗಳು ಒಂದುಗೂಡಿ ಗಟ್ಟಿರಚನೆಗಳಾಗು ತ್ತವೆ. ಇವಕ್ಕೆ ಹಾರಾಟದಲ್ಲಿ ಉಪಯೋಗಿಸುವ ದೊಡ್ಡ ಸ್ನಾಯುಗಳು ಸೇರಿ ಕೊಂಡಿವೆ.

ಉಸಿರಾಟಕ್ರಮ: ಕೋಳಿಗಳ ಉಸಿರಾಟದ ಕ್ರಮ ಇತರ ಪ್ರಾಣಿ (ಸಸ್ತನಿ) ಗಳಿಂದ ಸಂಪೂರ್ಣವಾಗಿ ಬೇರೆಯಾಗುತ್ತದೆ. ಶ್ವಾಸಕೋಶಗಳು ಎದೆಯ ಗೋಡೆಗೆ ಗಟ್ಟಿ ಯಾಗಿ ಕಚ್ಚಿಕೊಂಡಿರುವುದರಿಂದ ವಿಸ್ತರಣಾ ಸಾಮರ್ಥ್ಯವಿಲ್ಲ. ಉಸಿರಾಟದ ಕ್ರಿಯಾ ಭಾಗ ನಿಶ್ವಾಸ (ಉಸಿರು ಹೊರಬಿಡುವುದು); ಆದರೆ ಸಸ್ತನಿಗಳ ಉಸಿರಾಟದಲ್ಲಿ ಹೆಚ್ಚು ಕಸುವಿನ ಭಾಗ ಉಚ್ವಾಸ (ಉಸಿರೆಳೆದುಕೊಳ್ಳುವುದು). ಶ್ವಾಸಕೋಶದ ಜೊತೆ ಹೊಂದಿಕೊಂಡಂತೆ ದೇಹದ ಎರಡು ಕಡೆಗಳಲ್ಲಿ ನಾಲ್ಕು ಜೊತೆ ಗಾಳಿ ಚೀಲಗಳಿವೆ. ಇವು ಕುತ್ತಿಗೆಯಿಂದ ಉದರದವರೆಗೆ ಹರಡಿಕೊಂಡಿವೆ. ಈ ಚೀಲಗಳು ಶ್ವಾಸಕೋಶ ದೊಳಕ್ಕೆ ಬಾಯಿತೆರೆದಿರುವುದಲ್ಲದೇ ಶರೀರದ ಹಲವಾರು ಉದ್ದ ಎಲುವುಗಳ ಪೊಳ್ಳಿ ನೊಳಕ್ಕೆ ಸಂಪರ್ಕಹೊಂದಿದೆ.



ಚಿತ್ರ 9: ಕೋಳಿಯ ಅಸ್ಥಿಪಂಜರ (ಮಾರ್ಲೆ ಎ. ಫುಲ್. ಅವರ 'ಪೌಲ್ಟ್ರಿಹಸ್ಬಂಡ್ರಿ' ಇಂದ)

Nasal=ಮೂಗೆಲುಬು, Lacrimal=ಕಂಬನಿಕ, Incisive=ಕಚ್ಚಿಲಬು, Quadrate=ನಾಲ್ಪಕ್ಕೆಲುಬು, Phlanges=ಬೆರಳೆಲಬು, Atlas=ಶಿರಾಧಾರ, Occipital=ಹೆಡತಲೆಯ Metacarpus=ಮೊಣಕಾಲುಮೂಳೆ, Mandible=ಕೆಳದವಡೆ, Ulna=ಮೊಣಕಾಲು ಮೂಳೆ, Epistropheus=ತಿರುಗಣಿಕ, Radius=ಅರೆಲುಬು, Humerus=ತೋಳ್ಮೂಳೆ, Scapula=ಹೆಗಲೆಲಬು, Ilium=ಟೊಂಕೆಲಬು, Clavicle=ಕೀಲಿಕ, Corcacoid=ಕಾಕೊಕ್ಕಿಯ, Pygosiyle=ಪೈಗೊಸೆಲ್, Femur=ತೊಡೆಮೂಳೆ, Ischium=ಕುಂಡೆ ಲಬು, Fubis=ಗುಂಜೆಲುಬು, Fibula=ಕೋಳಿಕಣ ಕಾಲೆಲುಬು, Petella=ಮಂಡಿಚಿಪ್ಪು, Sternom=ಎದೆಚಕ್ಕೆ, Tibia=ಕಣಕಾಲೆಲುಬು, Metatarsus=ಹಿಮ್ಮೊಳಕಾಲ್ಮೂಳೆ

ಕೋಳಿಯ ಧ್ವನಿ ಉಸಿರ್ನಾಳದ ಕವಲಿನಲ್ಲಿರುವ, ಕೆಳ ಧ್ವನಿ ನಾಳ ಅಥವಾ ಸಿರಿಂಕ್ ನಲ್ಲಿ ಉತ್ಪತ್ತಿಯಾಗುತ್ತದೆ.

ಪಚನಕ್ರಮ: ಕೋಳಿಯ ಪಚನಕ್ರಮ ಅನ್ನನಾಳ ಮತ್ತು ಅನುಶಂಗಿಕ ಅವಯವಗಳನ್ನೊಳಗೊಂಡಿದೆ. ಕೆಲವು ಅಂಶಗಳಲ್ಲಿ ಇದು ಸಸ್ತನಿಗಳ ಪಚನ ಕ್ರಮದಿಂದ ಗಣನೀಯವಾಗಿ ಬೇರೆಯಾಗುತ್ತದೆ. ಹಲ್ಲುಗಳಿಲ್ಲ. ಅದಕ್ಕೆ ಬದಲಾಗಿ ಕೋಳಿಗೆ ಕೊಂಬಿನಂತಹ ಕೊಕ್ಕು ಮತ್ತು ಗಿಸರ್ಡ್ ಇವೆ, ಮೊದಲನೆಯದು ಸ್ವಾಭಾವಿಕ ಆಹಾರವನ್ನು ಒಡೆಯಲು ಹಾಗೂ ಎರಡನೆಯದು ಆಹಾರವನ್ನು ಪುಡಿಮಾಡಲು ಉಪಯೋಗಿಸಲ್ಪಡುತ್ತದೆ. ಪ್ರಾಣ್ನಾಳ ಸ್ಥಿತಿಸ್ಥಾಪಕತ್ವವುಳ್ಳ ನಾಳ, ಇದು ಎರೆಚೀಲವಾಗಿ ವಿಕಾಸಹೊಂದಿದೆ ಮತ್ತು ಗ್ರಂಥಿಯುಕ್ತ ಜಠರದೊಳಕ್ಕೆ ತೆರೆಯುತ್ತದೆ. ಎರೆಚೀಲವು ಆಹಾರಸಂಗ್ರಾಹಕ ಚೀಲವಾಗಿ ಕೆಲಸಮಾಡುತ್ತದೆ ಮತ್ತು ಕೋಳಿಗಳು ಹೆಚ್ಚಿನ ಆಹಾರ ಸೇವಿಸಲು ಸಹಾಯಮಾಡುತ್ತದೆ. ಗಿಸರ್ಡ್ ಒಂದು ಮುಖ್ಯವಾದ ಅಂಗ. ಕೋಳಿಯು ಸೇವಿಸಿದ ಆಹಾರಕ್ಕೆ ತಕ್ಕಂತೆ ಇದರ ಸ್ಥಿತಿ ವ್ಯತ್ಯಾಸ ಹೊಂದುತ್ತದೆ. ಬರೀಪುಡಿ ಆಹಾರವನ್ನೇ ಕೊಟ್ಟು ಪೋಷಿಸಿದ ಕೋಳಿಗಳು, ಹೆಚ್ಚಿಗೆ ಗಟ್ಟಿಧಾನ್ಯಗಳನ್ನು ಆಹಾರವನ್ನಾಗಿ ಪಡೆಯುವ ಕೋಳಿಗಳಿಗಿಂತ ಮೃದುವಾದ ಮತ್ತು ಕಡಮೆ ಸ್ನಾಯು ಯುಕ್ತವಾದ ಗಿಸರ್ಡ್ ಹೊಂದಿರುತ್ತದೆ.

ಅನ್ನನಾಳದ ಹೆಚ್ಚಿನ ಭಾಗ ಸಣ್ಣ ಕರುಳುಗಳು ಮತ್ತು ದೊಡ್ಡ ಕರುಳುಗಳಿಂದಾಗಿದೆ. ಸಣ್ಣ ಕರುಳಿನ ಮೊದಲನೆಯ ಭಾಗವನ್ನು ದುರಾರ್ಗರುಳು ಎಂದು ಕರೆಯುತ್ತಾರೆ. ಇದರೊಳಕ್ಕೆ ದುರಾರ್ಗರುಳ ವಂಕಿಯ ನಡುವೆ ಇರುವ ಮಾಂಸಲ ಗ್ರಂಥಿಯ ಎರಡು ನಾಳಗಳು ತೆರೆಯುತ್ತವೆ. ಈಲಿಯು ದುರಾರ್ಗರುಳಿನೊಂದಿಗೆ ಎರಡು ಅಥವಾ ಮೂರು ನಾಳಗಳ ಮೂಲಕ ಸಂಪರ್ಕ ಹೊಂದಿದೆ, ಇವುಗಳಲ್ಲಿ ಒಂದು ಈಲಿಯಿಂದ ಸ್ರವಿಸಲ್ಪಟ್ಟ ಪಿತ್ತವನ್ನು ದಾಸ್ತಾನುಮಾಡುವ ಪಿತ್ತಕೋಶದೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಪ್ಲೀಹ ಒಂದು ಸಣ್ಣ ಕೆಂಪು ಮಿಶ್ರಿತ ಕಂದುಬಣ್ಣದ ಅಂಗ, ಇದು ಗ್ರಂಥಿಯುಕ್ತ ಜಠರ, ಗಿಸರ್ಡ್ ಮತ್ತು ಈಲಿಗಳ ನಡುವಿನ ತ್ರಿಕೋನಾಕಾರದಲ್ಲಿದೆ.

ಮುರಿಮೂಗರುಳಿನ ಕವಾಟವು ಸಣ್ಣ ಮತ್ತು ದೊಡ್ಡ ಕರುಳುಗಳು ಕೂಡುವ ಜಾಗದಲ್ಲಿದೆ. 4 ರಿಂದ 6 ಅಂಗುಲ ಉದ್ದದ ಎರಡು ಮೂಗರಳುಗಳು ಮುರಿಮೂಗರಳ ಕವಾಟದಿಂದ ಉದ್ಭವಿಸುತ್ತವೆ. ದೊಡ್ಡಕರುಳು ಹೋಲಿಕೆಯಲ್ಲಿ ಮೋಟಾಗಿದೆ ಮತ್ತು ಗುದಕ್ಕೆ ಮುನ್ನಡೆಯುತ್ತದೆ. ಇದರೊಳಕ್ಕೆ ಮೂತ್ರಜನಕಾಂಗಗಳಿಂದ ಮೂತ್ರನಾಳಗಳು ಮತ್ತು ಜನನೇಂದ್ರಿಯ ನಾಳಗಳು ತೆರೆಯುತ್ತವ. ಗುದವಾದ ತಕ್ಷಣ ಅನ್ನನಾಳದ ಕೊನೆಯ ಭಾಗವಾದ ದ್ವಾರವಿದೆ.

ಮೂತ್ರ ವಿಸರ್ಜನಾಕ್ರಮ: ಮೂತ್ರವಿಸರ್ಜನಾ ಕ್ರಮವು, ಒಂದೊಂದರಲ್ಲೂ ಮೂರು ಹಾಲೆಗಳಿರುವ ಎರಡು ಮೂತ್ರ ಜನಕಾಂಗಗಳಿಂದಾಗಿದೆ. ಇವು ಕಟ್ಟಸ್ಥಿ

ವಲಯದ ಕೆಳಗೆ ಹೂತುಕೊಂಡಿವೆ. ಪ್ರತಿ ಮೂತ್ರಜನಕಾಂಗದಿಂದಲೂ ಮೂತ್ರವು ಮೂತ್ರನಾಳದ ಮೂಲಕ ಗುದಕ್ಕೆ ವಿಸರ್ಜಿಸಲ್ಪಡುತ್ತದೆ. ಕೋಳಿಗಳಲ್ಲಿ ಮೂತ್ರವು ಮಲದೊಂದಿಗೇ ಹೊರದೂಡಲ್ಪಡುತ್ತದೆ. ಸಸ್ತನಿಗಳಲ್ಲಿರುವಂತೆ ದ್ರವಮೂತ್ರ ಹಾಗೆಯೇ ಹೊರಬರುವುದಿಲ್ಲ.

ಸಂತಾನೋತ್ಪತ್ತಿ ಕ್ರಮ: ಗಂಡಿನಲ್ಲಿ ಸಂತಾನೋತ್ಪತ್ತಿ ಕ್ರಮವು ಒಂದು ಜೊತೆ ವೃಷಣಗಳನ್ನೊಳಗೊಂಡಿದೆ, ಒಂದೊಂದು ವೃಷಣವೂ ಒಂದೊಂದು 'ಶುಕ್ರವಾಹಿಕ' ವೆಂಬ ನಾಳದ ಮೂಲದ ಗುದದೊಂದಿಗೆ ಸಂಪರ್ಕ ಹೊಂದುತ್ತದೆ. ವೃಷಣಗಳು ಸಣ್ಣಗೆ, ಅಂಡಾಕಾರವಾಗಿ, ತುದಿಮೊನಚಾಗಿ ಇರುವ ಹಳದಿ ಮಿಶ್ರಿತ ಬಿಳಿ ಅಂಗಗಳು, ಇವುಗಳು ಮೂತ್ರಜನಕಾಂಗದ ಮುಂತುದಿಯಲ್ಲಿ ಸ್ಥಾನೀಕರಿಸಿವೆ. ಸಾಮಾನ್ಯವಾಗಿ ಎಡ ವೃಷಣವು, ಬಲ ವೃಷಣಕ್ಕಿಂತ ಉದ್ದವಾಗಿರುತ್ತದೆ. ಸಂತಾನೋತ್ಪಾದಕ ಕೋಶ ಅಥವಾ ಶುಕ್ರಾಣು ವೃಷಣದಲ್ಲಿ ಉತ್ಪಾದಿಸಲ್ಪಡುತ್ತದೆ, ಅದು ಇಲ್ಲಿಂದ ಶುಕ್ರವಾಹಿಕಕ್ಕೆ ಸಾಗುತ್ತದೆ ಮತ್ತು ಅಲ್ಲಿ ಚಲನಶಕ್ತಿ ಪಡೆಯುತ್ತವೆ. ಶುಕ್ರವಾಹಿಕವು ನೇರವಾಗಿ, ಗುದದಲ್ಲಿರುವ ಆದ್ಯವಸ್ಥ ಸಂಭೋಗನಾ ಅಂಗದ ಕಾಲುವೆಯ ಮೇಲಿನ ಸಣ್ಣನಾಳ ಗಳಿಗೆ ತೆರೆಯುತ್ತದೆ.

ಹೆಣ್ಣಿನಲ್ಲಿ ಮೊಟ್ಟೆ ರಚನಾ ಅಂಗಗಳು ಮುಖ್ಯವಾಗಿ ಅಂಡಾಶಯ ಹಾಗೂ ಅಂಡವಾಹಿಗಳಿಂದಾಗಿದೆ. ಸಾಮಾನ್ಯವಾಗಿ ಅಂಡಾಶಯ ಒಂಟಿ, ಶರೀರದ ಎಡಪಾರ್ಶ್ವ ದಲ್ಲಿ, ಬೆನ್ನುಮೂಳೆಗೆ ಹತ್ತಿರವಾಗಿ, ಶ್ವಾಸಕೋಶದ ಹಿಂದುಗಡೆ ಸ್ಥಾನೀಕರಿಸಿದೆ. ಹಾಗಿದ್ದರೂ ಸಹ ಕೆಲವು ಕೋಳಿಗಳು ಎರಡು ಅಂಡಾಶಯ ಮತ್ತು ಅಂಡವಾಹಿಗಳನು ಹೊಂದಿರುವುದು ಯಾವಾಗಲಾದರೊಮ್ಮೆ ಕಂಡುಬರುತ್ತದೆ.

ಅಂಡಾಶಯವು ರಚನೆಯಲ್ಲಿ ದ್ರಾಕ್ಷಿಯ ಗೊಂಚಲಿನಂತೆ ಕಾಣುತ್ತದೆ, ಮತ್ತು ಕ್ರಿಯೆಯಲ್ಲಿದ್ದಾಗ ಬಣ್ಣ ಸ್ವಲ್ಪಮಟ್ಟಿಗೆ ಹಳದಿ ಮಿಶ್ರವಾಗಿರುತ್ತದೆ. ಇದರೊಳಗೆ, ಅತಿ ಸೂಕ್ಷ್ಮ ಚುಕ್ಕೆಯಿಂದ ಸಾಮಾನ್ಯ ಗಾತ್ರದ ಮೊಟ್ಟೆಯೊಳಗಿನ ಬಂಡಾರ ಗಾತ್ರದ ಹಲವಾರು ಬಂಡಾರಗಳು ಅಥವಾ ಅಂಡಗಳು ಇವೆ. ಒಂದೇ ಕೋಳಿಯ ಅಂಡಾಶಯ ದಲ್ಲಿ 3600 ರವರೆಗೆ, ಬಂಡಾರ ಅಥವಾ ಅಂಡಗಳಿರುವುದು ಕಂಡುಬಂದಿದೆ. ಪ್ರತಿ ಅಂಡವೂ ಕೂಪ ಎಂಬ ಚೀಲದ ಹೊದಿಕೆಯನ್ನು ಹೊಂದಿದೆ ಮತ್ತು ಪೂರ್ಣ ಗಾತ್ರದ ಬಂಡಾರವಾಗಿ ಅಭಿವೃದ್ಧಿ ಹೊಂದುವ ಶಕ್ತಿಯನ್ನು ಹೊಂದಿದೆ. ಅಂಡವು ತನ್ನ ಸಂಪೂರ್ಣ ಗಾತ್ರವನ್ನು ಮುಟ್ಟಿದಾಗ ಕೂಪವು ಒಡೆದು ಬಂಡಾರವು ಹೊರಹೋಗಲು ಬಿಡುತ್ತದೆ.

ಅಂಡವಾಹಿಯು ಉದ್ದವಾದ, ಬಿಳಿಯಾದ, ಸುರುಳಿಸುತ್ತಿಕೊಂಡಿರುವ ಕೊಳವೆ, ಉದರದ ಎಡ ಅರ್ಧದ ಬಹುಭಾಗವನ್ನು ಆಕ್ರಮಿಸಿಕೊಂಡು ಅಂಡಾಶಯದಿಂದ ಗುದದವರೆಗೆ ಇದೆ. ಈ ನಾಳದ ಮುಂತುದಿ ಆಲಿಕೆಯ ಆಕಾರದಲ್ಲಿದೆ. ಅಂಡವು

ಹೊರದೂಡಲ್ಪಟ್ಟ ಕೂಡಲೇ ಅದನ್ನು ಸ್ವೀಕರಿಸಲು ಈ ಆಲಿಕೆಯು ಅಂಡಾಶಯದ ಕೆಳಗೆ ಹರಡಿಕೊಂಡಿದೆ. ಅಂಡವಾಹಿಯ ಹಿಂತುದಿಯಿಂದ ಗುದದ ರಚನೆಯಾಗುತ್ತದೆ. ಇದರ ಮೂಲಕ ಮೊಟ್ಟೆ ಹೊರದೂಡಲ್ಪಡುತ್ತದೆ. ಅಂಡವಾಹಿಯ ಆಲಿಕೆ ಅಥವಾ ಕೀಪ, ತಲೆಗ ಅಥವಾ ಅಲ್ಬುಮಿನ್ ಸ್ರವಿಸುವ ಭಾಗ, ಕಿಗ್ಗತ್ತು ಗರ್ಭಾಶಯ ಮತ್ತು ಯೋನಿ ಎಂಬ ಐದು ವಿಭಿನ್ನ ಭಾಗಗಳಿಂದಾಗಿದೆ.

ಮೊಟ್ಟೆಯ ನಿರ್ಮಾಣ

ಮೊಟ್ಟೆಯ ಹಳದಿ ಎಂದು ಪರಿಚಿತವಾಗಿರುವ ಬಂಡಾರವು ತನ್ನ ಜನೆ ಪೊರೆ ಎಂಬ ತೆಳುವಾದ ಹೊರ ಪೊರೆಯೊಂದಿಗೆ ಅಂಡವನ್ನು ರಚಿಸುತ್ತದೆ. ಜನೆಪೊರೆಯ ಕೆಳಗೆ, ಅಂಡದ ಮೇಲ್ಪದರದಲ್ಲಿ ಹೂತುಕೊಂಡಂತೆ ಬೀಜ ಬಿಂದು ಇದೆ.


ಪ್ರತಿ ಬಂಡಾರವೂ ಕೂಪವೆಂಬ ಪೊರೆಚೀಲದಿಂದ ಸುತ್ತುವರಿಯಲ್ಪಟ್ಟಿದೆ. ಬಂಡಾರವು ಗಾತ್ರದಲ್ಲಿ ದೊಡ್ಡದಾದಂತೆ ಕೂಪವೂ ಹಿಗ್ಗುತ್ತದೆ. ಬಂಡಾರವು ಹೊರ ಬೀಳಲು ಸಿದ್ಧವಾದ ಕೂಡಲೇ ಕೂಪವು ಒಡೆಯುತ್ತದೆ. ಈ ರೀತಿ ಹೊರಬಿದ್ದ ಬಂಡಾರವು ಅಂಡವಾಹಿಯ ಆಲಿಕೆಯಾಕಾರದ ಬಾಯಿಂದ ಹಿಡಿಯಲ್ಪಡುತ್ತದೆ. ಮತ್ತು ಈ ರೀತಿ ಸಾಗುವಾಗ ಮೊಟ್ಟೆಯಲ್ಲಿ ಕಾಣಬರುವ ಬಿಳಿಲೋಳೆಯ ಶೇಕಡಾ 50ರಷ್ಟು ಭಾಗ, ಈ ನಾಳದ ಮೇಲಿನ ಭಾಗದಲ್ಲಿ ಸ್ಥಾನೀಕರಿಸಿರುವ ಗ್ರಂಥಿಗಳಿಂದ ಸ್ರವಿಸಲ್ಪಡುತ್ತದೆ. ಇದು ಗಟ್ಟಿ ಅಥವಾ ಸಾಂದ್ರ ಬಿಳಿ ಲೋಳೆ. ಇದಲ್ಲದೆ ಬಂಡಾರ ವನ್ನು ಮೊಟ್ಟೆಯೊಳಗೆ ಅದರ ಸ್ಥಾನದಲ್ಲಿ ಹಿಡಿದಿಡುವ ಎರಡು ಸುರುಳಿಸುತ್ತಿದ ರಜ್ಜುಗಳು ಅಥವಾ ಛಲಸೆಗಳೂ ಇಲ್ಲಿಯೇ ರಚನೆಯಾಗುತ್ತವೆ.

ಚಿಪ್ಪಿನ ಪೊರೆ ನಂತರದಲ್ಲಿ ರಚನೆಯಾಗುತ್ತದೆ, ಈ ಕಾರ್ಯವು ಕಿಗ್ಗತ್ತಿನಲ್ಲಿ ಆಗುತ್ತದೆ. ಇಲ್ಲಿಯೇ ಮಿಕ್ಕ ತೆಳುವಾದ ಬಿಳಿಲೋಳೆ ಸ್ರವಿಸಲ್ಪಡುತ್ತದೆ ಮತ್ತು ಹೊರಚಿಪ್ಪು ಕೂಡಿಕೊಳ್ಳುತ್ತದೆ. ಮೊಟ್ಟೆಯು ಯೋನಿಯನ್ನು ತಲುಪುವ ಹೊತ್ತಿಗೆ ಇದರ ರಚನೆ ಸಂಪೂರ್ಣವಾಗಿರುತ್ತದೆ. ಈ ರೀತಿ ಪೂರ್ಣಗೊಂಡ ಮೊಟ್ಟೆಯು ನಂತರ ಗುದದ ಮೂಲಕ ಹೊರದೂಡಲ್ಪಡುತ್ತದೆ.

ಗಟ್ಟಿ ಬಿಳಿ ಲೋಳೆ ಸ್ರವಿಸುವ ಅಂಡವಾಹಿಯ ಭಾಗವನ್ನು ಕ್ರಮಿಸಲು ಅಂಡಕ್ಕೆ ಸುಮಾರು 3 ಘಂಟೆಗಳು ಬೇಕಾಗುತ್ತದೆ. ಇದು ಕಿಗ್ಗತ್ತಿನಲ್ಲಿ ಸುಮಾರು 1 ಘಂಟೆ ಹಾಗೂ ಗರ್ಭಾಶಯ ಮತ್ತು ಯೋನಿಯಲ್ಲಿ 18 ರಿಂದ 22 ಘಂಟೆ ಕಾಲ ಕಳೆಯು ತ್ತದೆ. ಇಲ್ಲಿ ಗುದದ ಮೂಲಕ ಹೊರದೂಡುವ ಮೊದಲು ಮೊಟ್ಟೆಯ ಚಿಪ್ಪು ಮತ್ತು ಚಿಪ್ಪು ವರ್ಣದ್ರವ್ಯಗಳು ನಿರ್ಮಾಣವಾಗುತ್ತವೆ. ಒಟ್ಟಿನಲ್ಲಿ ಕೂಪ ಒಡೆದು ಅಂಡವು ಹೊರಬಂದಾಗಿನಿಂದ ಪೂರ್ಣಗೊಂಡ ಮೊಟ್ಟೆಯು ಹೊರಬರುವುದಕ್ಕೆ 22 ರಿಂದ 26 ಘಂಟೆ ಬೇಕಾಗುತ್ತದೆ.

ಮೊಟ್ಟೆ,ಆಹಾರ ಪದಾರ್ಥ ಒಂದೇ ಅಲ್ಲದೆ ಅನುಕೂಲ ಸ್ಥಿತಿಯಲ್ಲಿ ಅಭಿವೃದ್ಧಿ ಹೊಂದಿ ಸ್ವತಂತ್ರ ಜೀವವನ್ನು ಉತ್ಪಾದಿಸುವ ಸಾಮರ್ಥ್ಯದಿಂದ ನಿಸರ್ಗದ ಆಶ್ಚರ್ಯಕರ ವಸ್ತುಗಳಲ್ಲಿ ಒಂದು.

ಮೊಟ್ಟೆ ಅಸಮವಾಗಿ ಅಂಡಾಕಾರವಾಗಿದೆ. ಅಂದರೆ, ಒಂದು ತುದಿ ಮತ್ತೊಂದಕ್ಕಿಂತ ಅಗಲವಾಗಿ ಸ್ವಲ್ಪಮಟ್ಟಿಗೆ ಮಟ್ಟಸವಾಗಿದೆ. ಅತಿ ಹೆಚ್ಚಿನ ವ್ಯಾಸ ಅಗಲವಾದ ತುದಿಗೆ ಸಮೀಪವಾಗಿದೆ. ಎರಡು ತುದಿಗಳಲ್ಲಿನ ಆಕಾರದ ವ್ಯತ್ಯಾಸ ಭ್ರೂಣದ ಅಭಿವೃದ್ಧಿ ಮತ್ತು ಮೊಟ್ಟೆ ಒಡೆಯುವಿಕೆಯಲ್ಲಿ ಸಾಕಷ್ಟು ಪ್ರಾಮುಖ್ಯತೆಯನ್ನು ಹೊಂದಿದೆ.



ಚಿತ್ರ 10: ಮೊಟ್ಟೆ ರಚನೆ (ಕೃಷಿ ಮತ್ತು ಮೀನುಗಾರಿಕೆ ಮಂತ್ರಾಲಯ, ಲಂಡನ್ ಅವರ ಲಘು ಪ್ರಕಟಣೆ 148 ರಿಂದ)

Shell=ಚಿಪ್ಪು, Yolk=ಬಂಡಾರ, Blastodern=ನೆನೆಚರ್ಮ, Vitellin membrane=ವಿಟಿಲಿನ್‌ಪರೆ, Outer Thin White=ಹೊರತೆಳು ಬಿಳಿ, Chalaziferous Layer=ಛಲಜಪರೆ, Thick White=ದಟ್ಟ ಬಿಳಿ ಲೋಳೆ, Shell Membranes=ಚಿಪ್ಪುಪರೆಗಳು, Innerwhite=ಒಳ ತೆಳು ಬಿಳಿ ಲೋಳೆ, Air Space=ಗಾಳಿಗೂಡು, Chalaza=ಛಲಜ

ಮೊಟ್ಟೆಯ ರಚನೆ

ಚಿತ್ರ 10 ಮೊಟ್ಟೆಯ ರಚನೆಯನ್ನು ಚಿತ್ರೀಕರಿಸುತ್ತದೆ. ಮೊಟ್ಟೆಯ ಒಟ್ಟು ತೂಕಕ್ಕೆ ಪ್ರಮಾಣಾನುಗುಣವಾಗಿ ಮೂಲಘಟಕಗಳ ತೂಕ: ಚಿಪ್ಪು ಮತ್ತು ಚಿಪ್ಪಿನ ಪೊರೆಗಳು ಶೇಕಡಾ 12 ಭಾಗ, ಬಿಳಿ ಲೋಳೆ ಮತ್ತು ಛಲಸೆ ಶೇಕಡಾ 56 ಭಾಗ ಮತ್ತು ಬಂಡಾರ ಶೇಕಡಾ 32 ಭಾಗ.

ಸಾಂದ್ರಬಿಳಿಯ ಪದರದಲ್ಲಿ ಕೊನೆಗೊಳ್ಳುತ್ತದೆ. ಬಿಳಿ ಲೋಳೆಯ ಕೆಲಸಗಳು ಎರಡು (1) ಆಘಾತಹೀರುಕವಾಗಿ ವರ್ತಿಸಿ ಭ್ರೂಣ ಮತ್ತು ಬಂಡಾರವನ್ನು ಹಾನಿಯಿಂದ ರಕ್ಷಿಸುತ್ತದೆ, ಮತ್ತು (2) ಬೆಳೆಯುತ್ತಿರುವ ಭ್ರೂಣಕ್ಕೆ ಆಹಾರದ ಮೂಲವಾಗಿಯೂ ವರ್ತಿಸುತ್ತದೆ. ಛಲಸೆ ಹೆಚ್ಚಿನ ಅಘಾತ ಹೀರುಕವಾಗಿ ವರ್ತಿಸುತ್ತದೆ ಮತ್ತು ತೆಳು ಬಿಳಿಯ ಒಳಪದರದೊಳಗೆ ಬಂಡಾರದ ಸರಿಯಾದ ಸ್ಥಾನವನು ರಕ್ಷಿಸುವಲ್ಲಿ ಅತಿಮುಖ್ಯ ಪಾತ್ರವಹಿಸುತ್ತದೆ.

ಬಂಡಾರ: ಮೊಟ್ಟೆಯ ಘಟಕಗಳಲ್ಲಿ ಸ್ತ್ರೀ ಬೀಜಕೋಶವನ್ನು ಬಿಟ್ಟರೆ ಅಂಡಾಶಯದಿಂದ ಉದ್ಭವಿಸಿರುವುದು ಬಂಡಾರ ಮಾತ್ರ, ಬಿಳಿ ಲೋಳೆ, ಚಿಪ್ಪಿನ ಪೊರೆಗಳು ಮತ್ತು ಚಿಪ್ಪು ಅಂಡವಾಹಿಯಲ್ಲಿ ಮೊಟ್ಟೆ ಸಾಗುತ್ತಿದ್ದಂತೆಯೇ ನಿರ್ಮಾಣವಾಗುತ್ತವೆ. ಬಂಡಾರವು ಸ್ತ್ರೀ ಬೀಜಕೋಶ ಮತ್ತು ಆಹಾರಪದಾರ್ಥಗಳ ಸಂಪದ್ಭರಿತ ಉಗ್ರಾಣವನ್ನು ಹೊಂದಿದೆ. ಇವೆಲ್ಲವೂ ಜನಪೊರೆಯಿಂದ ಪರಿವೇಷ್ಟನ ಹೊಂದಿವೆ. ಸ್ತ್ರೀ ಬೀಜಕೋಶ ಎಲ್ಲಾ ಮೊಟ್ಟೆಯೊಳಗೂ ಇರುತ್ತದೆ. ಆದರೆ ಗಂಡು ಬೀಜಕೋಶ ಅಥವಾ ರುತ್ರದಿಂದ ಫಲೀಕರಣ ಹೊಂದಿದಾಗ ಮಾತ್ರ ಚೇತನಹೊಂದಿ ಅಭಿವೃದ್ಧಿ ಹೊಂದುವ ಶಕ್ತಿಯನ್ನು ಪಡೆಯುತ್ತದೆ. ಆದ್ದರಿಂದ ಫಲೀಕೃತ ಮೊಟ್ಟೆಗಳು ಮಾತ್ರ ಕಾವುಕೊಟ್ಟು ಮರಿಮಾಡಲು ಬೆಲೆಬಾಳುವವು. ಸ್ವಚ್ಛ ಅಥವಾ ಅಫಲೀಕೃತ ಮೊಟ್ಟೆಗಳು ಕೋಳಿಮರಿಗಳಾಗಿ ಅಭಿವೃದ್ಧಿ ಹೊಂದಲಾರವು. ಆದ್ದರಿಂದ ಅವುಗಳನ್ನು ಸಾಧ್ಯವಾದಷ್ಟು ಬೇಗ ಉಪಯೋಗಿಸಿಬಿಡಬೇಕು.

ಅಧ್ಯಾಯ 5

ಕೋಳಿ ತಳಿಎಬ್ಬಿಸುವಿಕೆ

ಸೂತ್ರಗಳು ಮತ್ತು ಆಚರಣೆಗಳು

ವೈಜ್ಞಾನಿಕವಾಗಿ ಕೋಳಿ ತಳಿಎಬ್ಬಿಸುವಿಕೆ ಇತ್ತೀಚಿನ ಒಂದು ಬೆಳವಣಿಗೆ; ಸಂತಾನೋತ್ಪತ್ತಿ ಮತ್ತು ಸಾಕುಕೋಳಿಗಳನ್ನು ಉತ್ತಮಗೊಳಿಸುವಿಕೆಗಳು ಇದರ ಉದ್ದೇಶಗಳು. ಮೊಟ್ಟೆಗಳ ಸಂಖ್ಯೆ ಮತ್ತು ಗಾತ್ರದ ದೃಷ್ಟಿಯಲ್ಲಿ ನವೀನ ಕೋಳಿಗಳು ತಮ್ಮ ಪೂರ್ವಿಕರಿಗಿಂತ ಮೇಲ್ಮಟ್ಟದ ಉತ್ಪಾದನಾ ಸಾಮರ್ಥ್ಯ ಹೊಂದಿರುವುದಕ್ಕೆ ಈ ಕಾರಣಗಳನ್ನು ಕೊಡಬಹುದು (1) ಪರಿಸರ ಮತ್ತು (2) ಉತ್ತಮೀಕರಿಸಿದ ತಳಿಎಬ್ಬಿಸುವ ವಿಧಾನಗಳು. ಕೋಳಿಗಳು ತಮ್ಮ ಅನುವಂಶೀಯ ಗುಣಗಳ ಅತ್ಯುನ್ನತ ಮಟ್ಟವನ್ನು ಮುಟ್ಟಬೇಕಾದರೆ ಅವಕ್ಕೆ ಅನುಕೂಲವಾದ ಪರಿಸರ ಅವಶ್ಯಕ.

ಅನುಕ್ರಮ ತಲೆಮಾರುಗಳಲ್ಲಿ ಕೋಳಿಗಳ ಅನುವಂಶೀಯ ಗುಣಗಳನ್ನು ಉತ್ತಮ ಪಡಿಸುವುದೇ ತಳಿಎಬ್ಬಿಸುವ ಆಚರಣೆಗಳ ಗುರಿ. ತಳಿಗಾರನು ಬೇರೆಬೇರೆ ತಳಿಗಳ ವಿವಿಧ ವಿಶೇಷಗಳು ಮತ್ತು ಗುಣಗಳ ಪರಿಪೂರ್ಣ ತಿಳುವಳಿಕೆ ಹೊಂದಿರುವುದು ಅವಶ್ಯಕ, ಮತ್ತು ತಳಿಎಬ್ಬಿಸುವಿಕೆಗೆ ಕೋಳಿಗಳ ಸರಿಯಾದ ಆಯ್ಕೆಮಾಡುವ ಸಾಮರ್ಥ್ಯ ಹೊಂದಿರಬೇಕು. ಅವನಿಗೆ ತಳಿಎಬ್ಬಿಸುವ ವಿಜ್ಞಾನದ ಕಾರ್ಯಮಟ್ಟದ ತಿಳುವಳಿಕೆ ಇರಬೇಕಾದುದು ಅವಶ್ಯಕ. ಕೋಳಿ ತಳಿಎಬ್ಬಿಸುವಿಕೆಯ ಅಂತಿಮ ಗುರಿ, ಹೆಚ್ಚಿನ ಮೊಟ್ಟೆ ಉತ್ಪಾದನೆ ಹಾಗೂ ಉತ್ತಮ ಗುಣದ ಹೆಚ್ಚಿನ ಮಾಂಸ ಉತ್ಪಾದನೆ (ಪ್ರದರ್ಶನ ಹಕ್ಕಿಗಳ ವಿಷಯದಲ್ಲಿ ದೇಹರೀತಿಯ ಪರಿಪೂರ್ಣತೆ ಮತ್ತು ಗರಿವರ್ಣ) ಯಂತಹ ನಿಶ್ಚಯ ವಾಣಿಜ್ಯ ಬೆಲೆಯುಳ್ಳ ಗುಣಗಳನ್ನು ಕೋಳಿಗಳಲ್ಲಿ ಅಭಿವೃದ್ಧಿ ಪಡಿಸುವುದಾದುದರಿಂದ, ಬೆಲೆಬಾಳುವ ವಿಭೇದಗಳನ್ನು ವಿಕಸನಗೊಳಿಸುವಲ್ಲಿ ತಳಿ ಗಾರನ ಯಶಸ್ಸು, ಅಪೇಕ್ಷಣೀಯ ಗುಣಗಳನ್ನು ಉನ್ನತ ಮಟ್ಟದಲ್ಲಿ ಎಷ್ಟರಮಟ್ಟಿಗೆ ಹೊಂದಿಸಬಲ್ಲ ಎಂಬುದನ್ನು ಅವಲಂಬಿಸುತ್ತದೆ.

ಒಂದು ವಿಭೇದದ ಕೋಳಿಯ ಗುಣಮಟ್ಟ ಆ ವಿಭೇದದ ಸದಸ್ಯರುಗಳು ಒಂದು ಗೊತ್ತಾದ ಉತ್ಪನ್ನವನ್ನು ಲಾಭದಾಯಕವಾಗಿ ಉತ್ಪಾದಿಸುವ ಸಾಮರ್ಥ್ಯದ ಮೇಲೆ ನಿರ್ಧರಿಸಲ್ಪಡುತ್ತದೆ. ಆದ್ದರಿಂದ ಮೊಟ್ಟೆ ಇಡುವ ಕೋಳಿಗಳ ವಿಭೇದವು ಆಹಾರವನ್ನು ಹೆಚ್ಚಿನ ಸಂಖ್ಯೆಯ ಉನ್ನತ ಮಟ್ಟದ ಮೊಟ್ಟೆಗಳಾಗಿ ಪರಿವರ್ತಿಸುವ ಶಕ್ತಿಪಡೆದಿರಬೇಕು. ಬರೀ ಹೆಚ್ಚಿನ ಆಹಾರ ಸೇವನೆಯೊಂದೇ ಹೆಚ್ಚಿನ ಉತ್ಪಾದನೆಯ ಭರವಸೆ ನೀಡುವುದಿಲ್ಲ. ಅಡ್ಡತಳಿ ಮತ್ತು ದೇಶಿಕೋಳಿಗಳು ಸಾಮಾನ್ಯವಾಗಿ ಹೊಟ್ಟೆ ಬಾಕತನದವು. ಆದರೆ ಅವುಗಳನ್ನು ಮೊಟ್ಟೆ ಉತ್ಪಾದನೆಗೆ ಅಭಿವೃದ್ಧಿ ಮಾಡಿಲ್ಲದಿರುವುದ ರಿಂದ ಆಹಾರಕ್ಕನುಗುಣವಾಗಿ ಹೆಚ್ಚಿನ ಮೊಟ್ಟೆಗಳನ್ನಿಡುವುದಿಲ್ಲ. ಆಹಾರ ಸೇವಿಸಿ

ಜೀರ್ಣಿಸಿಕೊಳ್ಳುವ ಶಕ್ತಿ ಮತ್ತು ಅಂತಿಮವಾಗಿ ಅದನ್ನು ಮೊಟ್ಟೆ ಅಥವಾ ಮಾಂಸವಾಗಿ ಪರಿವರ್ತಿಸುವ ಸಾಮರ್ಥ್ಯ ನಿಸ್ಸಂಶಯವಾಗಿ ಅನುವಂಶೀಯ ಲಕ್ಷಣ. ಜಾಗರೂಕ ಆಯ್ಕೆ, ತಳಿಎಬ್ಬಿಸುವಿಕೆ ಮತ್ತು ಮೇಲ್ವಿಚಾರಣೆಗಳಿಂದ ಮಾತ್ರ ಮುಂದಿನ ಪೀಳಿಗೆಯಲ್ಲಿ ಈ ಗುಣಗಳನ್ನು ಪುನರುತ್ಪಾದಿಸಲು ಸಾಧ್ಯ.

ತಳಿಎಬ್ಬಿಸುವಿಕೆಯ ತತ್ವಗಳು

ವೈಜ್ಞಾನಿಕ ತಳಿಎಬ್ಬಿಸುವಿಕೆಯ ಮೂಲಭೂತ ತತ್ವಗಳನ್ನು ಸಂಕ್ಷಿಪ್ತವಾಗಿ ಕೆಳಗೆ ಕೊಡಲಾಗಿದೆ.

(1) ತಳಿಎಬ್ಬಿಸುವಿಕೆ ಉದ್ದೇಶಯುಕ್ತವಾಗಿರಬೇಕು. ಗಾತ್ರ ತೂಕ, ಮೊಟ್ಟೆ ಉತ್ಪಾದನೆ, ಮಾಂಸ ಗುಣ, ವರ್ಣರಚನೆ ಅಥವಾ ಈ ಅಂಶಗಳ ಸಂಯೋಜನೆ ಮುಂತಾದವುಗಳ ದೃಷ್ಟಿಯಲ್ಲಿ ಕೋಳಿಗಳನ್ನು ಉತ್ಪಾದಿಸುವ ಅತ್ಯುತ್ಕೃಷ್ಟಮಟ್ಟದ ಬಗ್ಗೆ ತಳಿಗಾರನಿಗೆ ಸ್ಪಷ್ಟ ತಿಳಿವಳಿಕೆ ಇರಲೇಬೇಕು.

(2) ಅವಶ್ಯಕ ಮಟ್ಟಕ್ಕೆ ಸಾಧ್ಯವಾದಷ್ಟು ಸಮೀಪವಾಗಿ ಹೊಂದುವ ಮಾತಾಪಿತೃಗಳಿಂದ ಮಾತ್ರ ತಳಿಎಬ್ಬಿಸಬೇಕು. ಆಯ್ಕೆಮಾಡುವುದು ಮತ್ತು ಜೊತೆಗೂಡಿಸುವಲ್ಲಿ ಅಪೇಕ್ಷೀಯ ಮಟ್ಟವನ್ನು ಹೊಂದದಿರುವ ಎಲ್ಲ ಕೋಳಿಗಳನ್ನೂ ತಿರಸ್ಕರಿಸಬೇಕು.

(3) ತಳಿಎಬ್ಬಿಸುವಿಕೆಗೆ ಆಯ್ಕೆಮಾಡಿದ ಮಾತಾಪಿತೃಗಳು ಸಾಧ್ಯವಾದ ಮಟ್ಟಿಗೂ ಶುದ್ಧ ತಳಿಯವಾಗಿರಬೇಕು. ಇಂತಹ ಕೋಳಿಗಳು ತಮ್ಮ ನೈಜರೂಪದ ಸಂತಾನವೃದ್ಧಿಮಾಡುವ ಸಾಧ್ಯತೆ ಹೆಚ್ಚು.

(4) ಜೊತೆಗೂಡಿಸಿದಾಗ ಮಾತಾಪಿತೃಗಳಲ್ಲಿ ಇರಬಹುದಾದ ಯಾವುದೇ ದೋಷ ಮುಂದಿನ ಪೀಳಿಗೆಯಲ್ಲಿ ಸರಿಹೊಂದುವ ದೃಷ್ಟಿಯಿಂದ ಜಾಗರೂಕವಾಗಿ ವಿವೇಚಿಸಿ ಕೋಳಿಗಳನ್ನು ತಳಿಎಬ್ಬಿಸುವ ಕಾರ್ಯಕ್ಕೆ ಆಯ್ಕೆಮಾಡಬೇಕು.

(5) ಜೊತೆಗೂಡಿಸುವುದು ಮತ್ತು ಮರಿ ಹೊರಬಂದಾಗಿನಿಂದ ವಯಸ್ಸಿಗೆ ಬರುವುದರೊಳಗೆ ಕೆಳಮಟ್ಟದ ಪೀಳಿಗೆಗಳನ್ನು ಬೇರ್ಪಡಿಸುವುದು. ಈ ಎರಡೂ ದೃಷ್ಟಿಯಿಂದ ಆಯ್ಕೆಯನ್ನು ಜಾಗರೂಕವಾಗಿ, ನಿರಂತರ ಆಚರಣೆಯಲ್ಲಿಟ್ಟಿರಬೇಕು. ಯಾವುದೇ ಸಾಕಾಣಿಕೆ ಕಾರ್ಯ ಯಶಸ್ಸನ್ನು ರೂಪಿಸುವಲ್ಲಿ ಇದು ಅತಿಮುಖ್ಯವಾದ ಒಂದು ಅಂಶ.

(6) ತಳಿಎಬ್ಬಿಸುವಿಕೆಯಲ್ಲಿ ಪರಿಸರ ಬಹುಮುಖ್ಯ ಪಾತ್ರವಹಿಸುತ್ತದೆ. ವಸತಿ, ಆಹಾರ, ನಿರ್ಮಲೀಕರಣ ಮತ್ತು ಸಾಮಾನ್ಯ ಗಮನದ ದೃಷ್ಟಿಯಲ್ಲಿ ಸಾಧ್ಯವಾದ ಮಟ್ಟಿಗೂ ಆದರ್ಶ ಪರಿಸ್ಥಿತಿಯನ್ನು ಸೃಷ್ಟಿಸಬೇಕು.

ವಂಶಾವಳಿ ತಳಿಎಬ್ಬಿಸುವಿಕೆ: ತಳಿಎಬ್ಬಿಸುವಿಕೆಯಲ್ಲಿ ವಂಶಾವಳಿಯ ದಾಖಲೆಯಿಡುವುದು ಒಂದು ಪ್ರಮುಖ ಅಂಶ. ಪೀಳಿಗೆಯ ಜನ್ಮವೃತ್ತಾಂತ ತಿಳಿಯಲು

ಸಾಧ್ಯವಾಗುವಂತೆ ಸರಿಯಾದ ದಾಖಲೆ ಇಡುವುದರಿಂದ ಇವನ್ನು ಸಾಧಿಸಬಹುದು. ವಂಶಾವಳಿ ತಳಿಎಬ್ಬಿಸುವಿಕೆಯಿಂದ ಮಾತ್ರ ಜೊತೆಗೂಡಿಸುವಿಕೆಯ ಕಾರ್ಯ ಸಮರ್ಥತೆಯನ್ನು ಅಳೆಯಲು ಸಾಧ್ಯ. ಇದರಿಂದಲೇ ಆಯ್ಕೆ ಮತ್ತು ಜೊತೆಗೂಡಿಸುವ ಕೆಲಸಗಳು ಅಭಿವೃದ್ಧಿ ಸಾಧಿಸುವಂತೆ ಮಾರ್ಪಡಿಸಲೂ ಸಾಧ್ಯ. (1) ಉದ್ಭವಿಸುವ ಪೀಳಿಗೆಯ ಪಿತೃವರ್ಗವನ್ನು ತಿಳಿಯಲು, (2) ಜೊತೆಗೂಡಿಸುವಲ್ಲಿ ಉಪಯೋಗಿಸಿದ ಕೋಳಿಗಳ ತಳಿಎಬ್ಬಿಸುವ ಸಮರ್ಥತೆಯನ್ನು ಲೆಕ್ಕಹಾಕಲು ಮತ್ತು (3) ಅಪೇಕ್ಷಿತ



ಚಿತ್ರ 11:
ತಳಿಎಬ್ಬಿಕಗಳಿಗೆ ಬೋನುಗೂಡು



ಚಿತ್ರ 12:
ತಳಿಎಬ್ಬಿಕಗಳನ್ನು ಗುರುತಿಸಲು ಕಾಲುಪಟ್ಟಿ

ಗುಣಗಳುಳ್ಳ ಕೋಳಿಗಳ ಸಾಲು ಅಥವಾ ವಿಭೇದವನ್ನು ನಿರ್ಮಾಣಮಾಡಲು, ತಳಿಎಬ್ಬಿಸುವ ಮತ್ತು ಜೊತೆಗೂಡಿಸುವ ನಿಷ್ಕೃಷ್ಟವಾದ ದಾಖಲೆಗಳನ್ನಿಡುವುದು ಅವಶ್ಯಕ.

ವಂಶಾವಳಿ ತಳಿಎಬ್ಬಿಸುವಿಕೆ ಯಶಸ್ವಿಯಾಗಲು ಅನುಸರಿಸಬೇಕಾದ ಕ್ರಮಗಳೆಂದರೆ: (1) ಕಾಲುಪಟ್ಟಿಗಳು (ಚಿತ್ರ 12) ಅಥವಾ ಕಾಲಿನ ಬಲೆಯ ಮೇಲಿನ



ಚಿತ್ರ 13: ವಂಶಾವಳಿ ತಳಿಎಬ್ಬಿಕೆಗಾಗಿ ಮೊಟ್ಟೆಗಳಿಗೆ ಗುರುತು ಮಾಡುವುದು



ಚಿತ್ರ 14: ರೆಕ್ಕೆ ಪಟ್ಟಿಗಳಿಂದ ಮರಿಗಳನ್ನು ಗುರುತಿಸುವುದು



ಚಿತ್ರ 15: ಕಾಲಿನ ಬಲೆಯ ಮೇಲಿನ ಮುದ್ರೆ ಗುರುತುಗಳು

ಮುದ್ರೆ ಗುರುತು (ಚಿತ್ರ 15) ಮೊದಲಾದವುಗಳಿಂದ ವಯಸ್ಸಿಗೆ ಬಂದವನ್ನು

ಗುರುತಿಸುವುದು. (2) ವಿವಿಧ ಜೊತೆಗೂಡುವಿಕೆಯಲ್ಲಿ ಒಂದೊಂದು ಕೋಳಿಯೂ ಇಡುವ ಮೊಟ್ಟೆಗಳನ್ನು ನಿರ್ಧರಿಸಲು ತಳಿಎಬ್ಬಿಸುತ್ತಿರುವುದಕ್ಕೆ ಬೋನುಗೂಡು ಇರಿಸುವುದು (ಚಿತ್ರ 11). (3) ಮೊಟ್ಟೆ ಇಡುತ್ತಿದ್ದಂತೆಯೇ, ಕೋಳಿಗಳನ್ನು ಗುರುತಿಸುವುದು ಸಾಧ್ಯವಾಗುವಂತೆ ಮೊಟ್ಟೆಗಳನ್ನು ಗುರುತಿಸುವುದು (ಚಿತ್ರ 13). (4) ವಿಶೇಷ ತಂತಿವಿಭಾಗಗಳು ಅಥವಾ ಮಸ್ಲಿನ್ ಚೀಲಗಳಲ್ಲಿ ಎಲ್ಲ ಕೋಳಿಗಳ ಮೊಟ್ಟೆಗಳನ್ನೂ ಒಟ್ಟಿಗೆ ಮರಿಮಾಡುವುದು. ಮತ್ತು (5) ಮರಿಗಳನ್ನು ಕಾಲುಪಟ್ಟಿಗಳು. ರೆಕ್ಕೆಪಟ್ಟಿಗಳು (ಚಿತ್ರ 14). ಅಥವಾ ಕಾಲುಬಲೆಯ ಮೇಲಿನ ಗುರುತುಗಳಿಂದ ಗುರುತಿಸುವುದು.

ಜೊತೆಗೂಡಿಸುವ ತತ್ವಗಳು

ಗುಂಪಿನಲ್ಲಿ ಜೊತೆಗೂಡಿಸುವಾಗ ಒಂದು ಗಂಡಿಗೆ ಹೆಣ್ಣಿನ ಸಂಖ್ಯೆ, ಕೋಳಿಯ ತಳಿ, ಗುಂಪಿನವರ್ಗ, ವರ್ಷದ ಕಾಲ, ಮತ್ತು ಹುಂಜದ ವಯಸ್ಸು ಹಾಗೂ ಅದರ ಸ್ಥಿತಿಯನ್ನವಲಂಬಿಸುತ್ತದೆ. ರ್ಹೋಡ್ ಐಲೆಂಡ್ ರೆಡ್‌ನಂತಹ ತೂಕದ ತಳಿಗಳಿಗಿಂತ, ಲೆಗ್‌ಹಾರ್ನ್‌ನಂತಹ ಸಣ್ಣ, ಚಟುವಟಿಕೆಯಿಂದ ಕೂಡಿದ ತಳಿಗಳಲ್ಲಿ ಪ್ರತಿ ಒಂದು ಹುಂಜಕ್ಕೆ ಹೆಚ್ಚಿನ ಹೇಂಟೆಗಳನ್ನು ಜೊತೆಗೂಡಿಸಬಹುದು. ಎಳೆಯ ಹುಂಜಕ್ಕೆ ಮುದಿಹುಂಜಕ್ಕಿಂತ ಹೆಚ್ಚಿನ ಹೇಂಟೆಗಳನ್ನು ಜೊತೆಗೂಡಿಸಬಹುದು. ಮಳೆಗಾಲಕ್ಕಿಂತ ವಸಂತಕಾಲದಲ್ಲಿ ಹೆಚ್ಚಿನ ಹೇಂಟೆಗಳನ್ನು ಜೊತೆಗೂಡುವ ಗೂಡಿನೊಳಕ್ಕೆ ಬಿಡಬಹುದು.

ಜೊತೆಗೂಡಿಸುವಲ್ಲಿ ಹಲವು ವಿಧಗಳಿವೆ, ಅವುಗಳೆಂದರೆ: (1) ಆವರಣ (ರೊಪ್ಪ)ದೊಳಗೆ ಜೊತೆಗೂಡಿಸುವುದು, (2) ಗುಂಪಿನಲ್ಲಿ ಜೊತೆಗೂಡಿಸುವುದು, (3) ಹುಂಜಗಳ ಗುಂಪಿನಲ್ಲಿ ಜೊತೆಗೂಡಿಸುವುದು ಮತ್ತು (4) ಪರ್ಯಾಯ ಜೊತೆಗೂಡಿಸುವಿಕೆ. ಇತ್ತೀಚಿನ ವರ್ಷಗಳಲ್ಲಿ ಕೋಳಿ ತಳಿ ಎಬ್ಬಿಸುವ ಕಾರ್ಯದಲ್ಲಿ ಕೃತಕ ವೀರ್ಯಾವಾಪನೆ ಸ್ವಾಭಾವಿಕ ಜೊತೆಗೂಡುವಿಕೆಯ ಸ್ಥಾನವನ್ನು ಆವರಿಸುತ್ತದೆ. ರುಜುವಾತಾದ ಹುಂಜಗಳ ಉಪಯೋಗವನ್ನು ಬಹುಪಟ್ಟು ಸಂಖ್ಯೆಯ ಹೇಂಟೆಗಳಿಗೆ ವಿಸ್ತರಿಸುವಲ್ಲಿ ಹೆಚ್ಚಿನ ಸಹಾಯವಾಗುತ್ತದೆ. ಬ್ಯಾಟರಿ ವ್ಯವಸ್ಥೆ (ಕೋಳಿಗಳನ್ನು ಪ್ರತ್ಯೇಕವಾಗಿ ಬೋನುಗಳಲ್ಲಿಟ್ಟು ಆ ಬೋನುಗಳನ್ನು ಒಂದರಮೇಲೆ ಒಂದು ಜೋಡಿಸಿಡುವಿಕೆ)ಯ ಕೋಳಿಸಾಕಣೆಯಲ್ಲಿ ತಳಿಎಬ್ಬಿಸುವಾಗಲೂ ಕೃತಕ ವೀರ್ಯಾವಾಪನೆ ಉಪಯೋಗಕಾರಿ.

ಆವರಣದೊಳಗೆ ಜೊತೆಗೂಡಿಸುವಿಕೆ: ವಂಶಾವಳಿ(ತಳಿಎಬ್ಬಿಸುವಿಕೆ)ಯಲ್ಲಿ ಆವರಣದೊಳಗೆ ಜೊತೆಗೂಡಿಸುವ ಪದ್ಧತಿ ಆಚರಣೆಯಲ್ಲಿದೆ. ಈ ಪದ್ಧತಿಯಲ್ಲಿ ಪ್ರತಿಯೊಂದು ಹುಂಜವನ್ನೂ ಹಲವು ಹೇಂಟೆಗಳ ಜೊತೆ ಪ್ರತ್ಯೇಕ ಆವರಣದೊಳಗೆ ಇಡಲಾಗುತ್ತದೆ. ಒಂದು ಹುಂಜಕ್ಕೆ, ಹಗುರವಾದ ತಳಿಗಳಲ್ಲಿ 10 ರಿಂದ 15 ಹೇಂಟೆಗಳನ್ನೂ ಮತ್ತು ಭಾರವಾದ ತಳಿಗಳಲ್ಲಿ 8 ರಿಂದ 10 ಹೇಂಟೆಗಳನ್ನೂ ಕಾಣಬಹುದು.

ಗುಂಪಿನಲ್ಲಿ ಜೊತೆಗೂಡಿಸುವಿಕೆ: ಗುಂಪಿನಲ್ಲಿ ಜೊತೆಗೂಡಿಸುವ ಪದ್ಧತಿಯಲ್ಲಿ ಕೋಳಿಗಳ ದೊಡ್ಡ ಗುಂಪಿನಲ್ಲಿ ಹಲವು ಹುಂಜಗಳನ್ನು ಸೇರಿಸಲಾಗುತ್ತದೆ. ಹಗುರ

ವಾದ ತಳಿಗಳಲ್ಲಿ 15 ರಿಂದ 18 ಹೇಂಟೆಗಳಿಗೆ ಮತ್ತು ಭಾರವಾದ ತಳಿಗಳಲ್ಲಿ 12 ರಿಂದ 14 ಹೇಂಟೆಗಳಿಗೆ ಒಂದು ಹುಂಜವನ್ನು ಒದಗಿಸಲಾಗುತ್ತದೆ. ಮಿತಿಕಲ್ಪಿತ ಸ್ಥಿತಿಯಲ್ಲಿ ಗುಂಪಿನಲ್ಲಿ ಜೊತೆಗೂಡಿಸುವ ಪದ್ಧತಿಯನ್ನು ಅನುಸರಿಸಿದಾಗ ಹುಂಜಗಳು ಒಂದ ರೊಡನೊಂದು ಜಗಳವಾಡುವ ಪ್ರವೃತ್ತಿಯನ್ನು ತೋರಿಸುತ್ತವೆ ಮತ್ತು ಸಾಮಾನ್ಯ ವಾಗಿ ಒಂದು ಹುಂಜ ಆಕ್ರಮಣಕಾರಿಯಾಗಿ ಇತರ ಹುಂಜಗಳು ಜೊತೆಗೂಡುವುದನ್ನು ಪ್ರತಿಬಂಧಿಸುತ್ತದೆ. ಇದು ಗರ್ಭಧಾರಣೆಯನ್ನು ತೀವ್ರವಾಗಿ ಬಾಧಿಸಬಹುದು. ಆಕ್ರಮಣಕಾರಿ ಹುಂಜವನ್ನು ಹೊರತೆಗೆಯುವುದರಿಂದ ಇದನ್ನು ಸರಿಪಡಿಸಬಹುದು. ಏನೇ ಆಗಲಿ ಸ್ವಚ್ಛಂದ ವಾತಾವರಣದಲ್ಲಿ ಹೇಂಟೆಗಳ ದೊಡ್ಡ ಗುಂಪಿನೊಡನೆ ಹಲವು ಹುಂಜಗಳನ್ನಿಡಬಹುದು. ಸಾಮಾನ್ಯ ಸಾಕಾಣಿಕಾ ವಿಧಾನದಲ್ಲಿ ವಿಶೇಷತಹ ವಂಶಾವಳಿ ತಳಿಎಬ್ಬಿಸುವಿಕೆಯನ್ನನುಸರಿಸದ ಕಡೆ ಗುಂಪಿನಲ್ಲಿ ಜೊತೆಗೂಡಿಸುವ ಪದ್ಧತಿಯನ್ನು ಆಯ್ದುಕೊಳ್ಳಬಹುದು. ಏಕೆಂದರೆ ಇದು ಹೆಚ್ಚು ಸಂಖ್ಯೆಯ ಹೇಂಟೆಗಳಿಗೆ ಒಂದಾಗಿ ವಸತಿಯನ್ನು ಒದಗಿಸಲು ಅವಕಾಶಕೊಟ್ಟು ಮೇಲಾಡಳಿತದ ವೆಚ್ಚವನ್ನು ಕುಗ್ಗಿ ಸುತ್ತದೆ.

ಆವರಣದೊಳಗೆ ಅಥವಾ ಗುಂಪಿನಲ್ಲಿ ಜೊತೆಗೂಡಿಸುವುದು ಯಾವುದೇ ಆದರೂ ಪೂರ್ತಿ ಬೆಳೆದ ಹುಂಜವನ್ನು ಉಪಯೋಗಿಸಿದಾಗ, ಪ್ರತಿ ಹುಂಜಕ್ಕೆ ಕಡಮೆ ಹೇಂಟೆ ಗಳನ್ನು ಹಂಚಬೇಕು — ಹಗುರ ತಳಿಗಳಲ್ಲಿ 10ಕ್ಕೆ ಹೆಚ್ಚಿಲ್ಲದಂತೆ ಮತ್ತು ಭಾರವಾದ ತಳಿಗಳಲ್ಲಿ 8ಕ್ಕೆ ಹೆಚ್ಚಿಲ್ಲದಂತೆ ಹುಂಜಗಳು, ಮರಿಹುಂಜಗಳಷ್ಟು ಚಟುವಟಿಕೆಯುಕ್ತ ವಾಗಿಲ್ಲದಿರುವುದೇ ಇದಕ್ಕೆ ಕಾರಣ.

ಹುಂಜಗಳ ಗುಂಪಿನಲ್ಲಿ ಜೊತೆಗೂಡಿಸುವಿಕೆ: ದೊಡ್ಡ ಪ್ರಾಣಿಗಳಲ್ಲಿ ಜೊತೆ ಗೂಡಿಸುವುದರ ಸಾದೃಶ್ಯವಾಗಿ ಹೇಂಟೆಗಳಲ್ಲಿ ಕೂಡ, ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದುಸಾರಿಗಿಂತ ಹೆಚ್ಚು ಜೊತೆಗೂಡಿಸುವುದು ಹುಂಜದ ಶಕ್ತಿಯ ಅಪವ್ಯಯವೆಂದು ಅಭಿಪ್ರಾಯವಿದೆ. ಇದನ್ನು ತಪ್ಪಿಸಲು ಹುಂಜಗಳ ಗುಂಪಿನಲ್ಲಿ ಜೊತೆಗೂಡಿಸುವ ಪದ್ಧತಿಯನ್ನು ಅನುಸರಿಸುತ್ತಾರೆ. ಇದರಲ್ಲಿ ಹುಂಜ ಮತ್ತು ಹೇಂಟೆಗಳನ್ನು ಬೇರೆ ಬೇರೆ ಆವರಣದಲ್ಲಿ ಅಥವಾ ಹುಂಜಗಳನ್ನು, ಹೇಂಟೆಗಳ ಆವರಣದಲ್ಲಿಯೇ ಒಂದು ಹಂಜರದಲ್ಲಿಡಲಾಗುತ್ತದೆ. ಹೇಂಟೆಗಳನ್ನು ಒಂದರ ನಂತರ ಒಂದರಂತೆ ಹುಂಜಗಳ ಆವರಣದೊಳಕ್ಕೆ ಆಗಾಗ ಬಿಟ್ಟು, ಜೊತೆಗೂಡಿದ ನಂತರ ಅವುಗಳ ಆವರಣಕ್ಕೆ ಬದ ಲಾಯಿಸಲಾಗುತ್ತದೆ.

ಪರ್ಯಾಯ ಜೊತೆಗೂಡಿಸುವಿಕೆ: ಈ ಪದ್ಧತಿ ಅತ್ಯಲ್ಪ ಲಭ್ಯ ಹುಂಜ ಗಳೊಂದಿಗೆ ಬಳಕೆಗೆಬಂದಿದೆ. ಸಾಮಾನ್ಯ ಸ್ಥಿತಿಯಲ್ಲಿ ಒಂದು ಹುಂಜಕ್ಕೆ ಅಂಗೀಕೃತ ವಾದ ಹೇಂಟೆಗಳ ಸಂಖ್ಯೆಯ ಎರಡರಷ್ಟನ್ನು ಒಂದು ಆವರಣದೊಳಗೆ ಕೊಡಲಾಗು ತ್ತದೆ. ಜೊತೆಗೂಡಿಸುವಿಕೆಗೆ ಎರಡು ಹುಂಜಗಳು ಉಪಯೋಗಿಸಲ್ಪಡುತ್ತವೆ. ಆದರೆ ಒಂದು ಸಲಕ್ಕೆ ಒಂದು ಹುಂಜವನ್ನು ಮಾತ್ರ ಹೇಂಟೆಗಳ ಜೊತೆಗೆ ಇಡೀ ದಿನ ಇರಲು

ಬಿಡುತ್ತಾರೆ. ಈ ಸಮಯದಲ್ಲಿ ಮತ್ತೊಂದು ಹುಂಜವನ್ನು ಒಂದು ಹಂಜರದಲ್ಲಿ ಕೂಡಿಡುತ್ತಾರೆ. ಮರುದಿನ, ಉಪಯೋಗಿಸಿದ ಹುಂಜವನ್ನು ಹಂಜರಕ್ಕೆ ಬದಲಾಯಿಸಿ ಮತ್ತೊಂದು ಹುಂಜವನ್ನು ಹೇಂಟೆಗಳ ಗುಂಪಿಗೆ ಬಿಡುತ್ತಾರೆ. ಗುಂಪಿನಲ್ಲಿ ಜೊತೆ ಗೂಡಿಸುವಂತೆಯೇ ಈ ಪದ್ಧತಿಯೂ ವಂಶಾವಳಿ ತಳಿಎಬ್ಬಿಸುವಿಕೆಗೆ ಉಪಯೋಗಕಾರಿ ಅಲ್ಲ; ಏಕೆಂದರೆ, ಪೀಳಿಗೆಯ ಪಿತೃವರ್ಗವನ್ನು ನಿಶ್ಚಯಿಸುವುದು ಸಾಧ್ಯವಿಲ್ಲ.

ತಳಿಎಬ್ಬಿಸುವ ಕ್ರಮ

ಕ್ರಿಯಾಶೀಲ ತಳಿಗಾರನು ವಿವಿಧ ತಳಿಎಬ್ಬಿಸುವ ಕ್ರಮ ಅಥವಾ ಪದ್ಧತಿಗಳ ಪರಿಚಯ ಹೊಂದುವುದು ಅಪೇಕ್ಷಣೀಯ. ಗುಂಪನ್ನು ಉತ್ತಮೀಕರಿಸಲು ಸಾಮಾನ್ಯ ವಾಗಿ ಅನುಸರಿಸಲ್ಪಡುವ ತಳಿಎಬ್ಬಿಸುವ ಕ್ರಮಗಳೆಂದರೆ (1) ಒಳತಳಿ ಎಬ್ಬಿಕೆ, (2) ಸಾಲು ತಳಿಎಬ್ಬಿಕೆ, (3) ಬಾಹ್ಯಸಂಕರಣ, (4) ಸಂಕರಣ ಮತ್ತು (5) ಉತ್ತಮೀ ಕರಣ.

ಒಳತಳಿಎಬ್ಬಿಕೆ: ತಂದೆ ಮತ್ತು ಮಗಳು, ತಾಯಿ ಮತ್ತು ಮಗ ಅಥವಾ ಸೋದರಿಯರು ಮತ್ತು ಸೋದರರು ಮುಂತಾದ ಹತ್ತಿರದ ರಕ್ತಸಂಬಂಧಿಗಳನ್ನು ಜೊತೆಗೂಡಿಸುವುದನ್ನು ಒಳತಳಿಎಬ್ಬಿಕೆ ಎಂದು ಕರೆಯುತ್ತಾರೆ. ಕೆಲವು ಕೇಂದ್ರಗಳ ಬೆಳೆಗಳ ಅಂತಃವೃದ್ಧಿಯಾದ ವಿಭೇದಗಳಂತಲ್ಲದೆ, ಈ ಆಚರಣೆ ಕೋಳಿಗಳಲ್ಲಿ ತೃಪ್ತಿಕರ ವಾಗಿಲ್ಲ. ಕೆಲವು ತಲೆಮಾರುಗಳ ಹತ್ತಿರದ ಒಳತಳಿಎಬ್ಬಿಕೆಯಿಂದ ಗುಂಪಿನಲ್ಲಿ, ಮೊಟ್ಟೆ, ಉತ್ಪಾದನೆ, ಫಲಿಯಾಗುವ ಶಕ್ತಿ, ಬೆಳವಣಿಗೆಯ ವೇಗ ಮತ್ತು ಆಯುಸ್ಸು ಸಾಕಷ್ಟು ಕುಗ್ಗುವುದು ಕಂಡುಬಂದಿದೆ.

ಸಾಲು ತಳಿಎಬ್ಬಿಕೆ: ಒಂದು ನಿರ್ದಿಷ್ಟ ಅಪೇಕ್ಷಣೀಯ ಪ್ರಾಣಿ ಮತ್ತು ಅದರ ಪೀಳಿಗೆಯ ಪುನರಾವರ್ತನವನ್ನೊಳಗೊಂಡ ಕ್ರಮಬದ್ಧ ಒಳತಳಿಎಬ್ಬಿಕೆಯನ್ನು ಸಾಲು ತಳಿಎಬ್ಬಿಕೆಯೆಂದು ಕರೆಯುತ್ತಾರೆ. ಸಾಲು ತಳಿಎಬ್ಬಿಕೆಯ ಉದ್ದೇಶ, ಒಂದೇ ಸಾಲು ಪೀಳಿಗೆಯ ಹೆಣ್ಣುಗಳನ್ನು ಒಂದೇ ಗಂಡಿನ ಜೊತೆಗೂಡಿಸುವುದರಿಂದ ಕೆಲವು ನಿರ್ದಿಷ್ಟ ಗುಣಗಳು ಪೀಳಿಗೆಯಲ್ಲಿ ನೆಲೆನಿಲ್ಲುವಂತೆ ಮಾಡುವುದೇ ಆಗಿದೆ. ಸಾಲು ತಳಿಎಬ್ಬಿಕೆಯ ಸಾಮಾನ್ಯ ಆಚರಣೆ, ದಾಯಾದಿಯಷ್ಟು ಹತ್ತಿರದ ರಕ್ತಸಂಬಂಧವಿಲ್ಲದ ಪ್ರಾಣಿಗಳನ್ನು ಜೊತೆಗೂಡಿಸುವುದು. ಉದಾಹರಣೆಗೆ, ಒಳ್ಳೆಯ ಹಾಲು ಉತ್ಪಾದಕ ತಾಯಿಯಿಂದ ಹುಟ್ಟಿದ ಗಂಡು, ತನ್ನ ಮಗಳಲ್ಲಿಯೂ ಆ ಗುಣವನ್ನು ತರಲು ಶಕ್ತವಾದರೆ, ಆ ಗಂಡನ್ನು ಅದರ ಮಗಳೊಂದಿಗೆ ಜೊತೆಗೂಡಿಸಬಹುದು. ಈ ರೀತಿ ತಂದೆ ಮತು ಮಗಳು ಜೊತೆಗೂಡಿ ಉದ್ಭವಿಸುವ ಪೀಳಿಗೆಯನ್ನು 'F_1' ಪೀಳಿಗೆ ಎಂದು ಕರೆಯುತ್ತಾರೆ. ತಂದೆಯನ್ನು ಮತ್ತೆ 'F_1' ಪೀಳಿಗೆಯ ಹೆಣ್ಣುಗಳ ಜೊತೆಗೂಡಿಸಬಹುದು. ವಿಭೇದದಲ್ಲಿ ಹೆಚ್ಚಿನ ಮೊಟ್ಟೆ ಉತ್ಪಾದನಾ ಸಾಮರ್ಥ್ಯವನ್ನು ನೆಲೆ ನಿಲ್ಲಿಸುವುದೇ ಇದರ ಉದ್ದೇಶ. ಆದರೆ ಇದು ವಿಭೇದದ ಮೇಲೆ ಹಾನಿಕಾರಕ ಪ್ರಭಾವ ಬೀರುವ ಸಾಧ್ಯತೆಯಿರುವುದರಿಂದ ಇದನ್ನು ಅನಿರ್ದಿಷ್ಟ ಕಾಲದವರೆಗೆ ಮುಂದುವರಿಸಬಾರದು.

ಬಾಹ್ಯ ಸಂಕರಣ: ಅದೇ ವಿವಿಧತೆಯ ಬೇರೆ ಬೇರೆ ವಿಭೇದಗಳ ಕೋಳಿಗಳನ್ನು ಜೊತೆಗೂಡಿಸುವುದನ್ನು ಬಾಹ್ಯ ಸಂಕರಣ ಎಂದು ಕರೆಯುತ್ತಾರೆ. ಒಂದು ನಿರ್ದಿಷ್ಟ ಗುಣದಲ್ಲಿ ಒಂದೇ ವಿವಿಧತೆಯ ಒಂದು ವಿಭೇದ ದುರ್ಬಲವಾಗಿದ್ದು ಮತ್ತೊಂದು ಉತ್ಕೃಷ್ಟವಾಗಿದ್ದಾಗ ಈ ಪದ್ಧತಿ ವಿಶೇಷ ಬೆಲೆಯುಳ್ಳದ್ದು. ಉದಾಹರಣೆಗೆ ವೈಟ್ ಲೆಗ್‌ಹಾರ್ನ್‌ನ ಒಂದು ವಿಭೇದ ಹೆಚ್ಚಿನ ಮೊಟ್ಟೆ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದ್ದರೂ ಸಹ ಮೊಟ್ಟೆಗಳ ಗಾತ್ರ ಸಣ್ಣದಿರಬಹುದು. ಇದೇ ತಳಿ ಮತ್ತು ವಿವಿಧತೆಯ ಮತ್ತೊಂದು ವಿಭೇದ ತಕ್ಕಮಟ್ಟಿಗೆ ಮೊಟ್ಟೆ ಉತ್ಪಾದಕವಾಗಿದ್ದು ದೊಡ್ಡ ಗಾತ್ರದ ಮೊಟ್ಟೆಗಳನ್ನಿಡಬಹುದು. ಈ ಎರಡೂ ವಿಭೇದಗಳನ್ನು ಜೊತೆಗೂಡಿಸುವುದರಿಂದ ಮೊಟ್ಟೆ ಉತ್ಪಾದನಾ ಸಂಖ್ಯೆಯಲ್ಲಿ ಗಣನೀಯ ಬದಲಾವಣೆಯಾಗದೆ. ಮೊಟ್ಟೆಗಳ ಗಾತ್ರ ಉತ್ತಮವಾಗುವ ನಿರೀಕ್ಷೆಯಿದೆ.


ಸಂಕರಣ: ಬೇರೆ ಬೇರೆ ತಳಿಗಳು ಮತ್ತು ವಿವಿಧತೆಗಳ ಪ್ರಾಣಿಗಳನ್ನು ಜೊತೆಗೂಡಿಸುವುದನ್ನು ಸಂಕರಣ ಎನ್ನುತ್ತಾರೆ. ಇದರಿಂದ ಉಂಟಾದ ಪೀಳಿಗೆಯನ್ನು ಸಂಕರತಳಿ ಅಥವಾ ಅತ್ಯುತ್ಪಾದಕ ತಳಿ (ಹೈಬ್ರಿಡ್) (ಚಿತ್ರ 16, 17, 18) ಎಂದು ಕರೆಯುತ್ತಾರೆ. ಆಗಲೇ ಹೇಳಿದಂತೆ ಒಂದೇ ತಳಿಯೊಳಗಿನ ಬಾಹ್ಯ ಸಂಕರಣ ಅಥವಾ



ತ್ರ 16: ಅತ್ಯುತ್ಪಾದಕಗಳು (ಅಸ್ಟ್ರೊವೈಟ್)-ಆಸ್ಟ್ರಲಾರ್ಪ್ ಹುಂಜ ಮತ್ತು ವೈಟಲೆಗ್‌ಹಾರ್ನ್ ಹೇಂಟೆಯ ಸಂಕ



ಚಿತ್ರ 17: ಅತ್ಯುತ್ಪಾದಕಗಳು–ರ್ಹೋಡ್ ಐಲೆಂಡ್ ರೆಡ್ ಹುಂಜ ಹಾಗೂ ಹಗುರ ಸಸೆಕ್ಸ್ ಹೇಂಟೆ ಸಂಕರ



ಚಿತ್ರ 18: ಅತ್ಯುತ್ಪಾದಕಗಳು–ನ್ಯೂಹ್ಯಾಂಪ್‌ಶೈರ್ ಹುಂಜ ಹಾಗೂ ಹಗುರ ಸಸೆಕ್ಸ್ ಹೇಂಟೆ ಸಂಕರ


ತಳಿಗಳ ನಡುವಣ ಸಂಕರಣದಿಂದ ಹುಟ್ಟಿದ ಪೀಳಿಗೆಯಲ್ಲಿ ಸಂಕರಣತ್ವ ಉಂಟಾಗುತ್ತದೆ. ಇದನ್ನು ಹೆಟೆರೋಸಿಸ್ ಎಂದೂ ಕರೆಯುತ್ತಾರೆ. ಹೆಟೆರೋಸಿಸ್ ಅಥವಾ ಸಂಕರಣ ಸತ್ವ ಎಂದರೆ, ತಮ್ಮ ಮಾತಾಪಿತೃ ವರ್ಗದ ಹೆಚ್ಚಿನ ಶುದ್ಧ ತಳಿ ಅಥವಾ ಒಳತಳಿಎಬ್ಬಿಕೆ ಅತ್ಯುತ್ತಮ ಪ್ರಾಣಿಗಳಿಗಿಂತ, ಸಂಕರತಳಿ ಪೀಳಿಗೆಯ ಉತ್ಪಾದನಾ ಮಟ್ಟದ ಉತ್ಕೃಷ್ಟತೆ. ಮೊಟ್ಟೆ ಮರಿಯಾಗುವಿಕೆ, ಮರಿಗಳ ಜೀವನಸಾಮರ್ಥ್ಯ, ಲೈಂಗಿಕ ಪಕ್ವತೆ ಮತ್ತು ಮೊಟ್ಟೆ ಉತ್ಪಾದನಾ ಸಾಮರ್ಥ್ಯಗಳ ದೃಷ್ಟಿಗಳಲ್ಲಿ ಈ ಉತ್ಕೃಷ್ಟತೆಯು ತಮ್ಮ ಶುದ್ಧ ತಳಿ ಮಾತಾಪಿತೃಗಳಲ್ಲಿನಗಿಂತ ಅಧಿಕವಾಗಿ ಕಂಡುಬರುತ್ತದೆ.

ಮೊದಲು ಸಂಕರತಳಿ ಮೆಕ್ಕೆಜೋಳದ ಉತ್ಪಾದನೆಯಲ್ಲಿ ಜಯಪ್ರದವಾಗಿ ನಿರೂಪಿಸಲ್ಪಟ್ಟ ಹೆಟೆರೋಸಿಸ್, ಪಲವಾರು ಮುಂದುವರಿದ ದೇಶಗಳಲ್ಲಿ ಕೋಳಿ ತಳಿಎಬ್ಬಿಸುವ ತಂತ್ರವನ್ನು ಬಹಳಷ್ಟು ಬದಲಾಯಿಸಿದೆ. ಆದ್ದರಿಂದ ಕೋಳಿ ತಳಿ ಎಬ್ಬಿಸುವಿಕೆಯಲ್ಲಿ ಜಯಪ್ರದವಾಗಲು ಶುದ್ಧತಳಿಗಳನ್ನು ಉತ್ಪಾದಿಸುವುದೊಂದೇ ಮಾರ್ಗವಲ್ಲ. ಮುಂದಿನ ಪೀಳಿಗೆಯನ್ನು ವಾಣಿಜ್ಯ ಮೊಟ್ಟೆ ಉತ್ಪಾದಕವಾಗಿ ಉಪಯೋಗಿಸುವ ದೃಷ್ಟಿಯಿಂದ ಕೋಳಿಗಳ ನಡುವೆ ಸಂಕರಮಾಡುವುದು. ಇಂತಹ ಇತರ ಪದ್ಧತಿಗಳಾದ ಕತ್ತರಿಸಂಕರಣ ಅಥವಾ ಶಿಲುಬೆ ಸಂಕರಣ, ಮುಮಾರ್ಗ ಸಂಕರಣ ಅಥವಾ ಅಂತಃಸಂಕರಣ ಮುಂತಾದವುಗಳ ಜೊತೆಗೆ ಇತ್ತೀಚಿನ ವರ್ಷಗಳಲ್ಲಿ ಬಹಳ ಜನಪ್ರಿಯವಾಗಿದೆ.



ಚಿತ್ರ 19: ಉತ್ತಮೀಕರಿಸಿದ ಐದನೆ ತಲೆಮಾರಿನ (ಆಸ್ಟ್ರಲಾರ್ಪ್ ಹುಂಜದೊಡನೆ ಜೊತೆಗೂಡಿಸಿದ ದೇಶಿ ಹೇಂಟೆಗಳ ಪಿಳಿಗೆ ಮುಂದಿನ ಉತ್ತಮೀಕರಣಕ್ಕೆ ಒಂದು ಶುದ್ಧ ತಳಿ ಆಸ್ಟ್ರಲಾರ್ಪ್ ಹುಂಜದೊಂದಿಗೆ

ಉತ್ತಮೀಕರಣ: ಉತ್ತಮೀಕರಣ ಶುದ್ಧತಳಿಯ ಗಂಡುಗಳನ್ನು, ಬೆರಕೆಗುಂಪಿನ ಹೆಣ್ಣುಗಳೊಡನೆ ಜೊತೆಗೂಡಿಸುವುದಕ್ಕೆ ಅನ್ವಯಿಸುತ್ತದೆ. ಶುದ್ಧತಳಿಯ ಗಂಡುಗಳ ಉಪಯೋಗದಿಂದ ಅಷ್ಟತಳಿ ಗುಂಪನ್ನು ಉತ್ತಮಪಡಿಸುವಲ್ಲಿ ಈ ಪದ್ಧತಿ ಬಹಳ ಉಪಯೋಗಕಾರಿ (ಚಿತ್ರ 19, 20). ಆದ್ದರಿಂದ ನಿರೂಪಣಾ ಲಕ್ಷಣರಹಿತ ಮತ್ತು ಲಾಭದಾಯಕವಲ್ಲದ ಸ್ಥಳೀಯ ಕೋಳಿಗಳನ್ನು ಉತ್ತಮಪಡಿಸಲು ಈ ಪದ್ಧತಿ ಹೆಚ್ಚಿನ ಮಹತ್ವದ್ದಾಗಿದೆ ಮತ್ತು ಹಳ್ಳಿಗಳಲ್ಲಿನ ಕೋಳಿಗಳನ್ನು ಇದು ಉತ್ತಮಪಡಿಸಲು ವಿಶೇಷತಹ ಸಹಾಯಕಾರಿ.



ಚಿತ್ರ 20: ಉತ್ತಮಗೊಳಿಸಿದ ಮರಿಹೇಂಟೆಗಳು (ಪಟ್ಟೆಯುಕ್ತ ಪ್ಲೈಮೂತ್ ರಾಕ್ ಹುಂಜದೊಂದಿಗೆ ಜೊತೆಗೂಡಿಸಿದ ದೇಶಿ ಹೇಂಟೆಗಳ ಪೀಳಿಗೆ)

ಲಿಂಗ ಸಂಬಂಧೀ ಸಂಕರಗಳು

ಸಾಕುಕೋಳಿಯ ಬಹಳಷ್ಟು ಗುಣಗಳು ಮೆಂಡಲ್‌ನ ಅನುವಂಶೀಯ ನಿಯಮಗಳನ್ನು ಅನುಸರಿಸುತ್ತವೆ. ಈ ನಿಯಮಗಳ ಪ್ರಕಾರ ತಂದೆತಾಯಿಗಳು ತಮ್ಮ ಪೀಳಿಗೆಯ ಎರಡೂ ಲಿಂಗದ ಸಂತಾನಗಳಿಗೆ ತಮ್ಮ ಗುಣಗಳನ್ನು ಸಮನಾಗಿ ಸಾಗಿಸುತ್ತವೆ. ಆದಾಗ್ಯೂ ಹೇಂಟೆ ತನ್ನ ಗಂಡು ಸಂತಾನಕ್ಕೆ ಮಾತ್ರ ಕೊಡುವ ಕೆಲವು ಗುಣಗಳಿವೆ. ಇಂತಹ ಗುಣಗಳನ್ನು ಲಿಂಗಸಂಬಂಧೀ ಗುಣಗಳು ಎಂದು ಕರೆಯುತ್ತಾರೆ. ಈ ವಂಶದ ತಿಳಿವಳಿಕೆ, ಹಲವು ದೇಶಗಳಲ್ಲಿ ಕೋಳಿ ಸಾಕಾಣಿಕೆ ಆಚರಣೆಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ.

ಇರುವ ಕೆಲವು ಲಿಂಗ ಸಂಬಂಧೀ ಗುಣಗಳಲ್ಲಿ, ನಾಲ್ಕು ಮಾತ್ರ ವಾಣಿಜ್ಯ ಪ್ರಯೋಜನಗಳನ್ನು ಹೊಂದಿವೆ, ಅವುಗಳೆಂದರೆ: (1) ಬೆಳ್ಳಿ ಗರಿವರ್ಣ (ತಿಳಿ ಸಸೆಕ್ಸ್)ದ ವಿರುದ್ಧ ಸುವರ್ಣಗರಿವರ್ಣ (ರ್‍ಹೋಡ್ ಐಲೆಂಡ್‌ರೆಡ್), (2) ಪಟ್ಟೆಯುಕ್ತ ಗರಿ (ಪಟ್ಟೆಯುಕ್ತ ಪ್ಲೈಮೂತ್ ರಾಕ್)ಯ ವಿರುದ್ಧ ಪಟ್ಟೆರಹಿತ ಗರಿ; (3) ನಿಧಾನ

ವಾಗಿ ಗರಿಮೂಡುವಿಕೆ (ದೊಡ್ಡ ಮತ್ತು ಉಪಯುಕ್ತತೆಯ ತಳಿಗಳು)ಯ ವಿರುದ್ಧ ಶೀಘ್ರ ಗರಿ ಮೂಡುವಿಕೆ (ವೈಟ್ ಲೆಗ್‌ಹಾರ್ನ್); ಮತ್ತು (4) ಕೆಲವು ವಿಧದ ಕಾಲಿನ ತಿಳಿಬಣ್ಣಗಳ ವಿರುದ್ಧ ಕಾಲಿನ ದಟ್ಟಬಣ್ಣ.

ಬೆಳ್ಳಿ-ಸುವರ್ಣ ಗುಣಗಳ ಜೋಡಿ: ಒಂದು ರ್‍ಹೋಡ್ ಐಲೆಂಡ್ ರೆಡ್ (ಸುವರ್ಣ) ಹುಂಜವನ್ನು, ತಿಳಿ ಸಸೆಕ್ಸ್ (ಬಿಳಿ) ಹೇಂಟೆಯೊಡನೆ ಜೊತೆಗೂಡಿಸಿದಾಗ, ಬೆಳ್ಳಿ ಮರಿಹುಂಜಗಳನ್ನೂ ಹಾಗೂ ಕೆಂಪು ಮರಿಹೇಂಟೆಗಳನ್ನು ಉತ್ಪಾದಿಸುತ್ತದೆ ಮತ್ತು ಹೆಚ್ಚಿನ ಆಸಕ್ತಿ ಕೆರಳಿಸುವ ಅಂಶವೆಂದರೆ ಎರಡೂ ಲಿಂಗಗಳ ವಿಶಿಷ್ಟ ಬಣ್ಣದಿಂದಾಗಿ, ಮರಿಗಳ ಲಿಂಗವನ್ನು ಮೊಟ್ಟೆಯೊಡೆದು ಮರಿಹೊರಬಂದಾಗಲೇ ಸುಲಭವಾಗಿ ಗುರುತಿಸಬಹುದು.

ಪಟ್ಟೆಯುಕ್ತ ಮತ್ತು ಪಟ್ಟೆರಹಿತ ಗುಣಗಳ ಜೋಡಿ: ಬ್ಲಾಕ್ ಮೈನಾರ್ಕ್, ರ್‍ಹೋಡ್ ಐಲೆಂಡ್ ರೆಡ್, ಬ್ರೌನ್ ಲೆಗ್‌ಹಾರ್ನ್ ಅಥವಾ ತಿಳಿ ಸಸೆಕ್ಸ್ ನಂತಹ ಪಟ್ಟೆರಹಿತ ಹುಂಜವನ್ನು ಪಟ್ಟೆಯುಕ್ತ ಪ್ಲೈಮೂತ್ ರಾಕ್ ಹೇಂಟೆಯೊಂದಿಗೆ ಜೊತೆಗೂಡಿಸಿದಾಗ, ಮೊಟ್ಟೆಯೊಡೆದು ಮರಿ ಹೊರಬಂದಕೂಡಲೇ ಲಿಂಗವನ್ನು ಗುರುತಿಸಲು ಸಾಧ್ಯವಾಗುವಂತಹ ಲಿಂಗ ಸಂಬಂಧೀ ಗುಣಗಳುಳ್ಳ ಮರಿಗಳನ್ನು ಉತ್ಪಾದಿಸುತ್ತವೆ. ಮರಿಹುಂಜಗಳು ತಲೆಯಮೇಲೆ ತಿಳಿಯಾದ ಮಚ್ಚೆಯನ್ನು ಹೊಂದಿರುತ್ತವೆ. ಆದರೆ ಈ ಮಚ್ಚೆ ಮರಿಹೇಂಟೆಗಳಲ್ಲಿ ಇರುವುದಿಲ್ಲ.

ನಿಧಾನ ಮತ್ತು ಶೀಘ್ರ ಗರಿ ರಚನೆಗುಣಗಳ ಜೋಡಿ: ವೈಟ್ ಲೆಗ್‌ಹಾರ್ನ್ ನಂತಹ ಶೀಘ್ರ ಗರಿರಚನೆಯ ತಳಿಯ ಹುಂಜವನ್ನು, ತಿಳಿ ಸಸೆಕ್ಸ್ ಅಥವಾ ರ್‍ಹೋಡ್ ಐಲೆಂಡ್ ರೆಡ್‌ನಂತಹ ನಿಧಾನ ಗರಿರಚನೆಯ ತಳಿಯ ಹೇಂಟೆಯೊಡನೆ ಜೊತೆಗೂಡಿಸಿದಾಗ ಉತ್ಪನ್ನವಾಗುವ ಪೀಳಿಗೆ ಲಿಂಗಸಂಬಂಧೀ ಗುಣಗಳನ್ನು ತೋರಿಸುತ್ತದೆ.



ಚಿತ್ರ 21: ಲಿಂಗ ಸಂಬಂಧೀ ಮರಿಹೇಂಟೆ ಹಾಗೂ ಮರಿಹುಂಜಗಳಲ್ಲಿ ನಿಧಾನ ಮತ್ತು ಬೇಗ ಗರಿ ಮೂಡುವ ಲಕ್ಷಣಗಳು

ಮೊಟ್ಟೆಯೊಡೆದು ಮರಿ ಹೊರಬರುವಾಗಲೇ ಮರಿಹೇಂಟೆಗಳು ರೆಕ್ಕೆಯ ಪ್ರಾಥಮಿಕ ಗರಿಗಳು ಸ್ಪಷ್ಟವಾಗಿ ಹೊರಬರುತ್ತಿರುವುದನ್ನು ತೋರಿಸುತ್ತವೆ. ಆದರೆ ಮರಿಹುಂಜಗಳು ಇನ್ನೂ ಸರಿಯಾಗಿ ಬೆಳವಣಿಗೆಯಾಗದ ಪ್ರಾಥಮಿಕ ಗರಿಗಳನ್ನು ಹೊಂದಿರುತ್ತವೆ (ಚಿತ್ರ 21).

ತಿಳಿ-ದಟ್ಟಕಾಲಿನ ಬಣ್ಣಗಳ ಗುಣಗಳ ಜೋಡಿ: ವೈಟ್ ಲೆಗ್‌ಹಾರ್ನ್ ಮತ್ತು ಬಿಳಿ ವ್ಯಾಂಡೊಟ್ಟೆಗಳಂತಹ ತಿಳಿಕಾಲಿನ ಬಣ್ಣದ ತಳಿಗಳ ಕೋಳಿಗಳನ್ನು, ಕಾಂಪೈನ್‌ನಂತಹ ಮಾಸಲು ಊದಾ ಅಥವಾ ಸ್ಲೇಟು ಬಣ್ಣದ ಕಾಲುಗಳುಳ್ಳ ತಳಿಯ ಹುಂಜದೊಡನೆ ಜೊತೆಗೂಡಿಸಿದಾಗ ಸಾಮಾನ್ಯವಾಗಿ ಲಿಂಗಸಂಬಂಧೀ ಗುಣಗಳಿರುತ್ತವೆ. ಇದರಲ್ಲಿ ಮರಿಹುಂಜಗಳು ತಿಳಿಬಣ್ಣದ ಕಾಲುಗಳನ್ನೂ ಮರಿಹೇಂಟೆಗಳು ದಟ್ಟಬಣ್ಣದ ಕಾಲುಗಳನ್ನೂ ಹೊಂದಿರುತ್ತವೆ. ಈ ಲಿಂಗಸಂಬಂಧೀ ಗುಣ ಮೇಲೆ ಹೇಳಿದ ಇತರ ಮೂರರಷ್ಟು ಪ್ರಯೋಗಾತ್ಮಕ ಪ್ರಾಮುಖ್ಯತೆಯನ್ನು ಪಡೆದಿಲ್ಲ.

ಲಿಂಗಸಂಬಂಧೀ ಸಂಕರಗಳು, ಮೊಟ್ಟೆಯೊಡೆದು ಮರಿ ಹೊರಬಂದ ಕೂಡಲೇ ಲಿಂಗಗಳನ್ನು ಬೇರ್ಪಡಿಸಿ, ಪ್ರಾರಂಭದಿಂದಲೇ ಬೇರೆ ಬೇರೆ ಲಿಂಗದ ಕೋಳಿಗಳನ್ನು ಬೇರೆಯಾಗಿ ಸಾಕುವುದನ್ನು ಸಾಧ್ಯಮಾಡುತ್ತವೆ. ಈ ಅಂಶ ವಾಣಿಜ್ಯ ದೃಷ್ಟಿಯಿಂದ ಬಹಳ ಪ್ರಮುಖವಾದುದು.

ಮೊಟ್ಟೆ ಉತ್ಪಾದನೆಗಾಗಿ ತಳಿಎಬ್ಬಿಸುವಿಕೆ

ಕೋಳಿ ತಳಿಎಬ್ಬಿಸುವಿಕೆಯಲ್ಲಿ ಮೊಟ್ಟೆ ಉತ್ಪಾದನೆ ಮುಖ್ಯವಾದ ಆರ್ಥಿಕ ಅಂಶ. ಆಹಾರಕ್ಕಾಗಿ ಕೋಳಿ ಉತ್ಪಾದನೆ — ಸಂಪೂರ್ಣವಾಗಿಯಲ್ಲದಿದ್ದರೂ — ಮುಖ್ಯವಾಗಿ ಮೊಟ್ಟೆ ಉತ್ಪಾದನೆಯ ಉಪ ಪದಾರ್ಥ, ಆದರೆ ಪ್ರತಿ ವರ್ಷವೂ ಮರಿಯಾಗುವ ಮೊಟ್ಟೆಗಳು, ಸ್ವಾಭಾವಿಕ ಬದಲಾವಣೆಗಳು ಮತ್ತು ತಳಿಎಬ್ಬಿಸುವಿಕೆಯಿಂದ ಗುಂಪಿನ ವಿಸ್ತರಣೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗುತ್ತವೆ. ಆದ್ದರಿಂದ ಉತ್ಪಾದಕ ಹೇಂಟೆಗಳಲ್ಲಿ ಮೊಟ್ಟೆ ಉತ್ಪಾದನಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಈಗಿನ ಸಮಸ್ಯೆ. ಅನನುಭವಿಗೆ ಗುಂಪಿನಲ್ಲಿದ್ದ ಎಲ್ಲ ಹೇಂಟೆಗಳೂ ಒಂದೇ ರೀತಿ ಕಾಣುವುದು ಎಲ್ಲ ಕೋಳಿಗಳಿಗೂ ಚೆನ್ನಾಗಿ ಮೊಟ್ಟೆ ಇಡಲೇಬೇಕೆಂಬ ಭಾವನೆಗೆ ಎಡೆಗೊಡುತ್ತದೆ. ಈ ಭಾವನೆ ಸರಿಯಾದದ್ದಲ್ಲ. ಏಕೆಂದರೆ ನೈಜ ಆಚರಣೆಯಲ್ಲಿ ಗುಂಪಿನ ಹಲವು ಹೇಂಟೆಗಳು ನಿಕೃಷ್ಟ ಮೊಟ್ಟೆ ಉತ್ಪಾದಕಗಳೆಂಬುದು ಕಂಡುಬರಬಹುದು. ಹೆಚ್ಚಿನ ಗುಂಪುಗಳಲ್ಲಿ ನಿಕೃಷ್ಟ ಉತ್ಪಾದಕ ಹೇಂಟೆಗಳು ವರ್ಷವರ್ಷವೂ ಸಾಕಷ್ಟು ಸಂಖ್ಯೆಯಲ್ಲಿ ಇರಲು ಅವಕಾಶಮಾಡಿಕೊಡಲಾಗಿದೆ; ಏಕೆಂದರೆ ತಳಿಗಾರನು ಹೇಂಟೆಗಳನು ತರ್ಕಬದ್ಧವಾಗಿ ಆಯ್ಕೆಮಾಡಿರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕ್ರಿಯಾಶೀಲ ತಳಿಗಾರನು ಕೆಲವು ಅಪೇಕ್ಷಣೀಯ ಗುಣಗಳನ್ನು ಹೊಂದಿರುವ ಹೇಂಟೆಗಳನ್ನು ಆಯ್ಕೆಮಾಡಿ ಬೇರೆ ಮಾಡುವ ಪ್ರಯತ್ನ ಮಾಡುತ್ತಾನೆ ಮತ್ತು ಅಂಗೀಕೃತ ತಳಿಎಬ್ಬಿಸುವ ಕ್ರಮಗಳ ಆಧಾರದ ಮೇಲೆ, ಬುದ್ಧಿವಂತಿಕೆಯಿಂದ ಕೂಡಿದ ಜೊತೆಗೂಡಿಸುವಿಕೆಯಿಂದ ಈ ಗುಣಗಳ ಅಪೇಕ್ಷಣೀಯ (ಹೊಂದಿಕೆ) ಸಂಯೋಜನೆಯನ್ನು ಮುಂದಿನ ಪೀಳಿಗೆಯಲ್ಲಿ ಉತ್ಪಾದಿಸುವ ಪ್ರಯತ್ನ ಮಾಡುತ್ತಾನೆ.

ಮೊಟ್ಟೆಯ ಗಾತ್ರ: ಮೊಟ್ಟೆ ಉತ್ಪಾದನೆಯನ್ನು ನಿಯಂತ್ರಿಸುವ ಅಂಶದ ಜತೆಗೆ, ಮೊಟ್ಟೆಯ ಗಾತ್ರವೂ ಬಹು ಪ್ರಮುಖವಾದುದು. ಹೊಸ ಮೊಟ್ಟೆಗಳ ವಿಷಯದಲ್ಲಿ

ಮೊಟ್ಟೆಯ ಗಾತ್ರ ಮತ್ತು ಮೊಟ್ಟೆಯ ತೂಕ ಪರ್ಯಾಯ ಪದಗಳು. ಮೊಟ್ಟೆಯ ಗಾತ್ರ ಹೆಚ್ಚಿದಂತೆ ತೂಕವೂ ಹೆಚ್ಚುತ್ತದೆ.

ಯಾವುದೇ ಹೇಂಟೆಗಳ ಗುಂಪಿನಲ್ಲಿ ಮೊಟ್ಟೆಯ ಗಾತ್ರ ಹೇಂಟೆಗಳ ಗಾತ್ರಕ್ಕೆ ತಕ್ಕಂತೆ ವ್ಯತ್ಯಾಸ ಹೊಂದುವ ಸಾಧ್ಯತೆ ಇದೆ. ಸಾಮಾನ್ಯವಾಗಿ ಹೇಂಟೆಯ ಗಾತ್ರ ಸಣ್ಣದಾಗಿದ್ದರೆ ಅದು ಇಡಬಹುದಾದ ಮೊಟ್ಟೆಯ ಗಾತ್ರವೂ ಸಣ್ಣದಾಗಿರುತ್ತದೆ, ಹಾಗೂ ಬೇಗನೆ ಮೊಟ್ಟೆಯಿಡಲು ಪ್ರಾರಂಭಿಸಿದಾಗ ಮೊದಲಿನ ಮೊಟ್ಟೆಗಳು ಸಣ್ಣ ದಾಗಿರುತ್ತವೆ. ಇದಕ್ಕೆ ಸ್ಪಷ್ಟವಾದ ಒಂದುಕಾರಣವೆಂದರೆ ಹೇಂಟೆ ಎಷ್ಟು ಬೇಗನೆ ಮೊಟ್ಟೆಯಿಡಲು ಪ್ರಾರಂಭಿಸುತ್ತವೋ, ಅವುಗಳ ಶರೀರದ ಗಾತ್ರ ಅಷ್ಟೂ ಸಣ್ಣದಾಗಿರುತ್ತದೆ. ಅಂದರೆ ಹೇಂಟೆಯ ಶರೀರದ ತೂಕ ಮತ್ತು ಮೊಟ್ಟೆಯ ಗಾತ್ರ ಪರಸ್ಪರ ಸಂಬಂಧ ಹೊಂದಿವೆ. ಆದ್ದರಿಂದ ಮೊಟ್ಟೆಯ ಒಳ್ಳೆಗಾತ್ರವನ್ನು ಉಳಿಸಿಕೊಂಡು ಬರುವ ಸಮಸ್ಯೆ. ಹೇಂಟೆಗಳಲ್ಲಿ ಒಳ್ಳೆಯ ಶರೀರ ಗಾತ್ರವನ್ನು ಉಳಿಸಿಕೊಂಡು ಬರುವುದನ್ನು ಹೊಂದಿಕೊಂಡಿದೆ. ಮೊದಲನೇ ವರ್ಷದ ಉತ್ಪಾದನೆಯಲ್ಲಿ ಹನ್ನೆರಡು ಮೊಟ್ಟೆಗಳಿಗೆ 24 ಔನ್ಸ್ ತೂಗುವ ಗಾತ್ರದ ಮೊಟ್ಟೆಗಳನ್ನು ಪಡೆಯಲು, ಕನಿಷ್ಟ 3 ಪೌಂಡು ತೂಗುವ ಲೆಗ್‌ಹಾರ್ನ್ ಹೇಂಟೆಗಳನ್ನು ಹೊಂದಿರುವುದು ಅಪೇಕ್ಷಣೀಯ ಮತ್ತು ಉಭಯೋದ್ದೇಶ ತಳಿಗಳು ಕನಿಷ್ಟ 5 ಪೌಂಡ್ ತೂಗಬೇಕು. ಉತ್ಪಾದನಾ ಗುಂಪಿನ ಸರಿಯಾದ ಆಯ್ಕೆ ಅನುಸರಿಸಿದಲ್ಲಿ, ಒಳ್ಳೆಯ ಮೊಟ್ಟೆ ಗಾತ್ರ ಮತ್ತು ಒಳ್ಳೆಯ ಉತ್ಪಾದನೆ ಎರಡನ್ನೂ ಒಂದೇ ವಿಭೇದದಲ್ಲಿ ಸಂಯೋಜಿಸಬಹುದು. ದೃಢವಾದ ತಳಿ ಎಬ್ಬಿಸುವ ಕಾರ್ಯವನ್ನು ರೂಪಿಸುವಲ್ಲಿ ಒಳ್ಳೆಗಾತ್ರದ ಮೊಟ್ಟೆಗಳನ್ನಿಡುವ, ಒಳ್ಳೆ ಉತ್ಪಾದಕವಂಶದ ಹುಂಜಗಳನ್ನು ಆಯ್ಕೆಮಾಡುವುದು ವಿಶೇಷ ಪ್ರಾಮುಖ್ಯತೆಯನ್ನು ಹೊಂದಿದೆ.

ಮಾತಾಪಿತೃಗಳ ಆಯ್ಕೆ

ಆಯ್ಕೆ, ತಳಿಎಬ್ಬಿಸುವಿಕೆಗೆ ಸಂಬಂಧಿಸಿದಂತೆ ಗುಂಪನ್ನು ಬೆಳಸಲು, ಮಾತಾಪಿತೃಗಳನ್ನು ಆರಿಸುವುದಕ್ಕೆ ಅನ್ವಯಿಸುತ್ತದೆ. ಆಯ್ಕೆಯಲ್ಲಿನ ಕುಶಲತೆ, ಜಯಪ್ರದವಾದ ತಳಿಎಬ್ಬಿಸುವಿಕೆ, ಆಚರಣೆಯ ತಳಪಾಯ ಮತ್ತು ತಳಿ ಅಭಿವೃದ್ಧಿ ಒಂದಕ್ಕೇ ಅಲ್ಲದೆ, ಲಾಭದಾಯಕವಾದ ಕೋಳಿ ಸಾಕಣೆಗೂ ಇದು ಅತಿ ಮುಖ್ಯವಾದುದು. ವೈಯಕ್ತಿಕ ಕೋಳಿಯ ವಂಶವಾಹಿ ರಚನೆಯನ್ನು ನಿರ್ದಿಷ್ಟವಾಗಿ ತೀರ್ಮಾನಿಸಲು ಸಾಧ್ಯವಿಲ್ಲ ದಿದ್ದರೂ ಸಹ, ಕೋಳಿಯ ಉತ್ಪಾದನಾ ಸಾಮರ್ಥ್ಯ ಅದರ ಅನುವಂಶೀಯ ಗುಣಗಳನ್ನು (ವಂಶವಾಹಿಗಳು) ಅವಲಂಬಿಸಿರುತ್ತದೆಂದು ಗುರುತಿಸಲಾಗಿದೆ. ಅನುವಂಶೀಯ ಗುಣಗಳು ಅಥವಾ ಸಾಮಾನ್ಯವಾಗಿ ಕರೆಯುವಂತೆ, ವಂಶವಾಹೀ ವ್ಯವಸ್ಥೆಯನ್ನು ಐದು ಗುಂಪುಗಳಾಗಿ ಪರಿಗಣಿಸಬಹುದು. ಅವುಗಳೆಂದರೆ: (1) ಹೇಂಟೆಗಳ ವಿಷಯ ದಲ್ಲಿ ಮೊಟ್ಟೆ ಉತ್ಪಾದನಾ ಸಾಮರ್ಥ್ಯವೂ ಸೇರಿದಂತೆ, ವೈಯಕ್ತಿಕತೆ: (2) ವಂಶಾವಳಿ: (3) ರಕ್ತ ಸಂಬಂಧಿಗಳು (ಸೋದರಿ ಸೋದರರು); (4) ತಳಿಎಬ್ಬಿಸುವಿಕೆ ನಿರ್ವಹಣೆ

ಮತ್ತು (5) ಸಂತತಿ ಪರೀಕ್ಷೆ ಇವುಗಳಲ್ಲಿ ಕೊನೆಯ ಎರಡು ಎಲ್ಲಕ್ಕೂ ಹೆಚ್ಚು ವಿಶ್ವಾಸಾರ್ಹವಾದವು; ಆದ್ದರಿಂದ ಹೆಚ್ಚು ಪ್ರಮುಖವಾದವು.

ವೈಯಕ್ತಿಕತೆ

ಒಂದು ಕೋಳಿಯ ವೈಯಕ್ತಿಕತೆ ಅದರ ಗುಣಗಳ ಒಟ್ಟು ಮೊತ್ತಕ್ಕೆ ಸಂಬಂಧಿಸಿರುತ್ತದೆ ಮತ್ತು ಅದರ ರಚನೆಯ ಎಲ್ಲ ವಿವರಗಳನ್ನೂ ಒಳಗೊಂಡಿರುತ್ತದೆ. ತಳಿ ಎಬ್ಬಿಸುವಿಕೆಗೆ ಕೋಳಿಗಳನ್ನು ಆಯ್ಕೆಮಾಡುವಾಗ ಪರೀಕ್ಷೆ ಮಾಡಬೇಕಾದ ಅಂಶಗಳ ಪ್ರಾಮುಖ್ಯತೆಯ ಅನುಕ್ರಮಣಿಕೆ ಎಂದರೆ, ಮೊದಲನೆಯದಾಗಿ ವೈಯಕ್ತಿಕತೆ. ಇದನ್ನು ಅನುಸರಿಸಿ, ವಂಶಾವಳಿ ಮತ್ತು ರಕ್ತಸಂಬಂಧಿಗಳು.

ಮೊಟ್ಟೆ ಉತ್ಪಾದನೆಯ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ತಳಿ ಎಬ್ಬಿಸುವಾಗ, ವೈಯಕ್ತಿಕತೆಯನ್ನು ಮೂರು ವಿವರಗಳಾಗಿ ಪರಿಗಣಿಸಬಹುದು. ಅವುಗಳೆಂದರೆ: (1) ಶರೀರ ಮತ್ತು ಸ್ವಭಾವ, (2) ಮೊಟ್ಟೆ ಉತ್ಪಾದನಾ ಸಾಮರ್ಥ್ಯ (ಹೇಂಟೆಗಳಲ್ಲಿ); ಮತ್ತು (3) ತಳಿ ಮತ್ತು ವಿವಿಧತೆಯ ಗುಣಗಳು.

ಶರೀರ ಮತ್ತು ಸ್ವಭಾವ: ಉತ್ಪಾದನೆಗಾಗಿ ತಳಿ ಎಬ್ಬಿಸುವಲ್ಲಿ ಒಳ್ಳೆಯ ಶರೀರವೂ ಒಂದು ಮುಖ್ಯವಾಗಿ ಪರಿಗಣಿಸಬೇಕಾದ ಅಂಶ. ಚೈತನ್ಯ ಮತ್ತು ಆಹಾರ, ಕೋಳಿಗೆ ಅದರ ಅವಶ್ಯಕತೆಗಿಂತ ಹೆಚ್ಚಿಗೆ ದೊರೆತಾಗ ಮೊಟ್ಟೆ ಉತ್ಪಾದನೆ ಸರಿಯಾದ ಮಟ್ಟದಲ್ಲಿರುತ್ತದೆ. ಹೆಚ್ಚಾದ ಮತ್ತು ನಿರಂತರವಾದ ಉತ್ಪಾದನೆಗೆ, ಈ ಹೆಚ್ಚಿನ ಆಹಾರದ ಪ್ರಮಾಣ ಸಾಕಷ್ಟು ದೊಡ್ಡದಾಗಿರಬೇಕು.

ಮೊಟ್ಟೆ ಉತ್ಪಾದನಾ ಸಾಮರ್ಥ್ಯ ತಳಿಎಬ್ಬಿಸುವ ಕಾರ್ಯದಲ್ಲಿ ಭಾಗವಹಿಸುವ ಹೇಂಟೆಯ ವೈಯಕ್ತಿಕತೆಯ ಅತಿ ಮುಖ್ಯವಾದ ಗುಣವೆಂದರೆ ಅದರ ಮೊಟ್ಟೆ ಉತ್ಪಾದನಾ ಸಾಮರ್ಥ್ಯ. ಇದು ಹೇಂಟೆ ತನ್ನ ಉತ್ಪಾದನೆಯ ಮೊದಲ ವರ್ಷದಲ್ಲಿ ಉತ್ಪಾದಿಸಿದ ಮೊಟ್ಟೆಗಳ ಒಟ್ಟು ಸಂಖ್ಯೆಯನ್ನೇ ಅಲ್ಲದೆ ಅದು ಮುಂದಿನ ವರ್ಷದಲ್ಲಿ ಇಡಬಹುದಾದ ಮೊಟ್ಟೆಗಳ ಸಂಖ್ಯೆಯನ್ನೂ ಒಳಗೊಳ್ಳುತ್ತದೆ ಮತ್ತು ಒಟ್ಟು ಉತ್ಪಾದನೆಯೇ ಅಲ್ಲದೆ ಆ ಉತ್ಪಾದನೆ ಇಡೀ ವರ್ಷದ ತಿಂಗಳುಗಳು ಮತ್ತು ವಾರಗಳಲ್ಲಿ ಹೇಗೆ ಹಂಚಿಕೊಂಡಿದೆ ಎಂಬುದನ್ನು ಒಳಗೊಳ್ಳುತ್ತದೆ.

ಯುಕ್ತ ಪರಿಸರದಲ್ಲಿ ವಾರ್ಷಿಕ ಮೊಟ್ಟೆ ಉತ್ಪಾದನೆ ನಾಲ್ಕು ಅನುವಂಶೀಯ ಗುಣಗಳ ಸಂಯೋಜಿತ ಪ್ರಭಾವಗಳನ್ನು ಅವಲಂಬಿಸುತ್ತವೆಂದು ತಿಳಿದುಬಂದಿದೆ: (1) ವಯಸ್ಸಿಗೆ ಬರುವುದು ಅಥವಾ ಮೊದಲನೆಯ ಮೊಟ್ಟೆ ಇಡುವಾಗಿನ ವಯಸ್ಸು, (2) ತೀವ್ರತೆ ಅಥವಾ ಉತ್ಪಾದನಾ ವೇಗ, (3) ಮೊಟ್ಟೆ ಇಡುವುದರ ನಡುವಿನ ವಿರಾಮಗಳು ಮತ್ತು (4) ದೃಢತೆ.

ಮೊಟ್ಟೆಯಿಡಲು ಪ್ರಾರಂಭಿಸಿದಾಗಿನ ವಯಸ್ಸು — ಬೇಗನೆ ಮೊಟ್ಟೆಯಿಡಲು ಪ್ರಾರಂಭಿಸುವ ಹೇಂಟೆಗಳು ಒಳ್ಳೆಯ ಮೊಟ್ಟೆಯಿಡುವ ಹೇಂಟೆಗಳೆಂದು ಗುರುತಿಸ ಲಾಗಿದೆ. ಬೇಗನೆ ಮೊಟ್ಟೆಯಿಡಲು ಪ್ರಾರಂಭಿಸುವ ಹೇಂಟೆಗಳನ್ನು ಮೊಟ್ಟೆಯಿಡಲು ಪ್ರಾರಂಭಿಸುವ ವಯಸ್ಸಿಗೆ ಬೆಳೆಸಲು, ನಿಧಾನವಾಗಿ ಮೊಟ್ಟೆಯಿಡಲು ಪ್ರಾರಂಭಿಸುವ ಹೇಂಟೆಗಳಿಗಿಂತ ಕಡಮೆ ವೆಚ್ಚವಾಗುತ್ತದೆ. ವಯಸ್ಸಿಗೆ ಬರಲು ಅತ್ಯುತ್ತಮವಾದ ವಯಸ್ಸು, ವೈಟ್ ಲೆಗ್‌ಹಾರ್ನ್‌ಗಳಲ್ಲಿ 160 ದಿವಸ, ಸಾಮಾನ್ಯೋದ್ದೇಶದ ಹೇಂಟೆಗಳಿಗೆ 210 ದಿವಸಗಳು.

ಉತ್ಪಾದನಾ ವೇಗ — ಉತ್ಪಾದನಾ ವೇಗ ಅಥವಾ ಇದನ್ನೇ ಮತ್ತೊಂದು ರೀತಿ ಕರೆಯುವಂತೆ ತೀವ್ರತೆ, ಒಂದು ಗೊತ್ತಾದ ಅವಧಿಯಲ್ಲಿ ಮೊಟ್ಟೆಯಿಟ್ಟ ಶೇಕಡಾ ದಿನಗಳಿಗೆ ಅನ್ವಯಿಸುತ್ತದೆ. ಒಂದು ಗೊತ್ತಾದ ಅವಧಿಯಲ್ಲಿ ಕೋಳಿ ಎಷ್ಟು ಹೆಚ್ಚಿಗೆ ಮೊಟ್ಟೆಗಳನ್ನಿಡುತ್ತದೋ, ಉತ್ಪಾದನಾ ವೇಗ ಅಥವಾ ತೀವ್ರತೆ ಅಷ್ಟೂ ಉತ್ತಮ. ಅತ್ಯಂತ ಸಮಾಧಾನಕರವಾದ ಮೊಟ್ಟೆ ಉತ್ಪಾದನಾ ವೇಗ ಸೂಚಿ ಎಂದರೆ, ಮೊದಲನೇ ಮೊಟ್ಟೆಯಿಂದ ಮುಂದಿನ ವರ್ಷದ ಮಾರ್ಚ್ 1ರವರೆಗೆ ಎಣಿಸಿದುದು ಎಂದು ಕಂಡುಬರುತ್ತದೆ. ಚಳಿಗಾಲದಲ್ಲಿ ಸರಾಸರಿ ಶೇಕಡಾ 27 ಉತ್ಪಾದನೆಯುಳ್ಳ ಹೇಂಟೆ ಇಡೀ ವರ್ಷಕ್ಕೆ ಸರಾಸರಿ 144 ಮೊಟ್ಟೆಗಳನ್ನುತ್ಪಾದಿಸುತ್ತದೆ. ಆದರೆ ಸರಾಸರಿ ಶೇಕಡಾ 81 ಉತ್ಪಾದನೆಯುಳ್ಳ ಹೇಂಟೆ ವರ್ಷಕ್ಕೆ ಸರಾಸರಿ 241 ಮೊಟ್ಟೆ ಕೊಡುತ್ತದೆ.

ಮೊಟ್ಟೆ ಉತ್ಪಾದನೆ ನಡುವಿನ ವಿರಾಮಗಳು — ಮೊಟ್ಟೆ ಉತ್ಪಾದನೆ ನಡುವಿನ ವಿರಾಮ, ಒಂದು ವಾರ ಅಥವಾ ಹೆಚ್ಚಿನ ಉತ್ಪಾದನಾ ನಿಲುಗಡೆಗೆ ಅನ್ವಯಿಸುತ್ತದೆ. ಉತ್ತಮೀಕರಿಸಿದ ಮೊಟ್ಟೆಯಿಡುವ ಸಾಮರ್ಥ್ಯಕ್ಕಾಗಿ ಆಯ್ಕೆಮಾಡುವ ಉದ್ದೇಶಕ್ಕಾಗಿ ಕನಿಷ್ಟ ಮೂರು ತೆರನಾದ ವಿರಾಮಗಳಿವೆ. ಅವುಗಳು: (1) ಪರಿಸರಣೀಯ, (2) ಕಾವು ಕೂರುವ ಮನೋವೃತ್ತಿ ಮತ್ತು (3) ಚಳಿಗಾಲದ ವಿರಾಮ.

(1) ಪರಿಸರಣೀಯ ವಿರಾಮ— ಕೆಟ್ಟದಾದ ಮೇಲ್ವಿಚಾರಣೆ, ಅಪಘಾತಗಳು, ಕಠಿಣ ವಾಯುಸ್ಥಿತಿ ಮೊದಲಾದವುಗಳಿಂದ ಆದ ವಿರಾಮಗಳನ್ನು ಪರಿಸರಣೀಯ ವಿರಾಮ ಎನ್ನುತ್ತಾರೆ. ವಾತಾವರಣೀಯ ಬದಲಾವಣೆಗಳಿಗೆ ಈಡಾಗುವುದು ವಂಶ ವಾಹಿಯ ಆಧಾರವನ್ನು ಹೊಂದಿರಬಹುದು. ಕೆಲವು ವಿಭೇದಗಳ ಹೇಂಟೆಗಳು ಪರಿಸರಣೀಯ ಬದಲಾವಣೆಯಲ್ಲಿ ಉತ್ಪಾದನೆ ನಿಲ್ಲಿಸಿ ಬಿಡುವುದು ಕಂಡುಬಂದಿದೆ, ಆದಾಗ್ಯೂ ಇತರ ವಿಭೇದದವು ಇಂತಹ ಬದಲಾವಣೆಗಳನ್ನು ಚೆನ್ನಾಗಿ ಎದುರಿಸುತ್ತವೆ.

(2) ಕಾವು ಕೂರುವ ಮನೋವೃತ್ತಿ — ಕಾವು ಕೂರುವ ವಿರಾಮವು ಹೇಂಟೆಯು ಕಾವು ಕೂತಾಗ ಸಂಭವಿಸಬಹುದು, ಇದು ಅನುವಂಶೀಯ ಗುಣ. ಹಗುರವಾದ ಅಥವಾ ಮೆಡಿಟರೇನಿಯನ್ನಿನ ತಳಿಗಳು ಸಾಮಾನ್ಯವಾಗಿ ಕಾವು ಕೂರುವ ಮನೋವೃತ್ತಿ ಯವಲ್ಲ ಮತ್ತು ಏಷ್ಯದ ತಳಿಗಳು ಕಾವು ಕೂರುವ ಗುಣದವು. ಈ ಎರಡೂ

ಪರಮಾವಧಿ ಗುಣಗಳ ತಳಿಗಳಿಂದ ಅವತರಿಸಿದ ಇಂಗ್ಲಿಷ್ ಮತ್ತು ಅಮೆರಿಕ ತಳಿಗಳು ಈ ಗುಣದಲ್ಲಿ ಮಧ್ಯದಾರಿಯನ್ನನುಸರಿಸುತ್ತವೆ. ಆಧುನಿಕ ಉಭಯೋದ್ದೇಶ ತಳಿಗಳಲ್ಲಿ ಕಾವು ಕೂರುವಿಕೆ ಯಾವ ಮಟ್ಟದಲ್ಲಿರುತ್ತದೆಂಬುದು, ತಳಿಗಿಂತ ವಿಭೇದವನ್ನು ಅವ ಲಂಬಿಸಿರುತ್ತದೆ. ಕಾವು ಕೂರುವಿಕೆ ಹಗುರ ತಳಿಗಳಲ್ಲಿ ಸಂಪೂರ್ಣ ಇಲ್ಲದಂತಿಲ್ಲ. ಕಾವು ಕೂರುವಿಕೆಯಿಂದ ಮೊಟ್ಟೆ ಉತ್ಪಾದನೆಯಲ್ಲಾಗುವ ನಷ್ಟ ಗಣನೀಯವಾದುದು, ಆದ್ದರಿಂದ ಹೇಂಟೆಗಳ ಆಯ್ಕೆಯಲ್ಲಿ ಈ ಗುಣದ ಬಗ್ಗೆ ಸೂಕ್ಷ್ಮಗಮನ ಕೊಡಬೇಕಾದುದು ಪ್ರಸಂಗೋಚಿತ.

(3) ಚಳಿಗಾಲದ ವಿರಾಮ — ಮೊದಲನೆ ಮೊಟ್ಟೆ ಉತ್ಪಾದನೆಯಿಂದ ಮಾರ್ಚಿ ಮೊದಲನೇ ತಾರೀಖಿನವರೆಗಿನ ಅವಧಿಯಲ್ಲಿ ಒಂದುವಾರ ಅಥವಾ ಹೆಚ್ಚಿಗೆ ಕಾಲದ ಉತ್ಪಾದನಾ ನಿಲುಗಡೆಯನ್ನು ಚಳಿಗಾಲದ ವಿರಾಮ ಎಂದು ಕರೆಯುತ್ತಾರೆ, ಇದರಲ್ಲಿ ಪರಿಸರಣೀಯ ಅಂಶಗಳನ್ನು ಪರಿಗಣಿಸಲಾಗಿಲ್ಲ. ಇದು ಅನುವಂಶೀಯ ಗುಣ, ಆದ್ದರಿಂದ ಸಂತಾನವೃದ್ಧಿಗೆ ಆಯ್ಕೆಮಾಡುವಲ್ಲಿ, ದೀರ್ಘವಾದ ಚಳಿಗಾಲದ ವಿರಾಮ ವನ್ನು ತೋರಿಸಿದವನ್ನು ವಿಸರ್ಜಿಸಲು ಗಮನವಹಿಸಬೇಕು.

ದೃಢತೆ — ವೈಯಕ್ತಿಕ ಹೇಂಟೆಯ, ಮಾಗಿಕಾಲದ ಕೊನೆಯಲ್ಲೂ ಮೊಟ್ಟೆಯಿಡುವ ಪ್ರವೃತ್ತಿಯನ್ನು ದೃಢತೆ ಎಂದು ಕರೆಯುತ್ತಾರೆ. ಇದು ತಡವಾದ ಗರಿಯುರ್ಚುವಿಕೆ ಯೊಂದಿಗೆ ಸಹಚರಿಸುತ್ತದೆ, ಮತ್ತು ಹೆಚ್ಚಿನ ವಾರ್ಷಿಕ ಮೊಟ್ಟೆ ಉತ್ಪಾದನೆಯಲ್ಲಿ ಇದು ಒಂದು ಮುಖ್ಯವಾದ ಅಂಶ. ದೃಢತೆ ಅನುವಂಶೀಯ ಗುಣ ಮತ್ತು ಕೋಳಿಗಳನ್ನು ತಳಿಎಬ್ಬಿಸುವುದಕ್ಕಾಗಿ ಆಯ್ಕೆಮಾಡುವಾಗ ಗಮನಿಸಲೇಬೇಕಾದ ಗುಣ.

ತಳಿ ಮತ್ತು ವಿವಿಧತೆಯ ವೈಶಿಷ್ಟ್ಯಗಳು: ವಿವಿಧ ರೀತಿ ಬಣ್ಣ ಮತ್ತು ಉತ್ಪಾದನೆ ಗಳ ನಡುವೆ ಹೆಚ್ಚಿನ ಸಂಬಂಧವಿರುವಂತೆ ಕಂಡುಬಂದಿಲ್ಲ. ಬೇರೆಲ್ಲ ರೀತಿಯಿಂದಲೂ ಸಮಾನವಾಗಿರುವಾಗ, ಎರಡು ಕೋಳಿಗಳ ನಡುವಿನ ಆಯ್ಕೆ ಯಾವಾಗಲೂ ತಳಿ ಮತ್ತು ವಿವಿಧತೆಗಳ ಅವಶ್ಯಕತೆಯನ್ನು ಹೆಚ್ಚು ಪೂರೈಸುವುದರ ಕಡೆಗಿರಬೇಕು.

ಮೇಲೆ ಹೇಳಿದ ಉತ್ಪಾದನಾ ಸಾಮರ್ಥ್ಯದ ವಿಶ್ಲೇಷಣೆಗಳು ಆಯ್ಕೆಮಾಡ ಬೇಕಾದ ಗುಣಗಳ ಬಗ್ಗೆ ಒಂದು ರೂಪ ಕೊಡುತ್ತವೆ. ಒಂದು ಹೇಂಟೆ ಹೆಚ್ಚಿನ ವೇಗದಲ್ಲಿ ಮೊಟ್ಟೆಗಳನ್ನಿಟ್ಟು, ವಿರಾಮಗಳಿಲ್ಲದಂತೆ ದೃಢತೆಯಿಂದ ಮೊಟ್ಟೆಗಳನ್ನಿಡು ವಂತಿದ್ದರೆ ಆ ಹೇಂಟೆ ಹೆಚ್ಚಿನ ವಾರ್ಷಿಕ ದಾಖಲನ್ನು ಮುಟ್ಟುವ ನಿರೀಕ್ಷೆಮಾಡ ಬಹುದು.

ವಂಶಾವಳಿ

ವಂಶಾವಳಿ ಅಥವಾ ಹುಟ್ಟು, ಆಯ್ಕೆಯಲ್ಲಿ ಬಹುಮುಖ್ಯ ಗಮನೀಯ ಅಂಶ ವಾಗಿರಬೇಕು. ನಿಕೃಷ್ಟ ವಂಶಾವಳಿಯುಳ್ಳ ಒಳ್ಳೆಯ ಕೋಳಿಗಿಂತ, ಉತ್ಕೃಷ್ಟ ವಂಶಾವಳಿ ಯುಳ್ಳ ಒಳ್ಳೆಯ ಕೋಳಿ ವಿಶ್ವಾಸಾರ್ಹ.

ರಕ್ತಸಂಬಂಧಿಗಳು(ಸೋದರ ಸೋದರಿಯರು)

ತಳಿ ಎಬ್ಬಿಸುವುದಕ್ಕಾಗಿ ಕೋಳಿಗಳನ್ನು ಆಯ್ಕೆಮಾಡುವಾಗ, ಸಾಮಾನ್ಯ ಯೋಗ್ಯತೆಯ ಸೋದರ ಸೋದರಿಯರು ಅಥವಾ ರಕ್ತಸಂಬಂಧಿಗಳನ್ನು ಹೊಂದಿರುವ ಅತ್ಯುತ್ಕೃಷ್ಟ ಕೋಳಿಗಳಿಗಿಂತ, ಯಾವ ಗುಣಗಳಿಗಾಗಿ ಆಯ್ಕೆಮಾಡುತ್ತಿದ್ದೇವೆಯೋ ಆ ಗುಣಗಳನ್ನು ಸಮವಾಗಿ, ಒಂದೇ ರೀತಿಯಲ್ಲಿ ಹೊಂದಿರುವ ಸೋದರ ಸೋದರಿಯರನ್ನುಳ್ಳ ಕೋಳಿಗಳನ್ನು ಆಯ್ಕೆಮಾಡಬೇಕು.

ಸಂತಾನೋತ್ಪಾದನಾ ಸಾಮರ್ಥ್ಯ

ಕೋಳಿಯ ಸಂತಾನೋತ್ಪಾದನಾ ಸಾಮರ್ಥ್ಯವನ್ನು ಮೂರು ಅಂಶಗಳ ಕೆಳಗೆ ಗೊತ್ತುಮಾಡಬಹುದು. (ಅ) ಹೆಣ್ಣಿನಿಂದ ಅಥವಾ ಗಂಡಿನಿಂದ ಮೊಟ್ಟೆಯ ಫಲವತ್ತತೆ; (ಆ) ಮೊಟ್ಟೆಗಳು ಒಡೆದು ಮರಿಗಳಾಗುವ ಶಕ್ತಿ; ಮತ್ತು (ಇ) ಜೀವನ ಸಾಮರ್ಥ್ಯ ಅಥವಾ ಮೊಟ್ಟೆಯೊಡೆದು ಹೊರಬಂದ ಮರಿಗಳ ಜೀವಿಸುವ ಶಕ್ತಿ.

ಫಲವತ್ತತೆ: ಯಾವುದೇ ಬುಡಕಟ್ಟು ಸಾರೋದ್ಧಾರವಾಗಿ ಮುಂದುವರಿಯಬೇಕಾದರೆ ಸಂತಾನೋತ್ಪತ್ತಿ ಅವಶ್ಯಕ, ಮತ್ತು ಕೋಳಿಗಳಲ್ಲಿ ಸಂತಾನೋತ್ಪತ್ತಿ ಮೊಟ್ಟೆಗಳ ಫಲವತ್ತತೆಯನ್ನು ಅವಲಂಬಿಸುತ್ತದೆ. ಮರಿಮಾಡಲು ಇಟ್ಟ ಮೊಟ್ಟೆಗಳಿಂದ ಹೆಚ್ಚಿನ ಮರಿಗಳನ್ನು ಪಡೆಯಲು, ಒಳ್ಳೆಯ ಫಲವತ್ತತೆಯನ್ನು ನಿಶ್ಚಯ ಮಾಡಿಕೊಳ್ಳಬೇಕು. ಆದಾಗ್ಯೂ ಫಲವತ್ತತೆ ಆನುವಂಶೀಯ ಗುಣವಲ್ಲ. ಕೆಳಮಟ್ಟದ ಫಲವತ್ತತೆಯನ್ನುಳ್ಳ ಹುಂಜ ಅಥವಾ ಹೇಂಟೆ, ಉನ್ನತ ಫಲವತ್ತತೆಯ ಪೀಳಿಗೆಯನ್ನು ಉತ್ಪಾದಿಸಬಹುದು, ಮತ್ತು ಇದರ ವಿರುದ್ಧವೂ ಸತ್ಯ. ಮಾಂಸಸಮೂನೆ ಅಥವಾ ಭಾರವಾದ ತಳಿಗಳು, ಮೊಟ್ಟೆ ನಮೂನೆ ಅಥವಾ ಹಗುರ ತಳಿಗಳಿಗಿಂತ ಸಾಮಾನ್ಯವಾಗಿ ಕಡಮೆ ಫಲವತ್ತತೆಯನ್ನು ಹೊಂದಿರುತ್ತವೆ. ಬಾಂಟಮ್‌ನಂತಹ ಅಲಂಕಾರಿಕ ತಳಿಗಳು ಯಾವಾಗಲೂ ಅತಿ ನಿಕೃಷ್ಟ ಫಲವತ್ತತೆಯವು.

ನ್ಯೂನ ವಸತಿ, ನ್ಯೂನ ಮೇಲ್ವಿಚಾರಣೆ ಅಥವಾ ಕಾಹಿಲೆಗಳೇ ಮೊದಲಾದ ಹಲವು ಅಂಶಗಳು ನ್ಯೂನ ಅಥವಾ ಕೆಳಮಟ್ಟದ ಫಲವತ್ತತೆಗೆ ಕಾರಣ. ಗಂಡುಗಳಲ್ಲಿ ನಿರ್ವೀರ್ಯತನ ಅಥವಾ ಅಂಶಿಕ ನಿರ್ವೀರ್ಯತನ (ಅಂದರೆ ಜೀವಂತ ಶುಕ್ರಾಣುಗಳನ್ನು ಹೊರಹೊಮ್ಮಿಸುವ ಅಸಾಮರ್ಥ್ಯ), ಹೆಣ್ಣುಗಳಲ್ಲಿ ಬಂಜೆತನ ಅಥವಾ ಅಂಶಿಕ ಬಂಜೆತನ (ಅದರೆ ಜೀವಂತ ಅಂಡಗಳನ್ನು ಉತ್ಪಾದಿಸುವ ಅಸಾಮರ್ಥ್ಯ), ಗಂಡಿಗೆ ವಿಮುಖತೆಯಂತಹ ಪೂರ್ವಾಗ್ರಹಗಳು ಅಥವಾ ಪಕ್ಷಪಾತ ಅಥವಾ ಯಾವುದಾದರೊಂದು ಲಿಂಗದಲ್ಲಿ ಜೊತೆಗೂಡುವ ಮನೋಭಿಲಾಷೆಗಳು ಇಲ್ಲದಿರುವುದು, ಈ ಅಂಶಗಳು ಫಲವತ್ತತೆಯಿಲ್ಲದಿರುವುದಕ್ಕೆ ಕಾರಣಗಳು. ಅತಿಕೊಬ್ಬಿದ ಹೇಂಟೆ ಮತ್ತು ಸರಿಯಾದ ಸ್ಥಿತಿಯಲ್ಲಿಲ್ಲದ ಹುಂಜ ಕೀಳುಮಟ್ಟದ ಫಲವತ್ತತೆಯನ್ನು ತೋರಿಸುತ್ತವೆ. ಮರಿಹುಂಜಗಳು ಸಾಮಾನ್ಯವಾಗಿ ವಯಸ್ಸಾದವಕ್ಕಿಂತ ಫಲವತ್ತಾಗಿರುತ್ತವೆ. ಫಲವತ್ತತೆ ಚಳಿಗಾಲದಲ್ಲಿ ಕಡಮೆಯಾಗುತ್ತದೆ ಮತ್ತು ಬೇಸಿಗೆಯಲ್ಲಿ ಹೆಚ್ಚಾಗುತ್ತದೆ.

ಮರಿಗಳು ಬದುಕಿ ಚೆನ್ನಾಗಿ ಏಳಿಗೆ ಹೊಂದುತ್ತವೆ. ಆದರೆ ಬೇರೆ ಹೇಂಟೆಯ ಮರಿಗಳು ಹೀಗಿರುವುದಿಲ್ಲ. ಇದೇ ರೀತಿ ಎರಡು ಗುಂಪು ಹೇಂಟೆಗಳ ಜೊತೆ ಎರಡು ಹುಂಜಗಳು ಜೊತೆಗೂಡಿ ಹುಟ್ಟಿದ ಮರಿಗಳು ಪೋಷಣೆಯ ಕಾಲದ ಕೊನೆಗೆ ಜೀವನ ಸಾಮರ್ಥ್ಯ ದಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ತೋರಿಸಬಹುದು. ಎರಡೂ ಗುಂಪಿನ ಹೇಂಟೆಗಳು ಎಲ್ಲ ವಿಧದಲ್ಲೂ ಹೋಲಿಸುವಂತಿದ್ದರೂ ಮತ್ತು ಅವುಗಳ ಮರಿಗಳನ್ನು ಒಂದೇ ರೀತಿಯ ಪರಿಸರ ಮತ್ತು ಮೇಲ್ವಿಚಾರಣೆಯಿಂದ ಪೋಷಿಸಿದ್ದರೂ ಈ ರೀತಿಯ ವ್ಯತ್ಯಾಸಗಳು ಕಂಡುಬರಬಹುದು. ಆದ್ದರಿಂದ ದೋಷಯುಕ್ತ ಕಾವುಕೊಡುವಿಕೆ, ಪೋಷಣೆ ಅಥವಾ ಇತರ ಅಂಶಗಳು ಯಾವುದೊಂದೂ ಇಲ್ಲದೆ ಕೆಳಮಟ್ಟದ ಮರಿ ಯಾಗುವಿಕೆ ಮತ್ತು ಕೆಳಮಟ್ಟದ ಜೀವನ ಸಾಮರ್ಥ್ಯವನ್ನು ನಿರಂತರವಾಗಿ ತೋರಿ ಸುವ ಹುಂಜ ಹೇಂಟೆಗಳನ್ನು ತೆಗೆದುಹಾಕುವುದು ಅವಶ್ಯಕ. ಮುಂದಿನ ತಳಿಎಬ್ಬಿಸುವ ಕಾರ್ಯಗಳಲ್ಲಿ ಅವುಗಳ ಪೀಳಿಗೆಗಳನ್ನೂ ತೆಗೆದುಹಾಕಬೇಕು.

ಸಂತತಿ ಪರೀಕ್ಷೆ

ಆಗಲೇ ಸೂಚಿಸಿದಂತೆ, ಒಂದು ಕೋಳಿಯನ್ನು ತಳಿ ಎಬ್ಬಿಸುವುದಕ್ಕೆ ಯುಕ್ತವೆಂದು ಗೊತ್ತುಮಾಡುವಾಗ ಪ್ರತಿಯೊಬ್ಬನೂ ವೈಯಕ್ತಿಕತೆ, ವಂಶಾವಳಿ ಮತ್ತು ರಕ್ತಸಂ ಬಂಧಿಗಳನ್ನು ಗಮನಿಸಬೇಕು. ಇವುಗಳ ಮೇಲೆ ಹೆಚ್ಚಿನ ಜವಾಬ್ದಾರಿಯನ್ನು ಹೊರಿಸ ಬಹುದು, ಆದರೆ ಪ್ರತಿಯೊಬ್ಬನೂ ಅನಿರೀಕ್ಷಿತ ಘಟನೆಗಳಿಗೆ ತಯಾರಾಗಿರಬೇಕು. ಹಾಗಿರುವಾಗ ತನ್ನ ಪೀಳಿಗೆಯ ಬಹಳಷ್ಟು ಅಥವಾ ಎಲ್ಲವಕ್ಕೂ ಅಪೇಕ್ಷಿತ ಗುಣಕ ವಂಶವಾಹಿಯನ್ನು ಸಾಗಿಸುವ ಕೋಳಿಯ ಸಾಮರ್ಥ್ಯದ ಬಗ್ಗೆ ತಕ್ಕಮಟ್ಟಿಗೆ ನಂಬಿ ಕಾರ್ಹವಾದ ತೀರ್ಮಾನಕ್ಕೆ ಬರುವ ಏಕಮಾತ್ರ ವಿಧಾನವೆಂದರೆ ಆ ಕೋಳಿಯ ತಳಿ ಎಬ್ಬಿಸುವುದು. ತಳಿಎಬ್ಬಿಸುವಿಕೆ ಬೆಲೆಗೆ ಸಂತತಿ ಪರೀಕ್ಷೆ ಅತ್ಯುತ್ಕೃಷ್ಟವಾದುದು. ಮುಂದಿನ ಜೊತೆಗೂಡಿಸುವಿಕೆಯಲ್ಲಿ ಅಪೇಕ್ಷಿತ ಪ್ರತಿಫಲಗಳನ್ನು ಪಡೆಯುವುದರ ಬಗ್ಗೆ ಹೆಚ್ಚು ನಿಶ್ಚಯವಾಗಿರಲು, ಅನೇಕ ಜೊತೆಗೂಡುವಿಕೆಗಳಿಂದ ಬಂದ ಪ್ರತಿಫಲ ಗಳನ್ನು ಲಕ್ಷ್ಯಕೊಟ್ಟು ವಿಶ್ಲೇಷಿಸುವುದನ್ನು ಸಂತತಿ ಪರೀಕ್ಷೆ ಎನ್ನಬಹುದು. ಇದನ್ನೆ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪೀಳಿಗೆಯ ನಿರ್ವಹಣಾ ಸಾಮರ್ಥ್ಯದ ಆಧಾರದ ಮೇಲೆ ತಳಿಎಬ್ಬಿಸುವ ಗುಂಪನ್ನು ಆರಿಸುವುದನ್ನು 'ಸಂತತಿ ಪರೀಕ್ಷೆ' ತಳಿ ಎಬ್ಬಿಸುವ ಪದ್ಧತಿ ಎಂದು ಕರೆಯುತ್ತಾರೆ. ಒಳ್ಳೆಯ ಪ್ರತಿಫಲವನ್ನು ಕೊಟ್ಟ ಯಾವುದೇ ಜೊತೆಗೂಡಿಸುವಿಕೆಯನ್ನು ಸಾಧ್ಯವಾದಮಟ್ಟಿಗೆ ಪುನರಾವರ್ತಿಸಬೇಕು. ಹೀಗೆಯೇ ಯಾವುದಾದರೂ ಹುಂಜಗಳ ಅಥವಾ ಹೇಂಟೆಗಳ ಪೀಳಿಗೆ ಸಮಾನವಾಗಿ ಅತೃಪ್ತಿಕರ ಫಲಿತಾಂಶಗಳನ್ನು ಕೊಟ್ಟಲ್ಲಿ, ಅವುಗಳನ್ನು ವಿಸರ್ಜಿಸಬೇಕು.

ತಳಿಎಬ್ಬಿಸುವ ಕಾರ್ಯಕ್ರಮ

ಕೋಳಿಗಳ ಉತ್ಪಾದನಾ ಸಾಮರ್ಥ್ಯವನ್ನು ನಿಶ್ಚಯಿಸುವ ಮುಖ್ಯ ಅಂಶಗಳ ಸರಿಯಾದ ತಿಳಿವಳಿಕೆಯಿಂದ, ಒಂದು ಸುದೃಢ ತಳಿಎಬ್ಬಿಸುವ ಕಾರ್ಯಕ್ರಮವನ್ನು

ರೂಪಿಸುವುದು ಸಾಧ್ಯವಾಗಲೇಬೇಕು. ಬೇರೆ ಬೇರೆ ಹುಂಜಗಳಲ್ಲಿ ಯಾವುದು ತಳಿ ಎಬ್ಬಿಸುವುದಕ್ಕೆ ಅತ್ಯುತ್ತಮ ಎಂದು ನಿಶ್ಚಯಿಸುವುದು ಈ ಕಾರ್ಯಕ್ರಮದ ಮೊದಲನೇ ಹೆಜ್ಜೆ. ಮೇಲೆ ಹೇಳಿದ ಮುಖ್ಯ ಅಂಶಗಳ ಆಧಾರದ ಮೇಲೆ ಒಂದು ಹುಂಜದ ಹೆಣ್ಣು ಪೀಳಿಗೆಯನ್ನು ಮತ್ತೊಂದು ಹುಂಜದರ ಜೊತೆಗೆ ಹೋಲಿಸಬೇಕು. ಯಾವ ಹುಂಜ ತಳಿಎಬ್ಬಿಸುವಿಕೆಗೆ ಉತ್ಕೃಷ್ಟ ಬೆಲೆಯುಳ್ಳದ್ದೆಂದು ತೀರ್ಮಾನಿಸಿಕೊಂಡ ಮೇಲೆ ಒಳ್ಳೆಯ ಹುಂಜದ ಜೊತೆಗೂಡಿದ ಪ್ರತಿ ಒಂದು ಹೇಂಟೆಯ ಹೆಣ್ಣು ಸಂತತಿಯನ್ನು ಹೋಲಿಸಿ ನೋಡುವುದು ತಳಿಗಾರನ ಮುಂದಿನ ಹೆಜ್ಜೆ.

ತಳಿಎಬ್ಬಿಸುವಲ್ಲಿ ಪ್ರತಿಭಾನ್ವಿತವೆಂದು ಸಾಧಿಸಲ್ಪಟ್ಟ ಹುಂಜ, ಹೇಂಟೆಗಳನ್ನು ಎಷ್ಟು ವರ್ಗಗಳು ಸಾಧ್ಯವೋ ಅಷ್ಟು ವರ್ಷವೂ ಉಪಯೋಗಿಸಬೇಕು. ಮುಂದೆ ತಳಿ ಎಬ್ಬಿಸುವಿಕೆಗೆ ಕೋಳಿಗಳನ್ನು ಆಯ್ಕೆಮಾಡುವಾಗ ಇದರ ಪೀಳಿಗೆಗಳಿಗೆ ಮೊದಲನೆಯ ಸ್ಥಾನ ಕೊಡಬೇಕು. ಸರಾಸರಿ ಹುಂಜ ಹೇಂಟೆಗಳು ತುಲನಾತ್ಮಕವಾಗಿ ಅಲ್ಪಾಯುಷಿ ಗಳಾದುದರಿಂದ ತಳಿಎಬ್ಬಿಸುವ ಉದ್ದೇಶಗಳಿಗಾಗಿ ಸಣ್ಣ ವಯಸ್ಸಿನ ಕೋಳಿಗಳನ್ನು ಆಯ್ಕೆಮಾಡಲು ಅತ್ಯುತ್ತಮ ಪದ್ಧತಿಯನ್ನು ಅನುಸರಿಸುವುದು ಅವಶ್ಯಕ. ವಿಶೇಷತಹ ಆಯ್ಕೆಮಾಡಬೇಕಾದ ಮರಿಹುಂಜಗಳನ್ನು ಅವುಗಳ ಸ್ವಂತ ಸೋದರಿಯರು ವಿಶೇಷ ವಾದ ಸಾಮರ್ಥ್ಯವನ್ನು ತೋರಿಸಿರುವ ವಂಶಗಳಿಂದ ಆಯ್ಕೆಮಾಡಿಕೊಳ್ಳಬೇಕು.

ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಮೂರು ಮುಖ್ಯ ವಿಷಯಗಳಿವೆ. ಅವುಗಳೆಂದರೆ: (1) ಒಂದು ಹೇಂಟೆಯ ತಳಿಎಬ್ಬಿಸುವ ಶಕ್ತಿಯನ್ನು ತೀರ್ಮಾನಿಸುವಲ್ಲಿ ಮೊಟ್ಟೆ ಉತ್ಪಾದನೆಯ ವೈಯಕ್ತಿಕ ದಾಖಲೆಗಳು ತುಲನಾತ್ಮಕವಾಗಿ ಹೆಚ್ಚಿನ ಬೆಲೆಯನ್ನು ಹೊಂದಿಲ್ಲ (ಅಂದರೆ ತನ್ನ ಮೊದಲನೇ ಉತ್ಪಾದನಾ ವರ್ಷದಲ್ಲಿ 210 ಮೊಟ್ಟೆಗಳನ್ನು ಉತ್ಪಾದಿಸಿದ ಹೇಂಟೆ 310 ಮೊಟ್ಟೆಗಳನ್ನು ಉತ್ಪಾದಿಸಿದ ಹೇಂಟೆಯಷ್ಟೇ ಒಳ್ಳೆಯ ತಳಿಎಬ್ಬಿಸುವ ಹೇಂಟೆಯಾಗಿರುವುದು ಕಂಡುಬರಬಹುದು); (2) ಹೇಂಟೆ ಅಥವಾ ಹುಂಜದ ತಳಿಎಬ್ಬಿಸುವ ಯೋಗ್ಯತೆಯನ್ನು ತೀರ್ಮಾನಿಸುವಲ್ಲಿ ಅವುಗಳ ತಾಯಿ ಮತ್ತು ಅಜ್ಜಿಯ ಮೊಟ್ಟೆ ಉತ್ಪಾದನಾ ದಾಖಲು ಮಿತವಾದ ಬೆಲೆಯುಳ್ಳದ್ದು; ಮತ್ತು (3) ಹುಂಜ ಅಥವಾ ಹೇಂಟೆಯ ತಳಿಎಬ್ಬಿಸುವ ಯೋಗ್ಯತೆಯನ್ನು, ಅವುಗಳ ಹೆಣ್ಣು ಪೀಳಿಗೆಯ ಮೊಟ್ಟೆ ಉತ್ಪಾದನೆಯಿಂದ ತಕ್ಕಮಟ್ಟಿಗೆ ನಿಶ್ಚಯಿಸಬಹುದು.

ಹಳ್ಳಿ ಕೋಳಿಗಳ ಅಭಿವೃದ್ಧಿ

ಭಾರತೀಯ ಪಶುವೈದ್ಯ ಸಂಶೋಧನಾ ಸಂಸ್ಥೆ, ಇಜತ್‌ನಗರ್‌ನಲ್ಲಿ ನಡೆದ ಪ್ರಯೋಗಗಳು, ದೇಶಿ ಅಥವಾ ಹಳ್ಳಿಯ ಕೋಳಿಗಳನ್ನು ಹತ್ತುವರ್ಷಗಳ ಕಾಲ ಆಯ್ಕೆಮಾಡಿ ತಳಿಎಬ್ಬಿಸುವುದರಿಂದ, ಸರಾಸರಿ ಮೊಟ್ಟೆ ಉತ್ಪಾದನೆಯನ್ನು 1.7 ಔನ್ಸ್ ತೂಗುವ 120 ರಿಂದ 137 ಮೊಟ್ಟೆಗಳ ಮಟ್ಟಕ್ಕೆ ಏರಿಸಬಹುದು. ಇದೇ ರೀತಿಯ ಒಳ್ಳೆಯ ಮೇಲ್ವಿಚಾರಣೆಯಲ್ಲಿ ಪರದೇಶೀಯ ಶುದ್ಧ ತಳಿಗಳು ತುಲನಾತ್ಮಕವಾಗಿ 2 ಔನ್ಸ್ ತೂಗುವ 134 ರಿಂದ 167 ಮೊಟ್ಟೆಗಳನ್ನು ಉತ್ಪಾದಿಸುತ್ತವೆ ಎಂದು

ಸಾದರಪಡಿಸಿವೆ. ಅದಾಗ್ಯೂ ಆಯ್ಕೆಯಿಂದ ತಳಿಎಬ್ಬಿಸಿ ಹಳ್ಳಿ ಕೋಳಿಗಳ ಅನುವಂಶೀಯತೆಯ ಅಭಿವೃದ್ಧಿ ಮಾಡುವುದು ಬಹಳ ವೆಚ್ಚದಿಂದ ಕೂಡಿದ ಗಡಚು ಕೆಲಸ. ಆದ್ದರಿಂದ ಸ್ಥಳೀಯ ಕೋಳಿಗಳ ಅಭಿವೃದ್ಧಿಗೆ ಲಾಭದಾಯಕವಾದ ಸುಲಭಮಾರ್ಗವೆಂದರೆ ಇಲ್ಲಿನ ಪರಿಸರಕ್ಕೆ ಹೊಂದಿಕೊಂಡಿರುವ ವಿದೇಶೀಯ ತಳಿಗಳಿಂದ ಇಲ್ಲಿನ ತಳಿಗಳನ್ನು ಉತ್ತಮೀಕರಣಗೊಳಿಸುವುದು.

ಯಾವುದಾದರೊಂದು ನಿರ್ದಿಷ್ಟ ಸ್ಥಳ ಅಥವಾ ಪ್ರದೇಶದಲ್ಲಿ ಲಭ್ಯವಿರುವ ಪರಿಸರ ಸ್ಥಿತಿಗೆ ಅತಿ ಸೂಕ್ತ ವಿದೇಶೀಯ ತಳಿಯನ್ನು ನಿರ್ಧರಿಸಿದ ನಂತರದ ಮುಂದಿನ ಹೆಜ್ಜೆ ಹಳ್ಳಿಗಳಲ್ಲಿ ಈ ತಳಿಯನ್ನು ಮುಂದಕ್ಕೆ ತರುವ ಅತ್ಯುತ್ಕೃಷ್ಟ ಮಾರ್ಗದ ಬಗ್ಗೆ ತೀರ್ಮಾನಮಾಡುವುದು. ಈ ಕೆಲಸಕ್ಕೆ ಮೂರು ಮಾರ್ಗಗಳಿವೆ, ಅವುಗಳೆಂದರೆ (1) ಅಡ್ಡತಳಿಯ ಅಥವಾ ಸ್ಥಳೀಯ ಕೋಳಿಗಳನ್ನು ಅಭಿವೃದ್ಧಿಪಡಿಸಿದ ಅಥವಾ ವಿದೇಶೀಯ ತಳಿಗಳಿಂದ ನೇರವಾಗಿ ಬದಲಾಯಿಸುವುದು; (2) ಅಡ್ಡತಳಿಗಳನ್ನು ಆಯ್ಕೆಮಾಡಿದ ವಿದೇಶೀಯ ತಳಿಗಳ ಜೊತೆಗೂಡಿಸುವುದರಿಂದ ಉತ್ತಮೀಕರಿಸುವುದು, ಮತ್ತು (3) ಸಂಕರ ತಳಿ ಉತ್ಪಾದನೆ ಮಾಡುವುದು.

ಅದಕ್ಕೆ ತಗುಲುವ ವೆಚ್ಚದಿಂದಲೇ ಅಲ್ಲದೇ, ಆಹಾರಕ್ಕಾಗಿ ಆಗುವ ವೆಚ್ಚದ ಹೆಚ್ಚುವರಿಯನ್ನು ಭರಿಸುವಲ್ಲಿ ಸರಾಸರಿ ಕೋಳಿಸಾಕಾಣೆದಾರನ ಅಶಕ್ತತೆಯ ದೃಷ್ಟಿಯಿಂದಲೂ ನೇರವಾದ ಬದಲಾವಣೆ ಕಾರ್ಯಗತ ಮಾಡಲಾಗುವಂತಹ ಸೂಚನೆಯಲ್ಲ. ಈ ದೇಶದ ಸದ್ಯದ ಪರಿಸ್ಥಿತಿಯಲ್ಲಿ, ಅದರ ಅವಶ್ಯಕತೆಗಳನ್ನು ಪೂರೈಸುವ ಶಕ್ತಿಯುಳ್ಳ ಕೆಲವರು ಮಾತ್ರ ಅಭಿವೃದ್ಧಿಪಡಿಸಿದ ಅಥವಾ ವಿದೇಶೀಯ ತಳಿಗಳನ್ನು ಆಚರಣೆಗೆ ತರಲು ಸಾಧ್ಯ.

ಹೀಗಲ್ಲದೆ ಆಯ್ಕೆಮಾಡಿದ ವಿದೇಶೀಯ ತಳಿಗಳಿಂದ ಅಡ್ಡತಳಿ ಅಥವಾ ದೇಶೀ ಕೋಳಿಗಳನ್ನು ಉತ್ತಮೀಕರಿಸುವುದು, ಹಳ್ಳಿ ಗುಂಪನ್ನು ಅಭಿವೃದ್ಧಿಪಡಿಸಲು ಆಚರಣೆಗೆ ತರಬಹುದಾದ ಹಾಗೂ ಆರ್ಥಿಕವಾಗಿ ದೃಢವಾದ ಪರಿಹಾರವನ್ನು ಒದಗಿಸುತ್ತದೆ. ಈ ವಿಧಾನದಲ್ಲಿ ಅಭಿವೃದ್ಧಿ ಕ್ರಮೇಣವಾದುದು. ಆದರೆ ಪೀಳಿಗೆಯಿಂದ ಪೀಳಿಗೆಗೆ ಪ್ರತ್ಯೇಕಿಸುವಂತಹುದು ಮತ್ತು ಕೋಳಿಸಾಕಣೆದಾರನು ಲಾಭಗಳನ್ನು ಅರಿತು, ಆಹಾರ ಮತ್ತು ಮೇಲ್ವಿಚಾರಣೆಯ ಬಗ್ಗೆ ಹೆಚ್ಚಿನ ಗಮನದ ಅವಶ್ಯಕತೆಯ ಬಗ್ಗೆ ಅರಿತುಕೊಳ್ಳಲು ಸಾಕಷ್ಟು ಸಮಯ ಒದಗಿಸುತ್ತದೆ.

ಸ್ಕಾಲರ್ ಅವರ ಶಿಫಾರಸ್ಸುಗಳು: 1955ರಲ್ಲಿ ಕೋಳಿ ಉತ್ಪಾದನೆಯ ಬಗ್ಗೆ ಪೂನಾದಲ್ಲಿ ನಡೆದ ಎಫ್.ಎ.ಓ. ತಾಂತ್ರಿಕ ಸಭೆಯಲ್ಲಿ ಆಸ್ಟ್ರೇಲಿಯಾದ ಕಾಮನ್‌ವೆಲ್ತ್ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಘದ ಎಫ್. ಸ್ಕಾಲರ್ ಅವರು ತಮ್ಮ 'ತಳಿಎಬ್ಬಿಸುವಿಕೆಯ ಮೂಲಕ ಕೋಳಿ ಉತ್ಪಾದನೆಯ ಅಭಿವೃದ್ಧಿ' ಎಂಬ ಲೇಖನದಲ್ಲಿ ಕೋಳಿಗಳ ಅದರಲ್ಲೂ ವಿಶೇಷತಹ ಹಳ್ಳಿಯ ಕೋಳಿಗಳ ಅಭಿವೃದ್ಧಿಗೆ ಕೆಲವು ಆಚರಣ ಯೋಗ್ಯ ಕ್ರಮಗಳ ಸಲಹೆ ಕೊಟ್ಟಿದ್ದಾರೆ. ಉಷ್ಣವಲಯ (ಪಾಕಿಸ್ತಾನ)

ದೊಳಗೆ ಹಿಂದೆ ತಜ್ಞ ಸಲಹೆಗಾರರಾಗಿ ಕೆಲಸಮಾಡಿದ ಇವರ ವಿಶಾಲ ಅನುಭವದ ದೃಷ್ಟಿಯಿಂದ ಬಹುಮಟ್ಟಿಗೆ ಅದೇ ಪರಿಸ್ಥಿತಿಗಳನ್ನು ಹೊಂದಿರುವ ಭಾರತದಲ್ಲಿ, ಇವರ ಶಿಫಾರಸ್ಸುಗಳು ವಿಶೇಷ ಬೆಲೆಯುಳ್ಳವು. ಆದ್ದರಿಂದ ಆ ಲೇಖನದ ಸುಸಂಬದ್ಧ ಅಂಶಗಳನ್ನು ಕೆಳಗೆ ಉದ್ಧರಿಸಲಾಗಿದೆ.

"**ತಳಿಎಬ್ಬಿಸುವ ಕಾರ್ಯಕ್ರಮವನ್ನು ಆಚರಣೆಗೆ ತರುವುದು**—ಅಡ್ಡತಳಿ ಕೋಳಿಗಳನ್ನು ಅಭಿವೃದ್ಧಿಪಡಿಸಲು ಅಪೇಕ್ಷಣೀಯ ತಳಿ ಮತ್ತು ತಳಿಎಬ್ಬಿಸುವ ಕ್ರಮದ ಬಗ್ಗೆ ನಾವು ಒಂದು ತೀರ್ಮಾನಕ್ಕೆ ಬಂದಿದ್ದ ಪಕ್ಷದಲ್ಲಿ, ನಂತರ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ವಿಸ್ತರಣಾ ಇಲಾಖೆಯ ಕೆಲಸವಾಗುತ್ತದೆ. ಹಳ್ಳಿಗಳಲ್ಲಿ ಸಂಕರಣ ಅಥವಾ ಉತ್ತಮೀಕರಣ ಕೈಗೊಳ್ಳಲು ಪ್ರಪ್ರಥಮವಾಗಿ ಅವಶ್ಯಕವಾಗಿ ಅಪೇಕ್ಷಣೀಯ ರೀತಿಯ ಮರಿಹುಂಜಗಳನ್ನು ಉತ್ಪಾದಿಸಲು ರಾಜ್ಯ ಕುಕ್ಕುಟ ಕೇಂದ್ರ ಅಥವಾ ಅಂಗೀಕೃತ ವ್ಯಾಪಾರೀ ಕುಕ್ಕುಟ ಕೇಂದ್ರಗಳು ಬೇಕು. ಮುಂದಿನ ಹೆಜ್ಜೆಯಾಗಿ ವಂಶವಾಹಿ ದೃಷ್ಟಿಯಿಂದ ಮೇಲ್ಮಟ್ಟದ ಈ ಮರಿಹುಂಜಗಳನ್ನು ಹಳ್ಳಿಗಳಿಗೆ ಹಂಚುವ ಕೆಲಸ ವ್ಯವಸ್ಥಿತವಾಗಬೇಕು. ಇಲ್ಲಿ ನಾನು ಪಾಕಿಸ್ತಾನದಲ್ಲಿಯೂ ಅಭಿವೃದ್ಧಿ ಕ್ರಮವಾಗಿ ಸಲಹೆಮಾಡಿದ ಪ್ರತಿಪಾದನಾತ್ಮಕವಾಗಿ 'ಮೂಲ ಹಳ್ಳಿಗಳ'ನ್ನು ರೂಪಿಸುವ ಭಾರತದ ಕ್ರಮವನ್ನು ಶಿಫಾರಸ್ಸು ಮಾಡುತ್ತೇನೆ. ಇಂತಹ ಹಳ್ಳಿಗಳಲ್ಲಿ ಎಲ್ಲ ಅಡ್ಡತಳಿ ಹುಂಜಗಳನ್ನೂ ತೆಗೆದು ಅವುಗಳ ಜಾಗದಲ್ಲಿ ಅಪೇಕ್ಷಿತ ತಳಿಯ ಹುಂಜಗಳನ್ನು ಭರ್ತಿಮಾಡಬೇಕು. ಇದೇ ಸಮಯದಲ್ಲಿ ಸಂಗೋಪನಾ ಸ್ಥಿತಿಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನ ಮಾಡಬೇಕು ಮತ್ತು ಅವಶ್ಯಕ ಹಾಗೂ ಆರಂಭಿಕ ಹಂತವಾಗಿ 'ರಾನಿಕೇಟ್' ?(ಕೊಕ್ಕರೆ ರೋಗ) ರೋಗದ ವಿರುದ್ಧ ಕಡ್ಡಾಯವಾಗಿ ಚುಚ್ಚುಮದ್ದು ಹಾಕುವ ಕಾರ್ಯ ಕೈಗೊಳ್ಳಬೇಕು. ಬಣ್ಣದ ವರ್ತುಲ ಉಂಗುರಗಳ ಹಂಚಿಕೆ, ಉತ್ಪಾದಕವಲ್ಲದವುಗಳನ್ನು ಸಾಮಾನ್ಯವಾಗಿ ಬೇರ್ಪಡಿಸುವುದರ ಜೊತೆಗೆ ಎರಡು ವರ್ಷಗಳಿಗಿಂತ ಹೆಚ್ಚು ವಯಸ್ಸಾದ ಕೋಳಿಗಳನು ಬೇರ್ಪಡಿಸಲು ಸಹಾಯಮಾಡುತ್ತದೆ. ಕಾವು ಕೂರುವ ಮನೋವೃತ್ತಿಯ ಸಮಸ್ಯೆಯ ಕಡೆಗೆ ಗಮನ ಕೊಡಬೇಕು. ಉಪಯೋಗಿಸಿದ ತಳಿಗಳನ್ನನುಸರಿಸಿ ಉತ್ತಮೀಕರಣ ಮತ್ತು ಸಂಕರಣಗಳು ಕಾವು ಕೂರುವ ಮನೋವೃತ್ತಿಯನ್ನು ಹೋಗಲಾಡಿಸುವ ಪರಿಣಾಮವನ್ನು ಕೊಡಬಹುದು. ವಿಸ್ತರಣಾ ಇಲಾಖೆಯು ಇದರಿಂದಾಗುವ ಸ್ಥಿತಿಯನ್ನು ನಿಭಾಯಿಸುವ ವ್ಯವಸ್ಥೆ ಮಾಡಿದ ಪಕ್ಷದಲ್ಲಿ ಈ ಗುಣ ಅಪೇಕ್ಷಣೀಯ. ಇದರ ಅಂತಿಮ ಗುರಿ ಹಳ್ಳಿಯಿಂದ ಎಲ್ಲ ಸಾಕು ಹುಂಜಗಳನ್ನೂ ಲೈಂಗಿಕ ಪಕ್ವತೆಯ ವಯಸ್ಸಿನಲ್ಲಿ ತೆಗೆದುಹಾಕುವುದು. ಹೆಚ್ಚಿನ ಶಾಖ ಮತ್ತು ಗ್ರಾಹಕ ಹಾಗೂ ಉತ್ಪಾದನಾ ಸ್ಥಳಗಳ ನಡುವೆ ನ್ಯೂನ ಸಾಗಿಗೆ ವ್ಯವಸ್ಥೆಯನ್ನು ಹೊಂದಿರುವ ದೇಶಗಳಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿರುವ ಅಫಲೀಕೃತ ಮೊಟ್ಟೆಗಳನ್ನು ಇದರಿಂದ ಉತ್ಪಾದಿಸಬಹುದು. ಸಾಕಣೆದಾರರು ತಾವೇ ಸ್ವತಃ ತಳಿಎಬ್ಬಿಸುವುದರ ಬದಲು ಹಳ್ಳಿ ಅಥವಾ ಜಿಲ್ಲಾ ಮರಿಮಾಡುವ ಕೇಂದ್ರಗಳಿಂದ ಲಿಂಗ ವಿಭಾಗ ಮಾಡದ ಮರಿಕೋಳಿಗಳನ್ನು ಕೊಂಡುಕೊಳ್ಳುವುದರ ಬಗ್ಗೆ ತಿಳುವಳಿಕೆ ಕೊಡಬೇಕು. ಮರಿಕೇಂದ್ರಗಳು ಫಲೀಕೃತ

ಮೊಟ್ಟೆಗಳನ್ನು ಅಂಗೀಕೃತ ತಳಿಎಬ್ಬಿಸುವ ಕೇಂದ್ರಗಳಿಂದಲೇ ಪಡೆಯಬೇಕು. ಇಂತಹ ಅಂಗೀಕೃತ ಕೇಂದ್ರಗಳು ಅಂಗೀಕೃತ ಅಥವಾ ರಾಜ್ಯ ತಳಿಎಬ್ಬಿಸುವ ಕೇಂದ್ರಗಳಲ್ಲಿ ಹುಟ್ಟಿದ ಹುಂಜಗಳನ್ನು ಮಾತ್ರ ಉಪಯೋಗಿಸಬೇಕು.

"ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ಸಾಂದ್ರೀಕೃತ ಗ್ರಾಹಕರ ಸುತ್ತಮುತ್ತ ಕೆಲವು ದೊಡ್ಡ ವ್ಯಾಪಾರೀ ಮೊಟ್ಟೆ ಉತ್ಪಾದನಾ ಕೇಂದ್ರಗಳಿಗೆ ಬಹುಶಃ ಆರ್ಥಿಕ ಸಮರ್ಥನೆ ಇದೆ. ವೈಟ್ ಲೆಗ್‌ಹಾರ್ನ್ ಜೊತೆ ಆಸ್ಟ್ರಲಾರ್ಪ್‌ಗಳು, ರ್ಹೋಡ್ ಐಲೆಂಡ್‌ರೆಡ್‌ಗಳು, ಅಥವಾ ನ್ಯೂಹ್ಯಾಂಪ್‌ಶೈರ್‌ಗಳಂತಹ ಯಾವುದಾದರೊಂದು ಜನಪ್ರಿಯ ಉಭಯೋದ್ದೇಶ ತಳಿಯ ನಡುವಣ ಸಂಕರ ತಳಿ ಕೋಳಿಗಳು ಈ ರೀತಿಯ ಉತ್ಪಾದನೆಗೆ ಬಹುಶಃ ಅತ್ಯಂತ ಸೂಕ್ತವಾದವುಗಳು. ವಾರಿಬೀನಲ್ಲಿ ನಮ್ಮ ಅನುಭವ ವೈಟ್ ಲೆಗ್‌ಹಾರ್ನ್ ಆಸ್ಟ್ರಲಾರ್ಪ್‌ಗಳ ಹಲವು ವರ್ಷಗಳ ಸಂಕರ ತಳಿ ಹೇಂಟೆಗಳು ತಮ್ಮ ಶುದ್ಧ ತಳಿ ತಂದೆತಾಯಿಗಳಿಗಿಂತ ನಿರಂತರವಾಗಿ ಸರಾಸರಿ 24 ಮೊಟ್ಟೆಗಳನ್ನು ಹೆಚ್ಚಾಗಿ ಉತ್ಪಾದಿಸಿರುವುದನ್ನು ತೋರಿಸಿದೆ. ಆಗಲೇ ಹೇಳಿರುವ ಕತ್ತರೀ ಸಂಕರಣ ಮತ್ತು ಎರಡು ತಳಿಗಳನ್ನು ಜೊತೆಗೂಡಿಸಿದಾಗ ಉಂಟಾದ ಸಂಕರ ತಳಿ ಹೇಂಟೆಯ ಮೂರನೆ ಪೀಳಿಗೆಯ ಮರಿಹುಂಜವನ್ನು ಉಪಯೋಗಿಸಿದ ಮುಮ್ಮಾರ್ಗ ಸಂಕರಣವೂ ಇದೇ ರೀತಿಯ ಫಲಕೊಡುತ್ತದೆ. ಅಮೆರಿಕದಲ್ಲಿ ಪ್ರಸಿದ್ಧವಾಗಿರುವ 'ಅತ್ಯುತ್ಪಾದಕ' ಕೋಳಿಗಳಲ್ಲಿ ಪರಿಣಮಿಸುವ ತಳಿಯೊಳಗಿನ ಒಳತಳಿಎಬ್ಬಿಕೆ ಸಾಲುಗಳನ್ನು ಜೊತೆ ಗೂಡಿಸುವುದೂ ಕೂಡ ಅತ್ಯುತ್ತಮ ಫಲವನ್ನು ಕೊಟ್ಟಿದೆ. ಆದರೆ ಇಂತಹ ಅತ್ಯು ತ್ಪಾದಕ ಕೋಳಿಗಳ ಉತ್ಪಾದನೆಗೆ ಅತಿ ಹೆಚ್ಚಿನ ವೆಚ್ಚವನ್ನೊಳಗೊಂಡ ಒಳತಳಿಎಬ್ಬಿಕೆ ಸಾಲುಗಳ ಅಭಿವೃದ್ಧಿಯ ಅವಶ್ಯಕತೆಯಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯ ಕೋಳಿ ಮರಿಗಳ ಮಾರಾಟದಿಂದ. ವೆಚ್ಚಕ್ಕಿಂತ ಹೆಚ್ಚಿನ ಆರ್ಥಿಕ ಪ್ರತಿಫಲವನ್ನು ನಿರೀಕ್ಷಿಸು ವಂತಹ ಕಡೆಗಳಲ್ಲಿ ಮಾತ್ರ ಈ ಪದ್ಧತಿಯನ್ನು ಶಿಫಾರಸ್ಸು ಮಾಡಬಹುದು. ಅಮೆರಿಕ ದಲ್ಲಿ ಇಂತಹ ಕೆಲವು ತಳಿಎಬ್ಬಿಸುವ ಕೇಂದ್ರಗಳು ವರ್ಷಕ್ಕೆ 10,000,000 ಕ್ಕಿಂತ ಹೆಚ್ಚಿನ ಮರಿಗಳನ್ನು ಮಾರಾಟಮಾಡುತ್ತವೆ. ಮುಂದೆ ವಿಭೇದಗಳ ಹೊಂದಾಣಿಕೆ ಪರೀಕ್ಷೆಯಿಂದ ಸಂಕರತಳಿ ಮರಿಗಳಲ್ಲಿ ಅಭಿವೃದ್ಧಿಯನ್ನು ಆಶಿಸಬಹುದು. ಈಗ ಅಮೆರಿಕ ಮತ್ತು ಆಸ್ಟ್ರೇಲಿಯಾಗಳಲ್ಲಿ 'ಪರಸ್ಪರ ಪುನರಾವರ್ತಕ ಆಯ್ಕೆ' ಕ್ರಮ ಯುಕ್ತವೇ ಎಂಬ ಬಗ್ಗೆ ಸಂಶೋಧನೆ ಮುಂದುವರಿಯುತ್ತಿದೆ. ಈ ಕ್ರಮವನ್ನು ಉಪಯೋಗಿಸಿಕೊಂಡು ಶುದ್ಧ ತಳಿ ವಿಭೇದಗಳೊಳಗಿನ ಆಯ್ಕೆ ಅವುಗಳ ಸಂಕರತಳಿ ಪೀಳಿಗೆಗಳ ನಿರ್ವಹಣಾ ಸಾಮರ್ಥ್ಯವನ್ನವಲಂಬಿಸುತ್ತದೆ. ಈ ಕ್ರಮಕ್ಕೆ ತಗಲುವ ಅಧಿಕ ವೆಚ್ಚ ಉಚಿತವೇ ಎಂಬುದನ್ನು ಈಗಲೇ ಹೇಳಲಾಗುವುದಿಲ್ಲ.

"ಆದಾಗ್ಯೂ, ನನ್ನ ಅಭಿಪ್ರಾಯದಲ್ಲಿ ವಿಶ್ವದಲ್ಲಿನ ದೊಡ್ಡ ಕೋಳಿ ಕೇಂದ್ರಗಳ ಮುಖ್ಯವಾದ ಕೆಲಸವೆಂದರೆ. ಹಳ್ಳಿಗಳಲ್ಲಿ ಉತ್ತಮೀಕರಣಕ್ಕಾಗಿ ಮರಿಹುಂಜಗಳನ್ನು ಉತ್ಪಾದಿಸುವುದು. ಈ ಕೆಲಸ ಸುಗಮವಾಗಿ ಸಾಗಲು ಒಂದು ಪ್ರದೇಶದಲ್ಲಿನ 'ಅಂಗೀಕೃತ ತಳಿಗಳ' ಸಂಖ್ಯೆಯನ್ನು ಎರಡಕ್ಕೆ ಸೀಮಿತಗೊಳಿಸಬೇಕು — ಒಂದು ಹಗುರ

ವಾದುದು ಮತ್ತೊಂದು ಉಭಯೋದ್ದೇಶ ತಳಿ. ಕೆಳಕಂಡವುಗಳಲ್ಲಿ ಆ ಪ್ರದೇಶದ ನಿರ್ದಿಷ್ಟ ಪರಿಸರಕ್ಕೆ ಅತಿ ಸೂಕ್ತವಾದುದನ್ನು ಆರಿಸಿಕೊಳ್ಳಬೇಕು: ಅಭಿವೃದ್ಧಿಪಡಿಸಿದುದು, ಅಡ್ಡತಳಿ, ವೈಟ್ ಲೆಗ್‌ಹಾರ್ನ್, ಆಸ್ಟ್ರಲಾರ್ಪ್, ರ್ಹೋಡ್ ಐಲೆಂಡ್‌ರೆಡ್, ನ್ಯೂ ಹ್ಯಾಂಪ್‌ಶೈರ್ ಮತ್ತು ಆ ಪ್ರದೇಶಕ್ಕಾಗಿ ವಿಶೇಷವಾಗಿ ಅಭಿವೃದ್ಧಿಪಡಿಸಿದ ಯಾವುದಾದರೊಂದು ಹೊಸ ತಳಿ. ವಿದೇಶದಿಂದ ಹೊಸತಳಿಗಳನ್ನು ಆಮದುಮಾಡಿಕೊಳ್ಳುವ ಮನೋವೃತ್ತಿ ಎಲ್ಲಿ ಕಂಡುಬಂದರೂ ಅದನ್ನು ಉತ್ತೇಜಿಸಬಾರದು.

"ಅನುಭವ ಮತ್ತು ತಾತ್ವಿಕ ಆಲೋಚನೆಗಳು, ಫಲಕಾರಿ ತಳಿ ಎಬ್ಬಿಸುವ ಗುಂಪಿನ ಕನಿಷ್ಠ ಗಾತ್ರ ಒಂದು ತಳಿಯ 500 ಹೇಂಟೆಗಳಾಗಿರಬೇಕೆಂದು ತೋರಿಸಿಕೊಟ್ಟಿವೆ. ದೊಡ್ಡ ಗುಂಪುಗಳು ಮತ್ತೂ ಉತ್ತಮ; ಏಕೆಂದರೆ, ಅವು ವಿಸ್ತಾರವಾದ ರಕ್ತಸಂಬಂಧಿಗಳು ಮತ್ತು ಸಂತತಿ ಪರೀಕ್ಷೆ ಆಯ್ಕೆಗೆ ಅವಕಾಶಮಾಡಿಕೊಡುತ್ತವೆ ಮತ್ತು ಅತ್ಯುತ್ತಮವೆಂದು ಸಾಧಿಸಲ್ಪಟ್ಟ ಹುಂಜಗಳ ಉತ್ಕೃಷ್ಟ ಉಪಯೋಗ ಪಡೆಯುವ ಅವಕಾಶವನ್ನೂ ಮಾಡಿಕೊಡುತ್ತವೆ. ಆಧುನಿಕ ರೀತಿಯ ದಾಖಲಿಡುವಿಕೆ ಮತ್ತು ವಿಶ್ಲೇಷಣೆಗಳನ್ನು ಕೂಡಾ ದೊಡ್ಡ ಗುಂಪುಗಳಲ್ಲಿ ಮಾತ್ರ ಆರ್ಥಿಕ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು.

"**ತಳಿಎಬ್ಬಿಸುವ ಕ್ರಮಗಳು** — ಈ ತಳಿ ಎಬ್ಬಿಸುವ ಕೇಂದ್ರಗಳಲ್ಲಿ ತಳಿಗಳೊಳಗಿನ ಆಯ್ಕೆಯು ನಿರ್ವಹಣಾ ಸಾಮರ್ಥ್ಯಗಳ ನಿಖರವಾದ ಅಳತೆಯ ಮೇಲೆ ಆಧಾರಿತವಾಗಿರಬೇಕು. ಮತ್ತು ವಂಶದ ಆಯ್ಕೆಯಲ್ಲಿ ಮೊಟ್ಟೆ ಸಂಖ್ಯೆ ಮತ್ತು ವಯಸ್ಸಿಗೆ ಬಂದ ಕೋಳಿಗಳ ಜೀವನ ಸಾಮರ್ಥ್ಯಗಳಂತಹ ಕೆಳಮಟ್ಟದ ಅನುವಂಶೀಯತೆಯ ಗುಣಗಳಿಗೆ ರಕ್ತಸಂಬಂಧಿಗಳು ಮತ್ತು ಸಂತತಿ ಪರೀಕ್ಷೆಯ ಆಧಾರದ ಮೇಲೆ ಆಯ್ಕೆ ಮಾಡಬೇಕು. ವಿವಿಧ ರೀತಿಯ ಆಯ್ಕೆಗಳನ್ನು ಮಾಡುವುದು ಸಾಧ್ಯ ಮತ್ತು ಅವುಗಳ ತಾತ್ವಿಕ ಬೆಲೆಯನ್ನು ಡಿಕೆರ್‌ಸನ್ ಮತ್ತು ಹಾಜೆಲ್ ಪರೀಕ್ಷಿಸಿದ್ದಾರೆ. ಅವರ ಪ್ರಕಾರ ಅತ್ಯಂತ ಫಲಕಾರಿ ಪದ್ಧತಿಯೆಂದರೆ 'ಒಟ್ಟು ಆಧಾರದ' ಪದ್ಧತಿ; ಅಂದರೆ, ವಿವಿಧ ಗುಣಗಳನ್ನು ಅವುಗಳ ಆರ್ಥಿಕ ಪ್ರಾಮುಖ್ಯತೆಯ ಪ್ರಕಾರ ಮತ್ತು ಅವುಗಳ ವಂಶವಾಹಿ ಗುಣಗಳಿಗನುಗುಣವಾಗಿ ಒಟ್ಟುಗೂಡಿಸುವ ಒಂದು ಸೂಚಿಯ ಆಧಾರದ ಮೇಲೆ ಆಯ್ಕೆಮಾಡುವುದು. ಇದರ ನಂತರದ ಪರಿಣಾಮಕಾರಿ ಕ್ರಮವೆಂದರೆ 'ವೈಯಕ್ತಿಕ ಬೇರ್ಪಡಿಸುವ ಮಟ್ಟ'ದ ಪದ್ಧತಿ. ಇದರಲ್ಲಿ ಮರಿಯಾಗುವಿಕೆ, ಲೈಂಗಿಕ ಪಕ್ವತೆ, ವಾರ್ಷಿಕ ಮೊಟ್ಟೆ ಉತ್ಪಾದನೆ, ಜೀವನ ಸಾಮರ್ಥ್ಯ ಮತ್ತು ಮೊಟ್ಟೆಗಳ ತೂಕ ಮೊದಲಾದ ಮುಖ್ಯ ಗುಣಗಳಿಗೆ ನಿರ್ದಿಷ್ಟಪಡಿಸಿದ ಕನಿಷ್ಟ ಗುರಿಯನ್ನು ಮುಟ್ಟದೇ ಹೋದ ಕೋಳಿಗಳನ್ನು ತಳಿಎಬ್ಬಿಸುವ ಕಾರ್ಯಕ್ರಮದಿಂದ ಬೇರ್ಪಡಿಸುತ್ತಾರೆ. ಅತ್ಯಂತ ಕಡಮೆ ಪರಿಣಾಮಕಾರಿ ಪದ್ಧತಿಯೆಂದರೆ, 'ಅಡ್ಡಾದಿಡ್ಡಿ' ಪದ್ಧತಿ, ಇದರಲ್ಲಿ ಮತ್ತೊಂದು ಗುಣಕ್ಕಾಗಿ ಆಯ್ಕೆಮಾಡುವುದು ಸೂಕ್ತ ಎಂದು ಕಂಡುಬರುವವರೆಗೂ ಹಲವಾರು ವರ್ಷಗಳು ಒಂದೇ ಗುಣಕ್ಕಾಗಿ ಆಯ್ಕೆಮಾಡಿ ಅದನ್ನು ತಕ್ಕ ಮಟ್ಟಿಗೆ ಅಭಿವೃದ್ಧಿಪಡಿಸುತ್ತಾರೆ.

"ವಿವಿಧ ರೀತಿಯ ಜೊತೆಗೂಡಿಸುವ ಕ್ರಮಗಳ ಪರಿಣಾಮಗಳ ಬಗ್ಗೆ ಹಿಂದೆಯೇ ಚರ್ಚಿಸಲಾಗಿದೆ. ಅತ್ಯಂತ ಸುರಕ್ಷಿತ ಪದ್ಧತಿಯಾಗಿ ಸಾಲು ತಳಿಎಬ್ಬಿಕೆ ಕ್ರಮವನ್ನು ಶಿಫಾರಸ್ಸು ಮಾಡಬಹುದು. ಇದರಲ್ಲಿ ಅತ್ಯುತ್ತಮವೆಂದು ಸಾಧಿಸಲ್ಪಟ್ಟ ಹುಂಜಗಳನ್ನು ಪುನಃ ಪುನಃ ಉಪಯೋಗಿಸುತ್ತೇವೆ. ಇದು ಸ್ವಲ್ಪಮಟ್ಟಿಗೆ ಒಳ ತಳಿಎಬ್ಬಿಕೆಗೆ ದಾರಿಮಾಡಿಕೊಡುತ್ತದೆ. ಆದರೆ ನಿರಂತರವಾದ ಮತ್ತು ಹತ್ತಿರದ ಒಳ ತಳಿಎಬ್ಬಿಸುವಿಕೆಯನ್ನು ಜೊತೆಗೂಡಿಸುವ ಕ್ರಮವಾಗಿ ಅನುಸರಿಸುವುದಿಲ್ಲ ಅಂದರೆ; ಪೂರ್ಣ ರಕ್ತ ಸಂಬಂಧಿಗಳು ಅಥವಾ ತಂದೆ ಮಗಳನ್ನು ಪುನಃ ಪುನಃ ಜೊತೆಗೂಡಿಸುವುದಿಲ್ಲ.

"ತಳಿಎಬ್ಬಿಸುವ ಕ್ರಮದ ಆರ್ಥಿಕ ಮೌಲ್ಯ ಆದರಿಂದ ನಿರೀಕ್ಷಿಸಬಹುದಾದ ಪ್ರಗತಿಯ ದರದ ಮೇಲೇ ಅಲ್ಲದೆ. ಈ ಪ್ರಗತಿಯು ಸಾಧಿಸಲು ತಗಲುವ ವೆಚ್ಚವನ್ನೂ ಅವಲಂಬಿಸಿರುತ್ತದೆ. ಪ್ರಾಮುಖ್ಯವಾದ ವೆಚ್ಚದ ಅಂಶಗಳೆಂದರೆ ಮೊದಲನೆಯದಾಗಿ ಒಂದು ನಿರ್ದಿಷ್ಟ ಪ್ರಗತಿಯನ್ನು ಸಾಧಿಸಲು ಬೇಕಾಗುವ ಅವಧಿ, ಎರಡನೆಯದಾಗಿ ಪ್ರಗತಿಯನ್ನು ಅಳೆಯುವ ದಾಖಲಿಡುವ ಮತ್ತು ಅವುಗಳನ್ನು ವಿಶ್ಲೇಷಿಸುವ ವೆಚ್ಚ ಮತ್ತು ಕೊನೆಯದಾಗಿ ಗುಂಪಿನ ವಂಶವಾಹೀಯ ಅಭಿವೃದ್ಧಿಯ ಕಾಲದಲ್ಲಿ ನಿರೀಕ್ಷಿಸಬಹುದಾದ ಆರ್ಥಿಕ ಪ್ರತಿಫಲ. ಉದಾಹರಣೆಗೆ ಒಳತಳಿಎಬ್ಬಿಕೆ ಸಾಲುಗಳನ್ನು ಒಟ್ಟುಗೂಡಿಸುವುದು ಒಳ್ಳೆಯ ಪ್ರತಿಫಲವನ್ನು ಕೊಡುವ ಸಾಧ್ಯತೆ ಇದ್ದರೂ ಸಹ: ಈ ಕ್ರಮ ಅಧಿಕ ವೆಚ್ಚದಿಂದ ಕೂಡಿದುದು, ಏಕೆಂದರೆ ಒಳತಳಿಎಬ್ಬಿಕೆ ಸಾಲುಗಳು ವಿಶೇಷತಹ ಪ್ರಾರಂಭದಲ್ಲಿ ಅತಿ ನಿಕೃಷ್ಟ ಉತ್ಪಾದಕಗಳು ಮತ್ತು ಕಡಮೆ ಸಂತಾನೋತ್ಪಾದನಾ ದರವನ್ನು ಹೊಂದಿರುತ್ತವೆ.

"**ಸಾಮರ್ಥ್ಯವನ್ನು ಅಳತೆಮಾಡುವುದು** — ಬೋನುಗೂಡು ಅಥವಾ ಒಂಟಿ ಪರೀಕ್ಷಾ ಆವರಣಗಳಲ್ಲಿ ವಸತಿ ಏರ್ಪಡಿಸುವಿಕೆ ಅಥವಾ ಮೊಟ್ಟೆಯಿಡುವ ಪಂಜರಗಳ ಮೂಲಕ ಒಂದೊಂದರ ಸಾಮರ್ಥ್ಯವನ್ನು ಅಳೆಯುವುದಕ್ಕಿಂತ ಒಂದಕ್ಕೊಂದು ಸಂಬಂಧಿಸಿದ ಪ್ರಾಣಿಗಳ ಗುಂಪಿನ ಸರಾಸರಿ ಸಾಮರ್ಥ್ಯವನ್ನು ಅಳತೆಮಾಡುವುದರಿಂದ, ಸಾಮರ್ಥ್ಯವನ್ನು ಅಳತೆಮಾಡುವ ವೆಚ್ಚವನ್ನು ಕಡಮೆಮಾಡಬಹುದು. ಒಟ್ಟಿನಲ್ಲಿ, ಒಂದು ವೈಯಕ್ತಿಕ ಕೋಳಿಯ ಉತ್ಪಾದನಾ ಸಾಮರ್ಥ್ಯದ ಬಗ್ಗೆ ನಾವು ಅಷ್ಟು ಹೆಚ್ಚಾಗಿ ಆಸಕ್ತಿ ಹೊಂದಿಲ್ಲ; ಆದರೆ ಒಂದು ಹುಂಜದ ಅಥವಾ ಒಂದು ಹೇಂಟೆಯ ಹೆಣ್ಣುಮಕ್ಕಳ ಅಥವಾ ಅವುಗಳ ಸೋದರಿಯರ ಅಥವಾ ಅರ್ಧ ಸೋದರಿಯರ ಸರಾಸರಿ ಸಾಮರ್ಥ್ಯದ ಬಗ್ಗೆ ಹೆಚ್ಚು ಆಸಕ್ತರಾಗಿದ್ದೇವೆ. ಒಂದೊಂದು ಹುಂಜದ ಹೆಣ್ಣು ಸಂತಾನಗಳನ್ನೂ ಬೇರೆ ಬೇರೆ ಆವರಣಗಳಲ್ಲಿಟ್ಟು, ಒಂದೊಂದು ಆವರಣದ ಹೇಂಟೆಗಳು ತೆಗೆದುಕೊಂಡ ಆಹಾರದ ಪ್ರಮಾಣ ಮತ್ತು ಬೆಲೆಗಳನ್ನು ಗುರುತು ಹಾಕಿಕೊಂಡು ಆ ಆವರಣದಿಂದ ಮೊದಲನೇ ವರ್ಷದಲ್ಲಿ ಮೊಟ್ಟೆಗಳನ್ನು ಮಾರಿ ಬಂದ ಹಣದಲ್ಲಿ ಆಹಾರದ ಖರ್ಚನ್ನು ಕಳೆಯುವುದರ ಮೂಲಕ ಒಂದೊಂದೂ ವಂಶದ ಆರ್ಥಿಕ ಪ್ರತಿಫಲವನ್ನು ಲೆಕ್ಕ ಹಾಕುವುದರಿಂದ ಹುಂಜಗಳ ಪರೀಕ್ಷೆ ಮಾಡುವುದನು 'ಹೇಗ್‌ಡೂರ್ನ್' ಶಿಫಾರಸ್ಸು ಮಾಡುತ್ತಾರೆ. ಈ ಕ್ರಮವನ್ನು ಆಚರಣೆಗೆ

ತರಲು ಒಟ್ಟಿನಲ್ಲಿ ಬೇಕಾದುದು ಬೇರೆ ಬೇರೆ ಹುಂಜದ ಹೆಣ್ಣುಮಕ್ಕಳನ್ನಿಡಲು ಬೇರೆ ಬೇರೆಯಾದ ಹಲವು ಆವರಣಗಳು ಮತ್ತು ಪ್ರತಿಯೊಂದು ಹುಂಜದ ಪೀಳಿಗೆಗೂ ಪ್ರತ್ಯೇಕವಾದ ಮರಿಮಾಡುವ ಸ್ಥಳ ಹಾಗೂ ಪ್ರತ್ಯೇಕ ಮುಂಗಾಲ ಬಲೆಯ ಮೇಲಿನ ಮುದ್ರೆ ಗುರುತುಗಳು ಮಾತ್ರ. ವೆಚ್ಚವನ್ನು ಕಡಮೆಮಾಡುವ ಮತ್ತೊಂದು ವಿಧಾನವೆಂದರೆ ಇಡೀ ಉತ್ಪಾದನಾ ಚಕ್ರವನ್ನು ಪರಿಗಣಿಸುವ ಬದಲು ಇದರ ಕೆಲವು ಮಾದರೀ ಭಾಗಗಳನ್ನು ಪರಿಗಣಿಸುವುದು. ವಾರದ ಏಳು ದಿನಗಳ ಬದಲು ಮೂರರಿಂದ ಐದು ದಿನಗಳು ಬೋನುಗೂಡಿನಲ್ಲಿಡುವುದು. ಅಥವಾ ಪ್ರತಿ ತಿಂಗಳಲ್ಲಿ ಕೆಲವು ದಿನಗಳು ಮಾತ್ರ ಬೋನುಗೂಡಿನಲ್ಲಿಡುವುದು. ಅಥವಾ ಚಳಿಗಾಲದ ಪ್ರಾರಂಭದಲ್ಲಿನ ಉತ್ಪಾದನೆಯನ್ನು ಗುರುತಿಸಿಕೊಂಡು ನಂತರ ಬೇಸಿಗೆಯ ಕೊನೆಯ ಹಾಗೂ ಕೋಳಿಗಳು ಗರಿಯುದುರ್ಚುವ ಮೊದಲಿನ ವಸಂತ ಋತುವಿನ ಉತ್ಪಾದನೆಯನ್ನು ಗುರುತಿಸಿಕೊಳ್ಳುವುದು ಮೊದಲಾದ ಅನೇಕ ಕ್ರಮಗಳು ಪರೀಕ್ಷಿಸಲ್ಪಟ್ಟಿವೆ ಮತ್ತು ತೃಪ್ತಿದಾಯಕವಾದ ಉತ್ತರಗಳನ್ನು ಕೊಟ್ಟಿರುವುದಾಗಿ 'ಹಟ್' ವಿವರಿಸಿದ್ದಾರೆ. ಮೊಟ್ಟೆ ತೂಕವನ್ನು ಹೆಚ್ಚಿಸುವುದಕ್ಕಾಗಿ ತಳಿಎಬ್ಬಿಸುವ ಕಾರ್ಯ ಮಾಡುವುದಾದರೆ ಒಂದು ಹೇಂಟೆಯ ಎಲ್ಲ ಮೊಟ್ಟೆಗಳನ್ನೂ ತೂಗುವ ಅವಶ್ಯಕತೆಯಿಲ್ಲ. ಸಂದಿಗ್ಧ ಸಮಯದಲ್ಲಿ ತೆಗೆದುಕೊಂಡ ಮಾದರಿಗಳು ಒಳ್ಳೆಯ ಅಂದಾಜು ಮಾಡಲು ಬೇಕಾದಷ್ಟು ವಿಷಯಗಳನ್ನು ಕೊಡುತ್ತವೆ. ಉದಾಹರಣೆಗೆ 'ಪರಿಟೀ'ನಲ್ಲಿ ನಾವು ಮೊದಲ 10 ಮೊಟ್ಟೆಗಳಲ್ಲಿ ಪರ್ಯಾಯವಾಗಿ 5 ಮೊಟ್ಟೆಗಳನ್ನು ತೂಗುತ್ತೇವೆ. ನಂತರ ಆದರ್ಶ ಗುರಿಯಾದ 2 ಔನ್ಸ್ ತೂಕದ ಮೊಟ್ಟೆ ಬರುವವರೆಗೆ ಪಕ್ಷಕ್ಕೆ ಒಂದು ಮೊಟ್ಟೆಯನ್ನು ತೂಗುತ್ತೇವೆ. ಪೂರ್ಣವಾಗಿ ವಯಸ್ಸಿಗೆ ಬಂದ ಹೇಂಟೆಯ ಸರಾಸರಿ ಮೊಟ್ಟೆ ತೂಕವನ್ನು, ಹೇಂಟೆಗಳು ಹನ್ನೆರಡರಿಂದ ಹದಿನಾಲ್ಕು ತಿಂಗಳುಗಳ ವಯಸ್ಸಿನವಾದಾಗಿನ ವಸಂತ ಋತುವಿನಲ್ಲಿ ವಾರಾಂತರದಲ್ಲಿ ನಾಲ್ಕು ಮೊಟ್ಟೆಗಳನ್ನು ತೂಗುವುದರಿಂದ ಪಡೆಯಬಹುದು.

"ಆಯ್ಕೆ ಮತ್ತು ತಳಿಎಬ್ಬಿಸುವ ಕಾರ್ಯಗಳಿಗೆಉಪಯೋಗ ಮಾಡಲು ಸಾಧ್ಯವಾಗುವಂತೆ ಈ ವಿಷಯಗಳನ್ನು ಕ್ರೋಢೀಕರಿಸಿ ವಿಶ್ಲೇಷಿಸಲು ಸಾಕಷ್ಟು ಚೆನ್ನಾಗಿ ತರಬೇತಿ ಹೊಂದಿದ ಸಿಬ್ಬಂದಿವರ್ಗ ಇದ್ದರೆ ಮಾತ್ರ ಮೊಟ್ಟೆ ಉತ್ಪಾದನೆಯ ದಾಖಲಿಡುವುದು ಮತ್ತು ಅಳತೆಮಾಡಲು ತಗಲುವ ವೆಚ್ಚ ಸೂಕ್ತವಾಗುತ್ತದೆ. ಈ ಅಂಶವನ್ನು ಎತ್ತಿಹೇಳುವುದು ಅನಾವಶ್ಯಕವಾಗಿ ಕಾಣುತ್ತದೆ. ಆದರೆ ಯಾರಿಗೂ ವಿಶ್ಲೇಷಿಸಿ ಈ ದಾಖಲುಗಳ ಉಪಯೋಗ ಪಡೆಯುವ ವ್ಯವಧಾನವಿಲ್ಲದಿದ್ದರೂ, ಸರಕಾರಿ ಕೇಂದ್ರಗಳಲ್ಲಿ ಬೋನುಗಳನ್ನಿಡುವ ಪದ್ಧತಿ ಆಚರಣೆಯಲ್ಲಿರುವುದನ್ನು ನಾನು ನೋಡಿದ್ದೇನೆ.

"ತಳಿಎಬ್ಬಿಸುವ ಕಾರ್ಯದಲ್ಲಿ ಸದ್ಯಕ್ಕೆ ಅತಿಮುಖ್ಯವಾದ ಅಂಶಗಳನ್ನು ಮಾತ್ರ ಅಳೆಯುವುದರಿಂದ ಕೂಡ ವೆಚ್ಚವನ್ನು ಕಡಮೆಮಾಡಬಹುದು. ಆರ್ಥಿಕ ಮತ್ತು ವಂಶವಾಹಿಕ ಅಂಶಗಳ ದೃಷ್ಟಿಯಿಂದ ಅಳತೆಗೆ ಯೋಗ್ಯವಾದ ಗುಣಗಳೆಂದರೆ, ಮರಿಯಾಗುವಿಕೆ, ಮರಿಗಳ ನಶ್ವರತೆ, ಲೈಂಗಿಕ ಪಕ್ವತೆ, ಚಳಿಗಾಲದ ಮೊಟ್ಟೆ ಉತ್ಪಾದನೆ, ಮೊದಲನೆ ಮತ್ತು ಬಹುಶಹ ಎರಡನೇ ವರ್ಷದ ಮೊಟ್ಟೆ ಉತ್ಪಾದನೆ, ಮೊಟ್ಟೆಯ

ತೂಕ, ಶರೀರದ ತೂಕ ಮತ್ತು ರೋಗನಿರೋಧಕ ಶಕ್ತಿ ಅಥವಾ ವಯಸ್ಸಿನ ಕೋಳಿಗಳ ಜೀವನ ಸಾಮರ್ಥ್ಯ."

"ತಳಿಗಾರನಿಂದ ಪಡೆದ, ಅವನ ಕೇಂದ್ರದ ಪರಿಸರದಲ್ಲಿನ ಅಳತೆಗಳು ಮತ್ತು ದಾಖಲುಗಳನ್ನು 'ರಾಜ್ಯ ಹತೋಟಿಯ ಮೊಟ್ಟೆಯಿಡುವ ಪರೀಕ್ಷೆ'ಗಳಿಂದ ಪರೀಕ್ಷಿಸಬೇಕು ಮತ್ತು ಅದರಿಂದಲೂ ಪೂರಕ ಮಾಹಿತಿ ಪಡೆಯಬೇಕು. ತಳಿಗಾರನ ಗುಂಪಿನ ಸರಾಸರಿ ಆರ್ಥಿಕ ಸಾಮರ್ಥ್ಯದ ಬಗ್ಗೆ ಸೂಚನೆ ಕೊಡುವಂತೆ ಈ ಪರೀಕ್ಷೆಗಳನ್ನು ನಡೆಸಬೇಕು. ಇದೇ ಅಡ್ಡಾದಿಡ್ಡಿ ಮಾದರಿ ಪರೀಕ್ಷೆ (ರ್‍ಯಾಂಡಮ್ ಸಾಂಪಲ್ ಟೆಸ್ಟ್)ಯ ಗುರಿ, ಇದರಲ್ಲಿ ಮೊಟ್ಟೆ ಅಥವಾ ಕೋಳಿಮರಿಗಳು ಅಥವಾ ಬೆಳೆಯುತ್ತಿರುವ ಹೇಂಟೆಗಳನ್ನು ತಳಿಗಾರನ ಗುಂಪಿನಿಂದ ಒಬ್ಬ ಅಧಿಕಾರಿಯು ತೆಗೆದುಕೊಂಡು, ರಾಜ್ಯ ನಿಯಂತ್ರಿತ ಕೇಂದ್ರದ ಸಮಾನವಾದ ಪರಿಸರದಲ್ಲಿ ಇತರ ತಳಿಗಾರರಿಂದ ಪಡೆದ ಮಾದರಿ ಗುಂಪುಗಳ ಜೊತೆಗೆ ಸ್ಪರ್ಧೆಯಿಂದ ಪರೀಕ್ಷಿಸುತ್ತಾನೆ. ಈ ಪರೀಕ್ಷೆಗಳ ಫಲಿತಾಂಶಗಳನ್ನು ಕೇಂದ್ರಗಳ ಅಂಗೀಕಾರಕ್ಕೆ ಆಧಾರವಾಗಿ ಉಪಯೋಗಿಸಬಹುದು ಮತ್ತು ಭವಿಷ್ಯದಲ್ಲಿ ಕೋಳಿಮರಿಗಳನ್ನಾಗಲೀ ಅಥವಾ ತಳಿಎಬ್ಬಿಸುವ ಗುಂಪನ್ನಾಗಲಿ ಕೊಂಡುಕೊಳ್ಳುವವರಿಗೆ ಮಾರ್ಗದರ್ಶಿಯಾಗುತ್ತದೆ."

ಅಧ್ಯಾಯ 6

ಕೋಳಿಗಳ ಬೇರ್ಪಡಿಸುವಿಕೆ


ಕೋಳಿಸಾಕಾಣಿಕೆಯಲ್ಲಿನ ಯಶಸ್ಸು, ಒಳ್ಳೆಯ ಗುಂಪಿನೊಡನೆ ಪ್ರಾರಂಭಿಸುವುದೊಂದೇ ಅಲ್ಲದೆ ನಿರಂತರವಾದ ಬೇರ್ಪಡಿಸುವಿಕೆಯಿಂದ ಅವುಗಳ ಉತ್ಪಾದನಾ ಮಟ್ಟವನ್ನು ಉನ್ನತಮಟ್ಟದಲ್ಲಿ ಉಳಿಸಿಕೊಳ್ಳುವುದನ್ನೂ ಅವಲಂಬಿಸಿದೆ. ಆದ್ದರಿಂದ ಬೇರ್ಪಡಿಸುವಿಕೆ ಯಾವುದೇ ಕೋಳಿ ಉದ್ಯಮದ, ದಕ್ಷ ಮೇಲ್ವಿಚಾರಣೆಯ ಒಂದು ಅವಶ್ಯಕ ಅಂಗವಾಗಿದೆ ಮತ್ತು ಇದು ಲಾಭದ ಮೇಲೆ ನೇರಪ್ರಭಾವವನ್ನು ಹೊಂದಿದೆ. ಕೋಳಿಗಳ ಶಾರೀರಿಕ ಗುಣಗಳಿಂದ ತೀರ್ಮಾನ ಮಾಡಿದಾಗ, ಅವುಗಳನ್ನು ಯಾವ ಗುಣಕ್ಕಾಗಿ ತಳಿ ಎಬ್ಬಿಸಿರುತ್ತಾರೋ ಆ ಗುಣಗಳಿಲ್ಲದ ಕೋಳಿಗಳನ್ನು ಗುಂಪಿನಿಂದ ವಿಸರ್ಜಿಸುವುದನ್ನು 'ಬೇರ್ಪಡಿಸುವಿಕೆ' ಎಂದು ಕರೆಯುತ್ತಾರೆ, ಆ ಗುಣಗಳು ಮೊಟ್ಟೆ ಉತ್ಪಾದನೆಗಾಗಲಿ, ಆಹಾರೋದ್ದೇಶ ಅಥವಾ ಪ್ರದರ್ಶನಕ್ಕಾಗಲಿ ಆಗಿರಬಹುದು.

ಆಚರಣೆಯಲ್ಲಿ ಅತಿ ಕಡಮೆ ಸಾಮ್ಯವನ್ನು ಹೊಂದಿದ್ದರೂ ಸಹ, ಬೇರ್ಪಡಿಸುವಿಕೆ ಮತ್ತು ಆಯ್ಕೆ ಸಮಾನ ಪದಗಳೆಂದು ಅನೇಕ ವೇಳೆ ಭಾವಿಸಲಾಗುತ್ತದೆ. ಒಳ್ಳೆಯ ಮೇಲ್ವಿಚಾರಣೆಯನ್ನು ಹೊಂದಿರುವ ಕೇಂದ್ರಗಳಲ್ಲಿ ಈ ಎರಡೂ ಕ್ರಿಯೆ ಸಮಾನ ಪ್ರಾಮುಖ್ಯತೆಯನ್ನು ಹೊಂದಿವೆ. ಆಯ್ಕೆ ತಳಿಎಬ್ಬಿಸುವ ಉದ್ದೇಶಕ್ಕಾಗಿ ಕೋಳಿಗಳ ಗುಂಪಿನಲ್ಲಿ ಅತ್ಯುತ್ತಮ ವೈಯಕ್ತಿಕ ಕೋಳಿಗಳನ್ನು ಆರಿಸುವುದನ್ನು ಒಳಗೊಳ್ಳುತ್ತದೆ. ಬೇರ್ಪಡಿಸುವುದು ಎಂದರೆ ಉತ್ಪಾದಕವಲ್ಲದ ಮತ್ತು ಲಾಭದಾಯಕವಲ್ಲದ ಕೋಳಿಗಳನ್ನು ದೂರಮಾಡುವುದು. ಒಳ್ಳೆಯ ಮೂಲ ಸಾಮಗ್ರಿಯೊಂದಿಗೆ ಪ್ರಾರಂಭ ಮಾಡಿದರೂ ಸಹ, ಕೆಲವು ಚೆನ್ನಾಗಿ ಬೆಳೆಯದೆ ಇರುವ ಮರಿಗಳು ಮತ್ತು ಕಡಮೆ ಮೊಟ್ಟೆಗಳನ್ನಿಡುವ ಹೇಂಟೆ ತೋರಿಬರುವುದು ಅನಿವಾರ್ಯ. ಮೊಟ್ಟೆ ಉತ್ಪಾದನಾ ಮನೆಯ ಇಂತಹ ಕಿಡಿಗೇಡಿಗಳು — ಕೋಳಿಸಾಕಣೆದಾರನಿಗೆ ಲಾಭದಾಯಕವಲ್ಲದ ಕೋಳಿಗಳು — ಗುಂಪಿನ ಸಾಮರ್ಥ್ಯವನ್ನು ಕುಗ್ಗಿಸುತ್ತವೆ. ಇವುಗಳಿಗೂ ಕೂಡ ಸರಿಯಾಗಿ ಬೆಳೆಯುತ್ತಿರುವ ಮತ್ತು ಚೆನ್ನಾಗಿ ಮೊಟ್ಟೆ ಇಡುತ್ತಿರುವ ಕೋಳಿಗಳಷ್ಟೇ ವೆಚ್ಚ ಮತ್ತು ಗಮನ ಅವಶ್ಯಕವೆನಿಸಿದರೂ ಇವುಗಳಿಂದ ದೊರೆಯುವ ಪ್ರತಿಫಲ ಕಡಮೆಯೆ.

ಆದ್ದರಿಂದ ಪ್ರತಿಯೊಂದು ಕೋಳಿಸಾಕಾಣಿಕಾ ಕೇಂದ್ರದಲ್ಲೂ ಅದು ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ, ಬೇರ್ಪಡಿಸುವಿಕೆ ಅತಿಮುಖ್ಯವಾದುದು ಮತ್ತು ಇಡೀ ವರ್ಷದ ಸತತ ಕ್ರಿಯೆಯಾಗಿರಬೇಕು.

ಬೇರ್ಪಡಿಸುವುದಕ್ಕಾಗಿ ಸಾಮಗ್ರಿಗಳು: ಕೋಳಿ ಕೇಂದ್ರಗಳಲ್ಲಿ ಕೋಳಿಗಳನ್ನು ಬೇರ್ಪಡಿಸುವುದಕ್ಕೆ ಮತ್ತು ಇತರ ಉದ್ದೇಶಗಳಿಗಾಗಿ ಕೋಳಿಗಳನ್ನು ಹಿಡಿಯುವುದ ರಲ್ಲಿಯೇ ಬಹಳ ಸಮಯ ಕಳೆದುಹೋಗುತ್ತದೆ. ಎರಡು ಅಥವಾ ಮೂರು ಭಾಗ ಗಳಾಗಿ ವಿಭಾಗಿಸಿದ ಒಂದು ಹಿಡಿಯುವ ಪೆಟ್ಟಿಗೆ (ಚಿತ್ರ 22)ಯನ್ನು ಕೇಂದ್ರದ ಸಲಕರಣೆಗಳಲ್ಲಿ ಒಂದಾಗಿ ಸೇರಿಸುವುದರಿಂದ ಈ ವ್ಯರ್ಥಕಾಲಹರಣವನ್ನು ನಿವಾರಿಸ ಬಹುದು. ಈ ಪೆಟ್ಟಿಗೆಯನ್ನು ಸುಲಭವಾಗಿ ಒಂದು ಕೋಳಿ ಕೇಂದ್ರದಿಂದ ಮತ್ತೊಂ ದಕ್ಕೆ ಸಾಗಿಸಬಹುದು. ಇದನ್ನು ದಾಟುವ ಕಂಡಿ ಆಚೆ ಇಡಬೇಕು ಮತ್ತು ಕೋಳಿ ಗಳನ್ನು ಇದರೊಳಕ್ಕೆ ಓಡಿಸಬೇಕು. ಪೆಟ್ಟಿಗೆ ತುಂಬಿದಾಗ ಜಾರುದ್ವಾರಗಳನ್ನು ಜರುಗಿಸಬೇಕು. ದಾಟುವ ಕಂಡಿ ಭೂಮಟ್ಟಕ್ಕಿಂತ ಎತ್ತರದಲ್ಲಿದ್ದರೆ ಚಿತ್ರ 22ರಲ್ಲಿ ತೋರಿಸಿರುವಂತೆ ಒಂದು ಸರಿಹೊಂದಿಸುವ ರಚನೆ ಕೋಳಿಮನೆಯಿಂದ ಪೆಟ್ಟಿಗೆಗೆ ನಿರಂತರವಾದ ದಾರಿಯನ್ನೊದಗಿಸುತ್ತದೆ.

ಬೇರ್ಪಡಿಸುವುದಕ್ಕಾಗಿ ಸಿದ್ಧತೆ: ಮೊಟ್ಟೆಯಿಡುತ್ತಿರುವ ಹೇಂಟೆಗಳು ಮತ್ತು ಬೆಳೆಯುತ್ತಿರುವ ಮರಿಗಳನ್ನು ಬೆದರಿಸದಂತೆ ಎಚ್ಚರವಹಿಸಬೇಕು. ಬೇರ್ಪಡಿಸುವ ಕ್ರಿಯೆಯ ಉದ್ದಕ್ಕೂ ಅವುಗಳನ್ನು ಎಚ್ಚರದಿಂದ ನಿರ್ವಹಿಸಬೇಕು. ಮೊದಲಿಗೆ ಕೋಳಿ



ಚಿತ್ರ 22: ಹಿಡಿಯುವ ಪೆಟ್ಟಿಗೆ

ಗಳನ್ನು ಅವುಗಳ ಮನೆಯಲ್ಲಿ ಕೂಡಬೇಕು, ಅವುಗಳಿಗೆ ಅನಾವಶ್ಯಕವಾದ ಉದ್ರೇಕ ವನ್ನು ಕಡಮೆಮಾಡಲು, ಮನೆಯ ಬಾಗಿಲು, ಕಿಟಕಿ ಮುಂತಾದುವನ್ನು ಮುಚ್ಚು ವುದರಿಂದ ಅಥವಾ ಅವುಗಳ ಮೇಲೆ ಗೋಣಿಚೀಲ ನೇತುಹಾಕುವುದರಿಂದ ಕತ್ತಲು ಮಾಡಬೇಕು.

ಹಿಡಿಯುವ ಪೆಟ್ಟಿಗೆಯ ಒಂದು ತುದಿಯನ್ನು, ದಾಟುವ ಕಂಡಿ ಅಥವಾ ಹೊರಕ್ಕೆ ಬರುವ ದಾರಿಗೆ ಹೊಂದಿಸಿಟ್ಟು ಒಂದೊಂದು ಬಾರಿಗೆ ಕೆಲವು ಮಾತ್ರ ಹೋಗುವಂತೆ ಕೋಳಿಗಳನ್ನು ನಿಧಾನವಾಗಿ ಅದರೊಳಕ್ಕೆ ಓಡಿಸಬೇಕು. ವಿಸ್ತಾರವಾದ ಜಾಗದಲ್ಲಿರುವ ಕೋಳಿಗಳನ್ನು ಮನೆಯ ಒಂದು ಮೂಲೆಯಿಂದ ಪೆಟ್ಟಿಗೆಯೊಳಕ್ಕೆ ಓಡಿಸುವುದರಿಂದ ಅತ್ಯುತ್ತಮವಾಗಿ ಹಿಡಿಯಬಹುದು. ಹಿಡಿಯುವ ಕೊಕ್ಕೆಗಳು ಕೋಳಿಗಳಿಗೆ ಅಪಾಯ ಅಥವಾ ಗಾಬರಿ ಉಂಟುಮಾಡಿ ಅವುಗಳು ಉತ್ಪಾದನೆಯನ್ನು ನಿಲ್ಲಿಸುವಂತೆ ಮಾಡುವ ಸಾಧ್ಯತೆಯಿರುವುದರಿಂದ ಅದನ್ನು ವಿವೇಚನೆಯಿಂದ ಉಪಯೋಗಿಸಬೇಕು. ಕೊಕ್ಕೆಯನ್ನು ಫಲಕಾರಿಯಾಗಿ ಉಪಯೋಗಿಸಲು ಸ್ವಲ್ಪ ಅಭ್ಯಾಸ ಬೇಕು. ಇದನ್ನು ಭೂಮಿಯ ಮೇಲೆ ಕೆಳಮಟ್ಟದಲ್ಲಿಟ್ಟುಕೊಂಡಿರಬೇಕು ಮತ್ತು ಕೋಳಿಗಳ ಪಾದದಿಂದ ಮೇಲಿನ ಕಾಲಿನ ಭಾಗಕ್ಕೆ ಬೇಗ ಎಳೆಯಬೇಕು.

ಪರೀಕ್ಷೆಮಾಡುವಾಗ ಕೋಳಿಗಳನ್ನು ಅವುಗಳ ಸ್ವಾಭಾವಿಕ ಶರೀರ ಭಂಗಿಯಲ್ಲಿ ಹಿಡಿದುಕೊಳ್ಳಬೇಕು. ಕೋಳಿಯ ಶರೀರ ಒಂದು ಕೈಯಿನ ಮೇಲೆ ಆರಾಮವಾಗಿರಬೇಕು. ಇದರಿಂದ ಪರೀಕ್ಷೆಯ ಕಾಲದಲ್ಲಿ ತಲೆ, ರೆಕ್ಕೆ, ಮೊದಲಾದುವನ್ನು ಪರೀಕ್ಷಿಸಲು ಮತ್ತೊಂದು ಕೈ ಬಿಡುವಾಗಿರುತ್ತದೆ. ಕೋಳಿಗಳನ್ನು ಪೆಟ್ಟಿಗೆಯಿಂದ ತೆಗೆಯುವಾಗ ಮತ್ತು ಪುನಃ ಇಡುವಾಗ, ತಲೆ ಮೊದಲು ಹಿಡಿಯಬೇಕು.

ಬೆಳೆಯುತ್ತಿರುವ ಗುಂಪಿನಲ್ಲಿ ಬೇರ್ಪಡಿಸುವಿಕೆ

ಒಂದು ಬೆಳೆಯುತ್ತಿರುವ ಕೋಳಿಮರಿಗಳ ಗುಂಪಿನಲ್ಲಿನ ನ್ಯೂನ ಬೆಳವಣಿಗೆಯ ಮರಿಗಳು ಅವುಗಳನ್ನು ಪಡೆದ ತಳಿಎಬ್ಬಿಸುವ ಗುಂಪಿನ ಅನುವಂಶೀಯ ನಿಕೃಷ್ಟ ಗುಣ, ದೋಷಯುಕ್ತ ಆಹಾರ ಅಥವಾ ದೋಷಯುಕ್ತ ಮೇಲ್ವಿಚಾರಣೆಯಿಂದಾಗಿರಬಹುದು ಇಲ್ಲವೆ ಇವೆಲ್ಲವುಗಳ ಒಟ್ಟು ಪರಿಣಾಮದಿಂದಲೂ ಆಗಿರಬಹುದು.

ಬೆಳೆಯುತ್ತಿರುವ ಗುಂಪಿನಲ್ಲಿ ಸಮಯದಿಂದ ಸಮಯಕ್ಕೆ ಬೇರ್ಪಡಿಸುವಿಕೆಯ ಪ್ರಯೋಜನಗಳೆಂದರೆ: (1) ಆಹಾರದ ಉಳಿತಾಯ, (2) ರೋಗ ಹರಡುವುದನ್ನು ತಡೆಗಟ್ಟುವುದು, (3) ಗುಂಪಿನಲ್ಲಿ ಹೆಚ್ಚಿನ ಸಮತೆ. ಬೆಳವಣಿಗೆಯಲ್ಲಿ ಕುಗ್ಗಿರುವ ಕೋಳಿಮರಿಗಳು ಆಹಾರವನ್ನು ಫಲಕಾರಿಯಾಗಿ ಉಪಯೋಗಿಸಿಕೊಳ್ಳುವ ಶಕ್ತಿಯನ್ನು ಹೊಂದಿರುವುದಿಲ್ಲ. ಆದುದರಿಂದ ಅವುಗಳನ್ನು ಗುಂಪಿನಲ್ಲಿ ಹೆಚ್ಚು ದಿನ ಬಿಟ್ಟಷ್ಟೂ ಹೆಚ್ಚಿಗೆ ಆಹಾರ ವ್ಯರ್ಥವಾಗುತ್ತದೆ. ಕೆಲವು ರೋಗಗಳು ಆರೋಗ್ಯವಾಗಿರುವ ಕೋಳಿಗಳಿಗೆ ರೋಗಪೀಡಿತ ಕೋಳಿಗಳಿಂದ ಹರಡುತ್ತವೆ, ಆದುದರಿಂದ ಅವುಗಳನ್ನು ಸಾಧ್ಯವಾದಷ್ಟು ಬೇಗ ಗುಂಪಿನಿಂದ ತೆಗೆದುಬಿಡಬೇಕು.

ಚೈತನ್ಯರಾಹಿತ್ಯಕ್ಕಾಗಿ ಬೇರ್ಪಡಿಸುವಿಕೆ: ರೋಗಪೀಡಿತವಾಗಿರುವ ಮತ್ತು ಚೈತನ್ಯ ಹೀನವಾಗಿರುವ ಕೋಳಿಮರಿಗಳನ್ನು ಕಂಡಕೂಡಲೇ ಬೇರ್ಪಡಿಸಬೇಕು. ಬೆಳೆಯುತ್ತಿರುವ ಗುಂಪಿನ ಚೈತನ್ಯರಾಹಿತ್ಯವನ್ನು ಹಲವು ಚಿಹ್ನೆಗಳು ಸೂಚಿಸುತ್ತವೆ. ಮಂಕಾಗಿ ಕಾಣುವ ಮತ್ತು ಮೂಲೆಯಲ್ಲಿ ಮುದುರಿ ಕೂರುವ ಮನೋವೃತ್ತಿಯನ್ನು ತೋರಿ

ಸುವ ಎಳೆಕೋಳಿಮರಿಗಳು ಬಹುಶಃ ಥಂಡಿಯಿಂದ ಅಥವಾ ರೋಗದಿಂದ ನರಳುತ್ತಿರುತ್ತವೆ. ಜೋಲುಬಿದ್ದ ಗರಿಗಳು ರೋಗವನ್ನು ಸೂಚಿಸುತ್ತವೆ. ಸಾಮಾನ್ಯವಾಗಿ ಹೊಳಪಿಲ್ಲದ ಪುಕ್ಕಗಳು ರೋಗ ಸೂಚಿಸುತ್ತವೆ. ಮಂಕಾದ ಮತ್ತು ಕುಳಿ ಬಿದ್ದ ಕಣ್ಣುಗಳು ಸಾಮಾನ್ಯವಾಗಿ ಅನುವಂಶೀಯ ಚೈತನ್ಯರಾಹಿತ್ಯವನ್ನು ಸೂಚಿಸುತ್ತವೆ. ಬೂದು ಕಣ್ಣು ಅಥವಾ ಮುತ್ತಿನಕಣ್ಣುಗಳನ್ನು ಹೊಂದಿರುವ ಕೋಳಿಮರಿಗಳು ಸಾಮಾನ್ಯವಾಗಿ 'ಕೋಳಿ ಪಾರ್ಶ್ವವಾಯು' ಎಂದು ಕರೆಯುವ, ಅಂಟುಜಾಡ್ಯ (ಸೋಂಕು ರೋಗ)ವನ್ನು ಹೊಂದಿರುವ ಬಗ್ಗೆ ಅನುಮಾನ ಪಡಬೇಕು.

ನಿಕೃಷ್ಟ ಗರಿರಚನೆಗಾಗಿ ಬೇರ್ಪಡಿಸುವಿಕೆ: ಬೆಳೆಯುವ ಕೋಳಿಮರಿಗಳುಳ್ಳ ಪ್ರತಿಯೊಂದು ಗುಂಪಿನಲ್ಲಿಯೂ ಆರರಿಂದ ಎಂಟುವಾರಗಳ ವಯಸ್ಸಿನವರೆಗೆ ಕೆಲವು ಮರಿಗಳು ನಿಕೃಷ್ಟ ಗರಿರಚನೆಯನ್ನು ತೋರಿಸುತ್ತವೆ (ಚಿತ್ರ 23). ಈ ಸ್ಥಿತಿ ಕೋಳಿ



ಚಿತ್ರ 23: ಕನಿಷ್ಠ ಗರಿಮೂಡುವಿಕೆಯನ್ನು ತೋರಿಸುವ ಕೋಳಿಗಳು

ಗಳನ್ನು ಆವರಣದೊಳಕ್ಕೆ ಮಿತಿ ಮೀರಿ ತುಂಬುವುದರಿಂದ ಅಥವಾ ಆಹಾರದಲ್ಲಿನ ಕೆಲವು ನ್ಯೂನತೆಗಳಿಂದಾಗಿರಬಹುದು. ಆದರೆ ಇದು ಸಾಮಾನ್ಯವಾಗಿ ಅನುವಂಶೀಯ ಗುಣ. ಕೆಲವು ಸಾರಿ ನಿಕೃಷ್ಟ ಗರಿರಚನೆ, ನಿಧಾನ ಬೆಳವಣಿಗೆಯೊಂದಿಗೆ ಒಡಗೂಡಿರುತ್ತದೆ.

ನಿಕೃಷ್ಟ ಗರಿರಚನೆಯ ಕಡೆಗೆ ಪ್ರವೃತ್ತಿಯನ್ನು ತೋರಿಸುವ ಕೋಳಿಗಳನ್ನು ತಳಿವೃದ್ಧಿಸುವ ಕಾರ್ಯಕ್ಕೆ ಉಪಯೋಗಿಸಕೂಡದು. ಅವುಗಳನ್ನು ಮುಂಗಾಲು ಮುದ್ರೆ

ಗುರುತು ಅಥವಾ ಕಾಲು ಇಲ್ಲವೆ ರೆಕ್ಕೆಯ ಪಟ್ಟಿಗಳಿಂದ ಮೊದಲನೇ ನಾಲ್ಕು ಅಥವಾ ಐದನೇ ವಾರದಲ್ಲಿ ಗುರುತಿಸಬೇಕು ಮತ್ತು 10 ರಿಂದ 12 ವಾರಗಳ ವಯಸ್ಸಿನಲ್ಲಿ ಆಹಾರಕ್ಕಾಗಿ ಮಾರಿಬಿಡಬೇಕು.

ನಿಕೃಷ್ಟ ಶರೀರದಾಕಾರ ಹಾಗೂ ಮಾಂಸಗೂಡುವಿಕೆಗಾಗಿ ಬೇರ್ಪಡಿಸುವಿಕೆ: ಒಳ್ಳೆಯ ಉದ್ದ, ಅಗಲ ಮತ್ತು ಗಾತ್ರದೊಂದಿಗೆ ಶರೀರವು ಒಳ್ಳೆಯ ಪ್ರಮಾಣ ಬದ್ಧವಾಗಿರ ಬೇಕು (ಚಿತ್ರ 24, 25, 26, 27). ಶರೀರದ ಗಾತ್ರ ಮುಂದಿನಿಂದ ಹಿಂದಿನ



ಚಿತ್ರ 24: ಎದೆ ಅಗಲಕ್ಕಾಗಿ ಕೋಳಿಯ ಪರೀಕ್ಷೆ




ಚಿತ್ರ 25: ಶರೀರದ ಆಳಕ್ಕಾಗಿ ಕೋಳಿಯ ಪರೀಕ್ಷೆ



ಚಿತ್ರ 26: ಗುಂಡೆಲಬುಗಳ ನಡುವೆ ಹೆಚ್ಚಿನ ಅವಕಾಶವಿರುವ ಉತ್ತಮ ಮೊಟ್ಟೆ ಉತ್ಪಾದಕ


ವರೆಗೆ ಒಂದೇ ಸಮನಾಗಿರುವಂತೆ ತಳಗಟ್ಟು ಹೆಚ್ಚಿನ ಮಟ್ಟಿಗೆ ಬೆನ್ನಿಗೆ ಸಮಾನಾಂತರವಾಗಿರಬೇಕು. ಉದ್ದಕಾಲಿನ ಮತ್ತು ಸಣ್ಣಶರೀರದ ಕೋಳಿಗಳನ್ನು ಸರಿಯಾದ ಗಾತ್ರ ಹೊಂದಿದ ಕೂಡಲೇ ಬೇರ್ಪಡಿಸಿ ಮಾರಿಬಿಡಬೇಕು. ಮೊಣಕಾಲುಗಳು ಒಂದಕ್ಕೊಂದು ತಗಲುವಂತಿರುವ ಮತ್ತು ಬಿಲ್ಲಿನಂತೆ ಬಗ್ಗಿರುವ ಕಾಲುಗಳುಳ್ಳ ಕೋಳಿಗಳು, ಅಷ್ಟೇ ಅಲ್ಲದೆ ವಕ್ರ ಎದೆಮೂಳೆ ಮತ್ತು ದೋಷಯುಕ್ತ ಬಾಲವಿನ್ಯಾಸ (ಅಳಿಲು ಮತ್ತು ಕುಲಾವಿ ಬಾಲಗಳು-ಚಿತ್ರ 28)ಗಳನ್ನು ಹೊಂದಿರುವ ಕೋಳಿಗಳನ್ನು ಬೇರ್ಪಡಿಸುವ ಪಟ್ಟಿಯಲ್ಲಿ ಸೇರಿಸಬೇಕು.

ಮಾಂಸ ಉತ್ಪಾದನೆಯ ದೃಷ್ಟಿಯಿಂದ, ಎದೆ ಮತ್ತು ಕಾಲುಗಳ ಮೇಲೆ ಚೆನ್ನಾಗಿ ಮಾಂಸಗೂಡುವಿಕೆ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿದೆ. ಮಾಂಸಗೂಡುವಿಕೆಯ ದರ್ಜೆಯು, ಗುಂಪಿನ ತಳಿಎಬ್ಬಿಸುವಿಕೆ, ಸೇವಿಸಿದ ಆಹಾರದ ವಿಧ, ಆಹಾರ ಸೇವನೆಯ ಪ್ರಮಾಣ ಮತ್ತು ಮೇಲುಸ್ತುವಾರಿ ವಿಧಾನಗಳಿಂದ ಪ್ರಭಾವಿತವಾಗುತ್ತದೆ. ಸಾಲದ ಜಾಗದಲ್ಲಿ ಗುಂಪುಗೂಡಿಸುವುದು; ಒಳ ಪರಾವಲಂಬಿಗಳು ಮತ್ತು ರೋಗಗಳು ಬೆಳವಣಿಗೆಯನ್ನು ಕುಗ್ಗಿಸುತ್ತವೆ ಮತ್ತು ಸರಿಯಾಗಿ ಮಾಂಸಗೂಡುವಿಕೆಯನ್ನು ತಡೆಯುತ್ತದೆ. ನಿಕೃಷ್ಟ ಬೆಳವಣಿಗೆಯ ಕೋಳಿಗಳನ್ನು ಬೇರ್ಪಡಿಸಬೇಕು.



ಚಿತ್ರ 27: ಕೋಳಿ ದೇಹರಚನೆ ಪರೀಕ್ಷಿಸುವ ಚಿತ್ರ

ವೇಗವಾಗಿ ಬೆಳೆಯುವ ಮರಿಹುಂಜ ಮತ್ತು ಹೇಂಟೆಗಳಿಗೆ ಮುಂಗಾಲ ಮುದ್ರೆ ಗುರುತು ಅಥವಾ ರೆಕ್ಕೆ ಇಲ್ಲವೇ ಕಾಲಿನಪಟ್ಟಿಗಳನ್ನು ಹಾಕಬೇಕು. ಇದರಿಂದ ಹೆಚ್ಚಾದ



ಚಿತ್ರ 28: ದೋಷಯುತ ಬಾಲವಿನ್ಯಾಸವುಳ್ಳ ಕೋಳಿಗಳು

ಮರಿಹುಂಜಗಳು ವಿಕ್ರಯಕ್ಕೆ ಸಿದ್ಧವಾದಾಗ ಮತ್ತು ವಸತಿ ಒದಗಿಸುವ ಸಮಯದಲ್ಲಿ ಹೇಂಟೆಗಳನ್ನು ಬೇರ್ಪಡಿಸುವಾಗ ಇಂತಹ ಕೋಳಿಗಳನ್ನು ತಳಿಎಬ್ಬಿಸುವುದಕ್ಕಾಗಿ ಉಳಿಸಿಕೊಳ್ಳಬಹುದು. ಮರಿಹುಂಜಗಳನ್ನು ತಳಿಎಬ್ಬಿಸುವ ಉದ್ದೇಶಕ್ಕಾಗಿ ಉಳಿಸಿಕೊಳ್ಳುವುದಾದರೆ, ಅವುಗಳನ್ನು ಎರಡನೇ ಅಧ್ಯಾಯದಲ್ಲಿ ಸೂಚಿಸಿದ ಆದರ್ಶ ಆವಶ್ಯಕತೆಗಳ ಆಧಾರದ ಮೇಲೆ ಬೇರ್ಪಡಿಸಬೇಕು. ದೋಷಗಳು ಮತ್ತು ನ್ಯೂನತೆಗಳುಳ್ಳ ಎಲ್ಲ ಮರಿಹುಂಜಗಳನ್ನೂ ಆಹಾರಕ್ಕಾಗಿ ವಿಕ್ರಯಿಸಬೇಕು.

ವಸತಿ ಒದಗಿಸುವಾಗ ಹೇಂಟೆಗಳ ಬೇರ್ಪಡಿಸುವಿಕೆ:ಹೇಂಟೆಗಳು ಮೊಟ್ಟೆಯಿಡಲು ಪ್ರಾರಂಭಿಸುವುದಕ್ಕೆ ಸುಮಾರು ಒಂದು ತಿಂಗಳು ಮೊದಲೇ ಅವುಗಳನ್ನು ಮೊಟ್ಟೆ ಯಿಡುವ ಮನೆಗಳಲ್ಲಿಡುವುದು ಸೂಕ್ತ. ಲೆಗ್‌ಹಾರ್ನ್ ಹೇಂಟೆಗಳು 150 ದಿನ ವಯಸ್ಸಿನವಾದಾಗ ಮತ್ತು ಸಾಮಾನ್ಯೋದ್ದೇಶದ ಹೇಂಟೆಗಳು 170 ದಿನ ವಯಸ್ಸಿನ ವಾದಾಗ ಮೊಟ್ಟೆಯಿಡಲು ಪ್ರಾರಂಭಿಸಬಹುದು. ಮೊಟ್ಟೆಯಿಡುವ ಮೊದಲನೇ ವರ್ಷದಲ್ಲಿ ಕನಿಷ್ಠ ಉತ್ಪಾದಕವಾಗಿ ಅಭಿವೃದ್ಧಿ ಹೊಂದುವ ಸಾಧ್ಯತೆಯುಳ್ಳ ಹೇಂಟೆ ಗಳನ್ನು ಬೇರ್ಪಡಿಸುವುದು ಸಾಧ್ಯವಾಗುವಂತೆ ಅವುಗಳಿಗೆ ವಸತಿ ಒದಗಿಸುವ ಮೊದಲು ದೋಷಗಳಿಗಾಗಿ ಪರೀಕ್ಷೆ ನಡೆಸಬೇಕು. ಒಳ್ಳೆಯ ಮೊಟ್ಟೆ ಉತ್ಪಾದಕವಾಗಿ ಅಭಿವೃದ್ಧಿ ಹೊಂದಲು ಹೇಂಟೆಗಳು ಸಾಕಷ್ಟು ಚೈತನ್ಯವನ್ನು ಪಡೆದಿರಬೇಕು. ಅಗಲವಾದ ತಲೆಯ ಮೇಲೆ ಪ್ರಮುಖವಾದ ಕಣ್ಣುಗಳು ಅಥವಾ ದಪ್ಪನಾದ ಕೊಕ್ಕು, ಹೊಳಪು ಯುಕ್ತ ಹಳದಿ ಕಾಲುಗಳು, ಹೊಳೆಯುವ ಗರಿಗಳು ಮತ್ತು ಒಳ್ಳೆಯ ಮೈಗೂಡುವಿಕೆ ಇವುಗಳು ಸಾಕಷ್ಟು ಚೈತನ್ಯಯುಕ್ತ ಹೇಂಟೆಗಳನ್ನು ಸೂಚಿಸುತ್ತವೆ.

ಉತ್ಪಾದಕ ಗುಂಪಿನಲ್ಲಿ ಬೇರ್ಪಡಿಸುವಿಕೆ

ಉತ್ಪಾದಕ ಗುಂಪಿನಿಂದಾದ ಲಾಭ ಮೊಟ್ಟೆ ಉತ್ಪಾದನೆಯೊಂದಿಗೆ ನೇರ ಸಂಬಂಧವನ್ನು ಹೊಂದಿದೆ. ಒಂದು ಗುಂಪಿನ ಮೊಟ್ಟೆ ಉತ್ಪಾದನೆ ಹೆಚ್ಚುವುದರ ಜೊತೆಗೆ ಆದಾಯವು ಸಾಕಾಣಿಕಾ ವೆಚ್ಚಕ್ಕಿಂತ ಹೆಚ್ಚು ವೇಗವಾಗಿ ಹೆಚ್ಚುತ್ತದೆ. ಆಹಾರದ ವೆಚ್ಚವು ಮೊಟ್ಟೆ ಉತ್ಪಾದನಾ ಒಟ್ಟು ವೆಚ್ಚದ ಶೇಕಡಾ 60 ರಷ್ಟಾಗುವುದ ರಿಂದ ನಿಕೃಷ್ಟ ಉತ್ಪಾದಕಗಳನ್ನು ಕಂಡಕೂಡಲೇ ಬೇರ್ಪಡಿಸುವುದು ಅವಶ್ಯಕ. ಉತ್ಪಾದನಾಕಾಲದ ಮೊದಲಲ್ಲಿಯೇ ಇಂತಹ ನಿಕೃಷ್ಟ ಉತ್ಪಾದಕಗಳನ್ನು ಬೇರ್ಪಡಿ ಸುವುದರಿಂದ ಮುಂದೆ ಅವುಗಳು ಹೆಚ್ಚುವುದನ್ನು ಪೂರ್ಣವಾಗಿ ತಡೆಗಟ್ಟಬಹುದು. ಕೆಲವು ಕಾಲ ಚೆನ್ನಾಗಿ ಉತ್ಪಾದಿಸಿ ನಂತರ ಯಾವುದೋ ಕಾರಣಕ್ಕಾಗಿ ಉತ್ಪಾದನೆ ಯನ್ನು ನಿಲ್ಲಿಸಿರುವ ಕೋಳಿಗಳನ್ನೂ ಬೇರ್ಪಡಿಸಬೇಕು.

ಅನುತ್ಪಾದಕಗಳನ್ನು ಬೇರ್ಪಡಿಸುವುದು

ಕೊಂಚ ಅಭ್ಯಾಸದೊಂದಿಗೆ ಉತ್ಪಾದಕವನ್ನು ಅನುತ್ಪಾದಕದಿಂದ ಗುರುತಿಸು ವುದು ಸುಲಭದ ಕೆಲಸವಾಗುತ್ತದೆ. ಹೇಂಟೆಯ ಈ ಕೆಳಕಂಡ ಭಾಗಗಳನ್ನು ಸೂಕ್ಷ್ಮ ವಾಗಿ ಪರೀಕ್ಷಿಸುವುದರಿಂದ ಇದನ್ನು ಮಾಡಬಹುದು:

(ಅ) **ಜುಟ್ಟು** — ಉತ್ಪಾದಕಗಳಲ್ಲಿ ಜುಟ್ಟು ಮತ್ತು ಜೋಲು ಮಾಂಸಲಗಳು ಬಿಸಿಯಾಗಿರುತ್ತವೆ ಮತ್ತು ನೋಟಕ್ಕೆ ಪೂರ್ಣ ಬೆಳವಣಿಗೆಯಿಂದ ಕೂಡಿ, ಮೇಣ ದಂತೆ ಮತ್ತು ಕಾಂತಿಯುಕ್ತ ಕೆಂಪಾಗಿರುತ್ತದೆ. ಅನುತ್ಪಾದಕಗಳಲ್ಲಿ ತಣ್ಣಗೆ ಮಂಕಾದ ಬಣ್ಣ ಹೊಂದಿರುತ್ತದೆ ಮತ್ತು ಮುದುಡಾಗಿರುತ್ತದೆ.

(ಆ) **ಜಘನಾಸ್ಥಿ** — ಹೇಂಟೆಗಳು ಉತ್ಪಾದನೆಯಲ್ಲಿರುವಾಗ, ಮೊಟ್ಟೆದ್ವಾರದ ಕಡೆಗೆ ದೇಹದ ಎರಡೂ ಕಡೆಗಳಲ್ಲಿರುವ ಎರಡು ಸಣ್ಣ ಮೂಳೆಗಳಾದ ಜಘನಾಸ್ಥಿಗಳು ಎರಡು ಅಥವಾ ಮೂರು ಬೆರಳುಗಳನ್ನು ಅವುಗಳ ನಡುವೆಯಿಡಲು ಸಾಧ್ಯವಾಗುವಷ್ಟು ಬೇರ್ಪಟ್ಟಿರುತ್ತವೆ (ಚಿತ್ರ 26). ಹೇಂಟೆ ಕೆಲವು ಕಾಲ ಉತ್ಪಾದನೆಯಲ್ಲಿದ್ದ ನಂತರ ಜಘನಾಸ್ಥಿಗಳು ತೆಳುವಾಗಿ ಬಳುಕುವಂತಾಗುತ್ತವೆ. ಅನುತ್ಪಾದಕಗಳಲ್ಲಿ ಹೆಚ್ಚೆಂದರೆ ಒಂದು ಬೆರಳನ್ನು ಇಡಲು ಸಾಧ್ಯವಾಗುವಂತೆ ಜಘನಾಸ್ಥಿಗಳು ಒಂದರ ಹತ್ತಿರ ಒಂದಿರುತ್ತವೆ (ಚಿತ್ರ 29).




ಚಿತ್ರ 29: ಗುಂಜೆಲುಬುಗಳು ಹತ್ತಿರ ಸಮೀಪದಲ್ಲಿರುವ ಅನುತ್ಪಾದಕ



(ಇ) **ಮೊಟ್ಟೆದ್ವಾರ** — ಉತ್ಪಾದಕ ಹೇಂಟೆಯ ಮೊಟ್ಟೆದ್ವಾರ ಅಂಡಾಕಾರವಾಗಿ, ಬೇಕಾದಂತೆ ಹಿಗ್ಗಿಸಲು ಸಾಧ್ಯವಾಗುವಂತೆ ಮತ್ತು ತೇವಾಂಶದಿಂದ ಕೂಡಿರುತ್ತದೆ. ಆದರೆ ಅನುತ್ಪಾದಕಗಳಲ್ಲಿ ಸಣ್ಣದಾಗಿ ಗುಂಡಗೆ ಒಣಗಿಕೊಂಡು ಮತ್ತು ಸುಕ್ಕಿನಿಂದ ಕೂಡಿರುತ್ತದೆ (ಚಿತ್ರ 32, 33).

ಚಿತ್ರ 30: ದೋಷರಹಿತ ಜುಟ್ಟಿರುವ ಹುಂಜದ ತಲೆ

Comb=ಜುಟ್ಟು, Wattles=ಜೋಲು ಮಾಂಸಲ, Earlobe=ಕಿವಿಹಾಲೆ



ಚಿತ್ರ 31: ದೋಷಯುಕ್ತ ಜುಟ್ಟಿನ ರೀತಿಗಳನ್ನು ಹೊಂದಿರುವ ಹುಂಜಗಳ ತಲೆಗಳು



ಚಿತ್ರ 32: ಅಂಡಾಕಾರವಾದ, ಮೃದುವಾದ ಹಾಗೂ ಆರ್ದ್ರ ಹೊರದ್ವಾರವಿರುವ ಒಳ್ಳೆಯ ಉತ್ಪಾದಕ



ಚಿತ್ರ 33: ಗುಂಡಗೆ, ಕಿರಿದಾದ, ಒಣಗಿದ ಹಾಗೂ ಸುಕ್ಕುಗಟ್ಟಿದ ಹೊರದ್ವಾರವಿರುವ ಅನುತ್ಪಾದಕ



34: ಉತ್ತಮ ಉತ್ಪಾದಕ ತಲೆ (ಎಡಗಡೆಯದು) ಅನುತ್ಪಾದಕನ ತಲೆ (ಬಲಗಡೆ) ಯೊಂದಿಗೆ ಹೋಲಿಕೆ



ಚಿತ್ರ 35: ದೊಡ್ಡ ಹೊಟ್ಟೆಯಿರುವ ಉತ್ತಮ ಉತ್ಪಾದಕ ತಳಗಟ್ಟು ಹಾಗೂ ಗುಂಜೆಲುಬುಗಳ ನಡುವೆ ಸಾಕಷ್ಟು ಜಾಗ.



ಚಿತ್ರ 36: ಕಿರಿದಾದ ಹೊಟ್ಟೆಯಿರುವ ಅನುತ್ಪಾದಕ-ತಳಗಟ್ಟು ಹಾಗೂ ಗುಂಜೆಲುಬುಗಳ ನಡುವೆ ಕಿರಿದಾದ ಜಾಗ.

(ಈ) **ಉದರ** — ಉತ್ಪಾದಕಗಳಲ್ಲಿ ಉದರ ಮೃದುವಾಗಿಯೂ, ಜೀರ್ಣಾಂಗ ಮತ್ತು ಮೊಟ್ಟೆ ಉತ್ಪಾದನಾಂಗಗಳ ಕ್ರಿಯೆಗೆ ಅನುಕೂಲವಾಗುವಂತೆ ಸ್ವಲ್ಪಮಟ್ಟಿಗೆ ಹಿಗ್ಗಿದಂತೆಯೂ ಇರುತ್ತದೆ. ಉದರವನ್ನು ಸುತ್ತುವರಿದ ಚರ್ಮ ಮೃದುವಾಗಿಯೂ, ಅನುವರ್ತನಶೀಲವಾಗಿಯೂ ಇರುತ್ತದೆ. ಸಾಮಾನ್ಯವಾಗಿ ತಳಗಟ್ಟಿನ ಕೊನೆ ಮತ್ತು ಜಘನಾಸ್ಥಿಗಳ ಕೊನೆಗಳ ನಡುವೆ ಮೂರರಿಂದ ನಾಲ್ಕು ಬೆರಳು ಇಡುವಷ್ಟು ಜಾಗ ವಿರುತ್ತದೆ (ಚಿತ್ರ 35). ಅನುತ್ಪಾದಕಗಳಲ್ಲಿ ಉದರ ಸಾಮಾನ್ಯವಾಗಿ ಸಂಕುಚಿತ ವಾಗಿರುತ್ತದೆ. ಚರ್ಮ ದಪ್ಪಗೆ ಒರಟಾಗಿರುತ್ತದೆ ಮತ್ತು ಜಘನಾಸ್ಥಿಗಳ ಹಾಗೂ ತಳಗಟ್ಟಿನ ಮಧ್ಯದಲ್ಲಿ ಎರಡು ಬೆರಳಿಡುವಷ್ಟೂ ಜಾಗವಿರುವುದಿಲ್ಲ (ಚಿತ್ರ 36).

ನಿಕೃಷ್ಟ ಉತ್ಪಾದಕಗಳನ್ನು ಒಳ್ಳೆಯವುಗಳಿಂದ ಗುರುತಿಸಲು ಪರಿಗಣಿಸಬೇಕಾದ ನಾಲ್ಕು ಪ್ರಮುಖ ಗುಣಗಳೆಂದರೆ: (1) ಸ್ಥಿತಿ; (2) ಮೊದಲನೆ ವಾರ್ಷಿಕ ಗರಿಯುರ್ಚಿನ ಸಮಯ ಮತ್ತು ತೆಗೆದುಕೊಂಡ ಕಾಲ; (3) ಹಳದಿ ಮಾಂಸದ ತಳಿಗಳಲ್ಲಿ ವರ್ಣ ದ್ರವ್ಯ ಕೂಡುವಿಕೆ ಮತ್ತು (4) ಲೈಂಗಿಕ ಪಕ್ವತೆಯ ವೇಗ.

ಸ್ಥಿತಿ: ಆರೋಗ್ಯವಾದ ಹೇಂಟೆ ಮಾಂಸಯುಕ್ತವಾಗಿರುತ್ತದೆ. ಆದರೆ ಕೊಬ್ಬಿರುವು ದಿಲ್ಲ, ಗರಿರಚನೆ ಬಿಗಿಯಾಗಿಯೂ ಬಾಲ ಮತ್ತು ರೆಕ್ಕೆಗಳು ಮೇಲ್ಮಟ್ಟದಲ್ಲಿಯೂ ಇರುತ್ತದೆ, ಚುರುಕಾದ ಮತ್ತು ಆಕರ್ಷಕ ಅಭಿಪ್ರಾಯ ಕೊಡುತ್ತದೆ, ನಿಲುವು ನೇರ ವಾಗಿರುತ್ತದೆ. ಕೋಳಿಯ ದೈಹಿಕ ಸ್ಥಿತಿಗೆ ತಲೆ ಒಂದು ಅತ್ಯುತ್ತಮ ಸೂಚಿ.

ಅತ್ಯಂತ ಕಿರಿದಾದ ಕೊಕ್ಕು ಮತ್ತು ತಲೆ ಹಾಗೂ ಒರಟಾದ ಮತ್ತು ಮಾಂಸ ಯುಕ್ತವಾದ ತಲೆಯನ್ನು ಹೊಂದಿರುವ ಹೇಂಟೆಗಳು ಸಾಮಾನ್ಯವಾಗಿ ನಿಕೃಷ್ಟ ಉತ್ಪಾದಕಗಳು. ಸರಿಯಾದ ಸ್ಥಿತಿಯಲ್ಲಿಲ್ಲದಿರುವುದು ಮತ್ತು ರೋಗಗಳನ್ನು, ಜುಟ್ಟಿನ ಗುಣಗಳು ಮತ್ತು ಕಣ್ಣಿನ ನೋಟ ಸೂಚಿಸುತ್ತವೆ. ಆರೋಗ್ಯವಾದ ಕೋಳಿ ಕೆಂಪಾದ ಜುಟ್ಟು ಮತ್ತು ಜೋಲುಮಾಂಸಲಗಳನ್ನು ಹೊಂದಿರುತ್ತದೆ. ಸ್ವಚ್ಛ ಪ್ರಮುಖ ತುಂಬುಗಣ್ಣುಗಳು ಮತ್ತು ಮೋಟಾದ, ಬಲವಾದ ಕೊಕ್ಕನ್ನು ಹೊಂದಿರು ತ್ತದೆ. ಬಣ್ಣ ಕಳೆದುಕೊಂಡ, ಊದಾ, ಹಳದಿ ಅಥವಾ ಮಂಕಾದ ಜುಟ್ಟು, ಒಣಗಿದ ಮುಖ, ಮುಂಚಾಚಿಕೊಂಡ ಉದ್ದವಾದ ಮೇಲ್ಕೊಕ್ಕು, ತೆಳುವಾದ ಎದೆ ಮತ್ತು ಜೋತುಬಿದ್ದ ರೆಕ್ಕೆ ಹಾಗೂ ಬಾಲಗಳನ್ನು ಹೊಂದಿರುವ ಕೋಳಿಗಳು, ಅಲ್ಲದೇ ಕೊಬ್ಬಿದ ಭಾರವಾದ ಕೋಳಿಗಳನ್ನು ತಳಿಎಬ್ಬಿಸುವುದಕ್ಕೆ ಅಯೋಗ್ಯವೆಂದು ಬೇರ್ಪಡಿಸ ಬೇಕು. ಜೋಲುಬಿದ್ದ, ತಿರುಚಿಕೊಂಡ, ಹೆಬ್ಬೆರಳ ಗುರುತುಗಳನ್ನು ಹೊಂದಿರುವ, ಮಧ್ಯದಲ್ಲಿ ಟೊಳ್ಳಿರುವ, ಪಕ್ಕದಲ್ಲಿ ಸೀಳಿರುವ ಮತ್ತು ಅಸಮಾನ ಹಲ್ಲುಗಳು ಮೊದಲಾದ ದೋಷಯುಕ್ತವಾದ ಜುಟ್ಟುಗಳನ್ನು ಹೊಂದಿರುವ ಹುಂಜಗಳು ತಳಿ ಎಬ್ಬಿಸುವಿಕೆಗೆ ಯೋಗ್ಯವಲ್ಲ. ಆದುದರಿಂದ ಬೇರ್ಪಡಿಸಬೇಕು.

ಗರಿಯುರ್ಚುವ ಕಾಲ ಮತ್ತು ತೆಗೆದುಕೊಳ್ಳುವ ಸಮಯ: ಪ್ರತಿವರ್ಷವೂ ತನ್ನ ಹಳೆಗರಿಗಳನ್ನು ಉದುರಿಸಿ, ಹೊಸಗರಿಗಳನ್ನು ಬೆಳೆಸಿಕೊಳ್ಳುವುದು ಎಲ್ಲ ಹೇಂಟೆಗಳ ಸ್ವಾಭಾವಿಕ ಅಭ್ಯಾಸ. ಈ ಶಾರೀರಕ ಕ್ರಿಯೆಯನ್ನು ಗರಿಯುರ್ಚು ಎಂದು ಕರೆಯು

ತ್ತಾರೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಮೊಟ್ಟೆಯಿಡುವ ಸರಾಸರಿ ಕೋಳಿಯು ಸಾಮಾನ್ಯವಾಗಿ ತನ್ನ ಮೊದಲನೇ ವರ್ಷದ ಉತ್ಪಾದನೆ ಮುಗಿಯುವ ಕಾಲದಲ್ಲಿ ತನ್ನ ಮೊದಲನೇ ವಾರ್ಷಿಕ ಗರಿಯುರ್ಚುವಿಕೆಯಲ್ಲಿ ತೊಡಗುತ್ತದೆ. ನಿಕೃಷ್ಟ ಹಾಗೂ ಉತ್ತಮ ಉತ್ಪಾದಕ ಹೇಂಟೆಗಳನ್ನು ಗುರುತಿಸುವಲ್ಲಿ ಮೊದಲನೇ ವಾರ್ಷಿಕ ಗರಿಯುರ್ಚುವ ಕಾಲ ಮತ್ತು ಅದಕ್ಕೆ ಬೇಕಾಗುವ ಸಮಯ ಅತಿಮುಖ್ಯ ಅಂಶಗಳು. ಬಹಳ ಮೊದಲೇ ಗರಿಯುರ್ಚುವ ಹೇಂಟೆಗಳು ಸಾಮಾನ್ಯವಾಗಿ ನಿಕೃಷ್ಟ ಉತ್ಪಾದಕಗಳು. ಅತ್ಯುತ್ತಮ ಉತ್ಪಾದಕಗಳು ತಮ್ಮ ಉತ್ಪಾದನಾ ವರ್ಷದ ಕೊನೆಯಲ್ಲಿ ಅಂದರೆ ವಸಂತದಲ್ಲಿ ತಡವಾಗಿ ಗರಿಯುರ್ಚುತ್ತವೆ. ಅತಿ ಕಡಮೆ ಕಾಲದಲ್ಲಿ ಗರಿಯುರ್ಚಲು ಮಾತ್ರ ಉತ್ಪಾದನೆಯನ್ನು ನಿಲ್ಲಿಸಿ ಸಾಮಾನ್ಯವಾಗಿ ಗರಿಯುರ್ಚುವ ಕಾಲದಲ್ಲಿಯೂ ಮೊಟ್ಟೆಯಿಡುತ್ತಿರುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅವುಗಳು ನಿರಂತರ ಉತ್ಪಾದಕಗಳು ಮತ್ತು ಕೊನೆಯಲ್ಲಿ ಶೀಘ್ರವಾಗಿ ಗರಿಯುರ್ಚುತ್ತವೆ. ಮತ್ತೊಂದು ಕಡೆ ನಿಕೃಷ್ಟ ಉತ್ಪಾದಕಗಳು ಬೇಸಿಗೆಯ ಪ್ರಾರಂಭದಲ್ಲಿಯೇ ಗರಿಯುರ್ಚುತ್ತವೆ ಮತ್ತು ಗರಿಯುರ್ಚುವಿಕೆಯಲ್ಲಿ ಬಹುಕಾಲವಿರುತ್ತವೆ. ಅಷ್ಟೇ ಅಲ್ಲದೆ ಗುಂಪಿನ ತಡವಾಗಿ ಗರಿಯುರ್ಚುವ ಹೇಂಟೆಗಳಿಗಿಂತ ಬೇಗೇನೂ ಉತ್ಪಾದನೆಯನ್ನು ಪ್ರಾರಂಭಿಸುವುದಿಲ್ಲ. ಸೆಪ್ಟೆಂಬರ್ ಹೊತ್ತಿಗೆ ಗರಿಯುರ್ಚುವುದನ್ನು ಮುಗಿಸಿರುವ ಅಥವಾ ಇನ್ನೇನು ಮುಗಿಸಲು ಬಂದಿರುವ ಹೇಂಟೆಗಳನ್ನು ಮೊದಲೇ ಗರಿಯುರ್ಚುವ ಹೇಂಟೆಗಳೆಂದು ವರ್ಗೀಕರಿಸಲಾಗಿದೆ. ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಗರಿಯುರ್ಚುವ ಹೇಂಟೆಗಳನ್ನು 'ತಡವಾಗಿ ಗರಿಯುರ್ಚುವ' ಹೇಂಟೆಗಳೆಂದೂ. ಹಾಗೂ ಡಿಸೆಂಬರ್‌ನಲ್ಲಿ ಗರಿಯುರ್ಚುವವನ್ನು 'ಅತ್ಯಂತ ತಡವಾಗಿ ಗರಿಯುರ್ಚುವ' ಹೇಂಟೆಗಳೆಂದೂ ಕರೆಯಬಹುದು.

ಮೊದಲನೇ ಉತ್ಪಾದನಾ ವರ್ಷದ ಕೊನೆಯಾದ ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ಉತ್ಪಾದಕಗಳ ಆಯ್ಕೆ ಮಾಡಿದಾಗ, ಗರಿಯಸ್ಥಿತಿ, ಹೇಂಟೆಗಳು ನಿರಂತರವಾಗಿ ಉತ್ಪಾದಿಸುವಂತಹವು ಹೌದೇ ಅಲ್ಲವೆ ಎನ್ನುವ ಬಗ್ಗೆ ಒಳ್ಳೆಯ ಸಾಕ್ಷಿಯನ್ನು ಕೊಡುತ್ತದೆ. ನಿರಂತರವಾಗಿ ಉತ್ಪಾದಿಸುವ ಕೋಳಿಗಳ ಗರಿಗಳು ಮೊಟ್ಟೆಯಿಡುವ ಗೂಡಿಗೆ ಅವುಗಳ ಹೆಚ್ಚಿನ ಭೇಟಿಯಿಂದಾಗಿ ಸವಕಳಿಯನ್ನು ತೋರಿಸುತ್ತವೆ. ಬೇಗ ಗರಿಯುರ್ಚುವ ಹೇಂಟೆಗಳಲ್ಲಿ ಹೊಸಗರಿಗಳು ಮೂಡಿರುತ್ತವೆ. ಇಂತಹ ಹೇಂಟೆಗಳ ನಯವಾದ, ಕಾಂತಿಯುಕ್ತ ಕಾಲಬಲೆಗಳಿಗೆ ವ್ಯತಿರಿಕ್ತವಾಗಿ ಹಳೆಯವುಗಳಲ್ಲಿ ಕಾಲಬಲೆ ಒಣಗಿ, ಸವೆದಂತೆ ಆಗಿರುತ್ತದೆ. ಹೊಸಗರಿಯ ಟೊಳ್ಳುಕಾಂಡಗಳು ದೊಡ್ಡದಾಗಿ ತುಂಬಿದಂತೆ ಮತ್ತು ಮೃದುವಾಗಿರುತ್ತವೆ. ಆದರೆ ಹಳೆಗರಿಗಳ ಟೊಳ್ಳುಕಾಂಡಗಳು ಸಣ್ಣಗೆ ಗಟ್ಟಿಯಾಗಿ ಬಹುಮಟ್ಟಿಗೆ ಪಾರದರ್ಶಕವಾಗಿರುತ್ತವೆ. ಕತ್ತಿನ ಕೆಲವು ಸಣ್ಣ ಗರಿಗಳು ಕಿರಿದಾದ ಗರಿಯುರ್ಚುವ ಕಾಲವನ್ನು ಸೂಚಿಸಬಹುದು; ಆದರೆ ಉದುರುವಿಕೆ ಶರೀರ ಮತ್ತು ರೆಕ್ಕೆಗಳಿಗೆ ವಿಸ್ತರಿಸಿದಾಗ ಗರಿಯುರ್ಚು ಸಾಮಾನ್ಯವಾಗಿ ಪೂರ್ಣವಾದ್ದಾಗುತ್ತದೆ. ಕೋಳಿಯು ರೆಕ್ಕೆಯ ಗರಿಗಳನ್ನು ಉರ್ಚುವಾಗ ಸಾಮಾನ್ಯವಾಗಿ ಉತ್ಪಾದನೆಯನ್ನು ನಿಲ್ಲಿಸಿದರೂ ಸಹ ಉಳಿದ ಭಾಗಗಳ ಗರಿಯುರ್ಚುವಾಗ ಮೊಟ್ಟೆ

ಯಿಡಬಹುದು. ಆದಾಗ್ಯೂ ಶರೀರದ ತೂಕವನ್ನು ಕಾಯ್ದುಕೊಂಡಾಗ ಅಸಾಧಾರಣವಾದ ಅತ್ಯುತ್ತಮ ಉತ್ಪಾದಕ ಹೇಂಟೆ ರೆಕ್ಕೆಗಳ ಗರಿಯುದುರ್ಪ ಬಹಳಷ್ಟು ಮುಂದುವರಿಯುವವರೆಗೂ ಮೊಟ್ಟೆಯಿಡಬಹುದು.

ಹಳದಿಮಾಂಸದ ತಳಿಗಳಲ್ಲಿ ವರ್ಣದ್ರವ್ಯಕೂಡುವಿಕೆ: ಹಳದಿ ಚರ್ಮದ ಎಲ್ಲ ತಳಿಗಳಲ್ಲೂ ಕೊಕ್ಕು, ಕಾಲುಗಳು, ಪಾದಗಳು, ಮೊಟ್ಟೆದ್ವಾರ ಮತ್ತು ಕಣ್ಣಿನ ಉಂಗುರದಲ್ಲಿ ಸಾಕಷ್ಟು ಹಳದಿ ವರ್ಣದ್ರವ್ಯವಿರುತ್ತದೆ ಮತ್ತು ಸಾಮಾನ್ಯವಾಗಿ ಬಿಳಿಕಿವಿಹಾಲೆಗಳುಳ್ಳ ತಳಿಗಳ ಕಿವಿಹಾಲೆಗಳ ಬಳಿಯಲ್ಲಿಯೂ ಸಾಕಷ್ಟಿರುತ್ತದೆ. ಹಳದಿ ವರ್ಣದ್ರವ್ಯವು ಕೋಳಿಯು ಸೇವಿಸುವ ಆಹಾರದಿಂದ ಬರುತ್ತದೆ. ಹೇಂಟೆಗಳು ಮೊಟ್ಟೆಯಿಡಲು ಪ್ರಾರಂಭಿಸಿದಾಗ ಆಹಾರದ ವರ್ಣದ್ರವ್ಯವು ಮೇಲೆ ಹೇಳಿದ ಕೊಕ್ಕು, ಕಾಲುಗಳು ಮೊದಲಾದ ಭಾಗಗಳಿಗೆ ಹೋಗುವ ಬದಲು ಮೊಟ್ಟೆಗಳ ಬಂಡಾರಕ್ಕೆ ಹೋಗುತ್ತದೆ. ಮೊಟ್ಟೆ ಉತ್ಪಾದನೆ ಮುಂದುವರಿಯುವಷ್ಟು ಕಾಲವೂ ಈ ಅಂಗಗಳು ನಿಧಾನವಾಗಿ ತಮ್ಮ ವರ್ಣದ್ರವ್ಯವನ್ನು ಕಳೆದುಕೊಳ್ಳುತ್ತವೆ ಮತ್ತು ನೋಟಕ್ಕೆ ಬಿಳಿದಾದಂತೆ ಕಾಣುತ್ತವೆ. ಹೇಂಟೆ ಉತ್ಪಾದನೆಯಲ್ಲಿ ಮುಂದುವರಿದಷ್ಟೂ ಹೆಚ್ಚಿಗೆ ಬಿಳಿದಾದಂತೆ ಕಾಣುತ್ತದೆ. ಉತ್ಪಾದನೆ ನಿಲ್ಲುವವರೆಗೂ ಹಳದಿ ವರ್ಣದ್ರವ್ಯ ಕೊಕ್ಕು, ಕಾಲುಗಳು ಮತ್ತು ಇತರ ಭಾಗಗಳಿಗೆ ಹಿಂದಿರುಗುವುದಿಲ್ಲ.

ತೃಪ್ತಿಕರವಾದ ಆಹಾರಪರಿಸ್ಥಿತಿಯಲ್ಲಿ, ಹಳದಿ ಚರ್ಮದ ತಳಿಗಳ ಹಳದಿವರ್ಣದ್ರವ್ಯರಾಹಿತ್ಯವು ಮೊಟ್ಟೆ ಉತ್ಪಾದನೆಯ ನಿರಂತರತೆಯನ್ನು ಸೂಚಿಸುತ್ತದೆ. ಹಳದಿ ವರ್ಣದ್ರವ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವ ಆಹಾರಗಳಾದ, ಹಳದಿ ಮೆಕ್ಕೆಜೋಳ ಮತ್ತು ಹಸುರುಗಳು ವರ್ಣದ್ರವ್ಯವಿಲ್ಲದಿರುವ ಆಹಾರಗಳಾದ ಗೋಧಿ, ಬಾರ್ಲಿ, ಅಕ್ಕಿ ಮತ್ತು ಹಾಲುಗಳಿಗಿಂತ ದಟ್ಟವಾದ ಬಣ್ಣವನ್ನು ಚರ್ಮಕ್ಕೆ ಕೊಡುತ್ತವೆ. ಆದುದರಿಂದ ವರ್ಣದ್ರವ್ಯಕೂಡುವಿಕೆಯ ಆಧಾರದ ಮೇಲೆ ನಿರಂತರವಾಗಿ ಉತ್ಪಾದಿಸುವ ಹೇಂಟೆಗಳ ಆಯ್ಕೆಯಲ್ಲಿ ಉತ್ಪಾದಕ ಗುಂಪು ಪಡೆಯುವ ಆಹಾರದ ವಿಧವನ್ನೂ ಗಣನೆಗೆ ತೆಗೆದುಕೊಳ್ಳಬೇಕು.

ಕೋಷ್ಟಕ 8

ಉತ್ತಮ ಉತ್ಪಾದಕವನ್ನು ಕೀಳುಮಟ್ಟದ ಉತ್ಪಾದಕದಿಂದ ಗುರುತಿಸುವುದನ್ನು ತೋರಿಸುವ ಬೇರ್ಪಡಿಸುವ ರೇಖಾಪಟ

ಗುಣ	ಒಳ್ಳೆಯ ಉತ್ಪಾದಕ: ಇಟ್ಟುಕೊಳ್ಳಬೇಕು	ಕೀಳು ಉತ್ಪಾದಕ: ಬೇರ್ಪಡಿಸಬೇಕು
I ತಲೆ	ಪ್ರಬಲ ಹೆಣ್ತನ, ಸೂಕ್ಷ್ಮ ನೀಳ, ಎಲ್ಲ ಭಾಗಗಳು ಹೊಂದಾಣಿಕೆಯುಳ್ಳವು, ಮೇಲೆ ಚೌಕ ಹಾಗೂ ಅಗಲ	ಗಂಡುರೀತಿಯ, ಒರಟಾದ, ಹದ್ದಿನ ತಲೆ ಅಥವಾ ಕಾಗೆ ತಲೆಯಾಗಿರಬಹುದು. ಮೇಲೆ ತೆಳು ಹಾಗೂ ಚೂಪು.

ಗುಣ	ಒಳ್ಳೆಯ ಉತ್ಪಾದಕ: ಇಟ್ಟುಕೊಳ್ಳಬೇಕು	ಕೀಳು ಉತ್ಪಾದಕ: ಬೇರ್ಪಡಿಸಬೇಕು
1. ಜುಟ್ಟು ಹಾಗೂ ಜೋಲುಮಾಂಸಲ	ತುಂಬಿದ ಕೆಂಪು, ಮೆತು, ಬಿಸಿ ಹಾಗೂ ವೆಲ್ವೆಟ್ಟಿನಂತೆ	ಒಣ, ಗಟ್ಟಿ, ಸುಕ್ಕುಗಟ್ಟಿದ, ತಣ್ಣಗೆ ಹಾಗೂ ಒರಟು.
2. ಕೊಕ್ಕು	ಮೊಟಕು, ಚೆನ್ನಾಗಿ ಬಗ್ಗಿದ ಹಾಗೂ ಸವೆದ	ಉದ್ದ, ತೆಳು ಮತ್ತು ಚೂಪು ತುದಿ
3. ಕಣ್ಣುಗಳು	ತುಂಬಿದ, ಹೊಳಪಾದ, ಎಚ್ಚರಿಕೆಯಿಂದ ಕೂಡಿದ ಹಾಗೂ ಸರಿಯಾದ ಸ್ಥಾನದಲ್ಲಿ	ಮಂಕಾದ, ನಿದ್ದೆ ತುಂಬಿದ, ಗೂಡಿನಲ್ಲಿ ಆಳದಲ್ಲಿ ಕೂತ, ಹಾಗೂ ವಕ್ರದೃಷ್ಟಿಯ
4. ಕಿವಿಹಾಲೆಗಳು	ತುಂಬಿದ, ಮೆದು ಮತ್ತು ವೆಲ್ವೆಟ್ಟಿನಂತಹ	ಕುಗ್ಗಿದ, ಸುಕ್ಕುಗಟ್ಟಿದ ಮತ್ತು ಒರಟಾದ
II ಕತ್ತು	ದಪ್ಪನಾದ ಹಾಗೂ ಮೊಟಕಾದ	ಉದ್ದ ಹಾಗೂ ತೆಳು
III ಶರೀರ	ವಿಶಾಲವಾದ	ಸೀಮಿತ ವಿಶಾಲದ
1. ಬೆನ್ನು	ಅಗಲ ಮತ್ತು ನೇರ	ಕಿರಿದು ಹಾಗೂ ಬಗ್ಗಿದ
2. ಪಕ್ಕಗಳು	ಆಳ, ನೇರ	ಆಳವಿಲ್ಲದ,ಕೊಳವೆಯಾಕಾರದ
3. ಅಡಿಮೂಳೆ	ನೀಳ ಹಾಗೂ ಸರಿಯಾಗಿ ಬಗ್ಗಿದ	ಮೋಟು ಹಾಗೂ ವಕ್ರ
4. ಕಿಬ್ಬುಳಿ ಮೂಳೆಗಳು	ನಡುವೆ ಹೆಚ್ಚಿಗೆ ಜಾಗಬಿಟ್ಟ, ತೆಳು ಹಾಗೂ ಬಗ್ಗುವ	ಹತ್ತಿರವಾಗಿರುವ, ದಪ್ಪ ಮತ್ತು ಗಟ್ಟಿಯಾದ
5. ಚರ್ಮ	ತೆಳು, ಮೃದು, ಜಿಡ್ಡಿನಿಂದ ಕೂಡಿದ ಮತ್ತು ರೇಷ್ಮೆಯಂತಹ	ದಪ್ಪ, ಒಣ, ಒರಟು ಮತ್ತು ಚಕ್ಕಳದಂತಹ
6. ಹೊಟ್ಟೆ	ಹಿರಿದು, ಮೃದು, ಮತ್ತು ಕೊಬ್ಬಿನ ಉಂಡೆಗಳಿಲ್ಲದ್ದು	ಕಿರಿದು, ಗಟ್ಟಿ ಮತ್ತು ಗಟ್ಟಿ ಕೊಬ್ಬುಯುಕ್ತ
7. ಹೊರಗಂಡಿ	ಹಿರಿದು, ಪೂರ್ಣ ಹಾಗೂ ಆರ್ದ್ರ	ಕಿರಿದು, ಒಣ ಮತ್ತು ಸುಕ್ಕುಗಟ್ಟಿದ
8. ಗರಿಗಳು	ಸವೆದು ಕೊಳೆಯಾದ, ತಡವಾಗಿ ಗರಿಯುದುರ್ತುತ್ತದೆ.	ಸ್ವಚ್ಛ ಹಾಗೂ ಪೂರ್ಣ, ಬೇಗ ಗರಿಯುದುರ್ತುತ್ತದೆ.
IV ಕಾಲುಗಳು		
1. ಕಣಕಾಲುಗಳು	ತೆಳು ಮತ್ತು ಹಿಂದುಗಡೆ ಮೃದು	ಪೂರ್ಣ, ಹಿಂದುಗಡೆ ಗುಂಡಗೆ ಹಾಗೂ ಗಟ್ಟಿ
2. ಬೆರಳ ಉಗುರುಗಳು	ದಪ್ಪನಾದ, ಚೆನ್ನಾಗಿ ಬಗ್ಗಿದ ಮತ್ತು ಚೆನ್ನಾಗಿ ಸವೆದ	ನೀಳ, ತೆಳು ಮತ್ತು ಚೂಪು ತುದಿಯ

ಗುಣ	ಒಳ್ಳೆಯ ಉತ್ಪಾದಕ; ಇಟ್ಟುಕೊಳ್ಳಬೇಕು	ಕೀಳು ಉತ್ಪಾದಕ; ಬೇರ್ಪಡಿಸಬೇಕು
V ಸ್ವಭಾವ	ಸ್ನೇಹಪರ ಹಾಗೂ ಯಾವಾಗಲೂ ಸಂತೋಷಯುತ	ನಾಚಿಕೆಯ, ಭಯದಿಂದ ಕೂಡಿದ, ಹಿಡಿದಾಗ ಅರಚಿಕೊಳ್ಳುವ
VI ಹಸಿವು	ಚೆನ್ನಾಗಿ ತಿನ್ನುವ ಮತ್ತು ಎರೆಚೀಲ ಯಾವಾಗಲೂ ತುಂಬಿರುತ್ತದೆ.	ನಾಜೂಕಿನ ಹಸಿವು, ಕಡಮೆ ತಿನ್ನುವ

ಹೇಂಟೆಯ ಶರೀರದಿಂದ ಹಳದಿ ವರ್ಣದ್ರವ್ಯ ಮಾಯವಾಗುವುದು ಯಾವಾಗಲೂ ಒಂದು ಗೊತ್ತಾದ ರೀತಿಯನ್ನನುಸರಿಸುತ್ತದೆ. ಮತ್ತು ಅತಿ ಹೆಚ್ಚಿನ ರಕ್ತಪರಿಚಲನೆಯುಳ್ಳ ಶರೀರದ ಭಾಗ ಮೊದಲು ಬಿಳಿಯಾಗುತ್ತದೆ. ಮೊಟ್ಟೆದ್ವಾರ ವರ್ಣದ್ರವ್ಯ ಕಳೆದುಕೊಳ್ಳುವುದರಲ್ಲಿ ಮೊದಲನೆಯದು. ನಂತರ ಕಣ್ಣುರೆಪ್ಪೆಗಳು, ಕಿವಿಹಾಲೆಗಳು, ಕೊಕ್ಕು ಕಳೆದುಕೊಳ್ಳುತ್ತವೆ. ಕೊಕ್ಕಿನಲ್ಲಿ ಈ ಕ್ರಿಯೆ ಬುಡದಲ್ಲಿ ಪ್ರಾರಂಭವಾಗಿ ತುದಿಯ ಕಡೆಗೆ ಮುಂದುವರಿಯುತ್ತದೆ. ಕಾಲುಗಳು ಹಾಗೂ ತೊಡೆಯ ಹಿಂಭಾಗದ ಗಟ್ಟಿ ಚಿಪ್ಪುಗಳು ಎಲ್ಲಕ್ಕಿಂತ ಕೊನೆಗೆ ಬಣ್ಣ ಕಳೆದುಕೊಳ್ಳುತ್ತವೆ. ಹೇಂಟೆ ಮೊಟ್ಟೆಯಿಡುವುದನ್ನು ನಿಲ್ಲಿಸಿದಾಗ ಬಣ್ಣವು ಇದೇ ರೀತಿಯಲ್ಲಿ ಹಿಂದಿರುಗುತ್ತದೆ.

ಲೈಂಗಿಕ ಪಕ್ವತೆಯ ವೇಗ: ಲೈಂಗಿಕವಾಗಿ ಪಕ್ವವಾಗುವುದು ಮತ್ತು ಮೊಟ್ಟೆ ಉತ್ಪಾದನೆಗಳು ಸಂಬಂಧ ಹೊಂದಿವೆ ಎಂಬುದನ್ನು ತೋರಿಸಲಾಗಿದೆ. ಲೈಂಗಿಕವಾಗಿ ಬೇಗ ಪಕ್ವವಾಗುವ ಹೇಂಟೆಗಳು ಅತ್ಯುತ್ತಮ ಉತ್ಪಾದಕಗಳಾಗುತ್ತವೆ. ಆದರೆ ಪೂರ್ತಿ ಬೆಳೆಯುವ ಮೊದಲೇ ಉತ್ಪಾದನೆಯಲ್ಲಿ ತೊಡಗುವ ಹೇಂಟೆಯು, ವಸಂತಕಾಲದ ಪೂರ್ತ ಉತ್ಪಾದಿಸುವುದಿಲ್ಲ ಮತ್ತು ಸಾಮಾನ್ಯವಾಗಿ ಒಳ್ಳೆಗಾತ್ರದ ಮೊಟ್ಟೆಗಳನ್ನಿಡುವುದಿಲ್ಲ. ಉತ್ಪಾದಕಗಳನ್ನು ಆಯ್ಕೆಮಾಡುವಾಗ ಮತ್ತು ಅನಪೇಕ್ಷಣೀಯ ಹೇಂಟೆಗಳನ್ನು ಬೇರ್ಪಡಿಸುವಾಗ ಗಮನಿಸಲೇಬೇಕಾದ ಎರಡು ಅಂಶಗಳೆಂದರೆ ಬೇಗ ಲೈಂಗಿಕ ಪಕ್ವತೆಯನ್ನು ಹೊಂದುವುದರ ಜೊತೆಗೆ ಒಳ್ಳೆಯ ಶರೀರ ತೂಕವನ್ನು ಕಾಪಾಡುವುದು.

ಕೋಷ್ಟಕ 8ರಲ್ಲಿನ ಬೇರ್ಪಡಿಸುವ ಪಟ್ಟಿ, ಮೊಟ್ಟೆಯಿಡುವ ಶಕ್ತಿ ಅಥವಾ ಸ್ಥಿತಿ ಮತ್ತು ಕೆಲವು ಗುಣಗಳ ನಡುವಣ ಸಂಬಂಧವನ್ನು ಸಂಕ್ಷಿಪ್ತವಾಗಿ ಸೂಚಿಸುತ್ತದೆ. ಮೊಟ್ಟೆ ಉತ್ಪಾದನೆಗಾಗಿ ಬೇರ್ಪಡಿಸುವಲ್ಲಿ ಇದು ಉಪಯುಕ್ತವಾದ ಮಾರ್ಗದರ್ಶಿಯಾಗುತ್ತದೆ.

ಮೊಟ್ಟೆ ಉತ್ಪಾದನೆಯ ಮೇಲೆ ಬೇರ್ಪಡಿಸುವಿಕೆಯ ಪ್ರಭಾವ: ಉತ್ಪಾದನಾವೆಚ್ಚದ ಮೇಲೆ ಲಾಭ ಸಂಪಾದಿಸಲು, ಒಂದು ಗುಂಪಿನಿಂದ ಸಾಧ್ಯವಾದಷ್ಟೂ ಹೆಚ್ಚಿಗೆ

ಮೊಟ್ಟೆಗಳನ್ನು ಪಡೆಯುವ ಪ್ರಾಮುಖ್ಯತೆಯನ್ನು ಸಾಮಾನ್ಯವಾಗಿ ಅರ್ಥಮಾಡಿಕೊಂಡಾಗಿದೆ. ಆದುದರಿಂದ ವರ್ಷದಲ್ಲಿ ಬೇರ್ಪಡಿಸಿದ ಹೇಂಟೆಗಳ ಸಂಖ್ಯೆ ಹೆಚ್ಚಿದಷ್ಟೂ, ಗುಂಪಿನಲ್ಲಿ ಉತ್ಪಾದಿಸಲ್ಪಟ್ಟ ಮೊಟ್ಟೆಗಳ ಸಂಖ್ಯೆ ಕುಗ್ಗುತ್ತದೆ, ಏಕೆಂದರೆ ಬೇರ್ಪಡಿಸಿದ ಹಲವು ಹೇಂಟೆಗಳು ಗುಂಪಿನಲ್ಲಿ ಉಳಿದಿದ್ದರೆ ಕೆಲವಾದರೂ ಮೊಟ್ಟೆಗಳನ್ನು ಉತ್ಪಾದಿಸುತ್ತಿದ್ದವು. ಆದರೆ ಈಗ ಎದುರಿಸಬೇಕಾಗಿರುವ ಪ್ರಶ್ನೆ ಹೇಗಾದರೂ ಮೊಟ್ಟೆಗಳನ್ನು ಪಡೆಯುವುದಲ್ಲ. ಅವುಗಳನ್ನು ಲಾಭದಾಯಕವಾಗಿ ಪಡೆಯುವುದು. ಮೊಟ್ಟೆ ಉತ್ಪಾದನೆಯಲ್ಲಿನ ಲಾಭವನ್ನು ಒಂದು ವರ್ಷ ಅಥವಾ ಒಂದು ನಿರ್ದಿಷ್ಟ ಅವಧಿಯಲ್ಲಿ ಉತ್ಪಾದಿತವಾದ ಒಟ್ಟು ಮೊಟ್ಟೆಗಳ ಬೆಲೆಯನ್ನು ಅವುಗಳನ್ನು ಉತ್ಪಾದಿಸಲು ತಗುಲಿದ ವೆಚ್ಚಕ್ಕೆ ಹೋಲಿಸಿ, ನಿಶ್ಚಯಿಸಬಹುದು. ಗುಂಪು ವರ್ಷಪೂರ್ತಿ ಲಾಭದಾಯಕವಾಗಿ ಉತ್ಪಾದಿಸುತ್ತಿದೆಯೇ ಇಲ್ಲವೇ ಎಂಬುದನ್ನು ನಿಶ್ಚಯಿಸಲು ಒಂದು ಅಳತೆಗೋಲನ್ನು ಹೊಂದಿರುವುದು ಅಪೇಕ್ಷಣೀಯ. ಅತಿಹೆಚ್ಚಿನ ಉಪಯೋಗಕಾರಿ ಅಳತೆಗೋಲೆಂದರೆ, ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದೊಂದು ಹೇಂಟೆಯೂ ಉತ್ಪಾದಿಸಿದ ಸರಾಸರಿ ಮೊಟ್ಟೆಗಳ ಸಂಖ್ಯೆ, ಸಮಯದಿಂದ ಸಮಯಕ್ಕೆ ಸರಿಯಾದ ಬೇರ್ಪಡಿಸುವಿಕೆ, ಗುಂಪನ್ನು ಒಳ್ಳೆಯ ಉತ್ಪಾದನಾ ಸಾಮರ್ಥ್ಯಮಟ್ಟದಲ್ಲಿ ಉಳಿಸಿಕೊಳ್ಳಲು ಸಹಾಯಕವಾಗುತ್ತದೆ. 9ನೇ ಕೋಷ್ಟಕವು ಪ್ರತಿದಿನ ಉತ್ಪಾದಿತವಾದ ಮೊಟ್ಟೆಗಳು ಮತ್ತು ಸತ್ತ ಅಥವಾ

ಕೋಷ್ಟಕ 9

ಪ್ರತಿನಿತ್ಯ ಮೊಟ್ಟೆ ಉತ್ಪಾದನಾ ದಾಖಲೆ

ದಿನಾಂಕ	ಅಕ್ಟೋಬರ್			ನವೆಂಬರ್			ಡಿಸೆಂಬರ್		
	ಹೇಂಟೆಗಳ ಸಂಖ್ಯೆ (ಮೊದಲ ತಾರೀಖು)			ಹೇಂಟೆಗಳ ಸಂಖ್ಯೆ (ಮೊದಲ ತಾರೀಖು)			ಹೇಂಟೆಗಳ ಸಂಖ್ಯೆ (ಮೊದಲ ತಾರೀಖು)		
	ಮೊಟ್ಟೆಗಳ ಸಂಖ್ಯೆ	ಹೇಂಟೆಗಳು		ಮೊಟ್ಟೆಗಳ ಸಂಖ್ಯೆ	ಹೇಂಟೆಗಳು		ಮೊಟ್ಟೆಗಳ ಸಂಖ್ಯೆ	ಹೇಂಟೆಗಳು	
		ಸತ್ತವು	ಬೇರ್ಪಡಿಸಿದವು		ಸತ್ತವು	ಬೇರ್ಪಡಿಸಿದವು		ಸತ್ತವು	ಬೇರ್ಪಡಿಸಿದವು
1									
2									
3									
4									

ತಿಂಗಳ ಒಟ್ಟು ಮೊಟ್ಟೆಗಳು..

ಹೇಂಟೆಗಳಿಗೆ ತಿಂಗಳಿಗೆ ಸರಾಸರಿಮೊಟ್ಟೆಗಳು..............................

ಬೇರ್ಪಡಿಸಿದ ಹೇಂಟೆಗಳು ....

ಸತ್ತ ಹೇಂಟೆಗಳು..

ಬೇರ್ಪಡಿಸಲ್ಪಟ್ಟ ಹೇಂಟೆಗಳ ದಾಖಲನ್ನಿಡುವ ಅನುಕೂಲಕರ ರೀತಿಯನ್ನೊದಗಿಸುತ್ತದೆ.

ಒಂದೊಂದೂ ಹೇಂಟೆಯ ಸರಾಸರಿ ಮೊಟ್ಟೆ ಉತ್ಪಾದನೆಯನ್ನು ಮೂರು ಬೇರೆ ಬೇರೆ ವಿಧಗಳಲ್ಲಿ ಲೆಕ್ಕಹಾಕಬಹುದು: (1) ಹೇಂಟೆಯ ತಿಂಗಳಿನ ಸರಾಸರಿ ಮೊಟ್ಟೆ ಉತ್ಪಾದನೆ; (2) ಹೇಂಟೆದಿನದ ಆಧಾರದ ಮೇಲೆ ಹೇಂಟೆಯ ಸರಾಸರಿ ಮೊಟ್ಟೆ ಉತ್ಪಾದನೆ; ಮತ್ತು (3) ವಸತಿಯಲ್ಲಿನ ಹೇಂಟೆಗಳು ಆಧಾರದ ಮೇಲೆ ಹೇಂಟೆಯ ಸರಾಸರಿ ಮೊಟ್ಟೆ ಉತ್ಪಾದನೆ.

ಮಾಸಿಕ ಸರಾಸರಿ: ಎರಡು ಲೆಕ್ಕಾಚಾರಗಳಿಂದ ಪ್ರತಿ ಹೇಂಟೆಯ ಮಾಸಿಕ ಸರಾಸರಿ ಮೊಟ್ಟೆ ಉತ್ಪಾದನೆಯನ್ನು ಪಡೆಯಬಹುದು. ತಿಂಗಳ ಮೊದಲಿನ ಹೇಂಟೆಗಳ ಸಂಖ್ಯೆಗೆ ತಿಂಗಳ ಕೊನೆಯಲ್ಲಿನ ಹೇಂಟೆಗಳ ಸಂಖ್ಯೆಯನ್ನು ಕೂಡಿಸಿ ಎರಡರಿಂದ ಭಾಗಿಸಿದರೆ ತಿಂಗಳಿನ ಸರಾಸರಿ ಹೇಂಟೆಗಳ ಸಂಖ್ಯೆ ಸಿಗುತ್ತದೆ. ಆ ತಿಂಗಳಿನಲ್ಲಿ ಉತ್ಪಾದಿತವಾದ ಒಟ್ಟು ಮೊಟ್ಟೆಗಳ ಸಂಖ್ಯೆಯನ್ನು ತಿಂಗಳಿನ ಸರಾಸರಿ ಹೇಂಟೆಗಳ ಸಂಖ್ಯೆಯಿಂದ ಭಾಗಿಸಿದರೆ, ಆ ತಿಂಗಳಿನ ಪ್ರತಿ ಹೇಂಟೆಯ ಮೊಟ್ಟೆಯ ಸರಾಸರಿ ಸಂಖ್ಯೆ ಸಿಗುತ್ತದೆ.

ಉದಾಹರಣೆ — ಏಪ್ರಿಲ್ 1 ರಂದು 100 ಹೇಂಟೆಗಳನ್ನು ಹೊಂದಿದ್ದ ಗುಂಪು ತಿಂಗಳ ಕೊನೆಯಲ್ಲಿ 90 ಹೇಂಟೆಗಳನ್ನು ಮಾತ್ರ ಹೊಂದಿದ್ದರೆ, ಆ ತಿಂಗಳ ಸರಾಸರಿ ಹೇಂಟೆಗಳ ಸಂಖ್ಯೆ $\frac{100+90}{2} = 95$ ಆಗಿರುತ್ತದೆ. ತಿಂಗಳ ಪೂರ್ತಿಯಲ್ಲಿ ಗುಂಪು 1,800 ಮೊಟ್ಟೆಗಳನ್ನು ಇಟ್ಟಿದ್ದರೆ ಏಪ್ರಿಲ್ ತಿಂಗಳ ಪ್ರತಿ ಹೇಂಟೆಯ ಸರಾಸರಿ ಮೊಟ್ಟೆ ಉತ್ಪಾದನೆ $\frac{1800}{95} = 18.9$ ಮೊಟ್ಟೆಗಳಾಗಿರುತ್ತವೆ.

ಈ ಮೇಲ್ಕಂಡ ರೀತಿಯಲ್ಲಿ ಪ್ರತಿ ಹೇಂಟೆಯ ಸರಾಸರಿ ಮೊಟ್ಟೆ ಉತ್ಪಾದನೆಯನ್ನು ಲೆಕ್ಕಹಾಕುವುದರಲ್ಲಿನ ತೊಡಕೆಂದರೆ, ತಿಂಗಳ ಅವಧಿಯಲ್ಲಿ ಸತ್ತ ಅಥವಾ ಬೇರ್ಪಡಿಸಲ್ಪಟ್ಟ ಹೇಂಟೆಗಳ ಸಂಖ್ಯೆಯ ಬಗ್ಗೆ ಯಾವ ಮಾಹಿತಿಯನ್ನು ಪಡೆಯಲಾಗದೇ ಇರುವುದು.

ಹೇಂಟೆದಿನಸರಾಸರಿ: ಹೇಂಟೆ ದಿನದ ಆಧಾರದಮೇಲೆ ಸರಾಸರಿ ಮೊಟ್ಟೆ ಉತ್ಪಾದನೆಯನ್ನು, ಒಂದು ನಿರ್ದಿಷ್ಟ ಅವಧಿಯಲ್ಲಿ ಉತ್ಪಾದಿತವಾದ ಮೊಟ್ಟೆಗಳ ಸಂಖ್ಯೆಯನ್ನು ಆ ಕಾಲದಲ್ಲಿನ ಸರಾಸರಿ ಕೋಳಿಗಳ ಸಂಖ್ಯೆಯಿಂದ ಭಾಗಿಸುವುದರಿಂದ ಪಡೆಯಬಹುದು. ಸಾಮಾನ್ಯವಾಗಿ ತಿಂಗಳ ಆಧಾರದ ಮೇಲೆ ಹೇಂಟೆದಿನ ಸರಾಸರಿ ನಿಶ್ಚಯಿಸಲಾಗುತ್ತದೆ.

ಉದಾಹರಣೆ — ಏಪ್ರಿಲ್ 1 ರಂದು 100 ಹೇಂಟೆಗಳಿರುವ ಗುಂಪನ್ನು ತೆಗೆದುಕೊಳ್ಳೋಣ. ಎಲ್ಲ ಹೇಂಟೆಗಳೂ ಇಡೀ ತಿಂಗಳಿದ್ದರೆ 3000 ಹೇಂಟೆದಿನಗಳನ್ನು

ಒಳಗೊಳ್ಳುತ್ತವೆ. ತಿಂಗಳ ಐದರಂದು ಒಂದು ಹೇಂಟೆಯನ್ನು ಬೇರ್ಪಡಿಸಿದರೆ 2,975 ಹೇಂಟೆದಿನಗಳು ಮಾತ್ರ ಇರುತ್ತವೆ. ಮತ್ತೊಂದು ಹೇಂಟೆ ಹತ್ತರಂದು ಸತ್ತರೆ 2,955 ಹೇಂಟೆದಿನಗಳಿರುತ್ತವೆ. ಮತ್ತೆರಡು ಹೇಂಟೆಗಳನ್ನು ಇಪ್ಪತ್ತರಂದು ಬೇರ್ಪಡಿಸಿದರೆ 2.935 ಹೇಂಟೆದಿನಗಳಿರುತ್ತವೆ, 25 ರಂದು ಎರಡು ಹೇಂಟೆಗಳು ಸತ್ತು, ಮೂರು ಹೇಂಟೆಗಳು ಬೇರ್ಪಡಿಸಲ್ಪಟ್ಟರೆ 2,910 ಹೇಂಟೆದಿನಗಳಿರುತ್ತವೆ. ಈ 2,910ನ್ನು ಏಪ್ರಿಲ್ ತಿಂಗಳಿನ 30 ದಿನಗಳಿಂದ ಭಾಗಿಸಿದರೆ ಬರುವ ಸಂಖ್ಯೆ — 97 ಏಪ್ರಿಲ್ ತಿಂಗಳಿನ ಆ ಗುಂಪಿನಲ್ಲಿನ ಸರಾಸರಿ ಹೇಂಟೆಗಳನ್ನು ಪ್ರತಿನಿಧಿಸುತ್ತದೆ. ಆ ತಿಂಗಳ ಅವಧಿಯಲ್ಲಿ ಆ ಗುಂಪು 1,800 ಮೊಟ್ಟೆಗಳನ್ನು ಉತ್ಪಾದಿಸಿದ್ದರೆ ಪ್ರತಿ ಹೇಂಟೆಯ ಸರಾಸರಿ ಮೊಟ್ಟೆ ಉತ್ಪಾದನೆ 18.55 ಆಗುತ್ತದೆ.

ಉತ್ಪಾದನೆಯ ಪ್ರಮಾಣವನ್ನು ನಿರ್ಧರಿಸಲೂ ಇದೇ ಪದ್ಧತಿಯನ್ನು ಅನುಸರಿಸಬಹುದು ಮತ್ತು ಇದು ಮೊಟ್ಟೆ ಉತ್ಪಾದನೆಯ ಮಟ್ಟವನ್ನು ವ್ಯಕ್ತಪಡಿಸುವ ಒಂದು ಜನಪ್ರಿಯ ಮಾರ್ಗ. ಏಪ್ರಿಲ್ 1 ರಂದು 100 ಹೇಂಟೆಗಳು 57 ಮೊಟ್ಟೆಗಳನ್ನಿಟ್ಟರೆ ಮೊಟ್ಟೆ ಉತ್ಪಾದನಾ ಪ್ರಮಾಣ 57 ಆಗುತ್ತದೆ. 21 ರಂದು ಗುಂಪಿನಲ್ಲಿನ 96 ಹೇಂಟೆಗಳು 48 ಮೊಟ್ಟೆಗಳನ್ನು ಉತ್ಪಾದಿಸಿದರೆ. ಉತ್ಪಾದನಾ ಪ್ರಮಾಣ 50 ಆಗುತ್ತದೆ. ಇಡೀ ತಿಂಗಳಿಗೆ ಹೇಂಟೆಗಳ ಸರಾಸರಿ ಸಂಖ್ಯೆ 97, ಮತ್ತು $97 \times 30 = 2910$ ಹೇಂಟೆದಿನಗಳನ್ನು ಒಳಗೊಳ್ಳುತ್ತದೆ, ಈ ಕಾಲದ ಒಟ್ಟು ಮೊಟ್ಟೆಗಳ ಉತ್ಪಾದನೆ 1.800 ಮೊಟ್ಟೆಗಳ ಮಾಸಿಕ ಉತ್ಪಾದನಾ ಪ್ರಮಾಣವನ್ನು 1,800ನ್ನು 100 ರಿಂದ ಗುಣಿಸಿ, 2.910 ರಿಂದ ಭಾಗಿಸುವುದರಿಂದ (= 62) ಪಡೆಯಬಹುದು.


ವಸತಿಯಲ್ಲಿನ ಹೇಂಟೆಗಳ ಸರಾಸರಿ: ವಸತಿಯಲ್ಲಿನ ಹೇಂಟೆಗಳ ಸರಾಸರಿಯನ್ನು, ಒಂದು ನಿರ್ದಿಷ್ಟ ಅವಧಿಯಲ್ಲಿ ಉತ್ಪಾದಿತವಾದ ಮೊಟ್ಟೆಗಳ ಸಂಖ್ಯೆಯನ್ನು, ಆ ಅವಧಿಯ ಪ್ರಾರಂಭದ ಗುಂಪಿನ ಹೇಂಟೆಗಳ ಸಂಖ್ಯೆಯಿಂದ ಭಾಗಿಸುವುದರಿಂದ ಪಡೆಯಬಹುದು. ಮೇಲೆ ಹೇಳಿದ ಗುಂಪಿನ ಏಪ್ರಿಲ್ ತಿಂಗಳ ವಸತಿಯಲ್ಲಿನ ಹೇಂಟೆಗಳ ಸರಾಸರಿ $1,800 \div 100 =$ ಹೇಂಟೆಯೊಂದಕ್ಕೆ 18 ಆಗುತ್ತದೆ.

ವಸತಿಯಲ್ಲಿನ ಹೇಂಟೆಗಳ ಸರಾಸರಿಯನ್ನು ಸಾಮಾನ್ಯವಾಗಿ ವಾರ್ಷಿಕ ಆಧಾರದ ಮೇಲೆ ಪಡೆಯಲಾಗುತ್ತದೆ. ವರ್ಷದಲ್ಲಿ ಇಟ್ಟ ಒಟ್ಟು ಮೊಟ್ಟೆಗಳ ಸಂಖ್ಯೆಯನ್ನು ವರ್ಷದ ಪ್ರಾರಂಭದಲ್ಲಿ ಗುಂಪಿನಲ್ಲಿರುವ ಹೇಂಟೆಗಳ ಸಂಖ್ಯೆಯಿಂದ ಭಾಗಿಸಬೇಕು. ಇದು ಉಳಿದೆರಡು ಪದ್ಧತಿಗಳಿಗಿಂತ ಚೆನ್ನಾಗಿ ಗುಂಪಿನ ಆದಾಯ ಸಾಧ್ಯತೆಯನ್ನು ಕೊಡುತ್ತದೆ. ಬೇರ್ಪಡಿಸುವ ಸಂಖ್ಯೆಯ ಅವಶ್ಯಕತೆ ಹೆಚ್ಚಿದಷ್ಟೂ ಮತ್ತು ವರ್ಷದಲ್ಲಿ ಸಾವಿನ ದರ ಹೆಚ್ಚಿದಷ್ಟೂ, ಮೊಟ್ಟೆ ಉತ್ಪಾದನೆಯಲ್ಲಿ ಒಳ್ಳೆಯ ಪ್ರತಿಫಲ ಕೊಡಲು ಗುಂಪಿಗೆ ಅಡ್ಡಿ ಹೆಚ್ಚುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಮೊಟ್ಟೆ ಉತ್ಪಾದನೆಯನ್ನು ದಕ್ಷ ಮಟ್ಟದಲ್ಲಿ ಉಳಿಸಿಕೊಳ್ಳಲು ಕಾಲದಿಂದ ಕಾಲಕ್ಕೆ ಬೇರ್ಪಡಿಸುವಿಕೆಯ ಅವಶ್ಯಕತೆ ಕಡಮೆಯಾದಷ್ಟೂ, ವರ್ಷದಲ್ಲಿ ಸಾವಿನ ದರ ಕಡಮೆಯಿದ್ದಷ್ಟೂ, ಪ್ರತಿ ಹೇಂಟೆಯ ಸರಾಸರಿ ಮೊಟ್ಟೆ ಉತ್ಪಾದನೆ ಹೆಚ್ಚುತ್ತದೆ ಮತ್ತು ಲಾಭವೂ ಹೆಚ್ಚುತ್ತದೆ.

ಅಧ್ಯಾಯ 7

ಕಾವು ಕೊಡುವಿಕೆ ಮತ್ತು ಮರಿಯಾಗುವಿಕೆ


ಗುಂಪನ್ನು ನವೀಕರಿಸುವುದಕ್ಕೆ ಅಥವಾ ಸತ್ತ ಅಥವಾ ಮಾರಲ್ಪಟ್ಟ ಹೇಂಟೆಗಳ ಸ್ಥಾನವನ್ನು ಭರ್ತಿಮಾಡುವುದಕ್ಕೆ ವರ್ಷವರ್ಷವೂ ಕೋಳಿಮರಿಗಳನ್ನು ವೃದ್ಧಿಮಾಡುವುದು ಪ್ರತಿಯೊಬ್ಬ ಕೋಳಿಸಾಕಾಣಿಕೆಧಾರನೂ ಎದುರಿಸಬೇಕಾದ ಮುಖ್ಯ ಸಮಸ್ಯೆ. ಆರ್ಥಿಕ ಮಟ್ಟದಲ್ಲಿ ಉತ್ಪಾದನೆಯನ್ನು ಪಡೆಯಲು ಎರಡು ವರ್ಷಕ್ಕೊಮ್ಮೆ ಗುಂಪನ್ನು ನವೀಕರಿಸುವ ಪ್ರಾಮುಖ್ಯತೆಯನ್ನು ಚೆನ್ನಾಗಿ ಕಂಡುಕೊಳ್ಳಲಾಗಿದೆ (ವಿಶೇಷ ಸಂದರ್ಭಗಳಲ್ಲಿ ಕನಿಷ್ಠ ಪ್ರತಿ ಮೂರು ವರ್ಷಕ್ಕೊಮ್ಮೆ). ಅಂದರೆ ಪ್ರತಿವರ್ಷವೂ ಗುಂಪಿನ ಅರ್ಧದಿಂದ ಮೂರನೇ ಒಂದು ಭಾಗ ಕೋಳಿಗಳನ್ನು ಹೊಸ ಕೋಳಿಗಳಿಂದ ಬದಲಾಯಿಸಬೇಕು, ಇವು ಸಾಮಾನ್ಯವಾಗಿ ಮರಿಗಳಾಗಿರಬೇಕು. ಈ ನವೀಕರಣ ಯಶಸ್ವಿ



ಚಿತ್ರ 37 : ಕಾವು ಕೊಡುವ ಕಾಲದಲ್ಲಿ ಮರಿಯ ಬೆಳವಣಿಗೆ

(ಅಮೇರಿಕ ಕಾರ್ನೆಲ್ ವಿಸ್ತರಣ ವಾರ್ತಾಪತ್ರ, ಸಂಖ್ಯೆ 205, 1931)

ಕೋಳಿಸಾಕಾಣಿಕೆಯು ಸ್ವಾಭಾವಿಕ ಕಾರ್ಯಗಳ ಅಂಗವಾಗುತ್ತದೆ ಮತ್ತು ಗುಂಪು ಬೆಳೆಸುವುದಕ್ಕೆ ಅಥವಾ ರೋಗ ಬೇರ್ಪಡಿಸುವಿಕೆ ಅಥವಾ ಇತರ ಕಾರಣಗಳಿಂದ ಕಳೆದುಕೊಂಡ ಕೋಳಿಗಳ ಬದಲಾವಣೆಯ ಅವಶ್ಯಕತೆಗಳನ್ನು ಒಳಗೊಳ್ಳುವುದಿಲ್ಲ. ಆದುದರಿಂದ ಇದಕ್ಕೆ ಮರಿಗಳನ್ನು ಒದಗಿಸಲು ಕಾವು ಕೊಡುವುದರಿಂದ ಮೊಟ್ಟೆಗಳನ್ನು ಮರಿಮಾಡುವಿಕೆ ಅವಶ್ಯಕ.



ಚಿತ್ರ38 : ಮರಿಯಾದ ನಂತರ ಹೇಂಟೆ ಹಾಗೂ ಹೂ ಮರಿಗಳ ಜೋಪಾಸನೆ

ಫಲೀಕೃತ ಮೊಟ್ಟೆಯ ಬಂಡಾರದಲ್ಲಿ ಅಲ್ಪ ಚುಕ್ಕೆ ಮೂರು ವಾರಗಳಲ್ಲಿ ಕೋಳಿ ಮರಿಯಾಗಿ ಅಭಿವೃದ್ಧಿ ಹೊಂದುವುದು, ನಿಸರ್ಗದ ಅಸಾಧಾರಣ ಘಟನೆಗಳಲ್ಲಿ ಒಂದು. ಕೋಳಿ ಭ್ರೂಣದ ಬೆಳವಣಿಗೆ, ತಾಯಿಯ ಗರ್ಭಕೋಶದೊಳಗೆ ಸಸ್ತನಿ ಭ್ರೂಣಗಳ ಬೆಳವಣಿಗೆಯಷ್ಟೇ ಸಂಕೀರ್ಣವಾದದ್ದು, ಒಂದೇ ವ್ಯತ್ಯಾಸವೆಂದರೆ ಬೆಳವಣಿಗೆ ತಾಯಿಯ ಶರೀರದ ಹೊರಗಡೆಯಾಗುವುದರಿಂದ ಅದರ ದಿನನಿತ್ಯದ ಆಹಾರದ ಅವಶ್ಯಕತೆಗಳನ್ನು ತಾಯಿಯ ರಕ್ತದಿಂದ ತೆಗೆದುಕೊಳ್ಳುವುದು ಸಾಧ್ಯವಿಲ್ಲ. ತಾನಿಟ್ಟ ಭ್ರೂಣವು ಪೂರ್ಣ ಬೆಳವಣಿಗೆ ಹೊಂದಿ ಕೊನೆಗೆ ಸ್ವತಂತ್ರ ಜೀವವಾಗಿ ಹೊರಬೀಳಲು ಅವಶ್ಯಕವಾದಷ್ಟು

ಆಹಾರವನ್ನು ತನ್ನ ಭ್ರೂಣದ ಜೊತೆಗೇಯಿಡುವಂತಹ ಒಂದು ಅಸಾಧಾರಣ ಶಕ್ತಿ ಯನ್ನು ಪ್ರಕೃತಿ ರೂಪಿಸಿದೆ. ಕಾವುಕೊಡುವ ಕಾಲದಲ್ಲಿನ ಭ್ರೂಣದ ಅಭಿವೃದ್ಧಿಯನ್ನು ಚಿತ್ರ 37ರಲ್ಲಿ ಚಿತ್ರಿಸಲಾಗಿದೆ.

ಮರಿಯಾಗುವ ಮೊಟ್ಟೆಗಳ ಆಯ್ಕೆ

ಅತ್ಯುತ್ತಮ ಪ್ರತಿಫಲಗಳನ್ನು ಪಡೆಯಲು ಮರಿಯಾಗುವ ಮೊಟ್ಟೆಗಳ ಆಯ್ಕೆ ಯಲ್ಲಿ ಹಲವು ವಿಚಾರಗಳಿಗೆ ಕಟ್ಟುನಿಟ್ಟಿನ ಗಮನಕೊಡಬೇಕು. ಅಫಲೀಕೃತ ಮೊಟ್ಟೆ ಗಳು ಮತ್ತು ದುರ್ಬಲ ಅಂಡಾಣುಗಳನ್ನು ಹೊಂದಿರುವ ಮೊಟ್ಟೆಗಳು. ಅವುಗಳನ್ನು ನಿರ್ವಹಿಸಲು ತಗಲುವ ವೆಚ್ಚ ಮತ್ತು ಕಾವುಕೊಡುವ ಯಂತ್ರದಲ್ಲಿ ಆಕ್ರಮಿಸಿಕೊಳ್ಳುವ ಜಾಗದಿಂದಾಗಿ ಮರಿಮಾಡುವಿಕೆಯ ವೆಚ್ಚವನ್ನು ಹೆಚ್ಚಿಸುತ್ತವೆ.

ಮರಿಮಾಡುವಿಕೆಗೆ ಮೊಟ್ಟೆಗಳನ್ನು ಆಯ್ಕೆಮಾಡುವಾಗ ಅತಿಮುಖ್ಯವಾದ ವಿಚಾರವೆಂದರೆ, ಸರಿಯಾದ ಜನ್ಮವೃತ್ತಾಂತ. ತಂದೆತಾಯಿಗಳನ್ನು ಅವುಗಳ ವಂಶವಾಹಿ ರಚನೆ, ಆರೋಗ್ಯ ಮತ್ತು ಚೈತನ್ಯಕ್ಕನುಗುಣವಾಗಿ ಆಯ್ಕೆಮಾಡುವುದು ಕೋಳಿ ಸಾಕಾಣಿಕೆಗೆ ಆಧಾರ. ಗಮನದಲ್ಲಿರುವ ಗುರಿ, ಗಾತ್ರ, ಆಕಾರ, ಬಣ್ಣ, ಮರಿಯಾಗುವಿಕೆ ಅಥವಾ ಮತ್ಯಾವುದಾದರೂ ಮೊಟ್ಟೆಯಲ್ಲಿನ ಅಪೇಕ್ಷಣೀಯ ಗುಣವೇ ಆಗಿರಲಿ, ಉಳಿಸಿಕೊಂಡ ಯಾವುದೋ ಮೊಟ್ಟೆಯಿಂದ ಮರಿಮಾಡುವಿಕೆಗಿಂತ, ತಳಿಎಬ್ಬಿಸುವ ಹಿಂಡಿನಲ್ಲಿ ಆಯ್ಕೆಯನ್ನು ಆಚರಣೆಗೆ ತಂದರೆ, ಆ ಗುರಿಯನ್ನು ಮುಟ್ಟುವ ಸಾಧ್ಯತೆ ಗಳು ಬಹಳಮಟ್ಟಿಗೆ ಉತ್ತಮವಾಗುತ್ತವೆ.

ಫಲೀಕೃತ ಮೊಟ್ಟೆಗಳು: ಸುಪ್ತಾವಸ್ಥೆಯಲ್ಲಿದ್ದರೂ ಕೂಡ ಅನುಕೂಲ ಪರಿಸರದಲ್ಲಿ ಸ್ವೈಜ ಕೋಳಿಮರಿಯಾಗಿ ಅಭಿವೃದ್ಧಿ ಹೊಂದುವ ಜೀವಂತ ಅಂಡಾಣುವನ್ನು ಹೊಂದಿರು ವುದರಿಂದ ಫಲೀಕೃತ ಮೊಟ್ಟೆಯನ್ನು ಜೀವಂತ ಜೀವಾಣು ಎಂದು ಪರಿಗಣಿಸಬಹುದು. ಹುಂಜದ ಜೊತೆಗೂಡದ ಪಕ್ವವಾದ ಹೇಂಟೆಯ ಮೊಟ್ಟೆ ಜೀವಂತ ಅಂಡಾಣುವನ್ನು ಹೊಂದದೇಯಿರುವುದರಿಂದ ಕೋಳಿಮರಿಯಾಗಿ ಅಭಿವೃದ್ಧಿ ಹೊಂದಲಾರದು. ಇಂತಹ ಮೊಟ್ಟೆಗಳನ್ನು ಅಫಲೀಕೃತ ಅಥವಾ ಫಲೀಕರಿಸದ ಮೊಟ್ಟೆಗಳೆಂದು ಕರೆಯುತ್ತಾರೆ.

ಜೊತೆಗೂಡುವಿಕೆಯ ನಂತರ 24 ಗಂಟೆಗಳೊಳಗೆ ಫಲೀಕೃತ ಮೊಟ್ಟೆಗಳನ್ನಿಡ ಬಹುದು. ಆದಾಗ್ಯೂ ಹುಂಜವನ್ನು ಗುಂಪಿನೊಡನೆ ಸೇರಿಸಿದ ದಿನವೇ ತಳಿಎಬ್ಬಿಸುವ ಆವರಣದೊಳಗಿನ ಎಲ್ಲ ಹೇಂಟೆಗಳೂ ಜೊತೆಗೂಡಲ್ಪಟ್ಟಿರುತ್ತವೆ ಎಂದರ್ಥವಲ್ಲ. ಆಚರಣೆಯಲ್ಲಿ ಮೊಟ್ಟೆಗಳನ್ನು ಮರಿಮಾಡುವ ಉದ್ದೇಶಕ್ಕಾಗಿ ಉಳಿಸಿಕೊಳ್ಳುವ ಮೊದಲು ಹುಂಜವನ್ನು ಒಳಬಿಟ್ಟನಂತರ 10 ದಿನಗಳನ್ನು ಕಳೆಯಲು ಬಿಡುತ್ತಾರೆ.

ಗುಂಪಿನಿಂದ ಹುಂಜಗಳನ್ನು ತೆಗೆದುಹಾಕಿದ ಮೂರು ವಾರಗಳವರೆಗೂ ಕೆಲವು ಹೇಂಟೆಗಳು ಫಲೀಕೃತ ಮೊಟ್ಟೆಗಳನ್ನಿಡುವುದನ್ನು ತೋರಿಸುವ ದಾಖಲುಗಳಿವೆ. ಇದು

ಎಲ್ಲ ಸಮಯದಲ್ಲೂ ನಿಜವಲ್ಲ ಮತ್ತು ಇದನ್ನು ಅವಲಂಬಿಸುವುದು ಸಾಧ್ಯವಿಲ್ಲ, ಏಕೆಂದರೆ ಗುಂಪಿನಿಂದ ಹುಂಜಗಳನ್ನು ತೆಗೆದ ವಾರದಿಂದ 10 ದಿನಗಳ ಒಳಗೆ ಫಲೀಕರಣ ತೀವ್ರವಾಗಿ ಇಳಿಮುಖವಾಗುತ್ತದೆ.

ವಂಶಾವಳಿ ಕೋಳಿಗಳನ್ನು ಆವರಣದಲ್ಲಿ ಜೊತೆಗೂಡಿಸುವಾಗ ನಿಕೃಷ್ಟ ಫಲೀಕರಣ, ರೋಗಗಳು ಅಥವಾ ಸಾವಿನಿಂದ, ಮರಿಮಾಡುವ ಕಾಲದಲ್ಲಿ ಕೆಲವು ಸಾರಿ ಹುಂಜಗಳನ್ನು ಬದಲಾಯಿಸುವುದು ಅವಶ್ಯಕವಾಗಬಹುದು. ಇಂತಹ ಸಂದರ್ಭಗಳಲ್ಲಿ ಮರಿಮಾಡಲು ಮೊಟ್ಟೆಗಳನ್ನು ಸಂಗ್ರಹಿಸುವ ಮೊದಲು, ಎರಡನೇ ಹುಂಜವನ್ನು ಒಳಬಿಟ್ಟನಂತರ ಕನಿಷ್ಠ 15 ರಿಂದ 20 ದಿನಗಳ ಕಾಲ ಬಿಡುವುದು ಒಳ್ಳೆಯದು. ಇಲ್ಲದಿದ್ದರೆ ಹುಂಜದ ಕಡೆಯ ಜನ್ಮವೃತ್ತಾಂತ ಸಂದೇಹಾಸ್ಪದವಾಗಿದ್ದು ವಂಶಾವಳಿಯ ತಪ್ಪು ಗ್ರಹಿಕೆಗೆ ದಾರಿಮಾಡಿಕೊಡುತ್ತದೆ.

ಫಲೀಕರಣದ ಮೇಲೆ ಪ್ರಭಾವ ಬೀರುವ ಪರಿಸ್ಥಿತಿಗಳು

ಬರೀ ನೋಡುವುದರಿಂದ ಮೊಟ್ಟೆಯ ಫಲೀಕರಣ ಅಥವಾ ಮರಿಯಾಗುವಿಕೆಯನ್ನು ಗುರುತಿಸಲು ಯಾವ (ಮಾರ್ಗ) ಸಾಧನವೂ ಇಲ್ಲ. ಆದುದರಿಂದ ಉಚ್ಚ ಮಟ್ಟದ ಫಲೀಕರಣವನ್ನು ಹೊಂದಲು ಇದಕ್ಕೆ ಪೋಷಕವಾದ ಎಲ್ಲ ಪರಿಸ್ಥಿತಿಗಳನ್ನೂ ಒದಗಿಸಲೇ ಬೇಕಾದುದು ಅವಶ್ಯಕ.

ಫಲೀಕರಣ ಹುಂಜ ಮತ್ತು ಹೇಂಟೆ ಎರಡರಲ್ಲೂ ಇರುವ ವೈಯಕ್ತಿಕ ಗುಣ ಮತ್ತು ಇದು ಮುಂದಿನ ಪೀಳಿಗೆಗೆ ಸಾಗಿಬರುವುದಿಲ್ಲ. ಆದಾಗ್ಯೂ ತಳಿಎಬ್ಬಿಸುವ ಗುಂಪಿನ ಆಹಾರ, ರೋಗಗಳು, ಮಾತಾಪಿತೃಗಳ ವಯಸ್ಸು, ಮೊಟ್ಟೆಯ ಬಾಹ್ಯಗುಣಗಳು, ತಳಿಎಬ್ಬಿಸುವ ಗುಂಪಿನಲ್ಲಿ ಮೊಟ್ಟೆ ಉತ್ಪಾದನೆಯ ದರ ಮೊದಲಾದ ಕೆಲವು ಅಂಶಗಳು ಫಲೀಕರಣದ ಮೇಲೆ ಪ್ರಭಾವ ಬೀರುತ್ತವೆ.

ತಳಿ ಎಬ್ಬಿಸುವ ಗುಂಪಿನ ಆಹಾರ: ತನ್ನ ಆಹಾರದ ದಾಸ್ತಾನನ್ನು ನಿರಂತರವಾಗಿ ಮತ್ತೆಮತ್ತೆ ಭರ್ತಿಮಾಡಿಕೊಳ್ಳುವ ಸಾಧ್ಯತೆಯಿಲ್ಲದ ಭ್ರೂಣ ಬದುಕಿ, ಯಶಸ್ವಿಯಾಗಿ ಅಭಿವೃದ್ಧಿಹೊಂದುವುದಕ್ಕೆ ಅವಶ್ಯಕವಾದ ಎಲ್ಲ ಆಹಾರಾಂಶಗಳೂ ಸರಿಯಾದ ಪ್ರಮಾಣದಲ್ಲಿ ಮೊಟ್ಟೆಯಲ್ಲಿರುವುದನ್ನು ಅವಲಂಬಿಸುವುದು ಸುಸ್ಪಷ್ಟ. ಯಾವುದೋ ಒಂದು ವಿಧದ ಆಹಾರದಿಂದ ವ್ಯಾಪಾರಿ ಉತ್ಪಾದಕ ಹೇಂಟೆಗಳು ಚೆನ್ನಾಗಿ ಉತ್ಪಾದಿಸಿದ ಮಾತ್ರಕ್ಕೆ ಅದೇ ವಿಧದ ಆಹಾರ ತಳಿಎಬ್ಬಿಸುವ ಗುಂಪಿಗೂ ಸಾಕು ಎಂಬ ಅಭಿಪ್ರಾಯ ಉದ್ಭವಿಸಬಾರದು. ತಳಿಎಬ್ಬಿಸುವಿಕೆಯ ಹೇಂಟೆ ವಿವೇಚನೆರಹಿತವಾಗಿ ಆಹಾರ ಕೊಟ್ಟಾಗಲೂ ಕೂಡ ಮೊಟ್ಟೆಯಿಡಬಲ್ಲದು ಎಂದ ಮಾತ್ರಕ್ಕೆ ಆ ಮೊಟ್ಟೆ ಫಲೀಕೃತವಾಗಿರುವುದೆಂದಾಗಲಿ, ಮರಿಯಾಗುವುದೆಂದಾಗಲಿ ಅಥವಾ ಮರಿಯಾದರೆ ಹುಟ್ಟಿದ ಮರಿಗಳು ತೃಪ್ತಿಕರವಾಗಿ ಅಭಿವೃದ್ಧಿಹೊಂದುವುದೆಂದಾಗಲಿ ಯಾವ ಭರವಸೆಯೂ ಇಲ್ಲ.

ಮರಿಯಾಗುವಿಕೆಗೆ ಮೊಟ್ಟೆಗಳು ಬೇಕಾಗುವುದಕ್ಕೆ ಕನಿಷ್ಠ ಆರರಿಂದ ಎಂಟು ತಿಂಗಳು ಮೊದಲೇ ಕೋಳಿಗಳಿಗೆ ಸರಿಯಾದ ತಳಿಎಬ್ಬಿಸುವ ಆಹಾರವನ್ನು ಕೊಡಬೇಕು: ತಳಿಎಬ್ಬಿಸುವುದಕ್ಕಾಗಿರುವ ಹುಂಜಗಳಿಗೆ, ಹೇಂಟೆಗಳ ಜೊತೆಗೂಡಿಸುವುದಕ್ಕೆ ಕನಿಷ್ಠ ಮೂರು ತಿಂಗಳು ಮೊದಲು ತಳಿಎಬ್ಬಿಸುವ ಆಹಾರವನ್ನು ಕೊಡುವುದು ಒಳ್ಳೆಯದು. ತಳಿಎಬ್ಬಿಸುವ ಆಹಾರದಲ್ಲಿ ವಿಶೇಷ ಗಮನ ಕೊಡಬೇಕಾದ ಆಹಾರಾಂಶಗಳೆಂದರೆ, ರಿಬೋಫ್ಲೇವಿನ್, ಫಾಂಟೊಥೆನಿಕ್ ಆಮ್ಲ, B_{12} ಅನ್ನಾಂಗ, ಪ್ರಾಣಿ ಸಸಾರಜನಕ ಪದಾರ್ಥಗಳಿಗೆ ಸಂಬಂಧಿಸಿದ ಅಂಶಗಳಾದ ಬಯೋಟಿನ್ ಮತ್ತು ಖೋಲಿನ್, A ಮತ್ತು B ಅನ್ನಾಂಗ ಹಾಗೂ ಖನಿಜಗಳ ಕಡೆಯಿಂದ ಮ್ಯಾಂಗನೀಸ್.

ರಾಷ್ಟ್ರೀಯ ಸಂಶೋಧನಾ ಸಂಸ್ಥೆ, ವಾಷಿಂಗ್‌ಟನ್, ಡಿ. ಸಿ., ಯು. ಎಸ್. ಎ., ಇಂದ ಶಿಫಾರಸ್ಸು ಮಾಡಲ್ಪಟ್ಟ, ತಳಿಎಬ್ಬಿಸುವ ಗುಂಪಿನ ಮತ್ತು ಮೊಟ್ಟೆ ಉತ್ಪಾದಕ ಗುಂಪಿನ ತುಲನಾತ್ಮಕ ಅವಶ್ಯಕತೆಗಳನ್ನು 10ನೇ ಕೋಷ್ಟಕದಲ್ಲಿ ಕೊಡಲಾಗಿದೆ.

ಶೇಕಡ 10ರಷ್ಟು ಮೀನುಪುಡಿ ಅಥವಾ ಗುಣಯುಕ್ತವಾದ ಇತರ ಪ್ರಾಣಿ ಸಸಾರಜನಕ ಪದಾರ್ಥ, ಸಾಕಷ್ಟು ಹಸುರು ಮತ್ತು ಶೇಕಡ 5ರಷ್ಟು ಒಣಗಿಸಿದ ಈಸ್ಟ್ ಇವುಗಳನ್ನು ಸೇರಿಸುವುದರಿಂದ ಅನ್ನಾಂಗಗಳ ಅವಶ್ಯಕತೆಗಳನ್ನು ಸಂಧಿಸ ಬಹುದು.

ಖಚಿತವಾಗಿ 600 ಅಂತರಾಷ್ಟ್ರೀಯ ಮಾನಗಳಿಗೆ ಕಡಮೆಯಿಲ್ಲದಷ್ಟು A ಅನ್ನಾಂಗ ಮತ್ತು 85 I.C.U.ಗಳಷ್ಟು D ಅನ್ನಾಂಗಗಳನ್ನು ಪ್ರತಿಗ್ರಾಂನಲ್ಲಿ ಹೊಂದಿರುವ ಶಾರ್ಕ್ ಈಲಿ ಎಣ್ಣೆ ರೂಪದಲ್ಲಿ ಅನ್ನಾಂಗ A ಮತ್ತು D ಗಳನ್ನು ಒದಗಿಸಬಹುದು.

ಆಹಾರ ಶೇಕಡ 0.5 ಭಾಗವಾದ ಅಡಿಗೆ ಉಪ್ಪಿನ ರೂಪದಲ್ಲಾಗಲೀ ಅಥವಾ ಧಾರಾಳವಾಗಿ ಸೇರಿಸುವ ಚಿಪ್ಪಿನ ಪುಡಿಯೊಂದಿಗೆ 10 ಪೌಂಡು ಉಪ್ಪು ಅಥವಾ ಪುಡಿಗೆ 4 ಔನ್ಸ್ ಪುಡಿಮಾಡಿದ ಜಲಯುಕ್ತ ಮ್ಯಾಂಗನೀಸ್ ಸಲ್ಫೇಟ್ ಬೆರೆಸು ವುದರಿಂದ ಮ್ಯಾಂಗನೀಸ ಒದಗಿಸಬಹುದು.

ಮುಖ್ಯವಾಗಿ B_{12} ಅನ್ನಾಂಗದ ನ್ಯೂನತೆಯಿಂದಾದ ಪ್ರಾಣಿ ಸಸಾರಜನಕಗಳ ನ್ಯೂನತೆಯು ಮರಿಯಾಗುವಿಕೆಯ ತೀವ್ರ ಇಳಿಮುಖ ಮತ್ತು ಮರಿಯಾದವುಗಳ ನಿಕೃಷ್ಟ ಜೀವನ ಸಾಮರ್ಥ್ಯಕ್ಕೆ ಎಡೆಗೊಡುತ್ತದೆ. ರಿಬೋಫ್ಲೇವಿನ್‌ನ ನ್ಯೂನತೆ ಶೋಫ ಮತ್ತು ಚಪ್ಪಟೆಯಾದ ವಿಕೃತಿಯುಕ್ತ ಭ್ರೂಣಗಳು ಹೆಚ್ಚುವ ಸಂಭವದೊಡನೆ ನಿಕೃಷ್ಟ ಮರಿಯಾಗುವಿಕೆಗೆ ಎಡೆಗೊಡುತ್ತದೆ. ಪೆಂಟೊಥೆನಿಕ್ ಆಮ್ಲದ ನ್ಯೂನತೆ ಮರಿಯಾಗುವಿಕೆಯನ್ನು ಕುಗ್ಗಿಸುತ್ತದೆ ಮತ್ತು ಹೆಚ್ಚಿನ ಭ್ರೂಣಗಳ ಸಾವಿನ ಸಂಭವಕ್ಕೆ ಅದರಲ್ಲೂ ಕಾವುಕೊಡುವ ಕೊನೆಯ ಎರಡುಮೂರು ದಿನಗಳಲ್ಲಿ ಆಗುವ ಸಾವಿಗೆ ಕಾರಣವಾಗುತ್ತದೆ. ಬಯೋಟಿನ್, ಖೋಲಿನ್ ಮತ್ತು ಮ್ಯಾಂಗನೀಸ್‌ಗಳು ಭ್ರೂಣದ

ಸ್ವಾಭಾವಿಕ ಬೆಳವಣಿಗೆಗೆ ಅವಶ್ಯಕವಾದವು ಮತ್ತು ಹಿಗ್ಗಿದ 'ಹಾಕ್', ಅಥವಾ 'ಪೆರೋಸಿಸ್' ಎಂಬ ಸ್ಥಿತಿಗಳನ್ನು ತಡೆಗಟ್ಟಲೂ ಇವುಗಳು ಬೇಕು. ಬಯೋಟಿನ್‌ನ ತೀವ್ರತರ ನ್ಯೂನತೆ ಕಾವುಕೊಡುವಿಕೆಯ 72 ರಿಂದ 96 ಗುಟೆಗಳ ಕಾಲದಲ್ಲಿ ಹೆಚ್ಚಿನ ಭ್ರೂಣಗಳ ಸಾವಿಗೆ ಕಾರಣವಾಗುತ್ತದೆ.

ಕೋಷ್ಟಕ 10

ತಳಿ ಎಬ್ಬಿಸುವ ಗುಂಪು ಹಾಗೂ ಮೊಟ್ಟೆ ಉತ್ಪಾದಕಗಳ ಆಹಾರಾಂಶಗಳ ಅವಶ್ಯಕತೆ

ಆಹಾರಾಂಶ	ಮೊಟ್ಟೆ ಉತ್ಪಾದಕ ಹೇಂಟೆ	ತಳಿಎಬ್ಬಿಸುವ ಹೇಂಟೆ
ಸ್ವಾಭಾವಿಕ ಸಸಾರಜನಕ (ಶೇಕಡ)	15	15
ಜೀವಸತ್ವಗಳು		
(ಅ) A ಜೀವಸತ್ವ (IU/ಪೌಂಡ್)	3,300	33,000
(ಆ) D ಜೀವಸತ್ವ (ICU/ಪೌಂಡ್)	340	340
(ಇ) ರಿಬೋಫ್ಲೇವಿನ್ (ಮಿ.ಗ್ರಾಂ/ಕೋಳಿ)	0.9	1.6
(ಈ) ಪಾಂಟೋಥೆನಿಕ್ ಆಮ್ಲ (ಮಿ.ಗ್ರಾಂ/ಪೌಂಡ್)	2.5	5.0
(ಉ) ಪೈರಿಡಾಕ್ಸಿನ್ (ಮಿ.ಗ್ರಾಂ/ಪೌಂಡ್)	1.6	1.6
(ಊ) ಬಯೋಟಿನ್ (ಮಿ.ಗ್ರಾಂ/ಪೌಂಡ್)	—	0.07
ಖನಿಜಗಳು		
(ಅ) ಸುಣ್ಣ (ಶೇಕಡ)	2.25	2.25
(ಆ) ರಂಜಕ (ಶೇಕಡ)	0.75	0.75
(ಇ) ಉಪ್ಪು (ಶೇಕಡ)	0.5	0.5
(ಈ) ಮ್ಯಾಂಗನೀಸ್ (ಮಿ.ಗ್ರಾಂ/ಪೌಂಡ್)	—	15

ರೋಗರಹಿತ ಗುಂಪು: ಮೊಟ್ಟೆಯ ಮುಖಾಂತರ ಒಂದು ಪೀಳಿಗೆಯಿಂದ ಮತ್ತೊಂದಕ್ಕೆ ಸಾಗಿಹೋಗುವ ರೋಗಗಳ ಸಂಖ್ಯೆಯನ್ನು ಅರಿತುಕೊಂಡಾಗ ಮರಿಮಾಡುವ ಮೊಟ್ಟೆಗಳನ್ನು ರೋಗರಹಿತ ಗುಂಪಿನಿಂದ ಆಯ್ಕೆಮಾಡಿಕೊಳ್ಳುವ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡುತ್ತದೆ. ಮೊಟ್ಟೆಯಿಂದ ಸಾಗುವ ರೋಗಗಳಲ್ಲಿ ಅತಿ ಮುಖ್ಯವಾದವುಗಳೆಂದರೆ: ಬಿ.ಡಬ್ಲ್ಯು.ಡಿ. (ಪುಲ್ಲೋರಂ ರೋಗ), ಕೋಳಿ ಟೈಫಾಯ್ಡ್ ಮತ್ತು

ಏವಿಯನ್ ಲ್ಯುಕೋಸಿಸ್ (ಕೋಳಿ ಪಾರ್ಶ್ವವಾಯು). ಮರಿಮಾಡುವಿಕೆಗೆ ಮೊಟ್ಟೆಗಳನ್ನು ಆಯ್ಕೆಮಾಡುವಾಗ ಅಂತಹ ಮೊಟ್ಟೆಗಳನ್ನು ಈ ರೋಗಗಳಿಲ್ಲದೇ ಇರುವ ಹೇಂಟೆಗಳಿಂದಲೇ ಆಯ್ಕೆಮಾಡಿಕೊಳ್ಳಬೇಕು.

ಮಾತಾಪಿತೃಗಳ ವಯಸ್ಸು: ಎಲ್ಲಿಯವರೆಗೆ ಹುಂಜಗಳು ಚೈತನ್ಯಯುಕ್ತವಾಗಿ ಮತ್ತು ಸ್ವತಃ ಫಲವತ್ತಾಗಿ ಇರುವುವೋ ಅಲ್ಲಿಯವರೆಗೆ ಅವುಗಳ ವಯಸ್ಸು, ಮೊಟ್ಟೆಗಳ ಮರಿಯಾಗುವಿಕೆ ಅಥವಾ ಇದರ ಜೊತೆಗೂಡಿದ ಹೇಂಟೆಗಳ ಮರಿಹುಂಜಗಳ ಚೈತನ್ಯದ ಮೇಲಾಗಲಿ ಯಾವ ಪ್ರಭಾವವೂ ಇಲ್ಲ, ಆದರೆ ಹುಂಜಕ್ಕೆ ವಯಸ್ಸಾದಷ್ಟೂ ಮೊಟ್ಟೆಗಳಲ್ಲಿ ಫಲೀಕರಣ ಕಡಮೆಯಾಗದಂತೆ ಕೂಡುವ ಹೇಂಟೆಗಳ ಸಂಖ್ಯೆ ಇಳಿಮುಖ ವಾಗುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆ. ಮತ್ತೊಂದು ಕಡೆ ತಾಯಿಯ ವಯಸ್ಸು ಮರಿಯಾಗುವಿಕೆಯ ಮೇಲೆ ಪ್ರಭಾವ ಬೀರುತ್ತದೆ. ಮರಿಯಾಗುವಿಕೆ ಸಾಮಾನ್ಯವಾಗಿ ಹೇಂಟೆಗಳ ಉತ್ಪಾದನೆಯ ಮೊದಲವರ್ಷದ ಕೊನೆಯಲ್ಲಿ ಮತ್ತು ಎರಡನೇ ವರ್ಷದಲ್ಲಿ ಬಹು ಹೆಚ್ಚಾಗಿರುತ್ತದೆ; ನಂತರ ಇದು ಇಳಿಮುಖವಾಗುವ ಪ್ರವೃತ್ತಿ ತೋರಿಸುತ್ತದೆ. ಈ ಇಳಿಮುಖ ಎಳೆಯ ಭ್ರೂಣಗಳ ಸಾವು ಮತ್ತು ಪೂರ್ಣಕಾಲದ ಭ್ರೂಣಗಳ ಚಿಪ್ಪು ಒಡೆಯುವ ಶಕ್ತಿಹೀನತೆಗೆ ಕೂಡ ಸಹಾಯಕ ಅಂಶವಾಗಿರುವುದು ಕಂಡು ಬರುತ್ತದೆ.

ಮೊಟ್ಟೆಯ ಬಾಹ್ಯವೈಶಿಷ್ಟ್ಯತೆಗಳು: ವಿವಿಧ ಗಾತ್ರ, ಆಕಾರ, ಬಣ್ಣ ಮತ್ತು ಚಿಪ್ಪಿನ ರಚನೆಗಳ ಮೊಟ್ಟೆಗಳ ಮರಿಯಾಗುವಿಕೆಯ ಸಂಬಂಧದ ಬಗ್ಗೆ ಸಾಕಷ್ಟು ಹೇಳಿದ್ದರೂ ಸಹ, ಮಧ್ಯಮಗಾತ್ರದ ಒಂದೊಂದು 1¾ ರಿಂದ 2 ಔನ್ಸ್ ತೂಗುವ ಮೊಟ್ಟೆಗಳನ್ನು ಮಾತ್ರ ಇಡುವುದರಿಂದ ಅತ್ಯುತ್ತಮ ಫಲಿತಾಂಶಗಳನ್ನು ಪಡೆಯಲು ಸಾಧ್ಯವೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಇವು ಅತ್ಯುತ್ತಮ ವರ್ಗದ ಮರಿಗಳು ಹಾಗೂ ಉತ್ಕೃಷ್ಟ ಮರಿಯಾಗುವಿಕೆಯನ್ನು ಕೊಡುವಂತೆ ಕಂಡುಬಂದಿದೆ. ಮೊಟ್ಟೆಯ ಆಕಾರ ಅನುವಂಶೀಯ ಗುಣ ಎಂಬುದರಿಂದ ಮಾತ್ರ ಪ್ರಾಮುಖ್ಯತೆಯನ್ನು ಪಡೆದಿದೆ, ದೋಷಯುಕ್ತ ಆಕಾರದ ಮೊಟ್ಟೆಗಳ ನಿರಂತರ ಉಪಯೋಗ ಆ ದೋಷ ಶಾಶ್ವತ ವಾಗಿ ನಿಲ್ಲುವಂತೆ ಹಾಗೂ ಹೆಚ್ಚುವಂತೆ ಮಾಡುತ್ತದೆ. ಇದು ವ್ಯಾಪಾರಿ ಆಹಾರೋದ್ದೇಶ ಮೊಟ್ಟೆ ಉತ್ಪಾದನಾ ಕೇಂದ್ರಗಳಲ್ಲಿ ಅಪೇಕ್ಷಣೀಯ ಗುಣವಲ್ಲ. ಮರಿಮಾಡುವಿಕೆಗೆ ಆಯ್ಕೆಮಾಡಿದ ಮೊಟ್ಟೆಗಳು ಗಾತ್ರ, ಆಕಾರ, ತೂಕ ಹಾಗೂ ಬಣ್ಣಗಳಲ್ಲಿ ಸಮಾನ ವಾಗಿರಬೇಕು.

ಮೊಟ್ಟೆಗಳನ್ನು ಆಹಾರಕ್ಕಾಗಿ ದಾಸ್ತಾನುಮಾಡುವಾಗ ಮತ್ತು ಮರಿಮಾಡುವ ಮೊಟ್ಟೆಗಳನ್ನು ರಕ್ಷಿಸುವಾಗ ಹಾಗೂ ಕಾವುಕೊಡುವ ಕಾಲದಲ್ಲಿ ನಷ್ಟವಾಗುವ ತೇವಾಂಶ ವನ್ನು ನಿಶ್ಚಯಿಸುವಲ್ಲಿ ಚಿಪ್ಪಿನ ರಚನೆ ಬಹಳ ಮುಖ್ಯವಾದುದು. ಚಿಪ್ಪಿನ ರಚನೆಯೂ ಬಹುಮಟ್ಟಿಗೆ ಅನುವಂಶೀಯ ಗುಣವಾದ್ದರಿಂದ, ಮರಿಮಾಡಲು ಒಳ್ಳೆಯ ರಚನೆಯ ಚಿಪ್ಪುಳ್ಳ ಮೊಟ್ಟೆಗಳನ್ನು ಉಪಯೋಗಿಸುವುದು ಅಪೇಕ್ಷಣೀಯ. ಚಿಪ್ಪಿನಲ್ಲಿನ ಬಿರುಕು

ಎಷ್ಟೇ ಸಣ್ಣದಾಗಿದ್ದರೂ ಸಹ ಆ ಮೊಟ್ಟೆಗಳು ಮರಿಮಾಡುವುದಕ್ಕೆ ಯೋಗ್ಯವಲ್ಲ. ಅಂತಹ ಮೊಟ್ಟೆಗಳನ್ನು ತಿರಸ್ಕರಿಸಬೇಕು.

ತಳಿಎಬ್ಬಿಸುವ ಗುಂಪಿನಲ್ಲಿ ಮೊಟ್ಟೆ ಉತ್ಪಾದನೆ: ಹುಂಜ ಮತ್ತು ಹೇಂಟೆಗಳ ಉತ್ಪಾದನಾ ಸಾಮರ್ಥ್ಯ ನಿಶ್ಚಯಿಸಲ್ಪಟ್ಟಿದ್ದಾಗ, ಹೇಂಟೆಯ ಮೊಟ್ಟೆ ಉತ್ಪಾದನೆ ಉನ್ನತ ಮಟ್ಟದಲ್ಲಿದ್ದಾಗ ಮೊಟ್ಟೆಗಳ ಫಲೀಕರಣ ಮತ್ತು ಮರಿಯಾಗುವಿಕೆಯೂ ಉನ್ನತಮಟ್ಟದಲ್ಲಿರುತ್ತದೆಂದು ತೋರಿಸಲಾಗಿದೆ. ಈ ಗುಣಗಳು ಉತ್ಪಾದನೆ ಇಳಿ ಮುಖವಾದಂತೆಲ್ಲ ಕಡಮೆಯಾಗುತ್ತವೆ.

ಅಷ್ಟೇ ಅಲ್ಲದೆ ಮೊಟ್ಟೆಯ ಫಲೀಕರಣ ಮತ್ತು ಮರಿಯಾಗುವಿಕೆಗಳು ಋತು ಸ್ಥಿತಿಗಳು (ಪ್ರಾರಂಭಿಕ ವಸಂತ ಮತ್ತು ಬಿಸಿಲಿನಿಂದ ಕೂಡಿದ ಬೇಸಗೆಗಳಂತಹ ವರ್ಷದ ಕೆಲವು ಕಾಲಗಳಲ್ಲಿ ಈ ಗುಣಗಳು ಕೆಳಮಟ್ಟದಲ್ಲಿರುತ್ತವೆ), ಗುಂಪಿನಲ್ಲಿ ಹೇಂಟೆ, ಹುಂಜಗಳ ಪ್ರಮಾಣ ತಳಿಎಬ್ಬಿಸುವ ಕೋಳಿಗಳ ಶಾರೀರಕ ಸ್ಥಿತಿ ಮತ್ತು ಕಾವುಕೊಡುವುದಕ್ಕೆ ಮೊದಲು ದಾಸ್ತಾನುಮಾಡುವ ಸ್ಥಿತಿಗಳು ಮೊದಲಾದವು ಗಳಿಂದಲೂ ಪ್ರಭಾವಿತವಾಗುತ್ತವೆ.

ಫಲೀಕರಣದ ಪೂರ್ವ ನಿಶ್ಚಯ

ಕಾವುಕೊಡಲು ಇಡುವುದಕ್ಕೆ ಮೊದಲು ಯಾವ ಮೊಟ್ಟೆಗಳು ಫಲೀಕೃತವಾಗಿವೆ ಮತ್ತು ಅವುಗಳಿಂದ ಯಾವ ಲಿಂಗ ಅಭಿವೃದ್ಧಿಯಾಗುತ್ತದೆ ಎಂದು ಅರಿಯುವುದರ ಅನುಕೂಲತೆಗಳು ಎಷ್ಟು ಹೆಚ್ಚಿವೆಯೆಂದರೆ ಇವು ಚರ್ಚಾಸ್ಪದವಾದ ನಿಖರವಾದ ಪರೀಕ್ಷೆಗಳೆಂದು ಕರೆಸಿಕೊಳ್ಳುವ ಅನೇಕ ಪರೀಕ್ಷೆಗಳಿಗೆ ಎಡೆಗೊಟ್ಟಿವೆ. ಆದಾಗ್ಯೂ ಇವು ಯಾವ ವೈಜ್ಞಾನಿಕ ಆಧಾರಗಳನ್ನೂ ಹೊಂದಿಲ್ಲ.

ಬಹುಶಃ ಅತಿಹೆಚ್ಚಿನ ಜನಪ್ರಿಯತೆಯನ್ನು ಗಳಿಸಿರುವ, ಫಲೀಕರಣವನ್ನು ಮೊದಲೇ ನಿಶ್ಚಯಿಸುವ ಪರೀಕ್ಷೆಯೆಂದರೆ ಸಾಪೇಕ್ಷ ಸಾಂದ್ರತೆ ಪರೀಕ್ಷೆ. ಫಲೀಕೃತ ಮೊಟ್ಟೆಗಳು ಅಫಲೀಕೃತ ಮೊಟ್ಟೆಗಳಿಗಿಂತ ತುಲನಾತ್ಮಕವಾಗಿ ಹೆಚ್ಚಿನ ಸಾಪೇಕ್ಷ ಸಾಂದ್ರತೆಯನ್ನು ಹೊಂದಿರುತ್ತವೆಂದು ನಂಬಲಾಗಿದೆ. ಆದರೆ ಈ ಹೇಳಿಕೆಗೆ ಆಧಾರ ಗಳಿಲ್ಲ. ಹೇಂಟೆಯು ಜೊತೆಗೂಡಿರಲಿ, ಇಲ್ಲದಿರಲಿ, ಬೇರೆ ಬೇರೆ ಹೇಂಟೆಗಳು ಇಟ್ಟ ಮೊಟ್ಟೆಗಳ ಸಾಪೇಕ್ಷ ಸಾಂದ್ರತೆ ವ್ಯತ್ಯಾಸವಾಗುತ್ತದೆ.

ಬಾಹ್ಯನೋಟದಿಂದ ಮೊಟ್ಟೆಯ ಲಿಂಗವನ್ನು ನಿಶ್ಚಯಿಸುವ ಬಗ್ಗೆ ಬಹುಶಃ ಅತಿಹೆಚ್ಚಿನ ಜನಪ್ರಿಯತೆಯನ್ನು ಗಳಿಸಿರುವ ನಂಬಿಕೆಯೆಂದರೆ ಚಿಪ್ಪಿನ ಆಕಾರ ಸ್ಪಷ್ಟವಾದ ಸೂಚನೆಯನ್ನು ಒದಗಿಸುತ್ತದೆ ಎಂಬುದು. ಇದೂ ಕೂಡ ಯಾವ ಅಂಶಗಳ ಬೆಂಬಲ ವನ್ನು ಪಡೆದಿಲ್ಲ; ಕೆಲವು ಕಾಲ ಗಂಡುಮರಿಗಳನ್ನೇ ಕೊಡುತ್ತದೆ ಎಂದು ನಂಬಿದ್ದ

ಸಣ್ಣಗೆ ನೀಳವಾದ ಮೊಟ್ಟೆಗಳು ಹಾಗೂ ಹೆಣ್ಣುಮರಿಗಳನ್ನೇ ಕೊಡುತ್ತದೆ ಎಂದು ನಂಬಿದ್ದ ಗುಂಡನೆಯ ಅಂಡಾಕಾರದ ಮೊಟ್ಟೆಗಳೆರಡೂ ಬಹಳಮಟ್ಟಿಗೆ ಎರಡೂ ಲಿಂಗದ ಮರಿಗಳನ್ನು ಸಮಾನವಾಗಿ ಉತ್ಪಾದಿಸುತ್ತವೆ ಎಂದು ಬಹಳ ಮೊದಲೇ ಅಂದಾಜುಮಾಡಲಾಗಿದೆ. ಇದೇರೀತಿಯ ನಂಬಿಕೆಯನ್ನು ಹೊಂದಿದ್ದ, ಕಾವುಕೊಡುವ ಕಾಲದಲ್ಲಿ ಗಾಳಿಕೋಶದ ಸ್ಥಾನವೂ ನಂಬಿಕೆಗೆ ಇದರಷ್ಟೇ ಅನರ್ಹವಾದುದು.

ಮರಿಮಾಡುವ ಮೊಟ್ಟೆಗಳ ನಿರ್ವಹಣೆ ಹಾಗೂ ಆಕ್ರೈಕೆ

ರೋಗಗಳು ಹರಡುವುದನ್ನು ಕುಗ್ಗಿಸುವಲ್ಲಿ ಸ್ವಚ್ಛತೆ ಪ್ರಥಮ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಕೊಳಕಾದ ಮೊಟ್ಟೆಗಳು ರೋಗಜೀವಾಣುಗಳಿಗೆ ಆಶ್ರಯ ಕೊಡುತ್ತವೆ; ಇವುಗಳು ಕಾವುಕೊಡುವ ಯಂತ್ರ ಒದಗಿಸುವ ಆದರ್ಶ ಸ್ಥಿತಿಗಳಲ್ಲಿ ಅಭಿವೃದ್ಧಿಹೊಂದಿ ಹೆಚ್ಚುತ್ತವೆ.

ಸರಿಯಾದ ಅನುಕೂಲಕರ ಮೊಟ್ಟೆ ಇಡುವ ಅನುಕೂಲತೆಗಳು: ಸಾಧ್ಯವಾದ ಮಟ್ಟಿಗೂ ಸ್ವಚ್ಛವಾದ ಮೊಟ್ಟೆಗಳನ್ನು ಉತ್ಪಾದಿಸಲು, ಹೇಂಟೆಗಳಿಗೆ ಸಾಕಷ್ಟು ಗೂಡಿನ ವ್ಯವಸ್ಥೆ ಇರಬೇಕು; ಪ್ರತಿ 5 ಹೇಂಟೆಗಳಿಗೆ ಒಂದು ಗೂಡು ಪೆಟ್ಟಿಗೆ ಅಥವಾ ಬೋನು ಗೂಡನ್ನು ಉಪಯೋಗಿಸಿದಾಗ ಮೂರು ಅಥವಾ ನಾಲ್ಕು ಹೇಂಟೆಗಳಿಗೆ ಕೂಡ ಒಂದು ಗೂಡು ಪೆಟ್ಟಿಗೆ ಒದಗಿಸುವುದು ಏಶ್ವಾಸಾರ್ಹ. ಮೊಟ್ಟೆಯಿಡುವ ಗೂಡಿನಲ್ಲಿ ಸ್ವಚ್ಛವಾದ ಒಳ್ಳೆಯ ಒಣಹುಲ್ಲು ಅಥವಾ ಇತರ ಹಾಸುಪದಾರ್ಥಗಳು ಸಾಕಷ್ಟಿರಬೇಕು. ಈ ಹಾಸುಪದಾರ್ಥಗಳನ್ನು ಅವಶ್ಯಕವಾದಾಗ ಬದಲಾಯಿಸಬೇಕು.

ಮೊಟ್ಟೆಗಳ ಸಂಗ್ರಹಣೆ ಮತ್ತು ದಾಸ್ತಾನು: ಮೊಟ್ಟೆಗಳನ್ನು ಸಾಧ್ಯವಾದ ಮಟ್ಟಿಗೂ ಮೇಲಿಂದ ಮೇಲೆ ಮೊಟ್ಟೆಯಿಡುವ ಗೂಡಿನಿಂದ ಸಂಚಯಿಸಬೇಕು. ವಿಶೇಷತಃ ಬೇಸಿಗೆತಿಂಗಳುಗಳಲ್ಲಿ ಪ್ರತಿ ಗಂಟೆಗೂ ಸಂಗ್ರಹಿಸುವುದನ್ನು ಕೂಡ ಹೆಚ್ಚು ಎನ್ನಲು ಸಾಧ್ಯವಿಲ್ಲ. ಚಳಿಗಾಲದ ತಿಂಗಳುಗಳಲ್ಲಿ ಅಂತರವನ್ನು ಹೆಚ್ಚಿಸಬಹುದು ಮತ್ತು ಮೊಟ್ಟೆಗಳನ್ನು ದಿನದಲ್ಲಿ ಮೂರು ಅಥವಾ ನಾಲ್ಕುಸಾರಿ ಸಂಗ್ರಹಿಸಬೇಕು. ಅತಿಹೆಚ್ಚಿಗೆ ಕೊಳಕಾಗಿರುವ ಹೊರತು ಮೊಟ್ಟೆಗಳನ್ನು ತೊಳೆಯಬಾರದು. ಸಾಮಾನ್ಯವಾದ ಕಲೆಗಳನ್ನು ಒಣ ಅಥವಾ ಒದ್ದೆಯಾದ ಒರಟು ಬಟ್ಟೆಯಿಂದ ಉಜ್ಜುವುದರಿಂದ ಹೋಗಿಸಬಹುದು. ಕೊಠಡಿಯೊಳಗಿನ ಶಾಖ 50°F ನಿಂದ 60°F ನ ಒಳಗೆರಕ್ಷಿಸಿಕೊಂಡು ಬಂದಿರುವ, ಯಾವ ರೀತಿ ಕಟುವಾದ ವಾಸನೆಯೂ ಇಲ್ಲದೆ ಸಾಕಷ್ಟು ವಾತಾಯನಗಳಿರುವ, ಒಣ ಜಾಗದಲ್ಲಿ ಸ್ವಚ್ಛವಾದ ಪೆಟ್ಟಿಗೆಗಳಲ್ಲಿ ಮೊಟ್ಟೆಗಳನ್ನು ಶೇಖರಿಸಬೇಕು. ಸೂಕ್ಷ್ಮಜೀವಾಣುಗಳ ಕ್ರಿಯೆ 68°Fನಲ್ಲಿ ಪ್ರಾರಂಭವಾಗುವುದರಿಂದ ಕೊಠಡಿಯ ಶಾಖವನ್ನು ಅದಕ್ಕಿಂತ ಕೆಳಮಟ್ಟದಲ್ಲಿಡುವುದು ಪ್ರಮುಖವಾದುದು ಮತ್ತು ಮೊಟ್ಟೆಯೊಳಗಿನ ಶಾಖವನ್ನು ಅವಧಿಕ ಶಾಖವಾದ 80°Fಗಿಂತ ಕೆಳಮಟ್ಟಕ್ಕೆ ತಂದು ಭ್ರೂಣದ ಬೆಳವಣಿಗೆಯನ್ನು ತಡೆಗಟ್ಟಿದಷ್ಟೂ ಒಳ್ಳೆಯದು: ಇಲ್ಲದೆ ಹೋದಲ್ಲಿ ಭ್ರೂಣದ ಬೆಳವಣಿಗೆ

ಬಹಳ ಮುಂದುವರಿದು ಮರಿಯಾಗುವಿಕೆಯನ್ನು ಕುಗ್ಗಿಸಬಹುದು ಅಥವಾ ದುರ್ಬಲವಾದ ಮರಿಗಳಿಗೆ ಜನ್ಮಕೊಡಬಹುದು.

ಅತಿಹೆಚ್ಚಿನ ಮಟ್ಟದ ಮರಿಯಾಗುವಿಕೆಯನ್ನು ಪಡೆಯಲು ಮೊಟ್ಟೆಗಳನ್ನು ಶೇಖರಿಸಿದ ಹತ್ತುದಿನದೊಳಗಾಗಿ ಮರಿಮಾಡುವುದಕ್ಕೆ ಇಡಬೇಕು. ಜೀವಾಣು ಬಿಲ್ಲೆ ಚಿಪ್ಪಿನ ಒಳಪೊರೆಗೆ ಅಂಟಿಕೊಳ್ಳುವ ಅಪಾಯವನ್ನು ತಪ್ಪಿಸಲು ಮರಿಮಾಡುವ ಮೊಟ್ಟೆಗಳನ್ನು ದಿನಕ್ಕೆ ಒಂದೆರಡು ಸಾರಿ ತಿರುಗಿಸುವುದು ಕೂಡ ಅಪೇಕ್ಷಣೀಯ. ಮೊಟ್ಟೆಗಳನ್ನು ಕುಲುಕುವುದು ಅಥವಾ ಒರಟಾಗಿ ನಿರ್ವಹಿಸುವುದನ್ನು ತಡೆಗಟ್ಟಬೇಕು. ಏಕೆಂದರೆ ಇದು ಪೊರೆಗಳು ಒಡೆದುಹೋಗುವುದು ಅಥವಾ ಚಿಪ್ಪಿನಲ್ಲಿ ಸಣ್ಣಬಿರುಕು ಬಿಡುವಂತೆ ಮಾಡುವ ಸಾಧ್ಯತೆ ಇದೆ.

ಮರಿಮಾಡುವ ಮೊಟ್ಟೆಗಳ ಸಾಗಾಣಿಕೆ: ಯಾವುದೇ ಕೋಳಿ ಅಭಿವೃದ್ಧಿ ವಿಸ್ತರಣಾ ಕಾರ್ಯಕ್ರಮದಲ್ಲಿ, ಇದರಿಂದಾಗುವ ಹೆಚ್ಚಿನ ನಷ್ಟದ ದೃಷ್ಟಿಯಿಂದ ಕೋಳಿಕೇಂದ್ರಗಳನ್ನು ಹೆಚ್ಚಿಸುವ ಆದರ್ಶ ಪದ್ಧತಿಯಿಲ್ಲದಿದ್ದರೂ ಕೆಲವು ಸಾರಿ ಒಂದು ಮೊಟ್ಟೆ ಅಭಿವೃದ್ಧಿ ಕೇಂದ್ರದಿಂದ ಮರಿಮಾಡುವ ಮೊಟ್ಟೆಗಳನ್ನು ಹಂಚುವುದು ಅವಶ್ಯಕವಾಗುತ್ತದೆ. ಮೊಟ್ಟೆಗಳನ್ನು ಬಹಳ ದೂರದವರೆಗೆ ಸಾಗಿಸಬೇಕಾಗಬಹುದು. ಇಂತಹ ಸಂದರ್ಭದಲ್ಲಿ ಮೊಟ್ಟೆಗಳನ್ನು ಸಾಗಾಣಿಕೆಗಾಗಿ ತುಂಬುವಾಗ ಮತ್ತು ಸಾಗಿಸುವಾಗ ವಿಶೇಷತಃ ಮೊಟ್ಟೆಗಳನ್ನು ಸೈಕಲ್, ಬಸ್ಸಿನ ಮೇಲೆ ಅಥವಾ ಎತ್ತಿನ ಗಾಡಿಗಳಲ್ಲಿ ಸಾಗಿಸುವಾಗ, ಮೊಟ್ಟೆಗಳನ್ನು ಸಾಕಾಣಿಕೆಗಾಗಿ ತುಂಬುವಾಗ ಮತ್ತು ಸಾಗಿಸುವಾಗ ವಿಶೇಷ ಎಚ್ಚರ ವಹಿಸದೇ ಹೋದರೆ ಪ್ರತಿಫಲಗಳು ನಿರಾಶಾದಾಯಕವಾಗುತ್ತವೆ. ವಾಯುಸಾಗಾಣಿಕೆಯಲ್ಲಿ ಸಹ ಹಾರಾಟದಲ್ಲಿನ ಕಂಪನ ಮತ್ತು ಶಾಖ ಹಾಗೂ ವಾತಾವರಣದ ಒತ್ತಡದ ವ್ಯತ್ಯಾಸದಿಂದಾಗಿ ಮರಿಮಾಡುವ ಮೊಟ್ಟೆಗಳ ಮರಿಯಾಗುವ ಶಕ್ತಿ ಕುಗ್ಗುವುದು ಕಂಡುಬಂದಿದೆ.

ಮರಿಮಾಡುವ ಮೊಟ್ಟೆಗಳನ್ನು ಹೆಚ್ಚಿನ ದೂರಗಳಿಗೆ ಸಾಗಿಸುವಾಗ ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಹಲವಾರು ವಿಶೇಷ ರೀತಿಯ ಪೆಟ್ಟಿಗೆಗಳು, ತುಲನಾತ್ಮಕವಾಗಿ ಸಾಗಿಸುವ ಕಡಮೆ ಸಂಖ್ಯೆಯ ಮೊಟ್ಟೆಗಳು ಮತ್ತು ಅಂತಹ ಪೆಟ್ಟಿಗೆಗಳಿಗೆ ತಗಲುವ ವೆಚ್ಚದಿಂದಾಗಿ ಈ ದೇಶದಲ್ಲಿ ಸ್ಥಾನಗಳಿಸಿಲ್ಲ.

ಈ ಮರಿಮಾಡುವ ಮೊಟ್ಟೆಗಳನ್ನು ಬೇರೆಬೇರೆಯಾಗಿ ಹುಲ್ಲು ಅಥವಾ ಬತ್ತದ ಹುಲ್ಲಿನಲ್ಲಿ ಸುತ್ತಿ ನಂತರ ಬಿದಿರಿನ ಬುಕ್ಕಿಗಳಲ್ಲಿ ಗಣನೀಯ ದೂರಗಳವರೆಗೆ ಅತಿ ಕಡಮೆ ವೆಚ್ಚದಲ್ಲಿ ಸಾಗಿಸಬಹುದೆಂದು ಈ ದೇಶದ ಅನುಭವಗಳು ತೋರಿಸಿವೆ. ಇಂತಹ ಸುತ್ತುವಿಕೆ ಅವಶ್ಯಕವಾದ ವಾತಾಯನವನ್ನೊದಗಿಸುತ್ತದೆ ಮತ್ತು ಒಡೆಯುವಿಕೆಯನ್ನು ತಡೆಗಟ್ಟುತ್ತದೆ. ಒಂದು ರಾಜ್ಯದಲ್ಲಿ ಉಗಿಬಂಡಿ, ಜೀಪು, ಸಾರ್ವಜನಿಕ ಮೋಟಾರು, ಎತ್ತಿನಗಾಡಿ ಮತ್ತು ಸೈಕಲ್‌ಗಳನ್ನೊಳಗೊಂಡ ಸಾಗಾಣಿಕೆಯಲ್ಲಿ ಹಂಚಿದ, ಮೇಲೆ

ಹೇಳಿದ ರೀತಿಯಲ್ಲಿ ಸುತ್ತಿಟ್ಟ ಮರಿಮಾಡುವ ಮೊಟ್ಟೆಗಳಲ್ಲಿ ಸುಮಾರು 11.000 ಮೊಟ್ಟೆಗಳಿಗೆ ಕೇವಲ ಮೂರು ಮೊಟ್ಟೆಗಳು ಸಾಗಾಣಿಕೆಯಲ್ಲಿ ಧಕ್ಕೆಯನ್ನನುಭವಿಸಿದ್ದುದು ವರದಿಯಾಗಿದೆ. ಮರಿಯಾಗುವಿಕೆಯ ಪ್ರಮಾಣ 15 ರಿಂದ 85 ರವರೆಗೂ ವ್ಯತ್ಯಾಸ ವಾಗಿತ್ತು.

ಕಾವಿಗಿಡಬೇಕಾದ ಮೊಟ್ಟೆಗಳ ಸಂಖ್ಯೆ: ಮೊಟ್ಟೆ ಉತ್ಪಾದಿಸುವ ಗುಂಪನ್ನು ಹೆಚ್ಚಿಸಲು ಹೇಂಟೆಗಳನ್ನು ಉತ್ಪಾದಿಸುವಲ್ಲಿ ಅಪೇಕ್ಷಣೀಯ ಮರಿಹೇಂಟೆಗಳ ಸಂಖ್ಯೆ ಕಾವಿಗಿಡಬೇಕಾದ ಮೊಟ್ಟೆಗಳ ಸಂಖ್ಯೆಯನ್ನು ಬಹುವಾಗಿ ನಿಯಂತ್ರಿಸುತ್ತದೆ. (ಅ) ಮೊಟ್ಟೆಯೊಡೆದು ಹೊರಬಂದ ಮರಿಗಳಲ್ಲಿ ಸುಮಾರಾಗಿ ಅರ್ಧದಷ್ಟು ಮರಿ ಹೇಂಟೆಗಳಿರುತ್ತವೆ: (ಆ) ಕಾವಿಗಿಟ್ಟ ಮೊಟ್ಟೆಗಳಲ್ಲಿ ಸರಾಸರಿ 50 ರಿಂದ 65 ಮಾತ್ರ ಮರಿಯಾಗುತ್ತವ ಮತ್ತು (ಇ) ರೋಗ ಆಕಸ್ಮಿಕ ಮತ್ತು ಬೇರ್ಪಡಿಸುವಿಕೆ, ಉತ್ಪಾದನಾ ಗುಂಪಿನ ಅಂಗವಾಗಿ ಇಡಲು ಯೋಗ್ಯವಾದ ಮರಿಹೇಂಟೆಗಳ ಸಂಖ್ಯೆಯನ್ನು ಕುಗ್ಗಿಸುತ್ತವೆ ಎಂಬುದು ಸಾಮಾನ್ಯವಾದ ಅನುಭವ. ಆದುದರಿಂದ ಅವಶ್ಯಕವಾದ ಒಳ್ಳೆಯ ಮರಿಹೇಂಟೆಗಳ ಸಂಖ್ಯೆಯ ಐದರಿಂದ ಆರರಷ್ಟು ಮೊಟ್ಟೆಗಳನ್ನು ಕಾವಿಗಿಡುವುದು ಒಳ್ಳೆಯದು. ಈ ಸಂಖ್ಯೆ ಫಲೀಕರಣದ ಪ್ರಮಾಣ ಮತ್ತು ನಿರ್ವಹಿಸುವ ವ್ಯಕ್ತಿಯ ಕುಶಲತೆಯೊಂದಿಗೂ ಹೆಚ್ಚು ಕಡಮೆಯಾಗುತ್ತದೆ.

ಕೋಳಿಮರಿಗಳನ್ನು ಪಡೆಯುವ ವಿಧಾನ

ಹೊಸ ಕೋಳಿ ಉದ್ಯಮಗಳನ್ನು ಪ್ರಾರಂಭಿಸಲು ಮತ್ತು ಇರುವ ಗುಂಪನ್ನು ವಿಸ್ತರಿಸಲು ಅಥವಾ ಅದರಲ್ಲಿ ಖಾಲಿ ಬಿದ್ದ ಜಾಗಗಳನ್ನು ತುಂಬಲು ಅವಶ್ಯಕವಾದ ಕೋಳಿಮರಿಗಳನ್ನು ಮೂರು ವಿಧಗಳಿಂದ ಪಡೆಯಬಹುದು:. (1) ಹೇಂಟೆಗಳಿಂದ ಅಥವಾ ಸ್ವಾಭಾವಿಕ ಕಾವು ಕೊಡುವಿಕೆಯಿಂದ ಮರಿಮಾಡಿಸುವುದು, (2) ಯಂತ್ರಗಳು ಅಥವಾ ಕೃತಕ ಕಾವುಕೊಡುವಿಕೆಯಿಂದ ಮರಿಮಾಡಿಸುವುದು ಮತ್ತು (3) ಇತರ ಮರಿಮಾಡುವ ಕೇಂದ್ರಗಳಿಂದ ಒಂದು ದಿನದ ಮರಿಗಳನ್ನು ಕೊಂಡುಕೊಳ್ಳುವುದು. ಮೊಟ್ಟೆಗಳನ್ನು ಮರಿಮಾಡುವ ಕೇಂದ್ರಗಳಲ್ಲಿ ಅಥವಾ ಹೆಚ್ಚಿನ ಜನಸಂಖ್ಯೆಯ. ಮೊಟ್ಟೆಗಳನ್ನು ಗಮನಿಸಲು ಬೇಕಾದಷ್ಟು ಸಲಕರಣೆಗಳನ್ನು ಹೊಂದಿರುವ ಬೇರೆ ಸಾಕಾಣಿಕೆದಾರನಿಂದ ಮರಿಮಾಡಿಸುವ ಅಭ್ಯಾಸವನ್ನು ಸಾಂಪ್ರದಾಯಿಕ ಮರಿಮಾಡುವಿಕೆ ಎನ್ನುತ್ತಾರೆ. ಈ ವ್ಯವಸ್ಥೆ ಪ್ರತ್ಯೇಕ ಕಾವುಕೊಡುವ ಸಲಕರಣೆಗಳನ್ನು ನಿರ್ವಹಿಸುವ ವೆಚ್ಚವಿಲ್ಲದೇ ಕೋಳಿಸಾಕಣೆದಾರನಿಗೆ ಆರಿತ ತಳಿವಿಬ್ಬಿಸುವಿಕೆಯ ಕೋಳಿಗಳನ್ನೊದಗಿಸುತ್ತದೆ. ಕೋಳಿಸಾಕಾಣಿಕೆ ಮುಂದುವರಿದಿರುವ ಎಲ್ಲ ದೇಶಗಳಲ್ಲೂ ಸಾಂಪ್ರದಾಯಿಕ ಮರಿಮಾಡುವಿಕೆ ಜನಪ್ರಿಯವಾಗಿವೆ. ಆದರೆ ಇವು ಭಾರತದಲ್ಲೂ ಇನ್ನು ಮೇಲೆ ಪ್ರಾರಂಭವಾಗಬೇಕಾಗಿದೆ.

ಸ್ವಾಭಾವಿಕ ಕಾವುಕೊಡುವಿಕೆ ಅಥವಾ ಮರಿಮಾಡುವಿಕೆ

ಕಾವುಕೂರುವ ಮನೋವೃತ್ತಿಯುಳ್ಳ ಹೇಂಟೆಯ ಕೆಳಗೆ ಸ್ವಾಭಾವಿಕ ಮರಿಮಾಡುವಿಕೆ, ಒಂದು ಕಾವುಕೊಡುವ ಯಂತ್ರವನ್ನು ಹೊಂದಿ ಅದನ್ನು ನಿರ್ವಹಿಸುವ ವೆಚ್ಚವನ್ನು

ಭರಿಸಲಾರದ. ಕೆಲವೇ ಕೋಳಿಗಳನ್ನು ಸಾಕುವ ಸಣ್ಣ ಸಾಕಣೆದಾರನಿಗೆ ಬಹಳ ಚೆನ್ನಾಗಿ ಹೊಂದುತ್ತದೆ. ಆದಾಗ್ಯೂ ಇದರ ಒಂದು ಮುಖ್ಯ ತೊಂದರೆ ಎಂದರೆ. ಬೇಕಾದಾಗ ಕಾವುಕೂರುವ ಮನೋವೃತ್ತಿಯುಳ್ಳ ಹೇಂಟೆ ಸಿಗದಿರುವುದು.

ಬಹುಶಃ ನಮ್ಮ ದೇಶದ 'ಹಳ್ಳಿ ಪರಿಸ್ಥಿತಿಗಳಲ್ಲಿ ಅಲ್ಲದೆ ಕೆಲವೇ ಹೇಂಟೆಗಳನ್ನೊಳಗೊಂಡ ಎಲ್ಲ ಉದ್ಯಮಗಳಲ್ಲೂ, ಸ್ವಾಭಾವಿಕ ಮರಿಮಾಡುವಿಕೆ ಕಾವುಕೊಡುವ ಅತಿ ಜನಪ್ರಿಯ ಪದ್ಧತಿಯಾಗಿ ಮುಂದುವರಿಯುತ್ತಿದೆ. ಭಾರತದ ದೇಶಿ ಹೇಂಟೆ ಆದರ್ಶ ಕಾವುಕೊಡುವ ಹೇಂಟೆ ಮತ್ತು ತಾಯಿ. ನಾಲ್ಕು ಅಥವಾ ಐದು ದೇಶಿ ಹೇಂಟೆಗಳು ಸುಲಭವಾಗಿ ಐವತ್ತು ಮೊಟ್ಟೆಗಳ ಕಾವುಕೊಡುವ ಯಂತ್ರದ ಸ್ಥಾನ ಪಡೆಯುತ್ತವೆ ಮತ್ತು ಮರಿಮಾಡುವುದೇ ಅಲ್ಲದೆ ಅವುಗಳ ಪೋಪಾಸನೆಯನ್ನೂ ಮಾಡುತ್ತವೆ. ಸ್ವಾಭಾವಿಕ ಕಾವುಕೊಡುವಿಕೆ ಯಂತ್ರಕ್ಕಿಂತ ಕಡಮೆ ಬಂಡವಾಳವನ್ನೊಳಗೊಳ್ಳುತ್ತದೆ. ಕಾರ್ಯಗತಮಾಡಲು ಕಡಮೆ ವೆಚ್ಚವಾಗುತ್ತದೆ ಮತ್ತು ಗಮನದ ಅವಶ್ಯಕತೆ ಕಡಮೆ. ಸರಿಯಾದ ಸಮಯದಲ್ಲಿ ಅವಶ್ಯಕ ಸಂಖ್ಯೆಯ ಕಾವುಕೂರುವ ಮನೋವೃತ್ತಿಯ ಹೇಂಟೆಗಳು ದೊರೆಯದಲ್ಲಿ ತೊಂದರೆ ನಿರೀಕ್ಷಿತ.




ಚಿತ್ರ 39: ಸ್ವಾಭಾವಿಕ ಕಾವು ಕೊಡುವಿಕೆಗೆ ಮೊಟ್ಟೆಗಳನ್ನಿಡುವ ಮೊದಲು ಗೂಡಿನ ಹಾಸು ಪದಾರ್ಥದ ಮೇಲೆ ಕೀಟನಾಶಕಗಳನ್ನು ಚಿಮುಕಿಸುತ್ತಿರುವುದು

ಕಾವುಕೊಡುವ ಸ್ವಾಭಾವಿಕ ಪದ್ಧತಿಗೆ ಪ್ರಾಶಸ್ತ್ಯಕೊಟ್ಟಾಗ ಹೇಂಟೆಗಳನ್ನು ಎಚ್ಚರದಿಂದ ಆಯ್ಕೆಮಾಡಬೇಕು. ಒಳ್ಳೆಯ ಆರೋಗ್ಯದ ಶಾಂತ ಮನೋಭಾವದ ಹೇಂಟೆಗಳನ್ನೇ ಉಪಯೋಗಿಸಬೇಕು. ಮರಿ ಹೇಂಟೆಗಳಿಗಿಂತ ಹೇಂಟೆಗಳನ್ನು ಸಾಮಾನ್ಯವಾಗಿ ಆಯ್ಕೆಮಾಡಿಕೊಳ್ಳಬೇಕು.



ಚಿತ್ರ 40: ಸ್ವಾಭಾವಿಕ ಕಾವುಕೊಡುವಿಕೆಗೆ ಹಕ್ಕಿಯಾಗಿ ಆಳವಿಲ್ಲದ ಬುಟ್ಟಿ



ಚಿತ್ರ 41: ಸ್ವಾಭಾವಿಕ ಕಾವುಕೊಡುವಿಕೆಗೆ ಹಕ್ಕಿ(ಗೂಡು)ಯಾಗಿ ಪ್ಯಾಕಿಂಗ್‌ಕೇಸ್

ಗೂಡುಗಳು: ಕಾವುಕೂರುವ ಹೇಂಟೆಗಳ ಗೂಡುಗಳನ್ನು ಮೊಟ್ಟೆಯಿಡುವ ಹೇಂಟೆಗಳಿಂದ ದೂರವಾಗಿ ಶಾಂತವಾದ ಸ್ಥಳದಲ್ಲಿಡಬೇಕು ಮತ್ತು ಇದನ್ನು ಗಾಳಿ, ಮಳೆ

ಮತ್ತು ಮಾಂಸಾಹಾರಿ ಪ್ರಾಣಿಗಳಿಂದ ರಕ್ಷಿಸಬೇಕು. ಹೇಂಟೆ ಹೊರಗೆ ಹೋಗುವಾಗ ಮತ್ತು ಹಿಂತಿರುಗುವಾಗ ಮೊಟ್ಟೆಗಳನ್ನು ಒಡೆಯುವುದನ್ನು ತಪ್ಪಿಸಲು ಗೂಡು ಆಳವಿಲ್ಲದೆ ವಿಶಾಲವಾಗಿರಬೇಕು. ಆಳವಿಲ್ಲದ ಗುಂಡು ಬುಟ್ಟಿ, ಅರ್ಧಕ್ಕೆ ಕತ್ತರಿಸಿದ ಮಡಕೆ, ಮರದ ಪೆಟ್ಟಿಗೆ ಮೊದಲಾದ ಯಾವುದೊಂದಾದರೂ ಗೂಡಿನ ಕೆಲಸ ನಿರ್ವಹಿಸುತ್ತದೆ (ಚಿತ್ರ 40, 41). ಗೂಡನ್ನು ನೆಲದ ಮೇಲಿಡುವುದು ಅತ್ಯುತ್ತಮ ಅಥವಾ ಮೊಟ್ಟೆಗಳು ಅತಿ ಶೀಘ್ರವಾಗಿ ಒಣಗುವುದನ್ನು ತಪ್ಪಿಸಲು ಗೂಡಿನ ಮೆತ್ತೆಯ ಕೆಳಗೆ ಒದ್ದೆ ಮಣ್ಣನ್ನು ಹಾಕಬೇಕು. ಮರದ ಹೊಟ್ಟು ಅಥವಾ ಕತ್ತರಿಸಿದ ಸ್ವಚ್ಛ ಹೊಸ ಒಣಹುಲ್ಲು ಅತ್ಯುತ್ತಮವಾದ ಗೂಡಿನ ಮೆತ್ತೆಯಾಗುತ್ತವೆ ಮತ್ತು ಇದನ್ನು ಮಧ್ಯಕ್ಕೆ ಇಳಿಜಾರಾಗಿರುವಂತೆ ಮತ್ತು ಮಧ್ಯದಲ್ಲಿ ಸುಮಾರು ಮೂರು ಅಂಗುಲ ಆಳವಿರುವಂತೆ ಅಳವಡಿಸಬೇಕು. ಇದು ಹೇಂಟೆ ಗೂಡಿನೊಳಕ್ಕೆ ಬಂದಾಗ ಮೊಟ್ಟೆಗಳು ಚೆದರುವಂತೆ ಮಾಡುವುದರ ಜೊತೆಗೆ ಅವುಗಳು ಆಚೆಗೆ ಉರುಳಿ ಹೋಗುವುದನ್ನು ತಪ್ಪಿಸುತ್ತದೆ. ಸ್ವಲ್ಪ ಬೂದಿ ಹಾಗೂ ಅದರ ಮೂರುನಾಲ್ಕು ಪಟ್ಟು ಡಿ.ಡಿ.ಟಿ. ಅಥವಾ ಗ್ಯಮಾಕ್ಸಿನ್ ನಂತಹ ಒಳ್ಳೆಯ ಕೀಟನಾಶಕಗಳನ್ನು ಸೇರಿಸಿ ಸಿಂಪಡಿಸಿದಾಗ ಪರಾವಲಂಬಿ, ಇರುವೆ ಮತ್ತು ಇತರ ಕೀಟಗಳನ್ನು ಗೂಡಿನ ಮೆತ್ತೆಯಿಂದ ದೂರವಿಡುತ್ತವೆ (ಚಿತ್ರ 39).

ಹೇಂಟೆಯಲ್ಲಿ ಕಾವು ಕೂರುವ ಮನೋವೃತ್ತಿಯ ಚಿಹ್ನೆಗಳು: ಹೇಂಟೆಗಳಲ್ಲಿ ಕಾವುಕೂರುವ ಮನೋವೃತ್ತಿ ಉಂಟಾದಾಗ ಸಾಮಾನ್ಯವಾಗಿ 'ಕ್ಲಕ್' ಎಂದು ಶಬ್ದ ಮಾಡುತ್ತದೆ, ಗರಿಗೆದರುತ್ತದೆ ಮತ್ತು ಹತ್ತಿರ ಹೋದಾಗ ಕೂತುಕೊಂಡೇ ಇರುತ್ತದೆ. ಆಗ ಹೇಂಟೆ ಸಾಮಾನ್ಯವಾಗಿ ಹೊರಗಿನ ತನ್ನ ಜೊತೆಗಾರರಿಗಿಂತ, ಕತ್ತಲಮೂಲೆ ಅಥವಾ ಗೂಡುಗಳನ್ನು ಇಷ್ಟಪಟ್ಟು ಹುಡುಕುತ್ತದೆ. ಇದು ಹೇಂಟೆ ಕಾವುಕೂರಲು ತಯಾರಾಗಿದೆ ಎಂಬ ಖಚಿತವಾದ ಸೂಚನೆ.

ಹೇಂಟೆಯ ಸಜ್ಜು ಮತ್ತು ಕಾವುಕೂರಿಸುವಿಕೆ: ಹೇಂಟೆ ತನ್ನ ಹೊಸ ಜಾಗಕ್ಕೆ ರಾತ್ರಿ ಹೊಂದಿಕೊಳ್ಳಲು ಅನುಕೂಲವಾಗುವಂತೆ ಅವುಗಳನ್ನು ಸಾಧ್ಯವಾದಮಟ್ಟಿಗೂ ಸಂಜೆಯ ಸಮಯದಲ್ಲಿ ಕಾವಿಗೆ ಕೂರಿಸಬೇಕು. ಮರಿಮಾಡಬೇಕಾಗಿಲ್ಲದಂತಹ ಸಾಮಾನ್ಯವಾದ ಎರಡು ಅಥವಾ ಮೂರು ಮೊಟ್ಟೆಗಳ ಮೇಲೆ ಈ ಹೇಂಟೆಯನ್ನು ಒಂದೆರಡು ದಿನ ಪ್ರಯೋಗಿಸುವುದು ಬುದ್ಧಿವಂತಿಕೆ. ಈ ಹೇಂಟೆ ಹೆಚ್ಚಿನ ಗೊಂದಲ ಅಥವಾ ಉದ್ರೇಕವಿಲ್ಲದೆ ಕೂರುವಂತೆ ಕಂಡುಬಂದರೆ, ಮರಿಮಾಡಬೇಕಾದ ಮೊಟ್ಟೆಗಳನ್ನು ಅದರ ಕೆಳಗೆ ಇಡಬಹುದು. ಇಡಬಹುದಾದ ಮೊಟ್ಟೆಗಳ ಸಂಖ್ಯೆ ಕಾವು ಕೂರುವ ಹೇಂಟೆಯ ಗಾತ್ರ ಹಾಗೂ ಮೊಟ್ಟೆಗಳ ಗಾತ್ರವನ್ನು ಅವಲಂಬಿಸುತ್ತದೆ. ಸ್ವಾಭಾವಿಕ ಕಾವುಕೊಡುವಿಕೆಗೆ ಹೇಂಟೆಯನ್ನು ಕೂರಿಸುವ ಮೊದಲು ಅದರಲ್ಲಿ ಸಾಮಾನ್ಯವಾಗಿ ಮನೆಮಾಡಿಕೊಂಡಿರುವ ಹೇನುಗಳ ವಿರುದ್ಧ ಔಷಧಿ ಹಾಕಬೇಕು. ಹೇಂಟೆಗೆ ಸೋಡಿಯಂ ಫ್ಲೋರೈಡ್ ಪುಡಿಯನ್ನು ಚೆನ್ನಾಗಿ ಸಿಂಪಡಿಸುವುದರಿಂದ ಇದನ್ನು ಅತ್ಯುತ್ತಮವಾಗಿ ಸಾಧಿಸಬಹುದು.

ಕಾವುಕೂರುವ ಹೇಂಟೆಯ ರಕ್ಷಣೆ: ಕಾವುಕೂರುವ ಹೇಂಟೆಗಳ ರಕ್ಷಣಾ ಅವಶ್ಯಕತೆ ಅತಿ ಕನಿಷ್ಠವಾದರೂ ಸಹ ಕಾಲಕಾಲಕ್ಕೆ ಸ್ವಲ್ಪ ಗಮನ ಕೊಡಲೇಬೇಕು. ಮೊದಲ ಒಂದೆರಡು ದಿನಗಳಲ್ಲಿ ಹೇಂಟೆಯು ಆಹಾರ, ನೀರು ತೆಗೆದುಕೊಳ್ಳುವುದಕ್ಕೆ ಮತ್ತು ವ್ಯಾಯಾಮಕ್ಕೆ ದಿನದಲ್ಲಿ ಒಂದೆರಡು ಸಾರಿ ಹೊರಬಿಡುವುದಲ್ಲದೆ ಉಳಿದ ಸಮಯದಲ್ಲಿ ಅದನ್ನು ಗೂಡಿನಲ್ಲಿ ಬಂಧಿಸುವುದು ಅವಶ್ಯಕವಾಗಬಹುದು. ಈ ಹೊರಬಿಟ್ಟ ಸಮಯದಲ್ಲಿ ಅದು ಕೊಂಚ ಓಡಾಡಿ, ತನ್ನ ಹಿಕ್ಕೆ ಹಾಕುವ ಕೆಲಸವನ್ನು ಮುಗಿಸಿಕೊಳ್ಳುತ್ತದೆ; ಇದರಿಂದಾಗಿ ಗೂಡು ಮತ್ತು ಮೊಟ್ಟೆಗಳು ಹೊಲಸಾಗುವುದು ತಪ್ಪುತ್ತದೆ. ಗೊತ್ತಾದ ಅವಧಿಯಲ್ಲಿ ಈ ಅವಶ್ಯಕತೆಗಳನ್ನು ಸಂಯೋಜಿಸುವುದು ಉತ್ತಮವಾದ ವ್ಯವಸ್ಥೆ. ಹೇಂಟೆ ಬಹುಮಟ್ಟಿಗೆ ಅಭ್ಯಾಸಗಳ ಪ್ರಾಣಿ. ಒಂದು ನಿರ್ದಿಷ್ಟ ಅವಧಿಯಲ್ಲಿನ ಅದರ ಸ್ವಾತಂತ್ರ್ಯಕ್ಕೆ ಹೊಂದಿಕೊಳ್ಳುತ್ತದೆ ಮತ್ತು ಆ ಸಮಯ ಸನ್ನಿಹಿತವಾದಂತೆ ಅಶಾಂತಿಯ ಸೂಚನೆಗಳನ್ನು ತೋರಿಸುತ್ತದೆ. ಆದ್ದರಿಂದ ಅದು ದಿನದ ಅದೇ ಸಮಯದಲ್ಲಿ ಆಹಾರ ಮತ್ತು ವ್ಯಾಯಾಮಗಳನ್ನು ಪಡೆಯುವಂತೆ ನೋಡಿಕೊಳ್ಳುವುದು ಪ್ರಮುಖವಾಗುತ್ತದೆ. 20 ನಿಮಿಷಗಳ ನಂತರ ಹೇಂಟೆಯನ್ನು ಗೂಡಿನೊಳಕ್ಕೆ ಹಿಂತಿರುಗಲು ಬಿಡಬೇಕು, ಈ ಅವಧಿ ಅತ್ಯಂತ ಚಳಿಗಾಲದಲ್ಲಿ ಕಡಮೆಯಾಗುತ್ತದೆ. ಈ ರೀತಿ ಆಗಾಗ್ಗೆ ಹೊರಬಿಡುವುದು ಮೊಟ್ಟೆಗಳಿಗೆ ಗಾಳಿಯಾಡಲೂ ಸಹಾಯಕವಾಗುತ್ತದೆ.

ಹೆಚ್ಚಿನ ಕಾವುಕೊಡುವ ಹೇಂಟೆಗಳು ಸ್ವಇಚ್ಛೆಯಿಂದ ಗೂಡಿನಿಂದ ಹೊರಬರುತ್ತವೆ. ಆದರೆ ಕೆಲವನ್ನು ಮೊಟ್ಟೆಗಳಿಂದ ಎತ್ತಬೇಕಾಗಬಹುದು. ಹೀಗೆ ಮಾಡುವಾಗ ಹೇಂಟೆಯೊಡನೆ ಮೊಟ್ಟೆಗಳನ್ನೂ ಎತ್ತದಂತೆ ಎಚ್ಚರವಹಿಸಬೇಕು. ಆದುದರಿಂದ ಶರೀರ ಮತ್ತು ರೆಕ್ಕೆಗಳ ನಡುವೆ ಹಗುರವಾಗಿ ಹಿಡಿದಿರುವ ಮೊಟ್ಟೆಗಳನ್ನು ಬಿಡಿಸಲು ಮೊದಲು ರೆಕ್ಕೆಗಳನ್ನು ಎತ್ತಬೇಕು. ರೆಕ್ಕೆ ಮತ್ತು ಶರೀರಗಳ ನಡುವೆ ಮೊಟ್ಟೆಯನ್ನು ಹಿಡಿದುಕೊಂಡಿಲ್ಲ ಎಂದು ಖಚಿತವಾದನಂತರ ಒಂದು ಕೈ ದೇಹದ ಕೆಳಗೆ ಕಾಲಿನ ಸುತ್ತಹಾಕಿ ಹಿಡಿದುಕೊಂಡು ಮತ್ತೊಂದು ಕೈಯನ್ನು ಬೆನ್ನಿನಮೇಲೆ ಹರಡಿಕೊಂಡು ಹೇಂಟೆಯನ್ನು ಎತ್ತಬೇಕು. ಹೇಂಟೆಯ ಪ್ರತಿಭಟನೆ ಮತ್ತು ರೆಕ್ಕೆಗಳು ಗೂಡಿನ ಪಕ್ಕಕ್ಕೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆಯನ್ನು ಕಡಮೆಮಾಡಲು ಹೇಂಟೆಯನ್ನು 'ಹೊರ ತೆಗೆಯುವಾಗ ಹಾಗೂ ಒಳಗಿಡುವಾಗ ತಲೆ ಮೊದಲಾಗಿ ತೆಗೆಯಬೇಕು.

ಮೊಟ್ಟೆಗಳ ಪರೀಕ್ಷೆ: ಕಾವಿಗಿಟ್ಟ 7 ರಿಂದ 9 ದಿನಗಳೊಳಗೆ ಮೊಟ್ಟೆಗಳನ್ನು ಪರೀಕ್ಷಿಸಿ 'ಸ್ವಚ್ಛ ಮೊಟ್ಟೆ'ಗಳನ್ನು ತೆಗೆದುಬಿಡುವುದು ಒಳ್ಳೆಯದು. ಸಾಧ್ಯವಾದರೆ ಮೊಟ್ಟೆಗಳನ್ನು 15 ಅಥವಾ 16ನೆಯ ದಿನ ಪರೀಕ್ಷಿಸಿ ಚಿಪ್ಪಿನೊಳಗೇ ಸತ್ತಿರುವ ಎಲ್ಲವನ್ನೂ ತೆಗೆದು ಬಿಡಬೇಕು. 18ನೆಯ ದಿನದಿಂದ ಹೇಂಟೆಯನ್ನು ಅಲುಗಾಡಿಸಬಾರದು. ಆದರೆ ಅದಕ್ಕೆ ಆಹಾರ, ನೀರು ಸಿಗುವಂತೆ ಗೂಡಿನ ಬಾಗಿಲನ್ನು ತೆಗೆದಿಟ್ಟಿರಬೇಕು. ಸಾಮಾನ್ಯವಾಗಿ 20ನೆಯ ದಿನ ಚಿಪ್ಪು ಒಡೆದು ಮರಿಗಳು ಹೊರಬರಲಾರಂಭಿಸುತ್ತವೆ. ಕೆಲವು ಹೇಂಟೆಗಳು ಹೊರಬಂದ ಕೆಲವು ಮರಿಗಳಿಗೆ ಮಾತ್ರವಾತ್ಸಲ್ಯ ತೋರಿಸುತ್ತ ಉಳಿದ

ಮೊಟ್ಟೆಗಳನ್ನು ಮರೆತುಬಿಡುತ್ತವೆ. ಆದುದರಿಂದ ಎಲ್ಲ ಮೊಟ್ಟೆಗಳೂ ಒಡೆದು ಮರಿಗಳು ಹೊರಬರುವವರೆಗೆ ಹೇಂಟೆ ಮೊಟ್ಟೆಗಳನ್ನು ಪರಿತ್ಯಜಿಸಿ ಹೋಗದಂತೆ ನೋಡಿಕೊಳ್ಳುವುದು ಪ್ರಮುಖವಾದುದು. ಮರಿಯಾಗುವಿಕೆ ಸಾಮಾನ್ಯವಾಗಿ 21ನೆಯ ದಿನ ಸಂಪೂರ್ಣವಾಗುತ್ತದೆ.

ಮರಿಯಾಗುವಿಕೆ ಸಂಪೂರ್ಣವಾದ ಕೂಡಲೇ ಚಿಪ್ಪು, ಮರಿಯಾಗದಿದ್ದ ಮೊಟ್ಟೆಗಳು ಮತ್ತು ಗೂಡಿನ ಮೆತ್ತೆಯನ್ನು ತೆಗೆದುಬಿಡಬೇಕು. ಹೊಸದಾದ ಮೆತ್ತೆ ಹಾಕಿ ಗೂಡಿಗೆ ಮತ್ತೊಂದು ಸಾರಿ ಕೀಟನಾಶಕವನ್ನು ಸಿಂಪಡಿಸಬೇಕು. ಹೇಂಟೆ ಮತ್ತು ಮರಿಗಳನ್ನು ಕನಿಷ್ಠ ಎರಡು ದಿನ ಹಾಗೇ ಬಿಟ್ಟುಬಿಡಬೇಕು. ಈ ಸಮಯದಲ್ಲಿ ಮರಿಗಳಿಗೆ ಏನೂ ಆಹಾರ ಬೇಕಾಗಿಲ್ಲ.

ಕೃತಕ ಕಾವುಕೊಡುವಿಕೆ

ಕ್ರಿ.ಪೂ. 1000 ವರ್ಷಗಳಷ್ಟು ಹಿಂದಿನಿಂದಲೂ ಪುರಾತನ ಚೀನಿ ಹಾಗೂ ಈಜಿಪ್ಟ್ ಸಂಸ್ಕೃತಿಗಳಲ್ಲಿ ಮೇಲೆ ವಿವರಿಸಿದ ರೀತಿಯಲ್ಲದೆ ಕಾವುಕೊಡುವ ಬೇರೆ ವಿಧಾನಗಳೂ ಆಚರಣೆಯಲ್ಲಿದ್ದವು. ಪುರಾತನ ಚೀನೀಯರು ಮರಿಮಾಡುವ ಎರಡು ವಿಧಾನಗಳನ್ನು ಅನುಸರಿಸುತ್ತಿದ್ದರೆಂದು ಹೇಳಲಾಗಿದೆ. ಒಂದು ವಿಧಾನದಲ್ಲಿ ಮೊಟ್ಟೆಗಳನ್ನು ಕೊಳೆಯುತ್ತಿರುವ — ಗೊಬ್ಬರದ ಒಂದು ಗುಡ್ಡೆಯ ಮೇಲಿಟ್ಟು ಒಣ ಹುಲ್ಲನ್ನು ಮುಚ್ಚುತ್ತಿದ್ದರು. ಹೀಗೆ ಕೊಳೆಯುತ್ತಿರುವ ಗೊಬ್ಬರದಿಂದ ಉಂಟಾದ ಶಾಖವನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಈ ಶಾಖ ತೃಪ್ತಿಕರವಾದ ಪ್ರತಿಫಲವನ್ನು ಕೊಡಲು ಸಾಕಾಗುವಷ್ಟಿರುತ್ತದೆ. ಮತ್ತೊಂದು ಪದ್ಧತಿಯಲ್ಲಿ ತಳದಲ್ಲಿ ಸಂಯೋಜಿತ ಉರಿಮಾಡುವ ಬಾಯಿ ಮತ್ತು ಚಲಿಸಲು ಸಾಧ್ಯವಾಗುವಂತಹ ಮುಚ್ಚಳವಿರುವ ಕಾವು ಜೇಡಿ ಅಥವಾ ಮಣ್ಣಿನ ಎತ್ತರವಾದ ಕೊಳವೆಯಾಕಾರದ ಒಲೆಯೊಳಗೆ ಇದ್ದಿಲು ಬೆಂಕಿಯನ್ನು ಹಚ್ಚುತ್ತಿದ್ದರು. ಅಂಶಿಕವಾಗಿ ಬೂದಿಯಿಂದ ತುಂಬಿದ ಒಂದು ತಲೆಕೆಳಗೆ ಮಾಡಿದ ಕಾವು ಜೇಡಿಯ ಶಂಕಾಕೃತಿಯನ್ನು ಒಲೆಯ ಮೇಲೆ .ಹೊಂದಿಸುತ್ತಿದ್ದರು. ತಲೆಕೆಳಗು ಮಾಡಿದ ಶಂಕಾಕೃತಿಯ ಒಳಗೆ ಬೂದಿಯ ಮೇಲೆ ಟೋಪಿಯಾಕಾರವನ್ನು ಹೋಲುವಂತೆ ಹುಲ್ಲಿನಿಂದ ಹೊದಿಸಿದ ಮೊಟ್ಟೆಯ ಬುಟ್ಟಿ ಇಡುತ್ತಿದ್ದರು. ಮೊಟ್ಟೆಯ ಬುಟ್ಟಿಯೊಳಗೆ ಹಲವು ಪದರಗಳಲ್ಲಿ ಜೋಡಿಸಿದ ಮೊಟ್ಟೆಗಳಿಡುತ್ತಿದ್ದರು.

ಚೀನೀಯರ ಕಾವುಕೊಡುವ ಯಂತ್ರದ ಸುಧಾರಿತ ರೂಪ: ಕೆಳಗೆ ವಿವರಿಸಿರುವ ಚೀನೀ ಕಾವುಕೊಡುವ ಯಂತ್ರದ ಸುಧಾರಿತ ರೂಪ ಇಂದಿಗೂ ಚೀನ, ಫಿಲಿಪೈನ್ಸ್, ಸಿಂಗಪುರ್ ಮತ್ತು ಇತರ ಆಗ್ನೇಯ ಏಷ್ಯಾದೇಶಗಳಲ್ಲಿ ಉಪಯೋಗದಲ್ಲಿವೆ ಮತ್ತು ಆ ದೇಶಗಳಲ್ಲಿ ಸಾಕಿರುವ ಮರಿಗಳಲ್ಲಿ ಶೇಕಡ 50 ರಷ್ಟು ಈ ರೀತಿಯ ಯಂತ್ರಗಳಿಂದ ಮರಿಮಾಡಿದುವೆಂದು ಹೇಳಲ್ಪಡುತ್ತದೆ. ಹೆಚ್ಚಿನ ಕೆಲಸಗಾರರು ಈ ಕೆಲಸದಲ್ಲಿ ನಿಪುಣರಾಗಿ ದೊಡ್ಡ ಮರಿಮಾಡುವ ಯಂತ್ರಗಳನ್ನು ನಡೆಸುತ್ತಿರುವ ಚೀನೀಯರುಗಳು.

ಈ ಕಾವುಕೊಡುವ ಯಂತ್ರವು $2\frac{1}{2}$ ಅಡಿ ಆಳ $1\frac{1}{2}$ ಅಡಿ ವ್ಯಾಸವುಳ್ಳ 20 ಬುಟ್ಟಿಗಳನ್ನು ಹೊಂದಿರುವ $2\frac{1}{2}$ ಅಡಿ ಆಳ, 6 ಅಡಿ ಅಗಲ, ಸುಮಾರು 18 ಅಡಿ ಉದ್ದವಿರುವ, ಮೇಲೆ ಬಾಯಿ ತೆರೆದಿರುವ ಆಯಾಕಾರದ ಮರದ ಪೆಟ್ಟಿಗೆಯನ್ನು ಹೊಂದಿರುತ್ತದೆ. ಬುಟ್ಟಿಯ ಸುತ್ತಿನ ಜಾಗವನ್ನು ಬತ್ತದ ಹೊಟ್ಟು ಅಥವಾ ಮರದ ಹೊಟ್ಟಿನಿಂದ ತುಂಬಲ್ಪಡುತ್ತದೆ. ಮರಿಮಾಡುವ ಮೊಟ್ಟೆಗಳನ್ನು ಬಿಸಿಲಿನಲ್ಲಿಟ್ಟು ಅಥವಾ ಬೆಂಕಿಯ ಮೇಲೆ ಕಾಯಿಸಿ ಗೋಣಿತಾಟಿನಲ್ಲಿ ಸುತ್ತಿ ಪ್ರತಿ ಬುಟ್ಟಿಗಳಲ್ಲೂ ಪದರಪದರವಾಗಿ ಜೋಡಿಸುತ್ತಾರೆ. ಪ್ರತಿ ಬುಟ್ಟಿಯಲ್ಲಿಯೂ ಪ್ರತಿಪದರಕ್ಕೆ 100 ಮೊಟ್ಟೆಗಳನ್ನೊಳಗೊಂಡ ಎಂಟು ಪದರಗಳಿರುತ್ತವೆ. ಪೆಟ್ಟಿಗೆಯ ಮೇಲ್ಭಾಗ ಗೋಣೀಚೀಲಗಳಿಂದ ಮುಚ್ಚಲ್ಪಡುತ್ತದೆ ಮತ್ತು ಮೊಟ್ಟೆಗಳನ್ನು ತೆರೆದ ಬಾಯಿಯ ಸಮತಳದ ಬುಟ್ಟಿಯಲ್ಲಿ ಹೊರಳಾಡಿಸುವುದರ ಮೂಲಕ ದಿನಕ್ಕೆ ನಾಲ್ಕು ಸಾರಿ ಹೊರಳಿಸುತ್ತಾರೆ. ಕಾವು ಕೊಡುವ ಯಂತ್ರಗಳನ್ನಿಡುವ ಕೊಠಡಿ ಯಾವ ರೀತಿಯಲ್ಲೂ ಗಾಳಿ ಬೀಸದಂತಿರುವುದು ಅವಶ್ಯಕ. ಕಾವುಕೊಡುವ ಯಂತ್ರದಲ್ಲಿ ಬೆಳೆಯುತ್ತಿರುವ ಭ್ರೂಣದಿಂದ ಶಾಖ ಉತ್ಪತ್ತಿಯಾಗುತ್ತದೆ. ತಿರುಗಿಸುವುದಕ್ಕೆ ಮೊದಲು ಮೊಟ್ಟೆಗಳ ಶಾಖವನ್ನು ಕಣ್ಣಿನ ಮೇಲರೆಪ್ಪೆಯ ಮೇಲೋ ಮೂಗಿನ ಪಕ್ಕದಲ್ಲೋ ಇಟ್ಟುಕೊಂಡು ಪರೀಕ್ಷಿಸುತ್ತಾರೆ. ಮೊಟ್ಟೆಗಳನ್ನು ನಾಲ್ಕನೆ ಮತ್ತು ಪುನಃ 14ನೆಯ ದಿನ ಸೂರ್ಯರಶ್ಮಿ ಒಳಬರುವ ಗೋಡೆಯ ಒಂದು ತೂತಿಗೆ ಹಿಡಿದೋ ಅಥವಾ ಒಂದು ಮೋಂಬತ್ತಿಯ ಬೆಳಕಿನೆದುರು ಹಿಡಿದೋ 'ಬೆಳಕಿನ ಪರೀಕ್ಷೆ' ಮಾಡಬೇಕು.

15ನೆಯ ದಿನ ಮೊಟ್ಟೆಗಳನ್ನು ಕಾವುಕೊಡುವ ಯಂತ್ರದಿಂದ 'ಮರಿಮಾಡುವ ಹಾಸು'ಗೆ ಬದಲಾಯಿಸಬೇಕು. ಇದರಲ್ಲಿ ಮೊಟ್ಟೆಗಳನ್ನು ಒಂದೇ ಪದರದಲ್ಲಿ ಜೋಡಿಸಿ ಬೆಚ್ಚಗಿನ ಹೊದ್ದಿಕೆಯನ್ನು ಹೊದ್ದಿಸಬೇಕು. 'ಮರಿಮಾಡುವ ಹಾಸಿ'ನಲ್ಲಿ ಮೊಟ್ಟೆಗಳನ್ನು ಮರಿಯಾಗುವವರೆಗೆ ದಿನಕ್ಕೆ ನಾಲ್ಕುಸಾರಿ ತಿರುಗಿಸಬೇಕು. ಶೇಕಡ 75 ರಿಂದ 80ರಷ್ಟು ಫಲೀಕೃತ ಮೊಟ್ಟೆಗಳು ಮರಿಯಾಗುತ್ತವೆಂದು ಹೇಳಲಾಗಿದೆ.

ಈ ಮೇಲೆ ಹೇಳಿದ ಗಾತ್ರದ ಕಾವುಕೊಡುವ ಯಂತ್ರ 16,000 ಮೊಟ್ಟೆಗಳನ್ನು ಒಳಗೊಳ್ಳುತ್ತದೆ ಮತ್ತು ತಯಾರಿಸಲು ಸುಮಾರು 400 ರೂ. ವೆಚ್ಚವಾಗುವುದೆಂದು ಹೇಳಲಾಗುತ್ತದೆ.

ಪುರಾತನ ಈಜಿಪ್ಟಿನವರು ಕೃತಕ ಕಾವುಕೊಡುವಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದರೆಂದು ಹೇಳಲಾಗಿದೆ ಮತ್ತು ಅವರ ಕೆಲವು ಕಾವುಕೊಡುವ ಯಂತ್ರಗಳು 90,000 ಮೊಟ್ಟೆಗಳನ್ನು ಒಳಗೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದವು. ಈ ರಚನೆಗಳು ಮಣ್ಣು ಮತ್ತು ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿದ್ದು ಮಧ್ಯದಲ್ಲಿ ಮನುಷ್ಯರು ಓಡಾಡಲು ಸಾಧ್ಯವಾಗುವಷ್ಟು ದೊಡ್ಡದಾದ ಕಾಲುಹಾದಿಯಿರುತ್ತಿತ್ತು. ಚಾವಣಿಯಲ್ಲಿ ರಂಧ್ರಬಿಡುವುದರ ಮೂಲಕ ಬೆಳಕು ಮತ್ತು ಗಾಳಿಗೆ ಅವಕಾಶಮಾಡಲಾಗುತ್ತಿತ್ತು. ಈ ಕಾಲುಹಾದಿಯ ಎರಡೂ ಕಡೆಗಳಲ್ಲಿ ಅದರೊಂದಿಗೆ ಸಂಪರ್ಕ ಹೊಂದಿರುವಂತೆ ಸಾಲಾಗಿ ಒಂದು ನಿರ್ದಿಷ್ಟ ರೀತಿಯ ಮೊಟ್ಟೆ ಒಲೆಗಳಿರುತ್ತಿದ್ದವು.

ಮೊಟ್ಟೆ ಕೊಠಡಿಗಳು ನೆಲಮಟ್ಟದಲ್ಲಿರುತ್ತಿದ್ದವು ಮತ್ತು ಕಾಲುಹಾದಿಯೊಳಕ್ಕೆ, ಮೊಟ್ಟೆ ಮತ್ತು ಮರಿಗಳನ್ನು ಪರೀಕ್ಷಿಸಲು ಒಬ್ಬ ಅನುಚರನು ಒಳಕ್ಕೆ ತೆವಳಲು ಸಾಧ್ಯವಾಗುವಂತಹ ಒಂದು ಬಾಗಿಲಿರುತ್ತಿತ್ತು. ಮೊಟ್ಟೆ ಕೊಠಡಿಗಳ ಮೇಲೆ ಕಾಯಿಸುವ ವಿಭಾಗವಿರುತ್ತಿತ್ತು. ಇದರಲ್ಲಿ ತಳದ ಮಧ್ಯಭಾಗದಲ್ಲಿ ರಂಧ್ರವಿರುವ ಮುಚ್ಚಳವಿಲ್ಲದ ಗುಂಡಾದ ತಟ್ಟೆಗಳಲ್ಲಿ ಒಂಟೆಯ ಒಣ ಸಗಣಿಯನ್ನು ಸುಡುತ್ತಿದ್ದರು. ಹಿಂದಿನ ಯುದ್ಧದ ಪ್ರಾರಂಭದವರೆಗೆ (1939–45) ಇಂತಹ ಪುರಾತನ ರೀತಿಯ ಕಾವು ಕೊಡುವ ಯಂತ್ರಗಳು ಈಜಿಪ್ಟಿನಲ್ಲಿ ಉಪಯೋಗದಲ್ಲಿದ್ದವು ಮತ್ತು ಇವು ಫಲೀಕೃತ ಮೊಟ್ಟೆಯ ಶೇಕಡ 70ರಷ್ಟನ್ನು ಮರಿಮಾಡುತ್ತಿದ್ದವು. ಇದನ್ನು ಅವುಗಳ ಸಾಮರ್ಥ್ಯದ ಪ್ರಶಸ್ತಿಪತ್ರವೆಂದು ಪರಿಗಣಿಸಬಹುದು.

ಈ ರೀತಿಯ ಕಾವುಕೊಡುವ ಪದ್ಧತಿಗಳೆಲ್ಲವುಗಳಲ್ಲೂ ವಿಜ್ಞಾನಕ್ಕಿಂತ ಕಲೆಯೇ ಹೆಚ್ಚಿದ್ದಿರಬೇಕು ಮತ್ತು ಜಯಾಪಜಯಗಳು ಸಂಪೂರ್ಣವಾಗಿ ಮಾನವ ಕೌಶಲವನ್ನು ಅವಲಂಬಿಸಿದ್ದಿರಬೇಕು. ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಆಚರಣೆಗೆ ಬಂದಿರುವ ಅಲವಾರು ರೀತಿಯ ಕಾವುಕೊಡುವ ಯಂತ್ರಗಳು ಈ ವ್ಯಕ್ತಿಯ ಕೌಶಲದ ಅಂಶವನ್ನು ಬಹುಮಟ್ಟಿಗೆ ತೆಗೆದುಹಾಕಿವೆ.

ಆಧುನಿಕ ಯಾಂತ್ರಿಕ ಕಾವುಕೊಡುವ ಯಂತ್ರಗಳು: ತುಲನಾತ್ಮಕವಾಗಿ ಆಧುನಿಕ ಪದ್ಧತಿಯ ಯಾಂತ್ರಿಕ ಕಾವುಕೊಡುವ ಯಂತ್ರಗಳು 200 ವರ್ಷಗಳ ಹಿಂದೆ ಫ್ರೆಂಚ್ ಭೌತವಿಜ್ಞಾನಿ 'ರೀಮರ್' ವಿಶೇಷವಾಗಿ ರೂಪಿಸಿದ ಯಾಂತ್ರಿಕವಾಗಿ ಶಾಖ ನಿಯಂತ್ರಿಸಿದ ಪೆಟ್ಟಿಗೆಯಲ್ಲಿ ಮೊಟ್ಟೆಗಳನ್ನು ಜಯಶೀಲವಾಗಿ ಮರಿಮಾಡಿದ ಕಾಲದಲ್ಲಿ ತಮ್ಮ ಉಗಮವನ್ನು ಹೊಂದಿವೆ. ಕಾಲಕ್ರಮೇಣ ಅಮೆರಿಕನರು ಮತ್ತು ಇಂಗ್ಲೀಷರು ಹಲವು ವಿಧದ ಕಾವುಕೊಡುವ ಯಂತ್ರಗಳನ್ನು ರೂಪಿಸಿದರು.


ಕೃತಕ ಮರಿಮಾಡುವಿಕೆಯ ಅನುಕೂಲತೆಗಳು: ಯಾಂತ್ರಿಕ ಅಥವಾ ಕೃತಕ ಮರಿಮಾಡುವಿಕೆ ಹಲವು ಅನುಕೂಲತೆಗಳನ್ನು ಹೊಂದಿವೆ. ಅವುಗಳೆಂದರೆ: (1) ಒಂದೇ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮರಿಮಾಡಬಹುದು, (2) ವರ್ಷದ ಯಾವ ಕಾಲದಲ್ಲಾದರೂ ಮರಿಗಳನ್ನು ಪಡೆಯಬಹುದು, ಇದು ಮರಿಗಳನ್ನು ಕಾಲದ ಪ್ರಾರಂಭದಲ್ಲಿಯೇ ಪಡೆಯುವಲ್ಲಿ ಪ್ರಮುಖವಾದುದು, (3) ಮರಿಮಾಡುವ ಯಂತ್ರ ಮತ್ತು ಮೊಟ್ಟೆಗಳಿಗೆ ಸರಿಯಾಗಿ ಕೀಟನಾಶಕಗಳನ್ನು ಸಿಂಪಡಿಸಿದರೆ ಮರಿಗಳನ್ನು ಯಾವ ರೋಗವೂ ಇಲ್ಲದಂತೆ ಪಡೆಯಬಹುದು (ಚಿಪ್ಪಿನೊಳಗಿರುವ ರೋಗಗಳನ್ನು ಬಿಟ್ಟು, ಉಳಿದ ಯಾವ ರೋಗ ಮತ್ತು ಪರಾವಲಂಬಿಗಳು ಮರಿಕೋಳಿಯನ್ನು ಮುಟ್ಟುವ ಮಾರ್ಗವೇ ಇಲ್ಲದಿರುವುದರಿಂದ), (4) ಒಳ್ಳೆಯ ಕಾವುಕೊಡುವ ಯಂತ್ರಗಳನ್ನು ಸರಿಯಾಗಿ ನಿರ್ವಹಿಸಿದಾಗ ಹೇಂಟೆಗಳನ್ನು ಅವಲಂಬಿಸುವುದಕ್ಕಿಂತ ಮರಿಯಾಗುವ ಖಚಿತತೆ ಹೆಚ್ಚಿರುತ್ತದೆ ಮತ್ತು (5) ದೀರ್ಘ ಕಾಲಾವಧಿಯಲ್ಲಿ ವಿಶೇಷತಃ ಮರಿಮಾಡುವುದನ್ನು ದೊಡ್ಡಪ್ರಮಾಣದಲ್ಲಿ ಮಾಡಿದಾಗ ಕಾವುಕೊಡುವ ಯಂತ್ರಗಳು ಮಿತವ್ಯಯಕಾರಿ.

ಕಾವುಕೊಡುವ ಸೂತ್ರಗಳು: ಕೃತಕ ಕಾವುಕೊಡುವಿಕೆ, ಹೇಂಟೆ ಮೊಟ್ಟೆಯನ್ನು ಮರಿ ಮಾಡುವ ಕಾರ್ಯದ ಅನುಕರಣೆ ಮತ್ತು ಸಾಧ್ಯವಾದರೆ ಅದರ ಅಭಿವೃದ್ಧಿಯ ಪ್ರಯತ್ನಮಾತ್ರ. ಸರಿಯಾದ ಶಾಖ, ವಾತಾಯನ ಮತ್ತು ತೇವಾಂಶಗಳು ಜಯಪ್ರದವಾದ ಕಾವುಕೊಡುವಿಕೆಯ ಅವಶ್ಯಕತೆಗಳು.

ಕಾವುಕೊಡುವ ಯಂತ್ರಗಳ ವಿಧಗಳು: ಕಾವುಕೊಡುವ ಯಂತ್ರಗಳಲ್ಲಿ ಸಾಮಾನ್ಯವಾದ ಎರಡು ವಿಧಗಳಿವೆ–ಮಟ್ಟವಾದ ವಿಧ ಮತ್ತು ಅಲಮಾರು ವಿಧ. ಇವೆರಡೂ ಮತ್ತೆ ಬಿಸಿಗಾಳಿ ವಿಧ ಮತ್ತು ಬಿಸಿನೀರು ವಿಧಗಳೆಂದು ವಿಭಾಗಿಸಲ್ಪಟ್ಟಿವೆ. ಬಿಸಿಗಾಳಿ ವಿಧದ ಯಂತ್ರಗಳು ತಮ್ಮ ಕೆಲಸಕ್ಕೆ ಶಾಖದ ಮೂಲದಿಂದ ನೇರವಾಗಿ ಕಾದ ಗಾಳಿಯನ್ನವಲಂಬಿಸುತ್ತವೆ. ಬಿಸಿನೀರಿನ ಯಂತ್ರಗಳಲ್ಲಿ ಮೊಟ್ಟೆಗಳ ಸುತ್ತಲಿನ ಗಾಳಿ ಹರಿಯುವ ಕಾದ ನೀರಿನಿಂದ ಬಿಸಿಯಾಗುತ್ತದೆ. ಎರಡೂ ವಿಧ ಸರಿಯಾಗಿ ತಯಾರಿಸಿದಾಗ ಒಳ್ಳೆಯವು. ಬಿಸಿಗಾಳಿಯ ಯಂತ್ರ ಸಾಮಾನ್ಯವಾಗಿ ಕಡಮೆ ವೆಚ್ಚದ್ದು. ಅದರಿಂದಾಗಿ ಬೆಲೆ ತಗ್ಗುವ ಸಾಧ್ಯತೆ ಕಡಮೆ. ಮರಿಯಾಗುವ ಸಮಯದಲ್ಲಿ ನೀರಿನ ಪಾತ್ರೆ ಸೋರುವ ಸಾಧ್ಯತೆಯೂ ಇರುವುದಿಲ್ಲ. ಶಾಖದ ಹತೋಟಿಯನ್ನು ಬಿಸಿನೀರಿನ ಯಂತ್ರಕ್ಕಿಂತ ಬಿಸಿಗಾಳಿಯ ಯಂತ್ರದಲ್ಲಿ ಬೇಗ ಹೊಂದಬಹುದು. ಆದಾಗ್ಯೂ ಬಿಸಿನೀರಿನ ಯಂತ್ರದ ಒಂದು ಅನುಕೂಲವೆಂದರೆ ಇದು ಶಾಖವನ್ನು ಹೆಚ್ಚುಕಾಲ ಹೊಂದಿರುತ್ತದೆ. ವಿಶೇಷತಃ ಯಂತ್ರವನ್ನು ವಿದ್ಯುತ್ತಿನಿಂದ ನಡೆಸುತ್ತಿದ್ದಾಗ ಶಾಖದ ಮೂಲ ಸ್ವಲ್ಪಕಾಲ ಇಲ್ಲದಂತಾದಾಗ ಇದು ಬಹಳ ಉಪಯುಕ್ತಕಾರಿ.

ಮಟ್ಟವಾದ ವಿವಿಧ ಕಾವುಕೊಡುವ ಯಂತ್ರಗಳು: ಮಟ್ಟವಾದ ರೀತಿಯ ಮರಿಮಾಡುವ ಯಂತ್ರಗಳು ಸಾಮಾನ್ಯವಾಗಿ ಚಿಕ್ಕವು, ಮೊಟ್ಟೆಗಳನ್ನು ಮಟ್ಟವಾಗಿ ಮಲಗಿಸಿ ಒಂದೇ ಪದರದಲ್ಲಿ ಕಾವುಕೊಡುವುದರಿಂದ ಮೊಟ್ಟೆಗಳ ಸಂಖ್ಯೆ 50 ರಿಂದ 500 ರವರೆಗೆ ವ್ಯತ್ಯಾಸವಾಗುತ್ತದೆ. ಈ ಕಾವುಕೊಡುವ ಯಂತ್ರಗಳನ್ನು ಹೊರಗಿನಿಂದ ಕಾಯಿಸಲಾಗುತ್ತದೆ ಮತ್ತು ಒಳಗಿನ ಮೊಟ್ಟೆಗಳು ಮೇಲಿನಿಂದ ಕಾಯುತ್ತವೆ. ವಾತಾಯನ ಒಳಗಿನ ಶಾಖದ ವ್ಯತ್ಯಾಸದಿಂದ ಕೆಲಸಮಾಡುತ್ತದೆ. ಬಿಸಿಗಾಳಿ ರೀತಿಯ ಕಾವುಕೊಡುವ ಯಂತ್ರಗಳಲ್ಲಿ (ಚಿತ್ರ 44) ಬಿಸಿಗಾಳಿ ಕೊಳವೆಗಳಿಂದ ಕಾಯಿಸಲ್ಪಟ್ಟ ಹೊಸಗಾಳಿ ಯಂತ್ರದ ಮೇಲಿನಿಂದ ಪ್ರವೇಶಿಸುತ್ತದೆ ಮತ್ತು ತಣ್ಣಗಾದಂತೆ ಕೆಳಕ್ಕೆ ಬಂದು ಕೆಳಮಟ್ಟದಲ್ಲಿರುವ ಬಾಗಿಲಿನಿಂದ ಹೊರಕ್ಕೆ ಹೋಗುತ್ತದೆ. ಬಿಸಿನೀರಿನ ರೀತಿಯಲ್ಲಿ ಗಾಳಿ ಕೆಳಮಟ್ಟದಲ್ಲಿ ಒಳಕ್ಕೆ ಬರುತ್ತದೆ ಮತ್ತು ಬಿಸಿಯಾದ ನಂತರ ಮೇಲಿನ ಮಟ್ಟದ ಬಾಗಿಲಿನಿಂದ ಹೊರಬೀಳುತ್ತದೆ.

ಚಿತ್ರ 42 ಎಣ್ಣೆದೀಪದಿಂದ ಕಾಯುವ ಮಟ್ಟವಾದ ರೀತಿಯ ಕಾವುಕೊಡುವ ಯಂತ್ರವನ್ನು ಚಿತ್ರೀಕರಿಸುತ್ತದೆ. ಎಣ್ಣೆಯ ದೀಪ (A) ತನ್ನ ಶಾಖಕ್ಕೆ ಎರಡು ದ್ವಾರಗಳನ್ನು ಹೊಂದಿದೆ; ಒಂದು (B) ಬಿಸಿಗಾಳಿಯನ್ನು ಕಾಯಿಸುವ (D) ಕೋಣೆಗೆ ಕಳುಹಿಸುತ್ತದೆ, ಬಿಸಿನೀರಿನ ವಿಧವೋ ಅಥವಾ ಬಿಸಿಗಾಳಿ ವಿಧವೋ ಎಂಬುದನ್ನವ




ಚಿತ್ರ 42: ಎಣ್ಣೆಯಿಂದ ಕಾಯಿಸಲ್ಪಡುವ ಚಪ್ಪಟೆ ರೀತಿ ಕಾವುಕೊಡುವ ಯಂತ್ರದ ಒಂದು ಮಾದರಿ (ಲಂಡನ್ ಕೃಷಿ ಹಾಗೂ ಮೀನುಗಾರಿಕೆ ಮಂತ್ರಾಲಯದ ವಾರ್ತಾಪತ್ರ ಸಂಖ್ಯೆ 148, 1954 ಇಂದ).

ಲಂಬಿಸಿ ಇದನ್ನು ನೀರು ಅಥವಾ ಗಾಳಿಯಿಂದ ತುಂಬಬಹುದು. ಮತ್ತೊಂದು ದ್ವಾರವಾದ (C) ಒಳಗಿನ ಶಾಖ ವ್ಯತ್ಯಾಸವಾಗದಂತೆ ಬೇಡದ ಶಾಖವನ್ನು ಹೊರಹೋಗಲು ಬಿಡುತ್ತದೆ. ಕಾಯಿಸುವ (D) ಕೋಣೆ ದೀಪದಿಂದ ಬಂದ ಬಿಸಿಗಾಳಿಯಿಂದ ಕಾಯಿಸಲ್ಪಟ್ಟು (E) ಮೊಟ್ಟೆ ತಟ್ಟೆಯಲ್ಲಿನ ಮೊಟ್ಟೆಗಳನ್ನು ಕಾಯಿಸುತ್ತದೆ. (E) ಮೊಟ್ಟೆ ತಟ್ಟೆಯ ಮೇಲೆ ನೇತುಬಿಟ್ಟಂತೆ (F) ಉಷ್ಣಮಾಪಕ ಮತ್ತು ಶಾಖವನ್ನು ಹತೋಟಿಯಲ್ಲಿಡುವ ಚಪ್ಪಟೆ ಬಟ್ಟಲು ಅಥವಾ ಉಷ್ಣ ಸಮಸ್ಥಿತಿ ರಚನೆಗೆ ಆಧಾರವಾಗಿರುವ ಗಟ್ಟಿರಚನೆಯಾದ (G) ಬಟ್ಟಲುಹಿಡುಕ ಇವೆ. ಒಂದು (H) ಲೋಹದ ಕಡ್ಡಿ ಬಟ್ಟಲಿನ ಮೇಲೆ ಲಂಬವಾಗಿ ನಿಂತು ಮೇಲಕ್ಕೆ ಸಾಗಿ, (K) ಕೀಲುಯುಕ್ತ ಬಾಹುವಿಗೆ ಸೇರಿದ ವಿಶೇಷ ರೀತಿಯ ಕೂಡಿಸಿದ (J) ತಿರುಪಿನ ತಳದೊಂದಿಗೆ ಸಂಪರ್ಕ ಹೊಂದುತ್ತದೆ. ಈ ಬಾಹು ಬಹು ಸುಲಭವಾಗಿ ಅಲ್ಲದೆ ಸುಲಲಿತವಾಗಿ ಆಡುವಂತೆ ಮಾಡಲು ಸರಿಯಾದ ಒತ್ತಡಹಾಕುವಂತೆ ಬಾಹುವಿನುದ್ದಕ್ಕೂ ಜಾರಿಸಬಹುದಾದ (L) ತೂಕವನ್ನು ಹೊಂದಿದೆ. ಇದರ ಮತ್ತೊಂದು ತುದಿ ಕೊಕ್ಕೆಯನ್ನು ಹೊಂದಿದೆ. ಇದರಿಂದ ನಿಶ್ಚಲ ಸ್ಥಿತಿಯಲ್ಲಿ ಹೊಗೆಕೊಳವೆಯ ಹೊರಗಿನ (C) ಬಾಯಿಯ ಮೇಲೆ ಭದ್ರವಾಗಿ ಕೂರುವ (M) ಮುಚ್ಚಳ ನೇತುಬಿದ್ದಿದೆ.

ಈ ಕಾವುಕೊಡುವ ಯಂತ್ರದಲ್ಲಿನ ಶಾಖಹತೋಟಿ ಸೂತ್ರ ಸುಲಭವಾದುದು. ಕಾವುಕೊಡುವ ಯಂತ್ರದೊಳಗಿನ ಶಾಖವು ಮೊದಲೇ ಹೊಂದಿಸಿದ್ದ ಶಾಖಕ್ಕಿಂತ ಹೆಚ್ಚಾದಾಗ, ಶಾಖವು ಹೆಚ್ಚುಕಡಮೆಯಾದಂತೆ ದಪ್ಪದಲ್ಲಿ ಹೆಚ್ಚುಕಡಮೆಯಾಗುವಂತೆ ಸ್ವಲ್ಪ ಈಥರ್ ಅಥವಾ ಅದೇ ರೀತಿಯ ಬೇಗ ಬಾಷ್ಪೀಕರಣವಾಗುವ ತೈಲ



ಚಿತ್ರ 43: ಎಣ್ಣೆದೀಪದಿಂದ ಕಾಯಲ್ಪಡುವ ಬಿಸಿನೀರ ಚಪ್ಪಟೆ ರೀತಿಯ ಕಾವುಕೊಡುವ ಯಂತ್ರ.




ಚಿತ್ರ 44: ಎಣ್ಣೆದೀಪದಿಂದ ಕಾಯಲ್ಪಡುವ ಬಿಸಿಗಾಳಿ ಚಪ್ಪಟೆ ರೀತಿಯ ಕಾವುಕೊಡುವ ಯಂತ್ರಗಳು; ಒಂದರ ಬಾಗಿಲು ಮುಚ್ಚಿದೆ ಮತ್ತೊಂದರದು ತೆರೆದಿದೆ.

ವನ್ನು ಮಧ್ಯ ಸೇರಿಸಿ ಎರಡು ತೆಳುವಾದ ತಗಡುಗಳನ್ನು ಬೆಸುಗೆ ಹಾಕಿರುವ ಬಟ್ಟಲು ಹಿಗ್ಗಿ (H) ಕಡ್ಡಿಯನ್ನು ಮೇಲಕ್ಕೆ ತಳ್ಳುತ್ತದೆ, ಇದು ಕೀಲಿನಿಂದ ಕೂಡಿದ ಬಾಹುವನ್ನು ತಳ್ಳಿ ಹೊಗೆಕೊಳವೆಯ ಮೇಲಿನ ಮುಚ್ಚಳವನ್ನು ಎತ್ತುತ್ತದೆ. ಕಾವುಕೊಡುವ ಯಂತ್ರದ ಶಾಖ ಸರಿಯಾಗಿದ್ದಾಗ ಮುಚ್ಚಳವು ಹೊಗೆಕೊಳವೆಯ ಮೇಲೆ ನೇತಾಡುತ್ತಿರುತ್ತದೆ. ಆದರೆ ಶಾಖವು ಕೆಳಗಿಳಿದ ಕೂಡಲೇ ಮುಚ್ಚಳ ಮುಚ್ಚಿಕೊಂಡು ಪೂರ್ಣ ಶಾಖವು ಕಾವುಕೊಡುವ ಯಂತ್ರದೊಳಗೆ ಹೋಗುವಂತೆ ಮಾಡುತ್ತದೆ. ಈ ವ್ಯವಸ್ಥೆ ಸುಲಭವಾದುದಾದಾಗ್ಯೂ ಶೇಕಡ 100ರಷ್ಟು ಪ್ರತಿಫಲ ನಿರೀಕ್ಷಿಸಬೇಕಾದರೆ ಕಾವು ಕೊಡುವ ಯಂತ್ರದ ಜೋಡಣೆಯಲ್ಲಿ ಹೆಚ್ಚಿನ ಗಮನ ಅಗತ್ಯ. ಕಾವುಕೊಡುವ ಯಂತ್ರ ಸರಿಯಾದ ಸಮತಳದಲ್ಲಿ ನಿಂತಿರಬೇಕು. ಮುಚ್ಚಿದ ಸ್ಥಿತಿಯಲ್ಲಿ ಮುಚ್ಚಳ ಹೊಗೆಕೊಳವೆಯ ಮೇಲೆ ಭದ್ರವಾಗಿ ಕುಳಿತುಕೊಳ್ಳುವಂತೆ ಕೀಲುಯುಕ್ತ ಬಾಹುವನ್ನು ಎಚ್ಚರದಿಂದ ಹೊಂದಿಸಬೇಕು.


ಉಷ್ಣಮಾಪಕದ ಬುರುಡೆ ಮೊಟ್ಟೆತಟ್ಟೆಯಿಂದ ತಯಾರಕರು ಶಿಫಾರಸ್ಸು ಮಾಡಿರುವ ಎತ್ತರಕ್ಕೆ ಸರಿಯಾಗಿರುವಂತೆ ಅದನ್ನು ಹೊಂದಿಸಬೇಕು. ಅಲವಾರು ವಿಧದ ಯಂತ್ರಗಳಲ್ಲಿರುವಂತೆ ಈ ಕಾವುಕೊಡುವ ಯಂತ್ರಗಳಲ್ಲಿ ಒಳಗಿನ ಪೂರ್ಣ ಗಾಳಿ ಒಂದೇ ಶಾಖದಲ್ಲಿಲ್ಲದಿರುವುದರಿಂದ, ಉಷ್ಣಮಾಪಕದ ಈ ಜಾಗದಲ್ಲಿ ಏನೇ ವ್ಯತ್ಯಾಸವಾದರೂ ಮೊಟ್ಟೆಗಳ ಕಾಯಿಸುವಿಕೆಯಲ್ಲಿ ದೋಷವುಂಟಾಗುತ್ತದೆ.

ಮಟ್ಟವಾದ ರೀತಿಯ ಕಾವುಕೊಡುವ ಯಂತ್ರಗಳು ಕೆಲವಲ್ಲಿ ಹೊರಬಂದ ಮರಿಗಳು ಮೊಟ್ಟೆತಟ್ಟೆಯಲ್ಲಿಯೇ ಉಳಿಯುತ್ತವೆ. ಆದರೆ ಮತ್ತೆ ಕೆಲವಲ್ಲಿ ಮೊಟ್ಟೆ ತಟ್ಟೆಯ ಕೆಳಗೆ ಪೋಷಕ ತಾಣ ಅಥವಾ (N) ಮರಿಗಳ ತಟ್ಟೆ ಇರುತ್ತದೆ. ಮರಿಗಳ ತಟ್ಟೆಯಿಲ್ಲದೇಯಿದ್ದರೆ ಬೆಳಕಿಗೆ ಬರುವುದಕ್ಕಾಗಿ ಹೊರಬಂದ ಮರಿಗಳು ಇನ್ನೂ ಬರುತ್ತಿರುವ ಮರಿಗಳ ಮೇಲೇರುವುದನ್ನು ತಡೆಗಟ್ಟಲು ಪರೀಕ್ಷಾಕಂಡಿಯನ್ನು ಮುಚ್ಚಿ ಕತ್ತಲುಮಾಡುವುದು ಅವಶ್ಯಕವಾಗಬಹುದು. ಪ್ರತ್ಯೇಕವಾದ ಮರಿತಟ್ಟೆಯಿರುವ ಯಂತ್ರಗಳಲ್ಲಿ ಮೊಟ್ಟೆತಟ್ಟೆಯ ಮುಂದೆ ಸ್ವಲ್ಪ ಜಾಗ ಬಿಟ್ಟಿರುತ್ತದೆ ಇಲ್ಲವೇ ಮುಂಭಾಗದ ತಂತಿ ಬಲೆಯ ಒಂದು ಭಾಗವನ್ನು ತೆಗೆಯುವ ಅನುಕೂಲತೆಯಿರುತ್ತದೆ. ಈ ಭಾಗವನ್ನು ಸುಮಾರು ಮೂರನೇ ಒಂದು ಭಾಗ ಮರಿಗಳು ಹೊರಬಂದ ನಂತರ ತೆಗೆಯಬೇಕು. ಬೆಳಕಿನ ಕಡೆಗೆ ಸಾಗುವ ಮರಿಗಳು ಕೆಳಗಿನ ಮರಿಗಳ ತಟ್ಟೆಯ ಹಾಸಿಗೆಗೆ ಮೃದುವಾಗಿ ಬೀಳುತ್ತವೆ. ಮೊಟ್ಟೆಯತಟ್ಟೆ ಮತ್ತು ಕಾವುಕೊಡುವ ಯಂತ್ರಗಳ ನಡುವೆ ಮೊದಲೇ ಜಾಗ ಬಿಟ್ಟಿರುವ ಯಂತ್ರಗಳಲ್ಲಿ ಮರಿಗಳು ಚಿಪ್ಪಿನಿಂದ ಹೊರಬಂದ ಕೂಡಲೇ ತಾವಾಗೇ ಕೆಳಗಿನ ಮರಿಗಳ ತಟ್ಟೆಗೆ ಬೀಳುತ್ತವೆ.


ಕಾಯಿಸುವ ಸಾಧನ (A) ಗೆ ಎಣ್ಣೆ. ಅನಿಲ ಅಥವಾ ವಿದ್ಯುತ್ತು ಯಾವುದನ್ನಾದರೂ ಬಳಸಬಹುದು. ಆದುದರಿಂದ ಈ ವಿಧವನ್ನು ಎಲ್ಲಿಬೇಕಾದರೂ ಉಪಯೋಗಿಸಬಹುದು. ಮಟ್ಟರೀತಿಯ ಕಾವುಕೊಡುವ ಯಂತ್ರಗಳಲ್ಲಿ ಹೆಚ್ಚಿನವಲ್ಲಿ ಮೊಟ್ಟೆಗಳು



ಚಿತ್ರ 45: ಎಣ್ಣೆದೀಪ ಅಥವಾ ವಿದ್ಯುಚ್ಛಕ್ತಿನಿಂದ ಕಾಯಿಸಬಹುದಾದ ಒಂದೇ ಸಾಲಿನ ಅಲಮಾರು ರೀತಿ ಕಾವುಕೊಡುವ ಯಂತ್ರ.




ಚಿತ್ರ 46: ವಿದ್ಯುಚ್ಛಕ್ತಿನಿಂದ ಕಾಯಲ್ಪಡುವ ಎರಡು ಸಾಲಿನ ಅಲಮಾರು ರೀತಿಯ ಕಾವುಕೊಡುವ ಯಂತ್ರ.



ಚಿತ್ರ 47: ತಂತಾನೆ ತಿರುಗುವ ತಟ್ಟೆಗಳಿರುವ ಅಲಮಾರು ರೀತಿಯ ಕಾವುಕೊಡುವ ಯಂತ್ರ.

ಕೈನಿಂದ ತಿರುಗಿಸಲ್ಪಡುತ್ತವೆ. ಪ್ರತಿಸಾರಿಯೂ ಮೊಟ್ಟೆಗಳನ್ನು ವಿರುದ್ಧ ದಿಕ್ಕಿನಲ್ಲಿ ತಿರುಗಿಸುವುದು ಮುಖ್ಯವಾದುದು.

ಅಲಮಾರು ನಮೂನೆಯ ಕಾವುಕೊಡುವ ಯಂತ್ರ: ಅಲಮಾರು ನಮೂನೆಯ ಯಂತ್ರದ (ಚಿತ್ರ 45 ರಿಂದ 47) ಮೂಲಕ ಕಾವುಕೊಡುವಿಕೆಯಲ್ಲಿ ಅತಿದೊಡ್ಡ ಅಭಿವೃದ್ಧಿ ಮಾಡಲ್ಪಟ್ಟಿತು. ಈ ಯಂತ್ರಗಳಿಗೂ ಮಟ್ಟವಾದ ವಿಧದ ಯಂತ್ರಗಳಿಗೂ ಇರುವ ಮುಖ್ಯ ವ್ಯತ್ಯಾಸಗಳೆಂದರೆ (ಅ) ಮೊಟ್ಟೆಗಳ ಅಗಲವಾದ ತುದಿ ಮೇಲೆ ಬರುವಂತೆ ಅವುಗಳನ್ನು ಲಂಬವಾಗಿಡುತ್ತೇವೆ. (ಆ) ತಟ್ಟೆಗಳನ್ನು 80 ರಿಂದ 90 ಡಿಗ್ರಿ ತಿರುಗಿಸುವುದರಿಂದ ಮೊಟ್ಟೆಗಳನ್ನು ತಿರುಗಿಸುತ್ತೇವೆ. ಅಂದರೆ ಸಮತಲ ರೇಖೆಯ ಎರಡೂ ಕಡೆಗೆ 40 ರಿಂದ 45 ಡಿಗ್ರಿಗಳು, ಮತ್ತು (ಇ) ವಾತಾಯನ ಮತ್ತು ಒಳಗಿನ ಗಾಳಿ ಹರಿತವನ್ನು ಪಂಖಗಳು ಮತ್ತು ಕಲಕುವ ಸಲಕರಣೆಗಳ ವ್ಯವಸ್ಥೆಯ ಮೂಲಕ ಯಾಂತ್ರಿಕವಾಗಿ ನಿರ್ದೇಶಿಸಬಹುದು.



(ಅ) (ಆ)

ಚಿತ್ರ 48: ಅಲಮಾರು ರೀತಿಯ ಕಾವುಕೊಡುವ ಯಂತ್ರದಲ್ಲಿ ಮೊಟ್ಟೆ ಇಡುವ ತಟ್ಟೆಗಳ ಸ್ಥಾನ ಪರಿಚಯ.
(ಅ) ಒಂಟಿ ಸಾಲು ಮತ್ತು (ಆ) ಎರಡು ಸಾಲು

ಅಲಮಾರು ರೀತಿಯ ಕಾವುಕೊಡುವ ಯಂತ್ರಗಳ ಅತಿ ದೊಡ್ಡ ಪ್ರಯೋಜನವೆಂದರೆ ನೆಲ ಜಾಗದ ಉಳಿತಾಯ. ಉದಾಹರಣೆಗೆ 12,000 ಮೊಟ್ಟೆಗಳನ್ನು ಒಳಗೊಳ್ಳಲು ರೂಪಿಸಿದ ಆಧುನಿಕ ವಿದ್ಯುತ್‌ಚಾಲಿತ ಅಲಮಾರು ಕಾವುಕೊಡುವ ಯಂತ್ರ 12′ × 6′ ಜಾಗವನ್ನಾಕ್ರಮಿಸಿಕೊಳ್ಳುತ್ತದೆ ಮತ್ತು ಇದನ್ನು 16′ × 13′ ಕೊಠಡಿಯಲ್ಲಿ ನಿರ್ವಹಿಸಬಹುದು. ಜಾಗದ ಈ ಉಳಿತಾಯು ಮುಖ್ಯವಾಗಿ ಮೊಟ್ಟೆತಟ್ಟೆಗಳನ್ನು ಒಂದರ ಮೇಲೆ ಒಂದು ಜೋಡಿಸಿರುವುದು ಮತ್ತು ಯಾಂತ್ರಿಕ ವಾತಾಯನ ವ್ಯವಸ್ಥೆಯಿಂದಾದುದು.

ಚಿತ್ರ 48 ಇತ್ತೀಚಿನ ವಿಧಗಳಲ್ಲಿ ಪ್ರತ್ಯೇಕವಾದ ಕಾವುಕೊಡುವ ಮತ್ತು ಮರಿ ಮಾಡುವ ವಿಭಾಗಗಳಿರುವ ಅಲಮಾರು ವಿಧದ ಕಾವುಕೊಡುವ ಯಂತ್ರದಲ್ಲಿ ತಟ್ಟೆಗಳ ವ್ಯವಸ್ಥೆಯನ್ನು ಕಣ್ಣಿಗೆ ಕಾಣುವಂತೆ ತೆರೆದು ತೋರಿಸುತ್ತದೆ. ಇವೆರಡರಲ್ಲಿ ದೊಡ್ಡದು ಕಾವುಕೊಡುವ ವಿಭಾಗ. ಪ್ರತಿವಾರವೂ ತಟ್ಟೆಗಳ ಮೂರನೇ ಒಂದು ಭಾಗವನ್ನು ಭರ್ತಿಮಾಡಬೇಕು ಮತ್ತು ಇವುಗಳನ್ನು ಕಾವುಕೊಡುವ ಯಂತ್ರದ ಬಡುಗಳ ಮೇಲೆ ಸಮನಾಗಿ ಹಂಚಬೇಕು. ಪ್ರತಿ ಗುಂಪಿಗೂ ಮರಿಮಾಡುವ ವಿಭಾಗಕ್ಕೆ ತೆಗೆಯಲು ಸುಲಭವಾಗುವಂತೆ ವಿಶಿಷ್ಟ ಬಣ್ಣದ ಗುರುತು ಪಟ್ಟಿ ಕೊಟ್ಟಿರಬೇಕು. ಕೆಂಪು, ಬಿಳಿ ಮತ್ತು ನೀಲಿ ಸಾಮಾನ್ಯವಾದ ಬಣ್ಣಗಳು ಮತ್ತು ಇವುಗಳು ಬಡುವಿನ ಮೇಲಿನಿಂದ ಕೆಳಕ್ಕೆ ಅನುಕ್ರಮವಾಗಿರುತ್ತವೆ.

ಮರಿಮಾಡುವ ವಿಭಾಗದಲ್ಲಿ ಮೊಟ್ಟೆಗಳನ್ನು ತಿರುಗಿಸುವ ಅವಶ್ಯಕತೆಯಿಲ್ಲ. ಮರಿಮಾಡುವ ತಟ್ಟೆ, ಮೊಟ್ಟೆತಟ್ಟೆಗಿಂತ ಎಲ್ಲ ಅಳತೆಗಳಲ್ಲೂ ಸಾಮಾನ್ಯವಾಗಿ ಸ್ವಲ್ಪ ದೊಡ್ಡದು. ಆದುದರಿಂದ 18ನೆಯ ದಿನದ ಬೆಳಕಿನ ಪರೀಕ್ಷೆಯ ನಂತರ ಉಳಿದಿರುವ ಮೊಟ್ಟೆಗಳನ್ನು, ಮೊಟ್ಟೆಯತಟ್ಟೆಯ ಮೇಲೆ ಮರಿಮಾಡುವ ತಟ್ಟೆಯನ್ನು ತಿರುವಿ ಹಾಕಿ ಎರಡನ್ನೂ ತಿರುಗಿಸಿ ಮೊಟ್ಟೆತಟ್ಟೆಯನ್ನು ತೆಗೆಯುವ ಸುಲಭ ಕ್ರಿಯೆಯಿಂದ ಮೊಟ್ಟೆಗಳನ್ನು ಬದಲಾಯಿಸಬಹುದು. ಸ್ವಾಭಾವಿಕವಾಗಿಯೇ ಭ್ರೂಣಗಳಿಗೆ ಧಕ್ಕೆಯನ್ನು ತಪ್ಪಿಸಲು ಈ ಕ್ರಿಯೆಯನ್ನು ನಯವಾಗಿ ಮಾಡಬೇಕು.

ಕಾವುಕೊಡುವ ಯಂತ್ರದೊಳಗಿನ ಕಾಯಿಸುವ ಮಾಧ್ಯಮ ವಿದ್ಯುತ್ ಇಲ್ಲವೇ ವಿದ್ಯುತ್, ಎಣ್ಣೆ, ಇದ್ದಿಲು ಅಥವಾ ಅನಿಲದಿಂದ ಕಾಯಿಸಿದ ನೀರು ಆಗಿರಬಹುದು. ಪೂರ್ಣ ವಿದ್ಯುತ್ತಿನ ಕಾವುಕೊಡುವ ಯಂತ್ರಗಳಲ್ಲಿ ಶಾಖವನ್ನೊದಗಿಸುವ ವಿದ್ಯುತ್ತೇ ವಾತಾಯನದ ಪಂಖಗಳನ್ನು ಅಥವಾ ಗಾಳಿಯನ್ನು ಕಲಕುವ ಇನ್ನಾವುದೇ ಸಲಕರಣೆಯನ್ನೂ ಚಲನೆಗೆ ತರುವುದಲ್ಲದೇ ಸ್ವಯಂಚಾಲಿತ ತಿರುಗಿಸುವ ಸಲಕರಣೆಯನ್ನು ಜೋಡಿಸಿದರೆ ಅದನ್ನೂ ನಡೆಸುತ್ತದೆ. ಇತರೇ ರೀತಿಯ ಕಾಯಿಸುವುದನ್ನು ಉಪಯೋಗಿಸಿದಾಗ ಪಂಖ ಮೊದಲಾದುವಕ್ಕೆ ಪ್ರತ್ಯೇಕಚಾಲಕ ಅವಶ್ಯಕ. ಪೂರ್ಣ ವಿದ್ಯುತ್ತಿನ ಕಾವುಕೊಡುವ ಯಂತ್ರಗಳ ಮತ್ತೊಂದು ಅನುಕೂಲತೆಯೆಂದರೆ ಸಂಕೀರ್ಣ ಬಾಹ್ಯ ಜೋಡಣೆಗಳಿಲ್ಲದಿರುವುದರಿಂದ ನಿರ್ವಹಣೆಗೆ ಕಡಮೆ ಜಾಗ ಸಾಕಾಗುತ್ತದೆ. ಆದಾಗ್ಯೂ ವಿದ್ಯುತ್ತಿನ ಸರಬರಾಜಿನಲ್ಲಿ ತೊಂದರೆ ಉಂಟಾದಾಗ ಯಂತ್ರ ನಿಂತು ಹೋಗುವ ಸಂಭವವಿರುವುದು ಇದರ ಕೊರತೆ.

ಪೂರ್ಣ ವಿದ್ಯುತ್ತಿನ ಕಾವುಕೊಡುವ ಯಂತ್ರಗಳಲ್ಲಿ ಕಟ್-ಇನ್-ಕಟ್-ಔಟ್ ಸ್ವಿಚ್‌ಗಳ ಮೂಲಕ ಮತ್ತು ಇತರ ರೀತಿಯ ಕಾಯಿಸುವ ವ್ಯವಸ್ಥೆಯಿರುವ ಯಂತ್ರಗಳಲ್ಲಿ ಬಟ್ಟಲು ಮತ್ತು ಮುಚ್ಚಳ ವ್ಯವಸ್ಥೆಯ ಮೂಲಕ ಶಾಖನಿಯಂತ್ರಣವನ್ನು ಕಾರ್ಯರೂಪಕ್ಕೆ ತರಬಹುದು.

ಒಳಕ್ಕೆ ಬಂದ ಗಾಳಿ, ಕಾಯಿಸುವ ಸಲಕರಣೆಯ ಮೇಲೆ ಹಾದು ಮೊಟ್ಟೆಗಳನ್ನು ತಲುಪುವ ಹೊತ್ತಿಗೆ ಅಪೇಕ್ಷಿತ ಶಾಖವನ್ನು ಮುಟ್ಟುವಂತೆ ದ್ವಾರಗಳನ್ನೊದಗಿಸಿ ವಾತಾಯನ ವ್ಯವಸ್ಥೆ ಮಾಡಲಾಗಿದೆ. ಪಂಖ ಅಥವಾ ಹುಟ್ಟಿನಾಕಾರದ ಸಲಕರಣೆ ಯಾವುದೇ ರೀತಿಯ ಗಾಳಿಕಲಕುವ ಸಾಧನವಾದರೂ ಅದು ಅಪಾಯಮಟ್ಟವನ್ನು ಮುಟ್ಟಬಹುದಾದ ಇಂಗಾಲಾಮ್ಲದ ಸಾರೀಕರಣವನ್ನು ಹೊಂದಬಹುದಾದ ಗಾಳಿ ಪೊಟ್ಟಣಗಳಿಂದ ಗಾಳಿಯನ್ನು ಮುಕ್ತವನ್ನಾಗಿ ಮಾಡುತ್ತದೆ. ಇಡೀ ಕಾವುಕೊಡುವ ಯಂತ್ರದೊಳಗಿನ ಗಾಳಿಯ ಸಮರ್ಥ ಪ್ರವಾಹಕ್ಕೆ, ಒಟ್ಟಿನಲ್ಲಿ ಪಂಖ ಮತ್ತು ಗಾಳಿ ಕೊಳವೆಗಳ ರೂಪರಚನೆಯೇ ಮುಖ್ಯಕಾರಣ ಮತ್ತು ಬಹುಶಃ ಕಾವುಕೊಡುವ ಯಂತ್ರದ ಸಾಮರ್ಥ್ಯವನ್ನು ನಿರ್ಧರಿಸುವಲ್ಲಿ ಇದು ಅತಿಮುಖ್ಯವಾದ ಏಕೈಕ ಕಾರಣ.

ಸಾಮಾನ್ಯವಾಗಿ ಹೆಚ್ಚಿನ ಆವಿಯಾಗುವ ಹೊರಮೈಯಿರುವ ಮಟ್ಟವಾದ ತಟ್ಟೆಗಳು ಅಥವಾ ವಾತಾಯನ ವ್ಯವಸ್ಥೆಯೊಂದಿಗೆ ಸೇರಿಸಿದ ಯಾವುದಾದರೊಂದು ನೀರಿನ ಒಚಕಾರಿ ವ್ಯವಸ್ಥೆಯ ಮೂಲಕ ತೇವಾಂಶವನ್ನು ಒದಗಿಸಲಾಗುತ್ತದೆ.

ಕಾವುಕೊಡುವ ಯಂತ್ರವನ್ನು ಆಗಾಗ್ಗೆ ತೆಗೆಯುವ ಅವಶ್ಯಕತೆಯನ್ನು ತಪ್ಪಿಸುವಂತೆ ಹೊರಗಿರುವ ಒಂದು ಕೈಹಿಡಿಯ ಮೂಲಕ ಮಾನವ ಶ್ರಮದಿಂದಾಗಲಿ ಅಥವಾ ನಿರ್ದಿಷ್ಟ ಅಂತರದಲ್ಲಿ ಸ್ವಯಂಚಾಲಿತವಾಗಿ ತಿರುಗುವಂತೆ ಹೊಂದಿಸುವ ಸಾಧ್ಯತೆಯುಳ್ಳ ಯಾಂತ್ರಿಕ ಜೋಡಣೆಯಿಂದಾಗಲಿ ಮೊಟ್ಟೆಗಳನ್ನು ತಿರುಗಿಸುವ ವ್ಯವಸ್ಥೆ ಮಾಡಬಹುದು.

ಯಾವುದೇ ರೀತಿಯ ಕಾವುಕೊಡುವ ಯಂತ್ರವನ್ನು ಆಯ್ಕೆಮಾಡಿಕೊಂಡಾಗ್ಯೂ ಅದು ಈ ಮುಂದೆ ತಿಳಿಸುವ ಗುಣಗಳನ್ನು ಹೊಂದಿರಬೇಕು.

(1) ಕಾವುಕೊಡುವ ಯಂತ್ರ ಸಮರ್ಥವಾಗಿರಬೇಕು, ಅಂದರೆ ಚಾಲಕನ ಅತಿಯಾದ ಗಮನದ ಅವಶ್ಯಕತೆಯಿಲ್ಲದೆ ಚೆನ್ನಾಗಿ ಮರಿಗಳನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿರಬೇಕು.

(2) ಅದು ಗಟ್ಟಿಯಾಗಿರಬೇಕು ಮತ್ತು ಬೇಗ ಬೆಲೆಕುಗ್ಗದಂತೆ ಸಾಮಾನ್ಯವಾದ ಸವಕಳಿಯನ್ನು ತಡೆದುಕೊಳ್ಳುವಂತಿರಬೇಕು.

(3) ನಡೆಸಲು ಸುಲಭವಾಗಿರಬೇಕು – ಉಷ್ಣ ಸಮಸ್ಥಿತಿ ರಚನೆ ನಿಖರವಾಗಿ, ಸೂಕ್ಷ್ಮವಾಗಿ ಮತ್ತು ನಿಯಂತ್ರಿಸಲು ಸುಲಭವಾಗಿರಬೇಕು.

(4) ದೀಪ, ತಟ್ಟೆ, ಬಾಗಿಲು, ಉಷ್ಣಮಾಪಕಗಳು ಮೊದಲಾದವುಗಳ ಜೋಡಣೆ ಅನುಕೂಲವಾಗಿರಬೇಕು ಮತ್ತು ಅವಲಂಬನೀಯ ಗುಣಮಟ್ಟದ್ದಾಗಿರಬೇಕು.

(5) ಬೆಂಕಿ ಮತ್ತು ವಿದ್ಯುತ್ತಿನ ವಿರುದ್ಧ ಚೆನ್ನಾಗಿ ನಿರೋಧಕಗಳನ್ನು ಹಾಕಿರಬೇಕು ಮತ್ತು ಶಾಖವನ್ನು ರಕ್ಷಿಸಿಕೊಳ್ಳುವ ಶಕ್ತಿಹೊಂದಿರಬೇಕು.

ಸರಿಯಾದ ಶಾಖ, ವಾತಾಯನ ಮತ್ತು ತೇವಾಂಶವನ್ನೊದಗಿಸುವ ಜಾಗ ಕಾವುಕೊಡುವ ಯಂತ್ರಕ್ಕೆ ಅತಿಸೂಕ್ತವಾದುದು. ಚೆನ್ನಾಗಿ ನಿರೋಧಕಗಳನ್ನು ಸುತ್ತಿದ ಕಾವುಕೊಡುವ ಯಂತ್ರಗಳೂ ಸ್ಥಳದಿಂದ ಪ್ರಭಾವಿತವಾಗುತ್ತವೆ. ಚೆನ್ನಾಗಿ ನಿರೋಧಕಗಳನ್ನು ಸುತ್ತಿದ್ದ, ಅನುಕೂಲವಾದ ಆಳತೆಯ, ಶಾಖವನ್ನು 60°F ನಲ್ಲಿ ಉಳಿಸಿಕೊಂಡು ಬರಲು ಅನುಕೂಲಕರವಾದ, ಬೀಸುಗಾಳಿಗಳಿಲ್ಲದಂತೆ ಸರಿಯಾಗಿ ವಾತಾಯನಗಳಿರುವ ಮತ್ತು ಒಳ್ಳೆಯ ಬೆಳಕಿನ ವ್ಯವಸ್ಥೆಯಿರುವ ಕೊಠಡಿ ಕಾವುಕೊಡುವ ಯಂತ್ರಕ್ಕೆ ಆದರ್ಶವಾದುದು. ಮರಿಮಾಡುವ ಕಾಲದಲ್ಲಿ ದಿನಕ್ಕೆ ಹಲವಾರು ಸಾರಿ ಯಂತ್ರವನ್ನು ನೋಡುತ್ತಿರಬೇಕಾದುದರಿಂದ ಕಾವುಕೊಡುವ ಕೊಠಡಿ ಸುಲಭವಾಗಿ ಒಳಗೆ ಹೋಗು

ವಂತಿರಬೇಕು. ಬೆಂಕಿಯ ಅಪಾಯವನ್ನು ತಡೆಗಟ್ಟುವಂತೆ ಅದರ ರಚನೆಯಾಗಿರಬೇಕು ಮತ್ತು ಮೊಟ್ಟೆಗಳು ಹಾಗೂ ಯಂತ್ರವನ್ನು ಸುಲಭವಾಗಿ ನಿರ್ವಹಿಸಲು ಅನುಕೂಲ ವಾಗುವಷ್ಟು ದೊಡ್ಡದಾಗಿರಬೇಕು. ಕೆಲಸ ಸುಗಮವಾಗಿ ಸಾಗಲು ಬೇಕಾಗುವಷ್ಟು ಮೇಜು ಮತ್ತು ಬಡುಗಳನ್ನು ಕೊಠಡಿಯಲ್ಲಿ ಒದಗಿಸಿರಬೇಕು.

ಕಾವುಕೊಡುವ ಯಂತ್ರದ ಸಿದ್ಧತೆ

ಹಲವು ಕೋಳಿರೋಗಗಳಿಗೆ ಕಾರಣವಾದ ಸೂಕ್ಷ್ಮಾಣುಗಳ ವೃದ್ಧಿ ಮತ್ತು ಬೆಳವಣಿಗೆಗೆ ಕಾವುಕೊಡುವ ಯಂತ್ರ ಅತ್ಯುತ್ತಮ ಮಾಧ್ಯಮವನ್ನೊದಗಿಸುತ್ತದೆ. ಹಿಂದೆಂದೂ ಉಪಯೋಗಿಸದ ಹೊಸಯಂತ್ರವನ್ನು ಬಿಟ್ಟು ಉಳಿದೆಲ್ಲ ಕಾವುಕೊಡುವ ಯಂತ್ರಗಳೂ ತಮ್ಮ ಕಾರ್ಯದ ಎಲ್ಲ ಮಟ್ಟಗಳಲ್ಲೂ ಅತಿ ಸೂಕ್ಷ್ಮತರ ಆರೋಗ್ಯ ಪರೀಕ್ಷೆಗಳ ಅವಶ್ಯಕತೆಯನ್ನು ಮತ್ತು ಮಿತವ್ಯಯಕಾರಿ ಕೆಲಸದೊಂದಿಗೆ ಹೊಂದುವ ಎಲ್ಲ ರೋಗ ನಿರೋಧಕ ಪದ್ಧತಿಗಳನ್ನು ಜಾರಿಗೆ ತರುವ ಅವಶ್ಯಕತೆಯನ್ನೂ ಹೊಂದಿರು ತ್ತವೆ.

ಒಂದು ಬೊಗಸೆ ತೊಳೆಯುವ ಸೋಡವನ್ನು $2\frac{1}{2}$ ಗ್ಯಾಲನ್ ನೀರಿನಲ್ಲಿ ಕರಗಿಸಿ ತಯಾರಿಸಿದ ಶೇಕಡಾ 4 ಅಂಶದ ಬಿಸಿ ದ್ರಾವಣದಲ್ಲಿ ಮೊಟ್ಟೆ ಮತ್ತು ಮರಿತಟ್ಟೆ ಗಳು ಮತ್ತು ಕಾವುಕೊಡುವ ಯಂತ್ರದ ಇತರೆ ಬೇರ್ಪಡಿಸಬಹುದಾದ ಭಾಗಗಳನ್ನು ಚೆನ್ನಾಗಿ ತೊಳೆಯಬೇಕು. ಇದು ಗ್ರೀಸನ್ನು ಮೃದುವಾಗಿಸಿ ಭಾಗಗಳು ಚೆನ್ನಾಗಿ ಸ್ವಚ್ಛವಾಗಲು ಸಹಾಯಮಾಡುತ್ತದೆ. ಮೊಟ್ಟೆ ಮತ್ತು ಮರಿಗಳನ್ನು ಸಾಗಿಸಲು ಉಪಯೋಗಿಸಿದ ಎಲ್ಲ ಇತರ ಸಲಕರಣೆಗಳನ್ನೂ ನಿರ್ದಿಷ್ಟ ಅಂತರದಲ್ಲಿ ಇದೇ ರೀತಿ ಸ್ವಚ್ಛಮಾಡಬೇಕು.

ಕಾವುಕೊಡುವ ಯಂತ್ರದ ಒಳಭಾಗ, ವಿಶೇಷತಃ ಮರಿಯಾಗುವ ವಿಭಾಗ ವನ್ನು ಧೂಳು ಮತ್ತು ಕೊಳೆಯಿಂದ ಮುಕ್ತವಾಗಿಟ್ಟಿರಬೇಕು. ಮರಿಮಾಡುವ ವಿಭಾಗವನ್ನು ತಟ್ಟೆಗಳು ಮೊದಲಾದುವನ್ನು ತೆಗೆದ ನಂತರ ಹೊಗೆಯಾಡಿಸುವುದು ಒಳ್ಳೆಯದು ಮತ್ತು ಆಮೇಲೆ ತುಪ್ಪಳವನ್ನು ತೆಗೆಯಲು ನಿರ್ವಾತ ಸ್ವಚ್ಛಕದ ಮೂಲಕವೋ ಅಥವಾ ತುಪ್ಪಳವೆಲ್ಲ ಕೆಳಗೆ ಕೂರುವಂತೆ ಪ್ರಬಲ ಕ್ರಿಮಿನಾಶಕ ದ್ರಾವಣ ವನ್ನು ಸಿಂಪಡಿಸುವುದರ ಮೂಲಕವೋ ಸ್ವಚ್ಛಮಾಡಿ, ಕೊನೆಗೆ ತೊಳೆಯುವ ಸೋಡ ದ್ರಾವಣದಿಂದ ತೊಳೆಯಬೇಕು.

ಶೇಕಡ 1 ರಿಂದ 2 ಭಾಗ ಸ್ವತಂತ್ರ ಕ್ಲೋರಿನ್ ಹೊಂದಿರುವ ಭರವಸೆಯಿರುವ ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದ ಒಂದು ಭಾಗವನ್ನು 19 ಭಾಗ ಗಾತ್ರದ ನೀರಿನಲ್ಲಿ ಸೇರಿಸಿ ಒಳ್ಳೆಯ ಕ್ರಿಮಿನಾಶಕವನ್ನು ತಯಾರಿಸಬಹುದು. ಇಂತಹ ದ್ರಾವಣ ಗಳು ತಮ್ಮ ಸಾಮರ್ಥ್ಯವನ್ನು ಬಹುಕಾಲ ಉಳಿಸಿಕೊಳ್ಳದಿರುವ ಕಾರಣ, ಅವಶ್ಯಕತೆ ಉಂಟಾದಾಗ ಇವುಗಳನ್ನು ಮೂಲ ದ್ರಾವಣಗಳಿಂದ ತಯಾರಿಸಿಕೊಳ್ಳಬೇಕು.

ಹೊಗೆಯಾಡಿಸುವಿಕೆ: ಕಾವುಕೊಡುವ ಯಂತ್ರಗಳಲ್ಲಿ ಹೊಗೆಯಾಡಿಸುವ ಮುಖ್ಯ ಉದ್ದೇಶಗಳೆಂದರೆ, ಯಂತ್ರದೊಳಗಿನ ಸೂಕ್ಷ್ಮಜೀವಾಣುಗಳನ್ನು ಕೊಲ್ಲುವುದು, ಹೊಸ ದಾಗಿ ಮೊಟ್ಟೆಯೊಡೆದು ಬಂದ ಮರಿಗಳಲ್ಲಿ ಸೋಂಕನ್ನು ಕಡಮೆಮಾಡುವುದು ಮತ್ತು ಮರಿಮಾಡುವ ಇತರ ಜಾಗಗಳಿಗೆ ಇದರ ಹರಡುವಿಕೆಯನ್ನು ತಡೆಗಟ್ಟುವುದು. ಸಾಮಾನ್ಯ ಅಹಿತಕರ ಗುಣದ್ದಾದಾಗ್ಯೂ ಸಹ ಫಾರ್ಮಾಲ್ಡಿಹೈಡ್ ಅನಿಲ ಈ ಮೇಲೆ ಹೇಳಿದ ಉದ್ದೇಶಗಳಿಗೆ ಅತ್ಯಂತ ಪ್ರಭಾವಶಾಲಿ ಹಾಗೂ ಅತ್ಯಂತ ಮಿತವ್ಯಯಕಾರಿ ಅನಿಲವಾಗಿ ಉಳಿದಿದೆ.

ಫಾರ್ಮಲಿನ್ (ಇದು ಫಾರ್ಮಾಲ್ಡಿಹೈಡ್ ಅನಿಲದ ಶೇಕಡ 40ರ ನೀರಿನಲ್ಲಿನ ದ್ರಾವಣ) ಮತ್ತು ಪೊಟಾಸಿಯಂ ಪರ್‌ಮ್ಯಾಂಗನೇಟ್ ಹರಳುಗಳಂತಹ ಎರಡು ಸಾಮಾನ್ಯ ಪದಾರ್ಥಗಳ ನಡುವಣ ಕ್ರಿಯೆಯಿಂದ ಫಾರ್ಮಾಲ್ಡಿಹೈಡ್ ಅನಿಲದ ಹೊಗೆಯಾಡುವಿಕೆಯನ್ನು ಪಡೆಯಬಹುದು. ಈ ಎರಡೂ ಪದಾರ್ಥಗಳನ್ನು ರಾಸಾಯನ ಔಷಧ ವ್ಯಾಪಾರಿಯಿಂದ ಪಡೆಯಬಹುದು ಮತ್ತು ಇವುಗಳನ್ನು ಸಾಕಾಣಿಕಾ ಕೇಂದ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಿರಪಾಯಕರವಾಗಿ ಸುಲಭವಾಗಿಡ ಬಹುದು. ಫಾರ್ಮಲಿನ್ ಗಾಜಿನ ಮುಚ್ಚಳವಿರುವ ಸೀಸೆಗಳಲ್ಲಿ ತೀಕ್ಷ್ಣವಾದ ಬೆಳಕಿನಿಂದ ದೂರವಾಗಿ ತಂಪಾದ ಕಡೆ ದಾಸ್ತಾನು ಮಾಡಬೇಕು; ಕಪಾಟು ಈ ಕೆಲಸಕ್ಕೆ ಉತ್ತಮ. ಪೊಟಾಸಿಯಂ ಪರ್‌ಮ್ಯಾಂಗನೇಟ ಕೂಡ ಅಗಲವಾದ ಬಾಯಿರುವ ಮುಚ್ಚಳಯುಕ್ತ ಸೀಸೆಗಳಲ್ಲಿ ಕಪಾಟಿನಲ್ಲಿಡಬೇಕು. ದಟ್ಟಬಣ್ಣದ ಸೀಸೆಯಾದರೆ ಉತ್ತಮ.

ಈ ಎರಡೂ ಪದಾರ್ಥಗಳನ್ನು ಬೆರೆಸಿದ್ದಾದರೆ ತೀವ್ರ ಪ್ರತಿಕ್ರಿಯೆ ಉಂಟಾಗು ತ್ತದೆ ಮತ್ತು ದಟ್ಟ ಮೇಘಗಳಂತೆ ಫಾರ್ಮಾಲ್ಡಿಹೈಡ್ ಅನಿಲ ಬಿಡುಗಡೆಯಾಗು ತ್ತದೆ. ಪ್ರತಿಕ್ರಿಯೆ ಹೊಂದುತ್ತಿರುವ ಪದಾರ್ಥಗಳು ಸಿಡಿದಾಗಲಿ ಅಥವಾ ಸಾಂದ್ರ ಧೂಮವನ್ನು ಉಸಿರಾಡುವುದರಿಂದಾಗಲಿ ಕೆಲಸಗಾರನಿಗೆ ಯಾವರೀತಿಯ ಅಪಾಯವೂ ಉಂಟಾಗದಂತೆ ಎಚ್ಚರವಹಿಸಬೇಕು. ಉಪಯೋಗಿಸಬೇಕಾದ ಫಾರ್ಮಲಿನ್ ಮತ್ತು ಪೊಟಾಸಿಯಂ ಪರ್‌ಮ್ಯಾಂಗನೇಟ್‌ಗಳ ಪರಿಮಾಣ ಕಾವುಕೊಡುವ ಯಂತ್ರದ ಗಾತ್ರ ಮತ್ತು ಧೂಮದ ಅಪೇಕ್ಷಣೀಯ ತೀಕ್ಷ್ಣತೆಯನ್ನವಲಂಬಿಸುತ್ತದೆ. ಕಾವುಕೊಡುವ ಯಂತ್ರದ 100 ಘನಅಡಿ ಜಾಗ ಸಾಮಾನ್ಯ ನಿಯತ ಹೊಗೆಯಾಡುವಿಕೆಗೆ ಕೆಳಕಂಡ ಪ್ರಮಾಣ ಅವಶ್ಯಕ:

ಫಾರ್ಮಲಿನ್	...	$1\frac{1}{2}$ ಔನ್ಸ್ (ದ್ರಾವಕ)
ಪೊಟಾಸಿಯಂ ಪರ್‌ಮ್ಯಾಂಗನೇಟ್	...	1 ಔನ್ಸ್

ರೋಗದ ಬಗ್ಗೆ ಅನುಮಾನ ಬಂದಾಗ ಅಥವಾ ನಿಶ್ಚಯವಾದಾಗ ಮೇಲೆ ಹೇಳಿದ ತೀಕ್ಷ್ಣತೆಯ ಮೂರು ನಾಲ್ಕು ಪಟ್ಟು ತೀಕ್ಷ್ಣತೆಯನ್ನು ಉಪಯೋಗಿಸ ಬಹುದು.

ಗಾಳಿ ಪ್ರವಾಹ ಕ್ರಮದಲ್ಲಿ ಅನುಕೂಲಕರವಾದ ಸ್ಥಾನದಲ್ಲಿ ಧೂಮ ಸಮನಾಗಿ ಹಂಚಿಕೆಯಾಗುವಂತೆ ಪಂಖದ ಸಮೀಪದಲ್ಲಿ ಫಾರ್ಮಾಲ್ಡಿಹೈಡ್ ಅನಿಲವನ್ನು ಬಿಡುಗಡೆ ಮಾಡಬೇಕು. ಜಾಗದ ಅನುಕೂಲತೆಯಿರುವ ಕಡೆ, ತೂಕಮಾಡಿಯೋ ಅಥವಾ ಅಳತೆಮಾಡಿಯೋ ಪೊಟಾಸಿಯಂ ಪರ್‌ಮ್ಯಾಂಗನೇಟ ಎನಾಮೆಲ್‌ನ ಬೋಗುಣಿ ಯಲ್ಲಿಟ್ಟು, ಇದನ್ನು ಕಾವುಕೊಡುವ ಯಂತ್ರದೊಳಗಿಟ್ಟನಂತರ ಬೇಕಾದಷ್ಟು ಫಾರ್ಮಲಿನ್ ಸೇರಿಸಿ ಕೂಡಲೇ ಬಾಗಿಲನ್ನು ಮುಚ್ಚುವುದು ಅತಿ ಸುಲಭವಾದ ಕ್ರಮ.

ಫಾರ್ಮಲಿನ್ ಬಳಸುವ ವ್ಯಕ್ತಿ ಕೈಗವಸುಗಳನ್ನು ಹಾಕಿಕೊಳ್ಳುವುದು ಉತ್ತಮ. ಏಕೆಂದರೆ ಇದು ಕೆಲವು ಸಾರಿ ಉರಿಯುವ ಹುಣ್ಣುಗಳನ್ನುಂಟುಮಾಡುತ್ತದೆ. ಈ ಮಿಶ್ರಣವನ್ನು ಕಾವುಕೊಡುವ ಯಂತ್ರದೊಳಗಿಟ್ಟ ಮೇಲೆ ಬಾಗಿಲಿಗೆ ಬೀಗ ಹಾಕುವುದು ಮತ್ತು ಸರಿಯಾದ ಸಮಯಕ್ಕೆ ಮೊದಲು ತೆಗೆಯುವುದರ ವಿರುದ್ಧ ಮುಂಜಾಗರೂಕತೆಯೂ ಅವಶ್ಯಕ, ಅನಿಲವು ಬಹುಬೇಗ ಉತ್ಪತ್ತಿಯಾಗುತ್ತದೆ ಮತ್ತು ಕೆಲಸಗಾರನ ಕಣ್ಣುಮೂಗುಗಳಿಗೆ ತೀವ್ರತರವಾದ ಉರಿತವನ್ನುಂಟುಮಾಡುವ ಸಾಧ್ಯತೆಯಿದೆ. ಹೆಚ್ಚಿನ ಸಾರೀಕರಣಗಳಲ್ಲಿ ಕೆಲಸಮಾಡುವಾಗ ಮುಸುಕನ್ನು ಧರಿಸುವುದು ಒಳ್ಳೆಯದು. ಮೊಟ್ಟೆಗಳನ್ನು ಕಾವಿಗಿಟ್ಟ 24 ರಿಂದ 96 ಘಂಟೆಗಳೊಳಗೆ ಹೊಗೆಯಾಡಿಸಬಾರದು ಮತ್ತು ಆಗತಾನೆ ಹೊರಬಂದ ಮರಿಗಳು ಅಥವಾ ಹೊರಬರುತ್ತಿರುವ ಮರಿಗಳನ್ನು ಧೂಮಕ್ಕೆ ಗುರಿಮಾಡಬಾರದು.

ಕಾವುಕೊಡುವ ಯಂತ್ರವನ್ನು ಸಮಮಟ್ಟಕ್ಕೆ ತರುವುದು: ಕಾವುಕೊಡುವ ಯಂತ್ರವನ್ನು ಒಂದು ಜಾಗದಲ್ಲಿಟ್ಟಾಗ ಅದು ಸರಿಯಾದ ಸಮಮಟ್ಟದಲ್ಲಿರಬೇಕು. ಬಿಸಿನೀರಿನ ಯಂತ್ರಗಳಲ್ಲಿ ಈ ವಿವರಕ್ಕೆ ಗಮನಕೊಡದಿದ್ದರೆ ನೀರಿನ ಹಂಚಿಕೆ ಪ್ರಭಾವಿತವಾಗುತ್ತದೆ. ರಸಮಟ್ಟದ ಸಹಾಯದಿಂದ ಯಂತ್ರವನ್ನು ಮಟ್ಟಮಾಡಬಹುದು. ಯಂತ್ರವನ್ನುಸರಿಯಾದ ಮಟ್ಟಕ್ಕೆ ತರಲು ಸರಿಹೊಂದುವ ಗಾತ್ರದ ಮರದ ಚೆಕ್ಕೆಗಳನ್ನು ಅದರ ಕಾಲುಗಳ ಕೆಳಗೆ ಇಡಬಹುದು.

ಕಾವುಕೊಡುವ ಯಂತ್ರದ ನಿಯಂತ್ರಣ: ಕಾವುಕೊಡುವ ಯಂತ್ರ ಹೊಸದಾಗಲಿ ಹಳೆಯದಾಗಲಿ ಮರಿಮಾಡುವ ಕಾಲದ ಪ್ರಾರಂಭದಲ್ಲಿ ಯಂತ್ರವನ್ನು ಪರೀಕ್ಷೆಗಾಗಿ ಸ್ವಲ್ಪಕಾಲ ನಡೆಸುವುದು ಉತ್ತಮ. ಉಷ್ಣಮಾಪಕವನ್ನು ಹೋಲಿಕೆಗೆ ಆಧಾರವಾದ ಆದರ್ಶವಾದ ಉಷ್ಣಮಾಪಕದೊಂದಿಗೆ ಹೋಲಿಸುವುದರ ಮೂಲಕ ಎಚ್ಚರಿಕೆಯಿಂದ ಪರೀಕ್ಷಿಸಬೇಕು. ದೀಪದ ಬರ್ನರ್‌ದಿಂದ ಧೂಳು ಮತ್ತು ಸೀದುಹೋದ ಪದಾರ್ಥಗಳನ್ನು ತಿಕ್ಕಿ ತೆಗೆದು, ನಂತರ ತೊಳೆಯುವ ಸೋಡ ದ್ರಾವಣದಲ್ಲಿ ಕುದಿಸುವುದರಿಂದ ಚೆನ್ನಾಗಿ ಸ್ವಚ್ಛಮಾಡಬೇಕು. ಕಾವುಕೊಡುವ ಕಾಲ ಪೂರ್ತಿಗೆ ಸಾಕಾಗುವಂತಹ ಉದ್ದವಾದ ಹೊಸದಾದ ಒಳ್ಳೆಯ ಬತ್ತಿಗಳನ್ನು ಗುಂಡನೆಯ ಉರಿಬರಲು ಮೂಲೆಗಳನ್ನು ಕತ್ತರಿಸಿ ಉಪಯೋಗಿಸಬೇಕು. ಚಿಮಣಿಯನ್ನು ಸ್ವಚ್ಛಮಾಡಬೇಕು ಮತ್ತು ಅದು ಭದ್ರವಾಗಿ ಕೂರಬೇಕು. ನಂತರ ದೀಪವನ್ನು ಎಣ್ಣೆಯಿಂದ ತುಂಬಿಸಬೇಕು

ಮತ್ತು ಮೊಟ್ಟೆಗಳನ್ನಿಡುವ ಮೊದಲು ಯಂತ್ರವನ್ನು ಪರೀಕ್ಷೆಗಾಗಿ ಸ್ವಲ್ಪಕಾಲ ನಡೆಸಬೇಕು. ಶಾಖ ಸಮಸ್ಥಿತಿ ರಚನೆಯನ್ನು ತಯಾರಕರ ಶಿಫಾರಸ್ಸಿನ ಮೇರೆಗೆ ನಿಯಂತ್ರಿಸಬೇಕು, ಮತ್ತು ಎಲ್ಲವೂ ಸರಿಯಾಗಿ ಮರಿಮಾಡಲು ತಯಾರಾಗಿದೆ ಎಂದು ನಿಶ್ಚಯ ಮಾಡಿಕೊಳ್ಳಲು ಕನಿಷ್ಠ 24 ಗಂಟೆಗಳ ಕಾಲ ಯಂತ್ರವನ್ನು 103°F ಶಾಖದಲ್ಲಿ ನಡೆಸಬೇಕು.

ಮೊಟ್ಟೆಗಳನ್ನಿಡುವುದು: ತಟ್ಟೆಗಳಲ್ಲಿ ಮೊಟ್ಟೆಗಳನ್ನಿಡುವಾಗ ಮಟ್ಟ ವಿಧದ ಕಾವು ಕೊಡುವ ಯಂತ್ರಗಳಲ್ಲಿ (ಚಿತ್ರ 44, 49) ಮೊಟ್ಟೆಗಳನ್ನು ಅವುಗಳ ಪಾರ್ಶ್ವದ ಮೇಲೆಯೂ, ಅಲಮಾರು ರೀತಿಯ ಯಂತ್ರಗಳಲ್ಲಿ (ಚಿತ್ರ 50) ಅವುಗಳ ಅಗಲವಾದ ತುದಿ ಮೇಲೆ ಬರುವಂತೆ ಲಂಬವಾಗಿಯೂ, ಸಾಲುಗಳಲ್ಲಿ ಜೋಡಿಸುವುದು ಅತ್ಯು



ಚಿತ್ರ 49: ಚಪ್ಪಟೆ ಕಾವುಕೊಡುವ ಯಂತ್ರದಲ್ಲಿ ಮೊಟ್ಟೆಗಳನ್ನು ಅವುಗಳ ಪಾರ್ಶ್ವಗಳ ಮೇಲೆ ಜೋಡಿಸುತ್ತಿರುವುದು.

ತ್ತಮ. ತಟ್ಟೆಯಲ್ಲಿ ಒಂದು ಪದರಕ್ಕಿಂತ ಹೆಚ್ಚಿಗೆ ಮೊಟ್ಟೆಗಳನ್ನಿಡಬಾರದು. ಇಲ್ಲದೇ ಹೋದರೆ ಕೆಲವು ಮೊಟ್ಟೆಗಳು ಉಳಿದವಕ್ಕಿಂತ ಹೆಚ್ಚಿನ ಶಾಖವನ್ನು ಪಡೆಯುತ್ತವೆ. ಮೊಟ್ಟೆಗಳನ್ನು ಯಂತ್ರದಲ್ಲಿಟ್ಟನಂತರ, ಎಲ್ಲವೂ ಸರಿಯಾಗಿ ಹೊಂದಿಕೆಯಾಗಿವೆಯೇ



ಚಿತ್ರ 50: ಅಲಮಾರು ರೀತಿ ಕಾವುಕೊಡುವ ಯಂತ್ರದ ತಟ್ಟೆಗಳಲ್ಲಿ ಮೊಟ್ಟೆಗಳನ್ನು ಅಗಲ ತುದಿ ಮೇಲೆ ಬರುವಂತೆ ಜೋಡಿಸುತ್ತಿರುವುದು.

ಯೆಂಬುದನ್ನು ಖಚಿತಪಡಿಸಿಕೊಳ್ಳಲು ಮೊದಲಿನ 12 ಗಂಟೆಗಳು ಸೂಕ್ಷ್ಮವಾಗಿ ಪರೀಕ್ಷಿಸಲು ಅನುಕೂಲವಾಗುವಂತೆ ಯಂತ್ರವನ್ನು ಬೆಳಿಗ್ಗೆ ಪ್ರಾರಂಭಿಸುವುದು ಒಳ್ಳೆಯದು.

ಶಾಖ ನಿಯಂತ್ರಣ: ಹೇಂಟೆಯ ಸಾಮಾನ್ಯ ಶಾಖ 105°F ನಿಂದ 107°F ವರೆಗಿರುತ್ತದೆ ಮತ್ತು ಸ್ವಲ್ಪಮಟ್ಟಿಗೆ ಹೇಂಟೆಯ ಓಡಾಟವನ್ನವಲಂಬಿಸುತ್ತದೆ. ಮರಿಯಾಗುತ್ತಿರುವ ಮೊಟ್ಟೆಯ ಮಧ್ಯದ ಅತ್ಯುತ್ತಮ ಶಾಖ 100°F ಮತ್ತು ಇದನ್ನು ಅಲಮಾರು ವಿಧ ಕಾವುಕೊಡುವ ಯಂತ್ರದ ಅತ್ಯುತ್ತಮ ಶಾಖವೆಂದು ಶಿಫಾರಸ್ಸು ಮಾಡಲಾಗಿದೆ. ಎಲ್ಲ ಮೊಟ್ಟೆಗಳನ್ನೂ ಸಮನಾದ ಶಾಖ ಸುತ್ತುವರಿಯುವುದರಿಂದ ಈ ರೀತಿಯ ಕಡಮೆ ಶಾಖ ಅಪೇಕ್ಷಣೀಯ. ಕಾವುಕೊಡುವ ಮನೋವೃತ್ತಿಯ ಹೇಂಟೆಯ ಕೆಳಗೆ ಸ್ವಾಭಾವಿಕವಾಗಿ ಮರಿಮಾಡುವಾಗ, ಮೊಟ್ಟೆಯ ಮೇಲಿನ

ಭಾಗ 102°F ನಿಂದ 103°F ಶಾಖವನ್ನು ತಲುಪಬಹುದು. ಆದರೆ ಮೊಟ್ಟೆಯ ಮಧ್ಯದಲ್ಲಿನ ಶಾಖ 100°F ಗಿಂತ ಹೆಚ್ಚಿಗೆ ಆಗುವುದಿಲ್ಲ.

ಮಟ್ಟವಾದ ವಿಧದ ಕಾವುಕೊಡುವ ಯಂತ್ರಗಳಲ್ಲಿ ಉಷ್ಣಮಾಪಕವು ತೋರಿಸುವ ಶಾಖವು, ಯಂತ್ರದ ರಚನೆ ಮತ್ತು ಮೊಟ್ಟೆಗಳ ಮೇಲೆ ಉಷ್ಣಮಾಪಕದ ಬುರುಡೆಯ ಎತ್ತರ ಇವುಗಳನ್ನು ಅವಲಂಬಿಸುತ್ತದೆ. ಕಾವುಕೊಡುವ ಮೊದಲನೇ ವಾರದಲ್ಲಿ 101°F, ಎರಡನೇ ವಾರದಲ್ಲಿ 102°F ಮತ್ತು ಮೂರನೇ ವಾರದಲ್ಲಿ 103°F ಶಾಖ ಅತಿ ತೃಪ್ತಿಕರವಾದ ಫಲಿತಾಂಶಗಳನ್ನು ಕೊಡುತ್ತದೆಯೆಂದು ಅನುಭವಗಳು ತೋರಿಸಿವೆ. ಯಾವುದೇ ಸಮಯದಲ್ಲೂ ಶಾಖವು 104°F ದಾಟದಂತೆ ಎಚ್ಚರ ವಹಿಸಬೇಕು. ಉಷ್ಣಮಾಪಕದ ಬುರುಡೆ ಮೊಟ್ಟೆಗಳ ಮಟ್ಟದಲ್ಲೇ ಇರಬೇಕು ಮತ್ತು ಕಾವುಕೊಡುವ ಯಂತ್ರದ ಬಾಗಿಲಿನ ಗಾಜಿನಿಂದ ನೋಡಿ ಶಾಖವನ್ನು ಗುರುತಿಸಿ ಕೊಳ್ಳುವಂತೆ ಇಟ್ಟಿರಬೇಕು.

ವಾತಾಯನ ನಿಯಂತ್ರಣ: ಕಾವುಕೊಡುವ ಯಂತ್ರವನ್ನು ಸರಿಯಾದ ವಾತಾಯನ ಗಳಿರುವ ಕೊಠಡಿಯಲ್ಲಿಡುವುದರ ಮೂಲಕ ಬಿರುಸಾದ ಗಾಳಿ ಮೊಟ್ಟೆಗಳ ಮೇಲಾಗಲಿ, ಮೂಲಕವಾಗಲಿ ಬೀಸುವುದನ್ನು ತಡೆಗಟ್ಟಬೇಕು. ಚಿಪ್ಪಿನೊಳಗೆ ಭ್ರೂಣ ಬೆಳೆಯುವಾಗ ಕೆಟ್ಟ ಅನಿಲಗಳು ಬಿಡುಗಡೆಯಾಗುತ್ತವೆ; ಈ ಅನಿಲಗಳು ಬಿಡುಗಡೆಯಾಗುವ ಮುಖ್ಯ ಮಾರ್ಗ ಗಾಳಿಕೋಶವಿರುವ ಮೊಟ್ಟೆಯ ಅಗಲವಾದ ತುದಿಯ ಮೊಟ್ಟೆ ಚಿಪ್ಪು. ಕಾವು ಕೊಡುವುದು ಮುಂದುವರಿದಂತೆ ಭ್ರೂಣದ ಬೆಳವಣಿಗೆಯಲ್ಲಿ ಕ್ರಿಯೆಯು ಹೆಚ್ಚಿ ಕೆಟ್ಟ ಗಾಳಿ ಹೊರಗೆ ಹೋಗಿ ಒಳ್ಳೆಯ ಗಾಳಿ ಒಳಗೆ ಬರುವ ಅವಶ್ಯಕತೆ ಹೆಚ್ಚುತ್ತದೆ.

ತೇವಾಂಶ ನಿಯಂತ್ರಣ: ತೇವಾಂಶವಿಲ್ಲದಿರುವುದು ಬೆಳೆಯುತ್ತಿರುವ ಭ್ರೂಣ ಒಣಗು ವಂತೆ ಮಾಡುತ್ತದೆ ಮತ್ತು ಇದರಿಂದಾಗಿ ಚಿಪ್ಪು ಒಡೆದು ಮರಿ ಹೊರಬರಲು ಅಶಕ್ಯವಾಗುತ್ತದೆ. ಮರಿಗಳು ಚಿಪ್ಪು ಒಡೆದು ಹೊರಬರುವಾಗ ಸಾಕಷ್ಟು ತೇವಾಂಶ ಒದಗಿಸಲು ವಿಶೇಷ ಎಚ್ಚರವಹಿಸಬೇಕು. ಇಲ್ಲದಿದ್ದರೆ ಚಿಪ್ಪು ಒಣಗಿ ಗಟ್ಟಿಯಾಗಿ ಮರಿಹೊರಬರಲು ಅಡ್ಡಿಯುಂಟಾಗುತ್ತದೆ. ಬಿಸಿನೀರಿನ ಯಂತ್ರಗಳಿಗಿಂತ ಬಿಸಿಗಾಳಿಯ ಯಂತ್ರಗಳಲ್ಲಿ ಹೆಚ್ಚಿನ ತೇವಾಂಶವನ್ನು ಆಗಾಗ್ಗೆ ಒದಗಿಸುವ ಅವಶ್ಯಕತೆ ಹೆಚ್ಚು. ಕಾವುಕೊಡುವ ಕೊಠಡಿಯ ವಾತಾವರಣದಲ್ಲಿ ಹೆಚ್ಚಿನ ತೇವಾಂಶಮಟ್ಟವನ್ನು ಉಳಿಸಿ ಕೊಳ್ಳುವುದರಿಂದ, ಮೊಟ್ಟೆಗಳನ್ನು ತಿರುಗಿಸುವ ಸಮಯದಲ್ಲಿ ಬಿಸಿನೀರನ್ನು ಸಿಂಪಡಿಸುವು ದರಿಂದ ಅಥವಾ ಯಂತ್ರದ ಪೋಷಕ ವಿಭಾಗದಲ್ಲಿ ಒದ್ದೆ ಮರಳನ್ನಿಡುವುದರಿಂದ ತೇವಾಂಶವನ್ನೊದಗಿಸಬಹುದು.

ಮೊಟ್ಟೆಯ ಅಗಲವಾದ ತುದಿಯಲ್ಲಿರುವ ಗಾಳಿಕೋಶದ ಗಾತ್ರವು, ಒದಗಿಸಿದ ತೇವಾಂಶ ಮತ್ತು ವಾತಾಯನದ ಅತ್ಯುತ್ತಮ ಅಳತೆಯನ್ನೊದಗಿಸುತ್ತದೆ. ಇದು ಕಾವುಕೊಡುವ ಕಾಲದ ಪ್ರಾರಂಭದಲ್ಲಿ ಅತಿ ಚಿಕ್ಕದಾಗಿ ಸುಮಾರು $\frac{1}{8}$ ಅಂಗುಲ ಆಳ

ವಾಗಿರುತ್ತದೆ. ಮೂರನೆ ದಿನದ ಕೊನೆಯ ಹೊತ್ತಿಗೆ ಇದು $\frac{1}{4}$ ಅಂಗುಲ ಆಳವಾಗಿರಬೇಕು; ಎಂಟನೆಯ ದಿನ ಸುಮಾರು $\frac{3}{8}$ ಅಂಗುಲ, ಹದಿನೈದನೆಯ ದಿನ ಸುಮಾರು $\frac{5}{8}$ ಅಂಗುಲ ಮತ್ತು ಹತ್ತೊಂಬತ್ತನೆಯ ದಿನ $\frac{3}{4}$ ಅಂಗುಲಕ್ಕಿಂತ ಸ್ವಲ್ಪ ಹೆಚ್ಚಿಗೆಯಿರಬೇಕು, ಗಾಳಿಕೋಶದ ಗಾತ್ರವನ್ನು 'ಬೆಳಕಿನ ಪರೀಕ್ಷೆ'ಯಿಂದ ತಿಳಿದುಕೊಳ್ಳಬಹುದು ಮತ್ತು ಈ ಆಳಗಳಲ್ಲಿ ಹೆಚ್ಚಿನ ವ್ಯತ್ಯಾಸವೇನಾದರೂ ಕಂಡುಬಂದರೆ ತೇವಾಂಶದ ಪ್ರಮಾಣವನ್ನು ತಕ್ಕಂತೆ ಬದಲಾಯಿಸಬೇಕು.

ದೀಪದ ಬಗ್ಗೆ ಗಮನ: ಕನಿಷ್ಠ ದಿನಕ್ಕೆ ಒಂದು ಸಾರಿ ದೀಪಕ್ಕೆ ಉರುವಲನ್ನು (ಸೀಮೆಎಣ್ಣೆ) ತುಂಬಿ ಬತ್ತಿಯನ್ನು ಸರಿಪಡಿಸಬೇಕು. ಈ ಕೆಲಸಗಳನ್ನು ಬೆಳಗ್ಗೆ ಮಾಡಬೇಕು. ಏಕೆಂದರೆ ಏನಾದರೂ ಬದಲಾವಣೆಯ ಅವಶ್ಯಕತೆ ಬಿದ್ದರೆ ಅದನ್ನು ದಿನದಲ್ಲಿ ಮಾಡಬಹುದು. ಹೊಗೆ ಬರುವುದನ್ನು ತಡೆಗಟ್ಟಲು ದೀಪವನ್ನು ಹೊರತೆಗೆಯುವ ಮೊದಲು ಉರಿಯನ್ನಿಳಿಸಬೇಕು ಮತ್ತು ಅದಕ್ಕೆ ಸೀಮೆಎಣ್ಣೆ ತುಂಬುವ ಮೊದಲು ಆರಿಸಬೇಕು. ಎಣ್ಣೆ ಯಾವಾಗಲೂ ಒಳ್ಳೆಯ ಗುಣಮಟ್ಟದ್ದಾಗಿರಬೇಕು. ಸೀಮೆಎಣ್ಣೆಯನ್ನು ತುಂಬುವ ಮೊದಲು ದೀಪವನ್ನು ತಣ್ಣಗೆ ಮಾಡಬೇಕು.

ಗುರುತಿನ ಮಟ್ಟಕ್ಕೆ ಸಮನಾಗಿ ಬರುವಂತೆ ಬತ್ತಿಯನ್ನು ಎತ್ತರಿಸಬೇಕು ಮತ್ತು ಕರಟಿಹೋಗಿರುವ ಭಾಗಗಳನ್ನು ಬೆಂಕಿಕಡ್ಡಿಯಿಂದ ಕೆರೆದೋ ಅಥವಾ ಒದ್ದೆ ಬಟ್ಟೆಯಿಂದ ಒರಸಿಯೋ ಹೋಗಲಾಡಿಸಬೇಕು. ಕೋಚುಕೋಚಾದ ಅಥವಾ ಹೊಗೆಯಿಂದ ಕೂಡಿದ ಉರಿಯನ್ನು ಕೊಡುವಂತೆ ಬತ್ತಿಯ ಎಳೆಗಳು ಹೊರಬಂದಿರುವ ಸಂದರ್ಭಗಳನ್ನು ಬಿಟ್ಟು ಬೇರೆ ಯಾವ ಸಂದರ್ಭದಲ್ಲೂ ಬತ್ತಿಯನ್ನು ಕತ್ತರಿಯಿಂದ ಒಪ್ಪಮಾಡಬಾರದು. ಮಧ್ಯಮಗಾತ್ರದ ಉರಿ ಅತ್ಯಂತ ಅಪೇಕ್ಷಣೀಯ. ಮರಿಯಾಗುವುದನ್ನು ಕೆಡಿಸುವಂತೆ ಮೊಟ್ಟೆಗಳ ಮೇಲೆ ಎಣ್ಣೆ ಬೀಳುವುದನ್ನು ತಡೆಗಟ್ಟಲು ಯಾವಾಗಲೂ ಮೊಟ್ಟೆಗಳನ್ನು ನಿರ್ವಹಿಸಿದ ನಂತರ ದೀಪದ ನಿರ್ವಹಣೆ ಕಡೆಗೆ ಗಮನಕೊಡಬೇಕು.

ಮೊಟ್ಟೆಗಳನ್ನು ತಿರುಗಿಸುವುದು: ಭ್ರೂಣವು ಚಿಪ್ಪಿಗೆ ಅಂಟಿಕೊಳ್ಳುವುದನ್ನು ತಡೆಗಟ್ಟಲು ಮೊಟ್ಟೆಗಳನ್ನು ತಿರುಗಿಸುವುದು ಅವಶ್ಯಕ. 12 ಗಂಟೆಗಳ ಅಂತರದಲ್ಲಿ 24 ಗಂಟೆಕಾಲದಲ್ಲಿ ಎರಡು ಸಾರಿ ತಿರುಗಿಸುವುದು ಸಾಮಾನ್ಯ ಅಭ್ಯಾಸವಾಗಿತ್ತು. 24 ಗಂಟೆಗಳಲ್ಲಿ ಆರು ಅಥವಾ ಎಂಟು ಬಾರಿಯಷ್ಟು ಹೆಚ್ಚಿಗೆ ತಿರುಗಿಸುವುದರಿಂದ ಸ್ವಲ್ಪಮಟ್ಟಿಗೆ ಉತ್ತಮ ಪ್ರತಿಫಲಗಳು ದೊರೆಯುವುದನ್ನು ಇತ್ತೀಚಿನ ಪರಿಶೀಲನೆಗಳು ತೋರಿಸಿವೆ. ತಿರುಗಿಸುವುದಕ್ಕೆ ಯಾಂತ್ರಿಕ ಸಲಕರಣೆಗಳಿರುವ ಯಂತ್ರಗಳಲ್ಲಿ ಇದರ ಆಚರಣೆ ಸುಲಭ. ಮೊಟ್ಟೆಗಳನ್ನು ಕೈನಿಂದ ತಿರುಗಿಸುವ ಕಡೆಗಳಲ್ಲಿ ಕನಿಷ್ಠ ಬೆಳಗ್ಗೆ ಸಂಜೆ ತಿರುಗಿಸುವ ಅಭ್ಯಾಸವನ್ನು ಕಟ್ಟುನಿಟ್ಟಾಗಿ ಗಮನಿಸಬೇಕು. ಇದನ್ನು ಮಾಡಲು ತಟ್ಟೆಗಳನ್ನು ಯಂತ್ರದಿಂದ ತೆಗೆಯಬೇಕು. ನಂತರ ಮುಂದಿನ ಒಂದೆರಡು ಸಾಲಿನ ಮೊಟ್ಟೆಗಳನ್ನು ತೆಗೆದು ಹಿಂದಕ್ಕಿಡಬೇಕು. ಆವೆಲ್ಲವುಗಳ ಸ್ಥಾನ ಸಾಕಷ್ಟು ಬದಲಾವಣೆಯಾಗುವಂತೆ ಮೊಟ್ಟೆಗಳನ್ನು ಅಂಗೈನಿಂದ ಮುಂದಕ್ಕೆ ಉರುಳಿಸಬಹುದು.

ತಟ್ಟೆಗಳನ್ನು ಮೊದಲ ಜಾಗದಲ್ಲಿಡುವಾಗ ಕಾವುಕೊಡುವ ಯಂತ್ರದ ಬೇರೆ ಬೇರೆ ಭಾಗಗಳಲ್ಲಿರಬಹುದಾದ ಶಾಖದ ವ್ಯತ್ಯಾಸವನ್ನು ಸರಿಹೊಂದಿಸಲು ತಟ್ಟೆಯನ್ನು $\frac{1}{4}$ ಅಥವಾ $\frac{1}{3}$ ಸುತ್ತು ತಿರುಗಿಸಬೇಕು. ಮೊಟ್ಟೆಗಳನ್ನು ತಿರುಗಿಸುವಾಗ ಮತ್ತು/ಅಥವಾ ಅಲಮಾರಿನಿಂದಾಚೆ ಪರೀಕ್ಷಿಸುವಾಗ ಕಾವುಕೊಡುವ ಯಂತ್ರದ ಬಾಗಿಲು ಮುಚ್ಚಿರಬೇಕು.

ಮೊಟ್ಟೆಗಳನ್ನು ತಣ್ಣಗೆ ಮಾಡುವುದು: ತಿರುಗಿಸುವ ಕಾರ್ಯದ ಕಾಲದಲ್ಲಿ ಮೊಟ್ಟೆಗಳು ತಣ್ಣಗಾಗುವುದನ್ನು ಬಿಟ್ಟರೆ, ಉಳಿದಂತೆ ತಣ್ಣಗೆ ಮಾಡುವುದು ಯಾವ ವಿಶೇಷ ಬೆಲೆಯನ್ನೂ ಹೊಂದಿಲ್ಲವೆಂದು ಹೇಳುತ್ತಾರೆ. ದೊಡ್ಡ ಯಂತ್ರಗಳಲ್ಲಿರುವಂತೆ ತಿರುಗಿಸುವುದು ಯಾಂತ್ರಿಕವಾಗಿರುವ ಕಡೆ, ವಿಶೇಷವಾಗಿ ತಣ್ಣಗೆ ಮಾಡುವ ಅವಶ್ಯಕತೆಯಿಲ್ಲ. ಮೂರನೆಯ ದಿನದಿಂದ ಹದಿನೆಂಟನೆಯ ದಿನದವರೆಗೆ (ಅದೂ ಸೇರಿದಂತೆ) ತಿರುಗಿಸಬೇಕು.

ಮೊಟ್ಟೆಗಳ ಪರೀಕ್ಷೆ: ಸ್ವಾಭಾವಿಕ ಕಾವು ಕೊಡುವಿಕೆಯ ಕೆಳಗೆ ವಿವರಿಸಿದಂತೆ, ಯಂತ್ರದಲ್ಲಿ ಕಾವುಕೊಡುವ ಮೊಟ್ಟೆಗಳನ್ನೂ 7ನೇ ಮತ್ತು 14ನೆಯ ದಿನ 'ಬೆಳಕಿನ ಪರೀಕ್ಷೆ'ಗೆ ಒಳಪಡಿಸಬೇಕು. ಅಫಲೀಕೃತ ಮೊಟ್ಟೆಗಳನ್ನುತೆಗೆದು ಕುದಿಸಿ ಪುಡಿಮಾಡಿ ಕೋಳಿಮರಿಗಳಿಗೆ ಆಹಾರವಾಗಿ ಕೊಡಬಹುದು. ಸತ್ತ ಭ್ರೂಣ ಮತ್ತು ಮರಿಗಳನ್ನು ಪ್ರತಿ ಪರೀಕ್ಷೆಯಲ್ಲೂ ತೆಗೆದುಬಿಡಬೇಕು. ಇದು ಮರಿಯಾಗುವ ಸಮಯದಲ್ಲಿ ತಟ್ಟೆಯ ಮೇಲೆ ಹೆಚ್ಚಿನ ಜಾಗ ಒದಗಿಸುತ್ತದೆ ಮತ್ತು ಮರಿಯಾಗದಿರುವ ಮೊಟ್ಟೆಗಳಿಂದ ವಿಸರ್ಜಿಸಲ್ಪಟ್ಟ ಅನಿಲಗಳಿಂದ ಗಾಳಿ ಕಲುಷಿತವಾಗುವುದನ್ನು ತಪ್ಪಿಸುತ್ತದೆ.

ಮರಿಹೊರಬರುವಾಗಿನ ಗಮನ: 21 ದಿನಗಳು ಮುಗಿಯುವುದರೊಳಗಾಗಿ ಮರಿಗಳು ಚಿಪ್ಪು ಒಡೆದು ಹೊರಬಂದಿದ್ದರೆ ಸಾಮಾನ್ಯವಾಗಿ ಅದು ಒಳ್ಳೆಯ ಮರಿಯಾಗುವ ಸೂಚನೆ. ಚಿಪ್ಪು ಸೀಳುವಿಕೆಯೊಂದಿಗೆ ಕ್ರಿಯೆ ಹೆಚ್ಚಿದಂತೆಲ್ಲ ಶಾಖವು ಬಹಳವಾಗಿ ಏರಿ, ತೇವಾಂಶವು ಬಹುವಾಗಿ ಕುಗ್ಗುವ ಸಾಧ್ಯತೆಯಿದೆ. ಆದುದರಿಂದ ಈ ಸಮಯದಲ್ಲಿ ಉಷ್ಣಮಾಪಕವನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿರಬೇಕು. ಬಾಗಿಲ ಗಾಜಿನ ಮೇಲೆ ಮಂಜುಗಟ್ಟಿದಂತಿರುವುದು ಅಥವಾ ತೇವಾಂಶ ಘನೀಕರಿಸುವುದು ಸರಿಯಾದ ತೇವಾಂಶ ಸ್ಥಿತಿಯನ್ನು ಸೂಚಿಸುತ್ತದೆ.

19ನೆಯ ದಿನ ಪೋಷಕ ತಟ್ಟೆಯನ್ನಿಡಬೇಕು ಮತ್ತು ಮೊಟ್ಟೆ ತಟ್ಟೆಯ ಮುಂದಿನ ಬಾಯನ್ನು ತೆಗೆಯಬೇಕು. ಮರಿಯಾಗುವಿಕೆ ಸಂಪೂರ್ಣವಾಗುವವರೆಗೆ ಕಾವುಕೊಡುವ ಯಂತ್ರದ ಬಾಗಿಲನ್ನು ಮುಚ್ಚಿರಬೇಕು. ಮರಿ ಹೊರಬಂದ ಕೂಡಲೇ ಬೆಳಕಿನ ಕಡೆ ಮುಂದುವರಿದು ಪೋಷಕದೊಳಕ್ಕೆ ಬೀಳುತ್ತವೆ. ಮರಿಗಳಿಗೆ ಚಿಪ್ಪಿನಿಂದ ಹೊರಬರಲು ಸಹಾಯಮಾಡಬಾರದು. 22ನೆಯ ದಿನ ಮೊಟ್ಟೆ ತಟ್ಟೆಯನ್ನು ಹೊರತೆಗೆದು ಚಿಪ್ಪು ಮತ್ತು ಮರಿಯಾಗದಿರುವ ಅಥವಾ ಸತ್ತ ಮರಿಗಳೆಲ್ಲವನ್ನೂ ತೆಗೆದು ಸುಡಬೇಕು.

ಹೊಸದಾಗಿ ಹೊರಬಂದ ಮರಿಗಳ ಗಮನ: ಮೊಟ್ಟೆಯೊಡೆದು ಹೊರಬಂದ ಮರಿಗಳು ಕನಿಷ್ಠ 36 ಗಂಟೆಗಳ ಕಾಲ ಕಾವುಕೊಡುವ ಯಂತ್ರದೊಳಗೆ ಆಹಾರವಿಲ್ಲದೆ ಇರಬೇಕು. ಅವು ಪೂರ್ತಿಯಾಗಿ ಒಣಗಿ ಗರಿಮೂಡಿದ ಮೇಲೆ ಶಾಖವನ್ನು ನಿಧಾನವಾಗಿ ಕಡಮೆಮಾಡಬೇಕು ಮತ್ತು ಬಾಗಿಲುಗಳನ್ನು ಸ್ವಲ್ಪ ತೆಗೆಯುವುದರ ಮೂಲಕ ಹೆಚ್ಚಿನ ಗಾಳಿಯನ್ನು ಒಳಬಿಡಬೇಕು. ಮರಿಗಳನ್ನು 'ರಕ್ಷಕ'ಕ್ಕೆ ಬಿಡುವ ಮೊದಲು ಗಟ್ಟಿಮಾಡುವುದಕ್ಕಾಗಿ ಶಾಖವನ್ನು 93°F ಅಥವಾ 95°Fಗೆ ಇಳಿಸಬೇಕು. ಮರಿಗಳನ್ನು 'ರಕ್ಷಕ'ಕ್ಕೆ ಬದಲಾಯಿಸುವಾಗ ಕೆಳಮಟ್ಟದ ಶಾಖ ಅಥವಾ ಬೀಸುಗಾಳಿಯಿಂದ ತಣ್ಣಗಾಗುವುದನ್ನು ತಡೆಗಟ್ಟಲು ವಿಶೇಷ ಗಮನ ಅವಶ್ಯಕ. ಊನವಾದ ಅಥವಾ ಬಡಕಲಾಗಿರುವ ಮರಿಗಳನ್ನು ಈ ಸಮಯದಲ್ಲಿ ನಾಶಪಡಿಸಬೇಕು. ಏಕೆಂದರೆ ಅವು ಬಹುಕಾಲ ಬಾಳುವುದಿಲ್ಲ ಮತ್ತು ಅವುಗಳು ತಮ್ಮ ಪ್ರಾರಂಭಿಕ ಅನನುಕೂಲತೆಗಳನ್ನು ಎದುರಿಸಿ ಬದುಕಿದರೂ ಸಹ ಗಟ್ಟಿಮುಟ್ಟಾದ ಆರೋಗ್ಯವಂತ ಕೋಳಿಗಳಾಗಿ ಬೆಳೆಯುವುದಿಲ್ಲವಾದ್ದರಿಂದ ಯಾವಾಗಲೂ ತೊಂದರೆಯ ಮೂಲವಾಗಿರುತ್ತವೆ.

ಕಾವುಕೊಡುವ ತಂತ್ರದಲ್ಲಿನ ತಪ್ಪುಗಳು: ಕೃತಕ ಕಾವುಕೊಡುವಿಕೆಯಲ್ಲಿನ ವಿವಿಧ ದೋಷಗಳು, ಅವುಗಳ ಪರಿಣಾಮ ಮತ್ತು ಅವುಗಳನ್ನು ಸರಿಪಡಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು 11ನೆಯ ಕೋಷ್ಟಕದಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ:

ಕೋಷ್ಟಕ 11

ಕೃತಕ ಕಾವುಕೊಡುವಿಕೆಯಲ್ಲಿ ದೋಷಗಳು, ಅವುಗಳ ಪರಿಣಾಮ ಹಾಗೂ ಪರಿಹಾರಗಳು

ತೊಂದರೆ	ಇರಬಹುದಾದ ಕಾರಣ	ಅವಶ್ಯಕ ಕ್ರಿಯೆ
1. ಬಹಳಷ್ಟು ಸ್ವಚ್ಛ ಅಥವಾ ಫಲೀಕರಿಸದ ಮೊಟ್ಟೆಗಳು	(ಅ) ಹೇಂಟೆ ಹುಂಜಗಳ ಪ್ರಮಾಣದಲ್ಲಿ ದೋಷ	(ಅ) ಹಗುರವಾದ ತಳಿಗಳಲ್ಲಿ 10–18 ಹೇಂಟೆಗಳಿಗೆ ಒಂದು ಹುಂಜ, ಭಾರವಾದ ತಳಿಗಳಲ್ಲಿ 8–12 ಹೇಂಟೆಗಳಿಗೆ ಒಂದು ಹುಂಜ ಉಪಯೋಗಿಸಿರಿ.
	(ಆ) ಹುಂಜಗಳಿಗೆ ಆಹಾರಾಂಶದ ಕೊರತೆ	(ಆ) ಮರಿಹುಂಜಗಳಿಗೆ ಪ್ರತ್ಯೇಕವಾಗಿ ಮೇವು ದೊರೆಯುವಂತೆ ನೋಡಿಕೊಳ್ಳಿ; ಇಲ್ಲದಿದ್ದರೆ ಅವು ಮೇವೆಲ್ಲವನ್ನೂ ಹೇಂಟೆಗಳೇ ತಿನ್ನಲು ಬಿಡಬಹುದು.

ತೊಂದರೆ	ಇರಬಹುದಾದ ಕಾರಣ	ಅವಶ್ಯಕ ಕ್ರಿಯೆ
	(ಇ) ಸಂಭೋಗದ ಸಮಯದಲ್ಲಿ ಹುಂಜ ಹುಂಜಗಳಲ್ಲಿ ಅಡ್ಡಿ	(ಇ) ಅತಿಹೆಚ್ಚಿಗೆ ಹುಂಜಗಳನ್ನು ಉಪಯೋಗಿಸಬೇಡಿ. ಯಾವಾಗಲೂ ತಳಿಎಬ್ಬಿಸುವ ಮರಿಹುಂಜಗಳನ್ನು ಒಟ್ಟಾಗಿ ಸಾಕಿ, ತಳಿಎಬ್ಬಿಸುವ ಕೋಳಿಮನೆಗಳ ಮಧ್ಯೆ ಅಥವಾ ದೊಡ್ಡ ಕೋಳಿಮನೆಗಳ ಮಧ್ಯೆ ತಡಕೆ ಕಟ್ಟಬೇಕು.
	(ಈ) ಹುಂಜಗಳಲ್ಲಿ ಶೀತಲವಾದ ಜುಟ್ಟು ಹಾಗೂ ಜೋಲು ಮಾಂಸಲಿ	(ಈ) ಮನೆ ಆರಾಮದಾಯಕವಾಗಿರುವಂತೆ ಹಾಗೂ ತಳಿಎಬ್ಬಿಸುವ ಮನೆಯಲ್ಲಿ ಸಾಕಷ್ಟು ಕುಡಿಯುವ ನೀರು ದೊರೆಯುವಂತೆ ನೋಡಿಕೊಳ್ಳಬೇಕು.
	(ಉ) ಮುದಿಹುಂಜಗಳು	(ಉ) ಮುದಿಹುಂಜಗಳನ್ನು ಮರಿಹುಂಜಗಳಿಂದ ಸ್ಥಳಾಂತರಿಸಿ.
	(ಊ) ಹುಂಜಗಳಲ್ಲಿ ನಪುಂಸಕತ್ವ ಅಥವಾ ಜೊತೆಗೂಡುವಿಕೆಯಲ್ಲಿ ಪಕ್ಷಪಾತ	(ಊ)ಹುಂಜಗಳನ್ನು ಬದಲಾಯಿಸಬೇಕು.
	(ಎ) ಮೊಟ್ಟೆಗಳನ್ನು ಬಹಳ ಕಾಲ ಅಥವಾ ಅಹಿತಕರ ವಾತಾವರಣದಲ್ಲಿ ಇಡುವಿಕೆ	(ಎ) ಮರಿಯಾಗುವ ಮೊಟ್ಟೆಗಳನ್ನು 7 ದಿನಗಳಿಗಿಂತ ಹೆಚ್ಚಿಗೆ ಕಾಲ ಇಡಬೇಡಿರಿ. ಅವುಗಳನ್ನು 50°Fಇಂದ 60°F ನಷ್ಟು ಶಾಖ ಮತ್ತು ಸುಮಾರು ಶೇಕಡ 70ರಷ್ಟು ತೇವಾಂಶದಲ್ಲಿ ಶೇಖರಿಸಿಡಬೇಕು.
. ಪ್ರಾರಂಭಾವಸ್ಥೆಯಲ್ಲೇ ಭ್ರೂಣದ ಸಾವನ್ನು ಸೂಚಿಸುವ ರಕ್ತದ ಉಂಗುರ	(ಅ) ಕಾವುಕೊಡುವ ಯಂತ್ರದಲ್ಲಿನ ಶಾಖ ಅತಿಹೆಚ್ಚು ಇಲ್ಲವೆ ಅತಿ ಕಡಮೆ	(ಅ) ಉಷ್ಣಮಾಪಕ, ಉಷ್ಣ ನಿಯಂತ್ರಕ ಹಾಗೂ ವಿದ್ಯುತ್ ಸರಬರಾಯನ್ನು ಪರೀಕ್ಷಿಸಿ. ಯಂತ್ರ ತಯಾರಕರ ಸೂಚನೆಗಳನ್ನು ಅನುಸರಿಸಿರಿ.
	(ಆ) ದೋಷಯುತ ಧೂಮೀಕರಣ ಪದ್ಧತಿ	(ಆ) ಧೂಮಕವನ್ನು ಸರಿಯಾದ ಪ್ರಮಾಣದಲ್ಲಿ ಉಪಯೋಗಿಸಿ.


ತೊಂದರೆ	ಇರಬಹುದಾದ ಕಾರಣ	ಅವಶ್ಯಕ ಕ್ರಿಯೆ
		ಮೊಟ್ಟೆಗಳನ್ನಿಟ್ಟಮೇಲೆ 24 ರಿ 84 ಗಂಟೆಗಳೊಳಗೆ ಧೂಮೀಕ ಬೇಡಿರಿ.
	(ಇ) 1(ಎ)ನಲ್ಲಿದ್ದಂತೆ	(ಇ) 1(ಎ)ನಲ್ಲಿದ್ದಂತೆ
3. ಚಿಪ್ಪಿನಲ್ಲೇ ಸತ್ತವು ಹಲವು	(ಅ) 2(ಅ)ನಲ್ಲಿದ್ದಂತೆ	(ಅ) 2(ಅ)ನಲ್ಲಿದ್ದಂತೆ
	(ಆ) ಮೊಟ್ಟೆಗಳನ್ನು ಸರಿಯಾಗಿ ತಿರುಗಿಸದಿರುವಿಕೆ	(ಆ) ದಿನಕ್ಕೆ ಕನಿಷ್ಠ 3 ರಿಂದ ಸಾರಿಯಂತೆ ಮೊಟ್ಟೆಗಳನ್ನು ಕಾಲಕಾಲಕ್ಕೆ ತಿರುಗಿಸಿ. ಮೊಟ್ಟೆಗಳನ್ನು ಪ್ರತಿಸಾರಿ ವಿರುದ್ಧ ದಿಕ್ಕಿನಲ್ಲಿ ತಿರುಗಿಸಿರಿ; ಎಂದಿಗೂ ಒಂದೇ ದಿಕ್ಕಿನಲ್ಲಿ ತಿರುಗಿಸಬೇಡಿರಿ.
	(ಇ) 10 ರಿಂದ 14 ದಿನಗಳಲ್ಲಿ ಸಾವಿನ ಸಂಖ್ಯೆ ಹೆಚ್ಚಾಗಿದ್ದರೆ, ತಳಿಎಬ್ಬಿಸುವ ಗುಂಪಿನ ದೋಷಯುತ ಮೇಯಿಸುವಿಕೆ	(ಇ) ಮೊಟ್ಟೆಗಳು ಬರುವ ಕೇಂದ್ರಗಳ ಬಗ್ಗೆ ವಿಶೇಷ ಗಮನ ವಹಿಸಿರಿ; ಮೇಯಿಸುವಿಕೆ ಸರಿಯಾಗಿದೆಯೇ ಎಂದು ಪರೀಕ್ಷಿಸಿರಿ;
	(ಈ) ಕಾವುಕೊಡುವ ಯಂತ್ರದಲ್ಲಿ ದೋಷಯುತ ವಾತಾಯನ	(ಈ) ಸಾಮಾನ್ಯಮಾರ್ಗಗಳಿಂದ ವಾತಾಯನವನ್ನು ಹೆಚ್ಚಿಸಿರಿ; ಸಮುದ್ರಮಟ್ಟಕ್ಕಿಂತ 5000 ಅಡಿಗಳಿಗಿಂತ ಕಡಮೆ ಎತ್ತರದಲ್ಲಿರುವ ಪ್ರದೇಶಗಳಲ್ಲಿ ಹೆಚ್ಚಿನ ಆಮ್ಲಜನಕವನ್ನು ಸರಬರಾಜು ಮಾಡಬೇಕಾಗಿಲ್ಲ.
	(ಉ) ಬಿ.ಡಬ್ಲ್ಯು.ಡಿ.(B.W.D.) (ಪುಲ್ಲೋರಂ ರೋಗ) ಅಥವಾ ಇತರೆ ಸಾಂಕ್ರಾಮಿಕ ರೋಗಗಳು	(ಉ) ರೋಗರಹಿತ ಗುಂಪಿನಿಂದ ಬಂದ ಒಳ್ಳೆಯ ಮೊಟ್ಟೆಗಳನ್ನು ಉಪಯೋಗಿಸಬೇಕು. ಮರಿ ಮಾಡುವ ಮನೆಯ ಸ್ವಚ್ಛತೆ ಬಗ್ಗೆ ಹೆಚ್ಚಿನ ಗಮನ ಕೊಡಿರಿ.
4. ಮೊಟ್ಟೆಗಳು ಮರಿಯಾಗದಿರುವಿಕೆ	ಕಾವು ಕೊಡುವ ಯಂತ್ರದಲ್ಲಿ ತೇವಾಂಶದ ಕೊರತೆ	ನೀರಿನ ಆವಿಯಾಗುವ ಭಾಗವನ್ನು ಹೆಚ್ಚಿಸಿ ಅಥವಾ ಸಿಂಪರಣೆ ಹೆಚ್ಚಿಸಿ. 'ವೆಟ್‌ಬಲ್ಬ್' ಸಂಖ್ಯೆಯನ್ನು ಪರೀಕ್ಷಿಸಿರಿ.

ತೊಂದರೆ	ಇರಬಹುದಾದ ಕಾರಣ	ಅವಶ್ಯಕ ಕ್ರಿಯೆ
5. (ಅ) ಬಹುಬೇಗ ಪೂರಿಯಾಗುವಿಕೆ (ಆ) ಬಹುತಡವಾಗಿ ಮರಿಯಾಗುವಿಕೆ (ಇ) ಅಂಟಾದ ಮರಿಗಳು	(ಅ) ಕಾವುಕೊಡುವ ಯಂತ್ರದ ಶಾಖ ಅತಿ ಹೆಚ್ಚು (ಆ) ಕಾವುಕೊಡುವ ಯಂತ್ರದ ಶಾಖ ಅತಿ ಕಡಮೆ (ಇ) ಕಾವುಕೊಡುವ ಯಂತ್ರದ ಶಾಖ ಅತಿ ಹೆಚ್ಚಿರಬಹುದು	ಶಾಖ ನಿಯಂತ್ರಕ ಸಲಕರಣೆ ಸರಿಯಾಗಿ ಕೆಲಸಮಾಡುತ್ತಿದೆ ಎಂದು ನಿರ್ಧಾರಮಾಡಿಕೊಳ್ಳಿ. ಮತ್ತು ವಿದ್ಯುತ್ತನ್ನು ನಿಲ್ಲಿಸಿದಾಗ ಅದರ ಶಾಖ ಸರಿಯಾದ ಮಟ್ಟದಲ್ಲಿರುವಂತೆ ನೋಡಿಕೊಳ್ಳಿರಿ. ನಂತರ ಮರಿಯಾಗುವ ಕಾಲದಲ್ಲಿವಿದ್ಯುತ್ ತೊಂದರೆಇಂದ ಶಾಖ ಏರುವುದಾದರೆ ಅದನ್ನು ಕಡಮೆಮಾಡಿರಿ.
6. ವಿರೂಪದ ಮರಿಗಳು	(ಅ) ಕಾವುಕೊಡುವ ಯಂತ್ರದ ಶಾಖ ಅತಿ ಹೆಚ್ಚು (ಆ) ಕಾವುಕೊಡುವ ಯಂತ್ರದ ಶಾಖ ಅತಿ ಕಡಮೆ (ಇ) ಮೊಟ್ಟೆಗಳನ್ನು ಇಡುವುದರಲ್ಲಿ ದೋಷ ಅಥವಾ ಇಟ್ಟಮೇಲೆ ಸರಿಯಾಗಿ ತಿರುಗಿಸದಿರುವಿಕೆ	(ಅ) 3(ಅ)ನಲ್ಲಿದ್ದಂತೆ (ಆ) 4ರಲ್ಲಿದ್ದಂತೆ (ಇ) 3(ಅ)ನಲ್ಲಿದ್ದಂತೆ. ಮತ್ತು ಕಾವುಕೊಡುವ ಯಂತ್ರದ ತಟ್ಟೆಗಳಲ್ಲಿ ಮೊಟ್ಟೆಗಳನ್ನು ಅಗಲವಾದ ತುದಿ ಮೇಲೆ ಬರುವಂತೆಇಡಿರಿ.
7. ಸ್ಪ್ರಾಡಲಿಂಗ್ ಮರಿಗಳು.	ಅತಿ ನುಣುಪಾದ ಮರಿಯಾಗುವ ತಟ್ಟೆಗಳು	ತಂತಿಬಲೆ ತಳವಿರುವ ತಟ್ಟೆಗಳನ್ನು ಉಪಯೋಗಿಸಿರಿ ಅಥವಾ ಜಾರುವ ಭಾಗವನ್ನು ಬರಲಾಪ್ ಇಲ್ಲವೆ ಅಂಥಹುದೇ ಪದಾರ್ಥದಿಂದ ಮುಚ್ಚಿರಿ.
8. (ಅ) ದುರ್ಬಲ ಮರಿಗಳು (ಆ) ಸಣ್ಣಮರಿಗಳು (ಇ) ಏದುಸಿರು ಬಿಡುವ ಮರಿಗಳು	(ಅ) ಕಾವುಕೊಡುವ ಯಂತ್ರ ಅಥವಾ ಮರಿಯಾಗುವ ಭಾಗವನ್ನು ಹೆಚ್ಚು ಕಾಯಿಸುವುದು (ಆ) ಸಣ್ಣಮೊಟ್ಟೆಗಳನ್ನಿಡುವುದು (ಇ) ಕಾವುಕೊಡುವ ಯಂತ್ರದಲ್ಲಿ ಅತಿ ಕಡಮೆ ತೇವಾಂಶ (ಈ) ಮರಿಯಾಗುವಲ್ಲಿ ಅತಿ ಧೂಮ (ಉ) ಮರಿಯಾಗುವಲ್ಲಿ ಅತಿತೇವ	(ಅ) 5ರಲ್ಲಿದ್ದಂತೆ (ಆ) ಶಿಫಾರಸ್ಸು ಮಾಡಲ್ಪಟ್ಟ ಗಾತ್ರದ ಮೊಟ್ಟೆಗಳನ್ನು ಮಾತ್ರ ಜೋಡಿಸಿರಿ. (ಇ) 4ರಲ್ಲಿದ್ದಂತೆ (ಈ) 2(ಅ)ನಲ್ಲಿದ್ದಂತೆ (ಉ) 4ರಲ್ಲಿದ್ದಂತೆ

ತೊಂದರೆ	ಇರಬಹುದಾದ ಕಾರಣ	ಅವಶ್ಯಕ ಕ್ರಿಯೆ
	(ಊ) ಬಹುಶಃ ಸಾಂಕ್ರಾಮಿಕ ರೋಗಗಳು	(ಊ) ಮರಿಗಳನ್ನು ಪ್ರಯೋಗಶಾಲೆಗೆ ಪರೀಕ್ಷೆಗೆ ಕಳಿಸಿರಿ.
(ಈ) ಅಂಬಲಿ ಯಂತಹ ಮರಿ ಗಳು	(ಎ) ಕಾವುಕೊಡುವ ಕಾಲ ದಲ್ಲಿ ಸರಾಸರಿ ಕಡಮೆ ಶಾಖ	(ಎ) 3(ಅ)ನಲ್ಲಿದ್ದಂತೆ
	(ಏ) ಕಾವುಕೊಡುವ ಯಂತ್ರ ದಲ್ಲಿ ವಾತಾಯನ ಕೊರತೆ	(ಏ) 3(ಇ)ನಲ್ಲಿದ್ದಂತೆ
	(ಐ) ಊಂಫಲೈಟಿಸ್ ಅಥವಾ ಹೊಕ್ಕಳ ಸೋಂಕು	(ಐ) ಫಾರ್ಮಾಲ್ಡಿಹೈಡ್‌ಅನ್ನು ಹೆಚ್ಚಿಗೆ ಪ್ರಮಾಣದಲ್ಲಿ ಉಪಯೋಗಿಸಿ, ಸಲಕರಣೆಗಳಿಗೆ ಹೆಚ್ಚಿನ ಗಮನ ಕೊಟ್ಟು ಧೂಮಿಸಿರಿ.
9. ಮರಿಗಳು ಒಂದೇ ಸಮನಾಗಿ ಬರ ದಿರುವುದು	ವಿವಿಧ ವಯಸ್ಸಿನ ಮೊಟ್ಟೆ ಗಳನ್ನು ಜೋಡಿಸುವುದು	ಮೊಟ್ಟೆಗಳನ್ನು ವಾರಕ್ಕೊಮ್ಮೆ ಇಡಿರಿ. ಯಾವುದೇ ಕಾರಣದಿಂದ ಮೊಟ್ಟೆಗಳನ್ನು ಹತ್ತು ದಿನಗಳಿ ಗಿಂತ ಹೆಚ್ಚಿಗೆ ಕಾಯಿಸಬೇಡಿರಿ.

ವಂಶಾವಳಿ ಮರಿಮಾಡುವಿಕೆ


ಹಿಂದಿನ ಅಧ್ಯಾಯದಲ್ಲಿಯೇ ಯಾವುದಾದರೊಂದು ನಿರ್ದಿಷ್ಟ ಉದ್ದೇಶಕ್ಕಾಗಿ ಕೋಳಿಗಳ ವಿಭೇದವನ್ನು ಅಭಿವೃದ್ಧಿಪಡಿಸಲು ತಳಿಎಬ್ಬಿಸುವ ಗುಂಪಿನ ವಂಶಾವಳಿ ಪರೀಕ್ಷೆಯನ್ನು ನಡೆಸಬೇಕೆಂದು ಹೇಳಲಾಗಿದೆ. ಇದರಿಂದ ಪ್ರತಿಯೊಂದು ಮರಿಯ ಮಾತಾಪಿತೃವರ್ಗ ಅಥವಾ ವಂಶಾವಳಿಯನ್ನು ತಿಳಿಯಬಹುದು. ಮೊಟ್ಟೆಯಿಟ್ಟ ಹೇಂಟೆಯ ಕಾಲಪಟ್ಟಿಯ ಸಂಖ್ಯೆ ಮತ್ತು ಆವರಣದ ಸಂಖ್ಯೆ ಅಥವಾ ಆ ಹೇಂಟೆ ಯನ್ನು ಜೊತೆಗೂಡಿದ ಹುಂಜದ ಸಂಖ್ಯೆಯನ್ನು ಮೊಟ್ಟೆಯ ಮೇಲೆ ಗುರುತಿಸುವುದ ರಿಂದ ಇದನ್ನು ಪಡೆಯಬಹುದು (ಚಿತ್ರ 51). ಕಾವುಕೊಡುವಿಕೆಯ 18ನೆಯ ದಿನ ಬೇರೆ ಬೇರೆ ಹೇಂಟೆಗಳ ಮೊಟ್ಟೆಗಳನ್ನು ಬೇರೆ ಬೇರೆಯಾಗಿ ತಂತಿಯ ಮರಿಮಾಡುವ ಬುಟ್ಟಿ ಅಥವಾ ಸೊಳ್ಳೆಪರದೆಯ ಚೀಲಗಳಲ್ಲಿಡಬೇಕು. ಇವುಗಳಲ್ಲಿ ಮೊದಲನೆಯದು ಒಳ್ಳೆಯದು. ಮರಿ ಹೊರಬಂದ ಸಮಯದಲ್ಲಿ ಪ್ರತಿಯೊಂದು ಮರಿಗೂ ಸಂಖ್ಯೆ ಯುಳ್ಳ ಲೋಹದ ಪಟ್ಟಿಯ ರೆಕ್ಕೆ ಪಟ್ಟಿಯನ್ನೋ ಅಥವಾ ಕಾಲಿನ ಮುದ್ರೆಯನ್ನೋ



ಚಿತ್ರ 51: ವಂಶಾವಳಿ ಮರಿಮಾಡುವಿಕೆ—ಮೇಲೆ: ಪಂಜರಗಳಲ್ಲಿ ಮರಿಯಾಗುವುದು, ಮಧ್ಯ: ಹೇಂಟೆಯ ಕಾಲುಪಟ್ಟಿಸಂಖ್ಯೆ, ಗೂಡಿನ ಸಂಖ್ಯೆ ಹಾಗೂ ಮೊಟ್ಟೆ ಇಟ್ಟ ದಿನಾಂಕವನ್ನು ಮೊಟ್ಟೆಯ ಮೇಲೆ ಗುರುತಿಸುವುದು, ಕೆಳಗೆ: ಹೂ ಮರಿಗಳಿಗೆ ರೆಕ್ಕೆ ಪಟ್ಟಿಹಾಕುವುದು.

ಹಾಕಬೇಕು. ಮರಿಗಳನ್ನು ಗುರುತಿಸಲು ಸಹಾಯವಾಗುವಂತೆ ಮುದ್ರೆಯ 16 ವಿವಿಧ ಜೋಡಣೆಗಳಿವೆ (ಚಿತ್ರ 52).

ಒಂದು ದಿನದ ಮರಿಗಳು: ಕೋಳಿಸಾಕಾಣಿಕೆ ಜನಪ್ರಿಯವಾಗುತ್ತಿರುವುದರ ಜೊತೆಗೆ ದಿನದ ಮರಿಗಳ ಬೇಡಿಕೆ ತೀವ್ರವಾಗಿ ಹೆಚ್ಚಲೇಬೇಕು. ಸಲಕರಣೆಗಳ ವೆಚ್ಚ ಮತ್ತು ಮರಿಮಾಡಲು ಬೇಕಾದ ನಿರಂತರ ಗಮನದಿಂದಾಗಿ ಹಲವು ಉತ್ಸಾಹೀ ಸಾಕಣೆದಾರರು ಮತ್ತು ವಿಶೇಷತಃ ಹಿತ್ತಲಿನಲ್ಲಿ ಕೋಳಿಸಾಕುವವರು ಬೇರೊಬ್ಬರು ಮರಿಮಾಡುವುದಕ್ಕೆ ವೆಚ್ಚಕೊಟ್ಟು ದಿನದ ಮರಿಗಳನ್ನು ಪಡೆಯುವುದನ್ನು ಇಚ್ಛಿಪಡಬೇಕು.



ಚಿತ್ರ 52: ಮರಿಗಳನ್ನು ಗುರುತಿಸಲು ಮುಂಗಾಲ ಮುದ್ರೆಯ ವಿವಿಧ ಸಂಯೋಜನೆಗಳು.

ಮೊಟ್ಟೆ ಒಡೆದುಕೊಳ್ಳುವುದಕ್ಕೆ ಸ್ವಲ್ಪಮೊದಲು, ಭ್ರೂಣದ ಆಹಾರವನ್ನು ಹೊಂದಿರುವ ಭ್ರೂಣಪೊರೆ ಮರಿಯ ಶರೀರದೊಳಕ್ಕೆ ಎಳೆದುಕೊಳ್ಳಲ್ಪಡುತ್ತದೆ. ಇದು ಮರಿಗೆ ಹಲವು ದಿನಗಳಿಗೆ ಸಾಕಾಗುವಷ್ಟು ಆಹಾರವನ್ನೊದಗಿಸುತ್ತದೆ. ಇದರಿಂದಾಗಿ ಹೊಸಮರಿಗಳಿಗೆ ಚಿಪ್ಪಿನಿಂದ ಹೊರಬಂದ ಮೇಲೆ 60 ರಿಂದ 72 ಗಂಟೆಗಳ ಕಾಲ ಆಹಾರದ ಅವಶ್ಯಕತೆಯಿಲ್ಲ. ಆದುದರಿಂದ ಮರಿಗಳು 'ಊಟದ ಬುತ್ತಿ'ಯೊಂದಿಗೆ ಹುಟ್ಟಿದವೆಂದು ಹೇಳಲಾಗುತ್ತದೆ. ಮರಿಯಾದ ನಂತರದ ಮೊದಲ ಎರಡು ಅಥವಾ ಮೂರು ದಿನ ಮರಿಗಳ ಶಕ್ತಿ ವಿಶೇಷವಾಗಿ ಹೆಚ್ಚಾಗಿರುವುದರಿಂದ, ಈ ಕಾಲದಲ್ಲಿ ಹೆಚ್ಚಿನ ದೂರಗಳಿಗೆ ಅವುಗಳನ್ನು ಸಾಗಿಸಬಹುದು. ಸಣ್ಣಪ್ರಮಾಣದಲ್ಲಿ ಕೋಳಿಸಾಕಾಣಿಕೆಯನ್ನು ಪ್ರಾರಂಭಿಸುವವರು ಅವರ ಪ್ರಾರಂಭಿಕ ಗುಂಪಿನ ಮೂಲವಾಗಿ ದಿನದಮರಿಗಳೊಂದಿಗೆ ಪ್ರಾರಂಭಿಸುವುದು ಒಳ್ಳೆಯ ವ್ಯವಹಾರ ಚತುರತೆ, ಗುಂಪಿನಲ್ಲಿ ತೆರಪಾದ ಜಾಗಗಳನ್ನು ತುಂಬುವಾಗ ಅಥವಾ ಅದನ್ನು ಹೆಚ್ಚಿಸುವ ಸಮಯದಲ್ಲೂ ದಿನದಮರಿಗಳನ್ನು ಕೊಂಡುಕೊಳ್ಳುವುದು ಲಾಭದಾಯಕ.

ಇದರಿಂದ ಕಾವುಕೊಡುವಿಕೆ ತೆಗೆದುಕೊಳ್ಳುವ ಸಮಯ ಮತ್ತು ವೆಚ್ಚ ಇಲ್ಲವಾಗುತ್ತದೆ. ಅಲ್ಲದೆ ಅದೃಷ್ಟವನ್ನವಲಂಬಿಸುವ ಬದಲು ಪಡೆಯುವ ಮರಿಗಳ ಸಂಖ್ಯೆಯ ಬಗ್ಗೆ ಸಾಕಣೆದಾರನು ಖಚಿತವಾಗಿರಬಹುದು. ಹೀಗೆ ಪಡೆದ ದಿನದ ಮರಿ ಅಥವಾ ಎಳೆ ಮರಿಗಳನ್ನು ಸಾಕುವ ವಿಧಾನಗಳನ್ನು 'ರಕ್ಷಣೆ ಮತ್ತು ಸಾಕಾಣಿಕೆ' ಅಧ್ಯಾಯದಲ್ಲಿ ವಿವರಿಸಲಾಗಿದೆ.

ಆದಾಗ್ಯೂ ದಿನದಮರಿಗಳನ್ನು ಕೊಂಡುಕೊಳ್ಳುವಾಗ ಕೆಲವು ಮುನ್ನೆಚ್ಚರಿಗಳನ್ನು ತೆಗೆದುಕೊಳ್ಳುವುದು ಮುಖ್ಯವಾದುದು. ಅವುಗಳೆಂದರೆ:

(1) ಮರಿಗಳು ತಳಿಎಬ್ಬಿಸುವುದಕ್ಕಾದರೆ ಶುದ್ಧತಳಿಯ ಒಳ್ಳೆಯ ಉತ್ಪಾದಕ ಮಾತಾಪಿತೃಗಳ ಗುಂಪಿನಿಂದ ಬಂದಿರಬೇಕು.

(2) ಸೋಂಕುರೋಗಗಳಿಂದ ವಿಮುಕ್ತವೆಂದು ಪ್ರಮಾಣಪತ್ರ ಪಡೆದಿರುವ ಗುಂಪುಗಳಿಂದ ಮಾತ್ರ ಮರಿಗಳನ್ನು ಪಡೆಯಬೇಕು.

(3) ಗಟ್ಟಿಮುಟ್ಟಾಗಿ, ಶಕ್ತಿಯುತವಾಗಿ ಮತ್ತು ಚೆನ್ನಾಗಿ ಬೆಳೆದಿರುವ ಮರಿಗಳನ್ನು ಮಾತ್ರ ಒಪ್ಪಿಕೊಳ್ಳಬೇಕು.

(4) ಸಾಗಾಣಿಕೆಗೆ ಅತ್ಯಂತ ಸುಖಕರವಾಗಿ ಮತ್ತು ಚಳಿಯಿಂದ ರಕ್ಷಣೆ ಹೊಂದಿರುವಂತೆ ಮರಿಗಳನ್ನು ಪಂಜರಗಳಲ್ಲಿ ಕೂಡಬೇಕು.


ಅಧ್ಯಾಯ 8

ರಕ್ಷಣೆ ಮತ್ತು ಸಾಕಾಣಿಕೆ

ರಕ್ಷಣೆ ಮತ್ತು ಸಾಕಾಣಿಕೆ ಮೊಟ್ಟೆಯೊಡೆದು ಹೊರಬಂದ ಮರಿಗಳ ಬೆಳವಣಿಗೆ ಆದರಲ್ಲೂ ಹೆಚ್ಚೂಕಡಮೆ ಕೋಳಿಸಾಕಣೆದಾರನ ಹಿಡಿತದಲ್ಲಿರುವ ಅಂಶಗಳಿಗೆ ಅನ್ವಯಿಸುತ್ತದೆ. ಸ್ವಾಭಾವಿಕವಾಗಿಯೋ ಕೃತಕವಾಗಿಯೋ ಮರಿಗಳನ್ನು ಪಡೆದನಂತರ ಕೋಳಿ ಸಾಕಣೆದಾರನು ಅವುಗಳನ್ನು ಪಕ್ವತೆಯವರೆಗೆ ಸಾಕುವ ಪ್ರಮುಖ ಕಾರ್ಯವನ್ನೆದುರಿಸಬೇಕಾಗುತ್ತದೆ. ಸ್ವಾಭಾವಿಕ ಮತ್ತು ಕೃತಕ ಪದ್ಧತಿಗಳೆಂದು ರಕ್ಷಣೆಯು ಎರಡು ವಿಧಗಳಿವೆ.

ಸ್ವಾಭಾವಿಕ ರಕ್ಷಣೆ

ಒಂದು ಸಂಸಾರವನ್ನು ಸಾಕುವುದು ಹೇಂಟೆಯ ನೈಸರ್ಗಿಕ ಪ್ರಕ್ರಿಯೆ. ಹೇಂಟೆ ಕಾವುಕೊಡುವ ಮತ್ತು ರಕ್ಷಿಸುವ ಕೋಳಿ: ಈ ವಿಷಯದಲ್ಲಿ ದೇಶೀಕೋಳಿಗೆ ಪ್ರತಿಸ್ಪರ್ಧಿ



ಚಿತ್ರ 53: ಸ್ವಾಭಾವಿಕ ರಕ್ಷಣೆಗೆ ಬೊಂಬಿನ ಹಂಜರ.

ಯಿಲ್ಲ. ಮೊಟ್ಟೆಗಳನ್ನು ಸ್ವಾಭಾವಿಕವಾಗಿ ಹೇಂಟೆಗಳ ಕೆಳಗೆ ಮರಿಮಾಡಿದ ಕಡೆಗಳಲ್ಲಿ, ಯಾವಾಗಲೂ ಸ್ವಾಭಾವಿಕ ರಕ್ಷಣಾ ಪದ್ಧತಿಯನ್ನನುಸರಿಸುತ್ತಾರೆ. ಭಾರತದಲ್ಲಿ ಸಾಮಾನ್ಯವಾಗಿ ಆಚರಣೆಯಲ್ಲಿರುವಂತೆ ವಾರ್ಷಿಕವಾಗಿ ಕೆಲವೇ ಮರಿಗಳನ್ನು ಬೆಳೆಸುವು ದಾದರೆ, ಕೃತಕ ರಕ್ಷಣಾ ಪದ್ಧತಿಗಿಂತ ಸ್ವಾಭಾವಿಕವಾದ ಪದ್ಧತಿಯೇ ಹೆಚ್ಚು ಅಪೇಕ್ಷ ಣೀಯ ಹಾಗೂ ಪ್ರಯೋಗ ಯೋಗ್ಯ. ಸ್ವಾಭಾವಿಕ ಪದ್ಧತಿಯಲ್ಲಿ ಪ್ರಾರಂಭಿಕ ಬಂಡವಾಳದ ಅವಶ್ಯಕತೆ ಕಡಮೆ ಮತ್ತು ಕೋಳಿಸಾಕಣೆದಾರನ ಗಮನದ ಅವಶ್ಯಕತೆ ಕಡಮೆ.

ದಿನದ ಮರಿಗಳನ್ನು ಸಾಕುವುದು: ಸಾಮಾನ್ಯವಾಗಿ ಕಾವುಕೊಡುವ ಮನೋವೃತ್ತಿಯ ಹೇಂಟೆ ತಾನು ಮರಿಮಾಡಿದ ಮರಿಗಳನ್ನು ಸಾಕುತ್ತದೆ; ಆದರೆ ಕೊಂಡುಕೊಂಡ 'ದಿನದ ಮರಿ' ಅಥವಾ ಎಳೆಮರಿಗಳನ್ನೂ ಅದು ನೋಡಿಕೊಳ್ಳುವಂತೆ ಮಾಡಬಹುದು. ಈ ಕೆಲಸಕ್ಕೆ ಹೇಂಟೆಯನ್ನು ಸರಿಯಾಗಿ ತಯಾರುಮಾಡಬೇಕು. ಗೂಡಿನ ತುಂಬ ಒಳ್ಳೆಯ, ಮರಿಯಾಗುವ ಮೊಟ್ಟೆಗಳನ್ನಿಡುವ ಬದಲು ಎರಡು ಅಥವಾ ಮೂರು ಆಹಾರೋದ್ದೇಶದ ಅಥವಾ ಅಫಲೀಕೃತ ಮೊಟ್ಟೆಗಳನ್ನೋ ಅಥವಾ ಕೃತಕ ವಾದ ಮೊಟ್ಟೆಗಳನ್ನೋ ಇಡುವುದರಿಂದ ಹೇಂಟೆಗಳಿಗೆ ತರಪೇತಿ ಕೊಡಬಹುದು. ಮೊಟ್ಟೆಗಳು ನಷ್ಟವಾಗದಂತೆ ಪ್ರತಿರಾತ್ರಿ ಆ ಮೊಟ್ಟೆಗಳನ್ನು ಆಹಾರಕ್ಕಾಗಿ ತೆಗೆದು ಕೊಂಡು ಬೇರೆ ಮೊಟ್ಟೆಗಳನ್ನಿಡಬಹುದು. ಈ ರೀತಿ ಮರಿಗಳು ಬರುವ ಕಾಲದವರೆಗೆ ಹೇಂಟೆಯನ್ನು ಕಾವುಕೊಡುವ ಮನೋವೃತ್ತಿಯಲ್ಲುಳಿಸಿಕೊಳ್ಳಬಹುದು.

ಹೇಂಟೆ ಈ ಮೊಟ್ಟೆಗಳ ಮೇಲೆ ಕುಳಿತುಕೊಳ್ಳುವ ಕಾಲದಲ್ಲಿ ಅದು ಮೊಟ್ಟೆ ಗಳನ್ನು ಮರಿಮಾಡುತ್ತಿದೆಯೋ ಎಂಬಂತೆಯೇ ನೋಡಿಕೊಳ್ಳಬೇಕು. ಸುಮಾರು ಒಂದು ವಾರ ಈ ರೀತಿ ಕುಳಿತುಕೊಂಡ ಮೇಲೆ ಹೇಂಟೆ ಎಳೆಮರಿಗಳನ್ನು ಬರಮಾಡಿ ಕೊಳ್ಳಲು ಸಾಮಾನ್ಯವಾಗಿ ತಯಾರಾಗಿರುತ್ತದೆ. ಕೆಲವು ಪ್ರಸಂಗಗಳಲ್ಲಿ ಹೇಂಟೆಯು 2 ಅಥವಾ 3 ದಿನ ಕುಳಿತ ನಂತರವೇ ಮರಿಗಳನ್ನು ಬಿಡಬಹುದು.

ಎಳೆಮರಿಗಳು ಬಂದ ದಿನ ಮೇಲೆ ಹೇಳಿದ ರೀತಿಯಲ್ಲಿ ತಯಾರುಮಾಡಿದ ಹೇಂಟೆಯ ಕೆಳಗೆ ಎರಡು ಅಥವಾ ಮೂರು ಮರಿಗಳನ್ನು ಎಚ್ಚರಿಕೆಯಿಂದ ಇಡಬೇಕು. ಇದನ್ನು ಕತ್ತಲಾದ ನಂತರ ಮಾಡಿದರೆ ಒಳ್ಳೆಯದು. ಸಾಮಾನ್ಯವಾಗಿ ಹೇಂಟೆ ಮರಿ ಗಳನ್ನು ಸಂತೋಷದಿಂದ ಬರಮಾಡಿಕೊಳ್ಳುತ್ತದೆ. ಕ್ರಮೇಣ ಉಳಿದ ಮೊಟ್ಟೆಗಳನ್ನು ತೆಗೆದು ಮರಿಗಳನ್ನು ಸೇರಿಸಬಹುದು. ಒಳ್ಳೆಯ ಗಾತ್ರದ ಹೇಂಟೆಗೆ ಚಳಿಗಾಲದಲ್ಲಿ 12, ಬೇಸಿಗೆಯಲ್ಲಿ 15 ಮರಿಗಳನ್ನು ಕೊಡಬಹುದು.

ರಕ್ಷಣಾ ಹಂಜರ: ಶತ್ರುಗಳು ಮತ್ತು ಕಠಿಣವಾದ ವಾಯುಸ್ಥಿತಿಯಿಂದ ರಕ್ಷಿಸಲು ಹೇಂಟೆ ಮತ್ತು ಮರಿಗಳಿಗೆ ಒಂದು ಹಂಜರವನ್ನೊದಗಿಸುವುದು ಒಳ್ಳೆಯದು. ಒಣ ಗಿರುವುದು, ಬಾಳಿಕೆ ಬರುವುದು, ಗಾಳಿಯಾಡುವಂತಿರುವುದು, ಕಡಮೆ ಬೆಲೆಯಿಂದ ಕೂಡಿರುವುದು, ಸಾಕಷ್ಟು ಜಾಗ ಒದಗಿಸುವಂತಿರುವುದು ಮತ್ತು ಸುರಕ್ಷಿತವಾಗಿರುವುದು

ಹಂಜರದ ಅವಶ್ಯವಾದ ಅಗತ್ಯಗಳು. ಜೇಲಿಯಿಂದಾವೃತವಾದ ಓಡಾಡುವ ಜಾಗ ರಕ್ಷಣಾ ಹಂಜರಕ್ಕೆ ಅವಶ್ಯಕ. ಜೀಪಾಯಿ ಪೆಟ್ಟಿಗೆ ಮತ್ತು 'A' ಆಕಾರದ ಹಂಜರಗಳು ಸಾಮಾನ್ಯ ಬಳಕೆಯಲ್ಲಿವೆ. ಸ್ಥಳೀಯವಾಗಿ ತಯಾರಿಸಲ್ಪಟ್ಟ ಬಿದಿರಿನ ಹಂಜರ (ಚಿತ್ರ 53) ಕಡಮೆ ವೆಚ್ಚದ್ದು. ಇದನ್ನು ಹಳ್ಳಿಗಳ ಕಡೆ ಹೆಚ್ಚಾಗಿ ಉಪಯೋಗಿಸುತ್ತಾರೆ.

ಸಾಮಾನು ತುಂಬುವ ಪೆಟ್ಟಿಗೆಯನ್ನುಪಯೋಗಿಸಿ ತೃಪ್ತಿಕರವಾದ, ಅತ್ಯಂತ ಕಡಮೆ ವೆಚ್ಚದ ಹಂಜರವನ್ನು ಸ್ಥಳೀಯ ಬಡಗಿಯು ಮಾಡಬಹುದು. ಇದು ಸುಮಾರು 2½ ಅಡಿ ಚದರವಾಗಿರುತ್ತದೆ. ಮಳೆಯ ನೀರು ಹರಿದುಹೋಗಲು ಮುಂದುಗಡೆ ಎತ್ತರವಾಗಿಯೂ ಹಿಂದುಗಡೆ ತಗ್ಗಾಗಿಯೂ ಇರುತ್ತದೆ. ಹಂಜರದ ಮುಂಭಾಗ—3 ಅಂಗುಲ ಅಂತರದಲ್ಲಿರುವ 2 ಅಂಗುಲ ಅಗಲದ ಪಟ್ಟಿಗಳಿಂದಾಗಿದೆ, ಹೇಂಟೆಯನ್ನು ಒಳಗೆ ಬಿಡಲು, ಬೇಕಾದಾಗ ತೆಗೆಯಲು ಸಾಧ್ಯವಾಗುವಂತೆ ಮಧ್ಯದ ಪಟ್ಟಿಯನ್ನು ಸಡಿಲವಾಗಿ ಜೋಡಿಸಲಾಗಿದೆ. ದಿನದಲ್ಲಿ ನೆರಳು ಮತ್ತು ಆಶ್ರಯ ವನ್ನೊದಗಿಸಲು ಯಾವ ಕೋನದಲ್ಲಿ ಬೇಕಾದರೂ ನಿಲ್ಲುವಂತಹ ಒಂದು ಹಲಗೆಯನ್ನು ಕೀಲಿನೊಡನೆ ಹಂಜರಕ್ಕೆ ಸೇರಿಸಬಹುದು. ಬಿಚ್ಚಬಹುದಾದ ತಂತಿಯ ಓಡಾಡುವ ಜಾಗವನ್ನೂ ಹಂಜರಕ್ಕೆ ಹೊಂದಿಸಬಹುದು. ಹದ್ದು, ಕಾಗೆ, ಗಿಡುಗ, ಬೆಕ್ಕು, ಮುಂಗಸಿ (ಮುಂಗಲಿ), ಹಾವು ಮತ್ತು ಇತರ ಸ್ವಾಭಾವಿಕ ಶತ್ರುಗಳ ವಿರುದ್ಧ ಬೆಳೆಯುತ್ತಿರುವ ಕೋಳಿಗಳನ್ನು ಇದು ರಕ್ಷಿಸುತ್ತದೆ.

ಸ್ವಚ್ಛವಾದ ಆಶ್ರಯವುಳ್ಳ ಜಾಗದಲ್ಲಿ ಕೋಳಿಗಳಿಗೆ ಆಹಾರ ಒದಗಿಸಲು ಅನು ಕೂಲವಾಗಿರುವಂತೆ ಹಂಜರವನ್ನಿಡಬೇಕು. ನೀರು ಚೆನ್ನಾಗಿ ಹರಿದುಹೋಗುವಂತಿರ ಬೇಕು ಮತ್ತು ವಿಪರೀತವಾದ ಬಿಸಿಲು, ಗಾಳಿ ಮತ್ತು ಮಳೆಗಳ ವಿರುದ್ಧ ರಕ್ಷಣೆ ಯನ್ನೊದಗಿಸಬೇಕು.

ಮರಿಗಳನ್ನು ಹಂಜರಕ್ಕೆ ಬದಲಾಯಿಸುವುದು: ಎಲ್ಲ ಮರಿಗಳಲ್ಲೂ ಚೆನ್ನಾಗಿ ಗರಿಮೂಡಿದ ಮೇಲೆ ಮರಿಮಾಡುವ ಗೂಡಿನಿಂದ ಮರಿ ಮತ್ತು ಹೇಂಟೆಗಳನ್ನು ಹಂಜರಕ್ಕೆ ಸಂಜೆ ಹೊತ್ತಾದ ಮೇಲೆ ಬದಲಾಯಿಸುವುದು ಒಳ್ಳೆಯದು. ಸಣ್ಣಮರಿ ಗಳಿಗೆ ತಂಡಿಯಾಗದಂತೆ ಎಚ್ಚರವಹಿಸಿ, ಮರಿಗಳನ್ನು ಮುಚ್ಚಿದ ಬುಟ್ಟಿಯಲ್ಲೂ ಮತ್ತು ಹೇಂಟೆಯನ್ನು ಕಂಕುಳಲ್ಲೂ ಅತ್ಯುತ್ತಮವಾಗಿ ಸಾಗಿಸಬಹುದು. ಹಂಜರದ ಗೂಡಿನ ವಿಭಾಗದಲ್ಲಿ ಮೊದಲು ಮರಿಗಳನ್ನು ಬಿಟ್ಟು ನಂತರ ಹೇಂಟೆ ಯನ್ನು ಒಳಹೋಗಿಸಬೇಕು. ಹೆಚ್ಚಿನ ಮರಿಗಳನ್ನು ಹೇಂಟೆಗೆ ಕೊಡಬೇಕಾದರೆ ಅವುಗಳನ್ನು ರಾತ್ರಿ ಸೇರಿಸಬಹುದು.

ಹಂಜರವನ್ನು ಆಗಾಗ್ಗೆ ಸ್ಥಳಬದಲಾವಣೆ ಮಾಡುವುದು ನೆಲಕ್ಕೆ ಸೋಂಕು ಸೇರಿ, ರೋಗಗಳು ಮತ್ತು ಪರಾವಲಂಬಿಗಳಿಂದ ಆಗುವ ನಷ್ಟವನ್ನು ತಡೆಗಟ್ಟುತ್ತದೆ. ಹೇಂಟೆ ಯನ್ನು ಮರಿಗಳ ಜೊತೆಗೆ ದಿನದಲ್ಲಿ ಒಂದೆರಡು ಸಾರಿ ಬಿಸಿಲಿಗೆ ಬಿಡುವುದೂ ಒಳ್ಳೆ ಯದು.


ಮರಿಗಳಿಗೆ ಆಹಾರಕೊಡುವಿಕೆ: ಮರಿಗಳಿಗೆ ಚಿಪ್ಪು ಒಡೆದು ಹೊರಬಂದ 36 ಗಂಟೆಗಳವರೆಗೆ ಯಾವರೀತಿಯ ಆಹಾರವೂ ಬೇಕಾಗಿಲ್ಲ. ಆದಾಗ್ಯೂ ಸ್ವಲ್ಪ ಸಣ್ಣ ಮರಳನ್ನು ಓಡಾಡುವ ಜಾಗದಲ್ಲಿ ಉದುರಿಸುವುದು ಒಳ್ಳೆಯದು. ಇದನ್ನು ಹಳೆಯ ದಿನಪತ್ರಿಕೆಯ ಮೇಲೆ ಹರಡುವುದು ಉತ್ತಮ ಮತ್ತು ಕೊಬ್ಬು ತೆಗೆದ ಹಾಲು ಅಥವಾ ಮಜ್ಜಿಗೆಯನ್ನು ನೀರಿನ ಬದಲಾಗಿ ಕೊಡಬೇಕು. ಮರಿಗಳಿಗೆ ಒದಗಿಸುವ ಆಹಾರ, ಹೇಂಟೆಗಳಿಂದ ರಕ್ಷಣೆ ಪಡೆದಾಗ ಕೃತಕ ರಕ್ಷಣೆ ಒದಗಿಸುವುದಕ್ಕಿಂತ ಏನೂ ವ್ಯತ್ಯಾಸ ಹೊಂದುವುದಿಲ್ಲ. ಹೆಚ್ಚಿಗೆ ತಿಂದು ಮರಿಗಳಿಗೂ ತಿನ್ನುವುದನ್ನು ಕಲಿಸುವಲ್ಲಿ ಹೇಂಟೆ ಸಹಾಯ ಮಾಡಬಹುದು. ಮೊದಲ ಕೆಲವು ದಿನಗಳಲ್ಲಿ ಮರಿಗಳ ಜೀರ್ಣಾಂಗಗಳ ಮೇಲೆ ಹೆಚ್ಚಿನ ಒತ್ತಡ ಹೇರದಿರಲು ಆಹಾರವನ್ನು ಆಗಾಗ್ಗೆ ಒದಗಿಸಬೇಕು. ಮರಿಗಳಿಗೆ ಆಹಾರವೊದಗಿಸಲು ಹೇಂಟೆಯನ್ನವಲಂಬಿಸುವುದು ಅತಿ ಸಾಮಾನ್ಯವಾದ ಆಚರಣೆ. ಇದು ಸಾಮಾನ್ಯವಾಗಿ ನಿಧಾನವಾದ ಬೆಳವಣಿಗೆ ಮತ್ತು ಹಣದ ಅಪವ್ಯಯದಲ್ಲಿ ಪ್ರತಿಫಲಿಸುತ್ತದೆ. ಮರಿಗಳಿಗೆ ಒದಗಿಸಬೇಕಾದ ಆಹಾರದ ಬಗ್ಗೆ ಮೇಯಿಸುವುದರ ಬಗ್ಗೆ ಇರುವ ಅಧ್ಯಾಯದಲ್ಲಿ ವಿಶದವಾಗಿ ವಿವರಿಸಲಾಗಿದೆ.

ಹೇಂಟೆಗೆ ಆಹಾರನೀಡಿಕೆ: ಹೇಂಟೆಯು ದಿನಕ್ಕೆರಡು ಸಾರಿ ಮಿಶ್ರಧಾನ್ಯಗಳನ್ನು ಪಡೆಯಬೇಕು ಮತ್ತು ನೀರು ಯಾವಾಗಲೂ ಸಿಗುವಂತಿರಬೇಕು. ಮೊದಲ ಕೆಲವು ವಾರಗಳಲ್ಲಿ ಹೇಂಟೆಯು ಮರಿಗಳನ್ನು ಬಹಳದೂರ ಕರೆದುಕೊಂಡು ಹೋಗದಂತೆ ಹಂಜರ ಮತ್ತು ಓಡಾಡುವ ಜಾಗದಲ್ಲಿ ಬಂಧಿಸಬೇಕು. ಹೇಂಟೆಯನ್ನು ಓಡಾಡುವ ಜಾಗದಿಂದ ಹವಾಮಾನ ಸ್ವಚ್ಛವಾಗಿದ್ದ ದಿನ ಮತ್ತು ಬಿಸಿಲೇರಿ ಹುಲ್ಲು ಒಣಗಿದ ಮೇಲೆ ಹೊರಕ್ಕೆ ಬಿಡಬೇಕು. ಹೇಂಟೆಗೆ ಏನಾದರೂ ಕಾಯಿಲೆ ಬಂದರೆ ಮರಿಗಳನ್ನು ಬೇರೆ ಹೇಂಟೆಗೆ ಬದಲಾಯಿಸಬೇಕು ಅಥವಾ ಕೃತಕವಾಗಿ ರಕ್ಷಿಸಬೇಕು. ಮರಿಗಳನ್ನು ಪರಾವಲಂಬಿಗಳಿಲ್ಲದಂತೆ ಮತ್ತು ಭಕ್ಷಕಗಳಿಂದ ರಕ್ಷಿಸಲು ಗಮನಕೊಡಬೇಕು. ಹೇಂಟೆಯನ್ನು ಹೇನುಗಳಿಲ್ಲದಂತೆ ಮಾಡಲು ಆದಕ್ಕೆ ಆಗಾಗ್ಗೆ ಸೋಡಿಯಂ ಫ್ಲೋರೈಡ್ ಸಿಂಪಡಿಸಬೇಕು. ಉಣ್ಣೆ ಮೊದಲಾದ ಕೀಟಗಳನ್ನು ಹತೋಟಿಯಲ್ಲಿಡಲು ಹಂಜರವನ್ನು ಆಗಾಗ್ಗೆ ಸ್ವಚ್ಛಮಾಡಿ ಔಷಧ ಸಿಂಪಡಿಸಬೇಕು. ಗೂಬೆ(ಗೂಗಿ), ಹದ್ದು, ಬೆಕ್ಕು, ಇಲಿ ಮೊದಲಾದ ಭಕ್ಷಕಗಳಿಂದ ರಕ್ಷಿಸಲು ಓಡಾಡುವ ಜಾಗ ಮತ್ತು ಹಂಜರದ ಮೇಲ್ಭಾಗವನ್ನು ಸರಿಯಾದ ಅಳತೆಯ ತಂತಿಬಲೆಯಿಂದ ಮುಚ್ಚಬೇಕು.

ಕೃತಕ ರಕ್ಷಣೆ

ಹೇಂಟೆಯ ಸಹಾಯವಿಲ್ಲದೆ ಎಳೆಮರಿಗಳನ್ನು ನಿರ್ವಹಿಸುವುದನ್ನು ಕೃತಕ ರಕ್ಷಣೆ ಎನ್ನುತ್ತಾರೆ. ಇದನ್ನು 'ಕಾಯಿಸಿದ ರಕ್ಷಕ' (ಸಾಕುಯಂತ್ರ ಅಥವಾ ಇದನ್ನೇ ಮತ್ತೊಂದು-ರೀತಿ ಕರೆಯುವಂತೆ ಸಾಕುತಾಯಿ)ದಿಂದ ನೆರವೇರಿಸಬಹುದು. ಭಾರತದ ಬಹುಮಟ್ಟಿನ ಕೋಳಿ ಕೇಂದ್ರಗಳು ಗಾತ್ರದಲ್ಲಿ ಸಣ್ಣದಾಗಿರುವುದರಿಂದ ಮತ್ತು ವಾರ್ಷಿಕವಾಗಿ ಸಾಕುವ ಸರಾಸರಿ ಮರಿಗಳ ಸಂಖ್ಯೆಯನ್ನು ಆದರ್ಶ ರಕ್ಷಕ ಮತ್ತು ಒಳ್ಳೆಯ ತಾಯಿಯಾದ ದೇಶಿ ಹೇಂಟೆ ಚೆನ್ನಾಗಿ ರಕ್ಷಿಸುವ ಸಾಮರ್ಥ್ಯ ಹೊಂದಿರುವುದರಿಂದ,

ಮರಿಗಳನ್ನು ಕೃತಕವಾಗಿ ಸಾಕುವುದು ಭಾರತದಲ್ಲಿ ಹೆಚ್ಚಿನ ಬಳಕೆಗೆ ಬಂದಿಲ್ಲ. ಆದಾಗ್ಯೂ ಕೋಳಿಸಾಕಾಣಿಕೆ ಚೆನ್ನಾಗಿ ಮುಂದುವರಿದಿರುವ ದೇಶಗಳಲ್ಲೂ ಮರಿಗಳನ್ನು ಕೃತಕ ವಿಧಾನಗಳಿಂದ ರಕ್ಷಿಸುವುದು ಹೇಂಟೆಗಳ ಉಪಯೋಗದ ಜಾಗವನ್ನು ಆಕ್ರಮಿಸಿ ಕೊಂಡಿದೆ. ಕೃತಕವಾಗಿ ರಕ್ಷಿಸುವುದು ಸ್ವಾಭಾವಿಕ ರಕ್ಷಣೆಗಿಂತ ಹಲವು ಉಪಯೋಗಗಳನ್ನು ಹೊಂದಿದೆ. ಅವುಗಳೆಂದರೆ: (1) ಮರಿಗಳನ್ನು ವರ್ಷದ ಯಾವ ಕಾಲದಲ್ಲಾದರೂ ರಕ್ಷಿಸಿ ಬೆಳೆಸಬಹುದು; (2) ರಕ್ಷಣೆ ಮತ್ತು ಬೆಳವಣಿಗೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕು: (3) ಸ್ವಚ್ಛತಾಸ್ಥಿತಿಗಳನ್ನು ನಿಯಂತ್ರಿಸಬಹುದು; (4) ಶಾಖವನ್ನು ನಿಯಂತ್ರಿಸಬಹುದು ಮತ್ತು (5) ಯೋಜನೆಯಂತೆ ಆಹಾರಕೊಡಬಹುದು.



ಚಿತ್ರ 54: ಅನುಕೂಲಕರ ಭಾಗಗಳಾಗಿ ವಿಭಾಗಿಸಲ್ಪಟ್ಟ ರಕ್ಷಕಮನೆ

ರಕ್ಷಣಾ ಮನೆ: ರಕ್ಷಣೆಯ ಮುಖ್ಯ ಅವಶ್ಯಕತೆ ವಸತಿಗೆ ಸಂಬಂಧಪಟ್ಟದ್ದು ಮತ್ತು ಕೃತಕ ರಕ್ಷಣೆಯ ಪ್ರಥಮ ಅವಶ್ಯಕತೆಯೆಂದರೆ ಒಳ್ಳೆಯ 'ರಕ್ಷಣಾಮನೆ'. ಮನೆ ಒಳ್ಳೆಯ ವಾತಾಯನ ಮತ್ತು ಹೆಚ್ಚಿನ ಶಾಖದ ವಿರುದ್ಧ ರಕ್ಷಣೆಯನ್ನೊದಗಿಸಬೇಕು ಹಾಗೂ ಬೀಸುಗಾಳಿ ಇಲ್ಲದಂತಿರಬೇಕು. ರಕ್ಷಣಾ ಮನೆಯ ಗಾತ್ರ ಸಾಕಬೇಕಾದ ಮರಿಗಳ ಸಂಖ್ಯೆಯನ್ನವಲಂಬಿಸುತ್ತದೆ. ದೊಡ್ಡ ರಕ್ಷಣಾಮನೆಯಲ್ಲಿ (ಚಿತ್ರ 54) ಬೇಕಾಗುವಷ್ಟು ಮರಿಗಳ ಸಂಖ್ಯೆ ಹೆಚ್ಚಾಗಿದ್ದರೆ, ಒಂದೇ ಗುಂಪಿನಲ್ಲಿ ಹೆಚ್ಚಿನ ಮರಿಗಳನ್ನು ಸಾಕಿದರೆ ಒಳ್ಳೆಯ ಪ್ರತಿಫಲ ಸಿಗುವುದು ಸಾಧ್ಯವಿಲ್ಲದಿರುವುದರಿಂದ ಆ ಮನೆಯನ್ನು ಹಲವು ವಿಭಾಗಗಳಾಗಿ ವಿಂಗಡಿಸುವುದು ಒಳ್ಳೆಯದು. ಹಾಗೆಯೇ ಅತಿಸಣ್ಣ ಗುಂಪುಗಳಿಗೆ ಹೆಚ್ಚಿನ ಬಂಡವಾಳ ಮತ್ತು ಹೆಚ್ಚಿನ ನಿರ್ವಹಣಾ ವೆಚ್ಚ ಬೇಕಾಗುತ್ತದೆ.

ರಕ್ಷಕಗಳು

ರಕ್ಷಕಗಳು, ಸಾಕುಯಂತ್ರಗಳು ಅಥವಾ ಸಾಕುತಾಯಿಯರು ಎಂದು ಹಲವು ರೀತಿ ಕರೆಸಿಕೊಳ್ಳುವ ರಚನೆ; ಮರಿಗಳನ್ನು ಕೃತಕವಾಗಿ ರಕ್ಷಿಸಲು ಉಪಯೋಗಿಸುವ ಅತಿಮುಖ್ಯ ಸಲಕರಣೆಯಾಗಿದೆ. ಶಾಖ ಒದಗಿಸಲು ಉಪಯೋಗಿಸುವ ಉರುವಲು ಮತ್ತು ಗಾತ್ರವನ್ನನುಸರಿಸಿ ಅವನ್ನು ಹಲವಾರು ರೀತಿಯಲ್ಲಿ ರಚಿಸಲಾಗುತ್ತದೆ. 25 ರಿಂದ 1000 ಮರಿಗಳನ್ನು ಒಳಗೊಳ್ಳುವ ಗಾತ್ರಗಳಲ್ಲಿ ಸಿಗುತ್ತವೆ.

ಒಳ್ಳೆಯ ರಕ್ಷಕದ ಅವಶ್ಯಕತೆಗಳೆಂದರೆ: ಶಾಖ ಮತ್ತು ನಿರಂತರವಾದ ಹೊಸ ಗಾಳಿಯ ಪ್ರವೇಶವನ್ನು ನಿಯಂತ್ರಿಸಲು ಒಂದು ಅವಲಂಬನೀಯ ವ್ಯವಸ್ಥೆ, ಒಣಸ್ಥಿತಿ, ಸಾಕಷ್ಟು ಜಾಗ, ನೇರ ಸೂರ್ಯನ ಬೆಳಕಿಗೆ ಬರಲು ಸುಲಭವಾದ ದಾರಿ, ಸುಲಭ ಕೀಟನಾಶ, ಮರಿಗೆ ಶತ್ರುಗಳಿಂದ ಹಾಗೂ ಬೆಂಕಿಯಿಂದ ರಕ್ಷಣೆ ಮತ್ತು ಮಿತವ್ಯಯಕಾರಿ ರಚನೆ.


ಶೀತ ರಕ್ಷಣೆ: ವಾತಾವರಣ ಬಹಳ ಶೀತವಾಗಿಲ್ಲದ ಕಾಲದಲ್ಲಿ ಎಳೆಮರಿಗಳನ್ನು ಯಾವ ರೀತಿಯ ಹೆಚ್ಚಿನ ಶಾಖವೂ ಇಲ್ಲದೆ ಜಯಪ್ರದವಾಗಿ ಸಾಕಬಹುದು. ಈ ರೀತಿಯ ರಕ್ಷಣೆಯನ್ನು 'ಶೀತರಕ್ಷಣೆ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಒಣ ಹುಲ್ಲಿನ ಒಳಪದರಹೊಂದಿರುವ ಸಣ್ಣಪೆಟ್ಟಿಗೆ ಅಥವಾ ವಿಭಾಗವನ್ನುಪಯೋಗಿಸುವುದ ರಿಂದ ಇದನ್ನು 'ಕರಡ ಪೆಟ್ಟಿಗೆ ರಕ್ಷಣೆ' ಎಂದೂ ಕರೆಯುತ್ತಾರೆ. ಕರಡ(ಒಣಹುಲ್ಲು)ದ ದಪ್ಪ ಒಳಪದರುಳ್ಳ ಸಾಮಾನ್ಯ ಬುಟ್ಟಿಗೆ, ಮರಿಗಳು ಒಳಗೆಹೊರಗೆ ಓಡಾಡಲು ಸಣ್ಣ ಬಾಯಿಯಿದ್ದಾಗ ಹಲವು ಸಾರಿ ಒಳ್ಳೆಯ ಪ್ರತಿಫಲವನ್ನು ಕೊಡುತ್ತದೆ. ಕರಡದ ಬದಲು ಹಳೆ ಉಣ್ಣೆಬಟ್ಟೆಯ ಚೂರುಗಳು ಅಥವಾ ಪುಕ್ಕಗಳನ್ನು ಉಪಯೋಗಿಸ ಬಹುದು. 15 ಅಂಗುಲ ವ್ಯಾಸವುಳ್ಳ ಬುಟ್ಟಿ 30 ಮರಿಗಳನ್ನೊಳಗೊಳ್ಳಬಹುದು. ಶೀತರಕ್ಷಣಾಪದ್ಧತಿಯನ್ನನುಸರಿಸುವಾಗ ಮೊದಲ 4 ಅಥವಾ 5 ದಿನ ಬುಟ್ಟಿಯ ಸುತ್ತ ಬೇಲಿಹಾಕುವುದರಿಂದ ಮರಿಗಳನ್ನು ಸಣ್ಣ ಜಾಗದಲ್ಲಿ ಬಂಧಿಸಿರುವುದು ಅವಶ್ಯಕ. ಮರಿಗಳು ದೂರ ಉಳಿದು ತಣ್ಣಗಾಗುವುದನ್ನು ತಪ್ಪಿಸುವುದೇ ಇದರ ಉದ್ದೇಶ. ಒಂದು ವಾರದಿಂದ 10 ದಿನಗಳವರೆಗೆ ಮರಿಗಳನ್ನು ರಾತ್ರಿ ಹೊತ್ತು ಬುಟ್ಟಿಯಲ್ಲಿ ಕೂಡ ಬೇಕು. ಸುತ್ತಣ ಶಾಖ ಬಹಳ ಹೆಚ್ಚಿಗೆಯಿದ್ದಾಗ ಮತ್ತು ಅತಿಹೆಚ್ಚಿನ ಹಾಗೂ ಅತಿ ಕಡಮೆ ಶಾಖಗಳಲ್ಲಿ ಬಹಳ ವ್ಯತ್ಯಾಸವಿಲ್ಲದಿದ್ದಾಗ ಮಾತ್ರ ಅತಿ ಸಣ್ಣಮರಿಗಳನ್ನು ಶೀತರಕ್ಷಣಾ ಪದ್ಧತಿಯಲ್ಲಿ ಸಾಕಬಹುದು. ವಯಸ್ಸಾದ ಮರಿಗಳು ಶೀತರಕ್ಷಣಾ ಪದ್ಧತಿಗೆ ಸುಲಭವಾಗಿ ಹೊಂದಿಕೊಳ್ಳುತ್ತವೆ.

ಬಿಸಿ ರಕ್ಷಕಗಳಿಗೆ ಉರುವಲು: ಬಿಸಿ ರಕ್ಷಕದ ರಚನೆ, ಶಾಖ ಸರಬರಾಜಿಗಾಗಿ ಉಪ ಯೋಗಿಸುವ ಉರುವಲ ರೀತಿಯನ್ನು ಹೆಚ್ಚಾಗಿ ಅವಲಂಬಿಸುತ್ತದೆ. ಸೀಮೆಎಣ್ಣೆ ಮತ್ತು ವಿದ್ಯುತ್ ಅತಿ ಸಾಮಾನ್ಯವಾಗಿ ಉಪಯೋಗಿಸುವ ಉರುವಲುಗಳು ಮತ್ತು ಇವುಗಳಿಂದ ನಡೆಯುವ ರಕ್ಷಕಗಳನ್ನು ದೀಪ ಮತ್ತು ವಿದ್ಯುತ್ ರಕ್ಷಕಗಳೆಂದು ಕರೆಯುತ್ತಾರೆ. ಹೆಚ್ಚಿನ ರಕ್ಷಕಗಳು ಸಾಗಿಸಲು ಸಾಧ್ಯವಾಗುವಂತಹವು ಮತ್ತು ಸ್ಥಳ

ದಿಂದ ಸ್ಥಳಕ್ಕೆ ಬದಲಾಯಿಸಬಹುದು. ಶಾಖಮೂಲದ ಹತ್ತಿರದ ಸ್ವಲ್ಪಜಾಗದಲ್ಲಿ ಶಾಖವನ್ನು ರಕ್ಷಿಸಿಕೊಂಡು ಬರುವುದಕ್ಕಾಗಿ ಮೇಲ್ಭಾವಣೆಗಳಿರುವ ಸಾಗಿಸಬಹುದಾದ ರಕ್ಷಕಗಳನ್ನು 'ಅಲೆಮಾರಿ ರಕ್ಷಕ' ಎಂದು ಕರೆಯುತ್ತಾರೆ.


ಸಮುದಾಯ ಮತ್ತು ನಿರಂತರ ರಕ್ಷಕಗಳು: ಅರವತ್ತರಿಂದ ಕೆಲವು ನೂರುಗಳ ಗುಂಪಿನಲ್ಲಿ ಮರಿಗಳನ್ನು ರಕ್ಷಿಸುವುದನ್ನು 'ಸಮುದಾಯ ರಕ್ಷಕ'ಗಳೆಂದೂ ದೊಡ್ಡ ವಾಣಿಜ್ಯೋದ್ಯಮಿಗಳು ಇಟ್ಟಿರುವ ಮರಿಗಳನ್ನು ಸಾವಿರದ ಸಂಖ್ಯೆಯಲ್ಲಿ ರಕ್ಷಿಸುವುದನ್ನು 'ನಿರಂತರ ರಕ್ಷಕ'ಗಳೆಂದೂ ಕರೆಯುತ್ತಾರೆ.

ಸಮುದಾಯ ರಕ್ಷಕಗಳಲ್ಲಿ ಉಪಯೋಗಿಸುವ ಉರುವಲು ಸೀಮೆಎಣ್ಣೆ, ಕಲ್ಲಿದ್ದಲು, ಮರ, ಎಣ್ಣೆ, ಅನಿಲ ಅಥವಾ ವಿದ್ಯುತ್ ಯಾವುದಾದರಾಗಿರಬಹುದು; ನಿರಂತರ ರಕ್ಷಕಗಳು ಕಲ್ಲಿದ್ದಲು, ಅನಿಲ ಅಥವಾ ಎಣ್ಣೆಯಿಂದ ಕಾಯಿಸಲ್ಪಡುತ್ತವೆ.



ಚಿತ್ರ 55: ಸಾಗಿಸಬಹುದಾದ, ಬಯಲನ್ನೊಳಗೊಂಡ ದೀಪರಕ್ಷಕ, ಆಯಾಕಾರ (ಮೇ ಕಮಾನಾಕಾರ (ಕೆಳಗಡೆ)


ದೀಪರಕ್ಷಕಗಳು: ಇದು ರಕ್ಷಕಗಳಲ್ಲೆಲ್ಲ ಅತ್ಯಂತ ಸರಳವಾದುದು ಮತ್ತು ಸಾಃ ತುಂಬಿಡುವ ಸಾಮಾನ್ಯಪೆಟ್ಟಿಗೆಯಿಂದ ಇದನ್ನು ಸುಲಭವಾಗಿ ತಯಾರಿಸಬಹ



ಚಿತ್ರ 56: ಒಳಪದರಗಳು ಕಾಣುತ್ತಿರುವ ಅಯಾಕಾರದ ದೀಪರಕ್ಷಕ

ಇದು ತುಲನಾತ್ಮಕವಾಗಿ ವೆಚ್ಚರಹಿತವಾದುದು ಮತ್ತು ಸರಿಯಾಗಿ ತಯಾರಿಸಿದಲ್ಲಿ ಸಾಮಾನ್ಯವಾಗಿ ಒಳ್ಳೆಯ ಪ್ರತಿಫಲವನ್ನು ಕೊಡುತ್ತದೆ (ಚಿತ್ರ 55, 56). ತೃಪ್ತಿಕರವಾಗಿ ಕೆಲಸಮಾಡಿ ಬಯಲು ಪ್ರದೇಶದಲ್ಲಿ ಬೇಕಾಗುವಷ್ಟು ಶಾಖವನ್ನೊದಗಿಸುವ ಬಿರುಗಾಳಿ ಲಾಂದ್ರದಿಂದ ಇದನ್ನು ಕಾಯಿಸಬಹುದು.

ಬುಟ್ಟಿರಕ್ಷಕ: ಅತ್ಯಂತ ಸರಳವಾದ ವೆಚ್ಚರಹಿತವಾದ ರಕ್ಷಣಾ ಸಲಕರಣೆಯನ್ನು ಸಾಮಾನ್ಯವಾದ ಗೋಲಾಕಾರದ ಬುಟ್ಟಿ (ಚಿತ್ರ 57) ಯಿಂದಲೂ ತಯಾರಿಸಬಹುದು. ನೇರ ಬೀಸುಗಾಳಿಯನ್ನು ತಪ್ಪಿಸಲು ಬುಟ್ಟಿಯ ಕೆಳಅರ್ಧವನ್ನು ಗೋಣಿಚೀಲಗಳಿಂದಾಗಲೀ ಅಥವಾ ಸಿಮೆಂಟಿನ ಮಿಶ್ರಣವನ್ನು ಹಚ್ಚುವುದರಿಂದಾಗಲಿ ಮುಚ್ಚಬೇಕು. ಹೊಗೆ ಹೊರಗೆ ಹೋಗಲು ಅನುಕೂಲವಾಗುವಂತೆ ಮೇಲಿನ ಅರ್ಧವನ್ನು ತೆರೆದಿಡಬೇಕು. ಶಾಖದ ಮೂಲವಾದ ಮಧ್ಯದಲ್ಲಿಟ್ಟ ಬಿರುಗಾಳಿಲಾಂದ್ರದ ಸುತ್ತ ಮರಿಗಳಿಂ ಸುಟ್ಟುಕೊಳ್ಳುವುದನ್ನು ತಡೆಗಟ್ಟಲು ಇದು ½ ಅಂಗುಲದ ತಂತಿಬಲೆಯಿಂದ ಆವೃತವಾಗಿರಬೇಕು. ಬಿಸುಪು(ಬಿಸಿ) ಮತ್ತು ಆರಾಮುವನ್ನೊದಗಿಸಲು ನೆಲದ ಮೇಲೆ ಒಣಹುಲ್ಲು ಅಥವಾ ಮರದಹೊಟ್ಟನ್ನು ಹಾಸಬೇಕು. ಇದರಲ್ಲಿ ಸ್ಥಳಪಡೆಯಬಹುದಾದ ಮರಿಗಳ ಸಂಖ್ಯೆ ಈ ಉದ್ದೇಶಕ್ಕಾಗಿ ಉಪಯೋಗಿಸಿದ ಬುಟ್ಟಿಯ ಗಾತ್ರವನ್ನವ




ಚಿತ್ರ 57: ಬುಟ್ಟಿ ರಕ್ಷಕಗಳು

ಲಂಬಿಸುತ್ತದೆ. ಈ ರಚನೆಗೆ ಸುಮಾರು 6 ರೂಪಾಯಿಗಳು ವೆಚ್ಚವಾಗುತ್ತದೆ. ಇದರಲ್ಲಿ ಹೆಚ್ಚಿನ ಭಾಗ ಲಾಂದ್ರಕ್ಕಾಗಿ ವೆಚ್ಚವಾಗಿರುತ್ತದೆ.

ಸಾಮಾನು ತುಂಬುವ ಪೆಟ್ಟಿಗೆಯಿಂದ ರಕ್ಷಕ: ಮುಚ್ಚಳ ಮತ್ತು ತಳದ ಹಲಗೆಗಳನ್ನುತೆಗೆದು (ಮಳೆಯ ನೀರು ಬೇಗ ಹರಿದುಹೋಗಲು) ಇಳಿಜಾರಾದ ಚಾವಣಿಹಾಕಿರುವ 3 ಅಡಿ ಉದ್ದ, 2 ಅಡಿ ಅಗಲ ಮತ್ತು 2½ ಅಡಿ ಎತ್ತರದ ಸಾಮಾನು ತುಂಬುವ ಮರದ ಪೆಟ್ಟಿಗೆ ತೃಪ್ತಿಕರವಾದ ರಕ್ಷಕವಾಗುತ್ತದೆ (ಚಿತ್ರ 58). ಅವಶ್ಯಕವಾದರೆ ಮಳೆ ಒಳಗೆ ಹೋಗಲಾಗದಂತೆ ಸತು ಅಥವಾ ತವರ ಬಳಿದ ಕಬ್ಬಿಣದ ತಗಡಿನಿಂದ ಚಾವಣಿಯನ್ನು ಮುಚ್ಚಬಹುದು. ನೆಲವನ್ನು ½ ಅಂಗುಲ ತಂತಿಬಲೆಯಿಂದ ಮುಚ್ಚಿ ಶಾಖ ಒದಗಿಸಲು ಒಂದು ಬಿರುಗಾಳಿಲಾಂದ್ರವನ್ನು ಅದರ ಮಧ್ಯದಲ್ಲಿಡಬೇಕು. ತಂತಿಬಲೆಯ ನೆಲ ಹಿಕ್ಕೆಯನ್ನು ಕೆಳಗೆ ಬೀಳಲು ಬಿಡುತ್ತದೆ ಮತ್ತು ಅಸ್ವಚ್ಛತೆಯಿಂದುಂಟಾಗಬಹುದಾದ ಕಾಯಿಲೆಗಳಿಂದ ಮರಿಗಳನ್ನು ರಕ್ಷಿಸುತ್ತದೆ. ಮೊದಲ ಕೆಲವು ದಿನಗಳಲ್ಲಿ ಸ್ವಲ್ಪ ಒಣಹುಲ್ಲನ್ನು ನೆಲದ ಮೇಲೆ ಹಾಸಬಹುದು ಮತ್ತು ಮರಿಗಳು ಬರಿ ತಂತಿಯ ಮೇಲೆ ಇರುವಂತಾಗುವವರೆಗೆ ನಿಧಾನವಾಗಿ ಕಡಮೆ ಮಾಡಬೇಕು. ಕೋಳಿಗಳು ಮೈಸುಟ್ಟುಕೊಳ್ಳುವುದನ್ನು ತಡೆಗಟ್ಟಲು ದೀಪದ ಸುತ್ತ ½ ಅಂಗುಲದ ತಂತಿಬಲೆ ಅಥವಾ ತಂತಿ ಜಾಲರಿಯನ್ನು ಚೌಕನಾಗಿ ಅಥವಾ ಗುಂಡಾಗಿ ಸಡಿಲವಾಗಿ ಸುತ್ತಬೇಕು. ಲಾಂದ್ರದ ಮೇಲ್ಭಾಗದಲ್ಲಿ ಸೇರಿಸಲ್ಪಟ್ಟು ಮೇಲಕ್ಕೆ ಸಣ್ಣದಾಗುತ್ತಾ ಹೋಗಿ ಚಾವಣಿಯಲ್ಲಿ ಮಾಡಿರುವ ಸಣ್ಣ ತೂತಿನ ಮೂಲಕ ಹೊರಗೆ ಹೋಗುವ ಸತು ಅಥವಾ ತವರ ಹಚ್ಚಿದ ಕಬ್ಬಿಣದ ಚಿಮಣಿ, ಲಾಂದ್ರದ ಉರಿಗೆ ಹೊರಗಿನ ದಾರಿಯಾಗುತ್ತದೆ. ಮಳೆಯ ನೀರು ಒಳಗೆ ಬರದಂತೆ ಚಿಮಣಿಯ ಮೇಲ್ಭಾಗದ

ಬಾಯಿಸ ಮೇಲೆ ತಗಡಿನ ಟೊಪ್ಪಿಗೆಯಿದೆ. ಪೆಟ್ಟಿಗೆಯ ಮೇಲ್ಭಾಗದಲ್ಲಿ ವಾತಾಯನಕ್ಕಾಗಿ ಕೆಲವು ಗುಂಡು ತೂತುಗಳನ್ನು ಮಾಡಲಾಗಿರುತ್ತದೆ ಮತ್ತು ಮರಿಗಳು ಒಳಹೊರಗೆ ಓಡಾಡಲು ಕೆಳಭಾಗದಲ್ಲಿ ಜರುಗಿಸಬಹುದಾದ ಬಾಗಿಲಿದೆ. ಸುಮಾರು 2 ಅಂಗುಲ ಎತ್ತರದ ತುಂಡುಗಳ ಮೇಲಿಡುವುದರಿಂದ ಪೆಟ್ಟಿಗೆಯನ್ನು ನೆಲಕ್ಕೆ ಸೋಕದಂತಿಡಬೇಕು. ಈ ರೀತಿಯ ರಕ್ಷಕಗಳು ಹೆಚ್ಚಾಗಿ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಉಪಯೋಗದಲ್ಲಿವೆ ಮತ್ತು ಲಾಂದ್ರವೂ ಸೇರಿದಂತೆ ಸುಮಾರು 10 ರೂಪಾಯಿ ವೆಚ್ಚವಾಗುತ್ತದೆ.




ಚಿತ್ರ 58: ಪ್ಯಾಕಿಂಗ್ ಪೆಟ್ಟಿಗೆ(ಕೇಸ್)ಯಿಂದ ಮಾಡಿದ ರಕ್ಷಕ

ಮರಿಗಳು ಒಳಗೆ ಬರಲು ಆಗುವಂತೆ ಒಂದು ಕಡೆ ಪಕ್ಕವನ್ನು ತೆಗೆದ $1\frac{1}{2}$ ಅಡಿ ಚವರದ ಮರದ ಪೆಟ್ಟಿಗೆಯಿಂದ ಮತ್ತೂ ಸರಳವಾದ ದೀಪರಕ್ಷಕವನ್ನು ರಚಿಸಬಹುದು. ಶಾಖ ಒದಗಿಸಲು ಸಾಮಾನ್ಯವಾದ ಬಿರುಗಾಳಿಲಾಂದ್ರವನ್ನಿಡಲು ಆಗುವಂತೆ ಮೇಲ್ಭಾಗವನ್ನು ಸ್ವಲ್ಪ ಎತ್ತಬೇಕು. ಈ ರೀತಿಯ ರಕ್ಷಕಗಳನ್ನು ಮರದಹೊಟ್ಟು ಅಥವಾ ಹುಲ್ಲು ಹಾಸಿರುವ ಸಣ್ಣ ಕೊಠಡಿಗಳಲ್ಲಿಡಬೇಕು. ಇದು 50 ರಿಂದ 100 ಮರಿಗಳನ್ನೊಳಗೊಳ್ಳಬಹುದು ಮತ್ತು 7 ರೂಪಾಯಿ ಬೆಲೆಬಾಳುತ್ತದೆ.


ಉತ್ತಮಪಡಿಸಿದ ಪೆಟ್ಟಿಗೆ ರಕ್ಷಕ: ಚಿತ್ರ 59 ರಲ್ಲಿ ವಿವರಿಸಿರುವಂತಹ ಸರಳ ಮತ್ತು ಸಮರ್ಥ ರಕ್ಷಕವನ್ನು ಯಾವ ಬಡಗಿಯಾದರೂ ಸ್ಥಳೀಯವಾಗಿ ಮಾಡ

ಬಹುದು. ಇದು ಕೆಳಗಿನ ಮತ್ತು ಮೇಲಿನ ಹಲಗೆಗಳನ್ನು ತೆಗೆದಿರುವ 3 ಅಡಿ × 2 ಅಡಿ × 8 ಅಂಗುಲ ಆಳತೆಯ ಆಯಾಕಾರದ ಅತ್ಯಂತ ಕಡಮೆ ಬೆಲೆಯ ಮರದ ಪೆಟ್ಟಿಗೆಯಿಂದಾಗಿದೆ. ಪೆಟ್ಟಿಗೆಯ ತಳವು $\frac{1}{2}$ ಅಂಗುಲದ ತಂತಿ ಬಲೆಯಿಂದ ಮುಚ್ಚಲ್ಪಟ್ಟಿರುತ್ತದೆ, ಇದೇ ಮರಿಗಳು ನಿಲ್ಲುವ ನೆಲಗಟ್ಟಾಗುತ್ತದೆ. ಮೇಲ್ಭಾಗಕ್ಕೆ 3 ಅಡಿ × 2 ಅಡಿಯ ಮರದ ಚೌಕಟ್ಟಿನಲ್ಲಿ ಕೂರಿಸಿರುವ $\frac{1}{2}$ ಅಂಗುಲವ ತಂತಿಬಲೆಯಿದೆ, ಇದನ್ನು ಬೇಕಾದಾಗ ತೆಗೆದುಮುಚ್ಚಿಮಾಡಲು ಅನುಕೂಲವಾಗುವಂತೆ ಕೀಲಿನೊಡನೆ ಪೆಟ್ಟಿಗೆಗೆ ಸೇರಿಸಿದ್ದಾರೆ, ಪೆಟ್ಟಿಗೆಯ ತಳಮಟ್ಟದಲ್ಲಿ ಅದರ ಪಕ್ಕಕ್ಕೆ ಸಮತಲವಾಗಿ 3 ಅಂಗುಲ ಅಗಲದ ಮರದ ಆಧಾರ ಅಥವಾ ಜಗಲಿಗಳನ್ನು ನಾಲ್ಕೂಕಡೆ ಸೇರಿಸಿದೆ, ಇದಕ್ಕೆ $1\frac{1}{2}$ ಅಂಗುಲ ಮೇಲೆ ನಾಲ್ಕೂ ಕಡೆ $1\frac{1}{2}$ ಅಂಗುಲ ವ್ಯಾಸದ ಗುಂಡನೆಯ ತೂತುಗಳನ್ನು ಒಂದು ಅಂಗುಲ ಅಂತರದಲ್ಲಿ ಮಾಡಿದೆ. ಪೆಟ್ಟಿಗೆಯನ್ನು ಅದರ ನಾಲ್ಕೂ ಮೂಲೆಗಳಿಗೆ ಸೇರಿಸಿರುವ 3 ಅಂಗುಲ ಎತ್ತರದ ಕಾಲುಗಳ ಮೇಲೆ ಇಡಬೇಕು. ಸುತ್ತಲೂ ಜಗಲಿಯ ಮೇಲೆ ಸತುವಿನ ತಗಡಿನ ಆಹಾರದ ಮತ್ತು ನೀರಿನ ಬಾನೆಗಳನ್ನಿಡಬೇಕು. ಶಂಖಾಕೃತಿಯ ಮರೆಯಿರುವ 60 ಕಿ.ವ್ಯಾಟ್‌ಗಳ ವಿದ್ಯುದ್ದೀಪ ಅಥವಾ ಸುತ್ತಲೂ $1\frac{1}{2}$ ಅಂಗುಲದ ತಂತಿಬಲೆಯ ಬೇಲಿಯಿರುವ ಬಿರುಗಾಳಿಲಾಂದ್ರ, ಇವೆರಡರಲ್ಲಿ ಒಂದು ಶಾಖವನ್ನೊದಗಿಸುತ್ತವೆ. ಈ ರಕ್ಷಕ 50 ರಿಂದ 60 ಮರಿಗಳನ್ನೊಳಗೊಳ್ಳಬಹುದು.




ಚಿತ್ರ 59: ದೀಪರಕ್ಷಕದ ರಚನಾ ವಿವರಗಳು

ಈ ರೀತಿಯ ರಕ್ಷಕಗಳ ಪ್ರಯೋಜನವೆಂದರೆ ಇದು ರಕ್ಷಕ ಮತ್ತು ಮರಿಗಳು ಓಡಾಡುವ ಜಾಗ ಎರಡರ ಕೆಲಸವನ್ನೂ ಮಾಡುತ್ತದೆ. ಒಳ್ಳೆಯ ಬಿಸಿಲಿರುವಾಗ ವಿದ್ಯುದ್ದೀಪ ಅಥವಾ ಲಾಂದ್ರವನ್ನು ತೆಗೆದು, ಮರಿಗಳು ಬೇಕಾದಾಗ ಬಿಸಿಲಿಗೆ, ಬೇಕಾದಾಗ ನೆರಳಿಗೆ ಬರಲು ಆಗುವಂತೆ ಮೇಲ್ಭಾಗದ ಅರ್ಧವನ್ನು ಮಾತ್ರ ಗೋಣಿ ಚೀಲದಿಂದ ಮುಚ್ಚಿ ರಕ್ಷಕವನ್ನು ಬಿಸಿಲಿಗಿಡಬೇಕು. ಸಂಜೆ ಮತ್ತು ರಾತ್ರಿ ಲಾಂದ್ರ ಹಚ್ಚಿಟ್ಟು ಮೇಲ್ಭಾಗವನ್ನು ಗೋಣಿಚೀಲದಿಂದ ಮುಚ್ಚಬೇಕು, ಚಳಿ ಹೆಚ್ಚಾಗಿದ್ದರೆ ಉಣ್ಣೆಯ ಕಂಬಳಿ ಮುಚ್ಚಬೇಕು. ಇದು ಮರಿಗಳ ಜೀವನದ ಎರಡು, ಹೆಚ್ಚೆಂದರೆ ಮೂರುವಾರಗಳ ಕಾಲ ಅವಶ್ಯಕ. ನಾಲ್ಕುವಾರಗಳ ನಂತರ ಮೇಲೆ ಮುಚ್ಚುವುದಾಗಲಿ ಕಾಯಿಸುವುದಾಗಲಿ ಬೇಕಿಲ್ಲ.




ಚಿತ್ರ 60: ಗ್ರಾಮೀಣ ಪರಿಸ್ಥಿತಿಗಳಿಗೆ ಹೊಂದುವ ಸುಲಭ ಹಾಗೂ ದಕ್ಷ ರಕ್ಷಕ



ಚಿತ್ರ 61: ವಿದ್ಯುತ್ ರಕ್ಷಕ



ಚಿತ್ರ 62: ಸಮುದಾಯ ವಿದ್ಯುತ್ ರಕ್ಷಕ



ಚಿತ್ರ 63: ವಿದ್ಯುತ್ ಚಾಲಿತ ಸಮುದಾಯ ರಕ್ಷಕ; ಮೇಯಿಸುವ ಹಾಗೂ ನೀರುಣಿಸುವ ಸಲಕರಣೆಗಳನ್ನು ಗ

ಮೊದಲ ಎರಡು ಅಥವಾ ಮೂರು ವಾರಗಳು ರಕ್ಷಣಾ ಪೆಟ್ಟಿಗೆಯ ತಳಕ್ಕೆ ಕತ್ತರಿಸಿದ ಸ್ವಚ್ಛವಾದ ಒಣಹುಲ್ಲನ್ನು ಹಾಕಿ, ಕನಿಷ್ಠ ವಾರಕ್ಕೊಂದು ಸಾರಿ, ಅವಶ್ಯಕವಾದರೆ ಇನ್ನೂ ಹೆಚ್ಚು ಸಾರಿ ಇದನ್ನು ಬದಲಾಯಿಸಬೇಕು. ಮೂರು ವಾರಗಳ ನಂತರ ಇದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬಹುದು. ಜಗಲಿಯ ಹಲಗೆಗಳನ್ನು ಕೀಲಿನೊಡನೆ ಜೋಡಿಸಿದ್ದರೆ ಅವುಗಳಿಂದ ಪಕ್ಕದಲ್ಲಿನ ತೂತುಗಳನ್ನು ರಾತ್ರಿಯ ಹೊತ್ತು ಮುಚ್ಚಿ ಬೀಸುಗಾಳಿಯಿಂದ ಮರಿಗಳು ತಣ್ಣಗಾಗುವುದನ್ನು ತಡೆಗಟ್ಟಬಹುದು.

ವಿದ್ಯುತ್ ರಕ್ಷಕಗಳು: ಹಲವು ರೀತಿಯ ಅಭಿವೃದ್ಧಿ ಹೊಂದಿದ ವಿದ್ಯುತ್ ರಕ್ಷಕಗಳು ಈಗ ಲಭ್ಯವಿವೆ ಮತ್ತು ಹಳ್ಳಿಗಳಿಗೆ ವಿದ್ಯುತ್ ಸರಬರಾಜು ಪ್ರಾರಂಭವಾಗುತ್ತಿರುವುದರಿಂದ ಇವುಗಳನ್ನು ವಿಸ್ತಾರವಾಗಿ ಉಪಯೋಗಿಸುವುದು ಸಾಧ್ಯವಾಗಬಹುದು. ರಕ್ಷಕದ ರಚನೆ ಶಾಖದ ಮೂಲ ಮರದ ಅಥವಾ ಲೋಹದ ಮರೆಯ ಮೇಲೆ ಕೂಡಿಸಿರುವ ವಿದ್ಯುದ್ದೀಪ ಅಥವಾ ಕಾಯಿಸುವ ಸುರುಳಿಗಳಿಂದಾದುದು(ಚಿತ್ರ61). ಈ ಒಂದು ಅಂಶವನ್ನು ಬಿಟ್ಟರೆ ರಕ್ಷಕದ ರಚನೆ ಮೂಲತಃ ಲಾಂದ್ರ ಅಥವಾ ಎಣ್ಣೆಯಿಂದ ಕಾಯಿಸಿದ ರಕ್ಷಕಗಳಂತೆಯೇ ಇರುತ್ತದೆ. ಈ ರೀತಿಯ ರಕ್ಷಕಗಳ ದಕ್ಷತೆ ವಿದ್ಯುತ್ತಿನ ನಿರಂತರ ಸರಬರಾಜನ್ನವಲಂಬಿಸುತ್ತದೆ; ಏಕೆಂದರೆ ವಿದ್ಯುತ್ತು ನಿಂತು ಹೋದರೆ ಮರಿಗಳಿಗೆ ತಂಡಿಯಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸತ್ತುಹೋಗುತ್ತವೆ.

ವಿದ್ಯುತ್ತಿನ ಬೆಲೆ ಸಾಕಣೆದಾರನ ಮಿತಿಯಲ್ಲಿದ್ದರೆ ಮರಿಗಳನ್ನು ವಿದ್ಯುತ್ತಿನಿಂದ ರಕ್ಷಿಸುವುದು ಮಿತವ್ಯಯಕಾರಿ. ಮೇಲೆ ಹೇಳಿದ ಉತ್ತಮಪಡಿಸಿದ ರಕ್ಷಕಪೆಟ್ಟಿಗೆಯಲ್ಲಿ ಬಿರುಗಾಳಿ ಲಾಂದ್ರದ ಬದಲು ನಾಲ್ಕು 60 ಕಿ.ವ್ಯಾ. ವಿದ್ಯುದ್ದೀಪಗಳನ್ನು ಉಪಯೋಗಿಸುವುದರಿಂದ, ಸರಳವಾದ ಕಡಮೆವೆಚ್ಚದ ಮತ್ತು ದಕ್ಷ ವಿದ್ಯುತ್‌ರಕ್ಷಕವನ್ನು ತಯಾರಿಸಬಹುದು.

ಸಮುದಾಯ ರಕ್ಷಕದ ಆಯ್ಕೆ: ಹೆಚ್ಚಿನ ಸಂಖ್ಯೆಗೆ ರಕ್ಷಣೆಯನ್ನೊದಗಿಸಬೇಕಾದಾಗ ಸಮುದಾಯ ರಕ್ಷಣೆಗೆ ಅತ್ಯಂತ ಚೆನ್ನಾಗಿ ಹೊಂದುವ ರಕ್ಷಕವನ್ನು ಆಯ್ಕೆಮಾಡುವುದು ಅತಿಮುಖ್ಯ. ಚೆನ್ನಾಗಿ ತಯಾರಿಸಿರುವ ರಕ್ಷಕವನ್ನು ಕೊಂಡುಕೊಳ್ಳುವುದು ಮತ್ತು ಹೆಚ್ಚಾಗಿ ತೃಪ್ತಿದಾಯಕ ಫಲವನ್ನು ಕೊಡದಿರುವ ಕೆಳಮಟ್ಟದ ರಚನೆಯನ್ನು ತೆಗೆದುಕೊಳ್ಳದಿರುವುದು ಅಪೇಕ್ಷಣೀಯ. ಕೆಲವು ಮರಿಗಳನ್ನು ಮಾತ್ರ ಸಾಕಬೇಕಾದಂತಹ ಸಂದರ್ಭದಲ್ಲಿ ಯಾವುದೋ ರೀತಿಯ 'ದೀಪರಕ್ಷಕ' ತುಲನಾತ್ಮಕವಾಗಿ ಅದರ ಕಡಮೆ ಪ್ರಾರಂಭಿಕ ವೆಚ್ಚದಿಂದಾಗಿ ಸ್ಥಾನ ಪಡೆಯುತ್ತದೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ (ಕೆಲವು ನೂರು ಅಥವಾ ಹೆಚ್ಚು) ಮರಿಗಳನ್ನು ಸಾಕಬೇಕಾದಾಗ ಯಾವುದಾದರೊಂದು ರೀತಿಯ ವಿದ್ಯುತ್‌ರಕ್ಷಕ ಅವಶ್ಯಕ (ಚಿತ್ರ 62, 63). ಒಂದೇ ಕಾಲದಲ್ಲಿ ಹೆಚ್ಚು ಮರಿಗಳನ್ನು ರಕ್ಷಿಸಿದಷ್ಟೂ, ಪ್ರತಿ ಮರಿಗೆ ಬೀಳುವ ರಕ್ಷಣಾ ವೆಚ್ಚ ತಗ್ಗುತ್ತದೆ. ಆದಾಗ್ಯೂ ಒಂದೇ ರಕ್ಷಕದಲ್ಲಿ 250ಕ್ಕೆ ಹೆಚ್ಚಿಲ್ಲದಂತೆ ಮರಿಗಳನ್ನು ರಕ್ಷಿಸಿದಾಗ ಸಾಮಾನ್ಯವಾಗಿ ಒಳ್ಳೆಯ ಪ್ರತಿಫಲಗಳು ಸಿಕ್ಕಿವೆ.


ಸಾಮಾನ್ಯ ಪರಿಸ್ಥಿತಿಯಲ್ಲಿ ಮರಿಗಳು ಬಹಳ ಬೇಗ ಬೆಳೆಯುತ್ತವೆ, ಸುಮಾರು 6 ವಾರ ವಯಸ್ಸಿನವಾಗುವವರೆಗೆ ಸುಮಾರು 2 ವಾರಗಳಿಗೊಮ್ಮೆ ಅವುಗಳ ತೂಕ ಎರಡರಷ್ಟಾಗುತ್ತದೆ. ಆದುದರಿಂದ ಪ್ರಾರಂಭದಲ್ಲಿ ಹೆಚ್ಚಿನ ಮರಿಗಳನ್ನಿಟ್ಟರೆ ಬಹು ಬೇಗ ಜಾಗವಿಲ್ಲದಂತಾಗುವ ಕಾರಣವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಒಂದೇ ಕಡೆ ರಕ್ಷಿಸುವ ಮರಿಗಳು ಹೆಚ್ಚಿದಷ್ಟೂ ಸಾಮಾನ್ಯವಾಗಿ ಬೆಳವಣಿಗೆ ಕುಗ್ಗುತ್ತದೆ ಮತ್ತು ಮರಣದ ಸಂಖ್ಯೆ ಹೆಚ್ಚುತ್ತದೆ. ಆದುದರಿಂದ ಒಂದು ರಕ್ಷಕದಲ್ಲಿ 250ಕ್ಕಿಂತ ಹೆಚ್ಚು ಮರಿಗಳನ್ನು ರಕ್ಷಿಸದಿರುವುದು ಒಳ್ಳೆಯದು.

ರಕ್ಷಕದೊಳಗಿನ ಸ್ಥಳ: ಮರಿಗಳನ್ನು ಚೆನ್ನಾಗಿ ರಕ್ಷಿಸಲು ಸಾಕಷ್ಟು ಜಾಗ ಮತ್ತು ಸರಿಯಾದ ವಾತಾಯನ ಎಷ್ಟು ಮುಖ್ಯವೆಂದರೆ, ಸರಿಯಾದ ಸ್ಥಳಾವಕಾಶ ವೊದಗಿಸುವ ಬಗ್ಗೆ ಸಾಧ್ಯವಾದ ಎಲ್ಲ ಎಚ್ಚರಿಕೆಯನ್ನೂ ವಹಿಸಬೇಕು. ಹಗುರ ತಳಿಯ ಮರಿ ಒಂದಕ್ಕೆ 7 ರಿಂದ 10 ಚದರ ಅಂಗುಲ ಮತ್ತು ದೊಡ್ಡ ತಳಿಯ ಮರಿ ಒಂದಕ್ಕೆ 10 ರಿಂದ 12 ಚದರ ಅಂಗುಲದಷ್ಟು ಜಾಗ ಅವಶ್ಯಕ. 2 ಅಡಿ ಉದ್ದ, 2 ಅಡಿ ಅಗಲ ಮತ್ತು 10 ಅಂಗುಲ ಎತ್ತರವಾಗಿರುವ ರಕ್ಷಕ 50 ರಿಂದ 70 ಮರಿಗಳಿಗೆ ಜಾಗ ಒದಗಿಸಬಲ್ಲದು. ಇದೇ ರೀತಿ 1 ಅಡಿ ಚದರದ ರಕ್ಷಕ 20 ಮರಿಗಳನ್ನು ಸಾಕಲು ಮಾತ್ರ ಸಾಕಾಗುತ್ತದೆ. ರಕ್ಷಣಾ ಮನೆಯೊಳಗೆ ಪ್ರತಿಮರಿಗೆ ಕನಿಷ್ಠ $\frac{1}{2}$ ಚದರ ಅಡಿ ಜಾಗಕೊಡಬೇಕು. ಅಂದರೆ 100 ಮರಿಗಳಿಗೆ ಕನಿಷ್ಠ 50 ಚದರ ಅಡಿ ಜಾಗಕೊಡಬೇಕು.

ರಕ್ಷಕದ ಶಾಖ: ಒಂದು ನಿಯತ ಶಾಖವನ್ನು ರಕ್ಷಿಸಿಕೊಂಡು ಬರುವುದನ್ನು ಖಚಿತಮಾಡಿಕೊಳ್ಳಲು ಮರಿಗಳಿಡುವ ಮೊದಲು 2 ಅಥವಾ ಮೂರು ದಿನಗಳು ರಕ್ಷಕವನ್ನು ಪರೀಕ್ಷೆಗಾಗಿ ನಡೆಸಬೇಕು; ತಳಗಟ್ಟಿನಿಂದ ಸುಮಾರು 2 ಅಂಗುಲ ಮೇಲೆ ರಕ್ಷಕದೊಳಗಿನ ಶಾಖ 95°F ಇರಬೇಕು. ವರ್ಷದ ಕಾಲ ಮತ್ತು ಹೊರಗಿನ ಶಾಖವನ್ನವಲಂಬಿಸಿ ಪ್ರತಿವಾರ ಶಾಖವನ್ನು 5°Fನಂತೆ 4ನೆಯ ವಾರದ ಹೊತ್ತಿಗೆ 80°F ಆಗುವಷ್ಟು ಇಳಿಸಬೇಕು. ನಂತರ ಇದನ್ನು ಅದೇ ಮಟ್ಟದಲ್ಲಿ ಉಳಿಸಿಕೊಳ್ಳಬೇಕು.

ರಕ್ಷಣೆಯಲ್ಲಿರುವ ಮರಿಗಳಿಗೆ ಅವಶ್ಯಕವಾದ ಶಾಖದ ಬಗ್ಗೆ ಯಾವುದೇ ರೀತಿಯ ನಿರ್ದಿಷ್ಟ ನಿಯಮವಿಲ್ಲ. ಇದನ್ನು ಪ್ರತಿಯೊಬ್ಬನೂ ತನ್ನದೇ ಆದ ವಿವೇಚನೆ ಮತ್ತು ಅನುಭವಗಳಿಂದ ತೀರ್ಮಾನಿಸಬೇಕು. ರಕ್ಷಣೆಯ ಮುಖ್ಯ ಉದ್ದೇಶವೆಂದರೆ ಎಲ್ಲ ಕಾಲಗಳಲ್ಲೂ ಮರಿಗಳು ಆರಾಮವಾಗಿರುವ ಮಟ್ಟದ ಶಾಖವನ್ನು ರಕ್ಷಣಾ ಮನೆಯಲ್ಲಿ ಉಳಿಸಿಕೊಂಡು ಬರುವುದು. ಆದುದರಿಂದ ಕೋಳಿಸಾಕಣೆದಾರನು ವಿವಿಧ ಶಾಖಗಳಲ್ಲಿ ಮರಿಗಳ ನಡೆವಳಿಕೆಯನ್ನು ಚೆನ್ನಾಗಿ ಅರಿತುಕೊಂಡಿರಬೇಕು ಮತ್ತು ಮರಿಗಳ ಪ್ರತಿಕ್ರಿಯೆಯಿಂದ ಮರಿಗಳು ಆರಾಮವಾಗಿವೆಯೇ ಇಲ್ಲವೇ ಎಂಬುದನ್ನು ಕೂಡಲೇ ಹೇಳುವಂತಿರಬೇಕು. ಹೆಚ್ಚಿನ ಶಾಖ ಮರಿಗಳು ಏದುಸಿರುಬಿಡುವಂತೆ ಮತ್ತು ಶಾಖದಿಂದ ದೂರವಿರುವ ಅವುಗಳೆಲ್ಲವೂ ಒಂದು ಮೂಲೆಯಲ್ಲಿ ತುಂಬಿಕೊಳ್ಳುವಂತೆ

ಮಾಡುತ್ತದೆ. ಇದೇ ರೀತಿ ಅತಿಕಡಮೆ ಶಾಖ ಅವುಗಳು ರಕ್ಷಣಾಮನೆಯ ಶಾಖ ಮೂಲದ ಕೆಳಗೆ ಒಂದರ ಮೇಲೊಂದು ಗುಡ್ಡೆಹಾಕಿಕೊಳ್ಳುವಂತೆ ಮಾಡುತ್ತದೆ. ಮರಿಗಳು ಆರಾಮವಾಗಿದ್ದರೆ, ರಕ್ಷಕದಲ್ಲಿ ಸಮನಾಗಿ ಹರಡಿಕೊಂಡಿರುತ್ತವೆ (ಚಿತ್ರ 64 C). ರಕ್ಷಕದ ಶಾಖ ಕಡಮೆಯಾದಾಗ ಎಲ್ಲವೂ ಶಾಖಮೂಲದ ಕೆಳಗೆ ಗುಡ್ಡೆ ಹಾಕಿಕೊಳ್ಳುತ್ತವೆ (ಚಿತ್ರ 64 A). ಶಾಖ ಹೆಚ್ಚಾದಾಗ ಪರಿಧಿಯ ಕಡೆ ಗುಡ್ಡೆ ಹಾಕಿಕೊಳ್ಳುತ್ತವೆ (ಚಿತ್ರ 64 B).




ಚಿತ್ರ 64: ಹೋವರ್‌ನ ಕೆಳಗೆ ಮರಿಗಳ ಹಂಚಿಕೆ A) ಕಡಮೆ ಶಾಖ, B) ಹೆಚ್ಚು ಶಾಖ, C) ಸರಿಯಾದ ಶಾಖ

ರಕ್ಷಣಾ ಮನೆಯೊಳಗಿನ ಹಾಸುಪದಾರ್ಥ: ಮರಿಗಳನ್ನು ಚಳಿ ಮತ್ತು ತೇವಾಂಶದಿಂದ ರಕ್ಷಿಸಲು ಮತ್ತು ರಕ್ಷಣಾ ಮನೆಯಲ್ಲಿ ಸ್ವಚ್ಛತೆಯನ್ನು ಉಳಿಸಿಕೊಂಡು ಬರಲು, ಸಮುದಾಯ ರಕ್ಷಣೆಯಲ್ಲಿ ತಳಗಟ್ಟಿನ ಮೇಲೆ ಒಳ್ಳೆಯ ಹಾಸುಪದಾರ್ಥವನ್ನು ಹಾಸುವುದು ಅವಶ್ಯಕ. ಪೂರ್ತಿ ಜಾಗವನ್ನು ಹಾಸುಪದಾರ್ಥದಿಂದ ಮುಚ್ಚಬೇಕು. ಹತ್ತರಿಪ್ಪುಡಿ ಕತ್ತರಿಸಿದ ಒಣಹುಲ್ಲು, ಬತ್ತದ ಹುಲ್ಲು ಒಳ್ಳೆಯ ಹಾಸುಪದಾರ್ಥಗಳಾಗುತ್ತವೆ, ಇವು ಸುಮಾರಾಗಿ ತೇವ ಹೀರುವ ಪದಾರ್ಥಗಳಾಗಿರುವುದರ ಜೊತೆಗೆ ರಕ್ಷಣಾಮನೆಗೆ ಕಾಂತಿಯುಕ್ತವಾದ ಮತ್ತು ಹರುಷದಾಯಕವಾದ ನೋಟವನ್ನು ಕೊಡುತ್ತದೆ. ಸಾಮಾನ್ಯವಾದ ಸ್ವಚ್ಛ ಮರಳು, ಮರದಹೊಟ್ಟು, ಕಡಲೆಕಾಯಿ ಹೊಟ್ಟು, ಕಾಫಿ ಹೊಟ್ಟು ಮೊದಲಾದುವನ್ನು ಹಾಸುಪದಾರ್ಥದ ಕಾರ್ಯಕ್ಕೆ ಆದರ್ಶವಲ್ಲದಿದ್ದರೂ ಸಹ ಸಿಕ್ಕುವ ಜಾಗಗಳಲ್ಲಿ ಇವುಗಳನ್ನು ಹುಲ್ಲಿನ ಬದಲಾಗಿ ಉಪಯೋಗಿಸಬಹುದು. ಹಾಸುಪದಾರ್ಥಗಳನ್ನು ನೆಲಗಟ್ಟಿನ ಮೇಲೆ 2 ರಿಂದ 4 ಅಂಗುಲ ದಪ್ಪವಾಗಿ ಹರಡಿ ಪ್ರತಿದಿನ ಬೆಳಿಗ್ಗೆ ತಳಮೇಲು ಮಾಡಬೇಕು ಮತ್ತು ಇದನ್ನು ವಾರಕ್ಕೊಂದು ಸಾರಿ ಅಥವಾ ತೇವವಾದರೆ ಇಲ್ಲವೇ ಹಿಕ್ಕೆಯಿಂದ ಬಹಳ ಹೊಲಸಾಗಿದ್ದರೆ ಇನ್ನೂ ಬೇಗ ಬದಲಾಯಿಸಬೇಕು. ಕುಡಿಯುವ ನೀರು ಚೆಲ್ಲುವುದೇ ಮೊದಲಾದುದರಿಂದ ಹಾಸುಪದಾರ್ಥದಲ್ಲಿ ಒದ್ದೆ ಜಾಗಗಳುಂಟಾದಾಗ ಆ ಹಾಸುಪದಾರ್ಥವನ್ನು ತೆಗೆದು ಆ ಜಾಗವನ್ನು ಹೊಸಹಾಸುಪದಾರ್ಥ ಹಾಕಿಯೋ ಅಥವಾ ಇರುವ ಹಾಸುಪದಾರ್ಥವನ್ನು ಹರಡಿಯೋ ಮುಚ್ಚಬೇಕು.

ಬ್ಯಾಟರಿ ರಕ್ಷಕಗಳು: ಬ್ಯಾಟರಿ ರಕ್ಷಕಗಳು, ಸೀಮಿತ ಜಾಗದಲ್ಲಿ, ಸ್ವಲ್ಪಕಾಲ ಹೆಚ್ಚಿನ ಸಂಖ್ಯೆಯ ಮರಿಗಳಿಗೆ ಜಾಗ ಒದಗಿಸಲು ವಿಶೇಷವಾಗಿ ರೂಪಿಸಿರುವ ರಚನೆಗಳು.

ಇವು ಮರಿಗಳು ಮೊಟ್ಟೆಯೊಡೆದು ಹೊರಬಂದಾಗಿನಿಂದ ನಾಲ್ಕುವಾರ ವಯಸ್ಸಿನ ವಾಗುವವರೆಗೆ ಮರಿಗಳಿಗೆ ಜಾಗ ಒದಗಿಸುವಲ್ಲಿ ಬಹಳ ಉಪಯೋಗಕಾರಿ ಎಂಬುದು ನಿರ್ವಿವಾದವಾದರೂ ಅವಕ್ಕೆ ,ಬೇಕಾಗುವ ಪ್ರಾರಂಭಿಕ ವೆಚ್ಚ ಬಹಳವಾಗಿರುವುದು ಇವು ಜನಪ್ರಿಯವಾಗುವುದಕ್ಕೆ ಅಡ್ಡಿಯಾಗಿದೆ.

ಬ್ಯಾಟರಿ ರಕ್ಷಕದಲ್ಲಿ, ಒಂದರ ಮೇಲೆ ಒಂದರಂತೆ ಹಂತಗಳಲ್ಲಿ ಕಟ್ಟಿದ ಹಲವು ರಕ್ಷಣಾ ವಿಭಾಗಗಳಿವೆ (ಚಿತ್ರ 65). ಪ್ರತಿಭಾಗದಲ್ಲೂ ಎಣ್ಣೆದೀಪ ಅಥವಾ ವಿದ್ಯುತ್ತಿ



ಚಿತ್ರ 65: ವಿದ್ಯುತ್ ಬ್ಯಾಟರಿ ರಕ್ಷಕ

ನಿಂದ ಕಾಯಿಸಿದ ಮತ್ತು ತಂತಿಬಲೆಯ ತಳಗಟ್ಟಿನ ಕೆಳಗೆ ಹಿಕ್ಕೆ ಬೀಳಲು ಲೋಹದ ತಟ್ಟೆಯುಳ್ಳ ರಕ್ಷಕಗಳಿವೆ. ಹಿಕ್ಕೆ ತಟ್ಟೆಯಲ್ಲಿ ಆಗಾಗ್ಗೆ ಸ್ವಚ್ಛಮಾಡಲು ಸಾಧ್ಯವಾಗುವಂತಹ, ಯಾಂತ್ರಿಕವಾಗಿ ಸುತ್ತಿಕೊಳ್ಳುವ ನೀರುದಾಟದ ಬಟ್ಟೆಯ ಪಟ್ಟೆ ಅಥವಾ ಆಗಾಗ್ಗೆ ತೆಗೆದುಹಾಕುವಂತಹ ಕಾಗದವಾಗಲೀ ಇರಬಹುದು. ರಕ್ಷಣಾ ಮನೆಯಲ್ಲಿರುವ ಮರಿಗಳು ಬೇಕಾದಾಗ ಸುಲಭವಾಗಿ ಹೋಗಿಬರಲು ಶೀತಲೀಕರಣ ವಿಭಾಗ ಅಥವಾ ಓಡಾಡುವ ಜಾಗವನ್ನು ರಕ್ಷಣಾ ವಿಭಾಗಕ್ಕೆ ಜೋಡಿಸಿದೆ. ಪ್ರತಿ ವಿಭಾಗದ ಆಚೆ ಸುತ್ತಲೂ ಹೊಂದಿಸಬಹುದಾದ ಆಹಾರ ಮತ್ತು ನೀರಿನ ಬಾನಿಗಳನ್ನಿಟ್ಟಿದೆ. ಈಗ ಬ್ಯಾಟರಿ ರಕ್ಷಕಗಳನ್ನು ಸಾಮಾನ್ಯವಾಗಿ ಹೊರದೇಶದಿಂದ ಆಮದುಮಾಡಿಕೊಳ್ಳಲಾಗುತ್ತಿದೆ ಮತ್ತು ಇದಕ್ಕೆ ಹೆಚ್ಚಿನ ಬಂಡವಾಳ ಬೇಕು. ಆದಾಗ್ಯೂ ಇವುಗಳನ್ನು ತಕ್ಕಮಟ್ಟಿಗೆ ಕಡಮೆ ವೆಚ್ಚದಲ್ಲಿ ಸ್ಥಳೀಯವಾಗಿ ಮಾಡಿಕೊಳ್ಳುವುದು ಸಾಧ್ಯ.

ಬ್ಯಾಟರಿ ರಕ್ಷಕದ ಮುಖ್ಯಗುಣಗಳೆಂದರೆ, ಸ್ವಲ್ಪ ಜಾಗದಲ್ಲಿ ಹೆಚ್ಚಿನ ಮರಿಗಳ ರಕ್ಷಣೆ, ಕಡಮೆ ಸಾವಿನ ಪ್ರಮಾಣ ಮತ್ತು ಮರಿಗಳನ್ನು ಸಾಕುವುದರಲ್ಲಿ ಮಿತವ್ಯಯ.

ರಕ್ಷಣೆಯ ಋತು


ಆಚರಣೆಗೆ ತಂದ ರಕ್ಷಣಾ ಪದ್ಧತಿ ಯಾವುದೇ ಆದರೂ ಕೂಡ, ಎಳೆಯ ಮರಿಗಳನ್ನು ಬೆಚ್ಚಗೆ ಆರಾಮದಾಯಕವಾಗಿಡುವುದು ಮತ್ತು ಸಮತೋಲ ಆಹಾರವನ್ನು ಮೇಯಿಸುವುದು ಅವಶ್ಯಕ. ರಕ್ಷಕದ ಹೊರಗಿನ ವಾತಾವರಣ ಅತಿಮುಖ್ಯವಾದುದರಿಂದ ಮರಿಗಳನ್ನು ವರ್ಷದ ಒಂದು ನಿರ್ದಿಷ್ಟ ಕಾಲದಲ್ಲಿ ಸಾಕುವುದರಿಂದ ಮಾತ್ರ ಉತ್ತಮ ರಕ್ಷಕ ಪ್ರತಿಫಲಗಳನ್ನು ಪಡೆಯಬಹುದು. ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ನವೆಂಬರ್‌ನಿಂದ ಫೆಬ್ರುವರಿವರೆಗಿನ ಚಳಿ ತಿಂಗಳುಗಳಲ್ಲಿ ಒಳ್ಳೆಯ ಬೆಳವಣಿಗೆಯ ಫಲ ದೊರೆಯುತ್ತದೆ. ಫೆಬ್ರುವರಿಯಿಂದ ಮುಂದೆ ಮಳೆ ಪ್ರಾರಂಭವಾಗುವವರೆಗೆ ಶಾಖ ಹೆಚ್ಚಿದಂತೆ ಬೆಳವಣಿಗೆ ಕುಗ್ಗುತ್ತದೆ. ಅದೇ ರೀತಿ ದಕ್ಷಿಣದಲ್ಲಿ ಜೂನ್ ಮತ್ತು ಸೆಪ್ಟೆಂಬರ್ ನಡುವಣ ತಿಂಗಳುಗಳಲ್ಲಿ ಅತ್ಯುತ್ತಮ ಬೆಳವಣಿಗೆ ಪರಿಸ್ಥಿತಿಗಳು ಕಂಡುಬರುತ್ತವೆ. ಆದುದರಿಂದ ಕೋಳಿಸಾಕಣೆದಾರನು ತನ್ನ ಪರಿಸರಕ್ಕೆ ಅತ್ಯುತ್ತಮವಾಗಿ ಹೊಂದುವ ರಕ್ಷಣಾ ಮತ್ತು ಸಾಕುವ ಸಮಯವನ್ನು ತಾನೇ ನಿರ್ಧರಿಸಬೇಕಾದುದು ಅವಶ್ಯಕ.

ಸಾಕುವಿಕೆ

ಯಾವುದೇ ವಿಧವಾದ ಕೃತಕ ಕಾವಿನ ರಕ್ಷಣಾವಿಧಾನವನ್ನನುಸರಿಸಿದ್ದರೂ ಸಹ, ಮರಿಗಳು ಸ್ವತಂತ್ರ ಜೀವನ ನಡೆಸುವಷ್ಟು ದೊಡ್ಡವಾದಕೂಡಲೇ ದೀಪ ಅಥವಾ ಇನ್ನಾವುದೇ ರೀತಿಯ ಶಾಖ ಮೂಲವಿಲ್ಲದ ದೊಡ್ಡಪ್ರಮಾಣದ ಸಾಮಾನ್ಯ ಕೊಠಡಿಯಾದ ಸಾಕುಕೋಣೆಗೆ ಬದಲಾಯಿಸಬೇಕು. ಒಳ್ಳೆಯ ವಾತಾಯನವಿರುವ ಕೊಠಡಿ, ಆಯಾಕಾರದ ಅಥವಾ 'A' ಆಕಾರದ ಸಾಗಿಸಬಹುದಾದ ಹಂಜರಗಳಲ್ಲಿ ಯಾವುದಾದರೊಂದು ಈ ಕಾರ್ಯವನ್ನು ನಿರ್ವಹಿಸುತ್ತದೆ. ಮರಿಗಳನ್ನು ಬಿಸಿಯಾದ ರಕ್ಷಕದಿಂದ ಸಾಕುಕೋಣೆಗೆ ಬದಲಾಯಿಸುವಾಗ ಯಾವುದೇ ರೀತಿಯ ತೀವ್ರ ಬದಲಾವಣೆಯು ಪರಿಣಾಮವಾಗದಂತೆ ಎಚ್ಚರವಹಿಸಬೇಕು.

ಇವು ಮರಿಗಳು ಮೊಟ್ಟೆಯೊಡೆದು ಹೊರಬಂದಾಗಿನಿಂದ ನಾಲ್ಕುವಾರ ವಯಸ್ಸಿನ ವಾಗುವವರೆಗೆ ಮರಿಗಳಿಗೆ ಜಾಗ ಒದಗಿಸುವಲ್ಲಿ ಬಹಳ ಉಪಯೋಗಕಾರಿ ಎಂಬುದು ನಿರ್ವಿವಾದವಾದರೂ ಅವಕ್ಕೆ ,ಬೇಕಾಗುವ ಪ್ರಾರಂಭಿಕ ವೆಚ್ಚ ಬಹಳವಾಗಿರುವುದು ಇವು ಜನಪ್ರಿಯವಾಗುವುದಕ್ಕೆ ಅಡ್ಡಿಯಾಗಿದೆ.

ಬ್ಯಾಟರಿ ರಕ್ಷಕದಲ್ಲಿ, ಒಂದರ ಮೇಲೆ ಒಂದರಂತೆ ಹಂತಗಳಲ್ಲಿ ಕಟ್ಟಿದ ಹಲವು ರಕ್ಷಣಾ ವಿಭಾಗಗಳಿವೆ (ಚಿತ್ರ 65). ಪ್ರತಿಭಾಗದಲ್ಲೂ ಎಣ್ಣೆದೀಪ ಅಥವಾ ವಿದ್ಯುತ್ತಿ



ಚಿತ್ರ 65: ವಿದ್ಯುತ್ ಬ್ಯಾಟರಿ ರಕ್ಷಕ

ಸಾಕು ಹಂಜರಗಳು: ಮರಿಗಳು 8 ಅಥವಾ 10 ವಾರ ವಯಸ್ಸಿನವಾಗುವವರೆಗೆ ಹಿಕ್ಕೆಯ ಜೊತೆ ಸಂಪರ್ಕ ಬರುವ ಸಾಧ್ಯತೆಯೇ ಇಲ್ಲದಂತೆ ತಂತಿಬಲೆಯ ತಳಗಟ್ಟುಳ್ಳ ಹಂಜರಗಳಲ್ಲಿ ಮರಿಗಳನ್ನು ಸಾಕುವುದು ಸ್ವಲ್ಪಮಟ್ಟಿಗೆ ವೆಚ್ಚದಿಂದ ಕೂಡಿದುದಾದರೂ ಬಹಳ ದಕ್ಷ ವಿಧಾನ. ಈ ಹಂಜರಗಳು ಸಾಗಿಸಬಹುದಾದುದಾಗಲೀ ಅಥವಾ ಒಂದೇ ಸ್ಥಳದಲ್ಲಿರುವಂತಹವುದಾಗಲೀ ಆಗಿರಬಹುದು. ಆಗಲೇ ವಿವರಿಸಿರುವ ಪೆಟ್ಟಿಗೆ ರೀತಿಯ ರಕ್ಷಕ 4 ರಿಂದ 6 ವಾರ ವಯಸ್ಸಾಗಿರುವ ಮರಿಗಳಿಗೆ ಸಾಕು ಹಂಜರವಾಗಿ ಉಪಯೋಗಕ್ಕೆ ಬರುತ್ತದೆ (ಚಿತ್ರ 66). 4 ರಿಂದ 8 ವಾರದ ಮರಿಗಳನ್ನು ಸಾಕಲು ದೊಡ್ಡ ಅಳತೆಯ ಆಯಾಕಾರದ ಹಂಜರವನ್ನುಪಯೋಗಿಸಬಹುದು ಮತ್ತು ಇದು ಮಿತವ್ಯಯಕಾರಿಯೂ ಕೂಡ. ಪ್ರತಿ ಕೊಠಡಿಯಲ್ಲಿಯೂ 150 ರಿಂದ 200 ಮರಿಗಳನ್ನು ಸಾಕುವುದು ಸಾಧ್ಯವಾಗುವಂತಹ ರಕ್ಷಣಾವಿಭಾಗ ಮತ್ತು ಓಡಾಡುವ ಜಾಗಗಳೆರಡನ್ನೂ ಹೊಂದಿದ ಸ್ಥಿರವಾದ ರಕ್ಷಕ ಅತ್ಯುತ್ತಮ (ಚಿತ್ರ 67). ದೊಡ್ಡ ಕಟ್ಟಡವನ್ನು ವಿಭಾಗಗಳಾಗಿ ಮಾಡುವುದರಿಂದ ಸಾಕುವ ಕೇಂದ್ರಗಳ ಸಾಲನ್ನು ರಚಿಸಬಹುದು ಮತ್ತು ಇದನ್ನು ಹೆಚ್ಚಿನ ಮರಿಗಳನ್ನು ರಕ್ಷಿಸಲು ಮತ್ತು ಸಾಕಲು ಉಪಯೋಗಿಸಬಹುದು (ಚಿತ್ರ 54).

ಅದಕ್ಕಾಗಿ ಕಟ್ಟಿದ ಅಥವಾ ಇರುವ ಮನೆಯನ್ನೇ ಸರಿಯಾದ ವಾತಾಯನಗಳಿರುವಂತೆ, ಬೀಸುಗಾಳಿಯಿಲ್ಲದಂತೆ ಅವಶ್ಯಕವಾದ ಬದಲಾವಣೆಗಳಿಗೊಳಪಡಿಸಿ ಅದರೊಳಗೆ ಹೊಂದಿಸಿದ ಸಲಕರಣೆಗಳು ಸಾಕುವಿಕೆಗೆ ಹೆಚ್ಚು ಆದರ್ಶವಾದುದು. ಇಲ್ಲಿ ಮರಿಗಳು ನೆಲದೊಂದಿಗೆ ಸಂಪರ್ಕಹೊಂದದಂತೆ ರಕ್ಷಕ ಮತ್ತು ಹೊರಗಿನ ಓಡಾಡುವ ಜಾಗ ಎರಡರಲ್ಲೂ ಸೂಕ್ತವಾದ ಮಟ್ಟದಲ್ಲಿ ತಂತಿಬಲೆಯ ನೆಲಗಟ್ಟನ್ನು ಒದಗಿಸಿದೆ. ಇಂತಹ ರಕ್ಷಕಗಳಲ್ಲಿ ಓಡಾಡುವ ಜಾಗ ಬಿಸಿಲುಕಾಯುವ ಜಾಗವಾಗಿಯೂ ವರ್ತಿಸುತ್ತದೆ.

ಬ್ಯಾಟರಿ ಸಾಕುಯಂತ್ರಗಳು: ಬ್ಯಾಟರಿ ರಕ್ಷಕಗಳಂತೆಯೇ ರಚಿಸಿದ ಆದರೆ ದೊಡ್ಡದಾದ ಮತ್ತು ಕಾಯಿಸುವ ಸಲಕರಣೆಯಿಲ್ಲದ ಬ್ಯಾಟರಿ ಸಾಕುಯಂತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಮರಿಗಳನ್ನು ವಿಶೇಷತಹ ಆಹಾರೋದ್ದೇಶದ ಮರಿಗಳನ್ನು ಸಾಕಲು ಉಪಯೋಗಿಸಲ್ಪಡುತ್ತವೆ. ಈ ದೇಶದಲ್ಲಿ ಇವುಗಳ ಉಪಯೋಗ ಬ್ಯಾಟರಿ ರಕ್ಷಕದಷ್ಟೇ ಮಿತವಾದುದು.

ಈ ರೀತಿಯ ಸಾಕುವ ಪದ್ಧತಿಯಲ್ಲಿ ಸಾಮಾನ್ಯವಾಗಿ ಮರಿಗಳ ಸಾವಿನ ಅಪಾಯ ಕಡಮೆಯಿರುತ್ತದೆ, ಏಕೆಂದರೆ ಮರಿಗಳನ್ನು ಅವುಗಳ ಬೆಳವಣಿಗೆಯ ಅತ್ಯಂತ ದುರ್ಬಲ ಅವಧಿಯಲ್ಲಿ ಹಿಕ್ಕೆಯಿಂದ ಕಲುಷಿತವಾದ ಮಣ್ಣಿನಿಂದ ರಕ್ಷಿಸಲಾಗಿದೆ. ಮರಿಗಳು ಸಾಮಾನ್ಯವಾಗಿ 8 ರಿಂದ 10 ವಾರಗಳು ಈ ರಕ್ಷಕದಲ್ಲಿ ಸಾಕಲ್ಪಡುತ್ತವೆ. ಈ ಕಾಲದಲ್ಲಿ ಅವು ಸಾಮಾನ್ಯ ಸೋಂಕು ಜಾಡ್ಯಗಳಾದ 'ಕೊಕ್ಕರೆ ರೋಗ' (ರಾಣಿಕೇಟ್) ಮತ್ತು 'ಕೋಳಿ ಸಿಡುಬು'ಗಳಿಂದಲೂ ರಕ್ಷಣೆಪಡೆದಿರುತ್ತವೆ. ನಂತರ ಅವುಗಳನ್ನು ಹೊಸ ಆವರಣಕ್ಕೊ ಅಥವಾ ಸ್ವಚ್ಛವಾದ ಜಾಗಕ್ಕೋ ಬದಲಾಯಿಸಲಾಗುತ್ತದೆ.

ಅಧ್ಯಾಯ 9

ವಸತಿ ಮತ್ತು ಸಾಧನಸಾಮಗ್ರಿ

ಸರಿಯಾದ ವಸತಿ, ಸುದೃಢ ಕೋಳಿಸಾಕಾಣಿಕೆಯ ಒಂದು ಪೂರ್ವಾವಶ್ಯಕತೆ. ಸೌಖ್ಯ, ಸುರಕ್ಷತೆ, ಮಿತವ್ಯಯ ಮತ್ತು ಅನುಕೂಲತೆ, ಇವುಗಳು ಒಳ್ಳೆಯ ವಸತಿಯ ಅವಶ್ಯಕತೆಗಳು.

ವಸತಿ ಸುಖದಾಯಕವಾಗಿರಲು ಅದು ಸಾಕಷ್ಟು ಸ್ಥಳ ಒದಗಿಸುವಂತಿರಬೇಕು; ಬೇಸಿಗೆಯ ಕಾಲದಲ್ಲಿ ತಂಪಾಗಿಯೂ, ಬೀಸುಗಾಳಿಯಿಲ್ಲದಂತೆಯೂ, ಚಳಿಗಾಲದಲ್ಲಿ ಬೆಚ್ಚಗೂ ಇರಬೇಕು; ಹೊಸಗಾಳಿ ಮತ್ತು ಬಿಸಿಲನ್ನು ಸಾಕಷ್ಟು ಪ್ರಮಾಣದಲ್ಲೊದಗಿಸ ಬೇಕು ಮತ್ತು ಯಾವಾಗಲೂ ಒಣಗಿದಂತಿರಬೇಕು. ಕೋಳಿಗೆ ಶರೀರದ ಶಾಖವನ್ನು ನಿಯಂತ್ರಿಸಲು ಬೆವರು ಗ್ರಂಥಿಗಳಿಲ್ಲ. ಆದುದರಿಂದ ತೀವ್ರತರ ವಾತಾವರಣದಲ್ಲಿ ವಿಶೇಷ ಎಚ್ಚರವಹಿಸದೇ ಹೋದಲ್ಲಿ ಕೋಳಿಗಳು ಬಹಳ ಹಾನಿಯನ್ನನುಭವಿಸುತ್ತವೆ. ಅಷ್ಟೇ ಅಲ್ಲದೆ ಅದರ ಆಹಾರದ ಹೆಚ್ಚಿನ ಅಂಶ ಬೆಳವಣಿಗೆ ಅಥವಾ ಮೊಟ್ಟೆ ಉತ್ಪಾದನೆಗೆ ದೊರೆಯುವ ಬದಲು ಶರೀರದ ಶಾಖವನ್ನು ಉಳಿಸಿಕೊಳ್ಳಲು ವೆಚ್ಚವಾಗುತ್ತದೆ. ದೋಷಯುಕ್ತ ವಾತಾಯನವಿರುವ, ಸ್ವಚ್ಛವಾಗಿಲ್ಲದ ಮತ್ತು ಸುಖದಾಯಕವಾಗಿಲ್ಲದ ಮನೆ (ಚಿತ್ರ 69) ಕೆಳಮಟ್ಟದ ಉತ್ಪಾದನೆ, ನಿಕೃಷ್ಟ ಫಲೀಕರಣ, ಅಸಮ ಆರೋಗ್ಯ ಮತ್ತು ಹೆಚ್ಚಿನ ಜೀವಹಾನಿಯಲ್ಲಿ ಪ್ರತಿಫಲಿಸುತ್ತದೆ.



ಚಿತ್ರ 69: ಕೀಳು ವಾತಾಯನ ಹಾಗೂ ಅಸ್ವಚ್ಛ ಕೋಳಿಮನೆ

ನರಿ, ಗುಳ್ಳೆನರಿ, ನಾಯಿ, ಬೆಕ್ಕು, ಮುಂಗಸಿ(ಲಿ), ಇಲಿ, ಗಿಡುಗ, ಹದ್ದು, ಕಾಗೆ, ಹಾವು ಮೊದಲಾದ ಸ್ವಾಭಾವಿಕ ಶತ್ರುಗಳಿಂದ ಮತ್ತು ವಿಶೇಷತಃ ರಾತ್ರಿಹೊತ್ತು

ಕಳ್ಳತನದ ವಿರುದ್ಧ ಕೋಳಿಗಳಿಗೆ ರಕ್ಷಣೆ ಒದಗಿಸುವುದು ಅವಶ್ಯಕ. ಕೋಳಿಗಳನ್ನು ಹೊರಗಿನ ಪರಾವಲಂಬಿಗಳಾದ ಉಣ್ಣೆ, ಹೇನು ಮತ್ತು ನುಸಿಗಳ ವಿರುದ್ಧವೂ ರಕ್ಷಿಸಬೇಕು.

ಕೋಳಿಯ ಮನೆ ಬಹಳ ವೆಚ್ಚದಿಂದ ಕೂಡಿದುದಾಗಬೇಕಾಗಿಲ್ಲ. ಆದಾಗ್ಯೂ ಅದು ಹೆಚ್ಚುಕಾಲ ತಡೆಯುವಂತೆ ಹಾಗೂ ಕೋಳಿಗಳಿಗೆ ಸೌಖ್ಯ ಮತ್ತು ರಕ್ಷಣೆಯನ್ನೊದಗಿಸುವಂತಿರಬೇಕು. ವಸತಿಯನ್ನು ನಿರ್ಮಿಸುವಲ್ಲಿ ಅವುಗಳ ಬಾಳಿಕೆಯ ಕಡೆಗೆ ಕೊಡಬೇಕಾದ ಗಮನಕೊಟ್ಟು ಸ್ಥಳೀಯ ಪದಾರ್ಥಗಳನ್ನು ಸಾಧ್ಯವಾದಮಟ್ಟಿಗೂ ಉಪಯೋಗಿಸಬೇಕು. ಮನೆ ಗಟ್ಟಿಮುಟ್ಟಾಗಿದ್ದಷ್ಟೂ ಅದನ್ನು ನೋಡಿಕೊಳ್ಳುವ ವೆಚ್ಚ ಕಡಮೆಯಾಗುತ್ತದೆ.

ಮನೆಯನ್ನು ಅನುಕೂಲವಾದ ಜಾಗದಲ್ಲಿ ನಿರ್ಮಿಸಬೇಕು ಮತ್ತು ಸ್ವಚ್ಛ ಮಾಡುವುದೇ ಮೊದಲಾದ ಕಾರ್ಯಗಳಿಗೆ ಅನುಕೂಲವಾಗುವಂತೆ ಸಲಕರಣೆಗಳನ್ನು ಜೋಡಿಸಬೇಕು.

ವಸತಿ ತತ್ವಗಳು

ಆದರ್ಶವಾದ ಅಥವಾ ಸರಿಯಾಗಿ ಕಟ್ಟಿದ ಕೋಳಿಮನೆ, ಕೋಳಿಗಳ ಶಕ್ತಿಯನ್ನುಳಿಸಿ, ಆಹಾರದಲ್ಲಿ ಮಿತವ್ಯಯವನ್ನು ಸಾಧಿಸಿ ಮೊಟ್ಟೆ ಉತ್ಪಾದನೆಯನ್ನು ಹೆಚ್ಚಿಸಿ, ಫಲೀಕರಣವನ್ನು ಉತ್ತಮಗೊಳಿಸಿ ಆರೋಗ್ಯ ಮತ್ತು ಬೆಳವಣಿಗೆಯನ್ನು ಅಭಿವೃದ್ಧಿಗೊಳಿಸಿ, ಸಾವಿನ ಸಂಖ್ಯೆಯನ್ನು ಕೆಳಮಟ್ಟಕ್ಕೆ ತರುವಲ್ಲಿ ಸಹಾಯಮಾಡುವಂತಿರಬೇಕು. ಎಲ್ಲ ಪರಿಸ್ಥಿತಿಗಳಿಗೂ ಹೊಂದುವಂತಹ ಮನೆಯ ಒಂದು ವ್ಯವಸ್ಥೆಯನ್ನು ರೂಪಿಸುವುದು ಕಷ್ಟ. ವಸತಿ ಪದ್ಧತಿ, ವಾತಾವರಣ ಮತ್ತು ಕೋಳಿ ಸಾಕಾಣಿಕೆಯ ಪದ್ಧತಿಗಳು ಬದಲಾದಂತೆ ಅದೂ ಬದಲಾಗುತ್ತದೆ. ಆದಾಗ್ಯೂ ಅನುಸರಿಸಬೇಕಾದ ಹಲವು ಸಾಮಾನ್ಯ ತತ್ವಗಳಿವೆ. ಉದಾಹರಣೆಗೆ ಬೆಟ್ಟಗಳಲ್ಲಿ ಬಿಸುಪು (ಬಿಸಿ) ಹಾಗೂ ಮಳೆ ಮತ್ತು ಗಾಳಿಯಿಂದ ರಕ್ಷಣೆ ಅಪೇಕ್ಷಣೀಯ ಮತ್ತು ಅವಲಂಬಿಸುವ ಕೋಳಿಸಾಕಾಣಿಕಾ ಪದ್ಧತಿಯನ್ನನುಸರಿಸಿ ಪಾಶ್ಚಾತ್ಯ ದೇಶಗಳಲ್ಲಿ ಉಪಯೋಗಿಸುವ ಯಾವುದಾದರೊಂದು ಹೊಸಮಾದರಿಯನ್ನನುಸರಿಸಬಹುದು. ಅತಿಹೆಚ್ಚಿನ ಶಾಖವಿರುವ ಉತ್ತರದ ಬಯಲು ಪ್ರದೇಶದಲ್ಲಿನ ಕೋಳಿಮನೆಗಳು ಬೇಸಿಗೆಯಲ್ಲಿ ತಂಪಾಗಿ ಮತ್ತು ಚಳಿಗಾಲದಲ್ಲಿ ಬೆಚ್ಚಗೂ ಇರುವಂತಿರಬೇಕು. ನಾಲ್ಕೂ ಕಡೆಗಳಲ್ಲಿ ತೆರಪಾಗಿರುವ ಮತ್ತು ಚಾವಣಿಯ ಮೇಲೆ ಒಣಹುಲ್ಲು ಹರಡಿರುವ ಮನೆ ಬೇಸಿಗೆಯಲ್ಲಿ ಚೆನ್ನಾಗಿರುತ್ತದೆ. ಚಳಿ ಮತ್ತು ಮಳೆಗಾಲದಲ್ಲಿ ಬಿಸುಪು ಮತ್ತು ರಕ್ಷಣೆಯನ್ನೊದಗಿಸಲು ಮನೆಯ ಮೂರು ಪಾರ್ಶ್ವಗಳನ್ನು ತಾಡಪತ್ರೆ ಅಥವಾ ಬಿದುರಿನ ತಟಿಕೆಗಳಿಂದ ಮುಚ್ಚಬಹುದು. ಯಾವಾಗಲೂ ಬಿಸಿಯಾಗಿರುವ ಸಮುದ್ರತೀರ ಮತ್ತು ಕೆಳಮಟ್ಟದ ಪ್ರದೇಶಗಳಲ್ಲಿ ರಕ್ಷಣೆ ಮತ್ತು ನೆರಳನ್ನೊದಗಿಸುವ ತೆರಪಾದ ಮನೆ ಸಾಕು. ನಾಲ್ಕೂ ಕಡೆಗಳಲ್ಲಿ ತಂತಿಯ ಬಲೆಯಿರುವ, ತಳಗಟ್ಟು ನೆಲದಿಂದ ಮೇಲ್ಮಟ್ಟದಲ್ಲಿರುವ ಮತ್ತು ಒಳ್ಳೆಯ ದೊಡ್ಡ ಚಾವಣಿಯಿರುವ ಮನೆ ತೃಪ್ತಿದಾಯಕವಾದುದು.

ಒಳ್ಳೆಯ ವಸತಿಯ ಕೆಲವು ಪ್ರಮುಖ ತತ್ವಗಳನ್ನು ಕೆಳಗೆ ವಿವರಿಸಲಾಗಿದೆ:

ಜಾಗದ ಆಯ್ಕೆ: ಕೋಳಿಮನೆಗೆ ಜಾಗವನ್ನು ಆಯ್ಕೆಮಾಡುವಾಗ ಕೆಳಕಂಡ ಅಂಶ ಗಳಿಗೆ ಗಮನ ಅವಶ್ಯಕ:

(i) ಜಾಗವು ಮನೆಯ ವಾತಾಯನಕ್ಕೆ ಸ್ವಾಭಾವಿಕವಾದ ಅನುಕೂಲತೆಯನ್ನೊದಗಿಸುವಂತಿರಬೇಕು. ಆದರೆ ಬೀಸುಗಾಳಿಯಿಲ್ಲದಂತಿರಬೇಕು. ಬಿರುಗಾಳಿ ಸಾಮಾನ್ಯವಾಗಿ ಬೀಸುವ ದಿಕ್ಕಿಗೆ ಮನೆಯ ಹಿಂಭಾಗ ಬರುವಂತೆ ಮನೆಯನ್ನು ರಚಿಸಬೇಕು. ಸಾಮಾನ್ಯವಾಗಿ ಪಶ್ಚಿಮದ ಮತ್ತು ವಾಯುವ್ಯದ ಗಾಳಿಗೆ ಮನೆಯನ್ನು ತೆರೆದಿಡುವುದನ್ನು ತಪ್ಪಿಸಬೇಕು.

(ii) ತಂಪಾದ ಮತ್ತು ತೇವಾಂಶದಿಂದ ಕೂಡಿದ ಗಾಳಿ ತಗ್ಗಾದ ಜಾಗದಲ್ಲಿ ನೆಲೆಸಿಲ್ಲುವ ಮನೋವೃತ್ತಿ ಹೊಂದಿರುವುದರಿಂದ ಮನೆಕಟ್ಟಲು ಅಂತಹ ಜಾಗವನ್ನು ಆಯ್ಕೆಮಾಡಿಕೊಳ್ಳಬಾರದು.

(iii) ಬೆಂಕಿಯ ಅಪಘಾತಗಳಿಂದ ರಕ್ಷಣೆ ಪಡೆಯಲು ಕೋಳಿಮನೆಯು ಇತರ ವಾಸದ ಮನೆಗಳಿಂದ ದೂರವಾಗಿರಬೇಕು. ಆದಾಗ್ಯೂ ಸರಿಯಾದ ನಿರ್ವಹಣೆ ಮತ್ತು ಗಮನಗಳಿಗೆ ತೊಂದರೆಯಾಗುವಷ್ಟು ದೂರದಲ್ಲಿರಬಾರದು.

(iv) ಜಾಗದಲ್ಲಿ ಸಾಕಷ್ಟು ಬಿಸಿಲು ದೊರೆಯುವಂತಿರಬೇಕು. ಆದರೆ ಕೋಳಿಗಳಿಗೆ ದಿನದ ಬಿಸಿಲಿನಿಂದ ಅದರಲ್ಲೂ ಉತ್ತರ ಭಾಗದಲ್ಲಿ ಬಿಸಿಲಿನಿಂದ ರಕ್ಷಣೆ ಅಗತ್ಯವಾದುದರಿಂದ ಸಾಕಷ್ಟು ಸ್ವಾಭಾವಿಕ ನೆರಳಿನ ವ್ಯವಸ್ಥೆಮಾಡಬೇಕು. ಆದಾಗ್ಯೂ ಮರ ಮತ್ತು ಪೊದೆಗಳು ಜಾಗಕ್ಕೆ ಬಹಳ ಹತ್ತಿರವಾಗಿ ಕೆಳಮಟ್ಟದಲ್ಲಿರಬಾರದು, ಹಾಗಿಲ್ಲದಿದ್ದರೆ ನೆಲದಲ್ಲಿ ತೇವಾಂಶ ಉಳಿದು ರೋಗಗಳು ಹೆಚ್ಚುತ್ತವೆ. ಈ ಕಾರಣಕ್ಕಾಗಿ ತೇವಾಂಶವನ್ನುಂಟುಮಾಡುವ ಕಾಡುಗಳಿಗೆ ಬಹಳ ಹತ್ತಿರವಾಗಿ ಮನೆಕಟ್ಟಬಾರದು.

(v) ಸುತ್ತಲಿನ ಮಣ್ಣು, ನೀರು ಬಸಿದುಹೋಗುವುದಕ್ಕೆ ಸಹಾಯಕವಾಗುವ ಮರಳುಗೋಡು ಮಣ್ಣಾದರೆ ಉತ್ತಮ ಅಲ್ಲದೆ ಇದು ಹುಲ್ಲು ಮತ್ತು ಇತರ ಹಸರು ಬೆಳೆ ಬೆಳೆಯಲೂ ಸರಿಯಾದುದು. ಜಿಗುಟಾದ ಕಪ್ಪು ಮತ್ತು ಚವಳು ಮಣ್ಣುಗಳು ಯೋಗ್ಯವಾದುದಲ್ಲ, ಮೃದುವಾದ ಮತ್ತು ಹುಡಿ ಮಣ್ಣೂ ಕೂಡ ಸೂಕ್ತವಾದುದಲ್ಲ.

ವಸತಿಯ ಸ್ವಚ್ಛತೆ: ಮನೆ ಸಂಪೂರ್ಣವಾಗಿ ಒಣಗಿರಬೇಕು. ತೇವಾಂಶ ಕೋಳಿಗಳಿಗೆ ಅಸಹ್ಯವನ್ನುಂಟುಮಾಡುತ್ತವೆ ಮತ್ತು ಶೀತ, ರೂಪ್ ಮತ್ತು ಶ್ವಾಸಕೋಶ ಉರಿಯೂತ ಮೊದಲಾದ ರೋಗಗಳಿಗೆ ಎಡೆಗೊಡುತ್ತವೆ. ಅಷ್ಟೇ ಅಲ್ಲದೆ ಪುಡಿ ಮತ್ತು ಇತರ ಆಹಾರಗಳು ತೇವಾಂಶದ ಗಾಳಿಯಲ್ಲಿ ಬೂಷ್ಟು ಹಿಡಿದು ಹಾಳಾಗುತ್ತವೆ.

ಕೋಳಿಮನೆಯಲ್ಲಿನ ತೇವಾಂಶವು; (i) ನೆಲದಿಂದ ಮೇಲೇಳುವ ತೇವಾಂಶ, (ii) ಸೋರುತ್ತಿರುವ ಚಾವಣಿ ಮತ್ತು ಗೋಡೆಗಳು, (iii) ಕಿಟಕಿಗಳಿಂದ ಪ್ರವೇಶಿಸುವ ಮಳೆನೀರು ಅಥವಾ ಮಂಜು, (iv) ಸೋರುವ ನೀರಿನ ಪಾತ್ರೆಗಳು; ಮತ್ತು (v) ಕೋಳಿಗಳ ನಿಶ್ವಾಸದಿಂದಾಗಬಹುದು. ನೆಲಕ್ಕೆ ನೀರು ಪ್ರವೇಶಿಸಲಾಗದಂತಹ ಪದಾರ್ಥವನ್ನು ಹಾಸಬೇಕು ಮತ್ತು ಸುತ್ತಿನ ನೆಲಮಟ್ಟಕ್ಕಿಂತ $\frac{1}{2}-1$ ಅಡಿ ಎತ್ತರವಾಗಿರಬೇಕು. ಚಾವಣಿ ನೀರನ್ನು ಒಳಕ್ಕೆ ಬಿಡುವಂತಿರಬೇಕು ಮತ್ತು ಮನೆಯ ನಾಲ್ಕೂಕಡೆ ಕಡೆಯ ಪಕ್ಷ ಒಂದು ಅಡಿಯಷ್ಟಾದರೂ ಹೊರಚಾಚಿರಬೇಕು. ಹೆಚ್ಚಿಗೆ ಮಳೆ ಬೀಳುವ ಪ್ರದೇಶಗಳಲ್ಲಿ ಇದನ್ನು ಬಹಳ ಕೆಳಮಟ್ಟದಲ್ಲಿಟ್ಟಿರಬೇಕು (ಚಿತ್ರ 70).



ಚಿತ್ರ 70: ಹೆಚ್ಚು ಮಳೆ ಬೀಳುವ ಪ್ರದೇಶಗಳಿಗೆ ಕೆಳಮಟ್ಟದ ಚಾವಣಿಯಿರುವ ಕೋಳಿಮನೆ

ಮಳೆನೀರು ಮನೆಯೊಳಗೆ ಪ್ರವೇಶಿಸುವುದನ್ನು ತಡೆಯಲು ಪಾರ್ಶ್ವಗಳನ್ನು ಗೋಣಿ ಚೀಲ ಅಥವಾ ಬಿದುರಿನ ತಟಿಕೆಗಳಿಂದ ಮುಚ್ಚುವುದೂ ಕೂಡ ಒಳ್ಳೆಯದು. ಮನೆಯಲ್ಲಿ ಸಾಕಷ್ಟು ವಾತಾಯನ ಮತ್ತು ಸಾಕಷ್ಟು ಗಾಳಿ ಜಾಗ ಒದಗಿಸುವುದರಿಂದ ಕೋಳಿಗಳ ನಿಶ್ವಾಸದಿಂದಾಗುವ ತೇವವನ್ನು ತಪ್ಪಿಸಬೇಕು.

ವಾತಾಯನ: ಇತರ ಜಾನುವಾರುಗಳಿಗೆ ಹೋಲಿಸಿದಲ್ಲಿ ಕೋಳಿ ಹೆಚ್ಚಿನ ಶರೀರ ಶಾಖವನ್ನು ಹೊಂದಿದೆ ಮತ್ತು ಬೇಗ ಬೇಗ ಉಸಿರಾಡುತ್ತದೆ. ಆದುದರಿಂದ ಇದರ ಆಮ್ಲಜನಕದ ಅವಶ್ಯಕತೆ ಉಳಿದ ಪ್ರಾಣಿಗಳಿಗಿಂತ ಹೆಚ್ಚು, ಇದನ್ನು 12ನೆಯ ಕೋಷ್ಟಕದಲ್ಲಿ ಕಾಣಬಹುದು:

ಕೋಷ್ಟಕ 12

100 ಪೌಂಡ್ ತೂಕದ ಜೀವಿಗಳಿಗೆ ದಿನಕ್ಕೆ (24 ಗಂಟೆ) ಬೇಕಾಗುವ ತಾಜಾ ಗಾಳಿ

ಪ್ರಾಣಿಗಳು	ಜಾಗದ ಅವಶ್ಯಕತೆ
ಮನುಷ್ಯ	2,833 ಘನ ಅಡಿ
ಹಸು	2,804 ಘನ ಅಡಿ
ಕುದುರೆ	3,401 ಘನ ಅಡಿ
ಕೋಳಿ	8,278 ಘನ ಅಡಿ

ಅಷ್ಟೇ ಅಲ್ಲದೆ, ಉಸಿರಾಡುವಾಗ ನಿಶ್ವಾಸದಲ್ಲಿ ಹೊರಬಿಡುವ ತೇವಾಂಶ ಉಳಿದೆಲ್ಲ ಪ್ರಾಣಿಗಳಿಗಿಂತ ಹೆಚ್ಚು. ಆದುದರಿಂದ ಕೋಳಿಮನೆಯಲ್ಲಿ ಒಳ್ಳೆಯ ವಾತಾಯನದ ಅವಶ್ಯಕತೆ ಸುಸ್ಪಷ್ಟ. ಬೀಸುಗಾಳಿಯನ್ನು ತಡೆಗಟ್ಟಲು ಮನೆಯ ಹಿಂಭಾಗ ಮತ್ತು ಪಕ್ಕಗಳ ಕೆಳಗಿನ ಮೂರನೆಯ ಒಂದು ಭಾಗವನ್ನು ಮಾತ್ರ ಗೋಡೆ ಅಥವಾ ಕಲ್ನಾರಿನ ಫಲಕಗಳಿಂದ ಮುಚ್ಚಿ ಮನೆಯ ಪಾರ್ಶ್ವಗಳ ಉಳಿದೆಲ್ಲ ಭಾಗಗಳನ್ನೂ ತೆರೆದಿಡುವುದರಿಂದ ಇದನ್ನು ಸಾಧಿಸಬಹುದು. ಈ ತೆರೆದ ಜಾಗವನ್ನು ಒಂದು ಅಂಗುಲದ ತಂತಿಬಲೆಯಿಂದ ಮುಚ್ಚಬಹುದು. ಚಳಿ ಮತ್ತು ಮಳೆಗಾಲಗಳಲ್ಲಿ ಮನೆಯ ಮುಂಭಾಗ ಒಂದನ್ನು ಬಿಟ್ಟು ಉಳಿದೆಲ್ಲ ಕಡೆಗಳನ್ನೂ ತಾಡಪತ್ರೆ, ಹಳೆಯ ಗೋಣಿತಾಟು ಅಥವಾ ಬಿದಿರು, ಈಚಲು ಮೊದಲಾದ ಸ್ಥಳೀಯವಾಗಿ ದೊರಕುವ ಪದಾರ್ಥಗಳಿಂದ ತಯಾರಿಸಿದ ಚಾಪೆಗಳಿಂದ ಮುಚ್ಚಬೇಕು. ಬೇಸಿಗೆಯ ಕಾಲದಲ್ಲಿ ಹೆಚ್ಚಿನ ನೆರಳಿನ ಅವಶ್ಯಕತೆ ಇರುತ್ತದೆ. ಇದನ್ನು ಚಾವಣಿಯ ಮೇಲೆ ಹುಲ್ಲು ಹೊದಿಸುವುದರಿಂದ ಪಡೆಯಬಹುದು.

ಸೂರ್ಯರಶ್ಮಿ: ಕೋಳಿಯ ಮನೆಯಲ್ಲಿ ಸೂರ್ಯರಶ್ಮಿ ಮನೆಯನ್ನು ಪ್ರಕಾಶಮಾನವಾಗಿ ಮಾಡಿ ಕೋಳಿಗಳನ್ನು ಸಂತೋಷಪಡಿಸುವುದೇ ಅಲ್ಲದೆ. ಅದು ಮನೆಯನ್ನು ಒಣಗಿಸಿ ರೋಗಾಣುಗಳನ್ನು ನಾಶಪಡಿಸುವುದರಿಂದ ಕೂಡ ಅಪೇಕ್ಷಣೀಯ. ಅಷ್ಟೇ ಅಲ್ಲದೆ ಅಸ್ಥಿಪಂಜರ ರಚನೆಗೆ ಅವಶ್ಯಕವಾದ 'ಡಿ' ಅನ್ನಾಂಗವೂ ಸೂರ್ಯರಶ್ಮಿಯಿಂದ ದೊರೆಯುತ್ತದೆ.

ಸ್ವಚ್ಛತೆ: ಕೋಳಿಮನೆಯಲ್ಲಿ ಸಾಮಾನ್ಯವಾಗಿ ಕೋಳಿಗಳ ಬಹು ಅಪಾಯಕಾರಿ ಶತ್ರುಗಳಾದ ಹೇನು, ಉಣ್ಣೆ, ಜಿಗಟ ಮತ್ತು ನುಸಿಗಳಿಂದ ತುಂಬಿರುತ್ತದೆ. ಇವು ಬೆಳವಣಿಗೆ ಮತ್ತು ಉತ್ಪಾದನೆಯನ್ನು ಕುಗ್ಗಿಸುವುದೇ ಅಲ್ಲದೆ, ರೋಗಗಳನ್ನು ಹರಡುತ್ತವೆ. ಆದುದರಿಂದ ಮನೆಯನ್ನು ಸುಲಭವಾಗಿ ಸ್ವಚ್ಛಮಾಡಿ ಔಷಧ ಸಿಂಪಡಿಸಲು ಆಗುವಂತೆ ರೂಪಿಸಬೇಕು. ಬಿರುಕುಗಳು ಮತ್ತು ಸಂದುಗಳನ್ನು ಸಾಧ್ಯವಾದ ಮಟ್ಟಿಗೂ ಕಡಮೆ ಮಾಡಬೇಕು. ಚೌಕಟ್ಟಿಗೆ ಕೋನಯುತ ಕಬ್ಬಿಣಗಳು ಮತ್ತು ಸಿಮೆಂಟ್, ಕಲ್ನಾರು ಅಥವಾ ಲೋಹದ ತಗಡುಗಳು, ಚಾವಣಿ ಮತ್ತು ಪಕ್ಕದ ಗೋಡೆಗಳಿಗೆ ಆದರ್ಶವಾದವು. ಏಕೆಂದರೆ ಅವಶ್ಯಕತೆ ಬಂದಾಗ ನೇರವಾದ ಬೆಂಕಿಯಿಂದ ಕೀಟಗಳನ್ನು ನಾಶಪಡಿಸುವುದಕ್ಕೂ ಇವು ಸಹಕಾರಿ.

ಕೋಳಿಮನೆಯ ರಚನೆಯಲ್ಲಿ ಮರ ಉಪಯೋಗಿಸಬೇಕಾದಾಗ ಸಂದುಗಳು ಮತ್ತು ಜೋಡಣೆಗಳು ಸಾಧ್ಯವಾದ ಮಟ್ಟಿಗೂ ಕಡಮೆಯಿರಬೇಕು. ಸಣ್ಣ ತಂಡಗಳ ವಿಷಯದಲ್ಲಿ ಮನೆಕಟ್ಟಿರುವ ಚೌಕಟ್ಟಿನ ಕಾಲುಗಳು ಚಿಮಣಿ(ಸೀಮೆ)ಎಣ್ಣೆ ಡಬ್ಬ, ತಗಡಿನ ಅಥವಾ ಮಣ್ಣಿನ ಪಾತ್ರೆಯೊಳಗಿರಬೇಕು. ಮನೆಕಟ್ಟಲು ಉಪಯೋಗಿಸುವ ಪ್ರತಿಯೊಂದು ಮರದ ತುಂಡನ್ನೂ ಜೋಡಿಸುವುದಕ್ಕೆ ಮೊದಲು ಡಾಂಬರ್ (ಕೋಲ್ ಟಾರ್) ಕ್ರಿಯೋಸೋಟ್ ಅಥವಾ ಇದೇ ರೀತಿಯ ಪ್ರಬಲ ಕ್ರಿಮಿನಾಶಕಗಳನ್ನು ಲೇಪಿಸಬೇಕು.

ಸಾಕಷ್ಟು ಸ್ಥಳ: ಒಂದು ಮನೆಯಲ್ಲಿ ಹೆಚ್ಚಿಗೆ ಕೋಳಿಗಳನ್ನಿಡುವುದು ಮಿತವ್ಯಯವಲ್ಲ, ಏಕೆಂದರೆ ಇದು ಮುಂದೆ ಹೇಳಿರುವಂತಹ ಸ್ಥಿತಿಗಳಲ್ಲಿ ಒಂದು ಅಥವಾ ಹೆಚ್ಚಿನ ಪರಿಸ್ಥಿತಿಗಳಿಗೆ ಎಡೆಗೊಡುತ್ತದೆ:

(i) ರೋಗ ಸುಲಭವಾಗಿ ಹರಡುವುದರಿಂದಾಗಿ ಹೆಚ್ಚಿನ ಸಾವು.
(ii) ಹೆಚ್ಚಿನ ತೇವಾಂಶ.
(iii) ಪುಕ್ಕ ಕೀಳುವುದು ಮತ್ತು ಸ್ವಜಾತಿ ಭಕ್ಷಣೆ.
(iv) ಆಹಾರ ಪಡೆಯಲು ಆಗುವ ತೊಂದರೆಯಿಂದ ನ್ಯೂನ ಪೋಷಣೆ.

ಮನೆಯ ಗಾತ್ರ, ಗುಂಪಿನ ಗಾತ್ರ,. ತಳಿ ಮತ್ತು ಕೋಳಿಗಳನ್ನು ಮನೆಯೊಳಗೇ ಕೂಡಿರುತ್ತಾರೋ ಅಥವಾ ಹೊರಗೆ ಓಡಾಡಲು ಬಿಡುತ್ತಾರೋ ಎಂಬುದನ್ನವಲಂಬಿಸುತ್ತದೆ. ಗುಂಪು ಸಣ್ಣದಾದಷ್ಟೂ ಪ್ರತಿ ಕೋಳಿಗೆ ಬೇಕಾಗುವ ಜಾಗ ಹೆಚ್ಚಾಗುತ್ತದೆ. ಹಾಗಾಗಿ ಕೆಲವೇ ಲೆಗ್‌ಹಾರ್ನ್‌ಗಳನ್ನಿಟ್ಟಾಗ ಪ್ರತಿ ಕೋಳಿಗೆ 6 ರಿಂದ 8 ಚದರ ಅಡಿ ಜಾಗ ಬೇಕಾಗುತ್ತದೆ. ಆದರೆ 150 ಕೋಳಿಗಳನ್ನು ಸಾಕಿದಾಗ ಪ್ರತಿ ಕೋಳಿಗೆ $3\frac{1}{2}$ ಚದರ ಅಡಿ ಜಾಗ ಸಾಕಾಗುತ್ತದೆ. ಪಟ್ಟೆಯುಕ್ತ ಪ್ಲೈಮೂತ್‌ರಾಕ್ ಮತ್ತು ರ್‍ಹೋಡ್ ಐಲೆಂಡ್‌ಗಳು 150ರ ಗುಂಪಿನಲ್ಲಿ ಪ್ರತಿ ಕೋಳಿಗೆ 4 ಚದರ ಅಡಿ ಜಾಗ ಬೇಕಾಗುತ್ತದೆ.


ಕೆಳಗಿನ ಕೋಷ್ಟಕವು ಕೋಳಿಗಳನ್ನು ಮನೆಯೊಳಗೇ ಕೂಡಿದಾಗ ವಿವಿಧ ಗಾತ್ರದ ಗುಂಪುಗಳಿಗೆ ಬೇಕಾಗುವ ಜಾಗವನ್ನು ವಿಶದೀಕರಿಸುತ್ತದೆ. ಮನೆಗೆ ಹೊಂದಿದಂತೆ ಮೈದಾನ ಅಥವಾ ಓಡಾಡುವ ಜಾಗಕ್ಕೆ ಕೋಳಿಗಳು ಹೋಗುವ ಅವಕಾಶವಿದ್ದರೆ ಇಷ್ಟೇ ಜಾಗ ಮೇಲಿನ ಗುಂಪಿನ ಗಾತ್ರದ ಎರಡರಷ್ಟಿರುವ ಗುಂಪಿಗೆ ಸಾಕಾಗುತ್ತದೆ.

ಕೋಷ್ಟಕ 13

ಕೋಳಿಗುಂಪುಗಳ ಜಾಗದ ಅವಶ್ಯಕತೆ

ನೆಲಜಾಗ (ಚದರ ಅಡಿ)	ಸಾಕಬಹುದಾದ ಕೋಳಿಗಳ ಸಂಖ್ಯೆ	
	ಲೆಗ್‌ಹಾರ್ನ್	ದೊಡ್ಡತಳಿಗಳು
24	6	5
48	12	10
64	15	12
100	25	20
224	60	50
400	125	100
576	180	144
600	190	150
900	280	225
1600	500	400
3200	1000	800

ಮೊಟ್ಟೆಯಿಡುತ್ತಿರುವ ಹೇಂಟೆಗಳನ್ನು 15 ರಿಂದ 25 ರ ಸಣ್ಣ ಗುಂಪುಗಳಲ್ಲಿಟ್ಟಾಗ ಸಾಮಾನ್ಯವಾಗಿ ಹೆಚ್ಚಿಗೆ ಉತ್ಪಾದಿಸುತ್ತವೆ. ಸಣ್ಣ ಗುಂಪುಗಳಿಗಿಂತ ದೊಡ್ಡ ಗುಂಪುಗಳಿಗೆ ಕಡಮೆ ಶ್ರಮವಾಗುತ್ತದೆ ಮತ್ತು ಪ್ರತಿಕೋಳಿಗೆ ತಗುಲುವ ವಸತಿಯ ವೆಚ್ಚ ಕಡಮೆಯಾಗುತ್ತದೆ; ಆದರೆ ರೋಗ ಹರಡುವ ಸಾಧ್ಯತೆ ಹೆಚ್ಚಿರುವುದರಿಂದ ಸಾವಿನ ಅಪಾಯ ಹೆಚ್ಚಿರುತ್ತದೆ. ಸಾಮಾನ್ಯವಾಗಿ ಮೊಟ್ಟೆಯಿಡುತ್ತಿರುವ ಕೋಳಿಗಳ ಗುಂಪಿನ ಸಂಖ್ಯೆ 250 ರಷ್ಟಾದರೆ ಅತಿ ಹೆಚ್ಚು ಎಂದು ಪರಿಗಣಿಸಬೇಕು. ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಕೋಳಿಗಳನ್ನಿಡಲು ಸಮುದಾಯ ವಸತಿ ಉತ್ತಮ (ಚಿತ್ರ 71). ಸಾವಿರ ಅಥವಾ ಅದಕ್ಕೂ ಹೆಚ್ಚು ಮೊಟ್ಟೆಯಿಡುತ್ತಿರುವ ಕೋಳಿಗಳಿರುವ ವಾಣಿಜ್ಯ ಕೋಳಿಕೇಂದ್ರಗಳಲ್ಲಿ ಒಂದೊಂದು ಆವರಣಕ್ಕೆ 125 ಕೋಳಿಗಳ ಗುಂಪುಗಳಾಗಿ ವಿಂಗಡಿ



ಚಿತ್ರ 71: ಅಸ್ಬೆಸ್ಟೋಸ್ ಸೀಟ್ (ಕಲ್ನಾರು ತಗಡು) ಚಾವಣಿ ಇರುವ ಸಮುದಾಯ ಮನೆ

ಸುವುದು ಉತ್ತಮ. ಉದ್ದವಾದ ಮನೆಗಳನ್ನು ಬೀಸುಗಾಳಿಯಿಂದ ತಪ್ಪಿಸಲು ಪ್ರತಿ 20 ಅಡಿಗಳಿಗೆ ವಿಭಾಗಿಸಬೇಕು.

ಕೋಳಿಮನೆ

ಮನೆ ಚಚ್ಚೌಕವಾದಷ್ಟೂ ಅದನ್ನು ಕಟ್ಟುವುದು ಮಿತವ್ಯಯಕಾರಿ. ಮನೆ ಮುಂಭಾಗದಿಂದ ಹಿಂದಕ್ಕೆ ಆಳವಾಗುತ್ತ ಹೋದಷ್ಟೂ, ಕೋಳಿಗಳು ವಿಶ್ರಮಿಸುವ ಹಿಂಭಾಗದಲ್ಲಿ ಹೆಚ್ಚು ಆರಾಮದಾಯಕವಾಗಿರುತ್ತದೆ. ಕಿರಿದಾಗಿ ಉದ್ದವಾಗಿರುವ ಮನೆಗಳ ಪರಿಧಿ ಹೆಚ್ಚಾಗಿರುವುದರಿಂದ, ಅವುಗಳನ್ನು ಕಟ್ಟಲು ಹೆಚ್ಚು ವೆಚ್ಚವಾಗುತ್ತದೆ. ಮುಖ್ಯ ರಚನಾಕ್ರಮಗಳು ಕೆಳಕಂಡಂತಿವೆ:


ಚಾವಣಿಗಳು: ಕೋಳಿಮನೆಗಳಲ್ಲಿ ಉಪಯೋಗಿಸುವ ಹಲವು ಅಂಗೀಕೃತ ಚಾವಣಿ ರೀತಿಗಳಿವೆ. ಪ್ರತಿಯೊಂದೂ ತನ್ನದೇ ಆದ ಅನುಕೂಲತೆಗಳನ್ನು ಹೊಂದಿವೆ; ಆದರೆ ಎಲ್ಲವೂ ಎಲ್ಲ ಪರಿಸ್ಥಿತಿಗಳಲ್ಲೂ ತೃಪ್ತಿದಾಯಕವಲ್ಲ. ಚಾವಣಿಯ ರೀತಿ ಸಾಮಾನ್ಯವಾಗಿ (i) ಅನುಸರಿಸಬೇಕೆಂದಿರುವ ಕೋಳಿಸಾಕಾಣಿಕಾ ಪದ್ಧತಿ ಮತ್ತು (ii) ಹವಾಮಾನ ಸ್ಥಿತಿಗಳನ್ನನುಸರಿಸುತ್ತದೆ.

ಈ ಕೆಳಕಂಡ ಕೋಳಿಸಾಕಾಣಿಕಾ ಪದ್ಧತಿಗಳು ಸಾಮಾನ್ಯವಾಗಿ ಅಂಗೀಕೃತವಾದವುಗಳು ಮತ್ತು ಅವುಗಳನ್ನು ಹಿಂದಿನ ಅಧ್ಯಾಯಗಳಲ್ಲಿ ವಿವೇಚಿಸಲಾಗಿದೆ:


(1) ಮನೆ ಹಿತ್ತಲಿನಲ್ಲಿ ಕೋಳಿಸಾಕಾಣಿಕೆ
(2) ಸ್ವತಂತ್ರವಾಗಿ ಬಯಲಲ್ಲಿ ಬಿಡುವ ಪದ್ಧತಿ
(3) ಅರೆ ತೀವ್ರ (ಸಾಂದ್ರ) ಪದ್ಧತಿ
(4) ತೀವ್ರ (ಸಾಂದ್ರ) ಪದ್ಧತಿ

ಈ ಅಧ್ಯಾಯದಲ್ಲಿ ಈ ಎಲ್ಲ ಪದ್ಧತಿಗಳಿಗಾಗಿ ಅನೇಕ ರೀತಿಯ ಮನೆ ರಚನೆಗಳನ್ನು ಪರಿಗಣಿಸಲಾಗಿದೆ. ಆದುದರಿಂದ ಪ್ರತಿಯೊಬ್ಬ ಕೋಳಿಸಾಕಾಣಿಕೆದಾರನೂ ಅವಶ್ಯಕ ತತ್ವಗಳು ಮತ್ತು ಅವನ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸ್ವಂತ ವಿವೇಚನೆಯಿಂದ ಸರಿಯಾದ ಆಯ್ಕೆಮಾಡಬೇಕು.

ಕೋಳಿಮನೆಯನ್ನು ರೂಪಿಸಿ ಅದಕ್ಕೆ ಸರಿಯಾದ ಚಾವಣಿಯನ್ನು ಒದಗಿಸುವಾಗ, ಬಿಸಿಲು ಮಳೆ ಹಾಗೂ ಗಾಳಿಗಳ ವಿರುದ್ಧ ಸಾಕಷ್ಟು ರಕ್ಷಣೆ ಒದಗಿಸುವ ತತ್ವವನ್ನು




ಚಿತ್ರ 72: ಕೊಟ್ಟಿಗೆ ಚಾವಣಿ ರೀತಿಯ ಸ್ಥಿರ ಮನೆ



ಚಿತ್ರ 73: ಬೆಟ್ಟ ಪ್ರದೇಶಗಳಿಗೆ ಸೂಕ್ತವಾದ ಸ್ಥಿರ ಮನೆ

ಗಮನದಲ್ಲಿಟ್ಟುಕೊಳ್ಳಬೇಕು. ಚಾವಣಿ, ಸರಿಯಾದ ವಾತಾಯನವನ್ನೊದಗಿಸಿ, ಬೀಸು ಗಾಳಿ, ಮಳೆ ಮತ್ತು ಹಿಮವನ್ನು ತಡೆಗಟ್ಟಲು ಸಹಾಯವಾಗುವಂತಿರಬೇಕು. ಇಷ್ಟೇ ಅಲ್ಲದೆ ಸಾಕಷ್ಟು ಸ್ಥಳಾವಕಾಶವನ್ನೊದಗಿಸಬೇಕು; ಕಟ್ಟಲು ಸುಲಭವಾಗಿರಬೇಕು; ಅಲ್ಲದೆ ಮಿತವ್ಯಯಕಾರಿಯಾಗಿರಬೇಕು. ಈ ದೇಶಕ್ಕೆ ಹೊಂದುವ ರೀತಿಗಳನ್ನು ಕೆಳಗೆ ವಿವರಿಸಲಾಗಿದೆ:

ಕೊಟ್ಟಿಗೆ ರೀತಿ ಚಾವಣಿ: ಕೊಟ್ಟಿಗೆ ಚಾವಣಿ ಮನೆ, ಕೋಳಿಸಾಕಾಣಿಕೆಯ ವಿವಿಧ ಪದ್ಧತಿಗಳಿಗೆ ಮತ್ತು ವಿವಿಧ ಹವಾಮಾನ ಪರಿಸ್ಥಿಗಳಲ್ಲಿ ಉಪಯೋಗ



ಚಿತ್ರ 74: 20×20 ಅಡಿ ಮೊಟ್ಟೆಯಿಡುವ ಕೋಳಿಮನೆಯ ನಕಾಸೆ

Nests=ಹಕ್ಕೆಗಳು, Perches=ಕೂಡುಕಂಬಿ, Feeder=ಊಡುಕ, To ceiling=ಚಾವಣಿಗೆ, Water stand=ಜಲಸ್ಥಾನ, Post=ಪೋಸ್ಟ್, Grainmash Storage=ಧಾನ್ಯ ಪುಡಿ ಉಗ್ರಾಣ.

ಯೋಗ್ಯವಾದ ಒಳ್ಳೆಯ ಕಾರ್ಯಶೀಲ ರೀತಿ. ಇದನ್ನು ಇಪ್ಪಾರು ರೀತಿ ಎಂದೂ ಕರೆಯುತ್ತಾರೆ. ಕಟ್ಟಲು ಇದು ಅತ್ಯಂತ ಸರಳವಾದುದು ಮತ್ತು ಮಿತವ್ಯಯಕಾರಿ. ಬಯಲು ಪ್ರದೇಶದಲ್ಲಿ ಚಾವಣಿ ಸ್ವಲ್ಪಮಟ್ಟಿಗೆ ಇಳಿಜಾರಾಗಿದ್ದರೆ ಸಾಕು; ಆದರೆ ಹೆಚ್ಚಿನ ಹಿಮ ಬೀಳುವ ಬೆಟ್ಟ ಪ್ರದೇಶದಲ್ಲಿ ಅಥವಾ ಹೆಚ್ಚಿನ ಮಳೆಯಿರುವ ಪ್ರದೇಶಗಳಲ್ಲಿ ಚಾವಣಿ ಸಾಕಷ್ಟು ಇಳಿಜಾರಾಗಿರಬೇಕು.

ಕೊಟ್ಟಿಗೆ ಚಾವಣಿ ರೀತಿಯ ಮನೆಗಳು ಚರವಾದವುಗಳಾಗಲೀ ಅಥವಾ ಸ್ಥಿರವಾದವುಗಳಾಗಲೀ ಆಗಿರಬಹುದು. ಕೋಳಿಕೇಂದ್ರಗಳಲ್ಲಿನ ಉಪಯೋಗಕ್ಕೆ ಚರಮನೆಗಳು ಹೆಚ್ಚು ಅಪೇಕ್ಷಣೀಯ; ಆದರೆ ಹಿತ್ತಿಲಲ್ಲಿ ಕೋಳಿಸಾಕಾಣಿಕೆಯಲ್ಲಿ ಸ್ಥಿರ ರೀತಿಯವು ಹೆಚ್ಚು ಅನುಕೂಲಕಾರಿ.

ಚರಮನೆ ಸಾಮಾನ್ಯವಾಗಿ ಸಣ್ಣದು. 8 × 6 ಅಡಿಗಿಂತ ಹೆಚ್ಚಿರಬಾರದು. ಹೆಚ್ಚು ಅನುಕೂಲಕರವಾದ ಗಾತ್ರವೆಂದರೆ 6 × 5 ಅಡಿ. ಇದನ್ನು ಜಾಗದಿಂದ ಜಾಗಕ್ಕೆ ಬೇಗ ಸಾಗಿಸಬಹುದು; ಇದೇ ಇದರ ದೊಡ್ಡ ಅನುಕೂಲತೆ. ಆದಾಗ್ಯೂ ಇದರ ಒಂದು ಅನಾನುಕೂಲತೆಯೆಂದರೆ ಇದು ದೊಡ್ಡಗುಂಪುಗಳಿಗೆ ಸ್ಥಳ ಒದಗಿಸಲಾರದು. ಆದುದರಿಂದ ಇದು ಬಯಲಿನಲ್ಲಿ ಸ್ವತಂತ್ರವಾಗಿ ಬಿಡುವ ಪದ್ಧತಿಗೆ ಚೆನ್ನಾಗಿ ಹೊಂದುತ್ತದೆ. ದಿನದ ಬಹುಪಾಲು ಕೋಳಿಗಳನ್ನು ಹೊರಗೆ ಬಿಡಬಹುದಾದ ಅರೆತ್ವರಿತ ಪದ್ಧತಿಯಲ್ಲೂ ಇದನ್ನು ಉಪಯೋಗಿಸಬಹುದು ಮತ್ತು ಆಹಾರ ಹಾಗೂ ನೀರು ಒದಗಿಸುವದೆಲ್ಲವನ್ನೂ ಮನೆಯಿಂದ ಹೊರಗೆ ಮಾಡಬೇಕು.

ಸ್ಥಿರ ರೀತಿ (ಚಿತ್ರ 72) ಯವನ್ನು ಯಾವ ಅಳತೆಗೆ ಬೇಕಾದರೂ ಮಾಡಬಹುದು. ಇಂತಹ ರೀತಿ ಹಿತ್ತಲಿನಲ್ಲಿ ಕೋಳಿಸಾಕಾಣಿಕೆಗೇ ಅಲ್ಲದೆ, ಅತಿ ತ್ವರಿತ ಪದ್ಧತಿ ಹಾಗೂ ತ್ವರಿತ ಪದ್ಧತಿಗಳಿಗೂ ಅತ್ಯುತ್ತಮವಾಗಿ ಹೊಂದಿಕೊಳ್ಳುತ್ತದೆ. ಇದು ವಿಶೇಷತಹ, ಕೋಳಿಗಳನ್ನು, ಹೊರಗೆ ಬಿಡಲು ಹೆಚ್ಚಿನ ಜಾಗವಿಲ್ಲದ ಅಥವಾ ಸ್ವಲ್ಪ ಜಾಗವಿದ್ದರೂ ಕೋಳಿಗಳನ್ನು ಬಿಟ್ಟರೆ ಹಾಳಾಗುವ ಕೈತೋಟ ಅಥವಾ ಹೂತೋಟವಿರುವ ಹಿತ್ತಲಿನ, ಪಟ್ಟಣ ಪ್ರದೇಶಗಳಲ್ಲಿ ಹಿತ್ತಲಲ್ಲಿ ಕೋಳಿಸಾಕಾಣಿಕೆಗೆ ಬಹಳ ಉಪಯೋಗಕಾರಿ. ಪಟ್ಟಣದ ಮನೆಗಳ ಹಿತ್ತಲಿನಲ್ಲಿ ಸರಿಯಾದ ಬೇಲಿಯಿಲ್ಲದೆ ಕೋಳಿಗಳನ್ನು ಬಿಡುವಾಗ ನೆರೆಹೊರೆಯವರ ತೋಟಗಳನ್ನೂ ಹಾಳುಮಾಡುವ ಅಪಾಯವನ್ನೂ ಪರಿಗಣಿಸಬೇಕು.

ಕೋಳಿಗಳಿಗೆ ಆಹಾರ ಮತ್ತು ನೀರನ್ನು ಮನೆಯ ಒಳಗೇ ಒದಗಿಸುವ ಅನುಕೂಲತೆಯಲ್ಲಿ ಸ್ಥಿರಮನೆ, ಚರಮನೆಗಳಿಂದ ಬದಲಾಗುತ್ತದೆ. ಈ ಮನೆಗಳಲ್ಲಿ ಕೋಳಿಗಳನ್ನು ಯಾವಕಾಲದಲ್ಲೂ ಹೊರಗೆ ಬಿಡುವುದಿಲ್ಲ. ಕೋಳಿಗಳಿಗೆ ಆಹಾರವನ್ನು ಮನೆಯೊಳಗೇ ಒದಗಿಸುವ ಅನುಕೂಲತೆ ಇದೆ. ಕಾಗೆ ಮತ್ತು ಕೋತಿಗಳನ್ನು ದೂರ

ಮಾಡುವುದಲ್ಲದೆ ಹುಡಿ ಆಹಾರವನ್ನು ಒಣ ಸ್ಥಿತಿಯಲ್ಲಿಡುತ್ತದೆ ಮತ್ತು ನೀರಿಗೆ ನೆರಳೊದಗಿಸುತ್ತದೆ. ಚಿತ್ರ 74 ಇಂತಹ ಮನೆಯ ನಕ್ಷೆಯನ್ನು ಕೊಡುತ್ತದೆ.

ತ್ರಿಕೋಣಾಕಾರ ಅಥವಾ ಪಕ್ಕದಿಂದ ಪಕ್ಕಕ್ಕೆ ಮಟ್ಟವಾದ ಚಾವಣಿ: ಎರಡೂ ಪಕ್ಕಗಳಲ್ಲಿ ಮಟ್ಟವಾದ ಚಾವಣಿಯ ಮನೆ, ಕೊಟ್ಟಿಗೆ ರೀತಿ ಮನೆಗಿಂತ ಕಟ್ಟಲು ಹೆಚ್ಚು ಕಷ್ಟದಾಯಕವಾದುದಲ್ಲದೆ, ಹೆಚ್ಚಿಗೆ ಬಂಡವಾಳವೂ ಬೇಕಾಗುತ್ತದೆ. A ಆಕಾರದ ರೀತಿ, ಮೋಟುಗೋಡೆಗಳ ಮೇಲೆ ನಿಲ್ಲಿಸಿದ ಹೆಚ್ಚುಕಡಮೆ ಎತ್ತರದಲ್ಲಿ ಅಳವಡಿಸಿದ ತ್ರಿಕೋನಾಕಾರದ ಚಾವಣಿ. ಇದರ ಅನುಕೂಲತೆಯೆಂದರೆ ಇದನ್ನು ಕಟ್ಟಲು ಎರಡೂ ಪಕ್ಕಗಳಲ್ಲಿ ಸಮವಾಗಿರುವ ಚಾವಣಿಯ ಮನೆಯಷ್ಟು ವೆಚ್ಚ ವಾಗುವುದಿಲ್ಲ.

ಎರಡೂ ಕಡೆ ಸಮವಾದ ಚಾವಣಿಯ ಮನೆ ಮತ್ತು A ಆಕಾರದ ಮನೆ ಇವೆರಡೂ ಹೆಚ್ಚಿಗೆ ಮಳೆಬೀಳುವ ಪ್ರದೇಶಗಳಲ್ಲಿ ಅನುಕೂಲಕಾರಿ. ಬಹಳ ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ವಿಶೇಷತಹ ಹೆಚ್ಚಿಗೆ ಹಿಮ ಬೀಳುವ ಬೆಟ್ಟದ ಪ್ರದೇಶ ಗಳಲ್ಲಿ A ಆಕಾರದ ಮನೆ ಹೆಚ್ಚು ಉಪಯೋಗಕಾರಿ. ಹೆಚ್ಚಿಗೆ ಇಳಿಜಾರಾದ ಚಾವಣಿ, ಹಿಮ ಮತ್ತು ನೀರು ನಿಲ್ಲುವುದನ್ನು ತಡೆಗಟ್ಟುತ್ತದೆ.

ಈ ಎರಡೂ ರೀತಿಗಳನ್ನು ಸ್ಥಿರ ಅಥವಾ ಚರ ವಿಧಗಳಲ್ಲಿ ತಯಾರಿಸಬಹುದು. ಸ್ವತಂತ್ರ ಬಯಲು ಮತ್ತು ಮಡಚುವ ರೀತಿಯ ಕೋಳಿಸಾಕಾಣಿಕೆಗೆ ಸಾಗಿಸಬಹುದಾದ ಚರಮನೆ ಒಳ್ಳೆಯದು.

ಛಿದ್ರ ಅಥವಾ ಅಸಮಮಟ್ಟದ ಚಾವಣಿ: ಸಾಮಾನ್ಯವಾಗಿ ಕಮಾನಿನ ಮೂರನೇ ಎರಡು ಭಾಗವಾಗಿರುವ ಛಿದ್ರ ಅಥವಾ ಅಸಮ ಚಾವಣಿಯನ್ನು ಹೆಚ್ಚಿನ ಗಾಳಿ ಜಾಗವನ್ನು ಅಪೇಕ್ಷಿಪಡುವ ಹೆಚ್ಚು ಆಳವಾದ ಮತ್ತು ಹೆಚ್ಚು ಉದ್ದವಾದ ಮನೆಗಳಿಗೆ ಉಪಯೋಗಿಸುತ್ತಾರೆ. ಗೋಡೆಯ ಹೆಚ್ಚಿನ ಭಾಗ ಮುಂದಕ್ಕೆ ಬರುವಂತೆ, ಚಾವಣಿಯ ಚಿಕ್ಕ ಇಳಿಜಾರು ದಕ್ಷಿಣ ಕಡೆಗಿರುವಂತೆ ಕಟ್ಟುವುದು ಬಹಳ ಸಾಮಾನ್ಯ. ಇಂತಹ ಮನೆಗಳು ನೋಟಕ್ಕೆ ಹೆಚ್ಚು ಆಕರ್ಷಕ.

ಮಾನಿಟರ್ ಚಾವಣಿ: ಮನೆಗಳು ಹೆಚ್ಚಿಗೆ ಅಗಲವಾಗಿ, ಗೂಡುಗಳನ್ನು ನಡುವಿನ ಓಣಿಯ ಎರಡೂ ಕಡೆಯಿಟ್ಟಾಗ ಮಾನಿಟರ್ ಚಾವಣಿ ಉತ್ತಮ. ರಕ್ಷಕ ಮನೆ ಮತ್ತು ಮರಿಗಳನ್ನು ಸಾಕುವ ಮನೆಗಳ ರಚನೆಗೆ ಇದನ್ನು ವಿಶೇಷವಾಗಿ ಶಿಫಾರಸ್ಸು ಮಾಡುತ್ತಾರೆ. ಪೂರ್ವ ಪಶ್ಚಿಮಗಳ ಬೆಳಕನ್ನು ಸಮಾನವಾಗಿ ಬಿಡುವಂತೆ ಗೂಡುಗಳು ಉತ್ತರದಕ್ಷಿಣವಾಗಿರುವಂತೆ ಮಾನಿಟರ್ ಚಾವಣಿ ಮನೆಗಳನ್ನು ಕಟ್ಟ ಬೇಕು. ಈ ಮನೆಗಳನ್ನು ಕಟ್ಟಲು ಹೆಚ್ಚಿಗೆ ವೆಚ್ಚವಾಗುತ್ತದೆ. ಇತರ ಮನೆಗಳಿಗಿಂತ

ಈ ರೀತಿಯ ಮನೆಯಲ್ಲಿರಬಹುದಾದ ಅನುಕೂಲತೆ ಅವುಗಳನ್ನು ಕಟ್ಟಲು ತಗುಲುವ ಹೆಚ್ಚಿನ ವೆಚ್ಚಕ್ಕೆ ಅನುಗುಣವಾಗಿಲ್ಲ.

ಅರ್ಧ ಅಥವಾ ಅಂಶಿಕ ಮಾನಿಟರ್ ಚಾವಣಿ: ಮಾನಿಟರ್ ಚಾವಣಿ ರೀತಿಯ ಒಂದು ವಿಭೇದವೇ ಅರ್ಧ ಅಥವಾ ಅಂಶಿಕ ಮಾನಿಟರ್ ಚಾವಣಿ. ಇದನ್ನು ಆಳವಾದ ಮನೆಗಳಿಗೆ ಬೆಳಕನ್ನೊದಗಿಸಲು ಮತ್ತು ಮಾನಿಟರ್ ಚಾವಣಿಯಂತೆ ಅದೇ ಉದ್ದೇಶಗಳನ್ನು ಪೂರೈಸಲು ಉದ್ದೇಶಿಸಲಾಗಿದೆ. ಇದೂ ಕೂಡ ಕಟ್ಟಲು ಬಹಳ ವ್ಯಯಕಾರಿ.

ಚಾವಣಿಗೆ ಬಳಸುವ ಪದಾರ್ಥಗಳು: ಚಾವಣಿಗೆ ಬಳಸುವ ಅತ್ಯಂತ ತೃಪ್ತಿದಾಯಕ ಮತ್ತು ಗಟ್ಟಿಮುಟ್ಟಾದ ಪದಾರ್ಥವೆಂದರೆ —ಸಿಮೆಂಟ್ ಕಲ್ನಾರು ತಗಡುಗಳು. ಆದರೆ ಇವಕ್ಕೆ ಬಹಳ ವೆಚ್ಚವಾಗುತ್ತದೆ. ಉಬ್ಬುತಗ್ಗುಗಳುಳ್ಳ ಕಬ್ಬಿಣ ಅಥವಾ ಸತುವಿನ ತಗಡುಗಳು ಕೂಡ ಇವುಗಳಷ್ಟೇ ಬಾಳಿಕೆ ಬರುತ್ತವೆ ಮತ್ತು ಕಡಮೆ ವೆಚ್ಚದಿಂದ ಕೂಡಿದುದು. ಆದರೆ ಅಷ್ಟೇನೂ ತೃಪ್ತಿದಾಯಕವಾದುದಲ್ಲ. ಲೋಹದ ತಗಡುಗಳು ಬೇಸಿಗೆಯಲ್ಲಿ ಬಹಳ ಬಿಸಿಯಾಗಿ ಕೋಳಿಗಳಿಗೆ ಹೆಚ್ಚಿನ ತೊಂದರೆಯನ್ನುಂಟುಮಾಡುತ್ತವೆ. ಮಳೆಗಾಲದಲ್ಲಿ ಕೋಳಿಗಳ ಉಸಿರಾಟದ ಗಾಳಿಯಲ್ಲಿನ ತೇವಾಂಶವು ತಗಡುಗಳ ತಳಭಾಗದಲ್ಲಿ ಶೇಖರವಾಗಿ ಕೋಳಿ ಮನೆಯೊಳಕ್ಕೆ ತೊಟ್ಟಿಟ್ಟು ಅಲ್ಲಿ ತೇವಾಂಶಕ್ಕೆ ಕಾರಣವಾಗುತ್ತದೆ. ಬೇಸಿಗೆಯಲ್ಲಿ ಈ ಚಾವಣಿಗಳ ಮೇಲೆ ಚಪ್ಪರ ಅಥವಾ ತೆಂಗಿನ ಗರಿ ಹೊಂದಿಸುವುದು ಅವಶ್ಯಕ ಅಥವಾ ಸಾಗಿಸಲು ಸಾಧ್ಯವಾಗುವಂತಹವುದಾದರೆ ನೆರಳಿನ ಜಾಗಕ್ಕೆ ಸಾಗಿಸುವುದು ಅವಶ್ಯಕ. ಕಬ್ಬಿಣದ ತಗಡುಗಳಿಗೆ ಹುಲ್ಲನ್ನೂ ಹೊದಿಸಬಹುದು. ಕಾಲದಿಂದ ಕಾಲಕ್ಕೆ ಶಾಖ ಬಹಳವಾಗಿ ವ್ಯತ್ಯಾಸವಾಗದಂತಹ ಸ್ಥಳಗಳಲ್ಲಿ ಚಾವಣಿಗೆ ಸತುವಿನ ತಗಡು ಸೂಕ್ತವಾದುದು.

ಒಣಹುಲ್ಲನ್ನು ದಪ್ಪನಾಗಿ ಹೊಂದಿಸುವುದರಿಂದ ಮನೆಯನ್ನು ಬೇಸಿಗೆಯಲ್ಲಿ ತಣ್ಣಗೂ ಚಳಿಗಾಲದಲ್ಲಿ ಬೆಚ್ಚಗೂ ಇಡುವಂತಹ ಕಡಮೆವೆಚ್ಚದ ಚಾವಣಿಯನ್ನು ಒದಗಿಸಬಹುದು. ಇಂತಹ ಚಾವಣಿಗಳನ್ನು ಆಗಾಗ ಭರ್ತಿಮಾಡುವುದು ಅವಶ್ಯಕ. ಇದು ಮಳೆನೀರನ್ನೂ ನಿರೋಧಿಸುತ್ತದೆ. ಹುಲ್ಲಾವಣಿಯನ್ನು ಸಿಮೆಂಟ್ ಸುಣ್ಣದ ಮಿಶ್ರಣ ಬಳಿದ ಗೋಣಿಚೀಲಗಳಿಂದ ಮುಚ್ಚುವುದರಿಂದ ಇದನ್ನು ಅಭಿವೃದ್ಧಿಪಡಿಸಬಹುದು; ಈ ರೀತಿ ಸಂಸ್ಕರಿಸಲ್ಪಟ್ಟ ಗೋಣಿಚೀಲಗಳನ್ನು ಚಾವಣಿಯ ಮರದ ಚೌಕಟ್ಟಿಗೆ ಕಬ್ಬಿಣದ ಮೊಳೆಗಳಿಂದ ಭದ್ರವಾಗಿ ಸೇರಿಸಬೇಕು.

ಸಿಮೆಂಟ್-ಸುಣ್ಣದ ಮಿಶ್ರಣ ಈ ಕೆಳಕಂಡ ರೀತಿಯಲ್ಲಿರುತ್ತದೆ:

ಸಿಮೆಂಟ್	...	12	ಪೌಂಡ್
ಸುಣ್ಣ	...	3	,,
ಉಪ್ಪು	...	1	,,

ಪಟಿ(ಟ)ಕ	...	$\frac{1}{2}$	,,
ನೀರು	...	20	,,

ಈ ಮಿಶ್ರಣವನ್ನು ಕೆಳಕಂಡಂತೆ ತಯಾರಿಸಲಾಗುತ್ತದೆ:

ಸಿಮೆಂಟ್ ಮತ್ತು ಸುಣ್ಣವನ್ನು ನೀರಿನಲ್ಲಿ ಗಟ್ಟಿದ್ರಾವಣವಾಗುವಂತೆ ಕಲಕಿ. ಉಪ್ಪು ಮತ್ತು ಪಟಿಕವನ್ನು ಹಾಕಿ ಎಲ್ಲವೂ ಚೆನ್ನಾಗಿ ಬೆರೆತುಕೊಳ್ಳುವವರೆಗೆ ಕಲಕಬೇಕು. ಈಗ ಮಿಶ್ರಣ ತಯಾರಾಗುತ್ತದೆ. ಇದನ್ನು ಕುಂಚದ ಸಹಾಯದಿಂದ ಗೋಣಿಚೀಲದ ಒಳಭಾಗಕ್ಕೆ ಒಂದು ಸಾರಿ ಹೊರಭಾಗಕ್ಕೆ ಎರಡು ಸಾರಿ ಬಳಿದು ಬಿಸಿಲಿನಲ್ಲಿ ಒಣಗಲು ಬಿಡಬೇಕು. ಒಣಗಿದಂತೆ ಗೋಣಿಚೀಲಗಳು ಸೆಡೆತುಕೊಳ್ಳುತ್ತವೆ ಮತ್ತು ಮಳೆನೀರು ಪ್ರವೇಶಿಸಲು ಅಸಾಧ್ಯವಾಗುವಂತಾಗುತ್ತದೆ.

ನೆಲ: ಕೋಳಿಮನೆಯ ರಚನೆಯಲ್ಲಿ ಚಾವಣಿಯನ್ನು ಬಿಟ್ಟರೆ ನೆಲ ಮುಖ್ಯವಾದ ಅಂಶ. ನೆಲ ತೇವಾಂಶವನ್ನು ತಡೆಯುವಂತಿರಬೇಕು ಮತ್ತು ಚಿಗಟ, ಹೇನು, ಕೂರೆ ಮೊದಲಾದ ಪರಾವಲಂಬಿಗಳು ಇಲಿ ಹಾಗೂ ಇತರ ದಂಶಕಗಳು ಕೊರೆದುಕೊಂಡು ಒಳಗೆ ಬರಲು ಅಸಾಧ್ಯವಾಗುವಂತಿರಬೇಕು (ಚಿತ್ರ 75).

ತಂತಿಬಲೆಯ ನೆಲಗಟ್ಟು: ಸಾಗಿಸಲು ಸಾಧ್ಯವಾಗುವಂತಹ ಮನೆಗಳಿಗೆ ಅತ್ಯುತ್ತಮವಾದ ನೆಲಗಟ್ಟೆಂದರೆ ತಂತಿಬಲೆ ಅಥವಾ ಲೋಹದ ಜಾಲರಿ. ಎರಡನೆಯದಕ್ಕೆ ಹೆಚ್ಚಿಗೆ ವೆಚ್ಚವಾಗುತ್ತದೆ; ಆದರೆ ಗಟ್ಟಿಮುಟ್ಟಾಗಿರುತ್ತದೆ ಹಾಗೂ ಹೆಚ್ಚಿಗೆ ಬಾಳಿಕೆ ಬರುತ್ತದೆ ಮತ್ತು ತಂತಿಬಲೆಯಂತೆ ಸಡಿಲ ಬೀಳುವುದಿಲ್ಲ. ಮನೆಯ ತಳಕ್ಕೆ ಮೊಳೆಗಳಿಂದ ಸೇರಿಸಿದ 1″×1″ ಲೋಹದ ಜಾಲರಿ ಅತ್ಯುತ್ತಮ ನೆಲಗಟ್ಟಾಗುತ್ತದೆ. ಕೋಳಿಯ ಹಿಕ್ಕೆಯೆಲ್ಲವೂ ಇದರ ಮೂಲಕ ಕೆಳಕ್ಕೆ ಬಿದ್ದುಹೋಗುವುದರಿಂದ ಸ್ವಚ್ಛತೆ ಉಳಿಯುತ್ತದೆ. ಲೋಹದ ಜಾಲರಿಯ ಬದಲು 1″×1″ ತಂತಿ ಬಲೆಯನ್ನು ಉಪಯೋಗಿಸಿದಾಗ ಇದನ್ನು ದಪ್ಪನಾದ ತಂತಿಯ ಪಟ್ಟಿಗಳ ಮುಖಾಂತರ ಬಲಪಡಿಸಬೇಕು.

ಕಾಂಕ್ರೀಟಿನ ನೆಲ: ಸ್ಥಿರವಾದ ಕೋಳಿಮನೆಗಳಲ್ಲಿ ಸಿಮೆಂಟ್ ಅಥವಾ ಕಾಂಕ್ರೀಟ್ ಅತ್ಯುತ್ತಮ ನೆಲಗಟ್ಟಾಗುತ್ತದೆ. ಸ್ವಲ್ಪಮಟ್ಟಿಗೆ ವೆಚ್ಚದಿಂದ ಕೂಡಿದುದಾದರೂ ಸರಿಯಾಗಿ ಕಟ್ಟಿದ ನೆಲ, ತೇವ ನಿರೋಧಕ, ಇಲಿ ನಿರೋಧಕ ಮತ್ತು ಹೆಚ್ಚಿಗೆ ಬಾಳಿಕೆ ಬರುವಂತಹುದು, ತಂತಿಬಲೆ ನೆಲವನ್ನೊಂದನ್ನು ಬಿಟ್ಟರೆ ಉಳಿದೆಲ್ಲ ನೆಲಗಳಿಗಿಂತ ಇದನ್ನು ಸುಲಭವಾಗಿ ಸ್ವಚ್ಛವಾಗಿಡಬಹುದು.

ಕಚ್ಚಾ ನೆಲ: ನಿಸ್ಸಂಶಯವಾಗಿಯೂ ಕಚ್ಚಾನೆಲ ಅತ್ಯಂತ ಮಿತವ್ಯಯಕಾರಿ. ಆದರೆ ಇದನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಕಷ್ಟ. ನೆಲ ಸಾಮಾನ್ಯವಾಗಿ ಕೊಳೆಯಾಗುತ್ತದೆ, ರೋಗಾಣುಗಳು ಮತ್ತು ಚಿಗಟ, ಹೇನು, ಕೂರೆ, ಉಣ್ಣೆಗಳ ಆವಾಸಸ್ಥಾನವಾಗುತ್ತದೆ

ಹಾಗೂ ರೋಗ ಉದ್ಭವಿಸಿ ಹರಡುವುದಕ್ಕೆ ಅತ್ಯಂತ ಅನುಕೂಲಕರ ವಾತಾವರಣ ವನ್ನೊದಗಿಸುತ್ತದೆ.

ಅವುಗಳ ಪ್ರಾರಂಭಿಕ ವೆಚ್ಚದಿಂದಾಗಿ ಮೇಲೆ ಶಿಫಾರಸ್ಸು ಮಾಡಿದ ನೆಲವನ್ನು ತಯಾರಿಸಲು ಸಾಧ್ಯವಾಗದೇ ಹೋದಲ್ಲಿ, ಮನೆಕಟ್ಟಬೇಕಾದ ಜಾಗ ಪೂರ್ತಿ ಒಂದು ಅಡಿಯಷ್ಟು ಅಗೆದು ಈ ಹಳ್ಳವನ್ನು ಗರಸು, ಮರಳು ಮತ್ತು ಸುಣ್ಣಕಲ್ಲುಗಳಿಂದ ನೆಲದಮೇಲೆ 6 ಅಂಗುಲ ಎತ್ತರದವರೆಗೆ ತುಂಬಬೇಕು. ಈ ಎಲ್ಲ ಪದಾರ್ಥಗಳನ್ನೂ ತಗ್ಗಿಸೊಳಕ್ಕೆ ಧಮ್ಮಸ್ಸು ಮಾಡಿದ ಮೇಲೆ ಒಡ್ಡೆಯಾದ ಜೇಡಿಮಣ್ಣನ್ನು ಮೇಲೆ ಹಾಕುವುದರಿಂದ ಸುಮಾರಾಗಿ ಉತ್ತಮವಾದ ಜೇಡಿಮಣ್ಣಿನ ನೆಲವನ್ನು ತಯಾರಿಸ ಬಹುದು. ಮನೆಯ ಸುತ್ತಲೂ ಕಿರಿದಾದ ಕಾಲುವೆಯನ್ನು ತೋಡಿ ಇದರೊಳಗೆ ಒಂದು ಅಡಿ ಆಳದವರೆಗೆ ಒಂದು ಅಂಗುಲದ ತಂತಿಬಲೆಯನ್ನು ಇಡಬೇಕು. ತಂತಿ ಬಲೆಯ ಮೇಲ್ಭಾಗವನ್ನು ಮೊಳೆಗಳ ಮೂಲಕ ಮನೆಗೆ ಭದ್ರವಾಗಿ ಸೇರಿಸಿ ಕಾಲುವೆ ಯನ್ನು ಮಣ್ಣಿನಿಂದ ಭದ್ರವಾಗಿ ಮುಚ್ಚಬೇಕು. ಇದು ಇಲಿ ಹಾಗೂ ಮುಂಗುಸಿಗಳು ಮನೆಯೊಳಕ್ಕೆ ಕೊರೆದುಕೊಂಡು ಬರುವುದನ್ನು ತಡೆಯುತ್ತದೆ.


ನೆಲ ಯಾವುದೇ ರೀತಿಯದಾದರೂ ಹಾಸಿಗೆಯಾಗಿ ಸ್ವಲ್ಪ ಸ್ವಚ್ಛವಾದ ಒಣ ಹುಲ್ಲನ್ನು ಒದಗಿಸುವುದು ಅಪೇಕ್ಷಣೀಯ. ತಂತಿಬಲೆಯ ನೆಲದ ಮನೆಗಳಲ್ಲಿ ಹುಲ್ಲಿನ ಹಾಸಿಗೆ ಬಹಳ ಚಳಿ ತಿಂಗಳುಗಳಲ್ಲಿ ಮಾತ್ರ ಬೇಕಾಗುತ್ತದೆ. ಈ ರೀತಿಯ ಹಾಸಿಗೆ ಹೊಟ್ಟು, ಒಣಹುಲ್ಲು, ಮರದ ಶೆಲುಪೊರೆಗಳು, ಒಣಎಲೆಗಳು, ಮರದಹೊಟ್ಟು, ಮರಳು, ಕಾಫಿ ಮತ್ತು ಕಡಲೆಕಾಯಿಯ ಹೊಟ್ಟು ಯಾವುದಾದರಾಗಿರಬಹುದು.

ಗೋಡೆಗಳು: ಬೇಸಿಗೆ ತಣ್ಣಗೂ, ಚಳಿಗಾಲ ಮತ್ತು ತಣ್ಣಗಿರುವ ಬೆಟ್ಟಗಳನ್ನು ಬಿಟ್ಟರೆ, ಅವಶ್ಯಕ ಮಾರ್ಪಾಟುಗಳೊಂದಿಗೆ ತೆರೆದ ರೀತಿಯ ಮನೆಗಳು ಸೂಕ್ತವೆಂದು ಕಂಡುಬರುತ್ತವೆ.

ಬೆಟ್ಟಪ್ರದೇಶಗಳಿಗೆ: ಬೆಟ್ಟಗಳಲ್ಲಿ ಸ್ವಲ್ಪಭಾಗ ತೆರೆದ ಮುಂಭಾಗವಿರುವ, ಸರಿ ಯಾದ ವಾತಾಯನ ವ್ಯವಸ್ಥೆಯನ್ನು ಕಲ್ಪಿಸಿ ಉಳಿದ ಮೂರು ಕಡೆಗಳಲ್ಲೂ ಮುಚ್ಚಿರುವ ಮನೆ ಶಿಫಾರಸ್ಸು ಮಾಡಲಾಗುತ್ತದೆ. ಗೋಡೆಗಳನ್ನು ಇಟ್ಟಿಗೆ ಅಥವಾ ಸಿಮೆಂಟ್ ಕಲ್ನಾರಿನ ತಗಡುಗಳಿಂದ ಮಾಡಬಹುದು. ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆ ಅಥವಾ ಮಣ್ಣನ್ನು ಕೂಡ ಉಪಯೋಗಿಸಬಹುದು. ಕ್ರಿಮಿಕೀಟಗಳು ಸೇರಿಕೊಳ್ಳದಂತೆ ಗೋಡೆಗಳನ್ನು ಗಟ್ಟಿಯಾಗಿ ಬಿರುಕುಗಳಿಲ್ಲದಂತೆಯೂ ಕಟ್ಟಬೇಕು.

ತೆರೆದ ಮುಂಭಾಗದಿಂದಾದ ವಾತಾಯನ, ಗಾಳಿ ಕೋಳಿಗಳ ಮೇಲೆ ಬಿರುಸಾಗಿ ಬೀಸದೆ ಮನೆಯಲ್ಲಿ ಸುತ್ತಲು ಸಹಾಯವಾಗುತ್ತದೆ. ಎಲ್ಲ ವಾತಾಯನಗಳನ್ನೂ ತಂತಿಬಲೆಯಿಂದ ಮುಚ್ಚಬೇಕು. ಚಳಿಗಾಲದಲ್ಲಿ ಕೋಳಿಗಳನ್ನು ಬೆಚ್ಚಗಿಡಲು ಸಹಾಯ

ವಾಗುವಂತೆ ಮುಂದಿನ ತೆರಪನ್ನು ಕಾನ್ವಾಸ್, ಗೋಣಿಚೀಲ ಅಥವಾ ಯಾವುದಾದ ರೊಂದು ರೀತಿಯ ಚಾಪೆ ಅಥವಾ ಹಲಗೆಯಿಂದ ಮುಚ್ಚಬೇಕು.



ಚಿತ್ರ 75: ತಂತಿ ಬಲೆ, ನೆಲಗಟ್ಟಿರುವ ಕೋಳಿಮನೆ

ಸಮತಲಗಳಿಗೆ: ಮೈದಾನ ಪ್ರದೇಶಕ್ಕೆ ಸ್ವಲ್ಪ ಇಳಿಜಾರಾದ ಚಾವಣಿಯುಳ್ಳ ಮುಂದುಗಡೆ ತೆರೆದಿರುವ ರೀತಿಯ ಮನೆ ಶಿಫಾರಸ್ಸು ಮಾಡಲಾಗಿದೆ. ಮುಂಭಾಗ ವನ್ನು ಪೂರ್ತಿ ತೆರಪಾಗಿ ಬಿಟ್ಟು ಉಳಿದ ಕಡೆ ಕೆಳಗಡೆಯ ಮೂರನೆ ಒಂದು ಭಾಗ ವನ್ನು ಗೋಡೆ ಕಟ್ಟಿಯೋ, ಕಲ್ನಾರಿನ ತಗಡಿನಿಂದಲೋ ಮುಚ್ಚಿ ಉಳಿದ ಮೇಲ್ಭಾಗಕ್ಕೆ ಒಂದು ಅಂಗುಲದ ತಂತಿಬಲೆ ಹಾಕಿ ಗೋಡೆಯನ್ನು ರೂಪಿಸಬಹುದು. ಮನೆಯ ಮೂರು ಕಡೆಗಳಲ್ಲಿ ಹಾಕುವ ಗೋಡೆ ಅಥವಾ ಸಿಮೆಂಟ್‌ಕಲ್ನಾರು ತಗಡಿನ ಮರೆ ಕೋಳಿ ಗಳನ್ನು ತೀವ್ರವಾದ ಬೀಸುಗಾಳಿಯಿಂದ ರಕ್ಷಿಸುವ ಉದ್ದೇಶದಿಂದ ಕೂಡಿರುತ್ತದೆ. ತೀವ್ರವಾದ ಬೀಸುಗಾಳಿಗಳಿಲ್ಲದ ಪ್ರದೇಶಗಳಲ್ಲಿ ನಾಲ್ಕುಕಡೆ ಬರಿ ತಂತಿಬಲೆ ಹಾಕ ಬಹುದು. ಗೋಡೆಗಳ ಪಾಯ ಮನೆಕಟ್ಟುವ ಜಾಗದ ಮಟ್ಟಕ್ಕಿಂತ ಕನಿಷ್ಠ ಒಂದು

ಅಡಿಯಷ್ಟಾದರೂ ಕೆಳಗಿರಬೇಕು. ಗೋಡೆ ಸಿಮೆಂಟ್‌ಕಲ್ನಾರಿನ ಹಲಗೆ ಅಥವಾ ಕೇವಲ ತಂತಿಬಲೆಯದಾಗಿದ್ದರೆ ಇವುಗಳನ್ನು ಮನೆಯ ಸುತ್ತ ಅಗೆದ ಒಂದು ಅಡಿ ಆಳದ ಕಾಲುವೆಯಲ್ಲಿ ಹೂಳಬೇಕು. ಇದು ಇಲಿ ಮತ್ತು ಮುಂಗುಸಿ ಮೊದಲಾದ ಪ್ರಾಣಿಗಳು ನೆಲ ಕೊರೆದುಕೊಂಡು ಮನೆಯೊಳಕ್ಕೆ ಬರುವ ಅಪಾಯವನ್ನು ತಪ್ಪಿಸುವುದು. ಚಳಿಗಾಲ ಮತ್ತು ಮಳೆಗಾಲಗಳಲ್ಲಿ ತೆರೆದ ಗೋಡೆಗಳನ್ನು ಕಾನ್ವಾಸ್ ಅಥವಾ ಗೋಣಿಚೀಲದಿಂದ ಮುಚ್ಚಬೇಕು.



ಚಿತ್ರ 76: ಸೀಳಿದ ಬೊಂಬಿನಿಂದ ರಚಿಸಿದ ಕೋಳಿಮನೆ

ಹಳ್ಳಿಗಳಿಗೆ ತಕ್ಕವಾದ ಅಗ್ಗವಾದ ಮನೆಗಳು

ಕೋನಯುತ ಕಬ್ಬಿಣದ ಚೌಕಟ್ಟು ಆದರ್ಶವೆಂದು ಪರಿಗಣಿಸಲ್ಪಡುತ್ತದೆ. ಇದನ್ನು ಬಿಟ್ಟರೆ ಮುಂದೆ ಮರವೇ ಅತ್ಯುತ್ತಮ ಪದಾರ್ಥ, ಆದರೆ ಬಹುಜಾಗಗಳಲ್ಲಿ ಇದಕ್ಕೆ ಗೆದ್ದಲು ಹತ್ತಿನಾಶವಾಗುವ ಸಾಧ್ಯತೆಯುಂಟು. ಇಂತಹ ಜಾಗಗಳಲ್ಲಿ ಸರಿಯಾಗಿ ಹದಗೊಳಿಸಿದ ಅಥವಾ ತಯಾರುಮಾಡಿದ ಮರವನ್ನುಪಯೋಗಿಸಬೇಕು. ಇಲ್ಲವೇ ಮರ ನೆಲದೊಂದಿಗೆ ಸಂಪರ್ಕ ಹೊಂದುವ ಜಾಗದಲ್ಲಿ ಗೆದ್ದಲು ಹತ್ತದಂತೆ ಇದನ್ನು ಕಾಂಕ್ರೀಟ್‌ನೊಳಗೆ ಸೇರಿಸಬೇಕು. ಇದಕ್ಕೆ ಎಲ್ಲ ಕೋಳಿಸಾಕಣೆದಾರರೂ ಪೂರೈಸಲು

ಸಾಧ್ಯವಾಗದಂತಹ ಸ್ವಲ್ಪ ಪ್ರಾರಂಭಿಕ ವೆಚ್ಚಬೇಕು. ಆದುದರಿಂದ ಸ್ಥಳೀಯವಾಗಿ ದೊರೆಯುವ ಪದಾರ್ಥಗಳಿಂದ ಸಾಧ್ಯವಾದ ಮಟ್ಟಿಗೂ ಕಡಮೆ ಖರ್ಚಿನಲ್ಲಿ ಕೋಳಿ ಸಾಕಣೆದಾರ ತಾನೇ ಕಟ್ಟಲು ಸಾಧ್ಯವಾಗುವಂತಹ ಮನೆ ಅವಶ್ಯಕ.

ಗೋಣಿ ತಾಟು, ಸೀಳಿದ ಬೊಂಬು, ಸಣ್ಣ ಕೊಂಬೆ ಮತ್ತು ಪೊದೆ ಮರಗಳ ಶಾಖೆಗಳು, ಒಣಹುಲ್ಲು ಮುಂತಾದವುಗಳಿಂದ ಅಗ್ಗದ ಮನೆಗಳನ್ನು ಕಟ್ಟಬಹುದು. ಇಂತಹ ಕೆಲವು ಮನೆಗಳ ಸಂಕ್ಷಿಪ್ತ ವಿವರವನ್ನು ಕೆಳಗೆ ಕೊಡಲಾಗಿದೆ:

ಗೋಣಿ ತಾಟಿನ ಮನೆ: ಗೋಣಿ ತಾಟಿನ ಮನೆಯ ಅತ್ಯಂತ ಸೂಕ್ತ ಅಳತೆಯೆಂದರೆ 8′×6′×6′. ಸರಿಯಾದ ಅಳತೆಯ ಮರದ ಚೌಕಟ್ಟಿಗೆ ಗೋಣಿತಾಟನ್ನು ಮೊಳೆಗಳು ಹೊಡೆದು ಸೇರಿಸಿ ಇದನ್ನು ಕಟ್ಟಬಹುದು. ನಂತರ ಸಿಮೆಂಟ್ ಸುಣ್ಣ ಮಿಶ್ರಣವನ್ನು ತಾಟಿನ ಒಳಮುಖಕ್ಕೆ ಒಂದು ಸಾರಿ ಹೊರಮುಖಕ್ಕೆ ಎರಡು ಸಾರಿ ಬಳಿಯಬೇಕು. ವಸತಿ ಒದಗಿಸಬೇಕಾಗಿರುವ ಪ್ರದೇಶವನ್ನವಲಂಬಿಸಿ ಪಕ್ಕಗಳನ್ನು ಗೋಣಿತಾಟಿನಿಂದ ಪೂರ್ತಿಯಾಗಿಯೋ ಅಥವಾ ಸ್ವಲ್ಪವೋ ಮುಚ್ಚಬೇಕು. ಉಳಿದ ಭಾಗವನ್ನು ಒಂದು ಅಂಗುಲದ ತಂತಿಬಲೆಯಿಂದ ಮುಚ್ಚಬೇಕು.

ಭಕ್ಷಕಗಳು ಮನೆಯೊಳಕ್ಕೆ ಕೊರೆದುಕೊಂಡು ಬರುವುದನ್ನು ತಪ್ಪಿಸಲು ಚೌಕಟ್ಟಿನ ಸುತ್ತ ಒಂದು ಅಡಿ ಭೂಮಿಯೊಳಗೆ ಮತ್ತು ಒಂದು ಅಡಿ ಭೂಮಿಯ ಮೇಲೆ ಬರುವಂತೆ ಅರ್ಧ ಅಂಗುಲದ ತಂತಿಬಲೆಯನ್ನು ಹೂಳಬೇಕು. ಮನೆಯ ಕಾಲುಗಳು ಆಗಾಗ ಮಳೆಯಿಂದ ತೇವವಾಗಿ ಗೆದ್ದಲಿನಿಂದ ಹಾಳಾಗುವ ಸಾಧ್ಯತೆಯುಂಟು. ನೆಲದ ಹತ್ತಿರ ಒಂದು ಅಡಿ ಕಾಲು ಕಬ್ಬಿಣದಿಂದಾಗಲಿ ಅಥವಾ ಬೇಕಾದಾಗ ಆ ಕೆಳಗಿನ ಭಾಗವನ್ನು ಬದಲಾಯಿಸುವುದು ಸಾಧ್ಯವಾಗುವಂತೆ ಮಾಡುವುದು ಮಿತವ್ಯಯಕಾರಿ.

ಈ ರೀತಿಯ ಮನೆಕಟ್ಟಲು ಸುಮಾರು 25 ರೂಪಾಯಿ ಬೇಕಾಗಬಹುದೆಂದು ಅಂದಾಜುಮಾಡಲಾಗಿದೆ. ಇದು 12 ರಿಂದ 15 ಕೋಳಿಗಳಿಗೆ ವಸತಿ ಜಾಗವೊದಗಿಸಬಲ್ಲದು.

ಸೀಳಿದ ಬೊಂಬಿನ ಮನೆಗಳು: ಬೊಂಬು ಅನೇಕ ಕಡೆ ಸಿಗುತ್ತದೆ ಮತ್ತು ಇದು ಕೋಳಿಮನೆ ರಚನೆಯ ಅಗ್ಗವಾದ ಪದಾರ್ಥಗಳಲ್ಲಿ ಒಂದಾಗಿದೆ. ಮನೆಗಳನ್ನು ಸೀಳಿದ ಬೊಂಬಿನಿಂದ ನಾಲ್ಕೂಕಡೆ ತೆರೆದಿರುವಂತೆ (ಚಿತ್ರ 76) ಆಗಲಿ ಇಲ್ಲವೇ, ಮುಂಭಾಗದಲ್ಲಿ ತೆರಪಾಗಿ ಬಿಟ್ಟು ಉಳಿದ ಮೂರುಕಡೆ ನೆಲದಿಂದ $1\frac{1}{2}$ ಅಡಿ ಎತ್ತರದವರೆಗೆ ಮಣ್ಣನ್ನು ಬಳಿದು ಮುಚ್ಚಿಯೋ ಕೋಳಿಮನೆಯನ್ನು ಕಟ್ಟಬಹುದು. ಹಸುವಿನ ಸಗಣಿ ಮತ್ತು ಮಣ್ಣು ಕಟ್ಟಡ ರಚನೆಗೆ ಒಳ್ಳೆಯ ಪದಾರ್ಥಗಳಾಗುತ್ತವೆ. ಇಂತಹ ಪಳಾಸ್ತ್ರಿ, ಮನೆಯನ್ನು ಭಕ್ಷಕಗಳಿಂದ ರಕ್ಷಿಸುತ್ತದೆ. ಚಾವಣಿಯನ್ನು ಒಣಹುಲ್ಲಿನಿಂದ ಮುಚ್ಚಬಹುದು. 8 × 6 × 7 ಅಡಿ ಅಳತೆಯ ಮನೆಗೆ ಸುಮಾರು 30 ರೂಪಾಯಿ

ಗಳು ವೆಚ್ಚವಾಗುತ್ತವೆ ಮತ್ತು ಇದು 12ರಿಂದ 15 ಕೋಳಿಗಳಿಗೆ ಜಾಗ ಒದಗಿಸುತ್ತದೆ.

ಒಣಕಟ್ಟಿಗೆ ಮತ್ತು ಬೊಂಬಿನಿಂದ ಮನೆ: ಇನ್ನೂ ಅಗ್ಗವಾಗಿ ಸುಮಾರು 3 ರೂಪಾಯಿ ವೆಚ್ಚದಲ್ಲಿ, ಬೊಂಬು ಮತ್ತು ಒಣಕಟ್ಟಿಗೆಗಳಿಂದ ಕೋಳಿಮನೆ ಕಟ್ಟಬಹುದು. ಮನೆಯ ಚೌಕಟ್ಟು, ದಾರದಿಂದ ಕಟ್ಟಿದ ಅಥವಾ ಕಂಬಿ ಸುತ್ತಿದ ಒಣಕಟ್ಟಿಗೆಗಳಿಂದಾಗುತ್ತದೆ. ಮನೆಯ ಮೂಲೆಗಳ ಆಧಾರಗಳು ಚಪ್ಪಡಿಕಲ್ಲಿನ ಮೇಲೋ ಇಟ್ಟಿಗೆಯ ಮೇಲೋ ನಿಲ್ಲಿಸಬೇಕು. ಹಾಗಲ್ಲದೇ ಇದು ನೇರವಾಗಿ ನೆಲಕ್ಕೆ ತಗುಲಿದರೆ ಬೊಂಬಿಗೆ ಬಹಳ ಬೇಗ ಗೆದ್ದಲು(ಲಿ) ಹತ್ತುತ್ತದೆ.

ಆದಾಗ್ಯೂ ಈ ರೀತಿಯ ಮನೆ ಬಾಳಿಕೆ ಬರುವುದಿಲ್ಲ; ಕ್ರಿಮಿಕೀಟಗಳಿರುವ ಪ್ರದೇಶದಲ್ಲಿ ಇದರಲ್ಲಿ ಹೇನು, ಕೂರೆ ಚಿಗಟ ಮತ್ತು ನುಸಿ ಬಹಳವಾಗಿ ಸೇರಿಕೊಳ್ಳುತ್ತವೆ. ಇವನ್ನು ಕ್ರಿಮಿನಾಶಕಗಳ ಸಹಾಯದಿಂದಲೂ ಹೋಗಲಾಡಿಸುವುದು ಕಷ್ಟ.

ಕೋಳಿಮನೆಯ ಸಾಮಗ್ರಿಗಳು


ಕೋಳಿಗಳ ಸಂತೋಷಕ್ಕೆ, ಕೋಳಿಸಾಕಣೆದಾರನ ಅನುಕೂಲತೆಗೆ ಬೇಕಾದ ಜೋಡಣೆಗಳೇ ಕೋಳಿ ಮನೆಯ ಸಾಮಗ್ರಿಗಳು. ಸಾಮಗ್ರಿಗಳಲ್ಲಿ ಬೇಕಾದಷ್ಟು ರೂಪ ಆಕಾರಗಳಿವೆ; ಆದರೆ ಅವು ಅನುಕೂಲತೆ, ಸಾಗಾಣಿಕಾ ಸೌಲಭ್ಯ, ಮಿತವ್ಯಯ, ಕೋಳಿಗಳ ಸುಖ ಮತ್ತು ಬಾಳಿಕೆ ಮುಂತಾದ ಕೆಲವು ಅವಶ್ಯಕ ಅಂಶಗಳನ್ನು ಹೊಂದಿರಬೇಕು.

ಅನುಕೂಲತೆ, ಮುಖ್ಯವಾಗಿ ಮೇಯಿಸುವುದು ಸ್ವಚ್ಛವಾಗಿಡುವುದು ಮತ್ತು ಮೊಟ್ಟೆ ಶೇಖರಿಸುವುದಕ್ಕೆ ಸಂಬಂಧಪಟ್ಟಂತೆ ಕೋಳಿಗಳ ಮೇಲ್ವಿಚಾರಣೆ ಕೆಲಸವನ್ನು ಆದಷ್ಟು ಕಡಮೆಮಾಡುವುದಕ್ಕೆ ಅನ್ವಯಿಸುತ್ತದೆ. ಚಿತ್ರ 77 ಸಾಮಗ್ರಿಗಳ ದೋಷಯುತವಾದ ಮತ್ತು ಸರಿಯಾದ ವ್ಯವಸ್ಥೆಯನ್ನು ಚಿತ್ರಿಸುತ್ತದೆ. ಎರಡನೆಯದರಿಂದ ಕೆಲಸ ಸಾಕಷ್ಟು ಉಳಿತಾಯವಾಗುತ್ತದೆ.

ಸಾಗಾಣಿಕಾ ಅನುಕೂಲ ಹೆಚ್ಚಾಗಿ ಅನುಕೂಲತೆಗೆ ಸಂಬಂಧಿಸಿದುದು ಮತ್ತು ಮನೆಯನ್ನು ಸ್ವಚ್ಛಮಾಡುವುದಕ್ಕಾಗಲಿ ಔಷಧಿ ಸಿಂಪಡಿಸುವುದಕ್ಕಾಗಲಿ ಸುಲಭವಾಗಿ ತೆಗೆಯುವ ಅನುಕೂಲತೆಯಿಂದ ಕೂಡಿರುತ್ತದೆ.

ಸಲಕರಣೆಗಳು ಬಹಳ ಬೆಲೆ ಬಾಳುವಂತಾಗಲೀ ಅತ್ಯಂತ ತೊಡಕಿನದಾಗಲಿ ಆಗಿರಬಾರದು. ಸಲಕರಣೆಗಳಿಗೆ ಅವುಗಳ ಸಾಮರ್ಥ್ಯದೊಂದಿಗೆ ಸುಸಂಗತವಾಗಿ ಎಷ್ಟು ಕಡಮೆ ಹಣ ತೊಡಗಿಸಲು ಸಾಧ್ಯವೋ ಅಷ್ಟನ್ನು ಮಾತ್ರ ತೊಡಗಿಸಬೇಕು.

ಸಾಮಾನ್ಯವಾಗಿ ಸರಳವಾದ ರಚನೆ ಮಿತವ್ಯಯಕಾರಿ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು.



(ಅ) (ಅ)

ಚಿತ್ರ 77: ಕೋಳಿಮನೆಯಲ್ಲಿ ಸಾಧನಸಾಮಗ್ರಿಗಳ ವ್ಯವಸ್ಥೆ. ಅ) ದೋಷಪೂರ್ಣ ವ್ಯವಸ್ಥೆ. ಆ) ಸೂಕ್ತ ವ್ಯವಸ್ಥೆ.

Feeder=ಮೇವುಣಿಕ, Nests=ಹಕ್ಕೆಗಳು, Wheat=ಗೋಧಿ, Mash=ಪುಡಿ, Waterer=ನೀರುಣಿಕ, Droppine Boards=ಹಿಕ್ಕೆ ಹಲಗೆಗಳು, Scratcn Down=ಕೆಳಗೆ.


ತೃಪ್ತಿದಾಯಕ ಮೊಟ್ಟೆ ಉತ್ಪಾದನೆಯನ್ನು ಪಡೆಯಲು ಕೋಳಿಗಳ ಸುಖ ಅತಿಮುಖ್ಯವಾದ ಅಂಶ. ಆದುದರಿಂದ ಇದನ್ನು ಅಲಕ್ಷಿಸಬಾರದು. ಕೋಳಿಗಳಿಗೆ ಸಾಕಷ್ಟು 'ಕೂಡುಗಂಬಿ' (ಅಡ್ಡಕಂಬಿ) ಮತ್ತು ಗೂಡಿನಲ್ಲಿ ಜಾಗ, ಆಹಾರ ಮತ್ತು ನೀರಿನ ಸ್ವಚ್ಛತೆ, ಕೂಡುಗಂಬಿ ಮತ್ತು ಆಹಾರವಿರುವ ಜಾಗವನ್ನು ಸುಲಭವಾಗಿ ತಲುಪುವ ಅನುಕೂಲತೆ, ಇವೆಲ್ಲವೂ ಕೋಳಿಗಳ ಸುಖಕ್ಕೆ ಪೂರಕ ಅಂಶಗಳು.

ಕೋಳಿಮನೆಯನ್ನು ಸಲಕರಣೆಗಳಿಂದ ಸುಸಜ್ಜಿತಗೊಳಿಸುವಾಗ ಅವುಗಳ ಬಾಳಿಕೆ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಅಲಕ್ಷಿಸಬಾರದು. ಅವಶ್ಯಕವಾದ ಪದೇ ಪದೇ ಸ್ವಚ್ಛಮಾಡುವಿಕೆಗೆ ಬಾಳಿಕೆ ಬರುವಂತಹ ಗಟ್ಟಿಮುಟ್ಟಾದ ಸಲಕರಣೆಗಳು ಬೇಕು.

ಕೂಡುಗಂಬಿ ಅಥವಾ ಅಡ್ಡಕಂಬಿ: ಕೋಳಿಮನೆಯಲ್ಲಿ ಕೂಡುಗಂಬಿ ಅಥವಾ ಅಡ್ಡಕಂಬಿಗಳು ಅವಶ್ಯಕ. ರಾತ್ರಿ ಹೊತ್ತು ನೆಲದಮಟ್ಟದಿಂದ ಮೇಲಿರಬೇಕೆಂಬ

ಕೋಳಿಮರಿಗಳ ಸ್ವಭಾವ ಹಾಗೂ ಆಸೆಯನ್ನು ಪೂರೈಸುವುದರ ಜೊತೆಗೆ ಕೋಳಿಗಳ ಪುಕ್ಕ ಮತ್ತು ಪಾದ ಸ್ವಚ್ಛವಾಗಿರಲೂ ಕೂಡುಗಂಬಿ ಸಹಾಯಮಾಡುತ್ತದೆ. ಕೋಳಿಗಳಿಗೆ ಆರರಿಂದ ಎಂಟುವಾರವಾಗಿರುವಾಗಿನಿಂದಲೂ ಅವುಗಳಿಗೆ ಕೂಡುಗಂಬಿಯ ಮೇಲೆ ವಿಶ್ರಾಂತಿ ತೆಗೆದುಕೊಳ್ಳುವ ಅಭ್ಯಾಸ ಮಾಡಿಸುವುದು ಒಳ್ಳೆಯದು. ರಕ್ಷಣಾ ಮನೆಯ ಒಂದು ತುದಿಯಲ್ಲಿ ಸರಿಯಾದ ಕೂಡುಗಂಬಿಗಳನ್ನು ಒದಗಿಸುವುದರಿಂದ (ಚಿತ್ರ 78) ಈ ಅಭ್ಯಾಸವನ್ನು ಬೆಳೆಸಬಹುದು. ಕೂಡುಗಂಬಿಯಲ್ಲಿ ಪ್ರತಿ ಕೋಳಿಗೂ ಬಿಡಬೇಕಾದ ಜಾಗ ತಳಿಯ ಗಾತ್ರವನ್ನವಲಂಬಿಸುತ್ತದೆ. ಲೆಗ್‌ಹಾರ್ನ್‌ಗಳಂತಹ ಸಣ್ಣ ತಳಿಗಳಿಗೆ ಏಳರಿಂದ ಒಂಬತ್ತು ಅಂಗುಲ ಮತ್ತು ಸಾಮಾನ್ಯೋದ್ದೇಶದ ತಳಿಗಳಿಗೆ ಒಂಬತ್ತರಿಂದ ಹನ್ನೆರಡು ಅಂಗುಲ ಅವಶ್ಯಕ. ಕೂಡುಗಂಬಿಯ ಮೇಲೆ ಪಕ್ವವಾದ ಕೋಳಿಗಳಿಗಿಂತ ಹೆಚ್ಚಿಗೆ ಮರಿಗಳಿಗೆ ಅವುಗಳ ಕಿರಿದಾದ ಗಾತ್ರದಿಂದಾಗಿ ಜಾಗ ಒದಗಿಸಬಹುದು. ಬೇಸಿಗೆಯ ಕಾಲದಲ್ಲಿ ಕೂಡುಗಂಬಿಗೆ ಹೆಚ್ಚಿನ ಜಾಗ ಒದಗಿಸುವುದು ಅವಶ್ಯಕ.


ಕೋಳಿಗಳು ಸುಖವಾಗಿ ವಿಶ್ರಾಂತಿ ತೆಗೆದುಕೊಳ್ಳಲು ಸಾಕಾಗುವಷ್ಟು ಕೂಡುಗಂಬಿ ದೊಡ್ಡದಾಗಿರಬೇಕು. ಮೇಲೆ ಗುಂಡಗೂ ಕೆಳಗೆ ಚಪ್ಪಟೆಯಾಗಿ ಇರುವ ಎರಡು ಅಂಗುಲ ಚದರದ ಮರದ ಕೂಡುಗಂಬಿಗಳನ್ನು ಉಪಯೋಗಿಸಬಹುದು. ಇವು




ಚಿತ್ರ 78: ಕೂಡುಗಂಬಿಗಳುಳ್ಳ ರಕ್ಷಕ ಮನೆ

ವಿಶ್ರಾಂತಿಯನ್ನು ಹೆಚ್ಚು ಸುಖದಾಯಕವಾಗಿ ಮಾಡುತ್ತವೆ ಮತ್ತು ಪಾದ ಹುಣ್ಣಾಗುವುದನ್ನು ತಡೆಗಟ್ಟುತ್ತವೆ. ಸಾಮಾನ್ಯವಾಗಿ ಮರದ ಕೂಡುಗಂಬಿಗಳು ಉಪಯೋಗಿ

ಸಲ್ಪಡುತ್ತವೆ. ಆದರೆ ಲಭ್ಯವಿರುವ ಕಡೆ ಎರಡು ಅಂಗುಲ ದಪ್ಪವಾದ ಬೊಂಬಿನ ಸೀಳದ ಪಟ್ಟಿಯನ್ನುಪಯೋಗಿಸಬಹುದು. ಸುಲಭವಾಗಿ ಸ್ವಚ್ಛಮಾಡುವುದು ಸಾಧ್ಯವಾಗುವಂತೆ ಸಾಧ್ಯವಾದ ಮಟ್ಟಿಗೂ ಮೊಳೆಗಳನ್ನುಪಯೋಗಿಸದೆ ಅವುಗಳನ್ನು ಜೋಡಿಸಬೇಕು.



ಚಿತ್ರ 79: ಹಕ್ಕೆಗಳ ನಮೂನೆಗಳು. ಅ) ಒಂಟಿ ಹಕ್ಕೆ, ಆ) ವ್ಯಾಪಾರಿ ಕೇಂದ್ರಕ್ಕೆ ಹಕ್ಕೆ,
Frontview=ಮುಂದೃಶ್ಯ




ಚಿತ್ರ 80: ರಚನಾ ವಿವರಗಳುಳ್ಳ ಬೋನುಹಕ್ಕೆ

ಎಲ್ಲ ಕೂಡುಗಂಬಿಗಳೂ ಒಂದೇ ಮಟ್ಟದಲ್ಲಿರಬೇಕು ಮತ್ತು ಒಂದರಿಂದ ಒಂದು, ಒಂದು ಅಡಿ ಅಂತರದಲ್ಲಿರಬೇಕು. ಕೂಡುಗಂಬಿಗಳನ್ನು ಜೋಡಿಸುವ ಅತಿಸೂಕ್ತ ಎತ್ತರವೆಂದರೆ 18 ಅಂಗುಲ. ಕೋಳಿ ಕೂಡುಗಂಬಿಗಳು ಸಾಮಾನ್ಯವಾಗಿ ಬೇಗ ವಿಶ್ರಾಂತಿ ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸುತ್ತವೆ. ತಂತಿಬಲೆ ಕೋಳಿಗಳು ಕೂಡು ಕಂಬಿಯ ಕೆಳಗೆ ಗುಂಪುಮಾಡುವುದನ್ನು ತಡೆಗಟ್ಟುವುದಲ್ಲದೆ ಹಿಕ್ಕೆಗಳಿಂದ ದೂರವಾಗಿಡುತ್ತದೆ.


ಹಕ್ಕೆ ಪೆಟ್ಟಿಗೆಗಳು: ಮೊಟ್ಟೆಯಿಡುವ ಹೇಂಟೆಗಳ ಪ್ರತಿಗುಂಪಿನಲ್ಲೂ ಮೊಟ್ಟೆಯಿಡಲು ಹಕ್ಕೆಪೆಟ್ಟಿಗೆಗಳನ್ನು ಒದಗಿಸಬೇಕು (ಚಿತ್ರ 79, 80). ಹೇಂಟೆಗಳು ಹೆಚ್ಚಿಗೆ ಬೆಳಕಿಲ್ಲದ ಹಕ್ಕೆಗಳನ್ನು ಇಷ್ಟಪಡುವಂತೆ ಕಂಡುಬರುತ್ತದೆ. ಹಕ್ಕೆಗಳು ಸಾಕಷ್ಟು ದೊಡ್ಡದಾಗಿರಬೇಕು ಮತ್ತು ಚಿಗಟ, ಉಣ್ಣೆ ಮೊದಲಾದ ಕೀಟಗಳ ವಿರುದ್ಧ ಔಷಧಿ ಸಿಂಪಡಿಸಲು ಸುಲಭವಾಗಿ ಬಿಚ್ಚಲು ಸಾಧ್ಯವಾಗುವಂತಿರಬೇಕು. ಖಾಲಿಯಾದ ಚಿಮಣಿ ಎಣ್ಣೆ ಡಬ್ಬ ಅತ್ಯುತ್ತಮವಾದ ಹಕ್ಕೆಯಾಗುತ್ತದೆ. ಆಗಾಗ್ಗೆ ಹಾಸನ್ನು ಬದಲಾಯಿಸಿದರೆ ಹೇನು, ಚಿಗಟ ಮತ್ತು ಉಣ್ಣೆಗಳಂತಹ ಕ್ರಿಮಿಗಳಿಗೆ ಎಡೆಗೊಡುವುದಿಲ್ಲ. ಸ್ವಲ್ಪ ಹತ್ತರಿಪುಡಿ, ಒಣಹುಲ್ಲು ಅಥವಾ ಮರಳು ಹಾಕಿದ ಯಾವುದಾದರೊಂದು 1¼ ಚದರ ಅಡಿಯಿರುವ ಮರದ ಪೆಟ್ಟಿಗೆ ಅಥವಾ ಮಡಕೆ ಇದೇ ಕೆಲಸವನ್ನು ನಿರ್ವಹಿಸುತ್ತವೆ. ಅತ್ಯಂತ ಅಪೇಕ್ಷಣೀಯ ವ್ಯವಸ್ಥೆಯೆಂದರೆ ಪ್ರತಿನಾಲ್ಕು ಹೇಂಟೆಗಳಿಗೆ ಒಂದು ಹಕ್ಕೆಯನ್ನೊದಗಿಸುವುದು.

ಹಕ್ಕೆಗಳು ಅಥವಾ ಹಕ್ಕೆಯ ಪೆಟ್ಟಿಗೆಗಳನ್ನು, ಅನುಸರಿಸುವ ಕೋಳಿಸಾಕಾಣಿಕೆ ಪದ್ಧತಿಗನುಗುಣವಾಗಿ ಕೋಳಿಮನೆಯ ಒಳ ಅಥವಾ ಹೊರಗೆ ಜೋಡಿಸಬೇಕು. ಹೇಂಟೆ ಸುಲಭವಾಗಿ ಹಕ್ಕೆಯನ್ನು ತಲುಪಿ ಒಳಗೆ ಹೋಗಲು ಹಾಗೂ ಕೋಳಿ ಸಾಕಣೆದಾರನು ಅತಿಕಡಮೆ ಶ್ರಮದಿಂದ ಮೊಟ್ಟೆಗಳನ್ನು ಶೇಖರಿಸುವುದು ಸಾಧ್ಯವಾಗುವಂತಿರಬೇಕು.

ಬೋಸುಹಕ್ಕೆ (ಗೂಡು): ಹೇಂಟೆಯ ವೈಯಕ್ತಿಕ ಉತ್ಪಾದನಾ ದಾಖಲು ನಿಖರವಾಗಿ ಬೇಕಾದ ಕಡೆಗಳಲ್ಲಿ ಬೋನುಹಕ್ಕೆ ಆವಶ್ಯಕ. ಅಂತಹ ಹಕ್ಕೆಗಳನ್ನು ತಯಾರಿಸುವುದೂ ಸುಲಭ ಮತ್ತು ಯಾವುದೇ ಬಡಗಿ ಅದನ್ನು ಕಟ್ಟಬಲ್ಲ. ಚಿತ್ರ 81ರಲ್ಲಿ ಬೋನುಹಕ್ಕೆಯ ಕಾರ್ಯದ ಚಿತ್ರಣ ಕೊಡಲಾಗಿದೆ. ಪ್ರತಿ ಮೂರು ಅಥವಾ ನಾಲ್ಕು ಹೇಂಟೆಗಳಿಗೆ ಒಂದು ಬೋನುಹಕ್ಕೆಯಿರಬೇಕು. ಇಂತಹ ಬೋನುಹಕ್ಕೆಗಳನ್ನು ನಾಲ್ಕಾರು ಭಾಗಗಳಿರುವಂತೆಯೂ ಮಾಡಬಹುದು, ಮಾಡಿ ಕೋಳಿಮನೆ ಅಥವಾ ಒರಟಾದ ಗುಡಿಸಲಿನ ಕೆಳಗೆ ತಂಪಾದ ಬೆಳಕಿಲ್ಲದ ಮೂಲೆಯಲ್ಲಿಡಬೇಕು. ಸಮುದಾಯ ಮನೆಯಲ್ಲಿ ಇಂತಹ ಬೋನುಹಕ್ಕೆಗಳ ಸಾಲನ್ನು ಒಂದು ಜಗತಿಯ ಮೇಲೆ ಗೋಡೆಯ ಪಕ್ಕದಲ್ಲಿಡುವುದು ಅನುಕೂಲಕಾರಿ.



ಚಿತ್ರ 81: ಸಾಮಾನ್ಯ ಹಕ್ಕೆ




ಚಿತ್ರ 82: ಹೂಮರಿಗಳ ಸಾಮಾನ್ಯ ಸ್ವಯಂ ಮೇವುಣಿಕ

ಆಹಾರದ ದೋಣಿಗಳು: ಮೇಯಿಸಲು ಉಪಯೋಗಿಸುವ ತೊಟ್ಟಿ, ಬಟ್ಟಲು ಮತ್ತು ತಟ್ಟೆ ಕೋಳಿಗಳ ವಯಸ್ಸು ಮತ್ತು ಗಾತ್ರಕ್ಕನುಗುಣವಾಗಿ ಸರಿಯಾದ ಗಾತ್ರದ್ದಾಗಿರಬೇಕು. ಮೇಯಿಸುವುದಕ್ಕೆ ಉಪಯೋಗಿಸುವ ಪಾತ್ರೆಗಳಲ್ಲಿ (ತಂತಿಗಳನ್ನು ಅಡ್ಡವಾಗಿ ಹಾಕುವುದರ ಮುಖಾಂತರ) ಕೋಳಿ ಆಹಾರದೊಳಗೆ ಕಾಲಿನಿಂದ ಕೆದಕುವುದನ್ನು ತಡೆಗಟ್ಟಬೇಕು.

ಮರಿಗಳಿಗೆ ಒಣಪುಡಿಯನ್ನು ಮೇಯಿಸುವುದು ಅಪೇಕ್ಷಣೀಯವೆಂದು ಗುರುತಿಸಲಾಗಿದೆ. ಕನಿಷ್ಠಪಕ್ಷ ಮೊಟ್ಟೆಯಿಡುವ ಹೇಂಟೆಗಳಾದರೂ ಕೂಡಲೇ ಆಹಾರವನ್ನು ಪಡೆಯುವಂತಿರಬೇಕು. ಅತಿ ಕಡಮೆ ನಷ್ಟದೊಡನೆ ಕೋಳಿಗಳಿಗೆ ಎಲ್ಲ ಕಾಲದಲ್ಲೂ ಆಹಾರ ದೊರೆಯುವಂತೆಯೂ ಹಾಗೂ ಆಹಾರವು ಸ್ವಚ್ಛವಾಗಿ ಉಳಿದು ಪುಡಿ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನಿರುವಂತೆಯೂ ಮಾಡಿದ ವ್ಯವಸ್ಥೆ ಇರಬೇಕು.

ಕೋಳಿಗಳು ಆಹಾರ ಸೇವಿಸದಂತೆ ತಾಜಾ ಕಾಳುಗಳು ಅಥವಾ ಇತರ ಒಣ ಆಹಾರ ದೋಣಿಯಿಂದ ತನ್ನಿಂದ ತಾನೇ ತೊಟ್ಟಿಯೊಳಕ್ಕೆ ಬೀಳುವಂತಹ ವ್ಯವಸ್ಥೆಯೇ 'ಸ್ವಯಂಚಾಲಿತ ಮೇವುಣಿಕ' (ಆಹಾರ ಪೂರೈಕೆ). ಎಲ್ಲ ಮೇವುಣಿಕ ಏಕಕಾಲದಲ್ಲಿ ಎರಡು ಅಥವಾ ಮೂರು ಕೋಳಿಗಳು ಮೇಯಲು ಸಾಧ್ಯವಾಗುವಷ್ಟು ದೊಡ್ಡದಾಗಿರಬೇಕು. ಚಿತ್ರ 82 ವಿಶೇಷತಹ ಎಳೆಯಮರಿಗಳಿಗೆ ತಕ್ಕದಾದ ಮೇವುಣಿಕದ ನಕ್ಷೆಯನ್ನು ಕೊಡುತ್ತದೆ. ಇಂತಹ ಮೇವುಣಿಕವನ್ನೂ ಮುಚ್ಚಳವಿರುವ ದೊಡ್ಡ ತಗಡಿನ ಡಬ್ಬದಿಂದ ಮಾಡಬಹುದು. ಡಬ್ಬದ ಒಂದು ಪಾರ್ಶ್ವವನ್ನು ನೆಲದಿಂದ $\frac{1}{4}$ ಅಂಗುಲ ಮೇಲಕ್ಕೆ ಹಾಗೂ ಪಕ್ಕಗಳಲ್ಲಿ ಮೇಲಕ್ಕೆ ಅರ್ಧದವರೆಗೆ ಕತ್ತರಿಸಿದೆ. ಮೂರು ಪಾರ್ಶ್ವಗಳಲ್ಲಿ ಕತ್ತರಿಸಿದ ಬಿಡಿಯಾದ ಈ ಭಾಗವನ್ನು ಒಳಕ್ಕೆ ಬಗ್ಗಿಸಬೇಕು.

ಚಿತ್ರ 83ಅ, ನೆಲದ ಮೇಲೆ ಇಡಬಹುದಾದ ಅಥವಾ ಗೋಡೆಗೆ ನೇತುಹಾಕಬಹುದಾದ ½ ಅಂಗುಲ ದಪ್ಪದ ಮರದ ಹಲಗೆಯಿಂದ ಮಾಡಿದ ಸ್ವಯಂ ಮೇವುಣಿಕದ ಅಡ್ಡಕೊಯ್ತವನ್ನು ತೋರಿಸುತ್ತದೆ. ಬೆಳೆಯುತ್ತಿರುವ ಕೋಳಿಗಳಿಗೆ, ತೊಟ್ಟಿಯ ತಕ್ಕನಾದ ಎತ್ತರ ಮೂರು ಅಂಗುಲ.




ಚಿತ್ರ 83: ಸ್ವಯಂಚಾಲಿತ ಮೇವುಣಿಕ ಅ) ಎರಡೂ ಪಕ್ಕದ ಆ) ಒಂದೇ ಪಕ್ಕದ ಕೋಳಿಗಳು ಇಲ್ಲಿ ಮೇಯುತ್ತವೆ.

मुर्गियों के लिये दाना चुगने का स्थान Birds Feed here } = ಕೋಳಿಗಳು ಇಲ್ಲಿ ಮೇಯುತ್ತವೆ. Hopper = ಹಾಪರ್, Trough = ತೆ.

83ಆ, ಒಂದೇ ಪಾರ್ಶ್ವದ ½ ಅಂಗುಲ ದಪ್ಪನಾದ ಹಲಗೆಯಿಂದ ಮಾಡಿದ ಸ್ವಯಂ ಮೇವುಣಿಕದ ಅಡ್ಡಕೊಯ್ತದ ಚಿತ್ರ. ಬೆಳೆದ ಕೋಳಿಗಳಿಗೆ ತೊಟ್ಟಿಯ ಸರಿಯಾದ ಎತ್ತರ ಆರು ಅಂಗುಲಗಳು.


ಮೇಲಿನ ರೀತಿಗಳಲ್ಲದೆ ತೆರೆದ ತೊಟ್ಟಿ ಮೇವುಣಿಕಗಳ ಹಲವು ರೀತಿಗಳು ಉಪಯೋಗದಲ್ಲಿವೆ (ಚಿತ್ರ 84, 85, 86 ರಿಂದ 88). ಇವುಗಳನ್ನು ಮಾಡುವುದು ಸುಲಭ. ಇವುಗಳ ಮುಖ್ಯ ಅನನುಕೂಲತೆಯೆಂದರೆ, ತಾಜಾಪುಡಿಯನ್ನು ಆಗಾಗ್ಗೆ ಒದಗಿಸಬೇಕು ಮತ್ತು, ಕೋಳಿಗಳು ಪುಡಿಯೊಳಗೆ ನಿಂತುಕೊಳ್ಳದಂತೆ ಹಾಗೂ ಮೇವುಣಿಕದ ಮೇಲೆ ವಿಶ್ರಾಂತಿಗೆ ಕೂರುವುದನ್ನು ತಡೆಗಟ್ಟಲು ಅವುಗಳಿಗೆ ಸುರುಳಿ ಅಥವಾ ತೂಗಾಡುವ ಹಲಗೆಯನ್ನೊದಗಿಸಬೇಕು.



ಚಿತ್ರ 84: ಬೋನು ಹಕ್ಕಿ ಹಾಗೂ ಮೇವುಣಿಕಗಳು



ಚಿತ್ರ 85: ವಯಸ್ಕ ಕೋಳಿಗಳಿಗೆ ಮೇವುಣಿಕಗಳು




ಚಿತ್ರ 86: ಮೊಟ್ಟೆಯಿಡುವ ಕೋಳಿಗಳಿಗೆ ಸಲವು ಮೇಲಿನ ಮೇವು ದೋಣಿ

ದಪ್ಪನಾದ ಬೊಂಬು ಸಿಗುವ ಕಡೆ ಅವುಗಳನ್ನು ಉಪಯೋಗಿಸಿಕೊಂಡು ಹಳ್ಳಿಯ ಬಡಗಿಯು ಬಹಳ ಕಡಮೆ ಬೆಲೆಯಲ್ಲಿ ಉಪಯುಕ್ತವಾದ ಮೇವುಣಿಕವನ್ನು ಮಾಡಬಹುದು. ಬೊಂಬುಗಳು ಬೇಕಾದಂತೆ ಬೆಳೆಯುವ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಕೋಳಿಸಾಕಾಣಿಕೆ ಬಹಳ ಜನಪ್ರಿಯವಾಗಿದೆ. ಚಿತ್ರ 88ರಲ್ಲಿ ತೋರಿಸಿರುವಂತಹ ಬೊಂಬಿನಿಂದ ಮಾಡಿದ ಸರಳ ಮೇವುಣಿಕಗಳ ಸಾಧ್ಯತೆ, ಕೋಳಿಗಳನ್ನು ಮೇಯಿಸುವ ಸರಿಯಾದ ವಿಧಾನದಲ್ಲಿ ಬಹಳ ಸಹಾಯಮಾಡುತ್ತದೆ.

ಕೋಳಿಗಳು ಎರಡೂ ಕಡೆಯಿಂದ ಮೇಯಲು ಸಾಧ್ಯವಾಗುವಂತಹ ಮೇವುಣಿಕಗಳನ್ನು ಉಪಯೋಗಿಸುವುದು ಮಿತವ್ಯಯಕಾರಿ. ಆರರಿಂದ ಎಂಟು ಕೋಳಿಗಳ ಮೇವುಣಿಕಕ್ಕೆ ಒಂದು ಅಡಿ ಉದ್ದದ ಜಾಗ ಬೇಕಾಗುವುದೆಂದು ಲೆಕ್ಕಹಾಕುವುದು ಒಳ್ಳೆಯದು. 100 ಕೋಳಿಗಳ ಗುಂಪಿಗೆ ಎಂಟರಿಂದ ಹತ್ತು ಅಡಿ ಉದ್ದವಾದ ಎರಡೂ ಕಡೆ ಮೇಯಲು ಸಾಧ್ಯವಾಗುವಂತಹ ಮೇವುಣಿಕ ಬೇಕಾಗುತ್ತದೆಂದು ಇದರಿಂದ ತಿಳಿಯುತ್ತದೆ.


ನೀರುಣಿಸುವ ಸಾಧನಗಳು: ಕೋಳಿಮರಿಗಳು ತಮ್ಮ ಅವಶ್ಯಕತೆಗೆ ತಕ್ಕಂತೆ ಹೆಚ್ಚು ನೀರು ಕುಡಿಯುತ್ತವೆ. ಆದುದರಿಂದ ಅವುಗಳಿಗೆ ನೀರು ಯಾವಾಗಲೂ ಸಿಗುವಂತೆ

ನೋಡಿಕೊಳ್ಳುವುದು ಅಗತ್ಯ. ದಿನದ ನೀರಿನ ಅವಶ್ಯಕತೆಯನ್ನು ಪೂರೈಸುವಷ್ಟು ದೊಡ್ಡದಾದ, ನೀರನ್ನು ಸ್ವಚ್ಛವಾಗಿ ತಂಪಾಗಿ ಉಳಿಸಿಕೊಳ್ಳುವ ರಾಸಾಯನಿಕ ಕ್ರಿಯೆಯಿಂದಾಗಿ ನಾಶವಾಗದ ಸುಲಭವಾಗಿ ತುಕ್ಕುಹಿಡಿದು ಅಥವಾ ಮುರಿದುಹೋಗದ,



ಚಿತ್ರ 87: ಮರಿ ಮೇವುಣಿಕಗಳು

ಸುಲಭವಾಗಿ ಉರುಳಿಹೋಗದ, ಖಾಲಿಮಾಡಲು, ಸ್ವಚ್ಛಮಾಡಿ ಪುನಃ ತುಂಬಿಡಲು ಸುಲಭವಾದ, ಕೋಳಿಗಳು ಒಳಗೆ ಕಾಲಿಟ್ಟು ನೀರನ್ನು ಹಾಳುಮಾಡಲು ಸಾಧ್ಯವಿಲ್ಲ




ಚಿತ್ರ 88: ಬೊಂಬಿನ ಮೇವ್ವಣಕಗಳು.

ದಂತಹ ಮತ್ತು ತುಲನಾತ್ಮಕವಾಗಿ ಮಿತವ್ಯಯಕಾರಿಯಾದ ನೀರುಣಿಸುವ ಸಾಧನ ಆದರ್ಶವಾದುದು.

ಮೇಲಿನ ಅವಶ್ಯಕತೆಗಳನ್ನು ತೃಪ್ತಿಕರವಾಗಿ ಪೂರೈಸುವ ಹಲವು ವಿಧದ ನೀರುಣಿಕೆಗಳನ್ನು ಪಡೆಯಬಹುದು. ಅವು ಚಿಲುಮೆಗಳ ರೂಪದಲ್ಲಾಗಲೀ, ಮೇಲೆ ಮುಚ್ಚಳವಿರುವ ಪಾತ್ರೆಗಳ ರೂಪದಲ್ಲಾಗಲೀ ಇರಬಹುದು.


ನೀರಿನ ಚಿಲುಮೆಯಲ್ಲಿ ಊಡು ಪಾತ್ರೆಯೊಳಗೆ ನೀರಿನಮಟ್ಟ ಒಂದೇ ಸಮನಾಗಿರುತ್ತದೆ. ಪಾತ್ರೆಯೊಳಗೆ ನೀರಿನಮಟ್ಟ ಇಳಿದಂತೆ ಹೊಸನೀರು ತನ್ನಿಂದ ತಾನೇ ನಿರಂತರವಾಗಿ ಹರಿಯುವ ವ್ಯವಸ್ಥೆಯಿಂದ ಇದನ್ನು ಮಾಡಬಹುದು. ಮುಂದಿನ ಪುಟಗಳಲ್ಲಿ ಕೆಲವು ವಿಧದ ನೀರಿನ ಚಿಲುಮೆಗಳನ್ನು ವಿವರಿಸಲಾಗಿದೆ.

(1) ಮೇಲ್ಭಾಗದಿಂದ ½ ಅಂಗುಲ ಕೆಳಗೆ ಪಕ್ಕದಲ್ಲಿ ಒಂದು ರಂಧ್ರವುಳ್ಳ ಒಂದು ಖಾಲಿ ಸಿಗರೇಟಿನ ಡಬ್ಬ ಅಥವಾ ಮಡಕೆಯಿಂದ ಅತ್ಯಂತ ಸರಳ ಚಿಲುಮೆ (ಚಿತ್ರ 89) ಯಾಗುತ್ತದೆ. ಇದರಲ್ಲಿ ನೀರು ತುಂಬಿ, ಸ್ವಲ್ಪ ಆಳವಿರುವ ಒಂದು ತಟ್ಟೆಯನ್ನು ಮುಚ್ಚಿ ತಲೆಕೆಳಗು ಮಾಡಬೇಕು. ನೀರು ತಟ್ಟೆಯೊಳಕ್ಕೆ ರಂಧ್ರದ ಮೂಲಕ ಹರಿಯುತ್ತದೆ, ಆದರೆ ರಂಧ್ರದ ಮಟ್ಟಕ್ಕಿಂತ ಮೇಲಕ್ಕೇರುವುದಿಲ್ಲ ಮತ್ತು ತಟ್ಟೆಯ ಕಂಠದ ಮೇಲೆ ಹರಿದುಹೋಗುವುದಿಲ್ಲ. ಇದು ಮರಿಗಳಿಗೆ ತಕ್ಕದಾದುದು. ಚಿತ್ರ 90 ಇದೇ ಸಿದ್ಧಾಂತದ ಮೇಲೆ ತಗಡಿನಿಂದ ತಯಾರಿಸಿದ ದೊಡ್ಡ ಚಿಲುಮೆಯನ್ನು ತೋರಿಸುತ್ತದೆ.



ಚಿತ್ರ 89: ಸಾಮಾನ್ಯ ನೀರಿನ ಚಿಲುಮೆ. Container=ಡಬ್ಬಿ. Dish=ತಟ್ಟೆ.


(2) ನೀರು ತುಂಬಿದ ಒಂದು ಸೀಸೆಯನ್ನು ನೀರು ತುಂಬಿರುವ ಬೋಗುಣಿಯಲ್ಲಿ ತಲೆಕೆಳಗು ಮಾಡಬೇಕು. ಸೀಸೆಯ ಕತ್ತು ಬೋಗುಣಿಯಲ್ಲಿನ ನೀರಿನಲ್ಲಿ ಸ್ವಲ್ಪ ಮುಳುಗಿರುವಂತೆ ಅದನ್ನು ಮೊಳೆಗಳ ಸಹಾಯದಿಂದ ಸ್ತಂಭ, ಮರದ ಕಂಬ ಅಥವಾ ಮರಕ್ಕೆ ಜೋಡಿಸಬೇಕು (ಚಿತ್ರ 91). ಬೋಗುಣಿಯಲ್ಲಿ ನೀರು ಯಾವಾಗಲೂ ಸೀಸೆಯ ಕತ್ತಿನ ಮಟ್ಟಕ್ಕಿರುತ್ತದೆ.



ಚಿತ 90: ತಗಡಿನ ನೀರಿನ ಚಿಲುಮೆ.




ತ್ರ 91: ಸೀಸೆ ಹಾಗೂ ಬೋಗುಣಿ ನೀರಿನ ಚಿಲುಮೆ.



ಚಿತ್ರ 92: ಘರಾ ಮತ್ತು ಕುಸಾಲಿ.

(3) ಮೇಲಿನ (1)ರ ಸಿದ್ಧಾಂತದಂತಹ ಕಡಮೆ ವೆಚ್ಚದ ಹಾಗೂ ಚೆನ್ನಾಗಿ ಕೆಲಸಮಾಡುವ ದೊಡ್ಡಗುಂಪಿನಲ್ಲಿನ ದೊಡ್ಡ ಕೋಳಿಗಳಿಗೆ ಹೊಂದುವಂತಹ ನೀರಿನ ಚಿಲುಮೆಯನ್ನು, ಮಡಕೆ ಮತ್ತು ಬೋಗುಣಿ ಆಕಾರದ ಮಣ್ಣಿನ ಪಾತ್ರೆಗಳಿಂದ ತಯಾರಿಸಬಹುದು (ಚಿತ್ರ 92). ಕತ್ತಿನಲ್ಲಿ ರಂಧ್ರವಿರುವ 'ಘರಾ' (ಮಡಕೆ)ದಲ್ಲಿ ನೀರು ತುಂಬಿ 'ಕುನಾಲಿ' (ಬೋಗುಣಿ)ಯಲ್ಲಿ ಬೋರಲುಹಾಕಬೇಕು. ನೀರು ಮಡಕೆಯ ಸಣ್ಣ ರಂಧ್ರದಿಂದ ಹೊರಬರುತ್ತದೆ ಮತ್ತು ಬೋಗುಣಿಯ ಕಂಠದ ಮೇಲೆ ಹರಿದು ಹೋಗದಂತೆ ತನ್ನ ಮಟ್ಟವನ್ನು ಕಾಯ್ದುಕೊಳ್ಳುತ್ತದೆ. ಇಂತಹ ಒಂದು ಚಿಲುಮೆ 10 ಕೋಳಿಗಳ ಗುಂಪಿಗೆ ಒಂದು ದಿನಕ್ಕೆ ಸಾಕಾಗುತ್ತದೆ. ಇಂತಹ ಹಲವು ಚಿಲುಮೆಗಳನ್ನು ದೊಡ್ಡ ಗುಂಪಿನಲ್ಲಿಡುವುದು, ಪಾತ್ರೆಯನ್ನು ಆಗಾಗ್ಗೆ ನೀರಿನಿಂದ ತುಂಬುವ ಕೆಲಸವನ್ನು ಕಡಮೆಮಾಡುತ್ತದೆ.




ಚಿತ 93: ಮಣ್ಣಿನ ನೀರುಣಿಕ

ಹಳ್ಳಿಯ ಸಾಮಾನ್ಯ ಕುಂಬಾರನು ತಾನು ಮಾಡುವ ಮಣ್ಣಿನ ಪಾತ್ರೆಗಳಿಂದ ಕಡಮೆ ವೆಚ್ಚದ ಮತ್ತು ಆರೋಗ್ಯಕರವಾದ ನೀರುಣಿಕೆಗಳನ್ನು (ಚಿತ್ರ 93) ತಯಾರಿಸಬಹುದು.

ಮರಳು ಮತ್ತು ಚಿಪ್ಪಿನ ಪಾತ್ರೆಗಳು: ಮರಳು ಮತ್ತು ಚಿಪ್ಪು ಆಹಾರ ಮಿಶ್ರಣದಲ್ಲಿ ಸೇರಿರದ ಕಾರಣ ಅವುಗಳನ್ನು ಕೋಳಿಗಳಿಗೆ ಪ್ರತ್ಯೇಕವಾಗಿಯೇ ಕೊಡಬೇಕು. ಮರ ಅಥವಾ ಲೋಹದ ಗೋಡೆಗೆ ಹಾಕುವ ಸಾಮಾನ್ಯ ಮೇವುಣಿಕಗಳು ಈ ಉದ್ದೇಶಕ್ಕೆ ಸಾಕು.

ಹಸುರು ಆಹಾರ ಚೌಕಟ್ಟುಗಳು: ಹಸುರು ಆಹಾರ ಪದಾರ್ಥವನ್ನು ಹಾಸು ಪದಾರ್ಥದ ಮೇಲೆ ಚೆಲ್ಲುವುದು ಸ್ವಚ್ಛತೆಯಲ್ಲದ ಕಾರಣ, ಒಂದು ಹಸುರು ಆಹಾರದ ಗೋಡೆ ಚೌಕಟ್ಟು (ಚಿತ್ರ 94) ಅಪೇಕ್ಷಣೀಯ. ಪಟ್ಟಿ ಅಥವಾ ತಂತಿಬಲೆಯಿಂದ



ಚಿತ್ರ 94: ಗೋಡೆಗೆ ಹಾಕುವ ಹಸುರು ಮೇವಿನ ಬಡು.




ಚಿತ್ರ 95: ಕೋಳಿಮರಿಗಳ ಬಯಲು.

ಇಂತಹ ಚೌಕಟ್ಟುಗಳನ್ನು ತಯಾರಿಸಿ, ಕೋಳಿಗಳು ಈ ಆಹಾರಕ್ಕಾಗಿ ಸ್ಪರ್ಧಿಸುವಾಗ ವ್ಯಾಯಾಮವಾಗುವಂತೆ ಕೊಂಚ ಎತ್ತರದಲ್ಲಿ ನೇತುಹಾಕಬೇಕು.

ಬಯಲು: ಕೂಡಿಹಾಕಿರುವ ಕೋಳಿಗಳಿಗೆ ಸಾಧ್ಯವಾದಷ್ಟೂ ಬಯಲು ಬೇಕು. ಒಂದಕ್ಕಿಂತ ಹೆಚ್ಚು ತಳಿಗಳನ್ನು ಸಾಕಿದ್ದರೆ ಒಂದರೊಡನೊಂದು ಬೆರೆಯುವುದನ್ನು ತಪ್ಪಿಸಲು ಒಂದೊಂದು ತಳಿಯನ್ನು ಒಂದೊಂದು ಬೇಲಿಯೊಳಗೆ ಕೂಡುವುದು ಅವಶ್ಯಕ. ವಯಸ್ಸಿನ ಕೋಳಿಗೆ 1½ಯಿಂದ 2 ಅಂಗುಲದ ತಂತಿ ಬಲೆ ಮತ್ತು ಮರಿಗಳಿಗೆ ½ ಅಂಗುಲದ ತಂತಿಬಲೆಯ ಬೇಲಿ ಹಾಕುವುದರ ಮೂಲಕ ಕೋಳಿಗಳಿಗೆ ಸೂಕ್ತವಾದ ಮೈದಾನವನ್ನೊದಗಿಸಬಹುದು. ಆರು ಅಡಿ ಅಗಲದ ಒಂದು ತಂತಿಬಲೆ ಸುರುಳಿ ಅಥವಾ ಮಧ್ಯದಲ್ಲಿ ಕಂಬಿಯ ಸಹಾಯದಿಂದ ಸೇರಿಸಿರುವ 3 ಅಡಿ ಅಗಲದ ಎರಡು ಸುರುಳಿ ತಂತಿಬಲೆಗಳನ್ನು ಮರದ ಕಂಬಗಳ ಸಹಾಯದಿಂದ ನಿಲ್ಲಿಸಿ ಆದರ್ಶ ಬೇಲಿಯನ್ನು ಹೊಂದಬಹುದು. ಇಲಿ, ಹೆಗ್ಗಣಗಳಿಂದ ರಕ್ಷಣೆಪಡೆಯಲು ಬೇಲಿಯ ತಂತಿಬಲೆಯನ್ನು ಕಾಲುವೆಯೊಳಗೆ ನೆಲದಿಂದ ಕನಿಷ್ಠ. ಆರು ಅಂಗುಲ ಒಳಕ್ಕೆ ಸೇರಿಸುವುದು ಒಳ್ಳೆಯದು. ಮರಿಗಳನ್ನು ಬಿಡುವ ಮೈದಾನದಲ್ಲಿ ಕಾಗೆ, ಗಿಡುಗ ಮತ್ತು ಹದ್ದುಗಳು ಮರಿಗಳನ್ನು ಎತ್ತಿಕೊಂಡು ಹೋಗದಂತೆ ಮೇಲೆಯೂ ತಂತಿಬಲೆಹಾಕುವುದು ಅವಶ್ಯಕ (ಚಿತ್ರ 95). ತಂತಿಬಲೆಯಿಲ್ಲದಿರುವ ಕಡೆ ಬಯಲಿಗೆ ಸೀಳಿದ ಬೊಂಬು ಅಥವಾ 'ಸರಕಂದ'ವನ್ನು ಉಪಯೋಗಿಸುವುದು ಒಳ್ಳೆಯದು. ಇವು ಅಷ್ಟು ಬಾಳಿಕೆ ಬರುವಂತಹವಲ್ಲದಿದ್ದರೂ ಉದ್ದೇಶಸಾಧನೆಯಾಗುತ್ತದೆ.

ಪ್ರತಿ ಗುಂಪಿನ ಕೋಳಿಗಳಿಗೆ ಎರಡು ಬಯಲನ್ನೊದಗಿಸುವ ವಿಚಾರ ಬಹಳ ಅನುಕೂಲತೆಗಳನ್ನು ಹೊಂದಿದೆ. ಕೋಳಿಗಳನ್ನು ಕೆಲವು ತಿಂಗಳು ಒಂದು ಮೈದಾನದಲ್ಲಿ ಬಿಟ್ಟು ನಂತರ ಮತ್ತೊಂದಕ್ಕೆ ಬದಲಾಯಿಸಬೇಕು. ಇವು ಮೈದಾನಕ್ಕೆ 'ವಿಶ್ರಾಂತಿ'ಯನ್ನೊದಗಿಸುತ್ತದೆ. ಹವಾಮಾನ ಮತ್ತು ಬಿಸಿಲು ಇದನ್ನು ಸ್ವಚ್ಛಮಾಡಲು ಬಿಡುತ್ತದೆ, ಮತ್ತು ಪುನಃ ಹುಲ್ಲು ಬೆಳೆಯಲು ಅವಕಾಶವೊದಗಿಸುತ್ತದೆ. ನೈಜವಾಗಿ ಈ ಪದ್ಧತಿ ಕೇವಲ ಒಂದು ಪರಿವರ್ತನೆ ಮಾತ್ರ. ಕೋಳಿಗಳನ್ನು ಬೇರೆ ಬಯಲಿಗೆ ಬದಲಾಯಿಸಿದ್ದರಿಂದ ಉಪಯೋಗದಲ್ಲಿಲ್ಲದ ಬಯಲನ್ನು ಉತ್ತು ಗೊಬ್ಬರವಿಲ್ಲದೆ ಯಾವುದಾದರೊಂದು ಧಾನ್ಯದ ಬೆಳೆ ಬೆಳೆಯಬಹುದು. ಬೆಳೆ ಪಕ್ವವಾದ ನಂತರ ಕಟಾವು ಮಾಡಿ ಕೋಳಿಗಳನ್ನು ಬಿಡಬೇಕು. ಮತ್ತೊಂದು ಬಯಲನ್ನೂ ಇದೇ ರೀತಿ ಉಪಯೋಗಿಸಬಹುದು. ಈ ಪದ್ಧತಿ ಹೆಚ್ಚಿನ ಆದಾಯಕ್ಕೆ ಮಾರ್ಗ ಮಾಡಿಕೊಡುವುದಲ್ಲದೆ ಅದೇ ಸಮಯದಲ್ಲಿ ಕೋಳಿಗಳಿಗೆ ಉತ್ತಮವಾದ ಆರೋಗ್ಯವನ್ನೊದಗಿಸುತ್ತದೆ.


ಮೊಟ್ಟೆಯಿಡುವ ಬ್ಯಾಟರಿಗಳು: ಮೊಟ್ಟೆಯಿಡುವ ಹೇಂಟೆಗಳಿಗೆ ಬ್ಯಾಟರಿಗಳನ್ನು ಉಪಯೋಗಿಸುವ ವ್ಯವಸ್ಥೆ ಇತ್ತೀಚಿನದು ಮತ್ತು ಇದು ಬ್ಯಾಟರಿ ರಕ್ಷಕಗಳ ಅಭಿವೃದ್ಧಿಗಳಲ್ಲಿ ಒಂದು. ಪ್ರತಿ ಹೇಂಟೆಯನ್ನೂ 12 ರಿಂದ 16 ಅಂಗುಲ ಅಗಲ, 18 ಅಂಗುಲ ಉದ್ದ ಮತ್ತು 18 ಅಂಗುಲ ಎತ್ತರವಿರುವ ಲೋಹದ ಪಂಜರ ಅಥವಾ ವಿಭಾಗಗಳಲ್ಲಿಡಬೇಕು. ಮೊಟ್ಟೆಯಿಟ್ಟಕೂಡಲೇ ಮೊಟ್ಟೆ ಉರುಳಿ ಕೋಳಿಗೆ ಸಿಕ್ಕದಂತೆ ಆಹಾರದ ತೊಟ್ಟಿಯ ಕೆಳಕ್ಕೆ ಹೋಗುವಂತೆ ತಂತಿಯ ನೆಲಗಟ್ಟು ಇಳಿಜಾರಾಗಿರುತ್ತದೆ.



ಚಿತ್ರ 96: ಮೊಟ್ಟೆಯಿಡುವ ಬ್ಯಾಟರಿ(ಪೂರ್ಣಲೋಹ)

ಪಂಜರಗಳು ಒಂದಕ್ಕೊಂದು ಹೊಂದಿಕೊಂಡಿರುತ್ತವೆ ಹಾಗೂ ಇವುಗಳನ್ನು ಒಂದೇ ಸಾಲಿನಲ್ಲಿ (ಒಂದೇ ಅಂತಸ್ತು) (ಚಿತ್ರ 96) ಅಥವಾ ಎಷ್ಟಾದರೂ ಹಂತಿಗಳನ್ನು ಒಳಗೊಳ್ಳುವಂತೆ ಅಂತಸ್ತುಗಳಲ್ಲಾಗಲೀ (ಚಿತ್ರ 97) ಕಟ್ಟಬಹುದು.

ಸದ್ಯಕ್ಕೆ ಈ ಪದ್ಧತಿ ಭಾರತದಲ್ಲಿ ಪ್ರಚಲಿತವಿಲ್ಲ. ಆದಾಗ್ಯೂ ಸಾಮಾನ್ಯವಾದ ರೀತಿಯ ಸಾಕಾಣಿಕೆಗೆ ಸಾಲದಷ್ಟು ಜಾಗ ಅಥವಾ ಜಾಗವೇ ಸಿಗದ ದೊಡ್ಡ ಪಟ್ಟಣಗಳೊಳಗೆ ಹಾಗೂ ಅವುಗಳ ಹತ್ತಿರದ ಪ್ರದೇಶಕ್ಕೆ ಇದು ಬಹಳ ಸೂಕ್ತವಾದುದು. ಇಂತಹ ಜಾಗಗಳಲ್ಲಿ ಈ ಉದ್ದೇಶಕ್ಕಾಗಿ ಯಾವುದಾದರೊಂದು ಖಾಲಿ ಕಟ್ಟಡವನ್ನು ಉಪಯೋಗಿಸಿಕೊಳ್ಳಬಹುದು. ಸಾಮಾನ್ಯ ಪದ್ಧತಿಗಳ ಕೋಳಿಸಾಕಾಣಿಕೆಗೆ ಸೂಕ್ತವಲ್ಲದ ಜವಗು ಪ್ರದೇಶವನ್ನೂ ಈ ಪದ್ಧತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ವರ್ಷದ ಬಹುಭಾಗ ಈ ರೀತಿಯ ತೇವಾಂಶ ಸ್ಥಿತಿಯಿರುವ ಮುಂಬೈ ಮತ್ತು ಕಲ್ಕತ್ತೆಗಳಲ್ಲೂ ಕೋಳಿಗಳನ್ನು ಬ್ಯಾಟರಿ ಪಂಜರಗಳಲ್ಲಿಡುವುದರಿಂದ ಕೋಳಿಸಾಕಾಣಿಕೆಯನ್ನು ತೀವ್ರವಾಗಿ ಕೈಗೊಳ್ಳಬಹುದು.



ಚಿತ್ರ 97: ಮೂರು ಅಂತಸ್ತುಗಳಲ್ಲಿ 21 ಕೋಳಿಗಳಿಗೆ ಮೊಟ್ಟೆಯಿಡುವ ಬ್ಯಾಟರಿ.

ಹೇಂಟೆಗಳನ್ನು ಮೊಟ್ಟೆಯಿಡುವ ಪಂಜರದಲ್ಲಿಡುವ ಪದ್ಧತಿಯ ಅನುಕೂಲತೆಗಳೆಂದರೆ:

1. ಸರಿಯಾದ ಹಾಗೂ ಸಕಾಲಿಕ ಬೇರ್ಪಡಿಸುವಿಕೆಯ ಸಾಧ್ಯತೆ.

2. ಬೇರ್ಪಡಿಸುವ ಕೋಳಿಗಳು ತೂಕ ಕಳೆದುಕೊಳ್ಳುವ ಮೊದಲು ಅವುಗಳನ್ನು ಗುರುತಿಸುವುದು ಸಾಧ್ಯವಾಗುವುದರಿಂದ ಅವುಗಳನ್ನು ಉತ್ತಮ ಸ್ಥಿತಿಯಲ್ಲಿ ಮಾರಾಟ ಮಾಡುವ ಸಾಧ್ಯತೆ.

3. ಪ್ರತಿ ಹೇಂಟೆಗೂ ಎಲ್ಲ ಕಾಲದಲ್ಲೂ ಆಹಾರ ಹಾಗೂ ನೀರು ದೊರೆಯುವುದರಿಂದ ಸ್ವಲ್ಪಮಟ್ಟಿಗೆ ಹೆಚ್ಚಿನ ಮೊಟ್ಟೆ ಉತ್ಪಾದನೆ.

4. ಬಹುಶಃ ಹೇಂಟೆ ಕಡಮೆ ಚೈತನ್ಯವನ್ನು ದಂಡಮಾಡಿ ಹೆಚ್ಚು ಉತ್ಪಾದಿಸುವುದರಿಂದ, ಕಡಮೆ ಆಹಾರದ ವೆಚ್ಚದಿಂದ ಮೊಟ್ಟೆ ಉತ್ಪಾದನೆ.

5. ಸ್ವಜಾತಿ ಭಕ್ಷಣೆಯ ನಿರ್ಮೂಲನ.

6. ಬ್ಯಾಟರಿಗಳಲ್ಲಿ ಮೊಟ್ಟೆಯಿಡುವ ಹೇಂಟೆಗಳ ಜಾಗದ ಅವಶ್ಯಕತೆ $\frac{1}{3}$ ಭಾಗದಷ್ಟು ಕಡಮೆಯಾಗುವಿಕೆ.

7. ಮೊಟ್ಟೆಯಿಡುವ ಬ್ಯಾಟರಿಗಳಲ್ಲಿ, ಲೆಗ್‌ಹಾರ್ನ್ ಮತ್ತು ದೊಡ್ಡ ತಳಿಗಳೆರಡರ ಅನುಕೂಲಕರ ವರ್ತನೆ.

8. ಮಣ್ಣು ಮತ್ತು ವಾತಾವರಣ ಸ್ಥಿತಿಯನ್ನು ಗಣಿಸದೆ ಸಾಕಾಣಿಕೆಗೆ ತೊಡಗುವ ಸಾಧ್ಯತೆ.

9. ಬೇರ್ಪಡಿಸಿದ ಕೋಳಿಗಳನ್ನು ತೆಗೆದ ಕೂಡಲೇ ಅದರಲ್ಲಿ ಮರಿಗಳನ್ನಿಡುವುದರಿಂದ ಸಲಕರಣೆಗಳ ನಿರಂತರವಾದ ಉಪಯೋಗ; ಈ ರೀತಿ ಖಾಲಿಯಾದ ಜಾಗವನ್ನು ತುಂಬುವುದು ಬೇರೆ ಪದ್ಧತಿಗಳಲ್ಲಿ ಪ್ರಯೋಗಶೀಲವಲ್ಲ.

ಈ ಪದ್ಧತಿಯ ಅನನುಕೂಲತೆಗಳೆಂದರೆ :

1. ಕೋಳಿಗಳನ್ನು ನೆಲದ ಮೇಲೆ ಸಾಕಿದಾಗ ಬೇಕಾಗುವ ಮೇವುಣಿಕೆ, ನೀರುಣಿಕೆ, ಹಕ್ಕೆ, ಕೂಡುಗಂಬಿ ಮೊದಲಾದವುಗಳನ್ನು ಕೊಂಡುಕೊಳ್ಳುವ ಅವಶ್ಯಕತೆಯಿಲ್ಲದಿದ್ದರೂ ಸಹ, ಪಂಜರಗಳಿಗಾಗಿ ಪ್ರತಿ ಕೋಳಿಗೆ ಬೇಕಾಗುವ ಹೆಚ್ಚಿನ ಬಂಡವಾಳ.

2. ಬ್ಯಾಟರಿಯಲ್ಲಿರುವ ಹೇಂಟೆ 'D' ಅನ್ನಾಂಗ ಮತ್ತು ಹೆಚ್ಚಿನ ನಾರಿನ ಅವಶ್ಯಕತೆಯೊಂದನ್ನು ಬಿಟ್ಟರೆ ಅವುಗಳ ಆಹಾರಾಂಶದ ಅವಶ್ಯಕತೆ ನೆಲದ ಮೇಲಿನ ಗುಂಪಿನಷ್ಟೇ ಆದರೂ ಸಹ ಬ್ಯಾಟರಿಯಲ್ಲಿನ ಹೇಂಟೆಗಳನ್ನು ಮೇಯಿಸಲು ಹೆಚ್ಚಿನ ಅನುಭವ ಮತ್ತು ಗಮನ ಅವಶ್ಯಕ.

3. ಕೆಲಸ ಉಳಿತಾಯ ಮಾಡುವ ಸಾಮಗ್ರಿಗಳಿಂದ ಸುಸಜ್ಜಿತವಾದ ನೆಲದ ಮೇಲಿನ ಮನೆಗಿಂತ ಬ್ಯಾಟರಿಯಲ್ಲಿನ ಕೋಳಿಗಳನ್ನು ಮೇಯಿಸಲು ಮತ್ತು ನೀರುಣಿಸಲು ಬಹಳ ಹೆಚ್ಚಿಗೆ ಶ್ರಮವಾಗುತ್ತದೆ.

4. ಬ್ಯಾಟರಿನಿರ್ವಾಹಕನು ಜಯಶೀಲನಾಗಲು, ನೆಲದ ಮೇಲೆ ಸಾಕುವ ಸ್ಥಿತಿಯಲ್ಲಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕಿಂತ ಹೆಚ್ಚಿಗೆ ಜೋಪಾಸನೆ ಮಾಡುವನಾಗಿ ಮತ್ತು ವ್ಯಾಪಾರಿಯಾಗಿ ಹೆಚ್ಚಿಗೆ ಎಚ್ಚರವಾಗಿರಬೇಕು.

5. ವರ್ಷದಲ್ಲಿ ಕನಿಷ್ಠ. 4 ರಿಂದ 6 ಸಾರಿ ಮರಿಹೇಂಟೆಗಳನ್ನು ಬದಲಾಯಿಸುವುದು ಮಿತವ್ಯಯಕಾರಿ ನಿರ್ವಹಣೆಗೆ ಅವಶ್ಯಕ.

ಅಧ್ಯಾಯ 10

ಮೇಯಿಸುವಿಕೆಯ ಮೂಲತತ್ವ ಮತ್ತು ಆಚರಣೆಗಳು

ಕೋಳಿ ಗುಂಪನ್ನು ಅಭಿವೃದ್ಧಿಪಡಿಸುವ ಉದ್ದೇಶವಿರುವ ಯಾವುದೇ ವಿಧಾನದಲ್ಲಾಗಲಿ ಸಮತೋಲವಾಗಿ ಮೇಯಿಸಲು ಬೇಕಾಗುವ ಆಹಾರಾಂಶಗಳ ಪ್ರಶ್ನೆ ಹೆಚ್ಚಿನ ಮುಂದಾಲೋಚನೆಯಿಂದ ಕೂಡಿರಬೇಕು. ಬೆಳವಣಿಗೆ ಹಾಗೂ ಮೊಟ್ಟೆ ಉತ್ಪಾದನೆಗಳೆರಡೂ ಸೇವಿಸಿದ ಆಹಾರದ ಗುಣ ಮತ್ತು ಗಾತ್ರದಿಂದ ಪ್ರಭಾವಿತವಾಗುತ್ತವೆ. ಕೀಳ್ಮಟ್ಟದ ಆಹಾರ ಸುಲಭವಾಗಿ ಜೀರ್ಣವಾಗಿ ಉತ್ತಮವಾದ ಉಪಯೋಗಕ್ಕೆ ಬರದಿರುವುದರ ಜೊತೆಗೆ ಅನಾರೋಗ್ಯವನ್ನುಂಟುಮಾಡುತ್ತದೆ, ಚೈತನ್ಯವನ್ನು ಕುಗ್ಗಿಸುತ್ತದೆ, ಬೆಳವಣಿಗೆಯನ್ನು ನಿಧಾನಗೊಳಿಸುತ್ತದೆ ಹಾಗೂ ಮೊಟ್ಟೆ ಉತ್ಪಾದನೆಯನ್ನು ಕಡಮೆಮಾಡುತ್ತದೆ. ವರ್ಷಕ್ಕೆ ಸರಾಸರಿ ಸುಮಾರು 50 ಮೊಟ್ಟೆಗಳನ್ನು ಉತ್ಪಾದಿಸುವ ಸಾಮರ್ಥ್ಯವಿರುವ ದೇಶಿ ಅಥವಾ ಹಳ್ಳಿಯ ಸಾಮಾನ್ಯ ಕೋಳಿ ಸರಿಯಾಗಿ ಮೇಯಿಸಿದಾಗ ಅದರ ಎರಡರಷ್ಟು ಮೊಟ್ಟೆಗಳನ್ನು ಉತ್ಪಾದಿಸುವುದು ಕಂಡುಬಂದಿದೆ. ನಮ್ಮ ದೇಶದಲ್ಲಿ ಉತ್ತಮಪಡಿಸಿದ ಕೋಳಿಗಳು ಕೇವಲ ಶೇಕಡಾ 1.4ರಷ್ಟಿದ್ದು ಹೆಚ್ಚಿನ ಕೋಳಿಸಂಖ್ಯೆ ವಿವಿಧರೀತಿಯ ದೇಶಿಕೋಳಿಗಳಾದುದರಿಂದ ಮೊಟ್ಟೆ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಒಳ್ಳೆಯ ಆಹಾರದ ಅವಶ್ಯಕತೆಯ ಈ ಅಂಶಕ್ಕೆ ವಿಶೇಷ ಗಮನ ಅವಶ್ಯಕ.

ಕೋಳಿಗಳ ಜೀರ್ಣಾಂಗವ್ಯೂಹ ತನ್ನದೇ ಆದ ವಿಶಿಷ್ಟ ಅವಶ್ಯಕತೆಗಳನ್ನು ಹೊಂದಿದೆ, ಕೋಳಿಗಳು ನಿರಂತರವಾಗಿ ಹಸಿದಿರುವಂತೆಯೇ ಕಾಣುತ್ತವೆ ಮತ್ತು ಯಾವಾಗಲೂ ತಿನಿಸಿಗಾಗಿ ಸುತ್ತಮುತ್ತ ನೋಡುತ್ತಿರುತ್ತವೆ. ಆದುದರಿಂದ ಅವುಗಳನ್ನು ಸಮರ್ಪಕವಾಗಿ ಮೇಯಿಸಬೇಕು. ಸರಿಯಾದ ಆಹಾರದ ಮಿಶ್ರಣವನ್ನು ತಯಾರಿಸುವಲ್ಲಿ ಆಹಾರವಿಜ್ಞಾನ ಸಹಾಯಮಾಡಿದೆ; ಆದರೆ. ಇವುಗಳನ್ನು ಕೋಳಿಗಳಿಗೆ ಸರಿಯಾದ ರೀತಿಯಲ್ಲಿ ಕೊಡುವುದು ತನ್ನದೇ ಆದ ಒಂದು ಕಲೆ.

ಕೋಳಿಆಹಾರದ ಬೆಲೆ, ಕೋಳಿಗಳನ್ನು ಸಾಕಿರುವ ಉದ್ದೇಶದ ಅವಶ್ಯಕತೆಗಳಿಗೆ ಹೊಂದುವಂತೆ ಮೇವಿನಲ್ಲಿನ ವಿವಿಧ ಆಹಾರಾಂಶಗಳ ಪರಸ್ಪರ ಪ್ರಮಾಣ ಮತ್ತು ಅದರ ರೀತಿಯನ್ನವಲಂಬಿಸುತ್ತದೆ. ಶೀಘ್ರ ಬೆಳವಣಿಗೆಯನ್ನುಂಟುಮಾಡುವ ಉದ್ದೇಶದಿಂದ ಕೊಡುವ ಆಹಾರ, ಮೇಜುಕೂಟಗಳಿಗಾಗಿ ಕೋಳಿಗಳನ್ನು ಕೊಬ್ಬಿಸಲು ಕೊಡುವ ಆಹಾರದಿಂದ ಕೆಲವು ಅಂಶಗಳಲ್ಲಿ ಭಿನ್ನವಾಗಿರುತ್ತದೆ. ಇದೇರೀತಿ ಮೊಟ್ಟೆ ಉತ್ಪಾದನೆಗೆ ಬೇಕಾಗುವ ಆಹಾರ ಬೇರೆ.

ಒಳ್ಳೆಯ ಮೇವಿನ ತಯಾರಿಕೆಯ ಸಮಸ್ಯೆ ಸೂಕ್ಷ್ಮ ಅಭ್ಯಾಸದ ಅವಶ್ಯಕತೆಯಿರುವ ಹಲವು ಅಂಶಗಳನ್ನು ಒಳಗೊಂಡಿದೆ. ಅತ್ಯುತ್ತಮವಾದ ಮೇಯಿಸುವ ಪದ್ಧತಿ ಯಾವುದೂ ಇಲ್ಲ. ಕೆಲವು ಆಹಾರಾಂಶದ ಅವಶ್ಯಕತೆಗಳನ್ನು ಪೂರೈಸಲೇಬೇಕು, ಇದಕ್ಕಾಗಿ ಬೇರೆಬೇರೆ ಮೇವುಗಳ ಪರಸ್ಪರ ಬೆಲೆ, ಅವುಗಳ ಆಹಾರ ಬೆಲೆ, ಸ್ಥಳೀಯ ಲಭ್ಯತೆ ಮೊದಲಾದ ಹಲವು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಆಹಾರಾಂಶಗಳು ಮತ್ತು ಅವುಗಳ ಕ್ರಿಯೆ

ಕೋಳಿಆಹಾರ ಹೊಂದಿರಬೇಕಾದ ಅವಶ್ಯಕ ಆಹಾರಾಂಶಗಳೆಂದರೆ: ನೀರು, ಶರ್ಕರಪಿಷ್ಟಗಳು, ಸಸಾರಜನಕ ಪದಾರ್ಥಗಳು, ಖನಿಜಗಳು ಮತ್ತು ಅನ್ನಾಂಗಗಳು. ಈ ಘಟಕಗಳು, ಕೋಳಿಯ ದೇಹ ಮತ್ತು ಮೊಟ್ಟೆಯಲ್ಲಿ ಕಾಣುವಂತಹುವೆ ಆಗಿವೆ (ಚಿತ್ರ 98). ಪ್ರತಿಯೊಂದೂ ನಿರ್ದಿಷ್ಟ ಉದ್ದೇಶವನ್ನು ಸಾಧಿಸುತ್ತದೆ. 14 ಮತ್ತು 15ನೆಯ ಕೋಷ್ಟಕ ಆಹಾರಾಂಶಗಳ ಕೆಲಸ ಮತ್ತು ಅವುಗಳ ನ್ಯೂನತೆ ಉಂಟುಮಾಡುವ ಲಕ್ಷಣಗಳನ್ನು ವಿವರಿಸುತ್ತವೆ.

ನೀರು: ಆರೋಗ್ಯ ರಕ್ಷಣೆ, ಬೆಳವಣಿಗೆಯನ್ನು ಹೆಚ್ಚಿಸುವುದು, ಮಾಂಸಗೂಡುವಿಕೆ ಹಾಗೂ ಮೊಟ್ಟೆ ಉತ್ಪಾದನೆಯಲ್ಲಿ ನೀರು ಬಹುಮುಖ್ಯವಾದ ಪಾತ್ರವಹಿಸುತ್ತದೆ. ಆಹಾರಾಂಶಗಳ ಜೀರ್ಣ ಮತ್ತು ರಕ್ತಗತವಾಗುವಿಕೆ, ಶರೀರದ ಶಾಖನಿಯಂತ್ರಣ, ನಿಸ್ಸಾರ ಪದಾರ್ಥಗಳ ವಿಸರ್ಜನೆ ಮೊದಲಾದವುಗಳು ನೀರಿನ ಬಹುಮುಖ್ಯ ಕ್ರಿಯೆಗಳಲ್ಲಿ ಕೆಲವು. ಕೋಳಿಗಳು ನೀರಿಲ್ಲದಂತೆ ಬದುಕಿರುವುದಕ್ಕಿಂತ ಹೆಚ್ಚು ದಿನ ಆಹಾರವಿಲ್ಲದೆ ಇರಬಲ್ಲವು. ಆದುದರಿಂದ ಕೋಳಿಗಳಿಗೆ ಸ್ವಚ್ಛವಾದ ಕುಡಿಯುವ ನೀರು ನಿರಂತರವಾಗಿ ದೊರೆಯುವಂತಿರುವುದು ಮುಖ್ಯವಾದುದು.

ಕೋಷ್ಟಕ 14

ಮರಿಗಳಿಗೆ ಬೇಕಾಗುವ ಆಹಾರಾಂಶಗಳು (ಜೀವಸತ್ವಗಳನ್ನುಳಿದು)

ಆಹಾರಾಂಶಗಳು	ಮುಖ್ಯ ಕ್ರಿಯೆಗಳು	ಕೊರತೆ ಚಿಹ್ನೆಗಳು
ನೀರು	ಆಹಾರವನ್ನು ಮೆದುವಾಗಿಸುತ್ತದೆ. ಆಹಾರದ ಪಚನ ಹಾಗೂ ಹೀರಿಕೆಯಲ್ಲಿ ಸಹಾಯಮಾಡುತ್ತದೆ. ಶರೀರದ ಶಾಖ ನಿಯಂತ್ರಿಸಲು ಸಹಾಯಮಾಡುತ್ತದೆ. ನಿರುಪ	ಬೆಳವಣಿಗೆಯನ್ನು ಕುಗ್ಗಿಸುತ್ತದೆ. ಮೊಟ್ಟೆ ಉತ್ಪಾದನೆ ಕುಗ್ಗಿಸುತ್ತದೆ. ನೀರನ್ನು ಗಣನೀಯ ಕಾಲ ತಡೆಹಿಡಿದರೆ ಶರೀರದ ತೂಕದಲ್ಲಿ ನಷ್ಟ ಹಾಗೂ ಸಾವು ಸಂಭವಿಸುತ್ತದೆ.

ಆಹಾರಾಂಶಗಳು	ಮುಖ್ಯ ಕ್ರಿಯೆಗಳು	ಕೊರತೆ ಚಿಹ್ನೆಗಳು
	ಯೋಗಿ ಪದಾರ್ಥಗಳನ್ನು ವಿಸರ್ಜಿಸಲು ಸಹಕರಿಸುತ್ತದೆ.	
ಶರ್ಕರಪಿಷ್ಟಗಳು	ಶರೀರದ ಶಾಖರಕ್ಷಣೆಗೆ ಮತ್ತು ಇತರ ಎಲ್ಲ ಕ್ರಿಯೆಗಳಿಗೆ ಹಾಗೂ ಬೆಳವಣಿಗೆ ಮತ್ತು ಮೊಟ್ಟೆ ಉತ್ಪಾದನೆಗೆ ಬೇಕಾಗುವ ಚೇತನದ ಮೂಲ.	ಕುಗ್ಗಿದ ಬೆಳವಣಿಗೆ. ಮೊಟ್ಟೆ ಉತ್ಪಾದನೆಯಲ್ಲಿ ಇಳಿತ. ಶರೀರ ತೂಕದಲ್ಲಿ ನಷ್ಟ.
ಕೊಬ್ಬುಗಳು	ಸ್ವಲ್ಪಮಟ್ಟಿಗೆ ಚೇತನದ ಮೂಲ. ಕೆಲವು ಸಾರಿ ಶರೀರದಲ್ಲಿ ಶೇಖರಿಸಲ್ಪಡುತ್ತದೆ.	ಕೊಬ್ಬಿನ ಕೊರತೆ ಚಿಹ್ನೆಗಳೇನೂ ಇಲ್ಲ.
ಸಸಾರಜನಕಗಳು	ಬೆಳವಣಿಗೆ ಶರೀರದ ಊತಕಗಳ ದುರಸ್ತಿ. ಮೊಟ್ಟೆ ಉತ್ಪಾದನೆ.	ಕುಗ್ಗಿದ ಬೆಳವಣಿಗೆ. ಮೊಟ್ಟೆ ಉತ್ಪಾದನೆಯಲ್ಲಿ ಇಳಿತ. ಶರೀರತೂಕದ ನಷ್ಟ.
ಸುಣ್ಣ	ಮೂಳೆ ಹಾಗೂ ಮೊಟ್ಟೆ ಚಿಪ್ಪಿನ ತಯಾರಿಕೆ. ಹೃದಯದ ಸಮುಗತಿ. ಸ್ನಾಯು ಬಿಗುಪು. ರಕ್ತ ಹೆಪ್ಪುಗಟ್ಟುವಿಕೆ.	ಕುಗ್ಗಿದ ಬೆಳವಣಿಗೆ. ಮೆತು ಮೂಳೆಗಳು. ಕುಗ್ಗಿದ ಮೊಟ್ಟೆ ಉತ್ಪಾದನೆ ಹಾಗೂ ಮರಿಯಾಗುವಿಕೆ. ತೆಳು ಚಿಪ್ಪು.
ರಂಜಕ	ಮೂಳೆ ಬೆಳವಣಿಗೆ. ಮೊಟ್ಟೆ ಉತ್ಪಾದನೆ. ಶರ್ಕರಪಿಷ್ಟಗಳ ಉಪಯೋಗ.	ಕುಗ್ಗಿದ ಬೆಳವಣಿಗೆ. ಮೆತುಮೂಳೆ. ಕುಗ್ಗಿದ ಮೊಟ್ಟೆ ಉತ್ಪಾದನೆ.
ಮ್ಯಾಂಗನೀಸ್	ರಂಜಕದ ಉಪಯೋಗ.	ಜಾರಿದ ಕಂಡರಗಳು ಅಥವಾ ಪೆರೋಸಿಸ್. ಕುಗ್ಗಿದ ಮರಿಯಾಗುವಿಕೆ ಹಾಗೂ ವಿರೂಪಗೊಂಡ ಭ್ರೂಣ.

ಕೋಳಿ ಮರಿಗಳಿಗೆ ಬೇಕಾಗುವ ಇತರ ಖನಿಜಗಳೆಂದರೆ ಕಬ್ಬಿಣ. ತಾಮ್ರ. ಪೊಟ್ಯಾಸಿಯಂ, ಸೋಡಿಯಂ, ಕ್ಲೋರೀನ್, ಐಯೋಡಿನ್ ಮತ್ತು ಗಂಧಕ. ಸೋಡಿಯಂ ಹಾಗೂ ಕ್ಲೋರೀನ್‌ಗಳನ್ನುಳಿದು ಉಳಿದೆಲ್ಲವೂ ಸಾಮಾನ್ಯ ಮೇವಿನಲ್ಲಿ ಸಾಕಷ್ಟು ಪ್ರಮಾಣದಲ್ಲಿರುತ್ತವೆ. ಸೋಡಿಯಂ ಹಾಗೂ ಕ್ಲೋರೀನ್‌ಗಳನ್ನು ಆಹಾರಕ್ಕೆ ಉಪ್ಪು ಸೇರಿಸುವುದರಿಂದ ಪೂರೈಸಬಹುದು.

ಕೋಷ್ಟಕ 15

ಕೋಳಿಮರಿಗಳಿಗೆ ಅವಶ್ಯಕವಾದ ಜೀವಸತ್ವಗಳು

ಜೀವಸತ್ವಗಳು	ಮುಖ್ಯ ಕ್ರಿಯೆಗಳು	ನ್ಯೂನತೆ ಚಿಹ್ನೆಗಳು
A	ಕಣ್ಣುಗಳು, ನರ ಊತಕ ಹಾಗೂ ಉಸಿರಾಟದ ಅಂಗಗಳ ಒಳಪದರದ ಆರೋಗ್ಯವನ್ನು ರಕ್ಷಿಸುತ್ತದೆ. ಬೆಳವಣಿಗೆ ಉತ್ತೇಜನ ಕೊಡುತ್ತದೆ.	ಕುಗ್ಗಿದ ಬೆಳವಣಿಗೆ ಆಹಾರಾಂಶದ ರೂಪ. ಬಿಳಿಚಿಕೊಂಡ ಕೊಕ್ಕು ಹಾಗೂ ಕಾಲುಗಳು. ಮೂತ್ರಪಿಂಡ ಹಾಗೂ ನರಗಳ ಅನುವಳಿಕೆ ತಟ್ಟಾಡುವ ನಡಿಗೆ.
B_1 (ಥಯಮಿನ್)	ಹಸಿವನ್ನು ರಕ್ಷಿಸುತ್ತದೆ. ನರಗಳ ಆರೋಗ್ಯವನ್ನು ರಕ್ಷಿಸುತ್ತದೆ. ಪಾಲಿನ್ಯೂರೈಟಿಸ್ ತಡೆಗಟ್ಟುತ್ತದೆ.	ಕುಗ್ಗಿದ ಬೆಳವಣಿಗೆ ಮೈಗೂಡುವಿಕೆ. ತಲೆಯ ಒಳಸೆಳೆತ.
B_6	ಹಸಿವನ್ನು ಉಳಿಸುತ್ತದೆ. ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಸೆಳೆತವನ್ನು ತಡೆಗಟ್ಟುತ್ತದೆ.	ಕುಗ್ಗಿದ ಬೆಳವಣಿಗೆ, ಸೆಳೆತ.
D (ಎಲುಬುರುಟಿನ ವಿರೋಧಿ)	ಸುಣ್ಣ ಹಾಗೂ ರಂಜಕವನ್ನು ಉಪಯೋಗಿಸಿಕೊಳ್ಳುತ್ತದೆ. ಮೂಳೆ ಹಾಗೂ ಮೊಟ್ಟೆ ಚಿಪ್ಪನ್ನು ತಯಾರಿಸುತ್ತದೆ.	ಕುಗ್ಗಿದ ಬೆಳವಣಿಗೆ. ಎಲುಮುರುಟು. ಮೆದುಚಿಪ್ಪಿನ ಮೊಟ್ಟೆಗಳು. ಕುಗ್ಗಿದ ಮೊಟ್ಟೆ ಉತ್ಪಾದನೆ ಹಾಗೂ ಮರಿಯಾಗುವಿಕೆ.
E (ಬಂಜೆತನ ವಿರೋಧಿ)	ಮೆದುಳಿನ ರಚನೆಗಳ ಸಹಜತೆಯನ್ನು ಉಳಿಸುತ್ತದೆ ಹಾಗೂ ಜನನಾಂಗಗಳ ಆರೋಗ್ಯವನ್ನು ರಕ್ಷಿಸುತ್ತದೆ.	'ಹುಚ್ಚುಮರಿ' ರೋಗ (ಆಹಾರಾಂಶದ ಎನ್‌ಸೆಫಲೋಮಲೇಸಿಯ). ಗಂಡುಗಳಲ್ಲಿ ಫಲೀಕರಣ ಶಕ್ತಿನಷ್ಟ, ಕುಗ್ಗಿದ ಮರಿಯಾಗುವಿಕೆ.
H (ಬಯೋಟಿನ್)	ಬೆಳವಣಿಗೆಯನ್ನು ಉತ್ತೇಜಿಸುತ್ತದೆ.	ಪಾದಗಳಲ್ಲಿ ಹಕ್ಕಳು ಕಟ್ಟುತ್ತದೆ.
K	ರಕ್ತ ಸಾಮಾನ್ಯವಾಗಿ ಹೆಪ್ಪುಗಟ್ಟುವಂತೆ ಮಾಡುತ್ತದೆ.	ರಕ್ತಸ್ರಾವಗಳು.
ರೈಬೊಫ್ಲೇವಿನ್	ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಮರಿಯಾಗುವಿಕೆಯನ್ನು ಹೆಚ್ಚಿಸುತ್ತದೆ. ಸುತ್ತಂಚಿನ ನರಗಳ ಆರೋಗ್ಯವನ್ನು ರಕ್ಷಿಸುತ್ತದೆ.	ಕುಗ್ಗಿದ ಬೆಳವಣಿಗೆ. ಕುಗ್ಗಿದ ಮರಿಯಾಗುವಿಕೆ. ಬೆರಳುಗಳು ಸುರುಳಿ ಸುತ್ತುವ ಲಕ್ಷ.

ಜೀವಸತ್ವಗಳು	ಮುಖ್ಯ ಕ್ರಿಯೆಗಳು	ನ್ಯೂನತೆ ಚಿನ್ನೆಗಳು
ಪಾಂಟೋಥೆನಿಕ್ ಆಮ್ಲ (ಚರ್ಮ ಬೇನೆ ನಿರೋಧಿ)	ಚರ್ಮವನ್ನು ಆರೋಗ್ಯವಾಗಿರಿಸುತ್ತದೆ.	ಕಟವಾಯಿ ಹಾಗೂ ಪಾದಗಳ ಮೇಲೆ ಹಕ್ಕಳು ಕಟ್ಟುತ್ತದೆ.
ಕಸು ಜಠರಸವತ ನಿರೋಧಿ ಅಂಶ	ಕಸು ಜಠರದ ಒಳಪದರದ ಆರೋಗ್ಯವನ್ನು ರಕ್ಷಿಸುತ್ತದೆ.	ಕಸು ಜಠರದ ಒಳಪದರದ ಮೇಲೆ ವ್ರಣಗಳಾಗುತ್ತವೆ.
ಕೋಲಿನ್	ಮೂಳೆ ಬೆಳವಣಿಗೆ ಮತ್ತು ಮೊಟ್ಟೆ ಉತ್ಪಾದನೆಗೆ ಅವಶ್ಯಕ. ಅರೂಪತ್ವವನ್ನು ತಡೆಗಟ್ಟುತ್ತದೆ.	ಅರೂಪತ್ವ (ಪೆರೋಸಿಸ್) ಅಥವಾ ಜಾರಿದ ಮಂಡರಗಳು.


ಶರ್ಕರ ಪಿಷ್ಟಾದಿಗಳು: ಶರ್ಕರಪಿಷ್ಟಾದಿಗಳು ಕೋಳಿ ಮೇವಿನ ಅತಿದೊಡ್ಡದಾದ ಘಟಕ. ಕೋಳಿ ಆಹಾರದ ಶೇಕಡಾ 75 ರಿಂದ 80 ಭಾಗದಷ್ಟಿರುವ ಕಾಳು ಮತ್ತು ಅವುಗಳ ಉಪಪದಾರ್ಥಗಳು ಇದರ ಮುಖ್ಯ ಮೂಲ. ಇವು ಶಾಖ ಮತ್ತು ಶಕ್ತಿಯನ್ನೊದಗಿಸುತ್ತವೆ.

ಕೊಬ್ಬುಗಳು: ಶರ್ಕರಪಿಷ್ಟಗಳ 2.25ರಷ್ಟು ಶಾಖ ಉತ್ಪಾದಿಸುವ ಶಕ್ತಿಹೊಂದಿರುವ ಕೊಬ್ಬು ಹೆಚ್ಚಿನ ಶಾಖ ಮತ್ತು ಶಕ್ತಿಗಳ ಆಕರವಾಗುತ್ತದೆ. ಆದರೆ ಕೊಬ್ಬು ಸುಲಭವಾಗಿ ಉಪಯೋಗವಾಗಿರುವುದರಿಂದ ಕೋಳಿಗಳ ಕೊಬ್ಬಿನ ಅವಶ್ಯಕತೆ ಕಡಮೆ. ಶರೀರದ ಮತ್ತು ಮೊಟ್ಟೆಯ ಕೊಬ್ಬಿನ ಬಹುಭಾಗ ಆಹಾರದ ಶರ್ಕರಪಿಷ್ಟಾದಿಗಳ ಭಾಗದಿಂದ ದೊರೆಯುತ್ತದೆ.

ಸಸಾರಜನಕ ಪದಾರ್ಥಗಳು: ಸಸಾರಜನಕಗಳನ್ನು; ಊತಕ ಮತ್ತು ಶರೀರವನ್ನು ರಚಿಸುವಂತಹವುಗಳೆಂದು ಪರಿಗಣಿಸಲಾಗುವುದು ಮತ್ತು ಇವು ಕೋಳಿಗಳ ಬೆಳವಣಿಗೆ ಮತ್ತು ಮೊಟ್ಟೆ ಉತ್ಪಾದನೆಗೆ ಬಹು ಅವಶ್ಯಕವಾದವುಗಳು. ಜೀವಂತ ಕೋಳಿ ಶೇಕಡಾ 21 ಮತ್ತು ಮೊಟ್ಟೆ ಸುಮಾರು ಶೇಕಡಾ 13ರಷ್ಟು ಸಸಾರಜನಕವನ್ನು ಹೊಂದಿರುವುದು (ಚಿತ್ರ 98). ಯಾವ ಉದ್ದೇಶಕ್ಕಾಗಿ ಆಹಾರದ ಮಿಶ್ರಣವನ್ನು ಕೊಡುತ್ತಿದೆ ಎಂಬುದನ್ನವಲಂಬಿಸಿ ಅದು ಶೇಕಡಾ 15 ರಿಂದ 20 ಸಸಾರಜನಕ ಪದಾರ್ಥಗಳನ್ನು ಹೊಂದಿರುವುದು. ಅಮೆರಿಕದ ರಾಷ್ಟ್ರೀಯ ಸಂಶೋಧನಾ ಸಂಘ ಕೋಳಿಗಳ ಸಸಾರಜನಕಗಳ ಅವಶ್ಯಕತೆಯನ್ನು ಈ ರೀತಿ ವಿವರಿಸಿದೆ: ಪ್ರಾರಂಭಿಕ—ಶೇಕಡಾ 20; ಬೆಳೆಯುತ್ತಿರುವುದು—ಶೇಕಡಾ 16; ಮೊಟ್ಟೆ ಉತ್ಪಾದಕ—ಶೇಕಡಾ 15; ಸಂತಾನಾಭಿವೃದ್ಧಿಕಾರ್ಯದಲ್ಲಿ ಭಾಗವಹಿಸುತ್ತಿರುವುದು—ಶೇಕಡಾ 15.

ಕೋಳಿಯ ಆಹಾರದ ಮುಖ್ಯಭಾಗದ ಧಾನ್ಯಗಳ ಸಸಾರಜನಕ, ಬೆಳವಣಿಗೆ, ಉತ್ಪಾದನೆ ಮತ್ತು ಮೊಟ್ಟೆಗಳ ಮರಿಯಾಗುವಿಕೆಗೆ ಅವಶ್ಯಕವಾದ 'ಪ್ರಾಣಿಜನ್ಯ ಸಸಾರಜನಕ ಅಂಶ'ವನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿರುವುದಿಲ್ಲ. ಈ ಕಾರಣ ಕ್ಕಾಗಿ 'ಪ್ರಾಣಿಜನ್ಯ ಸಸಾರಜನಕ ಅಂಶ'ವನ್ನು ಹೊಂದಿರುವ ಪ್ರಾಣಿಜನ್ಯ ಆಹಾರಗಳನ್ನು ಕೋಳಿಯ ಸಾಮಾನ್ಯ ಆಹಾರದಲ್ಲಿ ಸೇರಿಸಬೇಕು.

ಮರಿಹೇಂಟೆಗಳು ಸಾಮಾನ್ಯವಾಗಿ ಪೂರ್ಣವಾಗಿ ಬೆಳೆಯುವ ಮೊದಲೇ ಮೊಟ್ಟೆ ಯಿಡಲು ಪ್ರಾರಂಭಿಸುತ್ತವೆ. ಈ ಕಾಲದಲ್ಲಿ ಅವುಗಳಿಗೆ ಬೆಳವಣಿಗೆ ಮತ್ತು ಮೊಟ್ಟೆ



ಚಿತ್ರ 98: ಕೋಳಿ ಶರೀರ ಹಾಗೂ ಮೊಟ್ಟೆಯ ಘಟಕಗಳ ಅಂದಾಜು ಸಂಯೋಜನೆ.

ಉತ್ಪಾದನೆ ಎರಡಕ್ಕೂ ಸಾಕಾಗುವಷ್ಟು ಸಸಾರಜನಕ ಪದಾರ್ಥಗಳು ಬೇಕು. ಸಸಾರ ಜನಕ ಒಳ್ಳೆಯ ಗುಣಮಟ್ಟದ್ದಾದರೆ ಮೊಟ್ಟೆ ಉತ್ಪಾದನೆಯನ್ನು ಒಳ್ಳೆಯ ಮಟ್ಟದಲ್ಲಿ ಉಳಿಸಿಕೊಂಡು ಬರಲು, ಸಸಾರಜನಕ ಆಹಾರದ ಶೇಕಡಾ 15 ರಿಂದ 16 ಭಾಗದಷ್ಟು ಬೇಕಾಗುತ್ತದೆ. ಆಹಾರದ ಒಟ್ಟು ಸಸಾರಜನಕದ ಶೇಕಡಾ 25 ಅಥವಾ ಹೆಚ್ಚಿಗೆ ಭಾಗ ಹಾಲಿನ ಉತ್ಪನ್ನಗಳು, ಮಾಂಸದ ಚೂರುಗಳು ಮತ್ತು ಮೀನಿನ ಪುಡಿಯನ್ನು ಉಪಯೋಗಿಸುವುದರಿಂದ ಈ ರೀತಿಯ ಉತ್ಪಾದನೆಯನ್ನು ಕಾಪಾಡಿಕೊಳ್ಳಬಹುದು.

ಖನಿಜಗಳು: ಕೋಳಿಯ ಜೀವಂತ ತೂಕದ ಶೇಕಡ 3 ರಿಂದ 4ರಷ್ಟು ಮತ್ತು ಮೊಟ್ಟೆಗಳ ತೂಕದ ಶೇಕಡ 10ರಷ್ಟು ಖನಿಜಾಂಶವಿರುತ್ತದೆ. ಮೂಳೆ ಮತ್ತು ಇತರೆ ಅಂಗಾಂಶಗಳ ಬೆಳವಣಿಗೆಗೆ, ಮೊಟ್ಟೆಚಿಪ್ಪಿನ ರಚನೆಗೆ ಹಾಗೂ ಇತರ ಆಹಾರಾಂಶ ಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಈ ಖನಿಜಾಂಶಗಳು ಅವಶ್ಯಕ.

ಅವಶ್ಯಕವಾದ ಖನಿಜಾಂಶಗಳೆಂದರೆ: ಕ್ಯಾಲ್ಸಿಯಂ, ರಂಜಕ, ಸೋಡಿಯಂ, ಕ್ಲೋರಿನ್, ಕಬ್ಬಿಣ, ತಾಮ್ರ, ಮ್ಯಾಂಗನೀಸ್, ಮ್ಯಾಗ್ನೀಸಿಯಂ, ಅಯೋಡಿನ್

ಮತ್ತು ಗಂಧಕ, ಬಹುಶಃ ಮ್ಯಾಂಗನೀಸ್ ಒಂದನ್ನು ಬಿಟ್ಟು ಉಳಿದೆಲ್ಲವೂ ಕೋಳಿಯ ದೈನಂದಿನ ಆಹಾರದಲ್ಲಿ ಸಾಮಾನ್ಯವಾಗಿ ಬೇಕಾದಷ್ಟಿರುತ್ತದೆ.

ಮೊಟ್ಟೆಯಿಡುತ್ತಿರುವ ಕೋಳಿಗಳಿಗೆ ಕ್ಯಾಲ್ಸಿಯಂ ಮತ್ತು ರಂಜಕವನ್ನು 2.5ಕ್ಕೆ 1 ಪ್ರಮಾಣದಲ್ಲಿ ಒದಗಿಸುವುದು ಅವಶ್ಯಕ. ಸೋಡಿಯಂ ಮತ್ತು ಕ್ಲೋರಿನ್‌ಗೆ ಸಂಬಂಧಪಟ್ಟಂತೆ, ಪೂರ್ಣ ಹುಡಿ ಆಹಾರ ಶೇಕಡಾ 0.5 ಹಾಗೂ ಹುಡಿ ಮತ್ತು ಧಾನ್ಯಾಹಾರದಲ್ಲಿ ಹುಡಿಯಭಾಗದ ಶೇಕಡಾ 1ರಷ್ಟು ಸಾಮಾನ್ಯ ಉಪ್ಪನ್ನು ಹೊಂದಿರಬೇಕು.

ಸರಳವಾದ, ಕಡಮೆಬೆಲೆಯ ಹಾಗೂ ತೃಪ್ತಿದಾಯಕವಾದ ಖನಿಜ ಮಿಶ್ರಣ ಈ ಕೆಳಕಂಡವುಗಳನ್ನು ಹೊಂದಿರುತ್ತದೆ.

ಮೂಳೆಪುಡಿ	...	40 ಭಾಗ
ಸಿಂಪಿ ಚಿಪ್ಪು ಅಥವಾ (ಪುಡಿಮಾಡಿದ) ಸುಣ್ಣಕಲ್ಲು		40 ಭಾಗ
ಉಪ್ಪು	...	20 ಭಾಗ
ಒಟ್ಟು	...	100 ಭಾಗ

ಹೆಚ್ಚು ಸಂಪೂರ್ಣವಾದ ಮತ್ತು ಸಮರ್ಥವಾದ ಖನಿಜ ಮಿಶ್ರಣ ಈ ಕೆಳಕಂಡವುಗಳನ್ನು ಹೊಂದಿರುತ್ತದೆ:

ಮೂಳೆಪುಡಿ	...	27.97 ಭಾಗ
ಸಿಂಪಿ ಚಿಪ್ಪು ಅಥವಾ (ಪುಡಿಮಾಡಿದ) ಸುಣ್ಣಕಲ್ಲು		50.00 ಭಾಗ
ಉಪ್ಪು	...	20.00 ಭಾಗ
ಫೆರಸ್ ಸಲ್ಫೇಟ್	...	2.00 ಭಾಗ
ಪೊಟ್ಯಾಸಿಯಂ ಅಯೋಡೈಡ್	...	0.02 ಭಾಗ
ತಾಮ್ರದ ಸಲ್ಫೇಟ್	...	0.01 ಭಾಗ
ಒಟ್ಟು	...	100.00 ಭಾಗ

ಖನಿಜ ಮಿಶ್ರಣವನ್ನು ಕೋಳಿ ಆಹಾರದಲ್ಲಿ ಸಾಮಾನ್ಯವಾಗಿ ಶೇಕಡಾ 5 ರವರೆಗೆ ಉಪಯೋಗಿಸುತ್ತಾರೆ.

ಅನ್ನಾಂಗಗಳು: ಅನ್ನಾಂಗಗಳು ಆಹಾರದಲ್ಲಿ ಕಡಮೆ ಪ್ರಮಾಣದಲ್ಲಿದ್ದರೂ ಬೆಳವಣಿಗೆ, ಉತ್ಪಾದನೆ, ಸಂತಾನಾಭಿವೃದ್ಧಿ ಮತ್ತು ಆರೋಗ್ಯ ರಕ್ಷಣೆಯ ಮೇಲೆ

ಆಶ್ಚರ್ಯಕರ ಪ್ರಭಾವ ಮಾಡುವ ರಾಸಾಯನಿಕ ಪದಾರ್ಥಗಳು ತಮ್ಮ ಇರವಿನಿಂದ ಇತರ ಆಹಾರಾಂಶಗಳ ಉಪಯೋಗ ಸಮರ್ಥರೀತಿಯಲ್ಲಿ ನಡೆಯುವಂತೆ ಮಾಡುತ್ತವೆ. ಇವನ್ನು 'ಅನುಷಂಗಿತ ಆಹಾರಾಂಶ'ಗಳೆಂದೂ ಕರೆಯುತ್ತಾರೆ.

ಕೋಳಿಯ ಆಹಾರದಲ್ಲಿ 10 ಅನ್ನಾಂಗಗಳು ಬೇಕಾಗುವುದೆಂದು ತಿಳಿದುಬಂದಿದೆ. ಹಸುರು ಹುಲ್ಲುಗಾವಲು ಹಾಗೂ ಸೂರ್ಯರಶ್ಮಿ ಯಥೇಚ್ಛವಾಗಿ ದೊರೆಯುವ ಸಾಮಾನ್ಯ ಪದ್ಧತಿಯಲ್ಲಿ ಅನ್ನಾಂಗಗಳ ಸಮಸ್ಯೆ ಇರುವುದಿಲ್ಲ. ಇತರ ಪರಿಸ್ಥಿತಿಗಳಲ್ಲಿ ಅವುಗಳನ್ನು ಸರಬರಾಜು ಮಾಡಲೇಬೇಕು. ಅನ್ನಾಂಗಗಳ ಅವಶ್ಯಕತೆ ಬಹಳ ಕಮ್ಮಿ ಪ್ರಮಾಣದ್ದಾದರೂ ಅವುಗಳಲ್ಲಿ ಬಹುಪಾಲು ಸಾಮಾನ್ಯ ಆಹಾರದಲ್ಲಿ ಸಾಕಷ್ಟು ಇದ್ದರೂ ಸಹ ಕೆಲವು ವೇಳೆ ಕೆಲವು ಅನ್ನಾಂಗಗಳ ನ್ಯೂನತೆ ಉಂಟಾಗುವ ಸಾಧ್ಯತೆಯಿದ್ದು ಇದರಿಂದ ಅತೃಪ್ತಿದಾಯಕ ಬೆಳವಣಿಗೆ, ಉತ್ಪಾದನೆಗಳಿಗೆ ಮಾರ್ಗವಾಗುವುದಲ್ಲದೇ, ಖಾಯಿಲೆ ಹಾಗೂ ಸಾವುಗಳಿಗೂ ಕಾರಣವಾಗುತ್ತದೆ. ಅನ್ನಾಂಗಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡುವುದರ ಕಡೆಗೆ ವಿಶೇಷ ಗಮನ ಅಗತ್ಯ. ಅವಶ್ಯಕ ವಿವಿಧ ಅನ್ನಾಂಗಗಳು, ಅವುಗಳ ಪ್ರಮುಖ ಕ್ರಿಯೆಗಳು ಹಾಗೂ ಕೋಳಿ ಆಹಾರದಲ್ಲಿ ಅವುಗಳ ನ್ಯೂನತೆಯಿಂದ ಉಂಟಾಗುವ ಲಕ್ಷಣಗಳನ್ನು ಕೋಷ್ಟಕ 16ರಲ್ಲಿ ಕೊಡಲಾಗಿದೆ.

ಪ್ರತಿಜೀವಿಗಳು: ಕೋಳಿಗಳನ್ನು ಮೇಯಿಸುವ ವಿಧಾನದಲ್ಲಿನ ಹೊಸ ಸಂಶೋಧನೆಯೆಂದರೆ ಆಹಾರದಲ್ಲಿ ಪ್ರತಿಜೀವಿಗಳನ್ನು ಸೇರಿಸುವುದು. ಇದು ಮರಿಗಳ ಬೆಳವಣಿಗೆಯನ್ನು ಚುರುಕುಗೊಳಿಸುವುದೆಂದು ಕಂಡುಬಂದಿದೆ. ಮರಿಗಳ ಬೆಳವಣಿಗೆಯಲ್ಲಿನ ಹೆಚ್ಚಳ ಆಹಾರದ ಸರ್ವಾಂಗೀಣ ಸಮರ್ಪಕತೆ ಹಾಗೂ ಮರಿಗಳನ್ನು, ಹಿಂದೆ ಉಪಯೋಗಿಸಿದ ಅಥವಾ ಉಪಯೋಗಿಸಿದ ಮನೆಗಳಲ್ಲಿ ಯಾವುದರಲ್ಲಿ ಸಾಕುತ್ತಾರೆಂಬುದನ್ನು ಅವಲಂಬಿಸುತ್ತದೆ. ಹಿಂದೆಂದೂ ಉಪಯೋಗಿಸದ ಮನೆಗಳಲ್ಲಿ ಮರಿಗಳನ್ನು ಸಾಕುವಾಗ ಪ್ರತಿಜೀವಿಗಳು ಬೆಳವಣಿಗೆಯ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ. ಶುದ್ಧ ಪ್ರತಿಜೀವಿಗಳು ಬಹಳ ಬೆಲೆಯವು ಹಾಗೂ ಇವುಗಳನ್ನು ಶುದ್ಧಸ್ಥಿತಿಯಲ್ಲಿ ಉಪಯೋಗಿಸುವ ಅವಶ್ಯಕತೆಯೂ ಇಲ್ಲ. ಇವುಗಳ ಉಪ ಉತ್ಪನ್ನಗಳು ಕಡಮೆ ಬೆಲೆಯವಾಗಿರುವುದರ ಜೊತೆಗೆ ಅದೇ ಕೆಲಸವನ್ನು ನಿರ್ವಹಿಸುತ್ತವೆ. ಕೋಳಿ ಮೇವಿನಲ್ಲಿ ಪ್ರತಿಜೀವಿಗಳು ಮರಿಗಳ ಸಾವಿನ ಸಂಖ್ಯೆಯನ್ನು ಕಡಮೆ ಮಾಡುತ್ತವೆ. ಸಾಮಾನ್ಯವಾಗಿ ಉಪಯೋಗಿಸುವ ಪ್ರತಿಜೀವಿಯೆಂದರೆ 'ಆ್ಯರೋಫಾಕ್' ಎಂಬ ಹೆಸರಿನಲ್ಲಿ ಮಾರಾಟವಾಗುವ 'ಆ್ಯರೊಮೈಸಿನ್'ನ ಉಪ ಉತ್ಪನ್ನ.

ಆಹಾರ ಸಮತೋಲನ ಮಾಡುವಿಕೆ

ಆಹಾರಾಂಶಗಳು ಸರಿಯಾಗಿ ಉಪಯೋಗಿಸಲ್ಪಟ್ಟು ಬೆಳವಣಿಗೆ ಅಥವಾ ಮೊಟ್ಟೆ ಉತ್ಪಾದನೆಯನ್ನು ಹೆಚ್ಚಿಸುವಂತೆ ವಿವಿಧ ಆಹಾರಾಂಶಗಳನ್ನು ಸರಿಯಾದ ಪ್ರಮಾಣ

ದಲ್ಲಿ ಹೊಂದಿರುವುದೇ ಸಮತೋಲ ಆಹಾರ. ಮರಿಗಳನ್ನು ಬೆಳೆಸುವುದಕ್ಕಾಗಲೀ ಅಥವಾ ಉತ್ಪಾದಕಗಳನ್ನು ಮಿತವ್ಯಯಕಾರಿಯಾಗಿ ಕಾಪಾಡುವುದಕ್ಕಾಗಲೀ ಆಹಾರದ ಸಮರ್ಥ ಉಪಯೋಗ ಬಹುಮುಖ್ಯವಾದುದು. ಮೇವಿನಲ್ಲಿ ಆಹಾರಾಂಶಗಳು ಸರಿಯಾದ ಪ್ರಮಾಣದಲ್ಲಿಲ್ಲದಿದ್ದರೆ ಅವುಗಳಲ್ಲಿ ಕೆಲವು ವ್ಯರ್ಥವಾಗುವ ಸಾಧ್ಯತೆ ಉಂಟು. ಇದು ದೋಷಯುತ ಮೇಯಿಸುವಿಕೆಗೆ ಕಾರಣವಾಗುತ್ತದೆ.

ಕೋಳಿಗಳು ಬೆಳೆದಂತೆ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುವ ಸಸಾರಜನಕ, ಖನಿಜಗಳು ಮತ್ತು ಅನ್ನಾಂಗಗಳ ಕಡೆಗೆ ವಿಶೇಷ ಗಮನ ಅಗತ್ಯ. ಆದರೆ ಈ ಆಹಾರಾಂಶಗಳ ದೃಷ್ಟಿಯಿಂದ ಮೇವು ಸಮತೋಲವಾಗಿದ್ದರೆ, ಸಸಾರಜನಕದ ಪ್ರಮಾಣ ಒಂದನ್ನು ಬಿಟ್ಟರೆ, ಇದೇ ಮೇವು ಮೊದಲಿನ ಬೆಳವಣಿಗೆ ಕಾಲ ಹಾಗೂ ನಂತರದ ಬೆಳವಣಿಗೆಯ ಕಾಲ ಎರಡಕ್ಕೂ ಉಪಯೋಗಕಾರಿ.

ಬೆಳೆಯುತ್ತಿರುವ ಕೋಳಿಗಳಿಗೆ ಉತ್ಪಾದಕ ಕೋಳಿಗಳಿಗಿಂತ ಹೆಚ್ಚಿನ ಸಸಾರಜನಕ ಹಾಗೂ ಕ್ಯಾಲ್ಸಿಯಂ ಮತ್ತು ರಂಜಕ ಕಡಮೆ ಪರಿಮಾಣದಲ್ಲಿ ಬೇಕು; ಆದರೆ ರಂಜಕಕ್ಕೆ ಕ್ಯಾಲ್ಸಿಯಂನ ಪ್ರಮಾಣ ಉತ್ಪಾದಕ ಕೋಳಿಗಳ ಆಹಾರಕ್ಕಿಂತ ಬೆಳೆಯುತ್ತಿರುವ ಮರಿಗಳ ಆಹಾರದಲ್ಲಿ ಹೆಚ್ಚಿರಬೇಕು. ಉತ್ಪಾದಕ ಕೋಳಿಗಳಿಗೆ ಬೆಳೆಯುತ್ತಿರುವ ಮರಿಗಳಿಗಿಂತ ಹೆಚ್ಚಿಗೆ A ಹಾಗೂ B ಅನ್ನಾಂಗ ಬೇಕು. ಆದರೆ, ರಿಬೋಫ್ಲೇವಿನ್ ಕಡಮೆಬೇಕು. ಬ್ಯಾಟರಿ ಪದ್ಧತಿ ಮೊದಲಾದವುಗಳಲ್ಲಿಟ್ಟ, ಬಿಸಿಲು ಬೀಳದ ಕೋಳಿಗಳಿಗೆ, ಬಿಸಿಲಿನಲ್ಲಿ ಓಡಾಡುವ ಸಾಧ್ಯತೆಯಿರುವ ಕೋಳಿಗಳಿಗಿಂತ ಹೆಚ್ಚಿಗೆ D ಅನ್ನಾಂಗಬೇಕು. ಆಹಾರಕ್ಕಾಗಿ ಮೊಟ್ಟೆ ಉತ್ಪಾದಿಸುವ ಕೋಳಿಗಳಿಗಿಂತ ಮರಿಮಾಡುವುದಕ್ಕಾಗಿ ಮೊಟ್ಟೆ ಉತ್ಪಾದಿಸುವ ಕೋಳಿ ಗುಂಪಿಗೆ D ಅನ್ನಾಂಗ ಹಾಗೂ ರಿಬೋಫ್ಲೇವಿನ್ ಹೆಚ್ಚಿಗೆ ಬೇಕು.

ಕೋಳಿಗಳ ಬೆಳವಣಿಗೆಯ ವಿವಿಧ ಹಂತಗಳಲ್ಲಿ ವಿವಿಧ ಉದ್ದೇಶಕ್ಕಾಗಿ ಬೇಕಾಗುವ ಆಹಾರಾಂಶದ ಅವಶ್ಯಕತೆಯನ್ನು ಕೋಷ್ಟಕ 16ರಲ್ಲಿ ಕೊಡಲಾಗಿದೆ.

ಕೋಷ್ಟಕ 16

ಕೋಳಿಮರಿಗಳ ಆಹಾರಾಂಶಗಳ ಅವಶ್ಯಕತೆ

ಆಹಾರಾಂಶಗಳು	ಬೆಳೆಯುತ್ತಿರುವ ಗುಂಪು	ಉತ್ಪಾದಕ ಗುಂಪು	ತಳಿ ಎಬ್ಬಿಸುವ ಗುಂಪು
1. ಸಸಾರಜನಕ	1–6 ವಾರಗಳು ಶೇಕಡಾ 18–20, 6–12 ವಾರಗಳು ಶೇಕಡಾ 16–20, 12 ವಾರಗಳು ಶೇಕಡಾ 14–16	ಶೇಕಡಾ 14–16	ಶೇಕಡಾ 14–16

ಆಹಾರಾಂಶಗಳು	ಬೆಳೆಯುತ್ತಿರುವ ಗುಂಪು	ಉತ್ಪಾದಕ ಗುಂಪು	ತಳಿ ಎಬಿಸುವ ಗುಂಪು
2. ಖನಿಜಗಳು:			
ಸುಣ್ಣ	ಶೇಕಡಾ 1.5	ಶೇಕಡಾ 2	ಶೇಕಡಾ 2
ರಂಜಕ	ಶೇಕಡಾ 0.8	ಶೇಕಡಾ 1	ಶೇಕಡಾ 1
ಸೋಡಿಯಂ ಕ್ಲೋರೈಡ್	ಶೇಕಡಾ 0.5	ಶೇಕಡಾ 0.5	ಶೇಕಡಾ 0.5
ಮ್ಯಾಂಗನೀಸ್	ದಶಲಕ್ಷಕ್ಕೆ 50 ಭಾಗ	ದಶಲಕ್ಷಕ್ಕೆ 50 ಭಾಗ	ದಶಲಕ್ಷಕ್ಕೆ 50 ಭಾಗ
3. ಜೀವಸತ್ವಗಳು:			
A—1 ಪೌಂಡ್ ಮೇವಿಗೆ ಅಂತರರಾಷ್ಟ್ರೀಯ ಮಾನಗಳು	1,500	3,000	4,500
D–1 ಪೌಂಡ್ ಮೇವಿಗೆ ಅಂತರರಾಷ್ಟ್ರೀಯ ಮಾನಗಳು	180	360	540
ರೈಬೊಫ್ಲೇವಿನ್ 1 ಪೌಂಡ್ ಮೇವಿಗೆ ಮೈಕ್ರೋಗ್ರಾಂಗಳು	1,200	675	1,200

(ಇತರ ಎಲ್ಲ ಜೀವಸತ್ವಗಳೂ ಕೋಳಿಮೇವಿನಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಧಾನ್ಯಗಳು ಹಾಗೂ ಅವುಗಳ ಉಪಉತ್ಪನ್ನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ.)

4. ಕೊಬ್ಬುಗಳು :
ಸಾಮಾನ್ಯವಾಗಿ ಕೋಳಿಮೇವಿನಲ್ಲಿ ಉಪಯೋಗಿಸುವ ದಿನಸುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಮೇವಿನಲ್ಲಿನ ಶೇಕಡಾ 5.7ಕ್ಕೂ ಹೆಚ್ಚು ಕೊಬ್ಬನ್ನು ಕೋಳಿಗಳು ಸರಿಯಾಗಿ ಉಪಯೋಗಿಸಿಕೊಳ್ಳುವುದಿಲ್ಲ.

5. ನೀರು :
ಎಲ್ಲ ಕಾಲದಲ್ಲೂ ಕೋಳಿಗಳೆದುರಿಗೆ ಸ್ವಚ್ಛ ನೀರಿಟ್ಟಿರಬೇಕು.

6. ನಾರು :
ಶೇಕಡಾ 6–7ಕ್ಕೂ ಹೆಚ್ಚು ನಾರು, ಈಡುಣಿಸು ಹಾಗೂ ಗಟ್ಟಿಮೇವನ್ನು ಕೋಳಿಗಳು ಉಪಯೋಗಿಸಿಕೊಳ್ಳಲಾರವು.

ಗುಂಪಿನ ಅನ್ನಾಂಗಗಳನ್ನು ತಯಾರಿಸಿಕೊಳ್ಳುವುದು ಕೋಳಿಗಳಿಗೆ ಸಾಧ್ಯವಿಲ್ಲದಿರುವುದರಿಂದ ಕೋಳಿಗಳ ವಿವಿಧ ಅನ್ನಾಂಗಗಳ ಅವಶ್ಯಕತೆಯು, ಗುಣ ಹಾಗೂ ಗಾತ್ರ ಎರಡರ ದೃಷ್ಟಿಯಿಂದಲೂ ದೊಡ್ಡ ಪ್ರಾಣಿಗಳಿಗಿಂತ ಹೆಚ್ಚಾಗಿರುತ್ತದೆ.

ಮೂಳೆ ರಚನೆಗೇ ಅಲ್ಲದೆ, ಮೊಟ್ಟೆ ಚಿಪ್ಪಿನ ಶೇಕಡ 98 ಭಾಗವಾದ ಕ್ಯಾಲ್ಸಿಯಂನ ಅವಶ್ಯಕತೆ ಕೋಳಿಗಳಲ್ಲಿ ಉಳಿದೆಲ್ಲ ಪ್ರಾಣಿಗಳಿಗಿಂತ ಹೆಚ್ಚಾಗಿರುತ್ತದೆ. ಆದುದರಿಂದ ಸರಿಯಾದ ಬೆಳವಣಿಗೆ ಮೂಳೆ ರಚನೆ ಹಾಗೂ ಮೊಟ್ಟೆ ಉತ್ಪಾದನೆಗೆ ಸಾಕಷ್ಟು ಕ್ಯಾಲ್ಸಿಯಂ ಸರಬರಾಜು ಅಗತ್ಯ.

ಕೋಷ್ಟಕ 17: ಕೋಳಿಗಳ ಆಹಾರದಲ್ಲಿ ಉಪಯೋಗಿಸುವ ಆಹಾರ ವಸ್ತುಗಳ ಸರಾಸರಿ ಸಂಯೋಜನೆ

ಸಂಖ್ಯೆ	ಆಹಾರವಸ್ತುಗಳು	ಒಟ್ಟು ಒಣಪದಾರ್ಥ (ಶೇಕಡಾ)	ಸಸಾರಜನಕ (ಶೇಕಡಾ)	ಕೊಬ್ಬು (ಶೇಕಡಾ)	ಕಚ್ಚಾನಾರು (ಶೇಕಡಾ)	ಸಾರಜನಕರಹಿತ ಇಳಿಸಾರ (ಶೇಕಡಾ)	ಖನಿಜಾಂಶ (ಶೇಕಡಾ)	ಸುಣ್ಣ (ಶೇಕಡಾ)	ರಂಜಕ (ಶೇಕಡಾ)	ಪಚನವಾಗುವ ಒಟ್ಟು ಆಹಾರಾಂಶಗಳು (ಶೇಕಡಾ)
1.	ಬಾಜ್ರಾ	90.0	9.8	4.6	10.0	72.6	3.0	0.14	0.93	54.3
2.	ಬಾರ್ಲಿ	91.9	9.3	2.7	6.2	71.1	2.5	0.23	0.78	70.8
3.	ರಕ್ತದ ಪುಡಿ	91.2	82.2	1.2	1.3	2.7	3.8	0.33	0.26	75.9
4.	ಮೂಳೆಪುಡಿ	96.4	7.1	3.3	0.8	3.9	8.3	32.61	15.17	—
5.	ಸಾರಾಯಿಮಾಡುವ ಧಾನ್ಯ	92.8	25.6	6.7	14.8	42.0	3.7	0.25	0.47	65.3
6.	ಮಜ್ಜಿಗೆ	9.4	3.5	0.6	—	4.5	0.8	0.18	0.10	9.1
7.	ಮೀನುಪುಡಿ	92.3	58.7	7.9	0.9	4.1	20.7	7.52	6.82	67.6
8.	ಕಚರ	39.3	6.0	7.2	1.1	22.2	2.8	—	—	34.6
9.	ಕಾಳು	91.9	18.0	4.5	6.9	60.1	2.4	0.40	0.90	79.0
10.	ಕಡಲೆಕಾಯಿಹಿಂಡಿ	93.8	37.6	6.1	15.2	29.5	5.4	0.21	0.99	79.1
11.	ಜೋಳ	90.4	13.8	2.3	—	71.9	2.5	0.11	0.77	73.7
12.	ಅಗಸೆಹಿಂಡಿ	94.4	28.9	4.2	9.1	42.8	9.4	0.69	1.62	82.6
13.	ಮುಸುಕಿನ ಜೋಳ	91.9	9.7	3.0	2.0	75.5	1.7	0.06	0.84	70.5
14.	ಮುಸುಕಿನ ಜೋಳದ ಜಬ್ಬು	90.5	26.4	2.4	7.1	48.4	6.1	0.20	1.26	77.4
15.	ಮಾಂಸದ ತುಣುಕು	93.7	55.0	10.7	2.2	1.2	24.1	12.18	9.85	73.8
16.	ಕಾಕಂಬಿ	75.4	0.7	—	—	70.1	4.6	0.90	0.10	69.5
17.	ಓಟ್ಸ್	90.5	8.7	6.0	—	71.0	5.4	0.28	0.73	71.7
18.	ಬಟಾಣಿ	90.5	23.8	1.2	6.2	56.2	3.1	0.10	0.92	79.6
19.	ಅಕ್ಕಿ	87.5	8.3	1.8	8.8	64.7	5.0	—	0.48	59.1
20.	ತೌಡು	87.5	12.3	17.6	12.3	31.4	13.9	0.19	5.45	62.9
21.	ಕೆನೆತೆಗೆದ ಹಾಲು	9.6	3.7	0.1	—	5.0	0.8	0.22	0.27	8.6
22.	ಸೋಯಬೀನ್ ಹಿಟ್ಟು	91.7	44.5	3.7	3.6	30.3	5.7	0.39	1.51	82.2
23.	ಸೂರ್ಯಕಾಂತಿ ಬೀಜ	63.3	18.0	25.7	28.1	14.2	7.3	0.50	1.26	89.2
24.	ಗೋಧಿ	91.5	9.6	1.7	1.7	76.8	1.7	0.19	0.70	84.0
25.	ಗೋಧಿ ಮಿಮ್ಮಿ	94.3	11.9	5.1	11.4	51.0	14.9	0.30	0.97	34.0
26.	ಬೂಸ (ಗೋಧಿ ತವಡು)	89.0	11.5	4.4	12.2	54.1	6.8	0.23	2.00	70.8

ಹೆಚ್ಚಿನ ಆಹಾರಗಳು ಒಂದಕ್ಕಿಂತ ಹೆಚ್ಚಿನ ಆಹಾರಾಂಶಗಳ ಆಕರಗಳಾಗಿರುತ್ತವೆ. ಉದಾಹರಣೆಗೆ ಕಾಳುಗಳು ಹಾಗೂ ಅವುಗಳ ಉಪಉತ್ಪನ್ನಗಳು ಪ್ರಮುಖವಾಗಿ ಶಕ್ತಿದಾಯಕಗಳಾದರೂ ಸಸಾರಜನಕ, ಕೆಲವು ಖನಿಜಗಳು ಹಾಗೂ ಅನ್ನಾಂಗಗಳನ್ನೂ ಒದಗಿಸುತ್ತವೆ. ಹಾಲು ಸಸಾರಜನಕದ ಆಕರವಾದಾಗ್ಯೂ ಅನ್ನಾಂಗಗಳನ್ನೂ ಸಾಕಷ್ಟು ಪ್ರಮಾಣದಲ್ಲಿ ಹೊಂದಿರುತ್ತದೆ.

17ನೆಯ ಕೋಷ್ಟಕ ಈ ದೇಶದಲ್ಲಿ ಕೋಳಿಗಳನ್ನು ಮೇಯಿಸಲು ಉಪಯೋಗಿಸುವ ವಿವಿಧ ಮೇವುಗಳ ರಚನೆಯನ್ನು ಕೊಡುತ್ತದೆ. ಸಮತೋಲ ಆಹಾರವನ್ನು ತಯಾರಿಸುವಲ್ಲಿ ಇದು ಉಪಯೋಗಕಾರಿ.

ಕೋಳಿ ದಿನಸು

ಕೋಳಿಗಳನ್ನು ಮೇಯಿಸುವ ಮೂಲತತ್ವಗಳನ್ನು ವಿವೇಚಿಸಿದ ನಂತರ, ಮೇಯಿಸುವ ಪ್ರಾಯೋಗಿಕ ವಿಷಯಕ್ಕೆ ಬರುತ್ತೇವೆ. ಕೋಳಿ ದಿನಸು ಗುಣ, ಉದ್ದೇಶ, ಮೇವಿನ ಸ್ಥಿತಿ ಮತ್ತು ಮೇಯಿಸುವ ವಿಧಾನಗಳ ಆಧಾರದ ಮೇಲೆ ಸ್ಪಷ್ಟವಾದ ಹಲವು ಭಾಗಗಳನ್ನು ಹೊಂದಿದೆ. ಉಪಯೋಗದ ದೃಷ್ಟಿಯಿಂದ ಈ ಕೆಳಕಂಡ ಭಾಗಗಳನ್ನು ಗುರುತಿಸಬಹುದು: (1) ಪೂರ್ಣ ಧಾನ್ಯಗಳು; (2) ಪುಡಿಗಳು; (3) ಹಸುರಾದ ಅಥವಾ ರಸಪೂರಿತ ಮೇವುಗಳು; (4) ದ್ರವಗಳು; (5) ಖನಿಜಗಳು ಮತ್ತು (6) ಮರಳು.

ಧಾನ್ಯಗಳು: ಕೋಳಿಗಳಿಗೆ ಬೇಕಾದ ಶರ್ಕರಪಿಷ್ಟ ಮತ್ತು ಕೊಬ್ಬಿನ ಹೆಚ್ಚಿನ ಅಂಶವನ್ನು ಧಾನ್ಯಗಳು ಒದಗಿಸುತ್ತವೆ. ಪೂರ್ತಿಯಾಗಿಯಾಗಲಿ ಅಥವಾ ಒಡೆದಾಗಲಿ ಹಲವು ಧಾನ್ಯಗಳನ್ನು ಮೇಯಿಸಬಹುದು. ಧಾನ್ಯಮೇವನ್ನು ಕನಿಷ್ಠ ಎರಡು ಮೂರು ವಿಧದ ಧಾನ್ಯಗಳಿಂದ ತಯಾರಿಸುವುದು ಅಪೇಕ್ಷಣೀಯ. ಮಿತವ್ಯಯದ ದೃಷ್ಟಿಯಿಂದ ಸ್ಥಳೀಯ ಧಾನ್ಯ ಆಮದುಮಾಡಿಕೊಂಡ ಧಾನ್ಯಗಳಿಗಿಂತ ಉತ್ತಮ. ಬತ್ತ ಬೆಳೆಯುವ ಸ್ಥಳಗಳಲ್ಲಿ ಅಕ್ಕಿ ಪ್ರಮುಖ ಮೇವಾಗಬೇಕು. ಉತ್ತರದಲ್ಲಿ ಸಾಮಾನ್ಯವಾಗಿ ಸಿಗುವ ಮುಸುಕಿನ ಜೋಳ, ಗೋಧಿ ಮತ್ತು ಓಟ್ಸ್‌ಗಳು ಉತ್ತಮವಾದ ಧಾನ್ಯ ಮಿಶ್ರಣವಾಗುತ್ತವೆ. ಬಾರ್ಲಿ ಕೂಡ ಉತ್ತರದ ಕೆಲವು ಪ್ರದೇಶಗಳಲ್ಲಿ ದೊರೆಯುತ್ತದೆ. ಈ ಧಾನ್ಯಗಳು ದಕ್ಷಿಣ ಮತ್ತು ಪೂರ್ವದಲ್ಲಿ ವಿರಳವಾದುದರಿಂದ ಮೇಯಿಸಲು ಬಹು ದುಬಾರಿ.

ಜೋಳ, ಸಜ್ಜೆ, ಸಾಮೆ ಮತ್ತು ರಾಗಿಗಳಂತಹ ತೆನೆಗೂಡುವ ಸಸ್ಯಗಳು ದಕ್ಷಿಣ ಹಾಗೂ ಪೂರ್ವದಲ್ಲಿ ಸಾಮಾನ್ಯ. ಅವುಗಳ ಗಟ್ಟಿಯಾದ ಹೊರಪೊರೆಯಿಂದಾಗಿ ಅವುಗಳನ್ನು ಜೀರ್ಣಿಸಿಕೊಳ್ಳುವುದು ಇತರ ಧಾನ್ಯಗಳಷ್ಟು ಸುಲಭವಲ್ಲದಿದ್ದರೂ ಅವುಗಳನ್ನು ಅಕ್ಕಿ ಅಥವಾ ಇತರ ಸ್ಥಳೀಯ ಧಾನ್ಯಗಳ ಜೊತೆಗೆ ಮೇಯಿಸಬಹುದು. ಅವುಗಳನ್ನು ಒಡೆದು ಅಥವಾ ಪುಡಿಮಾಡಿದಾಗ ಸರಿಯಾದ ಉಪಯೋಗವಾಗುತ್ತವೆ. ರಾಗಿಯನ್ನು ಒಂದು ರಾತ್ರಿ ನೀರಿನಲ್ಲಿ ನೆನಸಿ ಮೇಯಿಸುವುದು ಉತ್ತಮ. ಅಕ್ಕಿನುಚ್ಚಿನೊಡನೆ ಇದು ಉತ್ತಮವಾದ ಧಾನ್ಯಾಹಾರವಾಗುತ್ತದೆ.

ಧಾನ್ಯಮಿಶ್ರಣದಲ್ಲಿ ಸೇರಿಸಬೇಕಾದ ಧಾನ್ಯದ ರೀತಿ ಮತ್ತು ಪರಿಮಾಣ, ವಿವಿಧ ಧಾನ್ಯಗಳ ಲಭ್ಯತೆ ಹಾಗೂ ದರ, ವರ್ಷದ ಕಾಲ, ಮೇಯಿಸಬೇಕಾದ ಕೋಳಿಗಳು, ಹವಾಮಾನ ಮತ್ತು ಉಪಯೋಗಿಸುವ ಪುಡಿ ಮೇವಿನ ಗುಣ ಮೊದಲಾದ ಹಲವು ಅಂಶಗಳನ್ನು ಅವಲಂಬಿಸುತ್ತದೆ.

ಪುಡಿಆಹಾರಗಳು: ಧಾನ್ಯಾಹಾರಗಳಿಗೆ ಸಸಾರಜನಕಗಳನ್ನು ಮತ್ತಷ್ಟು ಸರಬರಾಜು ಮಾಡಲು ಪುಡಿಆಹಾರ ಉಪಯೋಗಿಸಲ್ಪಡುತ್ತದೆ. ಸಾಮಾನ್ಯವಾಗಿ ಇವು ಧಾನ್ಯಗಳ ಹಿಟ್ಟು, ಹೊಟ್ಟಿನಂತಹ ಧಾನ್ಯದ ಉಪಪದಾರ್ಥಗಳು, ನುಚ್ಚು ಮತ್ತು ಉರುಟು ನುಚ್ಚು, ಹಿಂಡಿಗಳು, ಖನಿಜಗಳು ಮತ್ತು ಪ್ರಾಣಿಗಳ ಉಪಉತ್ಪನ್ನಗಳು ಮೊದಲಾದವುಗಳನ್ನೊಳಗೊಂಡಿರುತ್ತದೆ. ಪುಡಿಗಳನ್ನು ಕೋಳಿಗಳಿಗೆ ಸೂಕ್ತ ತೊಟ್ಟಿಗಳಲ್ಲಿ ಮೇಯಿಸಬೇಕು.

ಪುಡಿಗಳು ಕೋಳಿಗಳ ಬಹುಮುಖ್ಯ ಆಹಾರ ಹಾಗೂ ಅವು ಕೋಳಿಗಳಿಗೆ ಸಮರ್ಥರೀತಿಯಿಂದ ಉಪಯೋಗವಾಗಲು ಅವುಗಳು ರುಚಿಕರವಾಗಿಯೂ, ಆಹಾರಾಂಶಯುಕ್ತವಾಗಿಯೂ, ಮಿತವ್ಯಯಕಾರಿಯಾಗಿಯೂ ಹಾಗೂ ಬೇಗ ಕೆಡದಂತೆಯೂ ಇರಬೇಕು. ಅವು ದೇಹನಿರ್ವಹಣೆ ಹಾಗೂ ಉತ್ಪಾದನೆಗೆ ಬೇಕಾದ ಪ್ರಮಾಣದಲ್ಲಿ ಆಹಾರಾಂಶಗಳನ್ನು ಹೊಂದಿರಬೇಕು. ಪುಡಿ ಮಿಶ್ರಣದ ಕೆಲವು ಸಾಮಾನ್ಯ ಘಟಕಗಳನ್ನು ಕೆಳಗೆ ವಿವರಿಸಲಾಗಿದೆ:

ಗೋಧಿ ತೌಡು (ಬೂಸ) ಹಾಗೂ ಗೋಧಿ ಉರುಟು ನುಚ್ಚು ಮತ್ತು ಗೋಧಿ ನುಚ್ಚು : ಇವು ಪುಡಿ ಮೇವಿನಲ್ಲಿ ಉಪಯೋಗಿಸುವ ಮುಖ್ಯ ಘಟಕಗಳು. ಗೋಧಿ ಕಾಳಿನ ಹೊರ ಒರಟು ಪದರವೇ ಗೋಧಿ ತೌಡು. ಗೋಧಿ ಉರುಟು ನುಚ್ಚು ಸಾಮಾನ್ಯವಾಗಿ ಗೋಧಿ ಹೊಟ್ಟಿನ ಸೂಕ್ಷ್ಮಕಣಗಳು ಮತ್ತು ಗೋಧಿ ಮೊಳಕೆಗಳನ್ನು ಹೊಂದಿರುತ್ತದೆ ಹಾಗೂ ಶೇಕಡಾ 9.5 ಕ್ಕಿಂತ ಹೆಚ್ಚಿಗೆ 'ಗಟ್ಟಿನಾರು' ಹೊಂದಿರಬಾರದು. ಗೋಧಿ ನುಚ್ಚು ಹೊಟ್ಟಿನ ಸೂಕ್ಷ್ಮಕಣಗಳು, ಗೋಧಿ ಮೊಳಕೆ ಹಾಗೂ ಗೋಧಿ ಬೀಸುವಾಗ ಬರುವ ಕೂಳೆಗಳನ್ನು ಹೊಂದಿರುತ್ತದೆ; ಆದರೆ ಶೇಕಡಾ 6ಕ್ಕಿಂತ ಹೆಚ್ಚಿಗೆ ಗಟ್ಟಿನಾರನ್ನು ಹೊಂದಿರಬಾರದು.

ಓಟ್ಸ್ ಮತ್ತು ಬಾರ್ಲಿ: ಈ ಧಾನ್ಯಗಳನ್ನು ಇಡಿಯಾಗಾಗಲೀ, ನುಚ್ಚು ಮಾಡಿಯಾಗಲೀ ಅಥವಾ ಪುಡಿಮಾಡಿಯಾಗಲೀ ಉಪಯೋಗಿಸಿದಾಗ ಅಪೇಕ್ಷಣೀಯ ಆಹಾರವಾಗುತ್ತದೆ. ಮೃದುವಾದ ಓಟ್ಸ್ ಹುಲ್ಲು ಉತ್ತಮ ಆಹಾರ. ಎಚ್ಚರಿಕೆಯಿಂದ ಮೇಯಿಸಿದಾಗ ಬಾರ್ಲಿ ಉಪಯುಕ್ತ ಆಹಾರ. ಬಾರ್ಲಿ ಮೇಯಿಸಿದ ಕೋಳಿಗಳಲ್ಲಿ ಕೊಬ್ಬುಯುತ ಈಲಿ ಬೆಳೆಯುವ ಸಂಭವ ಉಂಟು. ಕೊಬ್ಬಿಸುವ ದಿನಸಿನಲ್ಲಿ ಉಪಯೋಗಿಸಲು ಇದು ಉತ್ತಮ. 3 ಅಥವಾ 4 ವಾರಗಳಿಗಿಂತ ಕಡಮೆ ವಯಸ್ಸಿನ ಮರಿಗಳಿಗೆ ಬಾರ್ಲಿಯನ್ನು ಮೇಯಿಸಬಾರದು.

ಕಡಲೆ: ಕಡಲೆ ಒಳ್ಳೆಯದು. ಆದರೆ ಅದನ್ನು ನುಚ್ಚುಮಾಡಿರಬೇಕು. ಎಲ್ಲ ದ್ವಿದಳಕಾಳುಗಳೂ ಹೆಚ್ಚಿನ ಸಸಾರಜನಕ ಪದಾರ್ಥಗಳನ್ನು ಹೊಂದಿರುತ್ತವೆ; ಆದರೆ ಸಸಾರಜನಕ ಏಕಮಾತ್ರಮೂಲವಾಗಿ ಪರಿಗಣಿಸಬಾರದು.

ಅಕ್ಕಿ: ಬತ್ತ ಬೆಳೆಯುವ ಪ್ರದೇಶಗಳಲ್ಲಿ ಅಕ್ಕಿ ಮತ್ತು ಅಕ್ಕಿಯ ಉಪಉತ್ಪನ್ನಗಳು ಸಾಮಾನ್ಯ ಆಹಾರ ಪದಾರ್ಥಗಳು, ಗೋಧಿ ಅಥವಾ ಬಾರ್ಲಿ ಬೆಳೆಯದಿರುವ ಪ್ರದೇಶಗಳಲ್ಲಿ ಆ ಸ್ಥಾನವನ್ನಾಕ್ರಮಿಸಿಕೊಳ್ಳುತ್ತವೆ. ಆದಾಗ್ಯೂ ತೌಡು ಒಳ್ಳೆಯ ಗುಣಮಟ್ಟದ್ದಾಗಿ ಹೊಟ್ಟು ಮತ್ತು ಇತರ ಕಲ್ಮಶಗಳಿಲ್ಲದಂತೆ ಇರಬೇಕಾದುದು ಆವಶ್ಯಕ. ತೌಡಿಗೆ ಬತ್ತದ ಹೊಟ್ಟ(ಗೊಳಲಿ)ನ ನುಣ್ಣನೆಯ ಪುಡಿಯನ್ನು ಬೆರೆಸುವುದು ಸಾಮಾನ್ಯ ಅಭ್ಯಾಸ.

ಧಾನ್ಯ ಗ್ಲೂಟಿನ್ ಆಹಾರ: ಇದು ಪಿಷ್ಟತಯಾರಿಕೆಯ ಉಪಉತ್ಪನ್ನ. ಇದು ತಕ್ಕಮಟ್ಟಿಗೆ ಸಸಾರಜನಕವನ್ನು ಹೊಂದಿರುತ್ತದೆ (ಶೇಕಡಾ 40 ರಿಂದ 45) ಮತ್ತು ಇದಕ್ಕೆ ಪ್ರಾಣಿಸಸಾರಜನಕ, ಅನ್ನಾಂಗಗಳು ಹಾಗೂ ಖನಿಜಗಳನ್ನು ಸೇರಿಸಿ ಉಪಯೋಗಿಸಬಹುದು.

ಜೋಳ, ಸಜ್ಜೆ ಮತ್ತು ರಾಗಿ: ದಕ್ಷಿಣ ಭಾರತದಲ್ಲಿ ಹೇರಳವಾಗಿ ದೊರೆಯುತ್ತವೆ. ಗೋಧಿ ಅಥವಾ ಬಾರ್ಲಿಗಳಂತಹ ಧಾನ್ಯಗಳನ್ನು ಕೋಳಿ ಆಹಾರದಲ್ಲಿ ಸೇರಿಸುವುದು ಬಹಳ ವೆಚ್ಚದ ಸಂಗತಿ. ಸ್ಥಳೀಯವಾಗಿ ದೊರೆಯುವ ಈ ಧಾನ್ಯಗಳನ್ನು ಅಕ್ಕಿ ಮತ್ತು ಮುಸುಕಿನ ಜೋಳಗಳ ಜೊತೆಗೆ ಗೋಧಿ ಅಥವಾ ಬಾರ್ಲಿಗಳ ಬದಲು ಉಪಯೋಗಿಸಬೇಕು.

ಆಲೂಗಡ್ಡೆ: ಬೇಯಿಸಿ ಪುಡಿಮಾಡಿದ ಆಲೂಗಡ್ಡೆಯನ್ನು ಮಿತವಾಗಿ ಕೋಳಿಗಳಿಗೆ ಮೇಯಿಸಬಹುದು. 1 ಪೌಂಡ್ ಧಾನ್ಯದ ಬದಲಾಗಿ ಬೇಯಿಸಿದ ಆಲೂಗಡ್ಡೆ 5 ಪೌಂಡ್ ಬೇಕು.

ಕಡಲೆಕಾಯಿ (ಸೇಂಗಾ) ಹಿಂಡಿ: ವಿಶೇಷತಃ ಖನಿಜಾಂಶಗಳನ್ನು ಪೂರೈಸಿದಾಗ ಕಡಲೆಕಾಯಿ ಹಿಂಡಿ ಉಪಯುಕ್ತ ಸಸ್ಯ ಸಸಾರಜನಕವಾಗುತ್ತದೆ. ಧಾನ್ಯ ಮತ್ತು ಧಾನ್ಯದ ಉಪಉತ್ಪನ್ನಗಳ ಜೊತೆ ಬೆರೆಸಲು ಯುಕ್ತವಾದುದು ಮತ್ತು ಇದನ್ನು ದಿನಸಿಯ ಶೇಕಡಾ 20 ರವರೆಗೆ ಉಪಯೋಗಿಸಬಹುದು.

ಅಗಸೆ ಹಿಂಡಿ: ಅಗಸೆ ಹಿಂಡಿಯು ಕೋಳಿಗಳ ಜೀರ್ಣಕ್ರಿಯೆಯನ್ನು ಒಳ್ಳೆಯ ಸ್ಥಿತಿಯಲ್ಲಿಡಲು ಸಹಾಯಕಾರಿ. ಗರಿಯುದುರ್ಚುವಕಾಲದಲ್ಲಿ ಇದು ವಿಶೇಷ ಉಪಯೋಗಕಾರಿ; ಆದರೆ ವಿರೇಚಕ ಗುಣಗಳಿಂದಾಗಿ ದಿನಸಿನ ಶೇಕಡಾ 5ಕ್ಕಿಂತ ಹೆಚ್ಚಿರಬಾರದು.

ಹತ್ತಿಬೀಜ (ಕಾಳು) ಹಿಂಡಿ: ಹತ್ತಿಬೀಜ ಆಹಾರ ಕೋಳಿಮೇವಿನ ತೃಪ್ತಿ ದಾಯಕ ಘಟಕವೆಂದು ಕಂಡುಬಂದಿಲ್ಲ. ಇದರ ಉಪಯೋಗದಿಂದ ದೇಹಸ್ರಾವಗಳ ಸ್ರವಿಕೆ ಕುಗ್ಗಿ, ಹೊಟ್ಟೆ ಕಟ್ಟುವುದೆಂದು ಹೇಳಲಾಗುತ್ತದೆ. ಆದ್ದರಿಂದ ಇದನ್ನು ವಿಶೇಷತಃ ಮೊಟ್ಟೆಯಿಡುತ್ತಿರುವ ಕೋಳಿಗಳಲ್ಲಿ ಮಿತವಾಗಿ ಬಳಸಬೇಕು. ಶೇಕಡಾ 6 ಕ್ಕಿಂತ ಹೆಚ್ಚಿಗೆ ಹತ್ತಿಬೀಜದ ಆಹಾರವನ್ನು ಮೇದ ಕೋಳಿಗಳು ಉತ್ಪಾದಿಸಿದ ಮೊಟ್ಟೆಗಳು ಬಂಡಾರದ ಮೇಲೆ ಚುಕ್ಕೆಗಳನ್ನೂ, ಶೇಖರಿಸಿಟ್ಟಾಗ ಮೊಟ್ಟೆಯ ಬಿಳಿಯಲ್ಲಿ ಎಳೆಗೆಂಪಿನ ಛಾಯೆ ಕಾಣಿಸುವ ಸಾಧ್ಯತೆಯಿದೆ.

ಕೊಬ್ಬರಿ ಹಿಂಡಿ: ಕೊಬ್ಬರಿ ಹಿಂಡಿಯನ್ನು ಅದು ಕಡಮೆ ಬೆಲೆಯದಾಗಿ ರುವ ಕಡೆ ಕೋಳಿ ದಿನಸಿನಲ್ಲಿ ಉಪಯೋಗಿಸಬಹುದು. ಆದಾಗ್ಯೂ ಇದು ಬೇಗ ಕೆಟ್ಟು ವಾಸನೆ ಬರುವುದರಿಂದ ಮೇವಿನೊಡನೆ ಸೇರಿಸುವುದು ಅಪೇಕ್ಷಣೀಯವಲ್ಲ.

ಸೋಯಾಬೀನ್ ಹಿಂಡಿ: ಎಣ್ಣೆತೆಗೆದ ಸೋಯಾಬೀನ್ ಹಿಂಡಿ ಒಳ್ಳೆಯ ಸಸಾರಜನಕ ಆಹಾರ ಮತ್ತು ಮೊಟ್ಟೆಯಿಡುವ ಗುಂಪಿನ ಪುಡಿಯಲ್ಲಿ ಸೇರಿಸುವುದು ಬಹು ಅಪೇಕ್ಷಣೀಯ.


ಕೂಳೆಮಾಂಸ: ಕೂಳೆಮಾಂಸ, ಪ್ರಾಣಿಜನ್ಯ ಸಸಾರಜನಕದ ಒಳ್ಳೆಯ ಆಕರ. ಇದು ಕಸಾಯಿಖಾನೆಯ ಪ್ರಾಣಿಗಳ ಕರುಳುಗಳು ಮತ್ತು ಜಠರಗಳನ್ನು ಹೊಂದಿರು ತ್ತದೆ. ಬೇಯಿಸಿ, ಒಣಗಿಸಿ ಪುಡಿಆಹಾರದಲ್ಲಿ ಸೇರಿಸಿ ಕೋಳಿಗಳಿಗೆ ಮೇಯಿಸಿದಾಗ ಸಾಕಷ್ಟು ಸಸಾರಜನಕವನ್ನು ಒದಗಿಸುತ್ತದೆ. ಬೆಳೆದ ಕೋಳಿಯೊಂದಕ್ಕೆ ಅದರ ಆಹಾರ ದಲ್ಲಿ ಎಣ್ಣೆಹಿಂಡಿಗಳೊಂದಿಗೆ ದಿನಕ್ಕೆ ಕನಿಷ್ಟ, ಒಂದು ಔನ್ಸ್ ಕೂಳೆಮಾಂಸವಿರುವುದು ಉಚಿತ.

ಮಾಂಸ, ಒಣ ತುಂಡುಗಳು: ಇದು ಪ್ರಾಣಿಜನ್ಯ ಸಸಾರಜನಕಗಳ ಉತ್ತಮ ಆಕರಗಳಲ್ಲಿ ಮತ್ತೊಂದು. ದನಗಳ ಕಡಿಯುವಿಕೆಯನ್ನು ನಿಷೇಧಿಸಿರುವ ಈ ದೇಶದಲ್ಲಿ ಸ್ವಾಭಾವಿಕ ಕಾರಣಗಳಿಂದ ಸಾವು ಬಹಳ ಸಾಮಾನ್ಯವಾಗಿರುವ, ವಯಸ್ಸಾದ, ಅನುಪ ಯುಕ್ತವಾದ ಹಾಗೂ ರೋಗಪೀಡಿತ ದನಗಳನ್ನು ಹೊಂದಿರುವ ಗೋಸದನಗಳಿಂದ ಇದನ್ನು ಪಡೆಯಬಹುದು. ಹೆಣಗಳ ಮಾಂಸವನ್ನು ಉದ್ದನೆಯ ಪಟ್ಟಿಗಳಾಗಿ ಕತ್ತರಿಸಿ, ಉಪ್ಪಿನ ಪರ್ಯಾಪ್ತ ದ್ರಾವಣದಲ್ಲಿ ಕೆಲವು ನಿಮಿಷ ನೆನೆಸಿ ನಂತರ ಬಿಸಿಲಿನಲ್ಲಿ ಒಣಗಿಸಿದರೆ ಬಹುಕಾಲ ಕೆಡದಂತಿರುತ್ತದೆ ಮತ್ತು ಕೋಳಿ ಪುಡಿಮೇವಿಗೆ ಅತ್ಯುತ್ತಮವಾದ ಸಸಾರ ಜನಕದ ಪೂರಕವಾಗುತ್ತವೆ. ಇದನ್ನು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಬಹುದು ಇಲ್ಲವೇ ಸೂಕ್ತಯಂತ್ರದಲ್ಲಿ ಬಿಸಿ ಪುಡಿಮಾಡಬಹುದು.

ಗೆದ್ದಲುಹುಳು: ಗೆದ್ದಲುಹುಳುಗಳು (ಚಿತ್ರ 99) ಹೆಚ್ಚಿನ ಸಸಾರಜನಕವನ್ನು ಹೊಂದಿರುತ್ತವೆ. ಆದುದರಿಂದ ವಿಶೇಷತಃ ಬೆಳೆಯುತ್ತಿರುವ ಮರಿಗಳಿಗೆ ಬಹು ಮುಖ್ಯವಾದ ಆಹಾರಾಂಶಗಳನ್ನೊದಗಿಸುತ್ತದೆ (ಚಿತ್ರ 100).



99: ಗೆದ್ದಲು ಗೂಡಿನಿಂದ ಗೆದ್ದಲು ಹುಳುಗಳನ್ನು ಆಗೆಯುತ್ತಿರುವುದು.



ಚಿತ್ರ 100: ಬೆಳೆಯುತ್ತಿರುವ ಮರಿಗಳಿಗೆ ಗೆದ್ದಲನ ಮೇಯಿಸುತ್ತಿರುವುದು.

ರೇಷ್ಮೆ ಮರಿಹುಳು: ಇದೇ ರೀತಿ ರೇಷ್ಮೆಗೂಡಿನಿಂದ ಎಳೆಗಳನ್ನು ತೆಗೆದು ಕೊಂಡಮೇಲೆ ಉಳಿಯುವ ಸತ್ತ ರೇಷ್ಮೆಹುಳುಗಳು ಪ್ರಾಣಿಜನ್ಯ ಸಸಾರಜನಕವನ್ನು ಹೆಚ್ಚಿನ ಮಟ್ಟದಲ್ಲಿ ಹೊಂದಿರುತ್ತವೆ. ರೇಷ್ಮೆ ಉತ್ಪಾದನೆ ಉದ್ಯಮವಾಗಿ ಬೆಳೆಯು ತ್ತಿರುವ ಜಾಗಗಳಲ್ಲಿ ಈ ಆಹಾರ ಹೆಚ್ಚು ಸಿಗುತ್ತದೆ. ಈಗ ಸಾಮಾನ್ಯವಾಗಿ ಇಂತಹ ಹುಳುಗಳನ್ನು ಹಳ್ಳಕ್ಕೆ ಎಸೆಯುತ್ತಾರೆ ಇಲ್ಲವೇ ಗೊಬ್ಬರ ಮಾಡುತ್ತಾರೆ. ರೇಷ್ಮೆ ಉದ್ಯಮವಿರುವ ಪ್ರದೇಶಗಳಲ್ಲಿ ಕೊಳೆಯುತ್ತಿರುವ ಹುಳುಗಳಿಂದ ಹೊರಡುವ ದುರ್ನಾತ ಜನಾರೋಗ್ಯಕ್ಕೆ ಸಮಸ್ಯೆಯಾಗಿದೆ. ನಾರಾದ ಗೂಡುಗಳಿಂದ ಬೇರ್ಪಡಿಸಿ ಬಿಸಿಲಿನಲ್ಲಿ ಒಣಗಿಸಿ ಪುಡಿಮಾಡಿದ ಹುಳುಗಳು ಶೇಕಡಾ 60ರವರೆಗೂ ಸಸಾರಜಕನ ವನ್ನು ಹೊಂದಿರುತ್ತವೆ ಇದು ಕೋಳಿಗಳ ಪುಡಿಮೇವಿಗೆ ಸಸಾರಜನಕದ ಒಳ್ಳೆಯ ಪೂರಕವಾಗುತ್ತದೆ.

ರಕ್ತದಪುಡಿ ಅಥವಾ ಒಣಗಿಸಿದ ರಕ್ತ: ಒಣಗಿಸಿದ ರಕ್ತ ನಿಸ್ಸಂಶಯವಾಗಿ ಒಳ್ಳೆಯ ಸಸಾರಜನಕಯುಕ್ತ ಆಹಾರ. ಆದರೆ ಅದರ ಅಹಿತಕರ ರುಚಿಯಿಂದಾಗಿ ಅದು ಕೋಳಿಮೇವಿಗೆ ತೃಪ್ತಿದಾಯಕವಾದ ಸಸಾರಜನಕ ಪೂರಕವಲ್ಲ.

ಮೀನುಗಳ ಪುಡಿ: ಮೀನುಗಳ ಪುಡಿ ಶ್ರೀಮಂತ ಸಸಾರಜನಕ ಮೇವು: 4 ರಿಂದ 6 ವಾರಗಳ ಒಳಗಿನ ಮರಿಗಳಿಗೆ ಇದು ಬಹಳ ಒಳ್ಳೆಯದು. ಒಳ್ಳೆಯ ಮೀನುಗಳ ಪುಡಿ ಹೆಚ್ಚು ಖನಿಜಾಂಶ ಹಾಗೂ ಸಸಾರಜನಕಗಳನ್ನು ಹೊಂದಿರುತ್ತದೆ (ಶೇಕಡಾ 60) ಮತ್ತು ಇದನ್ನು ದಿನಸಿನ ಶೇಕಡಾ 7ರವರೆಗೆ ಮೊಟ್ಟೆ ಅಥವಾ ಮಾಂಸವಾವುದಕ್ಕೂ ವಾಸನೆಬರದಂತೆ ಉಪಯೋಗಿಸಬಹುದು. ಮೀನುಗಳ ಪುಡಿ ಕೆಳಮಟ್ಟದ ಎಣ್ಣೆ ಅಂಶ (ಶೇಕಡಾ 6ಕ್ಕೂ ಕಡಮೆ) ಹಾಗೂ ತಿಳಿಬಣ್ಣವನ್ನೂ ಹೊಂದಿರಬೇಕು.

ಬಟ್ಟಿಗಷ್ಟು: ಬಟ್ಟೆ ಕಾರಖಾನೆಯಲ್ಲಿ ಹುಳಿಹಿಡಿದ ನಂತರದ ಹಾಗೂ ಪ್ರತಿಜೀವಿಗಳ ಕಾರಖಾನೆಯಲ್ಲಿನ ಗಷ್ಟುಗಳು ಪ್ರಾಣಿ ಸಸಾರಜನಕ ಅಂಶದ ಮುಖ್ಯ ಘಟಕವಾದ B_{12} ಅನ್ನಾಂಗವನ್ನು ಹೆಚ್ಚಿನ ಪರಿಮಾಣದಲ್ಲಿ ಹೊಂದಿರುತ್ತವೆ. ಪ್ರತಿಜೀವಿಗಳನ್ನು ಶುದ್ಧರೂಪದಲ್ಲಿ ಪಡೆದಾದ ಮೇಲೆ ಸಾಕಷ್ಟು B_{12} ಅನ್ನಾಂಗ ಹಾಗೂ ಆ ಪ್ರತಿಜೀವಿ ಉಪಉತ್ಪನ್ನದಲ್ಲಿ ಉಳಿಯುತ್ತದೆ. ಇದನ್ನು ಒಣಗಿಸಿದಾಗ ಸಸಾರಜನಕದ ಒಳ್ಳೆಯ ಪೂರಕವಾಗುತ್ತದೆ.

ಹಸುರುಮೇವುಗಳು: ಮುಖ್ಯವಾಗಿ ಮೂರು ಕಾರಣಗಳಿಗಾಗಿ ಕೋಳಿ ಮೇವಿನಲ್ಲಿ ಹಸುರು ಮೇವು ಮುಖ್ಯವಾದುದು: (1) ಆಹಾರಾಪೇಕ್ಷೆಯನ್ನು ಉದ್ದೀಪನಗೊಳಿಸಲು (2) ಆಹಾರದ ಗಾತ್ರವನ್ನು ಹೆಚ್ಚಿಸಿ ಜೀರ್ಣಾಂಗವನ್ನು ಚುರುಕುಗೊಳಿಸಲು ಸಹಾಯಮಾಡಲು ಹಾಗೂ ಇದರಿಂದಾಗಿ ಜೀರ್ಣಕ್ರಿಯೆಗೆ ನೆರವಾಗಲು ಮತ್ತು (3) ಅವಶ್ಯಕ ಆಹಾರಾಂಶಗಳನ್ನು ಪೂರೈಸಲು ನೆರವಾಗಲು ಅವುಗಳನ್ನು ಹಸಿಯಾಗಿಯಾಗಲಿ ಒಣಗಿಸಿ ಪುಡಿಆಹಾರಗಳೊಡನೆ ಕೂಡಿಸಿಯಾಗಲಿ ಕೊಡಬಹುದು. ಮರಿಗಳು ಹಸಿಯಾದ ಅಥವಾ ಮೃದುವಾದ ಮೇವನ್ನು ಇಷ್ಟಪಡುತ್ತವೆ. ಗುಂಪು, ಹಸುರು ಮೈದಾನದಲ್ಲಿದ್ದಾಗ ತಮಗೆ ಬೇಕಾದಷ್ಟು ಹಸುರು ಮೇವನ್ನು ತಾವೇ ತಿನ್ನುತ್ತವೆ. ಕೋಳಿಗಳನ್ನು ಕೂಡಿ ಸಾಕುವ ಮಳೆಗಾಲದ ದಿನಗಳಲ್ಲಿ, ಅವುಗಳ ಆರೋಗ್ಯ, ಉತ್ಪಾದಕತೆ ಕುಗ್ಗದಂತೆ ಒಣಗಿಸಿದ ಹಸುರು ಆಹಾರ ಅಥವಾ ಸೂಕ್ತ ಆಹಾರವನ್ನು ಒದಗಿಸಬೇಕು.

ಮೃದುವಾದ ಹೊಸ ಹುಲ್ಲು, ಬರ್‌ಸೀಮ್, ಲೂಸರ್ನ್, ಸೆಣಬು, ಎಲೆ ತರಕಾರಿಗಳು ಅಥವಾ ತರಕಾರಿಗಳಲ್ಲಿ ಉಳಿದ ಕೂಳೆ ಚೂರುಗಳಂತಹ ಹಲವಾರು ಹಸುರುಗಳನ್ನು ಉಪಯೋಗಿಸಬಹುದು. ಉಷ್ಣವಲಯದ ಬಹುವಾರ್ಷಿಕ ಮರಗಳಾದ ನಾಡಬೇಲ ಮತ್ತು ಅಗಸೆ(ಚೊಗಚೆ)ಗಳು ಹೆಚ್ಚು ಅನ್ನಾಂಗಗಳಿರುವ ಎಲೆಗಳನ್ನೊದಗಿಸುತ್ತವೆ. ಇವನ್ನು ಕೋಳಿಗಳಿಗೆ ಹಸುರು ಮೇವಾಗಿ ಮೇಯಿಸಬಹುದು. ಹಸುರು ಮೇವುಗಳನ್ನು ಪ್ರತಿದಿನ ಹೊಸದಾಗಿ ಕತ್ತರಿಸಿ ಅವುಗಳನ್ನು ಸಣ್ಣಸಣ್ಣ ಚೂರುಗಳಾಗಿ ಕತ್ತರಿಸಿ ಮೇಯಿಸಬೇಕು; ಇವುಗಳನ್ನು ಬೇಯಿಸಬಾರದು.

ದ್ರವಗಳು: ಶರೀರದ ಶಾಖವನ್ನು ರಕ್ಷಿಸಿಕೊಳ್ಳಲು ಮತ್ತು ಇತರ ಜೀವನ ಕ್ರಿಯೆಗಳಿಗೆ ದ್ರವಗಳು ಮುಖ್ಯವಾದವು. ಈ ಕೆಳಕಂಡ ದ್ರವಗಳು ಮುಖ್ಯವಾದವು:

ನೀರು: ಹೇಂಟೆಯ ತೂಕದ ಸುಮಾರು ಶೇಕಡಾ 55 ರಿಂದ 60 ಭಾಗ ನೀರು ಹಾಗೂ ಮೊಟ್ಟೆಯ ಘಟಕಗಳ ಶೇಕಡಾ 66 ಭಾಗ ನೀರು. ಆದುದರಿಂದ ಮರಿಗಳಿಗೆ ಬೇಕಾದ ದ್ರವಗಳಲ್ಲಿ ನೀರು ಅತಿಮುಖ್ಯವಾದುದು. ಮೊಟ್ಟೆಯಿಡುತ್ತಿರುವ 100 ಹೇಂಟೆಗಳ ಗುಂಪು, ಉತ್ಪಾದನೆಯ ತ್ವರಿತತೆ ಹಾಗೂ ವರ್ಷದಕಾಲವನ್ನವಲಂಬಿಸಿ 15 ರಿಂದ 30 ಕ್ವಾರ್ಟ್ (4 ರಿಂದ 8 ಗ್ಯಾಲನ್) ನೀರು ಕುಡಿಯುತ್ತದೆ. ಆಹಾರದೃಷ್ಟಿಯಿಂದ ಇದರ ಬೆಲೆ ನಿಕೃಷ್ಟ, ಆದರೆ ಕೋಳಿಗಳ ಪ್ರಾಣಾಧಾರವಾದ ಕ್ರಿಯೆಗಳಿಗೆ ಬಹಳ ಪ್ರಮುಖವಾದುದು. ಕೋಳಿಗಳಿಗೆ ಸರಬರಾಜುಮಾಡುವ ನೀರು ಶುದ್ಧವಾಗಿ, ಸ್ವಚ್ಛವಾಗಿ ಹಾಗೂ ಹೊಸತಾಗಿರಬೇಕು.

ಹಾಲು: ಹಾಲು ಪ್ರಾಣಿಜನ್ಯ ಸಸಾರಜನಕಗಳ ಒಳ್ಳೆಯ ಆಕರ. ಕೋಳಿಗಳ ಆರೋಗ್ಯವನ್ನು ಉತ್ತಮಗೊಳಿಸಲು ಇದು ನಿಯಂತ್ರಕವಾಗಿಯೂ ಕೆಲಸಮಾಡುವಂತೆ ಕಂಡುಬರುತ್ತದೆ. ದ್ರವದಂತೆ ಇದನ್ನು ಹಲವು ರೂಪಗಳಲ್ಲಿ ಕೊಡಬಹುದು.

(i) ಪೂರ್ಣಹಾಲು: ಅಸ್ವಾಭಾವಿಕವಾಗಿ ಕಡಮೆ ಬೆಲೆಗೆ ದೊರೆಯದ ಹೊರತು ಕೋಳಿಗಳಿಗೆ ಹಾಲುಣಿಸುವುದು ಮಿತವ್ಯಯಕಾರಿಯಲ್ಲ. ಪೂರ್ಣಹಾಲನ್ನು ಕೋಳಿಗೆ ಉಣಿಸುವುದರಿಂದ ಯಾವ ಲಾಭವೂ ಇಲ್ಲ.

(ii) ಕೆನೆತೆಗೆದ ಹಾಲು: ಕೆನೆತೆಗೆದ ಹಾಲು ಹೆಚ್ಚಿಗೆ ಸಸಾರಜನಕವನ್ನು ಹೊಂದಿರುತ್ತದೆ ಮತ್ತು ಇದನ್ನು ಸಿಹಿಯಾಗಿ ಆಗಲಿ ಹುಳಿಯಾಗಿ ಆಗಲಿ ಕೊಡಬಹುದು; ತನ್ನಲ್ಲಿರುವ ಲ್ಯಾಕ್ಟಿಕ್ ಆಮ್ಲದಿಂದಾಗಿ ಜೀರ್ಣಕ್ರಿಯೆಗೆ ಸಹಾಯಮಾಡುವುದರಿಂದ ಹುಳಿಹಾಲು ವಿಶೇಷ ಉಪಯೋಗಕಾರಿ. ಬೆಳೆದ ಕೋಳಿ 4 ರಿಂದ 6 ಔನ್ಸ್, ಮರಿ 1 ರಿಂದ 2 ಔನ್ಸ್ ಹಾಲನ್ನು ದಿವಸಕ್ಕೆ ಸೇವಿಸುತ್ತದೆ.

(iii) ಮಜ್ಜಿಗೆ: ಇದು ಕೆನೆತೆಗೆದ ಹಾಲಿಗಿಂತ ಒಳ್ಳೆಯದು ಮತ್ತು ಇದನ್ನು ಕೋಳಿಗಳೂ ಇಷ್ಟಪಡುತ್ತವೆ.

(iv) ಹಾಲೊಡಕು ನೀರು (ಮಸ್ತು): ಆಹಾರಾಂಶಗಳ ದೃಷ್ಟಿಯಿಂದ ಇದು ಹಾಲಿನ ಉಳಿದ ರೂಪಗಳಷ್ಟು ಉಪಯುಕ್ತವಲ್ಲ. ಆದರೆ ಕೋಳಿಗಳು ಇದನ್ನು ಇಷ್ಟಪಡುತ್ತವೆ. ದೊರೆತ ಕಡೆ ಇದನ್ನು ಉಪಯೋಗಿಸಬೇಕು.

ಮೀನೆಣ್ಣೆ: ಅನ್ನಾಂಗಗಳನ್ನು ಪೂರೈಸಲು ಮೀನೆಣ್ಣೆಯನ್ನು ಕೋಳಿಗಳ ಪುಡಿಮೇವಿನಲ್ಲಿ ಸೇರಿಸಬೇಕು. ಬಹಳ ಉಪಯೋಗದಲ್ಲಿರುವುದೆಂದರೆ ಶಾರ್ಕ್‌ಮೀನಿನ

ಈಲಿ ಎಣ್ಣೆ ಮತ್ತು ಇದು ಸರ್ಕಾರಿ ತೈಲ ಕಾರ್ಖಾನೆಗಳಲ್ಲಿ ದೊರೆಯುತ್ತದೆ. ಕೋಳಿಗಳಿಗೆ ಮೇಯಿಸಲು ಉಪಯೋಗಿಸುವ ಮೀನೆಣ್ಣೆ ಆವಶ್ಯಕ ಪ್ರಮಾಣದಲ್ಲಿ ಅನ್ನಾಂಗಗಳನ್ನು ಹೊಂದಿರಬೇಕು. ಮೋಸಗಾರ ವ್ಯಾಪಾರಿಗಳು ಸುಲಭವಾಗಿ ಇದಕ್ಕೆ ಬೇರೆ ಪದಾರ್ಥಗಳನ್ನು ಬೆರೆಸಲು ಸಾಧ್ಯವಿರುವುದರಿಂದ ಅವಲಂಬನೀಯ ಕಾರ್ಖಾನೆಗಳಿಂದ ಎಣ್ಣೆಯನ್ನು ಖರೀದಿಮಾಡುವುದು ಒಳ್ಳೆಯದು. ಕೋಳಿಯ ಆಹಾರದಲ್ಲಿ ಶಾರ್ಕ್ ಮೀನೆಣ್ಣೆಯನ್ನು ಹಸುರು ದೊರಕುವುದು ದುಸ್ಸಾಧ್ಯವಾದ ಬೇಸಿಗೆಯಲ್ಲಿ ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಕಟ್ಟಡಗಳೊಳಗೆ ಅಥವಾ ಬ್ಯಾಟರಿಗಳಲ್ಲಿ ಸಾಕಷ್ಟು ಸೂರ್ಯರಶ್ಮಿ ಬೀಳದಂತೆ ಸಾಕುವ ಕೋಳಿಗಳ ಮೇವಿಗೆ ಶಾರ್ಕ್ ಮೀನೆಣ್ಣೆ ಸೇರಿಸಿ ಸಮತೋಲಗೊಳಿಸುವುದು ಮುಖ್ಯವಾದುದು.

ಖನಿಜಗಳು: ಉತ್ಪಾದಕ ಹೇಂಟೆಗಳಿಗೆ ತಮ್ಮ ಶರೀರದ ಖನಿಜಾಂಶವನ್ನು (ಶೇಕಡಾ 4) ರಕ್ಷಿಸಿಕೊಳ್ಳುವುದೇ ಅಲ್ಲದೆ, ಮೊಟ್ಟೆಯ ಶೇಕಡಾ 12ರಷ್ಟಿದ್ದು ಪೂರ್ಣ ಖನಿಜವೇ ಆದ ಮೊಟ್ಟೆ ಚಿಪ್ಪನ್ನು ಉತ್ಪಾದಿಸಲೂ ಖನಿಜಗಳು ಬೇಕು. ಸಸಾರಜನಕ ಹಾಗೂ ಇತರ ಆಹಾರಾಂಶಗಳನ್ನು ಜೀರ್ಣಿಸಿಕೊಳ್ಳಲು ಖನಿಜಗಳೂ ಸಹಾಯ ಮಾಡುತ್ತವೆಂದು ಹೇಳುತ್ತಾರೆ. ಖನಿಜಗಳ ಮುಖ್ಯ ಮೂಲಗಳೆಂದರೆ: ಸಿಂಪಿಚಿಪ್ಪುಗಳು, ಮೂಳೆ ಆಹಾರ, ಸುಣ್ಣಕಲ್ಲು, ಅಡಿಗೆ ಉಪ್ಪು ಮತ್ತು ಇತರ ಉಪ್ಪುಗಳು.

ಸಿಂಪಿಚಿಪ್ಪು (ನದಿಚಿಪ್ಪು): ಸಿಂಪಿಚಿಪ್ಪು ಕ್ಯಾಲ್ಸಿಯಂ ಮುಖ್ಯಮೂಲ ಚಿಪ್ಪುಗಳನ್ನು ಪುಡಿಮಾಡಿ ಕೋಳಿಗಳಿಗೆ ಸುಲಭವಾಗಿ ಸಿಗುವಂತೆ ಅನುಕೂಲಕರವಾದ ತೊಟ್ಟಿಯಲ್ಲಿಟ್ಟು ಮೇಯಿಸುವುದು ಪುಡಿ ಮೇವಿನೊಂದಿಗೆ ಬೆರೆಸುವುದಕ್ಕಿಂತ ಉತ್ತಮ.

ಮೂಳೆ (ಎಲುಬು) ಪುಡಿ: ಮೂಳೆಪುಡಿ ಸುಣ್ಣದ ಫಾಸ್ಫೇಟಿನ ಮುಖ್ಯ ಮೂಳ; ಇದನ್ನೇ ಪ್ರತ್ಯೇಕವಾಗಿ ಮೇಯಿಸಬಹುದು. ಆದರೆ ಪುಡಿ ಆಹಾರದ ಘಟಕವಾಗಿ ದಿನದ ಎಲ್ಲ ಕಾಲಗಳಲ್ಲೂ ಸಿಗುವಂತೆ ಇಡುವುದು ಉತ್ತಮ.

ಸುಣ್ಣಕಲ್ಲು ಹರಳುಗಳು: ಸುಣ್ಣಕಲ್ಲು ಚಿಪ್ಪು ರಚನೆಯಾಗುವ ಪದಾರ್ಥಗಳ ಸೊಗಸಾದ ಮೂಲ.

ಅಡಿಗೆ ಉಪ್ಪು: ದಿನಸಿನ ರುಚಿಯನ್ನು ಹೆಚ್ಚಿಸುವುದರ ಜೊತೆಗೆ ಜೀರ್ಣಕ್ರಿಯೆಗೂ ಸಹಾಯ ಮಾಡುವುದರಿಂದ ಅಡಿಗೆ ಉಪ್ಪು ಅತ್ಯಾವಶ್ಯಕ. ಇದು ಬಾಯಾರಿಕೆಯನ್ನೂ ಹೆಚ್ಚಿಸುತ್ತದೆ. ಖನಿಜ ಮಿಶ್ರಣದಲ್ಲಿ ಸೇರಿಸಿಲ್ಲದಿದ್ದರೆ ಇದನ್ನು ಪುಡಿ ಆಹಾರದೊಂದಿಗೆ ಶೇಕಡಾ 1ಕ್ಕಿಂತ ಹೆಚ್ಚಿಲ್ಲದಂತೆ ಸೇರಿಸಬೇಕು. ಮೀನಿನ ಆಹಾರ ಮತ್ತು ಮಾಂಸಾಹಾರದಂತಹ ಉಪ್ಪು ಹಾಕಿದ ಪದಾರ್ಥಗಳನ್ನು ಕೊಟ್ಟಾಗ ಹೆಚ್ಚಿಗೆ ಉಪ್ಪನ್ನು ಹಾಕಬಾರದು.

ಮ್ಯಾಂಗನೀಸ್ ಲವಣಗಳು: ಅತಿ ಹೆಚ್ಚಾಗಿ ಉಪಯೋಗಿಸಲ್ಪಡುವ ಲವಣಗಳೆಂದರೆ ಮ್ಯಾಂಗನೀಸ್ ಸಲ್ಫೇಟ್ ಮತ್ತು ಮ್ಯಾಂಗನೀಸ್ ಕ್ಲೋರೈಡ್. ಕೋಳಿಗಳ ಮ್ಯಾಂಗನೀಸ್ ಅವಶ್ಯಕತೆಯನ್ನು ಪೂರೈಸಲು ಒಂದು ಟನ್ ಪುಡಿ ಆಹಾರಕ್ಕೆ ¼ ಪೌಂಡ್ ಮ್ಯಾಂಗನೀಸ್ ಸಲ್ಫೇಟ್ ಸೇರಿಸಬೇಕು. ಅಕ್ಕಿ ಹಾಗೂ ಅದರ ಉತ್ಪನ್ನಗಳು ಸಾಕಷ್ಟು ಮ್ಯಾಂಗನೀಸ್ ಹೊಂದಿರುವುದರಿಂದ ಅವುಗಳನ್ನು ಕೋಳಿಗಳಿಗೆ ಮೇಯಿಸುವುದಾದರೆ ಬೇರೆ ಮ್ಯಾಂಗನೀಸ್ ಲವಣಗಳನ್ನು ಸೇರಿಸುವ ಅವಶ್ಯಕತೆಯಿಲ್ಲ.

ಹರಳುಕಲ್ಲು: ಕೋಳಿಗಳಿಗೆ ಕೊಟ್ಟ ಆಹಾರ ಸರಿಯಾಗಿ ಉಪಯೋಗವಾಗಲು ಹರಳುಕಲ್ಲು ಅವಶ್ಯಕ. ಇದು 'ಎರೆಚೀಲ'ವನ್ನು ಸೇರಿ ಆಹಾರವನ್ನು ಪುಡಿ ಮಾಡಲು ಸಹಾಯಮಾಡುತ್ತದೆ. ಒಳ್ಳೆಯ ಹರಳುಕಲ್ಲು ಗಟ್ಟಿಯಾಗಿ ಹರಿತವಾಗಿರಬೇಕು ಹಾಗೂ ಇದು ಕೋಳಿಗಳಿಗೆ ಯಾವಾಗಲೂ ದೊರಕುವಂತಿರಬೇಕು. ಪುಡಿಮಾಡಿದ ಬಂಡೆ ಮತ್ತು ಕಲ್ಲುಗಳು ತೃಪ್ತಿದಾಯಕ.

ದಿನಸಿಗಳ ಗಣನೆ: ಕೋಳಿ ದಿನಸನ್ನು ಸರಿಯಾಗಿ ರೂಪಿಸುವುದಕ್ಕೆ (1) ವಿವಿಧ ಮೇವುಗಳ ಘಟಕಗಳಾದ ಆಹಾರಾಂಶಗಳ ಜೀರ್ಣವಾಗುವ ಸಾಮರ್ಥ್ಯ ಮತ್ತು (2) ದೇಹಪಾಲನೆ ಹಾಗೂ ಉತ್ಪಾದನೆಗೆ ಬೇಕಾಗುವ ಆಹಾರಾಂಶಗಳ ಪರಿಪೂರ್ಣ ಜ್ಞಾನ ಅವಶ್ಯಕ.

ಒಂದು ಒಳ್ಳೆಯ ಮತ್ತು ತೃಪ್ತಿದಾಯಕ ದಿನಸು ಆಗಲೇ ವಿವರಿಸಿದ ಗುಣಗಳನ್ನು ಹೊಂದಿರಬೇಕು. ಎಷ್ಟೇ ಆಹಾರಾಂಶಯುಕ್ತ ಆಹಾರವಾದರೂ ಯಾವ ಒಂದು ಆಹಾರವೂ ಎಲ್ಲ ಅವಶ್ಯಕ ಆಹಾರಾಂಶಗಳನ್ನು ಬೇಕಾದಷ್ಟು ಬೇಕಾದ ಪ್ರಮಾಣದಲ್ಲಿ ಹೊಂದಿರುವುದು ಸಾಧ್ಯವಿಲ್ಲ. ಈ ಕಾರಣದಿಂದಾಗಿ ವಿವಿಧ ರೀತಿಯ ಲಭ್ಯಮೇವುಗಳನ್ನು ಬೆರೆಸಬೇಕು. ಪ್ರತಿಯೊಂದು ಘಟಕದ ಪ್ರಮಾಣವೂ ಮೇವಿನ ಉದ್ದೇಶವನ್ನವಲಂಬಿಸಿ ಬದಲಾಗುತ್ತದೆ.

ಮೇಯಿಸುವ ವಿಧಾನಗಳು

ತೃಪ್ತಿದಾಯಕ ಬೆಳವಣಿಗೆ ಹಾಗೂ ಉತ್ಪಾದನೆಗೆ ಪರಿಪೂರ್ಣವಾದ, ಸರಿಯಾಗಿ ಸಮತೋಲ ಆಹಾರವನ್ನು ಮೇಯಿಸುವುದೊಂದೇ ಸಾಲದು. ಉತ್ತಮ ಪ್ರತಿಫಲಗಳನ್ನು ಪಡೆಯಲು ಮೇಯಿಸುವ ಸರಿಯಾದ ವಿಧಾನವನ್ನನುಸರಿಸುವುದೂ ಮುಖ್ಯವಾದುದು. ಈ ಕೆಳಕಂಡ ಪದ್ಧತಿಗಳನ್ನು ಪರಿಗಣಿಸಬಹುದು :

ಪೂರ್ಣಕಾಳು ಪದ್ಧತಿ: ರಸಭರಿತ ಹಸಿಹುಲ್ಲು ಅಥವಾ ಇತರ ಹಸುರು ಮೇವು ಸಿಗುತ್ತಿರುವ ಮರಿಗಳಿಗೆ ಕುಡಿಯಲು ಸಾಕಷ್ಟು ಕೆನೆತೆಗೆದ ಹಾಲು ಅಥವಾ ಮಜ್ಜಿಗೆ ಕೊಡುವುದು ಸಾಧ್ಯವಾದರೆ ಬರಿ ಧಾನ್ಯಗಳ ಆಹಾರದಿಂದಲೇ ತೃಪ್ತಿದಾಯಕ

ಬೆಳವಣಿಗೆಯನ್ನು ಹೊಂದಬಹುದು. ಕೆಲವು ಖನಿಜಗಳು ಮತ್ತು ಅನ್ನಾಂಗಗಳನ್ನು ಒದಗಿಸಿದಾಗ ಬಹುಶಃ 25 ಪೌಂಡ್ ಕೆನೆತೆಗೆದ ಹಾಲು ಅಥವಾ ಮಜ್ಜಿಗೆ ಒಂದು ದಿನಕ್ಕೆ 100 ಹೇಂಟೆಗಳಿಗೆ ಕೇವಲ ಧಾನ್ಯಾಹಾರ ಕೊಡುವುದರಿಂದ ಸಂಭವಿಸುವ ಸಸಾರಜನಕದ ಕೊರತೆಯನ್ನು ತುಂಬುತ್ತದೆ. ಆಹಾರದಲ್ಲಿ ಧಾನ್ಯಗಳನ್ನು ಬೀಸಿದ ಪುಡಿ, ಅವಶ್ಯಕವಾದ ಪ್ರಾಣಿಜನ್ಯ ಸಸಾರಜನಕಗಳು, ಖನಿಜಾಂಶಗಳು ಮತ್ತು ಅನ್ನಾಂಗ ಗಳು ಆಹಾರದಲ್ಲಿ ಸೇರಿದಾಗ ಮಾತ್ರ ಮೊಟ್ಟೆ ಉತ್ಪಾದನೆಯಲ್ಲಿ ಒಳ್ಳೆಯ ಪ್ರತಿಫಲ ಗಳನ್ನು ಪಡೆಯಬಹುದು.

ಕಾಳು ಮತ್ತು ಪುಡಿ ಪದ್ಧತಿ: ಬೆಳೆಯುತ್ತಿರುವ ಮರಿಗಳು ಮತ್ತು ಮೊಟ್ಟೆ ಯಿಡುತ್ತಿರುವ ಗುಂಪುಗಳಿಗೆ ಮೇಯಿಸುವ ಅತಿ ಜನಪ್ರಿಯವಾದ ಪದ್ಧತಿ ಎಂದರೆ ಕಾಳು ಮತ್ತು ಪುಡಿ ಪದ್ಧತಿ. ಈ ಪದ್ಧತಿಯಲ್ಲಿ ಕೋಳಿಗಳು ಒರಟು ಆಹಾರದ ಭಾಗವಾಗಿ ಕಾಳುಗಳು ಮತ್ತು ಸಸಾರಜನಕ ಖನಿಜ ಮತ್ತು ಅನ್ನಾಂಗಗಳು ಸೇರಿಸಿದ ಧಾನ್ಯಗಳು ಬೀಸಿದ ಪುಡಿ ಆಹಾರಗಳೆರಡರ ಮಿಶ್ರಣವನ್ನು ಪಡೆಯುತ್ತವೆ. ಕಾಳು ಗಳನ್ನು ಆಹಾರತಟ್ಟೆಗಳಲ್ಲಿ ಕೊಡುವುದು ಉತ್ತಮ; ಪುಡಿ ಆಹಾರವನ್ನು ಯಾವಾಗಲೂ ಹಾಳಾಗದಂತೆ ಚೆಲ್ಲಿಹೋಗದಂತೆ ನೋಡಿಕೊಳ್ಳಲು ರೂಪಿಸಿರುವ ಹಾಪರ್‌ಗಳಲ್ಲಿ ಉಣಿಸಬೇಕು. ಮರಿಗಳು ಆಹಾರದಲ್ಲಿ ಕಾಲಿಟ್ಟು ಅದನ್ನು ಕಲುಷಿತಗೊಳಿಸುವು ದನ್ನು ತಡೆಗಟ್ಟುವಂತಹ ಆಹಾರತಟ್ಟೆಗಳನ್ನು ಉಪಯೋಗಿಸುವುದು ಮುಖ್ಯವಾ ದುದು.

ಬೆಳೆಯುತ್ತಿರುವ ಮರಿಗಳಿಗೆ ಮೊದಲ ಕೆಲವು ವಾರಗಳು ಕೇವಲ ಪುಡಿಆಹಾರ ವನ್ನು ಕೊಡುವುದು ಸಾಮಾನ್ಯ ಪದ್ಧತಿ. ನಂತರ ಬಿರಕೆ ಧಾನ್ಯಗಳನ್ನು ಕೊಡುವು ದನ್ನು ಕೋಳಿ ಬೆಳೆದಂತೆ ಹೆಚ್ಚುಮಾಡುತ್ತ ಹೋಗಬೇಕು. ಮೊಟ್ಟೆಯಿಡುತ್ತಿರುವ ಗುಂಪಿಗೆ ಸಾಮಾನ್ಯವಾಗಿ ಪುಡಿ ಮತ್ತು ಧಾನ್ಯಗಳನ್ನು ಸಮಪ್ರಮಾಣದಲ್ಲಿ ಹೊಂದಿ ರುವ ಆಹಾರವನ್ನು ಕೊಡಬೇಕು. ವಿವಿಧ ವಯಸ್ಸುಗಳಲ್ಲಿ ಶಿಫಾರಸ್ಸು ಮಾಡುವ ಕಾಳು ಹಾಗೂ ಪುಡಿ ಆಹಾರಗಳ ಪ್ರಮಾಣವನ್ನು ಕೋಷ್ಟಕ 18ರಲ್ಲಿ ಕೊಡಲಾಗಿದೆ.

ಕೋಷ್ಟಕ 18

ಬೆಳೆಯುತ್ತಿರುವ ಮರಿಗಳಿಗೆ ಪುಡಿಮೇವು ಮತ್ತು ಕಾಳುಗಳ ಸುಮಾರು ಪ್ರಮಾಣ

ಮರಿಗಳ ವಯಸ್ಸು (ವಾರಗಳಲ್ಲಿ)	6	8	10	12	14	16	18	20
ಶೇಕಡಾ ಪುಡಿ	95	90	80	70	60	50	40	30
ಶೇಕಡಾ ಕಾಳು	5	10	20	30	40	50	60	70

ಪೂರ್ಣಪುಡಿ ಪದ್ಧತಿ: ಪೂರ್ಣಪುಡಿ ಪದ್ಧತಿ ಪ್ರಾಮುಖ್ಯತೆಯ ದೃಷ್ಟಿಯಿಂದ ಬಹುಶಃ ಎರಡನೆಯ ಸ್ಥಾನ ಪಡೆಯುತ್ತದೆ. ವಾಸ್ತವಿಕವಾಗಿ ಇದು ಕಾಳು ಮತ್ತು ಪುಡಿ ಪದ್ಧತಿಯಲ್ಲದೆ ಬೇರೆಲ್ಲ ಕಾಳುಗಳನ್ನು ಒಡೆಯದೇ ಕೊಡುವುದರ ಬದಲು ಬೀಸಿ ಪುಡಿ ಮೇವಿನೊಡನೆ ಬೆರೆಸಿಕೊಡಲ್ಪಡುತ್ತದೆ. ಆದಾಗ್ಯೂ ಪೂರ್ಣಪುಡಿ ಪದ್ಧತಿಯಲ್ಲಿ ಕಾಳುಗಳನ್ನು ನುಣ್ಣಗೆ ಬೀಸಬಾರದು.

ಕೋಳಿಗಳ ಸ್ಥಿತಿ ಹಾಗೂ ಹಸಿವಿಗೆ ತಕ್ಕಂತೆ ಮೇವಿನಲ್ಲಿ ಬದಲಾವಣೆಗಳನ್ನು ಮಾಡುವುದು ಸಾಧ್ಯವಿಲ್ಲದಿದ್ದರೂ ಸಹ ಪೂರ್ಣಪುಡಿ ಪದ್ಧತಿ ಅತಿ ಸರಳವಾದ, ಶ್ರಮ ಉಳಿತಾಯವಾಗುವ ಮೇಯಿಸುವ ಪದ್ಧತಿ. ಮೊಟ್ಟೆಯಿಡುತ್ತಿರುವ ಹೇಂಟೆಗಳಿಗೆ ಅಥವಾ ಬ್ಯಾಟರಿಗಳಲ್ಲಿಯ ಆಹಾರೋದ್ದೇಶದ ಕೋಳಿಗಳಿಗೆ ಪೂರ್ಣಪುಡಿ ಮೇಯಿಸುವುದು ಸೂಕ್ತವಾದುದು.

ಆರ್ದ್ರಪುಡಿ ಮೇವು ಮೇಯಿಸುವಿಕೆ: ಈ ಪದ್ಧತಿಗೆ ಹೆಚ್ಚಿನ ಶ್ರಮ ಹಾಗೂ ಕುಶಲತೆ ಬೇಕು, ಅಲ್ಲದೆ ಆರೋಗ್ಯಕರ ಪರಿಸರ ನಿರ್ವಹಣೆಯ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಈ ಎಲ್ಲ ತೊಂದರೆಗಳಿಂದಾಗಿ ದೊಡ್ಡ ಕೋಳಿ ಕೇಂದ್ರಗಳಿಗೆ ಈ ಪದ್ಧತಿ ಸೂಕ್ತವಲ್ಲವಾದುದರಿಂದ ಇದನ್ನು ಶಿಫಾರಸ್ಸು ಮಾಡಬಾರದು. ಆದಾಗ್ಯೂ ಹಳ್ಳಿಗಳ ಸಣ್ಣಕೇಂದ್ರಗಳಲ್ಲಿ ಈ ಪದ್ಧತಿ ಸ್ಥಾನಪಡೆದಿದೆ. ಅಡುಗೆ ಮನೆಯಲ್ಲಿ ಉಳಿದ ಪದಾರ್ಥಗಳು ಹಾಗೂ ತಿಂದುಳಿದ ಪದಾರ್ಥಗಳ ಸಾಕಷ್ಟು ಸಿಗುವ ಮನೆಹಿತ್ತಲ ಕೋಳಿಕೇಂದ್ರಗಳಲ್ಲಿ ಆರ್ದ್ರಪುಡಿ ಮೇವನ್ನೊದಗಿಸುವುದು ಸುಲಭ. ಪುಡಿಮೇವನ್ನು ನೀರು, ಕೆನೆತೆಗೆದ ಹಾಲು ಅಥವಾ ಮಜ್ಜಿಗೆಯಿಂದ ನೆನೆಸುವುದರಿಂದ ಅದರ ರುಚಿ ಹೆಚ್ಚಿ ಕೋಳಿಗಳು ಹೆಚ್ಚಿಗೆ ಮೇವು ತಿನ್ನುತ್ತವೆ. ಇದು ಬೆಳವಣಿಗೆ ಹಾಗೂ ಮೊಟ್ಟೆ ಉತ್ಪಾದನೆಯನ್ನು ಉತ್ತೇಜಿಸುತ್ತದೆ.

ಗುಳಿಗೆ ಪದ್ಧತಿ: ಒಣಪುಡಿ ಮಿಶ್ರಣವನ್ನು ಹೆಚ್ಚು ಒತ್ತಡದಲ್ಲಿ ಅದುಮಿ ಗುಳಿಗೆಗಳನ್ನು ತಯಾರಿಸುತ್ತಾರೆ. ಇವು ಉರುಳೆಯಾಕಾರವಾಗಿದ್ದು ಬಹಳ ಗಟ್ಟಿಯಾಗಿರುತ್ತವೆ ಮತ್ತು ಕೋಳಿಗಳ ವಯಸ್ಸನ್ನವಲಂಬಿಸಿ ಅವುಗಳ ಗಾತ್ರ ಹೆಚ್ಚುಕಡಮೆಯಾಗುತ್ತದೆ. ಕೋಳಿಸಾಕಾಣೆದಾರನ ದೃಷ್ಟಿಯಿಂದ ಅದರಲ್ಲೂ ಹಿಂದುಳಿದ ಕೋಳಿಸಾಕಣೆದಾರ ಹಾಗೂ ಸಣ್ಣರೈತನ ದೃಷ್ಟಿಯಿಂದ ಹೆಚ್ಚಿನ ಬೆಳವಣಿಗೆ ಮತ್ತು ಉತ್ಪಾದನೆಗೆ ಕೋಳಿಗಳಿಗೆ ಸಮತೋಲ ಆಹಾರವನ್ನು ಒದಗಿಸಲು ಇದು ಬಹಳ ಅನುಕೂಲಕರ ಪದ್ಧತಿ. ವಾಣಿಜ್ಯೋದ್ಯಮಿ ಕೋಳಿಸಾಕಣೆದಾರನಿಗೆ ಇದು ಸ್ವಲ್ಪಮಟ್ಟಿಗೆ ದಂಡಕಾರಿ. ಈ ಪದ್ಧತಿ ಕೋಳಿ ಆಹಾರಗಳ ಕಾರ್ಖಾನೆಯನ್ನು ರೂಪಿಸಲು ಮಾರ್ಗದರ್ಶನ ಮಾಡುತ್ತದೆ.

ಸ್ವ ಇಚ್ಛಾ ಪದ್ಧತಿ: ಈ ಪದ್ಧತಿಯಲ್ಲಿ ಪ್ರತ್ಯೇಕ ಪಾತ್ರೆಗಳಲ್ಲಿ — ಆಹಾರ ತಟ್ಟೆಗಳಾದರೆ ಮತ್ತೂ ಉತ್ತಮ — ಅನೇಕ ವಿಧದ ಆಹಾರಗಳನ್ನು ಕೋಳಿಗಳ ಮುಂದಿಡ

ಲ್ಪಡುತ್ತದೆ. ಇದು ಮರಿಗಳು ತಮಗೆ ಬೇಕಾದ ರೀತಿಯ ಆಹಾರವನ್ನು ಬೇಕಾದಷ್ಟು ಮೇಯುವ ಅವಕಾಶವೊದಗಿಸುತ್ತದೆ. ಇದಕ್ಕೆ ಅನೇಕ ಆಹಾರತಟ್ಟೆಗಳು ಬೇಕಾಗು ವುದರ ಜೊತೆಗೆ ಅವುಗಳನ್ನು ಭರ್ತಿಮಾಡಿಸಲು ಸಾಕಷ್ಟು ಸಮಯವೂ ವೆಚ್ಚವಾಗುವು ದಲ್ಲದೇ ಯಾವ ರೀತಿಯ ವಿಶೇಷ ಪ್ರಯೋಜನವೂ ಇಲ್ಲ. ಕೋಳಿಗಳು ಅವಶ್ಯಕವಾದ ಅಥವಾ ಅಪೇಕ್ಷಣೀಯವಾದ ಮಟ್ಟಗಳವರೆಗೂ ಅವುಗಳ ದಿನಸನ್ನು ಸಮತೋಲ ಮಾಡಿಕೊಳ್ಳುತ್ತವೆಯೇ ಎಂಬುದೂ ಅನುಮಾನಾಸ್ಪದವಾದ ವಿಷಯ.


ಮನೆ ಮಿಶ್ರಣ ಪದ್ಧತಿ: ರೈತರು ಕೋಳಿಆಹಾರವನ್ನು ಕೊಂಡುಕೊಳ್ಳುವ ಬದಲು ತಮ್ಮ ಜಮೀನಿನಲ್ಲೇ ಸಾಕಷ್ಟು ಕಾಳುಗಳನ್ನು ಬೆಳೆಯಬಹುದು. ಕಾಳುಗಳನ್ನು ಬೀಸಿ ಸೂತ್ರಕ್ಕೆ ತಕ್ಕಂತೆ ಬೇರೆ ಪುಡಿ ಆಹಾರವನ್ನು ತಯಾರಿಸಬಹುದು. ಆದರೆ ಇದಕ್ಕೆ ಸಸಾರಜನಕಗಳು, ಖನಿಜಗಳು ಮತ್ತು ಅನ್ನಾಂಗಗಳನ್ನು ಪೂರೈಸಬೇಕು.

(1) ಕೃಷಿ ಕ್ಷೇತ್ರಗಳಲ್ಲಿ ದೊರಕುವ ಮಜ್ಜಿಗೆ ಅಥವಾ ಕೆನೆತೆಗೆದ ಹಾಲು, (2) ರಕ್ಷಣಾಕ್ರಿಯೆಗೊಳಪಡಿಸಿದ ಹೈನಕ್ಷೇತ್ರಗಳಲ್ಲಿ ಸತ್ತ ಪ್ರಾಣಿಗಳ ಮಾಂಸ ಅಥವಾ ಗೋಸದನಗಳಿಂದ ದೊರೆತ ಮಾಂಸ, (3) ಕಡಮೆ ಬೆಲೆಗೆ ಸಿಗುವುದಾದರೆ ಮೀನುಗಳ ಪುಡಿ ಅಥವಾ ಕಸಾಯಿಖಾನೆ ಕೂಳೆಮಾಂಸ, ಮತ್ತು (4) ಕಡಮೆ ಬೆಲೆಯದ್ದಾಗಿ ಹೆಚ್ಚಿಗೆ ಸಾರಜನಕವನ್ನು ಹೊಂದಿರುವ ಎಣ್ಣೆಹಿಂಡಿಗಳ ಪೂರೈಕೆಯಿಂದ ಸಸಾರಜನಕ ಗಳನ್ನೊದಗಿಸಬಹುದು.

ಇದೇ ಅಧ್ಯಾಯದ ಪ್ರಾರಂಭದಲ್ಲಿ ಕೊಟ್ಟಿರುವ ಸೂತ್ರಕ್ಕೆ ತಕ್ಕಂತೆ ಕಡಮೆ ವೆಚ್ಚದಲ್ಲಿ ತೃಪ್ತಿದಾಯಕವಾದ ಖನಿಜಗಳ ಮಿಶ್ರಣವನ್ನು ತಯಾರಿಸಬಹುದು. ಹಸುರು ಮೇವಿಗೆ ಸಂಬಂಧಿಸಿದಂತೆ ರೈತ ಅವುಗಳನ್ನು ಬೆಳೆದು ಬೇಸಿಗೆ ಹಾಗೂ ತೀವ್ರ ಚಳಿಗಾಲಗಳಲ್ಲಿ ಒದಗಿಸಬಹುದು. ಅವಶ್ಯಕವಾದರೆ ನಂಬಿಕೆಗೆ ಅರ್ಹರಾದ ವ್ಯಾಪಾರಿಗಳಿಂದ ಪಡೆದ ಒಳ್ಳೆಯ ರೀತಿಯ ಶಾರ್ಕ್ ಮೀನೆಣ್ಣೆಯನ್ನೂ ಪೂರೈಸ ಬಹುದು.

ಆಹಾರದ ಅಗತ್ಯಗಳು

ಆಹಾರದ ಬೆಲೆ, ಮರಿಗಳನ್ನು ಸಾಕುವ ವೆಚ್ಚದ ಅರ್ಧಕ್ಕಿಂತ ಹೆಚ್ಚಿಗೆ ಭಾಗ ವಾಗುತ್ತದೆ. ಆದುದರಿಂದ ಪ್ರತಿಯೊಬ್ಬ ಕೋಳಿಸಾಕಣೆದಾರನೂ ಶರೀರದ ತೂಕದಲ್ಲಿ ಅಪೇಕ್ಷಿತ ಹೆಚ್ಚುವರಿಯನ್ನು ಪಡೆಯಲು ಬೇಕಾಗುವ ಮೇವಿನ ಗಾತ್ರದ ಬಗ್ಗೆ ಒಂದು ಕಲ್ಪನೆಯನ್ನು ಹೊಂದಿರುವುದು ಅವಶ್ಯಕ. ಎಷ್ಟರಮಟ್ಟಿಗೆ ಸಮತೋಲ ವಾಗಿದ್ದರೂ ಸಹ ಕೊಡುವ ಆಹಾರ ಸಾಲದೇ ಹೋದರೆ ಬೆಳವಣಿಗೆ ಕುಗ್ಗುತ್ತದೆ. ಆದುದರಿಂದ ತಿಂದ ಒಟ್ಟು ಆಹಾರದ ಗಾತ್ರಕ್ಕನುಗುಣವಾಗಿ ನಿರೀಕ್ಷಿಸಬಹುದಾದ ಕೋಳಿಮರಿಗಳ ಬೆಳೆಯುವ ವೇಗವನ್ನು ತಿಳಿದುಕೊಳ್ಳುವುದು ಅಗತ್ಯ.



ಚಿತ್ರ 101: ಶರೀರ ತೂಕದಲ್ಲಿನ ಹೆಚ್ಚಳ ಹಾಗೂ ಮೊಟ್ಟೆ ಉತ್ಪಾದನೆಗೆ ಮೇವಿನ ಅವಶ್ಯಕ ಪ್ರಮಾಣ.

Feed=7 ಪೌಂಡು ಮೇವು. 2 lb Broiler at 10 weeks=10 ವಾರಗಳಲ್ಲಿ 2 ಪೌಂಡು ಬ್ರಾಯ್ಲರ್,
b Feed=18 ಪೌಂಡು ಮೇವು. 3½ lb Pullet at 6 months=6 ತಿಂಗಳಲ್ಲಿ 3½ ಪೌಂಡಿನ ಮರಿಹೇಂಟೆ.
b Feed=90 ಪೌಂಡು ಮೇವು. 200 Eggs in One Year=ಒಂದು ವರ್ಷದಲ್ಲಿ 200 ಮೊಟ್ಟೆಗಳು.

ರೋಡ್‌ಐಲೆಂಡ್‌ರೆಡ್ ಮತ್ತು ಪ್ಲೈಮೂತ್‌ರಾಕ್‌ನಂತಹ ಸಾಮಾನ್ಯೋದ್ದೇಶದ ತಳಿಗಳು ಲೆಗ್‌ಹಾರ್ನ್‌ನಂತಹ ಮೊಟ್ಟೆ ಉತ್ಪಾದಕ ತಳಿಗಳಿಗಿಂತ ಬೇಗ ಬೆಳೆಯುತ್ತವೆ. ಆದುದರಿಂದ ಹೆಚ್ಚಿಗೆ ಮೇಯುತ್ತವೆ. ಗಂಡುಗಳು ಹೆಣ್ಣುಗಳಿಗಿಂತ ಹೆಚ್ಚಿಗೆ ಮೇದು ಬೇಗ ಬೆಳೆಯುತ್ತವೆ ಎಂಬುದು ಸ್ಥಿರೀಕರಿಸಿದ ಅಂಶ. ಮಿಶ್ರತಳಿ ಮರಿಗಳು ಮೊದಲ 10 ರಿಂದ 12 ವಾರಗಳವರೆಗೆ ಶುದ್ಧತಳಿ ಮರಿಗಳಿಗಿಂತ ಬೇಗ ಬೆಳೆಯುತ್ತವೆ. ಬೇರೆಲ್ಲ ಪರಿಸ್ಥಿತಿಗಳೂ ಸಮನಾಗಿದ್ದಾಗ ಒಂದುಕಡೆ ಕೂಡಿ ಬೆಳೆಸಿದ ಮರಿಗಳು ಸ್ವೇಚ್ಛೆಯಾಗಿ ಬಿಟ್ಟ ಮರಿಗಳಿಗಿಂತ ಬೇಗ ಬೆಳೆಯುತ್ತವೆ. ಯಾವುದೇ ಕೋಳಿ ಗುಂಪಿನಲ್ಲಾಗಲಿ ಮೊದಲ ಆರನೆಯ ವಾರದ ಕೊನೆಯವರೆಗೆ ಪ್ರತಿಕೋಳಿಯ ಶರೀರದ ತೂಕ ಎರಡು ವಾರಗಳಿಗೆ ತನ್ನ ಎರಡರಷ್ಟಾಗುತ್ತದೆ ಮತ್ತು ಅನಂತರ ಹೆಚ್ಚು ಮೇವನ್ನು ಉಪಯೋಗಿಸಿಕೊಂಡರೂ ತೂಕದಲ್ಲಿನ ಹೆಚ್ಚಳ ಕುಗ್ಗುತ್ತದೆ ಎಂಬುದು ಕೂಡ ಸತ್ಯ. 19ನೆಯ ಕೋಷ್ಟಕ, ಮರಿಯಾದಾಗಿನಿಂದ 24 ವಾರಗಳವರೆಗೆ ಎರಡು ವಾರಗಳ ಅಂತರದಲ್ಲಿ ವೈಟ್‌ಲೆಗ್‌ಹಾರ್ನ್ ಹಾಗೂ ಸಾಮಾನ್ಯೋದ್ದೇಶ ತಳಿಗಳ ಮರಿಹುಂಜ ಮತ್ತು ಮರಿಹೇಂಟೆಗಳ ಸರಾಸರಿ ತೂಕವನ್ನು ಪೌಂಡುಗಳಲ್ಲಿ ಕೊಡುತ್ತದೆ.

ಕೋಷ್ಟಕ 19

ವಾರಗಳ ಅಂತರದಲ್ಲಿ ವೈಟ್‌ಲೆಗ್‌ಹಾರ್ನ್ ಹಾಗೂ ಸಾಮಾನ್ಯ ಉದ್ದೇಶದ ತಳಿಯ ಹುಂಜ ಹಾಗೂ ಹೇಂಟೆಗಳ ಸರಾಸರಿ ತೂಕ (ಪೌಂಡ್‌ಗಳಲ್ಲಿ)

ವಯಸ್ಸು (ವಾರಗಳಲ್ಲಿ)	ವೈಟ್‌ಲೆಗ್‌ಹಾರ್ನ್		ಸಾಮಾನ್ಯ ಉದ್ದೇಶದ ತಳಿ	
	ಹುಂಜ	ಹೇಂಟೆ	ಹುಂಜ	ಹೇಂಟೆ
0	0.09	0.09	0.09	0.09
2	0.22	0.20	0.24	0.20
4	0.49	0.40	0.57	0.49
6	0.85	0.71	1.18	0.91
8	1.22	1.19	1.88	1.46
10	1.96	1.48	2.32	1.81
12	2.28	1.78	2.86	2.32
14	2.73	2.09	3.58	2.68
16	3.14	2.42	4.13	3.12
18	3.55	2.75	4.72	3.55
20	3.97	3.04	5.33	3.99
22	4.86	3.32	5.84	4.45
24	4.64	4.59	6.22	4.92

ಬೆಳವಣಿಗೆಯ ವೇಗ ಕನಿಷ್ಠಪಕ್ಷ ನಾಲ್ಕು ಅಂಶಗಳಿಂದ ಗಣನೀಯವಾಗಿ ಪ್ರಭಾವಿತವಾಗುತ್ತದೆ: (1) ನಿರ್ದಿಷ್ಟ ವಿಭೇದದ ಕೋಳಿಯ ಅನುವಂಶಿಕ ಸರಾಸರಿ ಗಾತ್ರ; (2) ಸ್ವಲ್ಪಮಟ್ಟಿಗೆ ಆಹಾರದ ರೀತಿಯಿಂದ ಪ್ರಭಾವಿತವಾಗುವ ದಿನೇದಿನೇ ಉಪಯೋಗಿಸಿಕೊಳ್ಳುವ ಮೇವಿನ ಪರಿಮಾಣ; (3) ಮೇವಿನಲ್ಲಿನ ಸಸಾರಜನಕ; ಮತ್ತು (4) ಮೇಲ್ವಿಚಾರಣಾ ಪದ್ಧತಿಗಳು. ಉದಾಹರಣೆಗೆ; ಕೋಳಿಗಳನ್ನು ಬಯಲಿನಲ್ಲಿ ಸಾಕುತ್ತಾರೆಯೇ ಅಥವಾ ಮನೆಯ ಒಂದು ನೆಲಗಟ್ಟಿಗೆ ಸೀಮಿತಗೊಳಿಸಿದೆಯೇ ಅಥವಾ ಗೂಡುಗಳಲ್ಲಿ ಅಥವಾ ಬ್ಯಾಟರಿಗಳಲ್ಲಿ ಬೆಳೆಸಿದ್ದಾರೆಯೇ ಎನ್ನುವ ಅಂಶಗಳು.

ಪ್ರತಿಯೊಬ್ಬ ಕೋಳಿಸಾಕಣೆದಾರನೂ ಒಂದು ನಿರ್ದಿಷ್ಟ ಸಂಖ್ಯೆಯ ಮರಿಗಳನ್ನು ಮಾರಾಟಕ್ಕೆ ತಯಾರಾಗುವ ವಯಸ್ಸಿನವರೆಗೆ ಅಥವಾ ಮರಿಹೇಂಟೆಗಳು ಮೊಟ್ಟೆಯಿಡಲು ಪ್ರಾರಂಭಮಾಡುವ ವಯಸ್ಸಿನವರೆಗೆ ಬೆಳೆಸಲು ಬೇಕಾಗುವ ಆಹಾರದ ಮೊತ್ತವನ್ನು ಲೆಕ್ಕಹಾಕುವ ಶಕ್ತಿಹೊಂದಿರುವುದು ಅವಶ್ಯಕ. ದೇಹದ ತೂಕದ ಒಂದು ನಿರ್ದಿಷ್ಟ ಹೆಚ್ಚಳಕ್ಕೆ ಹಾಗೂ ಮೊಟ್ಟೆಗಳ ಉತ್ಪಾದನೆಗೆ ಕೋಳಿಗಳಿಗೆ ಬೇಕಾಗುವ ಆಹಾರ ಅವಶ್ಯಕತೆಯನ್ನು ಚಿತ್ರ 101 ವಿವರಿಸುತ್ತದೆ. ವಿವಿಧ ಕಾಲಗಳಲ್ಲಿ ಬೇಕಾಗುವ ಆಹಾರ ಮತ್ತು ಮರಿಗಳು ಬೆಳೆದಂತೆ ಶರೀರದ ತೂಕ ಒಂದು ಪೌಂಡ್ ಹೆಚ್ಚಲು ಬೇಕಾಗುವ ಆಹಾರ ಪರಿಮಾಣವನ್ನು ಪೌಂಡುಗಳಲ್ಲಿ ಕೋಷ್ಟಕ 20ರಲ್ಲಿ ಕೊಡಲಾಗಿದೆ.

ಕೋಷ್ಟಕ 20

ಪ್ರತಿಕೋಳಿಯ ಸರಾಸರಿ ತೂಕ ಪೌಂಡ್‌ಗಳಲ್ಲಿ ಅದಕ್ಕೆ ಹೋಲಿಸಿ ವಿವಿಧ ವಯಸ್ಸುಗಳಲ್ಲಿ ಪ್ರತಿ ಪೌಂಡ್ ತೂಕಕ್ಕೆ ಬೇಕಾಗುವ ಸರಾಸರಿ ಆಹಾರದ ಅವಶ್ಯಕತೆ (ಪೌಂಡ್‌ಗಳಲ್ಲಿ)

	ವೈಟ್‌ಲೆಗ್‌ಹಾರ್ನ್‌ಗಳು			ಸಾಮಾನ್ಯ ಉದ್ದೇಶದ ತಳಿಗಳು		
ವಾರಗಳು	ಪ್ರತಿ ಕೋಳಿಯ ಸರಾಸರಿ ತೂಕ	ಪ್ರತಿ ಕೋಳಿಗೆ ಬೇಕಾಗುವ ಸರಾಸರಿ ಆಹಾರ	ಒಂದು ಪೌಂಡ್ ತೂಕಕ್ಕೆ ಬೇಕಾಗುವ ಸರಾಸರಿ ಆಹಾರ	ಪ್ರತಿ ಕೋಳಿಯ ಸರಾಸರಿ ತೂಕ	ಪ್ರತಿ ಕೋಳಿಗೆ ಬೇಕಾಗುವ ಸರಾಸರಿ ಆಹಾರ	ಒಂದು ಪೌಂಡ್ ತೂಕಕ್ಕೆ ಬೇಕಾಗುವ ಸರಾಸರಿ ಆಹಾರ
4	0.44	1.24	2.84	0.53	1.26	2.38
8	1.20	3.80	3.17	1.67	4.79	2.87
12	2.03	7.56	3.72	2.64	8.79	3.33
16	2.78	12.37	4.45	3.62	13.62	3.76
20	2.50	17.82	5.09	4.66	20.36	4.37
24	4.12	23.56	5.72	5.57	28.48	5.11

ಈ ಅಂಶಗಳ ಆಧಾರದ ಮೇಲೆ ಮರಿಗಳ ಗುಂಪಿಗೆ ಒಂದು ನಿರ್ದಿಷ್ಟ ವಯಸ್ಸಿನ ವರೆಗೆ ಬೇಕಾಗುವ ಆಹಾರ ಲೆಕ್ಕಹಾಕಬಹುದು. ಸ್ವಲ್ಪ ಹೆಚ್ಚುಕಡಮೆ ಹೇಂಟೆ, ಹುಂಜಗಳು ಸಮಾನ ಸಂಖ್ಯೆಯಲ್ಲಿರುವ 100 ಮರಿಗಳನ್ನು ಸಾಕಲು ಸುಮಾರಾಗಿ ಬೇಕಾಗಬಹುದಾದ ಆಹಾರದ ಪ್ರಮಾಣವನ್ನು ಕೋಷ್ಟಕ 21ರಲ್ಲಿ ಕೊಡಲಾಗಿದೆ:

ಕೋಷ್ಟಕ 21


ವಿವಿಧ ವಯಸ್ಸುಗಳಿಗೆ 100 ಕೋಳಿಮರಿಗಳನ್ನು (ಎರಡೂ ಲಿಂಗದ ಮರಿಗಳು ಸಮಪ್ರಮಾಣದಲ್ಲಿದ್ದಾಗ) ಬೆಳೆಸಲು ಬೇಕಾಗುವ ಸುಮಾರು ಆಹಾರ ಪ್ರಮಾಣ (ಪೌಂಡ್‌ಗಳಲ್ಲಿ)

ಕಾಲ	ವೈಟ್‌ಲೆಗ್‌ಹಾರ್ನ್‌ಗಳು	ಸಾಮಾನ್ಯ ಉದ್ದೇಶದ ತಳಿಗಳು
4 ವಾರಗಳವರೆಗೆ	110—140	115—145
8 ವಾರಗಳವರೆಗೆ	350—410	450—510
12 ವಾರಗಳವರೆಗೆ	720—780	830—930
16 ವಾರಗಳವರೆಗೆ	1180—1280	1290—1430
20 ವಾರಗಳವರೆಗೆ	1650—1900	1900—2150
24 ವಾರಗಳವರೆಗೆ	2200—2500	2700—3000

ಹುಂಜ ಹೇಂಟೆಗಳೆರಡೂ ಇರುವ ಗುಂಪನ್ನು ಸಾಕುವುದಕ್ಕಿಂತ ಬರೀ ಹೇಂಟೆ ಗಳನ್ನೇ ಸಾಕಿದರೆ ಕಡಮೆ ಆಹಾರ ಸಾಕಾಗುತ್ತದೆ.

ಮರಿಹೇಂಟೆಗಳನ್ನು ಮೇಯಿಸುವುದು: ಮರಿಹೇಂಟೆಗಳು ಮುಖ್ಯವಾಗಿ ಮುಂದಿನ ಮೊಟ್ಟೆ ಉತ್ಪಾದನೆಗಾಗಿ ಸಾಕಲ್ಪಡುತ್ತವೆ. ಆದುದರಿಂದ ಅವುಗಳು ಉತ್ಪಾದನೆಯಲ್ಲಿ ತೊಡಗುವ ವೇಳೆಗೆ ಚೆನ್ನಾಗಿ ಬೆಳೆದು ಆರೋಗ್ಯವಾಗುಳಿಯಲು ಸಾಧ್ಯವಾಗುವಂತೆ ಮೇಯಿಸಿ ರಕ್ಷಿಸಬೇಕು. ಸರಿಯಾದ ಸಮತೋಲ ಆಹಾರವನ್ನು ಪಡೆದ ಮರಿ ಹೇಂಟೆಗಳು ಸರಿಯಾಗಿ ಮೇಯಿಸದವುಗಳಿಗಿಂತ ಬೇಗ ಬೆಳೆಯುವುದೇ ಅಲ್ಲದೆ ಬೇಗ ಮೊಟ್ಟೆಯಿಡಲು ಪ್ರಾರಂಭಿಸುತ್ತವೆ (ಚಿತ್ರ 102). ಮರಿಹೇಂಟೆಗಳು ಅದರಲ್ಲೂ ಎಂಟು ವಾರಗಳನಂತರ ಮರಿಹುಂಜಗಳಿಲ್ಲದಿದ್ದರೆ ಹೆಚ್ಚಾಗಿ ಸಮಾನವಾಗಿ ಬೆಳೆಯು ತ್ತವೆ. ಆದುದರಿಂದ ಎಳೆಮರಿಗಳಲ್ಲಿಯೇ ಅಥವಾ ಭೇದ ಗೊತ್ತಾಗುವಷ್ಟಾದ ಕೂಡಲೇ ಹುಂಜ ಹೇಂಟೆಗಳನ್ನು ಪ್ರತ್ಯೇಕಿಸಿ, ಮರಿಹೇಂಟೆಗಳು ಆರರಿಂದ ಹತ್ತುವಾರ ಗಳೊಳಗಿರುವಾಗ ಅವುಗಳನ್ನು ಒಳ್ಳೆಯ ಬಯಲಿಗೆ ಬಿಡುವುದು ಒಳ್ಳೆಯದು. ಮರಿಹುಂಜಗಳನ್ನು 10 ರಿಂದ 13 ವಾರಗಳಲ್ಲಿ 'ಮೃದುಚಿಕಾರಕ' (ಬ್ರಾಯ್ಲರ್) ಗಳಾಗಿ ಮಾರುವಂತಿದ್ದರೆ ಹೆಚ್ಚಿನ ಸಸಾರಜನಕಯುಕ್ತ ಆಹಾರವನ್ನೂ ಅಥವಾ 5 ರಿಂದ 6 ತಿಂಗಳುಗಳಲ್ಲಿ ತಿನ್ನಲು ಮಾರುವಂತಿದ್ದರೆ ಸಸಾರಜನಕದ ಪ್ರಮಾಣ ಕಡಮೆ

ಇರುವ ಆಹಾರವನ್ನೂ ಮೇಯಿಸಬೇಕು. ಮರಿಹೇಂಟೆಗಳಿಗೆ ಆದರಲ್ಲೂ ಎಂಟುವಾರಗಳಾಗಿರುವ ಮರಿಹೇಂಟೆಗಳಿಗೆ ಶೇಕಡಾ 5 ರಿಂದ 16 ಸಸಾರಜನಕಯುಕ್ತ ಆಹಾರ ತೃಪ್ತಿದಾಯಕ.



ಚಿತ್ರ 102: ಬೆಳೆಯುವ ಕಾಲದಲ್ಲಿ ಸರಿಯಾಗಿ ಮೇಯಿಸಿದ ಮರಿಹೇಂಟೆ ಹಾಗೂ ಸರಿಯಾಗಿ ಮೇಯಿಸದ ಮರಿಹೇಂಟೆಗಳ ಉತ್ಪಾದನಾ ಸಾಮರ್ಥ್ಯದ ಹೋಲಿಕೆ [ಓಹಿಯೊ ಸ್ಟೇಟ್ ವಿಶ್ವವಿದ್ಯಾನಿಲಯದ ಅಗ್ರಿ. ಎಕ್ಸ್‌ಟೆನ್‌ಶನ್ ಸಮಿತಿ ಬುಲೆಟಿನ್ ಸಂಖ್ಯೆ 126 (1941) ರಿಂದ]

Eggs per month=ತಿಂಗಳಿಗೆ ಮೊಟ್ಟೆಗಳು; This bird represents those pullets which were well fed during the growing period=ಈ ಕೋಳಿಗಳು ಬೆಳೆಯುವ ಕಾಲದಲ್ಲಿ ಸರಿಯಾಗಿ ಮೇಯಿಸಿದ ಹೇಂಟೆಗಳನ್ನು ಪ್ರತಿನಿಧಿಸುತ್ತವೆ; This bird represents those pullets which were not well fed during the growing period=ಈ ಕೋಳಿಗಳು ಬೆಳೆಯುವ ಕಾಲದಲ್ಲಿ ಸರಿಯಾಗಿ ಮೇಯಿಸದ ಹೇಂಟೆಗಳನ್ನು ಪ್ರತಿನಿಧಿಸುತ್ತವೆ.

ಮರಿಹೇಂಟೆಗಳ ಅಭಿವೃದ್ಧಿಗೆ ಸೂಕ್ತ ಆಹಾರವೆಂದರೆ ಬೆಳೆದ ಕೋಳಿಗಳಿಗಾಗಿ ತಯಾರಿಸಿದ ಪುಡಿ ಮತ್ತು ಕಾಳು ಮಿಶ್ರಣ. ಶೇಕಡಾ 18 ರಿಂದ 20 ಸಸಾರಜನಕವಿರುವ ಪುಡಿಯನ್ನು ಕಾಳುಗಳ ಜೊತೆ ಸೇರಿಸಿಕೊಟ್ಟಾಗ ಆಹಾರದಲ್ಲಿನ ಸಸಾರಜನಕದ

ಪ್ರಮಾಣ ಶೇಕಡಾ 15 ಅಥವಾ 16 ಭಾಗವಾಗುತ್ತದೆ. ಕೆನೆತೆಗೆದ ಹಾಲು ಸಿಗುವಂತಿದ್ದರೆ ಬೆಳೆವ ಕೋಳಿಗಳ ಪುಡಿಮೇವಿನಲ್ಲಿ ಪ್ರಾಣಿಜನ್ಯ ಸಸಾರಜನಕವನ್ನು ಸೇರಿಸದಿರಬಹುದು.

ಮೊಟ್ಟೆಯಿಡುತ್ತಿರುವ ಗುಂಪನ್ನು ಮೇಯಿಸುವುದು: ಮರಿಹೇಂಟೆಗಳನ್ನು ಮೊಟ್ಟೆಯಿಡುವ ಮನೆಯಲ್ಲಿ ಬಿಟ್ಟಾಗಿನಿಂದ 10 ವಾರಗಳ ವಯಸ್ಸಿನವಾಗುವವರೆಗೆ ಅವುಗಳ ಬೆಳವಣಿಗೆ ಮುಂದುವರಿಯುವುದರಿಂದ ಆ ಕಾಲದಲ್ಲಿ ಅವುಗಳಿಗೆ ಹೆಚ್ಚಿನ ಆಹಾರ ಅವಶ್ಯಕ. ಕೋಳಿಗಳ ಶರೀರದ ತೂಕ, 100 ಹೇಂಟೆಗಳಿಂದ ಪ್ರತಿದಿನಕ್ಕೆ ಉತ್ಪಾದನೆಯಾಗುವ ಮೊಟ್ಟೆಗಳು, ದಿನದ ಉತ್ಪಾದನೆಯ ಶೇಕಡಾಂಶಗಳ ಆಧಾರದ ಮೇಲೆ 100 ಹೇಂಟೆಗಳಿಗೆ ಒಂದು ದಿನಕ್ಕೆ ಬೇಕಾಗುವ ಆಹಾರದ ಪ್ರಮಾಣವನ್ನು ಕೋಷ್ಟಕ 22 ಒದಗಿಸುತ್ತದೆ.

ಕೋಷ್ಟಕ 22

ಕೋಳಿಗಳ ಗಾತ್ರ ಮತ್ತು ನೂರುಕೋಳಿಗಳಿಂದ ದಿನದಲ್ಲಿ ಉತ್ಪಾದಿತವಾಗುವ ಮೊಟ್ಟೆಗಳ ಸಂಖ್ಯೆ ಇವುಗಳಿಗೆ ತಕ್ಕಂತೆ ನೂರು ಕೋಳಿಗಳಿಗೆ ದಿನಕ್ಕೆ ಬೇಕಾಗುವ ಸರಾಸರಿ ಆಹಾರ (ಪೌಂಡ್‌ಗಳಲ್ಲಿ)

ಶೇಕಡಾಂಶ ಉತ್ಪನ್ನ	ಶರೀರದ ತೂಕ (ಪೌಂಡುಗಳಲ್ಲಿ)				
	3	4	5	6	7
	100 ಕೋಳಿಗಳಿಗೆ ದಿನಕ್ಕೆ ಬೇಕಾಗುವ ಆಹಾರ (ಪೌಂಡ್‌ಗಳಲ್ಲಿ)				
0	12.8	15.5	17.9	20.2	22.3
10	14.2	16.9	19.3	21.6	23.7
20	15.6	18.3	20.7	23.0	25.1
30	17.1	19.8	22.2	24.5	26.6
40	18.5	21.2	23.6	25.9	28.0
50	19.9	22.6	25.0	27.3	29.4
60	21.3	24.0	26.4	28.7	30.8
70	22.7	25.4	27.8	30.1	32.2
80	24.2	26.9	29.3	31.6	33.7
90	25.6	28.3	30.0	33.0	35.1
100	27.0	29.7	32.1	34.4	36.5

(ಟಿ. ಸಿ. ಬೇಯರ್‌ಲೇ, ಮೆರಿಲ್ಯಾಂಡ್ ವಿಶ್ವವಿದ್ಯಾನಿಲಯ, 1941)

ಮೇಯಿಸುವ ಆಚರಣೆಗಳು

ಮರಿಗಳನ್ನು ರಕ್ಷಕದಲ್ಲಿಟ್ಟಕೂಡಲೇ ಅವುಗಳಿಗೆ ಮೊದಲಬಾರಿ ಆಹಾರ ಕೊಡಲಾಗುತ್ತದೆ. ಇದು ಮರಿಗಳು ಹೊರಬಂದ 36 ಗಂಟೆಗಳ ನಂತರ ನಡೆಯುತ್ತದೆ. ಈ ಕಾಲದಲ್ಲಿ ಅವುಗಳನ್ನು ಸ್ವಾಭಾವಿಕ ಅಥವಾ ಕೃತಕ ಪದ್ಧತಿಯಿಂದ ಮರಿಮಾಡಲ್ಪಟ್ಟಿದೆಯೇ ಎಂಬುದನ್ನನುಸರಿಸಿ ಅವುಗಳನ್ನು ಆಹಾರವಿಲ್ಲದೆ ಕಾವುಕೂರುವ ಮನೋವೃತ್ತಿಯುಳ್ಳ ಹೇಂಟೆಯ ಕೆಳಗೆ ಅಥವಾ ಕಾವುಕೊಡುವ ಯಂತ್ರದ ಮರಿಯಾಗುವ ತಟ್ಟೆಯಲ್ಲಿ ಬಿಡಲಾಗುತ್ತದೆ. ಮರಿಗಳನ್ನು ರಕ್ಷಕದಲ್ಲಿಟ್ಟಾಗ. ಕಸ, ಹಿಕ್ಕೆ ಅಥವಾ ಹತ್ತಿರದಲ್ಲಿ ಸಿಗುವ ಯಾವಯಾವುದೋ ಪದಾರ್ಥಗಳನ್ನು ತಿನ್ನುವುದನ್ನು ತಪ್ಪಿಸಲು ಆಹಾರ ಮತ್ತು ನೀರು ಸುಲಭವಾಗಿ ಸಿಗುವಂತಿರಬೇಕು. ಮರಿಗಳು ತಮ್ಮ ಜೀವನದ ಮೊದಲ ಕೆಲವುವಾರ ಸ್ವೀಕರಿಸುವ ಆಹಾರ ಅದರ ಬೆಳವಣಿಗೆ ಹಾಗೂ ಅಭಿವೃದ್ಧಿಯ



ಚಿತ್ರ 103: ರಕ್ಷಕಗಳಲ್ಲಿ ಮರಿಗಳನ್ನು ಮೇಯಿಸುವುದು.

ಮೇಲೆ ಮುಖ್ಯ ಪ್ರಭಾವವನ್ನು ಹೊಂದಿದೆ ಎಂದು ಪುನಃ ಹೇಳುವುದು ಅವಶ್ಯಕ. ಆದುದರಿಂದ ದಿನಸನ್ನು ಎಚ್ಚರಿಕೆಯಿಂದ ಸಂಯೋಜಿಸಬೇಕು ಮತ್ತು ಎಲ್ಲ ಅನ್ನಾಂಗ

ಗಳು ಹಾಗೂ ಶೇಕಡಾ 20ರಷ್ಟು ಸಸಾರಜನಕವನ್ನು ಮೇವು ಹೊಂದಿರಬೇಕು. ಇವೆಲ್ಲವನ್ನೂ ಧಾನ್ಯಗಳಿಂದಲೇ ಒದಗಿಸುವುದು ಸಾಧ್ಯವಿಲ್ಲ. ಆದುದರಿಂದ ಮರಿಗಳನ್ನು ಪೂರ್ಣಪುಡಿಮೇವಿನೊಂದಿಗೆ ಪ್ರಾರಂಭಿಸುವುದು ಅತ್ಯುತ್ತಮ. ಇದನ್ನೇ ಎರಡರಿಂದ ಮೂರುವಾರಗಳ ವಯಸ್ಸಾಗುವವರೆಗೂ ಮುಂದುವರಿಸಬೇಕು (ಚಿತ್ರ 103). ನಂತರ ಸೂಕ್ತ ಮಿಶ್ರಣವನ್ನು ಪ್ರಾರಂಭಿಸಬಹುದು. ಪ್ರಾರಂಭದಲ್ಲಿ ಕಾಳುಗಳ ನುಚ್ಚನ್ನು ಬಹಳ ಕಡಮೆ ಪ್ರಮಾಣದಲ್ಲಿ ಕೊಡಬೇಕು; ಮರಿಗಳು 12 ರಿಂದ 16 ವಾರ ವಯಸ್ಸಿನವಾಗುವ ಹೊತ್ತಿಗೆ ಪುಡಿ ಮತ್ತು ಕಾಳುಗಳನ್ನು ಸಮಪ್ರಮಾಣದಲ್ಲಿ ಕೊಡಬೇಕು. ಮರಿಗಳು ಪುಡಿಆಹಾರ ರೂಪಿಸುವಲ್ಲಿ ಸಸಾರಜನಕ ಶೇಕಡಾ 18 ರಿಂದ 20 ರಷ್ಟಿರುವಂತೆ ಗಮನವಹಿಸಿ ಸಾಧ್ಯವಾದಮಟ್ಟಿಗೂ ಸ್ಥಳೀಯವಾಗಿ ದೊರೆಯುವ ಕಾಳುಕಡ್ಡಿ ಪದಾರ್ಥಗಳನ್ನು ಉಪಯೋಗಿಸಬೇಕು. ಭಾರತದ ಕೆಲವು ಕೋಳಿಸಾಕಾಣಿಕಾ ಕೇಂದ್ರಗಳಲ್ಲಿ ಜಯಪ್ರದವಾಗಿ ಉಪಯೋಗಿಸಿರುವ ಕೆಲವು ಪುಡಿ ಆಹಾರಗಳ ಘಟಕಗಳನ್ನು ಕೆಳಗೆ ಕೊಡಲಾಗಿದೆ:

ಕಾಳು:

ಮುಸುಕಿನ ಜೋಳ (ಪುಡಿಮಾಡಿದ್ದು)	...	ತೂಕದ	1	ಭಾಗ
ಸಜ್ಜೆ	...	,,	1	,,
ಅಥವಾ				
ಮುಸುಕಿನ ಜೋಳ (ಪುಡಿಮಾಡಿದ್ದು)	...	,,	1	,,
ಅಕ್ಕಿ ಅಥವಾ ಜೋಳ (ನುಚ್ಚು)	...	,,	1	,,
ಅಥವಾ				
ಅಕ್ಕಿ ಅಥವಾ ಜೋಳ (ನುಚ್ಚು)	...	,,	1	,,
ರಾಗಿ	...	,,	1	,,

ಪುಡಿ:

ಗೋಧಿ ಬೂಸ (ತೌಡು)	...	,,	36	,,
ಮುಸುಕಿನ ಜೋಳದ ಪುಡಿ	...	,,	35	,,
ಬಾರ್ಲಿ ಹಿಟ್ಟು	...	,,	10	,,
ಕಡಲೆಕಾಯಿ (ಸೇಂಗಾ)ಹಿಂಡಿ ಪುಡಿ	...	,,	19	,,
ಮೀನುಗಳ ಪುಡಿ ಅಥವಾ ಮಾಂಸದ ಕೂಳೆ (ಕೆನೆತೆಗೆದ ಹಾಲು ಲಭ್ಯವಿಲ್ಲದಿದ್ದರೆ)	...	,,	25	,,
ಉಪ್ಪು	...	,,	1	,,
ಅಥವಾ				
ಗೋಧಿ ಬೂಸ (ತೌಡು)	...	,,	20	,,

ಮುಸುಕಿನ ಜೋಳದ ಹಿಟ್ಟು	...	,,	30	,,
ಬಾರ್ಲಿ ಹಿಟ್ಟು	...	,,	20	,,
ಕಡಲೆಕಾಯಿ (ಸೇಂಗಾ) ಹಿಂಡಿ ಹಿಟ್ಟು	...	,,	20	,,
ಮೀನುಗಳ ಪುಡಿ	...	,,	10	,,
ಸುಣ್ಣಕಲ್ಲು	...	,,	1	,,
ಉಪ್ಪು	...	,,	0.5	,,

ಕೆನೆತೆಗೆದ ಹಾಲು ಅಥವಾ ಮಜ್ಜಿಗೆ ಯಾವಾಗಲೂ ದೊರೆಯುವಂತಿರಬೇಕು. ಇದು ಲಭ್ಯವಿಲ್ಲದೇ ಹೋದಲ್ಲಿ ಮೀನಿನ ಆಹಾರವನ್ನು ಪ್ರತಿ 100 ಭಾಗಕ್ಕೆ 25 ಭಾಗದಷ್ಟು ಹೆಚ್ಚಿಸಬೇಕು ಅಥವಾ ಇದರ ಜಾಗದಲ್ಲಿ ಪ್ರತಿ 100 ಭಾಗಕ್ಕೆ 25 ಭಾಗದಷ್ಟು ಮಾಂಸದ ಕೂಳೆಯನ್ನು ಸೇರಿಸಬೇಕು. ಈ ಕೆಳಗಿನ ಸೂತ್ರದಂತೆ ಒಂದು ಒಳ್ಳೆಯ ಮೇವನ್ನು ತಯಾರಿಸಬಹುದು:

ಗೋಧಿ ಬೂಸ (ತೌಡು)	...	ತೂಕದ	40	ಭಾಗ
ರಾಗಿ ಹಿಟ್ಟು	...	,,	30	,,
ಕಡಲೆಕಾಯಿ (ಸೇಂಗಾ) ಹಿಂಡಿ	...	,,	18	,,
ಮೀನುಗಳ ಪುಡಿ	...	,,	20	,,
ಮೂಳೆ (ಎಲುಬು) ಪುಡಿ	...	,,	1	,,
ಉಪ್ಪು	...	,,	1	,,

ಕೆನೆತೆಗೆದ ಹಾಲು ದೊರೆತಂತೆ ಮೀನಿನ ಆಹಾರದ ಪ್ರಮಾಣವನ್ನು ಕಡಮೆಮಾಡಬೇಕು ಮತ್ತು ಕೆನೆತೆಗೆದ ಹಾಲು ಸಾಕಷ್ಟು ಪ್ರಮಾಣದಲ್ಲಿ ಎಲ್ಲ ಕಾಲದಲ್ಲಿಯೂ ದೊರೆಯುವಂತಿದ್ದರೆ ಮೀನಿನ ಆಹಾರವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬಹುದು. ಮಾಂಸದ ಕೂಳೆ, ಗೆದ್ದಲು ಅಥವಾ ರೇಷ್ಮೆ ಹುಳುಗಳ ಮರಿಗಳು ದೊರೆಯುವಂತಿದ್ದರೆ ಅವುಗಳು ಕೂಡ ಮೀನಿನ ಆಹಾರದ ಸ್ಥಾನವನ್ನು ತುಂಬಬಲ್ಲವು.

ಮರಿಗಳಿಗೆ ನೇರವಾಗಿ ಸೂರ್ಯರಶ್ಮಿ ಸಿಗುವಂತಿರಬೇಕು, ಇಲ್ಲದಿದ್ದರೆ ಪುಡಿ ಮೇವಿಗೆ ಶೇಕಡ ಒಂದರಷ್ಟು ಪಶುವೈದ್ಯಕೀಯ ಮಟ್ಟದ ಶಾರ್ಕ್ ಮೀನೆಣ್ಣೆಯನ್ನು ಸೇರಿಸಬೇಕು. ಸಣಬು, ಕುದುರೆ ಮಸಾಲೆ, ಸೊಪ್ಪು, ಚಿಗುರುಹುಲ್ಲು, ಕೋಸಿನಎಲೆಗಳು, ಬರ್ಸೀಮ್ ಮೊದಲಾದ ರಸಭರಿತ ಹಸುರು ಮೇವುಗಳನ್ನು, ಎರಡನೇವಾರದ ನಂತರ ಸಣ್ಣಗೆ ಕತ್ತರಿಸಿ ಪುಡಿಮೇವಿನ ಜೊತೆ ಬೆರೆಸಿ ಅಥವಾ ಪ್ರತ್ಯೇಕವಾಗಿ ಸಾಕಷ್ಟು ಪ್ರಮಾಣದಲ್ಲಿ ಕೊಡಬೇಕು.

ಮರಿಗಳಿಗೆ ಪ್ರಥಮ ಆಹಾರವನ್ನು, 12 ಮರಿಗಳಿಗೆ ಒಂದು ಡೆಸರ್ಟ್ ಚಮಚದಷ್ಟನ್ನು ಒಂದು ಹಳೆಯ ದಿನಪತ್ರಿಕೆಯ ಮೇಲೆ ಅಥವಾ ಹಲಗೆಯ ಮೇಲೆ ಇರಿಸಿ

ಕೊಡಬೇಕು. ಕಾಗದ ಅಥವಾ ಹಲಗೆಯನ್ನು ಬೆರಳತುದಿಯಿಂದ ನಿಧಾನವಾಗಿ ಕುಟ್ಟುವುದರಿಂದ ಮರಿಗಳು ಆಹಾರ ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸಬೇಕು. ಎಳೆಯ ಮರಿಗಳು ಮೇವು ತೆಗೆದುಕೊಳ್ಳುವುದನ್ನು ಕಲಿಯಲು ಅನುಕೂಲವಾಗುವಂತೆ ಮೇವು ಅವುಗಳಿಗೆ ಸುಲಭವಾಗಿ ಸಿಗುವಂತಿರಬೇಕು ಮತ್ತು ಮೇವು ಸಿಗುವ ಜಾಗ ದೊಡ್ಡದಾಗಿರಬೇಕು. ಮೊದಲ ಕೆಲವು ವಾರಗಳಲ್ಲಿ ಮರ ಅಥವಾ ಲೋಹದಿಂದ ಮಾಡಿದ ಸುಮಾರು ಒಂದು ಅಂಗುಲ ಆಳ ಹಾಗೂ ಎರಡರಿಂದ ಮೂರು ಅಂಗುಲ ಅಗಲವಾಗಿರುವ ಸಣ್ಣ ಮೇವ್ವಣಿಕೆಗಳನ್ನು ಉಪಯೋಗಿಸಬಹುದು. ಎರಡು ಮೂರು ವಾರಗಳ ನಂತರ ಮರಿಗಳು ಮೇಯುವುದನ್ನು ಕಲಿತುಕೊಂಡ ಮೇಲೆ ಮರಿಗಳು ಮೇವಿನೊಳಕ್ಕೆ ಕಾಲಿಡದಂತೆ ತಡೆಯಲು ಅಡ್ಡಪಟ್ಟಿ ಅಥವಾ ತಂತಿಬಲೆಯಿರುವ ದೊಡ್ಡ ಮೇವ್ವಣಿಕಗಳನ್ನು ಉಪಯೋಗಿಸಬಹುದು. ಈ ರೀತಿ ರಕ್ಷಿಸಲ್ಪಟ್ಟ ಮೇವ್ವಣಿಕಗಳು ಮೇವು ಅನಾವಶ್ಯಕವಾಗಿ ದಂಡವಾಗುವುದನ್ನು ತಪ್ಪಿಸುತ್ತದೆ ಮತ್ತು ಹಿಕ್ಕೆ ಮೇವಿನೊಡನೆ ಬೆರೆಯದಂತೆ ರಕ್ಷಿಸಿ ರೋಗಗಳು ಹರಡುವುದನ್ನು ತಡೆಯುತ್ತದೆ.

ಎರಡುವಾರಗಳವರೆಗೆ ಪ್ರತಿಮರಿಗೆ ಮೇವ್ವಣಿಕದ ಒಂದು ಅಂಗುಲ ಜಾಗ ಸಿಗುವಂತಿರಬೇಕು; ನಂತರ ಆ ಜಾಗ ಎರಡು ಅಂಗುಲದಷ್ಟಾಗಬೇಕು.




ಮೊದಲ ಒಂದೆರಡುಸಾರಿ ಮೇವನ್ನು ಹಾವರ್ ಒಳಗೆ ಕೊಡಬೇಕು. ನಂತರ ಮೇವು ಎಲ್ಲ ಮರಿಗಳಿಗೂ ಸುಲಭವಾಗಿ ಸಿಗುವಂತೆ ಮೇವ್ವಣಿಕಗಳನ್ನು ಹಾವರ್‌ನ ಸುತ್ತಲೂ ಇಡಬೇಕು. ರಕ್ಷಕ ಪೆಟ್ಟಿಗೆಯನ್ನುಪಯೋಗಿಸಿದಾಗ ಮೊದಲನೇ ವಾರದ ನಂತರ ಆ ಪೆಟ್ಟಿಗೆಯ ಹೊರಗೆ ಅದೇ ಉದ್ದೇಶಕ್ಕಾಗಿ ರೂಪಿಸಿರುವ ಹಲಗೆಯ ಮೇಲೆ ಮೇವು ಮತ್ತು ಕೆನೆತೆಗೆದ ಹಾಲು (ಅಥವಾ ನೀರು) ಇಡಬೇಕು. ಎಳೆಯಮರಿಗಳು ರಕ್ಷಕದಿಂದ ಬಹುದೂರ ಹೋಗದಂತೆ ಅದರ ಸುತ್ತಲೂ 10 ರಿಂದ 12 ಅಂಗುಲ ಎತ್ತರದ ಮರದ ಬೇಲಿ ಹಾಕಬೇಕು. ಮರಿಗಳು ಬೆಳೆದಂತೆ ಅವುಗಳ ಓಡಾಟದ ಜಾಗ ಹೆಚ್ಚುವಂತೆ ಬೇಲಿಯನ್ನು ಹಿಂದಕ್ಕೆ ಸರಿಸಬೇಕು. ಎರಡನೇ ವಾರದ ಅಂತ್ಯದಲ್ಲಿ ಬೇಲಿಯನ್ನು ಸಂಪೂರ್ಣವಾಗಿ ತೆಗೆದುಬಿಡಬೇಕು. ನೀರು ಅಥವಾ ಕೆನೆತೆಗೆದ ಹಾಲು ಮರಿಗಳಿಗೆ ಯಾವಾಗಲೂ ಸಿಗುವಂತಿರಬೇಕು ಮತ್ತು ಇವುಗಳನ್ನು ವಿಶೇಷ ಚಿಲುಮೆಯಲ್ಲಿ ಒದಗಿಸಬೇಕು.

ಮರಿಗಳು ಮೇವ್ವಣಿಕದಲ್ಲಿ ಮೇಯುವುದನ್ನು ಕಲಿತಕೂಡಲೇ ಮೇವ್ವಣಿಕ ಮತ್ತು ನೀರಿನ ಚಿಲುಮೆಗಳೆರಡನ್ನೂ ತಂತಿಬಲೆಯ ಜಗತಿಯ ಮೇಲಿಡುವುದು ಬಹಳ ಒಳ್ಳೆಯದು.

ಎಂಟು ಅಥವಾ ಹತ್ತುವಾರಗಳ ನಂತರ ಸಣ್ಣ ಮೇವ್ವಣಿಕಗಳ ಬದಲು ದೊಡ್ಡ ಮೇವ್ವಣಿಕಗಳನ್ನಿಡಬೇಕು. ಕೋಳಿಗಳನ್ನು ಬಯಲು ಅಥವಾ ಸುತ್ತಲೂ ಗೂಡುಗಳಿರುವ ಸಾಕುತಾಣಕ್ಕೆ ಬದಲಾಯಿಸಿದರೆ ಮೇವ್ವಣಿಕಗಳನ್ನು ಸರಿಯಾದ ರಕ್ಷಿತ ಜಾಗಗಳಲ್ಲಿಡಬೇಕು. ಎಂಟುವಾರಗಳ ನಂತರ ಪ್ರತಿ 10 ಕೋಳಿಗಳಿಗೆ ಕನಿಷ್ಠ ಒಂದು

ಸರಳ ಅಡಿ ಮೇವುಣಿಕೆ ಜಾಗ ಒದಗಿಸಬೇಕು. ಕೋಳಿಗಳನ್ನು ಒಳಗೇ ಕೂಡಬೇಕಾದಂಥ ಮಳೆಗಾಲದಲ್ಲಿ ಪ್ರತಿಯೊಂದು ರಕ್ಷಕ ಮನೆಯೊಳಗೂ ಒಂದೊಂದು ಮೇವುಣಿಕೆ ವಿಡುವುದು ಸಹಾಯಕಾರಿ. ಮರಿಗಳನ್ನು ಪಕ್ವತೆಯವರೆಗೆ ಬೆಳೆಸಲು ಬೇಕಾಗುವ ಸಲಕರಣೆಗಳನ್ನು ಚಿತ್ರ 104 ರಲ್ಲಿ ವಿವರಿಸಲಾಗಿದೆ.

ಮೊದಲಿನ ಕೆಲವು ವಾರಗಳಲ್ಲಿ ದಿನಕ್ಕೆ ನಾಲ್ಕುಸಾರಿ ಹೊಸಪುಡಿ ಆಹಾರವನ್ನೊದಗಿಸುವುದು ಸಾಧ್ಯವಾಗುವಷ್ಟು ಪ್ರಮಾಣದಲ್ಲಿ ಮಾತ್ರವೇ ಆಹಾರವನ್ನೊದಗಿಸುವುದು ಒಳ್ಳೆಯದು. ನಂತರ ಮೇವನ್ನು ಯಾವಾಗಲೂ ಕೋಳಿಗಳ ಮುಂದಿಟ್ಟಿರಬೇಕು. ಕೆಲವು ಸಂದರ್ಭಗಳಲ್ಲಿ ಪುಡಿಆಹಾರವನ್ನು ಸರಿಯಾಗಿ ತೆಗೆದುಕೊಳ್ಳುವಂತೆ

ಸಲಕರಣೆ	ಕೋಳಿಮರಿ ವಯಸ್ಸು	100 ಮರಿಗಳಿಗೆ
	 ONE DAY	2 ಮೇವುಪಾತ್ರೆಗಳು 2 ನೀರು ಚಿಲುಮೆಗಳು
	 TEN DAYS	2 ಮೇವುಪಾತ್ರೆಗಳು 2 ನೀರು ಚಿಲುಮೆಗಳು
		2 ಮೇವು ಪಾತ್ರೆಗಳು 2 ನೀರು ಚಿಲುಮೆಗಳು

ಚಿತ್ರ 104: ಮರಿಗಳನ್ನು ವಯಸ್ಕವಾಗುವವರೆಗೆ ಬೆಳೆಸಲು ಬೇಕಾಗುವ ಸಾಧನ ಸಾಮಗ್ರಿಗಳು.

One day=ಒಂದುದಿನ, Ten days=ಹತ್ತುದಿನಗಳು, Six weeks=ಆರುವಾರಗಳು, Important ½" space=ಮುಖ್ಯ ½" ಸ್ಥಳ, Side=ಪಕ್ಕ, End=ತುದಿ, Section=ವಿಭಾಗ, Lath-Fountain=ನೀರು ಚಿಲುಮೆ, 2"×2" Reel= "2×2"ಪಟ್ಟಿ, Wood=ಮರ, 26 gauge metal=26 ಗೇಜಿನ ತಗಡು, Wood Ends=ಮರದ ತುದಿಗಳು, Mash=ಜಾಳಿಗೆ, Water=ನೀರು, Metal ends=ತಗಡಿನ ತುದಿಗಳು, Section views=ವಿಭಾಗ ನೋಟಗಳು.

ಮಾಡಲು ಕಾಳಿನ ಭಾಗವನ್ನು ಕಡಮೆಮಾಡುವುದು ಅವಶ್ಯಕವಾಗಬಹುದು. ಮರಿಗಳು ಮೂರು ತಿಂಗಳಿನವಾದ ನಂತರ ಕಾಳುಗಳನ್ನು ಮೇಯುವುದರಲ್ಲಿ ಹೆಚ್ಚಿನ ಬದಲಾವಣೆ ಮಾಡಬಹುದು. ಮರಿಗಳಿಗೆ 10 ರಿಂದ 12 ವಾರಗಳಾದ ನಂತರ ಕಡಮೆ ವೆಚ್ಚದ ಬೆಳೆಯುವ ಮರಿಗಳ ಪುಡಿಆಹಾರವನ್ನು ಪ್ರಾರಂಭಿಕ ಪುಡಿ ಆಹಾರದ ಬದಲು ಉಪಯೋಗಿಸಬಹುದು.

ಮೊದಲನೆ ಸಲ ಆಹಾರ ಕೊಡುವ ಕಾಲದಲ್ಲೇ ಪುಡಿಆಹಾರದ ಮೇಲೆ ಸ್ವಲ್ಪ ಸಣ್ಣ ಮರಳನ್ನು ಸಮನಾಗಿ ಹರಡುವುದರ ಮೂಲಕ ಮರಳನ್ನು ಒದಗಿಸಬೇಕು. ನಂತರ ಅದನ್ನೇ ಒಂದು ಬೇರೆ ಪಾತ್ರೆಯಲ್ಲಿಡಬೇಕು. ಚಿಪ್ಪು ಅಥವಾ ಸುಣ್ಣಕಲ್ಲಿನ ಸಣ್ಣಕಣಗಳನ್ನು, ನಾಲ್ಕು ತಿಂಗಳುಗಳಾದ ಹೇಂಟೆಗಳಿಗೆ ಒದಗಿಸಬೇಕು.

ಮೊಟ್ಟೆ ಉತ್ಪಾದಕಗಳನ್ನು ಮೇಯಿಸುವಿಕೆ: ಹೇಂಟೆಗಳಿಗೆ ಸಮತೋಲ ಆಹಾರವನ್ನೊದಗಿಸಿದಾಗ, ಹಕ್ಕಿತಿನ್ನಲು ಬಿಟ್ಟ ಅಥವಾ ಸರಿಯಾಗಿ ಸಮತೋಲವಾಗದ ಆಹಾರವನ್ನು ಮೇದ ಹೇಂಟೆಗಳಿಗಿಂತ ಸಾಕಷ್ಟು ಹೆಚ್ಚಿಗೆ ಮೊಟ್ಟೆಗಳನ್ನು ಉತ್ಪಾದಿಸುತ್ತವೆ ಎಂದು ಅನುಭವ ತೋರಿಸಿಕೊಟ್ಟಿದೆ. ಅತ್ಯಂತ ಕಡಮೆ ವೆಚ್ಚದಲ್ಲಿ ಅತಿ ಹೆಚ್ಚಿನ ಮೊಟ್ಟೆಗಳನ್ನು ಪಡೆಯುವುದೇ ಮೊಟ್ಟೆ ಉತ್ಪಾದಕ ಹೇಂಟೆಗಳನ್ನು ಮೇಯಿಸುವುದರ ಮುಖ್ಯ ಗುರಿ. ಅತ್ಯುತ್ತಮ ಪ್ರತಿಫಲಗಳನ್ನು ಪಡೆಯಲು ಕಾಳು ಮತ್ತು ಪುಡಿಗಳನ್ನು ಸಮಪ್ರಮಾಣದಲ್ಲಿ ಮೇಯಿಸಬೇಕು. ಪುಡಿಆಹಾರ, ಸುಣ್ಣಕಲ್ಲು ಅಥವಾ ನದೀಚಿಪ್ಪು ಮತ್ತು ನೀರು ಕೋಳಿಗಳಿಗೆ ಯಾವಾಗಲೂ ಸಿಗುವಂತಿರಬೇಕು.

ಕಾಳುಗಳ ಮಿಶ್ರಣವನ್ನು ತಯಾರಿಸುವಲ್ಲಿ ವೆಚ್ಚವನ್ನು ಕಡಮೆಮಾಡಲು ಸ್ಥಳೀಯವಾಗಿ ದೊರೆಯುವ ಪದಾರ್ಥಗಳ ಕಡೆಗೆ ಹೆಚ್ಚು ಗಮನ ಕೊಡಬೇಕು.

ಆಹಾರವನ್ನು ರೂಪಿಸುವಲ್ಲಿ ಈ ಕೆಳಗಿನ ಸೂತ್ರಗಳು ಉಪಯೋಗಕಾರಿಯಾಗುತ್ತವೆ:

ಕಾಳುಗಳ ಮಿಶ್ರಣ: ಸ್ಥಳೀಯ ಲಭ್ಯತೆಯನ್ನನುಸರಿಸಿ ಜೋಳ, ಸಜ್ಜೆ, ಓಟ್, ಬಾರ್ಲಿ, ಮುಸುಕಿನ ಜೋಳ, ಅಕ್ಕಿ, ರಾಗಿ, ಗೋಧಿ ಮೊದಲಾದವುಗಳಲ್ಲಿ ಎರಡು ಅಥವಾ ಹೆಚ್ಚಿನವುಗಳ ಮಿಶ್ರಣ ಕಾಳುಗಳ ಮಿಶ್ರಣವನ್ನು ಪ್ರತಿ ಕೋಳಿಗೆ ದಿನಕ್ಕೆ ಒಂದು ಔನ್ಸ್ ದರದಲ್ಲಿ ಪ್ರತ್ಯೇಕವಾಗಿ ಒದಗಿಸಬೇಕು.

ಪುಡಿ:

ಗೋಧಿ ಬೂಸಾ (ತೌಡು)	...	ತೂಕದ 30 ಭಾಗ
ಮುಸುಕಿನ ಜೋಳದ ನುಚ್ಚು	...	,, 48 ,,
ಓಟ್ ನುಚ್ಚು	...	,, 10 ,,
ಕಡಲೆಕಾಯಿ ಹಿಂಡಿ ಪುಡಿ	...	,, 11.5 ,,
ಉಪ್ಪು	...	,, 0.5 ,,
ಒಟ್ಟು	...	,, 100 ,,

ಇದಕ್ಕೆ ಪ್ರತಿ 100 ಭಾಗಕ್ಕೆ 7 ರಿಂದ 10 ಭಾಗ ಮೀನಿನ ಪುಡಿ ಅಥವಾ ಒಂದು ಕೋಳಿಗೆ ದಿನಕ್ಕೆ 4 ಔನ್ಸ್‌ನಂತೆ ಕೆನೆತೆಗೆದ ಹಾಲು ಅಥವಾ ಮಜ್ಜಿಗೆ ಅಥವಾ ಒಂದು ಕೋಳಿಗೆ ದಿನಕ್ಕೆ 1 ಔನ್ಸ್‌ನಂತೆ ಮಾಂಸದ ಕೂಳೆಯನ್ನು ಸೇರಿಸಬೇಕು. ಮಾಂಸದ ಕೂಳೆಯನ್ನು ಯಾವಾಗಲೂ ಬೇಯಿಸಿ ಅರೆದು ಕೊಡಬೇಕು. ಇದನ್ನು ಕೋಳಿಗಳು ಕೂಡಲೇ ತಿನ್ನುವಂತೆ ಸ್ವಲ್ಪ ಪುಡಿಯೊಂದಿಗೆ ಸೇರಿಸಿಕೊಡುವುದು ಬಹಳ ಒಳ್ಳೆಯದು. ಇವುಗಳಲ್ಲದೇ ಕತ್ತರಿಸಿದ ರಸಭರಿತ ಹೊಸ ಹಸುರು ಮೇವನ್ನೊದಗಿಸ ಬೇಕು. ಪುಡಿಮಾಡಿದ ಕನಿಷ್ಠ ಪಕ್ಷ ಶೇಕಡಾ 35ರಷ್ಟು ಕ್ಯಾಲ್ಸಿಯಂ ಕಾರ್ಬೋನೇಟನ್ನು ಹೊಂದಿರುವ ಸುಡದ ಸುಣ್ಣಕಲ್ಲು ಕೋಳಿಗಳಿಗೆ ಯಾವಾಗಲೂ ಸಿಗುವಂತಿರಬೇಕು.

ಪುಡಿ ಆಹಾರವನ್ನು ಯಾವಾಗಲೂ ಹಾಪರ್‌ಗಳಲ್ಲಿಟ್ಟಿದ್ದು ಕಾಳುಗಳನ್ನು ದಿನದ ಮೊದಲನೇ ಹಾಗೂ ಕೊನೆಯ ಆಹಾರವಾಗಿ ದಿನಕ್ಕೆರಡು ಸಾರಿ ಬೆಳಿಗ್ಗೆ ಹಾಗೂ ಸಾಯಂಕಾಲ ಒಂದು ಕೋಳಿಗೆ ದಿನಕ್ಕೆ 2 ಔನ್ಸ್‌ನಂತೆ ಕಾಳುಗಳನ್ನೊದಗಿಸಬೇಕು.

ಕಾಳುಗಳ ಮಿಶ್ರಣ ಮೇಲಿನದರಂತೆಯೇ ಇದ್ದು, ಮತ್ತೊಂದು ಪುಡಿ ಮಿಶ್ರಣ ವನ್ನು ಕೆಳಗೆ ಕೊಡಲಾಗಿದೆ:

ಗೋಧಿ ಬೂಸಾ (ತೌಡು)	...	ತೂಕದ	15	ಭಾಗ
ಅಕ್ಕಿ ತೌಡು	...	,,	10	,,
ಮುಸುಕಿನ ಜೋಳದ ಹಿಟ್ಟು	...	,,	30	,,
ಬಾರ್ಲಿ ಹಿಟ್ಟು	...	,,	20	,,
ಕಡಲೆಕಾಯಿ (ಸೇಂಗಾ) ಹಿಂಡಿ	...	,,	18	,,
ಮೀನುಗಳ ಪುಡಿ	...	,,	5	,,
ಸುಣ್ಣಕಲ್ಲು	...	,,	1.5	,,
ಉಪ್ಪು	...	,,	0.5	,,
ಒಟ್ಟು	...	,,	100	,,

ಕಾಳುಗಳ ಮಿಶ್ರಣ ಮತ್ತು ಪುಡಿ ಆಹಾರವನ್ನು ಒಂದು ಕೋಳಿಗೆ ದಿನಕ್ಕೆ 2 ಔನ್ಸ್‌ನಂತೆ ಕೊಡಬೇಕು ಮತ್ತು ಕಾಲಕ್ಕೆ ತಕ್ಕಂತೆ ದೊರೆಯುವ ಹಸುರು ಮೇವನ್ನು ಒಂದು ಕೋಳಿಗೆ ದಿನಕ್ಕೆ ಒಂದರಿಂದ 2 ಔನ್ಸ್‌ನಂತೆ ಒದಗಿಸಬೇಕು. ಸುಣ್ಣಕಲ್ಲು ಅಥವಾ ನದೀ ಚಿಪ್ಪನ್ನು ಸಣ್ಣಸಣ್ಣ ಚೂರುಗಳಾಗಿ ಒಡೆಯಬೇಕು. ನಂತರ ಇದನ್ನು ಪ್ರತ್ಯೇಕವಾಗಿಯೇ ಮೇಯಿಸುವಂತಿದ್ದರೆ ಪುಡಿಆಹಾರದಲ್ಲಿ ಸೇರಿಸಿರಬಾರದು. ವಿವಿಧ ಘಟಕಗಳ ಬೆಲೆ ಹಾಗೂ ಲಭ್ಯತೆಯನ್ನನುಸರಿಸಿ ಪುಡಿಮಿಶ್ರಣವನ್ನು ಬದಲಾಯಿಸ ಬಹುದು. ಸಜ್ಜೆ, ಜೋಳ, ರಾಗಿ, ಕಡಲೆ, ಗೋಧಿ ಮತ್ತು ಅಕ್ಕಿಗಳು ಮುಸುಕಿನ ಜೋಳ ಮತ್ತು ಬಾರ್ಲಿಗಳ ಸ್ಥಾನವನ್ನು ಸಂಪೂರ್ಣವಾಗಿ ಆಕ್ರಮಿಸಬಲ್ಲವು. ಇದೇ ರೀತಿ

ಅಕ್ಕಿತೌಡು ಒಳ್ಳೆಯ ಗುಣಮಟ್ಟದ್ದಾಗಿದ್ದರೆ ಗೋಧಿ ಮತ್ತು ಅಕ್ಕಿತೌಡಿನ ಪ್ರಮಾಣವನ್ನು ಅದಲುಬದಲು ಮಾಡಬಹುದು. ಕಡಲೆಕಾಯಿ ಹಿಂಡಿಯನ್ನು ಕೂಡ ಸ್ವಲ್ಪ ಮಟ್ಟಿಗೆ ಅಥವಾ ಪೂರ್ತಿಯಾಗಿ ಅಗಸೆ, ಸಾರ್‌ಸನ್, ಹತ್ತಿಬೀಜ ಮತ್ತು ಕೊಬ್ಬರಿ ಹಿಂಡಿಗಳಿಂದ ಬದಲಾಯಿಸಬಹುದು. ಮೀನುಗಳ ಪುಡಿಯ ಬದಲು ಕೆನೆತೆಗೆದ ಹಾಲು, ಮಜ್ಜಿಗೆ, ಮಾಂಸದ ಕೂಳೆ, ಮಾಂಸಾಹಾರ, ರೇಷ್ಮೆಹುಳುಗಳ ಮರಿಗಳನ್ನು ಕೊಡಬಹುದು.

ದಕ್ಷಿಣ ಭಾರತದ ರಾಜ್ಯ ಸರ್ಕಾರ ಒಂದರ ಕೋಳಿಕೇಂದ್ರ ಒಂದರಲ್ಲಿ ಉಪಯುಕ್ತವೆಂದು ಕಂಡುಬಂದ ಆಹಾರ ರೀತಿಯನ್ನು ಕೆಳಗೆ ಕೊಡಲಾಗಿದೆ:

ಕಾಳು:

ರಾಗಿ	...	ತೂಕದ	1 ಭಾಗ
ಜೋಳ	...	,,	1 ,,
ಬತ್ತ	...	,,	1 ,,

ದಿನದ ಕೊನೆ ಆಹಾರವಾಗಿ ಒಂದು ಕೋಳಿಗೆ ದಿನಕ್ಕೆ 2 ಔನ್ಸ್‌ನಂತೆ ಮೇಲಿನ ಮಿಶ್ರಣವನ್ನು ಒಂದು ಪ್ರತ್ಯೇಕ ಹಾಪರ್‌ನಲ್ಲಿ ಕೊಡಬೇಕು.

ಪುಡಿ:

ರಾಗಿಹಿಟ್ಟು	...	ತೂಕದ	35 ಭಾಗ
ಗೋಧಿ ಬೂಸ (ತೌಡು)	...	,,	20 ,,
ಅಕ್ಕಿ ಬೂಸ (ತೌಡು)	...	,,	20 ,,
ಕಡಲೆಕಾಯಿ (ಸೇಂಗಾ) ಹಿಂಡಿ	...	,,	15 ,,
ಮೀನುಗಳ ಪುಡಿ	...	,,	10 ,,
ಒಟ್ಟು	...	,,	100 ,,

ಮೇಲೆ ಸೂಚಿಸಿರುವುದಲ್ಲದೆ 100 ಪೌಂಡ್ ಪುಡಿಗೆ ಒಂದು ಪೌಂಡ್‌ನಂತೆ ಮೂಳೆ(ಎಲುಬು)ಪುಡಿ ಹಾಗೂ ಅರ್ಧಪೌಂಡ್ ಉಪ್ಪು ಸೇರಿಸಬೇಕು: ಕುದುರೆ ಮಸಾಲೆ ಅಥವಾ ಯಾವುದಾದರೂ ತರಕಾರಿಯ ಚಿಗುರನ್ನು ಸಣ್ಣಗೆ ಕತ್ತರಿಸಿ ಒಂದು ಕೋಳಿಗೆ 2 ಔನ್ಸ್‌ನಂತೆ ಪ್ರತ್ಯೇಕವಾಗಿ ಮೇಯಿಸಬೇಕು ಹಾಗೂ ನೀರು ಮತ್ತು ಚಿಪ್ಪಿನ ಪುಡಿಯು ಯಾವಾಗಲೂ ದೊರಕುವಂತಿರಬೇಕು.

ಅಕ್ಕಿ ಮುಖ್ಯ ಬೆಳೆಯಾಗಿರುವ ಕೆಲವು ದೇಶಗಳಲ್ಲಿ ಮೊಟ್ಟೆ ಉತ್ಪಾದಕಗಳಿಗೆ ಉಪಯೋಗಿಸುವ ಪುಡಿಆಹಾರ ರಚನೆಯನ್ನು ಕೆಳಗೆ ಕೊಡಲಾಗಿದೆ:

ಫಿಲಿಪೈನ್ಸ್

ಮೊಟ್ಟೆ ಉತ್ಪಾದಕಗಳಿಗೆ ಧಾನ್ಯ ಮತ್ತು ಪುಡಿ ಆಹಾರ:

ಧಾನ್ಯ – ಅಕ್ಕಿ ಅಥವಾ ಮುಸುಕಿನ ಜೋಳ ಅಥವಾ ಎರಡರ ಪುಡಿ:

ಅಕ್ಕಿ ತೌಡು	...	ತೂಕದ 40 ಭಾಗ
ಕೊಬ್ಬರಿ ಹಿಂಡಿ ಪುಡಿ	...	,, 30 ,,
ಮುಸುಕಿನ ಜೋಳದ ನುಚ್ಚು	...	,, 10 ,,
ಮೀನುಗಳ ಪುಡಿ	...	,, 20 ,,
ಒಟ್ಟು	...	,, 100 ,,

ಈ ಮೇವನ್ನು ಒಂದು ಭಾಗ ಧಾನ್ಯ ಮತ್ತು ಒಂದು ಭಾಗ ಪುಡಿ ಆಹಾರದಂತೆ ಮೇಯಿಂಸಬೇಕು.

ಮೊಟ್ಟೆ ಉತ್ಪಾದಕಗಳಿಗೆ ಪೂರ್ಣಪುಡಿ:

ಮುಸುಕಿನ ಜೋಳದ ನುಚ್ಚು	...	ತೂಕದ 50 ಭಾಗ
ಅಕ್ಕಿ ತೌಡು	...	,, 20 ,,
ಕೊಬ್ಬರಿ ಹಿಂಡಿ ಪುಡಿ	...	,, 10 ,,
ಮೀನುಗಳ ಪುಡಿ	...	,, 20 ,,
ಒಟ್ಟು	...	,, 100 ,,

ಪೂರಕಗಳು:

ಪುಡಿಮಾಡಿದ ಚಿಪ್ಪು	...	ಶೇಕಡಾ 2
ಕಾಡ್‌ಮೀನೆಣ್ಣೆ	...	ಶೇಕಡಾ 2
ಹಸುರು ಮೇವು	...	ಎರಡು ದಿನಕ್ಕೊಮ್ಮೆ ಕೈತುಂಬ

ಕಾಡ್ ಮೀನೆಣ್ಣೆಯಿಲ್ಲದ ಮಿಶ್ರಣ ಗೂಡುಗಳಲ್ಲಿಟ್ಟ ಮೊಟ್ಟೆ ಉತ್ಪಾದಕಗಳಲ್ಲಿ ಅತ್ಯಂತ ಲಾಭದಾಯಕವೆಂದು ಕಂಡುಬಂದಿದೆ. ಈ ಮೇವನ್ನು ಪಡೆದ ಕೆಲವು ಹೇಂಟೆಗಳು ವರ್ಷಕ್ಕೆ 300ಕ್ಕೂ ಹೆಚ್ಚಿಗೆ ಮೊಟ್ಟೆಗಳನ್ನಿಟ್ಟಿರುವುದು. ಕಂಡುಬಂದಿದೆ ಫಿಲಿಪೈನ್ಸ್‌ನ ಪ್ರಾಣಿ ಉದ್ಯೋಗ ಪರಿಷತ್ತಿನವರು ಶಿಫಾರಸ್ಸು ಮಾಡಿರುವ ಪೂರ್ಣಪುಡಿ ಆಹಾರ ಮಿಶ್ರಣ ಕೆಳಕಂಡಂತಿದೆ:

ಮುಸುಕಿನ ಜೋಳದ ನುಚ್ಚು	...	ತೂಕದ 37 ಭಾಗ
ಅಕ್ಕಿ ತೌಡು	...	,, 30 ,,
ಕೊಬ್ಬರಿ ಹಿಂಡಿ ಪುಡಿ	...	,, 10 ,,
ಮೀನುಗಳ ಪುಡಿ	...	,, 10 ,,
ಸೋಯಬೀನ್ ಹಿಂಡಿ ಪುಡಿ	...	,, 5 ,,

ಒಡೆದ ಹಾಲಿನ ನೀರು	...	,,	3 ,,
ಹಿಪ್ಪಿ ಎಲೆ	...	,,	2 ,,
ಚಿಪ್ಪಿನ ಪುಡಿ	...	,,	2 ,,
ಕಾಡ್ ಮೀನೆಣ್ಣೆ	...	,,	0.5,,
ಉಪ್ಪು	...	,,	0.5,,
ಒಟ್ಟು	...	,,	100 ,,

ಜಪಾನ್

ಮೊಟ್ಟೆ ಉತ್ಪಾದಕಗಳಿಗೆ ಕಾಳು ಮತ್ತು ಪುಡಿ ಆಹಾರ:

ಮುಸುಕಿನ ಜೋಳ	...	ತೂಕದ	20 ಭಾಗ
ಗೋಧಿ	...	,,	18 ,,
ಗೆಣಸಿನ ಕುಳಿಮೇವು	...	,,	20 ,,
ಗೋಧಿ ಬೂಸ (ತೌಡು)	...	,,	14 ,,
ಅಕ್ಕಿ (ತೌಡು)	...	,,	11 ,,
ಮೀನುಗಳ ಪುಡಿ	...	,,	12 ,,
ರೇಷ್ಮೆಹುಳುಗಳ ಮರಿ	...	,,	5 ,,
ಒಟ್ಟು	...	,,	100 ,,

ಮೇಲಿನ ಮೇವನ್ನು ಪಡೆದ ಅನೇಕ ಹೇಂಟೆಗಳು ವರ್ಷಕ್ಕೆ 300ಕ್ಕೂ ಹೆಚ್ಚು ಮೊಟ್ಟೆಗಳನ್ನು ಉತ್ಪಾದಿಸಿರುವವೆಂದು ಹೇಳಲಾಗುತ್ತದೆ.

ಮಲಯಾ

ಮರಿಗಳಿಗೆ ಪುಡಿ:

ಹಳದಿ ಮುಸುಕಿನ ಜೋಳದ ಹಿಟ್ಟು	...	ತೂಕದ	40 ಭಾಗ
ಅಕ್ಕಿ ತೌಡು	...	,,	24 ,,
ಒಣಗಿಸಿದ ಕೆನೆತೆಗೆದ ಹಾಲು	...	,,	20 ,,
ಮೀನುಗಳ ಪುಡಿ	...	,,	10 ,,
ಒಣಗಿಸಿದ ಯೀಸ್ಟ್	...	,,	3 ,,
ರೆಡ್‌ಪಾಮ್ ಎಣ್ಣೆ	...	,,	2 ,,
ಉಪ್ಪು	...	,,	1 ,,
ಒಟ್ಟು	...	,,	100 ,,*

*ಜೀರ್ಣವಾಗುವ ಸಸಾರಜನಕ	...	15.4
ಶರ್ಕರಪಿಷ್ಟ (ಸ್ಟಾರ್ಚ್ ಇಕ್ವಿವಲೆಂಟ್)	...	71.9

ಬೆಳೆಯುತ್ತಿರುವ ಕೋಳಿಗಳಿಗೆ ಪುಡಿ:

ಹಳದಿ ಮುಸುಕಿನ ಜೋಳದ ಹಿಟ್ಟು	...	ತೂಕದ 53 ಭಾಗ
ಅಕ್ಕಿ ತೌಡು	...	,, 24 ,,
ಮೀನುಗಳ ಪುಡಿ	...	,, 10 ,,
ಕಡಲೆಕಾಯಿ (ಸೇಂಗಾ) ಹಿಂಡಿ	...	,, 10 ,,
ಮೂಳೆಪುಡಿ ಅಥವಾ ಸುಣ್ಣಕಲ್ಲು	...	,, 3 ,,
ಒಟ್ಟು	...	,, 100 ,,*

*ಜೀರ್ಣವಾಗುವ ಸಸಾರಜನಕ	...	13.2
ಶರ್ಕರಪಿಷ್ಟ	...	72.0

ಮೊಟ್ಟೆ ಉತ್ಪಾದಕಗಳಿಗೆ ಪುಡಿ:

ಹಳದಿ ಮುಸುಕಿನ ಜೋಳದ ಹಿಟ್ಟು	...	ತೂಕದ 30 ಭಾಗ
ಅಕ್ಕಿ ತೌಡು	...	,, 20 ,,
ಕೊಬ್ಬರಿ ಹಿಂಡಿ	...	,, 10 ,,
ಕಡಲೆಕಾಯಿ (ಸೇಂಗಾ) ಹಿಂಡಿ	...	,, 10 ,,
ಮೀನುಗಳ ಪುಡಿ	...	,, 24 ,,
ರೆಡ್‌ಪಾಮ್ ಎಣ್ಣೆ	...	,, 3 ,,
ಮೂಳೆ (ಎಲುಬು) ಪುಡಿ ಅಥವಾ ಸುಣ್ಣಕಲ್ಲು	...	,, 2 ,,
ಉಪ್ಪು	...	,, 1 ,,
ಒಟ್ಟು	...	,, 100 ,,*

*ಜೀರ್ಣವಾಗುವ ಸಸಾರಜನಕ	...	18.6
ಶರ್ಕರಪಿಷ್ಟ	...	72.0

ಥೈಲ್ಯಾಂಡ್

ಮೊಟ್ಟೆ ಉತ್ಪಾದಕಗಳಿಗೆ ಪೂರ್ಣಪುಡಿ ಆಹಾರ:

ಅಕ್ಕಿ ತೌಡು	...	60	ಕೆ.ಜಿ.
ಅಕ್ಕಿನುಚ್ಚು	...	8	,,
ಹಳದಿ ಮುಸುಕಿನ ಜೋಳದ ಹಿಟ್ಟು	...	8	,,
ಸೋಯಾಬೀನ್ ಹಿಂಡಿ ಪುಡಿ	...	4	,,
ಕಡಲೆಕಾಯಿ (ಸೇಂಗಾ) ಹಿಂಡಿ ಪುಡಿ	...	4	,,
ಕೊಬ್ಬರಿ ಹಿಂಡಿ ಪುಡಿ	...	5	,,
ಮೀನುಗಳ ಪುಡಿ	...	8	,,
ಚಿಪ್ಪಿನ ಪುಡಿ	...	2	,,
ಒಣಗಿದ ದ್ವಿದಳ ಕಾಳುಗಳ ಎಲೆ ಪುಡಿ	...	3.5	,,
ಉಪ್ಪು	...	11	,,
ಶಾರ್ಕ್ ಮೀನೆಣ್ಣೆ + ಡಿ ಅನ್ನಾಂಗ	...	1	,,
ಒಟ್ಟು :	...	114.5	,,

ಮೊಟ್ಟೆ ಉತ್ಪಾದನಾ ಸ್ಪರ್ಧೆಯಲ್ಲಿ ಮೇಲಿನ ಆಹಾರವನ್ನು ಪಡೆದ (ವೈಟ್ ಲೆಗ್‌ಹಾರ್ನ್) ಹೇಂಟೆಗಳು ವರ್ಷದಲ್ಲಿ 336 ಮೊಟ್ಟೆಗಳನ್ನು ಉತ್ಪಾದಿಸಿದವು.

ಸಿಂಗಪುರ್

ಕೋಳಿಗಳಿಗೆ ಧಾನ್ಯ ಹಾಗೂ ಪುಡಿ ಮಿಶ್ರಣ

ಎರಡು ತಿಂಗಳ ಕೆಳಗೆ				ಎರಡು ತಿಂಗಳ ಮೇಲೆ			
ಬಾರ್ಲಿ	ತೂಕದ	25	ಭಾಗ	ಕೊಬ್ಬರಿ ಹಿಂಡಿ	ತೂಕದ	10	ಭಾಗ
ಕೊಬ್ಬರಿ ಹಿಂಡಿ	,,	10	,,	ಕಡಲೆಕಾಯಿ(ಸೇಂಗಾ) ಹಿಂಡಿ	,,	5	,,
ಕಡಲೆಕಾಯಿ(ಸೇಂಗಾ) ಹಿಂಡಿ	,,	10	,,	ಅಕ್ಕಿ	,,	30	,,
ಅಕ್ಕಿತೌಡು	,,	20	,,	ಮುಸುಕಿನ ಜೋಳ	,,	20	,,
ಮುಸುಕಿನ ಜೋಳ	,,	20	,,	ಅಕ್ಕಿ ನುಚ್ಚು	,,	5	,,
ಮೀನಿನ ಪುಡಿ	,,	10	,,	ಬಾರ್ಲಿ	,,	10	,,
ಹಾಲು	,,	3	,,	ಕೆನೆತೆಗೆದ ಹಾಲು	,,	5	,,
ಕಾಡ್ ಮೀನೆಣ್ಣೆ	,,	2	,,	ಕಾಡ್ ಮೀನೆಣ್ಣೆ	,,	3	,,
				ಮೀನುಗಳ ಪುಡಿ	,,	10	,,
				ಖನಿಜಾಂಶಗಳು	,,	2	,,
ದಿನಸು:				ದಿನಸು:			
ಕೋಳಿಗೆ ದಿನಕ್ಕೆ 1ಂದ 2 ಔನ್ಸ್				ಕೋಳಿಗೆ ದಿನಕ್ಕೆ 2ಂದ 4 ಔನ್ಸ್			

ಅಥವಾ ಪ್ರತಿಯಾಗಿ

ಎರಡು ತಿಂಗಳ ಕೆಳಗೆ			ಎರಡು ತಿಂಗಳ ಮೇಲೆ		
ಅಕ್ಕಿ	ತೂಕದ 30	ಭಾಗ	ಅಕ್ಕಿ ತೌಡು	ತೂಕದ 30	ಭಾಗ
ಅಕ್ಕಿ ತೌಡು	,, 50	,,	ಮುಸುಕಿನ ಜೋಳ	,, 20	,,
ಕಡಲೆಕಾಯಿ(ನೆಲಗಾ) ಹಿಂಡಿ	,, 5	,,	ಬಾರ್ಲಿ	,, 10	,,
ಮೀನುಗಳ ಪುಡಿ	,, 10	,,	ಕೊಬ್ಬರಿ ಹಿಂಡಿ	,, 10	,,
ಕಾಡ್ ಮೀನೆಣ್ಣೆ	,, 3	,,	ಮೀನುಗಳ ಪುಡಿ	,, 10	,,
ಖನಿಜ ಮಿಶ್ರಣ	,, 2	,,	ತರಕಾರಿಗಳು	,, 18	,,
ಭತ್ತ ದಿನಸು: ದಿನಕ್ಕೆ 1 ಔನ್ಸ್			ಭತ್ತ ದಿನಸು: ದಿನಕ್ಕೆ 2 ಔನ್ಸ್		
ಪ್ರಾರಂಭಿಕಗಳು			**ಮೊಟ್ಟೆ ಉತ್ಪಾದಕಗಳು**		
ಮುಸುಕಿನ ಜೋಳ	ತೂಕದ 40	ಭಾಗ	ಮುಸುಕಿನ ಜೋಳ	ತೂಕದ 45	ಭಾಗ
ಅಕ್ಕಿ ತೌಡು	,, 25	,,	ಅಕ್ಕಿ ತೌಡು	,, 32	,,
ಗೋಧಿ	,, 15	,,	ಗೋಧಿ	,, 15	,,
ಸೋಯಾಬೀನ್	,, 15	,,	ಸೋಯಾಬೀನ್	,, 5	,,
ಮೀನುಗಳ ಪುಡಿ	,, 5	,,	ಮೀನು	,, 2	,,
ಪುಡಿಮಾಡಿದ ಸುಣ್ಣಕಲ್ಲು	,, 1	ಪೌಂಡ್	ಪುಡಿಮಾಡಿದ ಸುಣ್ಣಕಲ್ಲು	,, 2	ಪೌಂಡ್
ಉಪ್ಪು ಮತ್ತು ಮ್ಯಾಗ್ನೀಸಿಯಂ	,, ½	,,	ಉಪ್ಪು ಮತ್ತು ಮ್ಯಾಗ್ನೀಸಿಯಂ	,, ½	,,
ಆರೋಫಾಕ್	,, ½	,,	ಮಿನ್.ಎ.ಮಿಟ್.	,, ½	,,

ಹಳ್ಳಿಪ್ರದೇಶಗಳಿಗೆ ಮೇಯಿಸುವ ಸೂಚನೆಗಳು: ಈಗ ಹಳ್ಳಿಯ ಕೋಳಿಗಳಲ್ಲಿ ಹೆಚ್ಚಿನವು ದೇಸಿಕೋಳಿಗಳು. ಇವುಗಳನ್ನು ಸಣ್ಣ ಗುಂಪುಗಳಲ್ಲಿ ಬಯಲಿನಲ್ಲಿ ಸಾಕುತ್ತಾರೆ. ಇವು ಸ್ವಂತವಾಗಿ ಆಹಾರವನ್ನು ಹುಡುಕಿ ಅಥವಾ ತಿಪ್ಪೆ ಹಾಗೂ ಹಳ್ಳಿಯ ಬಯಲುಗಳನ್ನು ಕೆದಕಿ ಮೇಯಬೇಕು, ಇಲ್ಲಿ ಅವುಗಳಿಗೆ ಕೆಲವು ಧಾನ್ಯಗಳು, ಹುಲ್ಲು ಬೀಜ, ಕೀಟಗಳು, ಹುಳುಗಳು, ಹಸುರು ಹುಲ್ಲು ಮತ್ತು ಎಲೆಗಳು ದೊರೆಯುತ್ತವೆ. ಯಾವಾಗಲಾದರೊಮ್ಮೆ ರೈತನ ಹೆಂಡತಿ ಒಂದು ಹಿಡಿ ಧಾನ್ಯವನ್ನು ಎರಚುವುದು ಆಕಸ್ಮಿಕ. ಇಂತಹ ಸ್ಥಿತಿಯಲ್ಲಿ ಕೋಳಿಗಳಿಗೆ ಆಹಾರ ಸಾಲದಿರುವುದಲ್ಲದೆ ಸಿಗುವ ಆಹಾರವೂ ಸಮತೋಲವಾದುದಲ್ಲ. ಆದುದರಿಂದ ಕೋಳಿಗಳು, ನಿಧಾನವಾದ ಬೆಳವಣಿಗೆ, ನಿಧಾನ ಪಕ್ವತೆ ಮತ್ತು ಕೆಳಮಟ್ಟದ ಮೊಟ್ಟೆಉತ್ಪಾದನೆಯಂತಹ ಆಹಾರಾಂಶಗಳ ನ್ಯೂನತೆ ಮತ್ತು ಅಲಭ್ಯತೆಗಳ ಲಕ್ಷಣಗಳನ್ನು ತೋರಿಸುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ದೇಸಿಹೇಂಟೆಗಳ ವಾರ್ಷಿಕ ಸರಾಸರಿ ಮೊಟ್ಟೆ ಉತ್ಪಾದನೆ ಸುಮಾರು 50.

ಸರಿಯಾಗಿ ಮೇಯಿಸುವುದೊಂದರಿಂದಲೇ ದೇಶಿಕೋಳಿಗಳ ಉತ್ಪಾದನೆಯನ್ನು ಎರಡರಷ್ಟು ಮಾಡಬಹುದೆಂದು ಕಂಡುಬಂದಿದೆ ಮತ್ತು ಸಮತೋಲ ಆಹಾರದ ಜೊತೆಗೆ ಆಯ್ಕೆಮಾಡಿ ತಳಿ ಎಬ್ಬಿಸುವಿಕೆಯನ್ನು ಅನುಸರಿಸಿದರೆ ಮೊಟ್ಟೆಗಳ ಸಂಖ್ಯೆ ಹೆಚ್ಚುವುದಲ್ಲದೆ ಗಾತ್ರವೂ ದೊಡ್ಡದಾಗುತ್ತದೆ. ಆದುದರಿಂದ ಸರಿಯಾದ ಮೇಯಿಸುವ ಪದ್ಧತಿಗಳ ಅವಶ್ಯಕತೆ ನಿರ್ವಿವಾದ. ಹಳ್ಳಿಯಲ್ಲಿ ಅಭಿವೃದ್ಧಿಪಡಿಸಿದ ಕೋಳಿಗಳನ್ನು ಸೇರಿಸಿದಂತೆ ಮತ್ತು ದೇಶಿಕೋಳಿಗಳನ್ನು ಉತ್ತಮೀಕರಿಸಿದಂತೆ ಇದರ ಅವಶ್ಯಕತೆ ಹೆಚ್ಚುತ್ತದೆ.

ಹಳ್ಳಿಯಲ್ಲಿನ ಮೇಯಿಸುವ ಆಚರಣೆಗಳನ್ನು ಉತ್ತಮಗೊಳಿಸಲು ಕೆಲವು ಸಲಹೆಗಳನ್ನು ಕೆಳಗೆ ಕೊಡಲಾಗಿದೆ:

(1) ಗುಂಪಿನ ಪ್ರತಿಕೋಳಿಯೂ ದಿನಕ್ಕೆ ಕನಿಷ್ಠ ½ ದಿಂದ 1 ಔನ್ಸ್ ಸ್ಥಳೀಯ ಧಾನ್ಯಗಳ ಮಿಶ್ರಣವನ್ನು ಪಡೆಯಲು ಅನುಕೂಲಮಾಡಿಕೊಡಬೇಕು. ಈ ಮಿಶ್ರಣ ಕನಿಷ್ಠಪಕ್ಷ 2 ಔನ್ಸ್ ಆಗುವಷ್ಟು ರೈತನ ಮನೆಯಲ್ಲಿ ಸಿಗುವ ತೌಡು, ಧಾನ್ಯ, ಧಾನ್ಯದ ಹೊಟ್ಟು, ಅಡಿಗೆ ಮನೆಯಲ್ಲಿ ಉಳಿದ ಪದಾರ್ಥಗಳನ್ನು ಸೇರಿಸಬೇಕು.

(2) ಮನೆಯಲ್ಲಿ ಲಭ್ಯವಿದ್ದಷ್ಟೂ ಮಜ್ಜಿಗೆಯನ್ನು ಕೋಳಿಗಳಿಗೆ ಒದಗಿಸಬೇಕು.

(3) ಮನೆ ಮತ್ತು ಹೊಲಗಳಲ್ಲಿ ದೊರಕುವ ತರಕಾರಿಗಳ ಗಿಡಗಳು, ಎಲೆಗಳು ಮತ್ತು ಕೂಳೆ, ಚಿಗುರುಹುಲ್ಲು ಮೊದಲಾದ ಹಸುರುಮೇವನ್ನು ಕೋಳಿಗಳಿಗೆ ಉಪಯೋಗಿಸಬೇಕು. ಬೇಗ ಬೆಳೆಯುವ ಉಷ್ಣವಲಯದ ಬಹುವಾರ್ಷಿಕ ಮರಗಳಾದ ಮನುಷ್ಯನ ಉಪಯೋಗಕ್ಕೂ ತಕ್ಕುದಾದ ಅಗಸೆ ಮತ್ತು ಮುರುಂಗೋಮಿನುಟಿ ಫ್ಲೋರಗಳನ್ನು ಮನೆಯ ಹಿಂದುಗಡೆ ಬೆಳೆದು ಕೋಳಿಗಳಿಗೆ ಉಪಯೋಗಿಸಬೇಕು.

(4) ಲಭ್ಯವಿರುವ ಕಡೆಗಳಲ್ಲೆಲ್ಲ, ಮಾಂಸದ ಕೆರೆದ ಚೂರುಗಳು, ಮಾಂಸಕೂಳೆ, ಗೆದ್ದಲು, ಒಣಗಿಸಿ ಪುಡಿಮಾಡಿದ ರೇಷ್ಮೆಹುಳು ಮರಿಗಳನ್ನು ಕೋಳಿಗಳಿಗೆ ಉಪಯೋಗಿಸಬೇಕು.

(5) ಹಳ್ಳಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿರುವ ಅದರಲ್ಲೂ ಮಳೆಯ ನಂತರ ವಿಪರೀತವಾಗಿರುವ ರಾತ್ರಿಯ ಕೀಟಗಳನ್ನು ಹಿಡಿದು ಕೋಳಿಗಳಿಗೆ ತಿನ್ನಿಸಬಹುದು. ಈ ಕೀಟಗಳನ್ನು ಹಿಡಿಯುವ ಸುಲಭ ಪದ್ಧತಿಯೆಂದರೆ ಕೋಳಿಮನೆಯೊಳಗೆ ರಾತ್ರಿ ಕಾಲದಲ್ಲಿ ಒಂದು ಲಾಟೀನು ಅಥವಾ ಎಣ್ಣೆದೀಪವನ್ನಿಡುವುದು.* ಕೀಟಗಳು ದೀಪದಿಂದ ಆಕರ್ಷಿತವಾಗುತ್ತವೆ, ಮತ್ತು ಇವುಗಳನ್ನು ಕೋಳಿಗಳು ಆ ಕೂಡಲೇ

* ಈ ಪದ್ಧತಿ ತೃಪ್ತಿದಾಯಕವಾಗಿ ಕೆಲಸಮಾಡಿದೆ ಎಂದು ಡಾ. ಎಂ. ಎಸ್. ರಾಂಧವ ಸೂಚಿಸಿದ್ದಾರೆ.

ಅಥವಾ ಸತ್ತು ದೀಪದ ಸುತ್ತ ಬಿದ್ದಿರುವ ಕೀಟಗಳನ್ನು ಬೆಳಗಾದ ನಂತರ ತಿನ್ನುತ್ತವೆ. ಕೋಳಿಗಳು ಸುಟ್ಟುಕೊಳ್ಳುವುದನ್ನು ತಪ್ಪಿಸಲು ದೀಪದ ಸುತ್ತ ½ ಅಂಗುಲದ ಬಲೆ ಹಾಕುವುದು ಅವಶ್ಯಕ. ಕೋಳಿಮನೆಗಳನ್ನು ಹುಲ್ಲು, ತರಗು, ಒಣಕಡ್ಡಿ ಮೊದಲಾದ ಉರಿಯಬಲ್ಲ ಪದಾರ್ಥಗಳಿಂದ ಕಟ್ಟಿದಾಗ ಈ ರೀತಿ ತೆರೆದ ದೀಪವನ್ನು ಉಪಯೋಗಿಸ ಬಾರದು. ಇಂತಹ ಮನೆಗಳಲ್ಲಿ ಸತ್ತ ಹುಳುಗಳು ಬೆಳಿಗ್ಗೆ ಕೋಳಿಗಳಿಗೆ ಸಿಗುವಂತೆ ದೀಪವನ್ನು ಮನೆಯ ಆಚೆ ಇಡಬೇಕು.

ಅಧ್ಯಾಯ 11

ರೋಗಗಳು ಮತ್ತು ಅವುಗಳ ನಿಯಂತ್ರಣ

ಭಾರತದಲ್ಲಿ ಕೋಳಿ ಅಭಿವೃದ್ಧಿಯಲ್ಲಿನ ಅತ್ಯಂತ ದೊಡ್ಡ ಸಮಸ್ಯೆ ಎಂದರೆ ಕೋಳಿಗಳಲ್ಲಿ ಹೆಚ್ಚಿನ ಪ್ರಮಾಣ ಸಾವು ಹಾಗೂ ಅದರಿಂದಾಗಿ ಕೋಳಿಸಾಕಣೆದಾರನಿಗಾಗುವ ಅಪಾರಹಾನಿ. ರೋಗ ಹಾಗೂ ಇತರ ಕಾರಣಗಳಿಂದ ಪ್ರತಿವರ್ಷ ಶೇಕಡಾ 50 ರಷ್ಟು ಕೋಳಿಗಳು ಸಾಯುವುವೆಂದು ಅಂದಾಜುಮಾಡಲಾಗಿದೆ. ಈ ಅಪಾರ ಹಾನಿ ಮಿತವ್ಯಯಕಾರಿ ಉತ್ಪಾದನೆಯ ಮೂಲತತ್ವವನ್ನೇ ನಿಷ್ಪ್ರಯೋಜಕಗೊಳಿಸುತ್ತದೆ. ಅಲ್ಲದೆ ಸಾಕಣೆದಾರನು ಅನುಭವಿಸುವ ಆಘಾತ, ಕೋಳಿ ಉದ್ಯಮದ ವಿಸ್ತರಣೆಗೆ ಅಡ್ಡಿಯಾಗಿದೆ.

ಕೋಳಿ ಅಭಿವೃದ್ಧಿ ಯೋಜನೆಗಳಲ್ಲಿ ರೂಪಿಸಿಕೊಂಡಂತೆ ಕೋಳಿ ಉತ್ಪಾದನೆಯನ್ನು ತೀವ್ರಗೊಳಿಸಿದಾಗ ದೇಶದಲ್ಲಿ ರೋಗ ನಿಯಂತ್ರಣದ ಸಮಸ್ಯೆ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಉತ್ತಮೀಕರಿಸಿದ ತಳಿಎಬ್ಬಿಸುವಿಕೆ, ಮೇಯಿಸುವಿಕೆ ಹಾಗೂ ಮೇಲ್ವಿಚಾರಣೆಯಿಂದ ಹೇಂಟೆಗಳು ಯಾವಾಗಲಾದರೊಮ್ಮೆ ಮೊಟ್ಟೆ ಇಡುವುದರ ಬದಲು ವರ್ಷದ ಹೆಚ್ಚಿನ ಭಾಗ ಮೊಟ್ಟೆಯಿಡುತ್ತವೆ. ಈ ಕ್ರಿಯೆ ಅವುಗಳ ಮೇಲೆ ಹೆಚ್ಚಿನ ಒತ್ತಡವನ್ನು ಹೇರುವುದಲ್ಲದೆ ಅವುಗಳ ಮೀಸಲು ಸತ್ವವನ್ನೂ ಹೀರಿಬಿಡುತ್ತದೆ. ಇದರಿಂದಾಗಿ ರೋಗಗಳು, ಪರೋಪಜೀವಿಗಳು ಹಾಗೂ ಇತರ ಕಾರಣಗಳಿಂದಾಗುವ ಸಾವಿನ ಸಂಖ್ಯೆ ಕ್ರಮೇಣ ಹೆಚ್ಚುತ್ತದೆ. ಆದುದರಿಂದ ವಿಶೇಷ ರಕ್ಷಣಾ ಪದ್ಧತಿಗಳು ಅವಶ್ಯಕ.

ಕೋಳಿಗಳಿಗಾಗುವ ಹಾನಿ ಹಾಗೂ ಅವುಗಳ ವಿರುದ್ಧ ಅವಶ್ಯಕವಾದ ರಕ್ಷಣಾ ವ್ಯವಸ್ಥೆಗಳನ್ನು ಕೆಳಗಿನ ತಲೆಬರಹಗಳಿಂದ ವಿವೇಚಿಸಬಹುದು:

(1) **ಅಪಘಾತಗಳು:** ಅಪಘಾತಗಳಿಂದಾಗುವ ನಷ್ಟ, ಕೋಳಿಗಳಲ್ಲಿನ ಒಟ್ಟು ನಷ್ಟದ ಶೇಕಡಾ 50 ರಷ್ಟಾಗುತ್ತದೆ; ಇದರಲ್ಲಿ ಬಹುಪಾಲು ಭಕ್ಷಕ ಮತ್ತು ಕೋಳಿಗಳಿಂದಾಗುತ್ತದೆ.

(2) **ಸಾಂಕ್ರಾಮಿಕ ರೋಗಗಳು:** ವಿಷಾಣುಜೀವಿಗಳು, ಸ್ಪೈರೋಕೀಟಗಳು ಮತ್ತು ಏಕಾಣುಜೀವಿಗಳಿಂದ ಉಂಟಾಗುವ ರೋಗಗಳು ಕೋಳಿಗಳಲ್ಲಿನ ನಷ್ಟಗಳಲ್ಲಿ ಶೇಕಡಾ 40ಕ್ಕೆ ಕಾರಣವಾಗುತ್ತವೆ.

(3) **ಪರಾವಲಂಬಿಗಳು:** ವಿವಿಧ ಒಳ ಹಾಗೂ ಹೊರ ಪರಾವಲಂಬಿಗಳು ಕೋಳಿಗಳ ಸಾವಿಗೆ ಮೂರನೆಯ ಮುಖ್ಯಕಾರಣ.

(4) **ಸಾಂಕ್ರಾಮಿಕವಲ್ಲದ ರೋಗಗಳು:** ಇವುಗಳಲ್ಲಿ ಬಹುಪಾಲು (ಅ) ದೋಷಯುತ ಆಹಾರ (ಆ) ವಿವಿಧ ವಾತಾವರಣದ ಪ್ರಭಾವಗಳು ಮತ್ತು (ಇ) ಆನುವಂಶಿಕ ಅಂಶಗಳು.

ಭಕ್ಷಕಗಳು

ಅನೇಕ ಜಾತಿಯ ಭಕ್ಷಕಗಳು ಕೋಳಿಗಳ ಮೇಲೆ ದಾಳಿಮಾಡುತ್ತವೆ. ಇವು ಕಾಗೆ, ಹದ್ದು, ಗಿಡುಗ, ಡೇಗೆ, ಗೂಬೆ ಮೊದಲಾದ ಭಕ್ಷಕ ಕೋಳಿಗಳಾಗಿರಬಹುದು. ಇಲ್ಲವೇ ಬೆಕ್ಕು, ನರಿ, ಇಲಿ, ಹೆಗ್ಗಣ ಮತ್ತು ಮುಂಗುಸಿಗಳಂತಹ ಪ್ರಾಣಿಗಳಾಗಿರಬಹುದು. ನಾಗರಹಾವು ಮುಂತಾದ ವಿಷಹಾವುಗಳಿಂದ ಆಗುವ ನಷ್ಟ ಸಾಮಾನ್ಯವಾಗಿ ಅನಿರೀಕ್ಷಿತವಾದರೂ ಇವುಗಳನ್ನೂ ಭಕ್ಷಕಗಳೆಂದು ಗುಂಪುಗೊಳಿಸಬಹುದು. ಹಾವು ಅನಿರೀಕ್ಷಿತವಾಗಿಯೋ ಅಥವಾ ಯಾವುದಾದರೂ ಶತ್ರುವಿನಿಂದ ತಪ್ಪಿಸಿಕೊಳ್ಳಲೋಸುಗವೋ ಕೋಳಿಮನೆಯನ್ನು ಪ್ರವೇಶಿಸಬಹುದು. ಆಗ ಬೆದರಿರುವ ಕೋಳಿಗಳನ್ನು ಆತ್ಮರಕ್ಷಣೆಗಾಗಿಯೋ ಇಲ್ಲವೇ ಕೇವಲ ಸಿಟ್ಟಿನ ಭರದಲ್ಲಿಯೋ ಕಚ್ಚಬಹುದು. ಕೋಳಿಮನೆಯೊಳಗೆ ಪ್ರವೇಶಿಸಿದ ನಾಗರಹಾವು ಆಚೆಗೆ ಹೋಗುವ ಮೊದಲು ಗುಂಪಿನ ಅರ್ಧದಷ್ಟು ಕೋಳಿಗಳನ್ನು ಕಚ್ಚಿದ ನಿದರ್ಶನಗಳಿವೆ.

ಕಾವಿಗೆ ಕೂರುವ ಸ್ವಭಾವದ ಹೇಂಟೆಗಳು ಮರಿಗಳಿಗೆ ಅವಶ್ಯಕವಾದ ಶಾಖವನ್ನೊದಗಿಸುವುದರೊಂದಿಗೆ ಅವುಗಳನ್ನು ಭಕ್ಷಕ ಪ್ರಾಣಿಗಳಿಂದ ರಕ್ಷಿಸುತ್ತದೆ. ಆದರೆ ಮರಿಗಳನ್ನು ಕೃತಕ ರೀತಿಯ ಕಾವುಕೊಡುವಿಕೆಯಿಂದ ಸಾಕಿದಾಗ ಅವುಗಳ ರಕ್ಷಣೆಗೆ ವಿಶೇಷ ವ್ಯವಸ್ಥೆಗಳನ್ನು ಮಾಡಬೇಕಾದುದು ಅವಶ್ಯಕ.

ಬೆಕ್ಕು, ನರಿ ಮತ್ತು ಗುಳ್ಳೆನರಿಗಳಂತಹ ನಿಶಾಚರ ಶತ್ರುಗಳ ವಿರುದ್ಧ ರಕ್ಷಣೆ ಒದಗಿಸಲು ರಾತ್ರಿಹೊತ್ತು ಕೋಳಿಮನೆಗಳಿಗೆ ವಿಶೇಷ ಗಮನ ಕೊಡಬೇಕಾದುದು ಅವಶ್ಯಕ. ಈ ಉದ್ದೇಶಕ್ಕಾಗಿ ತಂತಿಬಲೆಗಳ ಉಪಯೋಗದ ಪ್ರಾಮುಖ್ಯತೆಯ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಇಷ್ಟೇ ಅಲ್ಲದೆ ಆಕ್ರಮಣಕಾರಿಗಳನ್ನು ಕಂಡಾಗ ಗುಂಡಿಟ್ಟು ಕೊಲ್ಲುವುದರಿಂದ ಒದಗಿಬಂದ ಅಪಾಯ ತಪ್ಪುವುದಲ್ಲದೆ ಮುಂದಿನ ಆಕ್ರಮಣಕಾರಿಗಳೂ ತಪ್ಪುತ್ತವೆ.

ಇಲಿ ಮತ್ತು ಹೆಗ್ಗಣಗಳು ಕೋಳಿಗಳಿಗೆ ಸಾಕಷ್ಟು ನಷ್ಟವನ್ನುಂಟುಮಾಡುತ್ತವೆ. ಕೋಳಿ ಆಹಾರವನ್ನು ಇಲಿಗಳಿಗೆ ಸಿಗದಂತೆ ಜಾಗರೂಕತೆಯಿಂದ ಶೇಖರಿಸದಿದ್ದರೆ ಇಲಿ ಹಾಗೂ ಹೆಗ್ಗಣಗಳು ಕೋಳಿ ಆಹಾರವನ್ನು ತಿಂದುಬಿಡುತ್ತವೆ. ಇಲಿಗಳು ವಿಶ್ರಮಿಸಿಕೊಳ್ಳುತ್ತಿರುವ ಕೋಳಿಗಳ ಮೇಲೆ ಆಕ್ರಮಣ ಮಾಡಿ ಹೊಟ್ಟೆಯ ಮೇಲೆ ಗಾಯಗಳನ್ನು ಮಾಡುತ್ತವೆ. ಇದರಿಂದ ಕೋಳಿಗಳಲ್ಲಿ ಸ್ವಜಾತಿ ಭಕ್ಷಣೆ ಪ್ರಾರಂಭವಾಗುತ್ತದೆ. ಕೋಳಿಮನೆಯಲ್ಲಿ ಹೆಚ್ಚಿನ ಆಹಾರ ದಾಸ್ತಾನು ಇಲ್ಲದಂತೆ ನೋಡಿಕೊಳ್ಳುವುದು, ಇಲಿ ಬೋನುಗಳ ಬಳಕೆ, ಆವರಣದಲ್ಲಿ ದೀಪ ಒದಗಿಸುವುದು ಮತ್ತು

ಕೋಳಿಗಳಿಗೆ ನಿರಪಾಯಕರವಾದ ಇಲಿ ಪಾಷಾಣಗಳನ್ನು ಉಪಯೋಗಿಸುವುದು ಮುಂತಾದವು ಈ ತೊಂದರೆಯನ್ನು ನಿವಾರಿಸಲು ಅನುಸರಿಸಬಹುದಾದ ಕೆಲವು ಮಾರ್ಗಗಳು.

ನಾಗರಹಾವು ಹಾಗೂ ಹಾವುಗಳನ್ನು ಕಂಡಕಂಡಲ್ಲಿ ಕೊಲ್ಲಬೇಕು. ಆವರಣವನ್ನು ಹಾವುಗಳು ಸೇರಿಕೊಳ್ಳಬಹುದಾದ ಬಿಲ, ಡೊಗರು ಪೊದೆ ಮುಂತಾದವುಗಳಿಗಾಗಿ ಪರೀಕ್ಷಿಸಿ ಅವುಗಳನ್ನು ನಾಶಮಾಡಬೇಕು.

ಸಾಂಕ್ರಾಮಿಕ ರೋಗಗಳು

ಕೋಳಿಗಳು ಹಲವಾರು ರೋಗಗಳಿಗೆ ಬಲಿಯಾಗುತ್ತವೆ. ಅವುಗಳಲ್ಲಿ ಕೆಲವು ಅತಿಶೀಘ್ರವಾಗಿ ಗುಂಪಿನಲ್ಲಿ ಹರಡಿ ಹೆಚ್ಚಿನ ಸಾವಿಗೆ ಕಾರಣವಾಗುತ್ತವೆ. ಈ ರೋಗ ಗಳು ರೋಗಾಣು, ವಿಷಾಣು ಮತ್ತು ಶಿಲೀಂಧ್ರಗಳಿಂದುಂಟಾಗುತ್ತವೆ ಹಾಗೂ ಸಾಮಾನ್ಯವಾಗಿ ಸಾಂಕ್ರಾಮಿಕ ಗುಣವುಳ್ಳವುಗಳಾಗಿರುತ್ತವೆ. ರೋಗಕಾರಕಗಳ ವಿರುದ್ಧ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು ಆವಶ್ಯಕ.

ಕೆಲವು ರೋಗಗ್ರಸ್ತ ಕೋಳಿಗಳ ರಕ್ಷಣೆಗಿಂತ ಗುಂಪಿನ ಆರೋಗ್ಯ ರಕ್ಷಣೆ ಪ್ರತಿಯೊಬ್ಬ ಕೋಳಿಸಾಕಣೆದಾರನ ಮುಖ್ಯ ಗುರಿಯಾಗಿರಬೇಕು. ಕಾರಣಗಳು ಸ್ವಯಂವೇದ್ಯ; ಅವುಗಳೆಂದರೆ:

(1) ಅತ್ಯಂತ ವಿಶೇಷ ತಳಿ ಸಂವರ್ಧನ ಗುಣಗಳಾವುವೂ ಇಲ್ಲದ ಯಾವ ಕೋಳಿಯೂ, ಚಿಕಿತ್ಸೆಗೆ ಬೇಕಾಗುವ ಹಣ ಮತ್ತು ಗಮನಗಳಿಗೆ ಅರ್ಹವಲ್ಲ.

(2) ಚಿಕಿತ್ಸೆ ಹೆಚ್ಚಿನ ಫಲಕಾರಿಯಲ್ಲ.

(3) ಕೋಳಿಗಳು ಚೇತರಿಸಿಕೊಂಡು ಬಾಹ್ಯ ನೋಟಕ್ಕೆ ಆರೋಗ್ಯವಾಗಿದ್ದರೂ ರೋಗಕಾರಕಗಳನ್ನು ಹೊಂದಿದ್ದು ಇತರ ಆರೋಗ್ಯವಂತ ಕೋಳಿಗಳಿಗೆ ರೋಗವನ್ನು ಹರಡಬಹುದು.

ಆದುದರಿಂದ ಕೋಳಿಗಳ ರೋಗ ಹತೋಟಿಯಲ್ಲಿ ಪ್ರತ್ಯೇಕ ಕೋಳಿ ರಕ್ಷಣೆಗಿಂತ ಗುಂಪಿನ ರಕ್ಷಣೆ ಮುಖ್ಯವಾದುದು. ಇದಕ್ಕಾಗಿ ಆರೋಗ್ಯ ಮತ್ತು ನೈರ್ಮಲ್ಯದ ಕಡೆಗೆ ಹೆಚ್ಚಿನ ಗಮನ ಅವಶ್ಯಕ.

ಕೋಳಿ ರಕ್ಷಣೆಯ ಎರಡು ಹಂತಗಳಿವೆ: ಮೊದಲನೆಯದಾಗಿ ಅವುಗಳ ಆರೋಗ್ಯ ರಕ್ಷಣೆ, ಎರಡನೆಯದಾಗಿ ಅವುಗಳನ್ನು ರೋಗಗಳ ವಿರುದ್ಧ ರಕ್ಷಿಸುವುದು. ಮೊದಲನೆಯ ಹಂತಕ್ಕೆ ಶರೀರದ ಪ್ರಮುಖ ಕಾರ್ಯಗಳು ಗರಿಷ್ಠ ದಕ್ಷತೆಯಿಂದ

ನಡೆಯುವಂತೆ ಪರಿಸರವನ್ನು ಉಂಟುಮಾಡಬೇಕು. ಎರಡನೆಯದು ರೋಗ ನಿರೋಧಕ ಕಾರ್ಯಗಳಿಗೆ ಸೇರಿದುದು.

ಶರೀರದ ಸಾಮರ್ಥ್ಯ ಮತ್ತು ಆರೋಗ್ಯವನ್ನು ಹೆಚ್ಚಿಸುವ ಅಂಶಗಳಲ್ಲಿ ಬಹು ಮುಖ್ಯವಾದವುಗಳೆಂದರೆ: (1) ಶರೀರ ಮತ್ತು ಪ್ರಕೃತಿಗಳ ದಾರ್ಢ್ಯ (2) ಸಾಕಷ್ಟು ಪೋಷಣೆ (3) ಪರಿಸರ ನೈರ್ಮಲ್ಯ, ಸರಿಯಾದ ಮನೆ ಮತ್ತು ಸರಿಯಾದ ನಿರ್ವಹಣೆ ಹಾಗೂ (4) ಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ನಿರ್ಮೂಲನ. ಮೊದಲ ಮೂರನ್ನು ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಆದುದರಿಂದ ಇಲ್ಲಿ ನಾವು ರೋಗ ನಿಯಂತ್ರಣಕ್ಕೆ ಗಮನ ಕೊಡೋಣ.

ಸಾಂಕ್ರಾಮಿಕ ರೋಗಗಳು ಪೂರ್ತಿ ಗುಂಪಿಗೇ ಹರಡುವುದರಿಂದ ಕೋಳಿಸಾಕಣೆ ದಾರನಿಗೆ ಇದು ಬಹಳ ಮುಖ್ಯ. ಆದುದರಿಂದ ಈ ರೋಗಗಳು ಹೇಗೆ ಕೋಳಿಯಿಂದ ಕೋಳಿಗೆ ಮತ್ತು ಸ್ಥಳದಿಂದ ಸ್ಥಳಕ್ಕೆ ಹರಡುತ್ತದೆಂಬುದನ್ನು ವಿವರಿಸುವುದು ಅವಶ್ಯಕ.

ಒಂದು ನಿರ್ದಿಷ್ಟ ರೋಗ ಕೋಳಿ ಗುಂಪನ್ನು ಹೇಗೆ ಪ್ರವೇಶಿಸಿತೆಂಬುದನ್ನು ತಿಳಿಯುವುದು ಯಾವಾಗಲೂ ಸುಲಭಸಾಧ್ಯವಲ್ಲ. ಆದರೆ ಯಾವಾಗಲೂ ರೋಗ ಮೂಲವಾಗಿ ವರ್ತಿಸುವ ರೋಗಪೀಡಿತ ಕೋಳಿಯಿಂದ ರೋಗ ಹರಡುತ್ತದೆಂಬುದು ನಿಶ್ಚಯ. 'ರಾನಿಕೇತ್' ಹಾಗೂ 'ಉಣ್ಣೆ(ಟಿಕ್)ಜ್ವರ'ಗಳಂತಹ ಸಾಂಕ್ರಾಮಿಕ ರೋಗಗಳು ಸಾಮಾನ್ಯವಾಗಿ ಹೊಸದಾಗಿ ಕೊಂಡ ಅಥವಾ ಪ್ರದರ್ಶನಗಳಿಂದ ಹಿಂದಿರುಗಿದ ಕೋಳಿಗಳಿಂದ ಆರೋಗ್ಯವಾಗಿರುವ ಕೋಳಿಗಳಿಗೆ ಹರಡುತ್ತವೆ. ಅಡುಗೆಗಾಗಿ ಕತ್ತರಿಸಿದ ಕೋಳಿಗಳ ಅನುಪಯುಕ್ತ ಭಾಗಗಳು ಕೆಲವು ಬಾರಿ ರೋಗವನ್ನು ಹರಡುತ್ತವೆ. ಕಾಡು ಕೋಳಿಗಳು, ಕೀಟಗಳು (ಉಣ್ಣೆ, ಮೈಟ್, ಮಿಡತೆ, ನೊಣ ಮತ್ತು ಸೊಳ್ಳೆ), ಪ್ರಾಣಿಗಳು (ನಾಯಿ, ಬೆಕ್ಕು ಮುಂತಾದವು) ಇವೇ ಅಲ್ಲದೆ ಮನುಷ್ಯರೂ (ಕೆಲಸಗಾರರು, ಪ್ರೇಕ್ಷಕರು, ಕೋಳಿಮಾರಾಟಗಾರರು ಹಾಗೂ ಕೊಂಡುಕೊಳ್ಳುವವರು) ಕೂಡ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರೋಗ ಹರಡಲು ಸಹಾಯಕರಾಗುತ್ತಾರೆ.

ಗುಂಪಿನಲ್ಲಿ ಕೋಳಿಯಿಂದ ಕೋಳಿಗೆ ರೋಗವು, ರೋಗತಪ್ತ ಕೋಳಿಗಳ ಜೊಲ್ಲು, ಹಿಕ್ಕೆಬೆರೆತ ನೀರು ಹಾಗೂ ಆಹಾರಗಳ ಮೂಲಕ, ಕಚ್ಚುವ ಕೀಟಗಳ ಮೂಲಕ ಮತ್ತು ಕೆಲವು ಬಾರಿ ಉಸಿರಾಟದಿಂದ ಕೂಡ ಹರಡುತ್ತದೆ. ಕೋಳಿಗಳನ್ನು ಸಾಕಲು ಉಪಯೋಗಿಸುವ ಭೂಮಿ ಸಾಮಾನ್ಯವಾಗಿ ರೋಗ ಹರಡುವ ಒಂದು ಮುಖ್ಯ ಮಾರ್ಗವಾಗಿರುತ್ತದೆ, ಅಷ್ಟೇ ಅಲ್ಲದೆ ರೋಗದ ದುಷ್ಪರಿಣಾಮಗಳು ಹೆಚ್ಚುಕಾಲ ಇರುವಂತೆ ಮಾಡುತ್ತದೆ.

ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು ಮತ್ತು ತಡೆಗಟ್ಟಲು ಕೆಳಗಿನ ಮಾರ್ಗಗಳನ್ನು ಅನುಸರಿಸಬಹುದು:

(1) ಹೊಸದಾಗಿ ಕೊಂಡ ಕೋಳಿಗಳು ಮತ್ತು ಪ್ರದರ್ಶನದಿಂದ ಹಿಂದಿರುಗಿದ ಎಲ್ಲ ಕೋಳಿಗಳನ್ನೂ ಎರಡುವಾರಗಳವರೆಗೆ ಪ್ರತ್ಯೇಕವಾಗಿಡಬೇಕು. ಅವುಗಳನ್ನು ನೋಡಿಕೊಳ್ಳಲು ಬೇರೆ ಕೆಲಸಗಾರರನ್ನು ನೇಮಿಸಬೇಕು.

(2) ಮಾರುಕಟ್ಟೆಯಿಂದ ತಂದು ಆಹಾರಕ್ಕಾಗಿ ಕೊಂದ ಕೋಳಿಗಳ ಎರೆಚೀಲ, ಕರುಳು, ಪಂಜ, ಕೊಕ್ಕು ಮುಂತಾದ ಅನುಪಯುಕ್ತ ಭಾಗಗಳನ್ನು ಕೋಳಿಗಳ ಗುಂಪಿಗೆ ಸಿಗುವಂತೆ ಎಸೆಯಬಾರದು. ಅವುಗಳನ್ನು ಸಾಧ್ಯವಾದಷ್ಟು ಆಳವಾಗಿ ಹೂಳಬೇಕು ಇಲ್ಲವೇ ಸುಡಬೇಕು.

(3) ಎಳೆಮರಿಗಳನ್ನು ದೊಡ್ಡ ಕೋಳಿಗಳೊಂದಿಗೆ ಸೇರಿಸಬಾರದು. ದೊಡ್ಡ ಕೋಳಿಗಳನ್ನು ಮೊದಲು ಸಾಕಿದ ಜಾಗವನ್ನು ಸರಿಯಾಗಿ ಪರಿಷ್ಕರಿಸದೆ ಅಲ್ಲಿ ಎಳೆ ಕೋಳಿಗಳನ್ನು ಸಾಕಬಾರದು. ಬೆಳೆದ ಕೋಳಿಗಳು ಯಾವ ಚಿಹ್ನೆಗಳನ್ನೂ ತೋರಿಸ ದಿದ್ದರೂ ರೋಗವನ್ನು ಹೊಂದಿರುತ್ತವೆ ಹಾಗೂ ಎಳೆಯಮರಿಗಳಿಗೆ ಆ ರೋಗವನ್ನು ಹರಡುತ್ತವೆ.

(4) ಎಳೆಮರಿಗಳನ್ನು ಸ್ವಚ್ಛವಾದ ಜಾಗದಲ್ಲಿ ಸಾಕಬೇಕು ಮತ್ತು ನಿಯತ ಕಾಲಕ್ಕೆ ಸ್ಥಳ ಪರಿವರ್ತನೆ ಮಾಡಬೇಕು. ಅದೇ ಜಾಗವನ್ನೇ ಒಂದೇ ಸಮನೆ ಉಪ ಯೋಗಿಸಬೇಕಾದರೆ ಭೂಮಿಯನ್ನು ಆಗಿಂದಾಗ್ಗೆ (ವರ್ಷಕ್ಕೆ ಎರಡು ಮೂರು ಬಾರಿ) ಉತ್ತು ಹೊಸ ಮೇವಿನ ಬೆಳೆ ಅಥವಾ ಹುಲ್ಲನ್ನು ನೆಡಬೇಕು.

(5) ಪ್ರೇಕ್ಷಕರನ್ನು ಕೋಳಿಮನೆ ಅಥವಾ ಆವರಣದೊಳಕ್ಕೆ ಬಿಡಬಾರದು.

(6) ಕೋಳಿಗೂಡುಗಳು, ನೀರು ಹಾಗೂ ಮೇವಿನ ಪಾತ್ರೆಗಳನ್ನು ದಿನಕ್ಕೊಂದು ಬಾರಿ ಮತ್ತು ಮನೆ ಹಾಗೂ ಆವರಣಗಳನ್ನು ವಾರಕ್ಕೊಂದು ಸಾರಿಯಾದರೂ ಸ್ವಚ್ಛಮಾಡಬೇಕು. ಅವುಗಳಿಗೆ ಯಾವಾಗಲಾದರೊಮ್ಮೆ ಕ್ರಿಮಿನಾಶಕಗಳನ್ನು ಸಿಂಪಡಿಸ ಬೇಕು.

(7) ಉತ್ತಮವಾದ ನೀರುಹರಿದುಹೋಗುವ ವ್ಯವಸ್ಥೆ ಮತ್ತು ಸಾಕಷ್ಟು ಜಾಗ ಒದಗಿಸುವುದರಿಂದ ತೇವ ಮತ್ತು ಗುಂಪುಗೂಡುವಿಕೆಯನ್ನು ತಪ್ಪಿಸಬೇಕು. ಕೋಳಿ ಮನೆಗೆ ಸಾಕಷ್ಟು ಬಿಸಿಲು ಬೀಳುವಂತಿರಬೇಕು. ಇದು ಉತ್ತಮ ಕೀಟನಾಶಕವಲ್ಲದೆ ತೇವಾಂಶವನ್ನು ದೂರಮಾಡಲೂ ಸಹಾಯಕವಾಗುವುದು.

(8) ಕೋಳಿ ಗುಂಪಿನ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಮತೋಲ ಆಹಾರವನ್ನು ಸಾಕಷ್ಟು ಒದಗಿಸಬೇಕು.

(9) ಮರಿಗಳಿಗೆ ಸಿಗುವಂತೆ ಯಾವುದೂ ಕೊಳೆತ ಕೆಟ್ಟ ಪದಾರ್ಥಗಳನ್ನು ಎಸೆಯಬಾರದು.

(10) ಉಣ್ಣೆಗಳ ಹಾವಳಿಯನ್ನು ತಡೆಗಟ್ಟಲು ಉಣ್ಣೆ ಸೇರದಂತಹ ಅಡ್ಡ ಕಂಬಿಯನ್ನು ಒದಗಿಸಬೇಕು.

(11) ಎಲ್ಲ ಮರಿಗಳಿಗೂ ಆರುವಾರಗಳಾದ ಕೂಡಲೇ ರಾನಿಕೇತ್ ಲಸಿಕೆ ಹಾಕಿಸಬೇಕು ಹಾಗೂ ಕೋಳಿ ಸಿಡುಬಿನ ವಿರುದ್ಧ ರಕ್ಷಿಸಬೇಕು.

ಗುಂಪಿನಲ್ಲಿ ಸಾಂಕ್ರಾಮಿಕ ರೋಗ ಕಂಡುಬಂದಾಗ ಈ ಕೆಳಕಂಡ ಕೆಲವು ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು.

(1) ನೋಟಕ್ಕೆ ಆರೋಗ್ಯವಾಗಿ ಕಾಣುವ ಕೋಳಿಗಳನ್ನು ರೋಗಪೀಡಿತ ಕೋಳಿಗಳಿಂದ ಬೇರ್ಪಡಿಸಿ ಅವುಗಳಿಗೇ ಪ್ರತ್ಯೇಕವಾದ ಕೆಲಸಗಾರರು ಮತ್ತು ನೀರು ಹಾಗೂ ಆಹಾರದ ಪಾತ್ರೆಗಳನ್ನೊದಗಿಸಬೇಕು.

(2) ರೋಗಪೀಡಿತ ಕೋಳಿಗಳ ರಕ್ತ ಹಾಗೂ ಶರೀರದ ಯಾವ ವಿಸರ್ಜನೆಯೂ ಕೋಳಿಮನೆ ಹಾಗೂ ಆವರಣದಲ್ಲಿ ಬೀಳದಂತೆ ನೋಡಿಕೊಳ್ಳಬೇಕು.

(3) ರೋಗಪೀಡಿತ ಕೋಳಿಗಳೆಲ್ಲವನ್ನೂ ಕೊಂದು ಸುಡಬೇಕು ಇಲ್ಲವೇ ಹೂಳಬೇಕು.

(4) ಸತ್ತ ಅಥವಾ ರೋಗಪೀಡಿತ ಕೋಳಿಗಳನ್ನು ಮುಟ್ಟಿದ ಮೇಲೆ ಕ್ರಿಯೋಲಿನ್ ಅಥವಾ ಡೆಟಾಲ್ ದ್ರಾವಣದಂತಹ ಉತ್ತಮ ಕ್ರಿಮಿನಾಶಕಗಳಿಂದ ಕೈಗಳನ್ನು ತೊಳೆದುಕೊಳ್ಳಬೇಕು.

(5) ಕೋಳಿಮನೆ, ಗೂಡು, ಮೇವಿನ ತೊಟ್ಟಿ, ನೀರಿನ ಪಾತ್ರೆ ಮತ್ತು ಇತರ ಸಲಕರಣೆಗಳೆಲ್ಲವನ್ನೂ ಬಿಸಿನೀರಿನಿಂದ ತೊಳೆದ ನಂತರ ಶೇಕಡಾ 5ರ ಫಿನಾಲ್ ದ್ರಾವಣ ಅಥವಾ ಶೇಕಡಾ 2ರ ಲೈಸಾಲ್ ದ್ರಾವಣದಿಂದ ಕ್ರಿಮಿಗಳನ್ನು ನಾಶಮಾಡಬೇಕು.

(6) ಕುಡಿಯುವ ನೀರಿಗೆ ನಸುಗೆಂಪು ಬಣ್ಣಬರುವಷ್ಟು ಪೊಟ್ಯಾಸಿಯಂ ಪರ್ಮಾಂಗನೇಟನ್ನು ಸೇರಿಸಬೇಕು.

ಮೇಲೆ ಹೇಳಿದ ನಿಯಂತ್ರಣ ಪದ್ಧತಿಗಳನ್ನು ದೊಡ್ಡದಾದ ಹಾಗೂ ವ್ಯವಸ್ಥಿತವಾಗಿರುವ ಕೇಂದ್ರಗಳಲ್ಲಿ ಅನುಸರಿಸುವುದು ಸುಲಭ; ಆದರೆ ಹಳ್ಳಿ ಪ್ರದೇಶಗಳಲ್ಲಿ ಇವುಗಳನ್ನು ಅನುಸರಿಸುವುದು ಸಾಧ್ಯವಾಗದಿರಬಹುದು. ಹಳ್ಳಿಗಳಲ್ಲಿ ಕೋಳಿಗಳನ್ನು ಸಾಮಾನ್ಯವಾಗಿ ಸ್ವತಂತ್ರವಾಗಿ ಬಿಟ್ಟಿರುತ್ತಾರೆ. ಬೇರೆ ಗುಂಪಿನ ಕೋಳಿಗಳು ಮತ್ತು ಮರಿಗಳು ಒಂದರೊಡನೊಂದು ತಿಪ್ಪೆಗಳಲ್ಲಿ ಸ್ವೇಚ್ಛೆಯಾಗಿ ಬೆರೆಯುತ್ತವೆ ಹಾಗೂ

ಒಂದೇ ಕಡೆ ನೀರು ಕುಡಿಯುತ್ತವೆ. ಅಂತಹ ಸಂದರ್ಭಗಳಲ್ಲಿ ಈ ಕೆಳಗಿನ ಸೂಚನೆಗಳು ಸಹಾಯಕಾರಿಯಾಗುತ್ತವೆ:

(1) ಹಳ್ಳಿಯಲ್ಲಿನ ಕೋಳಿಸಾಕಣೆದಾರರು ಒಬ್ಬರೊಡನೊಬ್ಬರು ಸಹಕರಿಸ ಬೇಕು ಮತ್ತು ರೋಗ ನಿರೋಧಕ ಹಾಗೂ ನಿಯಂತ್ರಕ ಕ್ರಮಗಳನ್ನು ಒಂದಾಗಿ ಕೈಗೊಳ್ಳಬೇಕು.

(2) ಆರುವಾರಗಳ ಮೇಲೆ ವಯಸ್ಸಾಗಿರುವ ಮರಿಗಳೆಲ್ಲವಕ್ಕೂ ರಾನಿಕೇತ್ ನಿರೋಧಕ ಲಸಿಕೆ ಹಾಕಿಸಬೇಕು ಮತ್ತು ಎಂಟುವಾರಗಳ ಮೇಲಾಗಿರುವ ಎಲ್ಲ ಮರಿಗಳನ್ನೂ ಎಂತಹುದೇ ಸಂದರ್ಭದಲ್ಲಿಯೂ 3 ರಿಂದ 4 ತಿಂಗಳುಗಳ ಒಳಗೆ ಕೋಳಿ ಸಿಡುಬಿನ ವಿರುದ್ಧ ಲಸಿಕೆ ಹಾಕಿಸಬೇಕು.

(3) ವಸತಿ ಮತ್ತು ಆಹಾರ ಅಧ್ಯಾಯಗಳಲ್ಲಿ ಹೇಳಿದಂತೆ ಕೋಳಿಗಳ ವಸತಿ ಯನ್ನು ಉತ್ತಮಗೊಳಿಸಬೇಕು ಮತ್ತು ಸಮತೋಲ ಆಹಾರವನ್ನು ಒದಗಿಸಬೇಕು.

(4) ರೋಗ ಕಂಡುಬಂದ ಕೂಡಲೆ ಹತ್ತಿರದ ಪಶುವೈದ್ಯಶಾಲೆಗೆ ಸುದ್ದಿ ತಿಳಿಸಿ ಸೂಕ್ತ ಸಹಾಯ ಪಡೆಯಬಹುದು.

ವಿಷಕಣಗಳು ಮತ್ತು ಏಕಾಣುಜೀವಿಗಳಿಂದುಂಟಾಗುವ ರೋಗಗಳು

ಭಾರತದಲ್ಲಿ ಸಾಮಾನ್ಯವಾಗಿರುವ ಕೋಳಿರೋಗಗಳು ಸಾಮಾನ್ಯವಾಗಿ ಸೋಸಬಲ್ಲ ವಿಷಕಣಗಳಿಂದುಂಟಾದವು. ಈ ವಿಷಕಣಗಳಲ್ಲಿ ಕೆಲವು ಅತ್ಯುಗ್ರವಾದವು ಮತ್ತು ಇವುಗಳಿಂದ ಉಂಟಾಗುವ ರೋಗಗಳು ಸಾಮಾನ್ಯವಾಗಿ ಹೆಚ್ಚಿನ ಸಾವುಂಟುಮಾಡು ತ್ತವೆ. ಇದಕ್ಕೆ ಹೋಲಿಸಿದಲ್ಲಿ ಸೂಕ್ಷ್ಮಾಣುಜೀವಿಗಳಿಂದುಂಟಾಗುವ ರೋಗಗಳು ಕಡಮೆ. ಕೋಳಿರೋಗಗಳಲ್ಲಿ ರಾನಿಕೇತ್, ಕೋಳಿಸಿಡುಬು, ಉಣ್ಣೆಜ್ವರ, ಸಾಂಕ್ರಾಮಿಕ ಕೊರೈಜ ಮತ್ತು ಲ್ಯುಕೋಸಿಸ್ (ಕೋಳಿ ಪಾರ್ಶ್ವವಾಯು)ಗಳು ಕ್ರಮವಾಗಿ ಮುಖ್ಯ ವಾದವುಗಳು. ಬಹಳ ಅಪರೂಪವಾದರೂ ಕೋಳಿಕಾಲರ ಮತ್ತು ಕ್ಷಯಗಳೂ ಕಂಡುಬರುತ್ತವೆ.

ಕೋಳಿರೋಗಗಳ ಬಗ್ಗೆ ಈ ಅಧ್ಯಾಯದಲ್ಲಿ ಬಹು ವಿವರವಾಗಿ ವಿವರಿಸುವುದು ಸಾಧ್ಯವಿಲ್ಲ. ಅವುಗಳ ಸ್ಥೂಲ ಪರಿಚಯವನ್ನು ಮಾತ್ರ ಇಲ್ಲಿ ಮಾಡಿಕೊಡಲಾಗಿದೆ. ಹೆಚ್ಚಿನ ವಿವರಗಳಿಗೆ ಓದುಗರು ಇತರ ಸಾಹಿತ್ಯವನ್ನು ಪರಿಶೀಲಿಸಬೇಕು.

ರಾನಿಕೇತ್ ರೋಗ: ನ್ಯೂಕಾಸಲ್ ರೋಗ ಎಂದೂ ಕರೆಯಲ್ಪಡುವ ರಾನಿಕೇತ್ ರೋಗ ಅತ್ಯಂತ ಭಯಾನಕ ಸಾಂಕ್ರಾಮಿಕ ರೋಗ ಮತ್ತು ಕೋಳಿ ರೋಗಗಳ ಪೈಕಿ ಇದು ಅತ್ಯಂತ ಅಪಾಯಕಾರಿ. ಈ ರೋಗಪೀಡಿತ ಕೋಳಿಗಳ ದೇಹ ಊತಕಗಳಿಂದ ಈ ವಿಷಕಣವನ್ನೂ ಸುಲಭವಾಗಿ ಪಡೆಯಬಹುದು.

ಚಿಹ್ನೆಗಳು: ಎಲ್ಲ ವಯಸ್ಸಿನ ಕೋಳಿಗಳಿಗೂ ಈ ರೋಗ ತಟ್ಟಬಹುದು. ಕೆಲವು ದಿನಗಳಿಂದ ಕೆಲವು ವಾರಗಳ ವಯಸ್ಸಿನ ಮರಿಗಳಲ್ಲಿ, ಸೀನುವುದು, ಕೆಮ್ಮುವುದು, ಮತ್ತು ಏದುಸಿರು ಬಿಡುವುದೇ ಮೊದಲಾದ ಉಸಿರಾಟದ ತೊಂದರೆಗಳು ಕಂಡುಬರುತ್ತವೆ. ಉಗ್ರ ಪರಿಸ್ಥಿತಿಗಳಲ್ಲಿ ಹಲವು ಮರಿಗಳು ಯಾವುದೇ ರೀತಿಯ ರೋಗ ಚಿಹ್ನೆಯನ್ನೂ ತೋರಿಸದೆ ಇದ್ದಕ್ಕಿದ್ದಂತೆ ಸಾಯುತ್ತವೆ. ಕೆಲವು ದಿವಗಳವರೆಗೆ ಬದುಕಿ ಉಳಿದ ಕೋಳಿಗಳಲ್ಲಿ ವಿಲಕ್ಷಣ ವಾಸನೆಯುಳ್ಳ ಹಸುರುಬಣ್ಣದ ನೀರಿನಂತಹ ಭೇದಿಯಾಗುತ್ತದೆ. ಈ ರೀತಿ ಭೇದಿಯಾಗುತ್ತಿರುವ ಹಂತದಲ್ಲಿ ಸಾವು ಬರದಿದ್ದರೆ, ಬೆನ್ನಿನ ಮೇಲೆ ಅಥವಾ ಕೆಳಗೆ ಇಲ್ಲವೇ ಪಕ್ಕದಿಂದ ಪಕ್ಕಕ್ಕೆ ತಲೆಯ ತುಯಿತ ಮೊದಲಾದ ನರಸಂಬಂಧಿ ಚಿಹ್ನೆಗಳು ಪ್ರಾರಂಭವಾಗುತ್ತವೆ. ಮರಿಗಳು ಮುಗ್ಗರಿಸುತ್ತವೆ ಇಲ್ಲವೇ ಗುಂಡಗೆ ವೃತ್ತಾಕಾರವಾಗಿ ನಡೆಯುತ್ತವೆ ಹಾಗೂ ಒಂದು ಅಥವಾ ಎರಡೂ ಕಾಲಿನ ಮತ್ತು ಅಥವಾ ಒಂದು ಅಥವಾ ಎರಡೂ ರೆಕ್ಕೆಯ ಲಕ್ವ ಶೀಘ್ರವಾಗಿ ತಲೆದೋರುತ್ತದೆ. ಸಾಮಾನ್ಯವಾಗಿ ಹಸಿವಿಲ್ಲದಂತಾಗಿ ಕೋಳಿಗಳು ಮಂಕಾಗಿ ಮೂಲೆಯಲ್ಲಿ ಗುಡ್ಡೆಹಾಕಿಕೊಳ್ಳುತ್ತವೆ. ಸ್ವಲ್ಪವೇ ಕಾಲದಲ್ಲಿ ಸಾವಿನ ಪ್ರಮಾಣ ಶೇಕಡಾ 80 ರಿಂದ 90ರಷ್ಟಾಗುತ್ತದೆ.

ವಯಸ್ಸಾದ ಕೋಳಿಗಳಲ್ಲಿ ಸೀನುವುದು, ಕೆಮ್ಮುವುದು. ಏದುವುದು ಮೊದಲಾದವು ಇದ್ದಕ್ಕಿದ್ದಂತೆ ತಲೆದೋರಬಹುದು. ಇದರ ಜೊತೆಯಲ್ಲಿಯೇ ಹಳದಿ ಮಿಶ್ರಿತ ಹಸುರು ನೀರಿನಂತಹ ಭೇದಿ, ಉಸಿರಾಟದ ತೊಂದರೆ, ನರದೌರ್ಬಲ್ಯ ಮತ್ತು ಲಕ್ವ ಕಂಡುಬಂದು (ಚಿತ್ರ 106) ಕೊನೆಗೆ ಶೇಕಡಾ 80 ರಿಂದ 90ರಷ್ಟು ಸಾವು ಸಂಭವಿಸುತ್ತದೆ.

ಚಿಕಿತ್ಸೆ: ಚಿಕಿತ್ಸೆ ಫಲಕಾರಿಯಲ್ಲ. ಎಲ್ಲ ರಾಜ್ಯದ ಪಶುವೈದ್ಯಕೀಯ ಜೈವಿಕ ಉತ್ಪನ್ನಗಳ ಸಂಸ್ಥೆಗಳಲ್ಲೂ ಈಗ ಅವಲಂಬನೀಯ ನಿರೋಧಕ ಲಸಿಕೆಯನ್ನು ತಯಾರಿಸುತ್ತಿದ್ದಾರೆ. ಆರೋಗ್ಯವಂತ ಕೋಳಿಗಳಿಗೆ ಈ ಲಸಿಕೆಯ ಚುಚ್ಚುಗೆ ಮಾಡಿದಲ್ಲಿ ಜೀವಮಾನಕಾಲಪೂರ್ತ ನಿರೋಧಕ ಶಕ್ತಿ ಪಡೆಯುತ್ತವೆ, ನಿರೋಧಕ ಶಕ್ತಿ ಲಸಿಕೆ ಹಾಕಿದ ಮೂರರಿಂದ ನಾಲ್ಕು ದಿನಗಳಲ್ಲಿ ಪ್ರಾರಂಭವಾಗುತ್ತದೆ. ಹೆಚ್ಚಿನ ಕೋಳಿಗಳಿಗೆ ರೋಗ ತಗುಲಿರದ ಪ್ರಾರಂಭಿಕ ದೆಸೆಯಲ್ಲಿ ಇದು ಬಹಳ ಪ್ರಯೋಜನಕಾರಿ. ಆರೋಗ್ಯವಾಗಿ ಕಾಣುವ ಕೋಳಿಗಳನ್ನು ರೋಗಪೀಡಿತ ಕೋಳಿಗಳಿಂದ ಬೇರ್ಪಡಿಸಿ ಅವುಗಳನ್ನು ರೋಗದಿಂದ ರಕ್ಷಿಸುವುದರ ಮೂಲಕ ಅದರ ಹರಡುವಿಕೆಯನ್ನು ತಡೆಯಬಹುದು. ಆದಾಗ್ಯೂ ಒಂದೂ ಸಾಯದಂತೆ ರಕ್ಷಿಸುವುದು ಅಸಾಧ್ಯ (ಸಾವಿನ ಸಂಖ್ಯೆ ರೋಗದ ತೀವ್ರತೆ ಹಾಗೂ ಕಾಲವನ್ನವಲಂಬಿಸುತ್ತದೆ). ಏಕೆಂದರೆ ಕೋಳಿಗಳು ಆರೋಗ್ಯವಾಗಿರುವಂತೆ ಕಂಡುಬಂದಾಗ್ಯೂ ರೋಗ ಹೊದುಗುವಿಕೆಯ ಕಾಲದಲ್ಲಿದ್ದಿರಬಹುದು.

ರೋಗವನ್ನು ತಡೆಗಟ್ಟುವ ಮತ್ತು ರೋಗವಿಲ್ಲದಂತೆ ಮಾಡುವ ಅತ್ಯುತ್ತಮ ವಿಧಾನವೆಂದರೆ 6 ವಾರಕ್ಕೆ ಮೇಲ್ಪಟ್ಟ ಎಲ್ಲ ಕೋಳಿಗಳಿಗೂ ರೋಗ ನಿರೋಧಕ



ಚಿತ್ರ 105: ರಾನಿಕೇತ್ ರೋಗದ ವಿರುದ್ಧ ಲಸಿಕೆ ಹಾಕುತ್ತಿರುವುದು.

ಲಸಿಕೆ ಹಾಕುವುದು (ಚಿತ್ರ 105). ಸಂಪೂರ್ಣ ರಕ್ಷಣೆಗೆ ಹೊಸದಾಗಿ ಬಂದ ಹಾಗೂ ನಿರೋಧಕ ಲಸಿಕೆ ಹಾಕಿಲ್ಲದ ಕೋಳಿಗಳಿಗೆ ಲಸಿಕೆ ಹಾಕಲು ಆರು ತಿಂಗಳು ಅಥವಾ ವರ್ಷಕ್ಕೆ ಲಸಿಕೆ ಹಾಕುವುದನ್ನು ಪುನರಾವರ್ತಿಸಬೇಕು.

ಲಸಿಕೆ ಹಾಕಿರುವ ಕೋಳಿಗಳನ್ನು ಬೇರೆ ಕೋಳಿಗಳಿಂದ ಗುರುತಿಸಲು ಅವುಗಳಿಗೆ ಯಾವುದಾದರೂ ರೀತಿಯ ಚಿಹ್ನೆ ಮಾಡುವುದು ಅವಶ್ಯಕ. ಇದಕ್ಕಾಗಿ ಮುಂಗಾಲಿಗೆ ತೂತುಮಾಡುವುದು, ಸಣ್ಣ ಕತ್ತರಿಯಿಂದ ಕಾಲಿನ ಬಲೆ ಕತ್ತರಿಸುವುದು ಅಥವಾ ಉಗುರು ಕತ್ತರಿಸುವ ಸಾಧನದಿಂದ ಒಂದು ಕಾಲಿನ ಕೊನೆಯ ಬೆರಳ ತುದಿ ಕತ್ತರಿಸುವುದು ಮೊದಲಾದವುಗಳಲ್ಲಿ ಯಾವುದಾದರೊಂದನ್ನು ಲಸಿಕೆ ಹಾಕಿದ ನಂತರ ಮಾಡಬೇಕು.



ಚಿತ್ರ 106: ರಾನಿಕೇತ್ ರೋಗದಿಂದ ರೆಕ್ಕೆಗಳು ಹಾಗೂ ಕಾಲುಗಳ ಲಕ್ವ.

ಕಾಲಬಲೆಯನ್ನು ಸೀಳುವುದರಿಂದ ಇಲ್ಲವೇ ಒಂದು ಬೆರಳನ್ನು ಕತ್ತರಿಸುವುದರಿಂದ ಸರಿಯಾದ ದಾಖಲೆಯನ್ನು ಇಟ್ಟುಕೊಳ್ಳಬಹುದು. ಉದಾಹರಣೆಗೆ 1956–57ರಲ್ಲಿ ಲಸಿಕೆ ಹಾಕಿದ ಕೋಳಿಗಳನ್ನು ಬಲಗಾಲ ಹೊರಬಲೆಯ ತುದಿಯನ್ನು ಸೀಳುವುದರಿಂದ ಅಥವಾ ಬಲಗಾಲ ಹೊರಬೆರಳ ತುದಿಯನ್ನು ಕತ್ತರಿಸುವುದರಿಂದ ಗುರುತಿಸಬಹುದು. ಆರು ತಿಂಗಳುಗಳ ನಂತರ ಪುನಃ ಲಸಿಕೆ ಹಾಕುವಾಗ ಆರುವಾರಗಳ ಮೇಲ್ಪಟ್ಟ ಹೊಸಮರಿಗಳು ಅಥವಾ ಎರಡು ತಿಂಗಳ ಮೇಲ್ಪಟ್ಟ ಕೋಳಿಗಳಿಗೆ ಮಾತ್ರ ಲಸಿಕೆ ಹಾಕಿ ಅವುಗಳನ್ನು ಮಧ್ಯದ ಬಲೆ ಸೀಳುವುದರಿಂದ ಇಲ್ಲವೆ ಬಲಗಾಲಿನ ಮಧ್ಯದ ಇಲ್ಲವೇ ಹೊರಬೆರಳಿನ ತುದಿಯನ್ನು ಕತ್ತರಿಸುವುದರಿಂದ ಗುರುತಿಸಬಹುದು. ಇದೇ ರೀತಿ ಮುಂದೆ ಎಡಗಾಲಿನ ಬಲೆಗಳು ಹಾಗೂ ಬೆರಳುಗಳನ್ನು ಕತ್ತರಿಸಬಹುದು. ಇದು ಕೋಳಿಗಳ ವಯಸ್ಸು ಹಾಗೂ ನಿರೋಧಕ ಶಕ್ತಿಯ ಕಾಲವನ್ನು ತಿಳಿಯಲೂ ಸಹಕಾರಿ.


ನಮ್ಮ ರಾಷ್ಟ್ರದ ಒಂದು ರಾಜ್ಯದಲ್ಲಿ ಕೈಗೊಂಡ ಲಸಿಕೆ ಹಾಕುವ ಕಾರ್ಯಕ್ರಮ ಆ ರಾಜ್ಯದಲ್ಲಿ ರಾನಿಕೇತ್ ರೋಗವನ್ನು ತೊಡೆದುಹಾಕಿದೆ. ಈ ಕಾರ್ಯದ ಮೊದಲ ವರ್ಷದಲ್ಲಿ ಆ ರಾಜ್ಯದ ಒಟ್ಟು ಕೋಳಿಗಳ ಸಂಖ್ಯೆಯಾದ 35 ಲಕ್ಷದಲ್ಲಿ 24 ಲಕ್ಷ ಕೋಳಿಗಳಿಗೆ ಲಸಿಕೆ ಹಾಕಲಾಯಿತು ಮತ್ತು ಹಳ್ಳಿಯ ಕೋಳಿಗಳಲ್ಲಿ ಶೇಕಡಾ 50 ರಿಂದ

90ರಷ್ಟು ಕೋಳಿಗಳನ್ನು ರಕ್ಷಿಸಲಾಯಿತು. ಎರಡನೇ ವರ್ಷದಲ್ಲಿ ಉಳಿದ ಹಳ್ಳಿಗಳ ಕೋಳಿಗಳಿಗೆ ಲಸಿಕೆ ಹಾಕಲಾಯಿತು. ಇದರ ಜೊತೆಯಲ್ಲಿಯೇ ಮೊದಲ ವರ್ಷ ಲಸಿಕೆ ಹಾಕಿದ ಜಾಗಗಳಲ್ಲಿನ ಹೊಸದಾಗಿ ಸೇರಿದ ಕೋಳಿಗಳು ಹಾಗೂ ಮರಿಗಳಿಗೂ ಲಸಿಕೆ ಹಾಕಲಾಯಿತು. ಇಂತಹ ಕ್ರಮಬದ್ಧ ಕಾರ್ಯದಿಂದ ಆ ಜಾಗದಲ್ಲಿ ರಾನಿಕೇತ್ ರೋಗ ಇಲ್ಲದಂತಾಯಿತು. ಇದಕ್ಕೆ ಮೊದಲು ಅಲ್ಲಿ ಆ ರೋಗ ವರ್ಷಕ್ಕೆ ಒಂದೆರಡು ಬಾರಿ ಕೋಳಿಗಳನ್ನು ಪೀಡಿಸುತ್ತಿತ್ತು. ಉಪಯೋಗಿಸಿದ ಲಸಿಕೆ ಸ್ಥಳೀಯವಾಗಿ ರಾಜ್ಯ ಸರ್ಕಾರದ ಜೈವಿಕ ಸಂಸ್ಥೆ ತಯಾರಿಸಿದ ಹೂಮರಿ ಪರೆ ಆರ್ದ್ರ ಲಸಿಕೆ; ಬೇಗನೆ ಕೆಟ್ಟುಹೋಗುವ ಈ ಲಸಿಕೆ ಹಾಗೂ ಅವಶ್ಯಕ ಮಂಜುಗಡ್ಡೆಯನ್ನು ಕೆಲಸಗಾರರಿಗೆ ನಿರಂತರವಾಗಿ ಒದಗಿಸುವುದು ಬಹುಕಷ್ಟದ ಕಾರ್ಯವಾಗಿತ್ತು. ಇದಕ್ಕಾಗಿ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಎಲ್ಲೆಲ್ಲಿ ಶೀತಲೀಕರಣ ಸಾಧ್ಯವಿದ್ದಿತೋ ಅಲ್ಲೆಲ್ಲಾ ಲಸಿಕೆಗಳ ದಾಸ್ತಾನು ಪ್ರಾರಂಭಿಸಿ ಅಲ್ಲಿಂದ ಅವಶ್ಯಕ ಲಸಿಕೆ ಹಾಗೂ ಮಂಜುಗಡ್ಡೆಯನು ಸರಬರಾಜು ಮಾಡಲಾಯಿತು. ಈಗ ಇಜ್ಜತ್‌ನಗರದಲ್ಲಿರುವ ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ ಹಾಗೂ ಕೆಲವು ರಾಜ್ಯಗಳ ಜೈವಿಕ ಸಂಸ್ಥೆಗಳಲ್ಲಿ ಕೆಡದಿರುವಂತಹ ನೀರ್ಗಲ್ಲೊಣಗಿಸಿದ ಲಸಿಕೆ ದೊರೆಯುತ್ತಿರುವುದರಿಂದ ದೂರದ ಊರುಗಳಿಗೆ ಲಸಿಕೆಯ ಸಾಗಾಣಿಕೆಗೆ ಏನೂ ತೊಂದರೆಯಾಗಲಾರದು.

ಕೋಳಿ ಸಿಡುಬು: ಕೋಳಿ ಸಿಡುಬು ವಿಷಕಣದಿಂದ ಉಂಟಾಗುವ ಒಂದು ಅತ್ಯಂತ ಸಾಂಕ್ರಾಮಿಕ ಮತ್ತು ಸಾಂಸರ್ಗಿಕ ರೋಗ. ಇದು ಎಲ್ಲ ವಯಸ್ಸಿನ ಕೋಳಿಗಳಿಗೂ ಬರುತ್ತದೆ. ಆದರೆ ಸಣ್ಣಮರಿಗಳಿಗೆ ಹೆಚ್ಚಾಗಿ ಬರುತ್ತದೆ. ಅಲ್ಲದೆ ಅವು ಬೇಗ ಸಾಯುತ್ತವೆ.

ಚಿಹ್ನೆಗಳು: ರೋಗ ಮೂರು ರೀತಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅವುಗಳೆಂದರೆ (1) ಚರ್ಮದ ರೀತಿ (ಚಿತ್ರ 107) ಇದರಲ್ಲಿ ಕೋಳಿಗಳ ಶರೀರದ ಮೇಲೆ ವಿಶೇಷತಃ ತಲೆಯ ಮೇಲೆ ನರಹುಲಿಯಂತಹ ಗಂಟುಗಳು ಕಾಣುತ್ತವೆ; (2) ಬಾಯರೀತಿ (ಚಿತ್ರ 108); ಇದರಲ್ಲಿ ಬಾಯೊಳಗೆ ಹಳದಿ ಪರೆಗಳು ಕಂಡುಬರುತ್ತವೆ ಮತ್ತು (3) ಕಣ್ಣುಮೂಗಿನ ರೀತಿ (ಚಿತ್ರ 109); ಇದರಲ್ಲಿ ಕಣ್ಣು ಹಾಗೂ ಮೂಗುಗಳೆರಡನೂ ರೋಗ ಆವರಿಸುತ್ತದೆ. ರೋಗ ಮುಂದುವರಿದಂತೆ ಇವೆರಡೂ ಕಾಲುವೆಗಳು ಹಳದಿ ಲೋಳೆ ಕೀವಿನಿಂದ ಮುಚ್ಚಿಹೋಗುತ್ತವೆ. ಕೊನೆಯ ಎರಡು ರೀತಿಗಳನ್ನು ಕೋಳಿ ಡಿಫ್ತೀರಿಯ ಅಥವಾ ಕ್ಯಾಂಕರ್ ಎಂದು ಕರೆಯುತ್ತಾರೆ.

ನಿರೋಧ ಹಾಗೂ ನಿಯಂತ್ರಣ: ಅಭಿವೃದ್ಧಿ ಹೊಂದುತ್ತಿರುವ ಹೂಮರಿ ಪರೆಯ ಮೇಲೆ ಬೆಳೆದ ಕೋಳಿ ಸಿಡುಬಿನ ವಿಷಕಣಗಳನ್ನೊಳಗೊಂಡ ಪರಿಣಾಮಕಾರಿ ಲಸಿಕೆ ಈಗ ಲಭ್ಯವಿದೆ. ಈ ಲಸಿಕೆಯನ್ನು ಎಂಟುವಾರಕ್ಕೆ ಮೇಲ್ಪಟ್ಟು ವಯಸ್ಸಾದ ಕೋಳಿಗಳಿಗೆ ಮಾತ್ರ ಹಾಕಬೇಕು. ಅಲ್ಲದೆ ಚಿಕ್ಕಮರಿಗಳಿಗೆ ಹಾಕಿದರೆ ಅವುಗಳಲ್ಲಿ ಸಿಡುಬು ಕಂಡುಬರುವ ಸಾಧ್ಯತೆ ಇದೆ. ಗುಂಪಿನಲ್ಲಿ ರೋಗಲಕ್ಷಣಗಳು ಕಂಡುಬಂದು



ಚಿತ್ರ 107: ಜುಟ್ಟನಮೇಲೆ ಹುಣ್ಣುಗಳನ್ನು ತೋರಿಸುತ್ತಿರುವ ಕೋಳಿ ಸಿಡುಬಿನ ಚರ್ಮವಿಧ.

ಚಿಕ್ಕಮರಿಗಳಿಗೇ ಲಸಿಕೆ ಹಾಕಬೇಕಾದಂತಹ ಸಂದರ್ಭ ಬಂದಲ್ಲಿ, ಪಾರಿವಾಳದ ಸಿಡುಬಿನ ವಿಭೇದದ ವಿಷಕಣದಿಂದ ತಯಾರಿಸಿದ ಲಸಿಕೆಯನ್ನು ಮಾತ್ರ ಉಪಯೋಗಿಸಬೇಕು. ಪಾರಿವಾಳದ ಸಿಡುಬಿನ ವಿಷಕಣದಿಂದ ಬರುವ ರೋಗ ನಿರೋಧಕತೆ ನಿಶ್ಚಯವಾದುದೂ ಅಲ್ಲ; ಹೆಚ್ಚುಕಾಲ ಇರುವಂತಹುದೂ ಅಲ್ಲ. ಆದರೆ ಸದ್ಯದ ಅಪಾಯದಿಂದ ರಕ್ಷಿಸಲು ಬಹಳ ಉಪಯುಕ್ತವಾದುದು. ರೋಗ ನಿರೋಧಕ ಶಕ್ತಿ ಹೆಚ್ಚುಕಾಲ ಇರುವಂತೆ ಮಾಡಲು ಮೂರುವಾರ ಅಥವಾ ಒಂದು ತಿಂಗಳಾದ ನಂತರ ಇಲ್ಲವೆ ಮರಿಗಳಿಗೆ ಎಂಟುವಾರಗಳಾದ ನಂತರ ಪುನಃ ಲಸಿಕೆ ಹಾಕಬೇಕು.

ಚಿಕಿತ್ಸೆ: ರೋಗಪೀಡಿತ ಕೋಳಿಗಳನ್ನು ಅದರಲ್ಲೂ ಬಾಯಿ ಹಾಗೂ ಕಣ್ಣಿನ ರೀತಿಯ ರೋಗವಿರುವ ಕೋಳಿಗಳನ್ನು ಚಿಕಿತ್ಸೆಗೆ ಒಳಪಡಿಸುವುದು ಫಲಕಾರಿಯಲ್ಲ. ಚರ್ಮದ ರೀತಿಯಲ್ಲಿ ಮೊದಲು ಕಟ್ಟಿರುವ ಎಕ್ಕಳಿಕೆ ತೆಗೆದು ನಂತರ ಆ ಜಾಗಕ್ಕೆ ಸಿಲ್ವರ್ ನೈಟ್ರೇಟ್ ಕಡ್ಡಿ ಅಥವಾ ಪಿಕ್ರಿಕ್ ಆಮ್ಲದ ಪರ್ಯಾಪ್ತ ದ್ರಾವಣವನ್ನು ಹಚ್ಚಬೇಕು. ಆಮೇಲೆ ಕಾರ್ಬೊಲೇಟೆಡ್ ವಾಸಲೀನ್ (ಶೇಕಡಾ 10 ಪ್ರಮಾಣದ) ಹಚ್ಚಬೇಕು.

ಉಣ್ಣೆ ಜ್ವರ (ಸ್ಪೈರೋಕೀಟೋಸಿಸ್): ಉಣ್ಣೆಜ್ವರ ರಕ್ತವನ್ನು ನಂಜುಮಾಡುವ 'ಬೊರೆಲ್ಲಿಯ ಗ್ಯಾಲಿನಾರಂ' ಎಂಬ ಬಿರಟೆ ಸ್ಕ್ರೂ ಆಕಾರದ ಜೀವಿಗಳಿಂದುಂಟಾಗುವ ಒಂದು ರೋಗ. ಜ್ವರವಿರುವ ಕಾಲದಲ್ಲಿ ಕೋಳಿಗಳಲ್ಲಿ ಈ ರೋಗಕಾರದ ಕ್ರಿಮಿಯನ್ನು



ಚಿತ್ರ 108: ಬಾಯಿ ಹಾಗೂ ನಿರ್ನಾಳದ ಗ್ರಂಥ ಪರೆಗಳನ್ನು ತೋರಿಸುತ್ತಿರುವ ಕೋಳಿ ಸಿಡುಬಿನ ಬಾಯಿವಿಧ.



ಚಿತ್ರ 109: ಕೋಳಿ ಸಿಡುಬಿನ ಕಣ್ಣೂಗು ವಿಧ—ಕಣ್ಣು ಮತ್ತು ಮೂಗಿನ ಕುಳಿಗಳು ರೋಗಪೀಡಿತವಾಗಿರುವುದನ್ನು ತೋರಿಸುತ್ತಿರುವ ಸತ್ತಕೋಳಿಯತಲೆ.

ಕಾಣಬಹುದು. ರೋಗವು ಒಂದರಿಂದ ಮತ್ತೊಂದಕ್ಕೆ ಕೋಳಿಗಳ ಸಾಮಾನ್ಯ ಉಣ್ಣೆಯಾದ ಆರ್ಗಸ್ ಪೆರ್‌ಸಿಕಸ್ ಮೂಲಕ ಹರಡುತ್ತದೆ. ಉತ್ತರ ಹಾಗೂ ಮಧ್ಯ ಭಾರತದಲ್ಲಿ ಹಾನಿ ಉಂಟುಮಾಡುವುದರಲ್ಲಿ ಉಣ್ಣೆಜ್ವರ ರಾನಿಕೇತ್‌ಗಿಂತ ಯಾವ ರೀತಿಯಲ್ಲೂ ಕಡಮೆಯಿಲ್ಲ, ಈ ಜಾಗಗಳಲ್ಲಿ ಉಣ್ಣೆಜ್ವರವು ವಿಸ್ತಾರವಾದ ಜಾಗಗಳಲ್ಲಿ ಹೆಚ್ಚಿನ ಸಾವು ಉಂಟುಮಾಡುತ್ತದೆ.

ದಕ್ಷಿಣದ ರಾಜ್ಯಗಳಲ್ಲಿ ಅತಿಥೇಯ ಉಣ್ಣೆ ಇಲ್ಲದಿರುವುದರಿಂದ ಈ ರೋಗ ಸಾಮಾನ್ಯವಾಗಿ ಕಂಡುಬರುವುದಿಲ್ಲ. ಈ ಜಾಗಗಳನ್ನು ಈ ಜ್ವರದಿಂದ ವಿಮುಕ್ತವಾಗಿ ಉಳಿಸಿಕೊಳ್ಳಲು ಹೊರಗಿನಿಂದ ಬಂದ ಕೋಳಿಗಳಲ್ಲಿ ಉಣ್ಣೆ ಇಲ್ಲದಿರುವುದರ ಬಗೆ ಖಾತ್ರಿ ಮಾಡಿಕೊಳ್ಳಬೇಕು.

ಉಣ್ಣೆಗಳ ಬೆಳವಣಿಗೆ ಹಾಗೂ ವೃದ್ಧಿಗೆ ಅತ್ಯುತ್ತಮ ಕಾಲವಾದ ಬೇಸಿಗೆ ಹಾಗೂ ವಸಂತಕಾಲದ ಪ್ರಾರಂಭದಲ್ಲಿ ಈ ರೋಗದ ಹಾವಳಿ ಹೆಚ್ಚು.

ಹಸಿವಿಲ್ಲದಿರುವಿಕೆ, ಬಾಯಾರಿಕೆ, ಕೆದರಿದ ಪುಕ್ಕ ಮತ್ತು 110°F ವರೆಗೂ ಏರುವ ಜ್ವರ ಈ ರೋಗದ ಮುಖ್ಯ ಚಿಹ್ನೆಗಳು. ಕೆಳಗೆ ಬಗ್ಗಿಸಿದಂತೆಯೋ (ಚಿತ್ರ 110)



ಚಿತ್ರ 110: ಉಣ್ಣೆಜ್ವರ(ಸ್ಪೈರೋಕೀಟೋಸಿಸ್)ದಿಂದ ನರಳುತ್ತಿರುವ ಕೋಳಿಗಳು

ರೆಕ್ಕೆಗಳ ಸಂದಿನಲ್ಲಿ ಮರೆಯಾಗಿರುವಂತೆಯೋ ತಲೆಯನ್ನಿಟ್ಟುಕೊಂಡು ಕೋಳಿ ಮುದುಡಿ ನಿಲ್ಲುತ್ತದೆ. ನಂತರ ಹಸರು ಮಿಶ್ರಿತ ಕೆಟ್ಟವಾಸನೆಯ ಭೇದಿ, ಜೋಲುಮಾಂಸಲ ಹಾಗೂ ಜುಟ್ಟುಗಳ ಬಣ್ಣಗುಂದುವಿಕೆ, ಓಡಾಡಲು ಮನಸ್ಸಿಲ್ಲದಿರುವಿಕೆ ಮತ್ತು ಕಾಲು ಹಾಗೂ ರೆಕ್ಕೆಗಳ ಲಕ್ವ ಕಂಡುಬರುತ್ತದೆ. ಮೂರರಿಂದ ಹತ್ತು ದಿನಗಳಲ್ಲಿ ರೋಗಪೀಡಿತ ಕೋಳಿ ಸಾಯುತ್ತದೆ. ಸಾವಿನ ಸಂಖ್ಯೆ ಹೆಚ್ಚು. ಶೇಕಡಾ 76 ರಿಂದ 100 ರವರೆಗೂ ಸಾಯಬಹುದು.

ನಿರೋಧ ಮತ್ತು ನಿಯಂತ್ರಣ: ರೋಗ ನಿರೋಧವನ್ನು ಆ ಜಾಗದಲ್ಲಿ ಉಣ್ಣೆಗಳಿಲ್ಲದಂತೆ ನೋಡಿಕೊಳ್ಳುವುದರಿಂದ ಮಾಡಬಹುದು. ವಿಶೇಷತಃ ಹಳ್ಳಿ ಪರಿಸ್ಥಿತಿಗಳಲ್ಲಿ ಇದು ಸುಲಭದ ಕೆಲಸವಲ್ಲ. ಆದಾಗ್ಯೂ ಕೋಳಿಮನೆಯನ್ನು ಪ್ರತಿದಿನ

ಸ್ವಚ್ಛ ಮಾಡುವುದು, ಆಗಾಗ್ಗೆ ಕೀಟನಾಶಕಗಳನ್ನು ಸಿಂಪಡಿಸುವುದು, ಉಣ್ಣೆ ಸೇರದಂತಹ ಕೂಡು ಹಲಗೆಗಳನ್ನೊದಗಿಸುವುದು ಮೊದಲಾದವು ಸಹಾಯಕವಾಗಬಹುದು.

ಆರೋಗ್ಯವಾಗಿರುವ ಕೋಳಿಗಳಿಗೆ ರೋಗಪೀಡಿತ ಕೋಳಿಗಳ ಶರೀರದಿಂದ ಸ್ಪೈರೋಕೀಟ್‌ಗಳನ್ನೊಳಗೊಂಡ ರಕ್ತವನ್ನು 0.3 ಸಿ.ಸಿ.ಅಷ್ಟು ಚುಚ್ಚುಗೆ ಕೊಟ್ಟು ನಂತರ 36 ರಿಂದ 48 ಗಂಟೆಗಳೊಳಗೆ ಒಂದು ಪೌಂಡ್ ಶರೀರ ತೂಕಕ್ಕೆ 1 ಸಿಜಿ. ಗಳಷ್ಟು ಸಲ್ಫರ್ ಸೆನಾಲ್ ಅನ್ನು ಸ್ನಾಯುವಿನಲ್ಲಿ ಚುಚ್ಚುಗೆ ಕೊಡುವುದರಿಂದ ಸಕ್ರಿಯ ರೋಗನಿರೋಧಕ ಶಕ್ತಿಯನ್ನು ಉಂಟುಮಾಡಬಹುದು. ಈ ಉದ್ದೇಶಕ್ಕಾಗಿ ಅಜೀವಿಕಗೊಳಿಸಿದ ಭಟ್ಟಿ ಇಳಿಸಿದ ನೀರಿನಲ್ಲಿನ ಶೇಕಡಾ 2ರ ದ್ರಾವಣವನ್ನು ಉಪ ಯೋಗಿಸಬೇಕು. ಈ ಚಿಕಿತ್ಸೆ ಆರು ತಿಂಗಳ ಕಾಲ ರೋಗನಿರೋಧಕ ಶಕ್ತಿ ಒದಗಿಸು ತ್ತದೆ.

ಹೊಸದಾಗಿ ಕೊಂಡ ಎಲ್ಲ ಕೋಳಿಗಳನ್ನೂ ಉಣ್ಣೆಗಳಿಗಾಗಿ ಪರೀಕ್ಷಿಸಬೇಕು. ಡಿ.ಡಿ.ಟಿ., ಗ್ಯಾಮಾಕ್ಸಿನ್, ಹೆಕ್ಸಿಕ್ಲಾನ್ ಮೊದಲಾದ ನಂಬಿಕಾರ್ಹ ಕೀಟನಾಶಕಗಳನ್ನು ಧೂಳಿಸುವುದರಿಂದ ಉಣ್ಣೆಗಳನ್ನು ನಾಶಗೊಳಿಸಬಹುದು.

ಚಿಕಿತ್ಸೆ: ರೋಗದ ಪ್ರಾರಂಭದ ದೆಸೆಯಲ್ಲಿ ಸೊಯಾಮಿನ್ ಮತ್ತು ಸಲ್ಫರ್ ಸೆನಾಲ್‌ಗಳನ್ನು ಪ್ರತಿಪೌಂಡ್ ಶರೀರತೂಕಕ್ಕೆ ಕ್ರಮವಾಗಿ 2 ಸಿಜಿ. ಮತ್ತು 1 ಸಿಜಿ. ಗಳಂತೆ ಕೊಡುವುದು ಪ್ರಯೋಜನಕಾರಿ. ಇವುಗಳನ್ನು 1–4 ಸಿ.ಸಿ. ಭಟ್ಟಿ ಇಳಿಸಿದ ನೀರಿನಲ್ಲಿ ಕರಗಿಸಿ ಎದೆಯ ಮಾಂಸಖಂಡಕ್ಕೆ ಚುಚ್ಚುಗೆ ಕೊಡುವುದು ಉತ್ತಮ. ಸಲ್ಫರ್ ಸೆನಾಲ್ ಕಡಮೆ ವಿಷಕಾರಿ. ಆದುದರಿಂದ ಉಪಯೋಗಕ್ಕೆ ನಿರಪಾಯಕರ.

ಸಲ್ಫರ್‌ಸೆನಾಲ್ ರೋಗಪೀಡಿತ ಕೋಳಿಗಳನ್ನು ಗುಣಪಡಿಸುವುದೇ ಅಲ್ಲದೆ ರೋಗ ಬರದಿರುವ ಕೋಳಿಗಳಿಗೆ ತಾತ್ಕಾಲಿಕ ರಕ್ಷಣೆ ಒದಗಿಸುವುದರಿಂದ ರೋಗ ಸೂಚನೆ ಕಂಡುಬಂದ ಕೂಡಲೇ ಎಲ್ಲ ಕೋಳಿಗಳಿಗೂ ಸಲ್ಫರ್‌ಸೆನಾಲ್ ಕೊಡಬೇಕು.

ಸಾಂಕ್ರಾಮಿಕ ಕೊರೈಜ: ಇದು ಕೋಳಿಮರಿಗಳ ತಲೆ ಹಾಗೂ ಮೇಲಿನ ಶ್ವಾಸಾಂಗ ಗಳ ಎಲುಗುಳಿಯ ಉರಿಯಾತ ಉಂಟುಮಾಡುವ ಉಗ್ರರೋಗ. ಸಾಮಾನ್ಯವಾಗಿ ನಾಲ್ಕುವಾರಗಳೊಳಗಿನ ಮರಿಗಳಿಗೆ ತಗಲುತ್ತದೆ ಹಾಗೂ ಸಾವಿನ ಸಂಖ್ಯೆ ಬಹಳ. ವಯಸ್ಸಾದ ಕೋಳಿಗಳಿಗೂ ಈ ರೋಗ ಬರಬಹುದು. ಇದರಿಂದ ಮೊಟ್ಟೆ ಇಡುವ ಕೋಳಿಗಳು ಲಾಭದಾಯಕವಲ್ಲದವಾಗುತ್ತವೆ.


ರೋಗ ಕೆಲವು ಸ್ಥಳಗಳಲ್ಲಿ ಕೆಲವು ನಿರ್ದಿಷ್ಟ ಕಾಲಗಳಲ್ಲಿ ಮಾತ್ರ ತಲೆದೋರು ವಂತೆ ಕಂಡುಬರುತ್ತದೆ. ಕೆಳಮಟ್ಟದ ಭೂಭಾಗ, ಆರ್ದ್ರ ಜೇಡಿ ಮಣ್ಣು, ತೇವಾಂಶ, ಹೆಚ್ಚಿನ ಮಳೆ, ಕೊಳಚೆ ಪರಿಸರ, ಮೊದಲಾದವು ರೋಗ ಹುಟ್ಟುವುದಕ್ಕೆ ಹಾಗೂ



ಚಿತ್ರ 111: ಸಾಂಕ್ರಾಮಿಕ ಕೊರೈಜ—ಮೂಗು ಮತ್ತು ಕಣ್ಣುಗಳು ರೋಗಪೀಡಿತವಾಗಿರುವುದನ್ನು ತೋರಿಸುವ ನರಳುತ್ತಿರುವ ಕೋಳಿಯ ತಲೆ.



ಚಿತ್ರ 112: ಸಾಂಕ್ರಾಮಿಕ ಕೊರೈಜ—ಕಣ್ಣಿನ ಕೆಳಗೆ ಮತ್ತು ಮೂಗಿನ ಗಿಣ್ಣದಂತಹ ಕೀವಿರುವ ನರಳುತ್ತಿರುವ ಕೋಳಿಯ ತಲೆ.



ಚಿತ್ರ 113: ಸಾಂಕ್ರಾಮಿಕ ಕೊರೈಜ—ಉಸಿರಾಟದ ಸೋಲುವೆಯ ಚಿಹ್ನೆಗಳನ್ನು ತೋರಿಸುವ ಕೋಳಿಗಳು.

ಹರಡುವುದಕ್ಕೆ ಸಹಾಯಮಾಡುತ್ತವೆ. ಹೆಚ್ಚಿಗೆ ಒಳಪರಾವಲಂಬಿಗಳುಳ್ಳ ಕೋಳಿಗಳು ಈ ರೋಗಕ್ಕೆ ಬಹುಬೇಗ ಬಲಿಯಾಗುವುದು ಕಂಡುಬಂದಿದೆ. ಇದು ಸಾಮಾನ್ಯವಾಗಿ ದೇಶಿ ಕೋಳಿಗಳಲ್ಲಿ ಕಂಡುಬರುವುದು ವಿರಳ.

ಚಿಹ್ನೆಗಳು: ಮೂಗು ಹಾಗೂ ಕಣ್ಣುಗಳಿಂದ ನೀರಿನಂತಹ ದ್ರವ ಸುರಿಯುವುದರಿಂದ ರೋಗ ಪ್ರಾರಂಭವಾಗುತ್ತದೆ (ಚಿತ್ರ 111). ಉರಿಯೂತ ಮೇಲಿನ ಶ್ವಾಸಮಾರ್ಗಗಳು ಹಾಗೂ ಗಾಳಿಗೂಡುಗಳಿಗೆ ಹಬ್ಬಿದಾಗ ಸ್ರಾವ ಲೋಳೆಗೀವಿಡುತ್ತದೆ. ರೆಪ್ಪೆಗಳು ಒಂದಕ್ಕೊಂದು ಅಂಟಿಕೊಳ್ಳುತ್ತವೆ. ಗಿಣ್ಣಿನಂತಹ ಕೀವು ರೆಪ್ಪೆ ಹಾಗೂ ಕಣ್ಣುಗುಡ್ಡೆಗಳ ನಡುವೆ ಸೇರಿ ಒಂದು ಅಥವಾ ಎರಡೂ ಕಣ್ಣನ್ನೂ ಬಾಧಿಸುತ್ತವೆ (ಚಿತ್ರ 112) ಮತ್ತು ಗಮನಾರ್ಹ ಉಸಿರಾಟದ ಸೋಲುವೆ ಕಂಡುಬರುತ್ತದೆ. (ಚಿತ್ರ 113). ಕೋಳಿಗಳಿಗೆ ನೋಡುವುದು, ಮೇಯುವುದು ಸಾಧ್ಯವಾಗುವುದಿಲ್ಲ. ಕೂಡಲೆ ಮೈಗುಂದುವಿಕೆ ಕಂಡುಬಂದು ನಂತರ ಕೋಳಿ ಸಾಯುತ್ತದೆ. ಸಾಮಾನ್ಯವಾಗಿ ಈ ಕಾಲ ದೀರ್ಘವಾದದ್ದು; ಕೆಲವು ಪ್ರಸಂಗಗಳಲ್ಲಿ ಕೆಲವು ವಾರಗಳಾದದ್ದೂ ಉಂಟು.


ಚಿಕಿತ್ಸೆ: ಚಿಕಿತ್ಸೆ ಫಲಕಾರಿಯಲ್ಲ. ಅಂತೆಯೇ ಯಾವ ನಿರೋಧಕ ಪದ್ಧತಿಯೂ ಗೊತ್ತಿಲ್ಲ. ಮೊದಲು ಹೇಳಿದ ಸಾಮಾನ್ಯ ನಿರೋಧಕ ಪದ್ಧತಿಗಳು ಮಾತ್ರವೇ ರೋಗ ಸಂಭವವನು ಕಡಮೆ ಮಾಡುವ ವಿಧಾನಗಳು.

ಕೋಳಿ ಲ್ಯುಕೋಸಿಸ್ (ಕೊಕ್ಕರಿರೋಗ): ಕೋಳಿ ಲ್ಯುಕೋಸಿಸ್ ಅಥವಾ ಕೋಳಿಲಕ್ವ, ಇತ್ತೀಚಿನ ವರ್ಷಗಳಲ್ಲಿ ಕೋಳಿಗಳನ್ನು ಹೊರದೇಶಗಳಿಂದ ತರಿಸಿಕೊಂಡ ನಂತರ ಭಾರತಕ್ಕೆ ಬಂದಿದೆ. ಈ ರೋಗ ಸಾಮಾನ್ಯವಾಗಿ ಸುಸಂಘಟಿತ ಕೇಂದ್ರಗಳಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ರೋಗಪೀಡಿತ ಕೋಳಿಗಳ ಜೊತೆ ಸಾಕಿದಾಗ ದೇಸಿಕೋಳಿಗಳೂ ಈ ಕೋಳಿಗಳಷ್ಟೇ ಈಡಾಗುತ್ತವೆ. ಕೋಳಿಯ ವಿವಿಧ ಅಂಗಗಳು ಅಥವಾ ಊತಕಗಳನ್ನು ಆವರಿಸುವ ವಿಷಕಣ ಈ ರೋಗಕ್ಕೆ ಕಾರಣ.

ಚಿಹ್ನೆಗಳು: ರೋಗಪೀಡಿತ ಅಂಗ ಅಥವಾ ಊತಕ(ಈಲಿ, ಪುಪ್ಪುಸ, ಹೃದಯ, ಮೂತ್ರಪಿಂಡ, ಅಂಡಾಶಯ, ಅಂಡನಾಳ, ಪ್ಲೀಹ, ಕರುಳುಗಳು, ನರಗಳು, ಕಣ್ಣುಗಳು, ಚರ್ಮ, ರಕ್ತ ಮತ್ತು ಎಲುಬು)ಗಳನ್ನವಲಂಬಿಸಿ ರೋಗ ಚಿಹ್ನೆಗಳು ವ್ಯತ್ಯಾಸವಾಗುತ್ತವೆ. ಕುಂಟುತನ, ಕ್ರಮಗೆಟ್ಟನಡಿಗೆ, ಲಕ್ವ, ಹೃದಯಾಘಾತ, ಉಸಿರಾಟದ ಸೋಲುವೆ, ಪಚನಕ್ರಿಯೆ ಕ್ರಮಗೆಡುವಿಕೆ, ಕುರುಡು, ನೆರೆ ಅಥವಾ ಮುತ್ತಿನಂತಹ ಕಣ್ಣುಗಳು, ರಕ್ತಹೀನತೆ, ಗಂತಿಗಳು, ಮತ್ತು ದಪ್ಪನಾದ ಅಥವಾ ಊದಿದ ಮೂಳೆಗಳು ಈ ರೋಗದ ಸ್ಪಷ್ಟ ಲಕ್ಷಣಗಳು. ಚಿತ್ರ 114, 120, 123 ಮತ್ತು 124 ರೋಗದ ಕೆಲವು ಚಿಹ್ನೆಗಳು ಮತ್ತು ಒಳಪಟ್ಟ ಅಂಗ ಅಥವಾ ಊತಕಗಳ ರೋಗದ ಪರಿಸ್ಥಿತಿಗಳನ್ನು ತೋರಿಸುತ್ತವೆ.




ಚಿತ್ರ 114: ಕೊಕ್ಕರೆ ರೋಗ—ಈಲಿ ಹಿಗ್ಗಿರುವುದು ಕಾಣುತ್ತದೆ.




ಚಿತ್ರ 115: ಕೊಕ್ಕರೆ ರೋಗ—ಮೂತ್ರಪಿಂಡವನ್ನೊಳಗೊಂಡಿರುವುದನ್ನು ಕಾಣಬಹುದು.




ಚಿತ್ರ 116: ಕೊಕ್ಕರೆ ರೋಗ—ಅಂಡಾಶಯ ಹಾಗೂ ಕರಳುಗಳ ಬಾವು ಕಂಡುಬರುತ್ತದೆ.



ಚಿತ್ರ 117: ಕೊಕ್ಕರೆ ರೋಗ—ಒಳಾಂಗಗಳ ಬಾವು ಕಂಡುಬರುತ್ತದೆ.



ಚಿತ್ರ 118: ಕೊಕ್ಕರೆ ರೋಗ—ಕಣ್ಣಿನ ವಿವರ್ಣತೆ (ಮತ್ತು ಅಥವಾ ಕಂದು ಕಣ್ಣು) ಮತ್ತು ಕನೀನಿಕೆಯ ವಿರೂಪತೆ ಕಾಣುತ್ತಿದೆ.




ಚಿತ್ರ 119: ಕೊಕ್ಕರೆ ರೋಗ—ಕಾಲಿನ ಉದ್ದ ಮೂಳೆಗಳು ದಪ್ಪವಾಗುವುದನ್ನು (ಬಲಗಡೆ) ನಿರೋಗಿ ಕೋಳಿಯ ಕಾಲಿ(ಎಡಗಡೆ)ನೊಂದಿಗೆ ಹೋಲಿಸಿ ತೋರಿಸಿದೆ.




ಚಿತ್ರ 120: ಕೊಕ್ಕರೆ ರೋಗ—ಒಂದು ಪಕ್ಕದ ಲಕ್ವದಲ್ಲಿ ಎಡ ಟೊಂಕವು ರೋಗದಿಂದ ದಪ್ಪವಾಗಿರುವುದನ್ನು ತೋರಿಸುತ್ತದೆ.

ಈ ರೋಗಕ್ಕೆ ಯಾವ ಚಿಕಿತ್ಸೆಯೂ ಇಲ್ಲ. ಆದಾಗ್ಯೂ ಈ ಕೆಳಗಿನ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಬೇಕು: (1) ರೋಗದ ಯಾವುದೇ ಚಿಹ್ನೆಯನ್ನಾಗಲೀ ತೋರಿಸುತ್ತಿರುವ ಕೋಳಿಗಳನ್ನು ಕೊಂದುಬಿಡಬೇಕು; (2) ತಳಿ ಎಬ್ಬಿಸಲು ಕೋಳಿಗಳನ್ನು ಈ ರೋಗನಿರೋಧಕ ಶಕ್ತಿಯನ್ನು ತೋರಿಸಿರುವ ಗುಂಪುಗಳಿಂದ ಎಚ್ಚರಿಕೆಯಿಂದ ಆಯ್ಕೆಮಾಡಬೇಕು; (3) ಮರಿಗಳನ್ನು ದೊಡ್ಡಕೋಳಿಗಳಿಂದ ಪ್ರತ್ಯೇಕವಾಗಿ ಸಾಕಬೇಕು ಮತ್ತು (4) ರೋಗಪೀಡಿತ ಕೋಳಿಗಳ ಸಂಪರ್ಕಹೊಂದಿರಬಹುದಾದ ಮನೆ, ಪಾತ್ರೆಗಳು, ಸಲಕರಣೆಗಳಿಗೆ ಕ್ರಿಮಿನಾಶಕ ದ್ರಾವಣವನ್ನು ಸಿಂಪಡಿಸಬೇಕು.



ಚಿತ್ರ 121: ಕೊಕ್ಕರೆ ರೋಗ—ಬಲಗಾಲಿನ ಲಕ್ವ ಕಂಡುಬರುತ್ತಿದೆ.



ಚಿತ್ರ 122: ಕೊಕ್ಕರೆ ರೋಗ—ಎರಡೂಕಾಲುಗಳ ಲಕ್ವ ಕಂಡುಬರುತ್ತಿದೆ.

ಕೋಳಿಕಾಲರ: ಭಾರತದಲ್ಲಿ ಈ ರೋಗ ಅಪರೂಪ. ಭೇದಿಯುಳ್ಳ ಇತರ ಅನೇಕ ಕೋಳಿರೋಗಗಳಿಗೆ ಈ ರೋಗವನ್ನು ತಪ್ಪು ತಿಳಿಯುವುದರಿಂದ ಈ ರೋಗದ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗಿದೆ. ವಿಶೇಷತಃ ಹಸುರು ಮಿಶ್ರಿತ ಹಳದಿ ಭೇದಿಯುಳ್ಳ ರಾನಿಕೇತ್ ರೋಗವನ್ನು ಕೋಳಿಸಾಕಾಣಿಕೆದಾರರು ಹಾಗೂ ಅನನುಭವಿ ಪಶುವೈದ್ಯರು ಕೂಡ ಎಷ್ಟೋಬಾರಿ ಕೋಳಿಕಾಲರಾ ಎಂದು ತಪ್ಪು ತಿಳಿಯುತ್ತಾರೆ. ಎಷ್ಟೋವೇಳೆ ಪ್ರಯೋಗಶಾಲೆಯಲ್ಲಿ ರೋಗನಿದಾನವನ್ನು ನಿಶ್ಚಯಪಡಿಸಿಕೊಳ್ಳದೆ ಕೋಳಿಗಳಿಗೆ ಕಾಲರ ವಿರುದ್ಧ ಲಸಿಕೆ ಹಾಕಿದ ಪ್ರಸಂಗಗಳು ಕಂಡುಬಂದಿವೆ. ಈ ರೀತಿಯ ಪ್ರತಿರೋಧ ಕ್ರಮಗಳ ಫಲ ಸುಸ್ಪಷ್ಟ. ಇದು ಸಂಸ್ಥೆ ಹಾಗೂ ಕ್ರಮಗಳ ಕಾರ್ಯದಕ್ಷತೆಯ ಬಗ್ಗೆ ಸಂಶಯ ಹುಟ್ಟಿಸುತ್ತದೆ.

ಚಿಹ್ನೆಗಳು: ಕೋಳಿಕಾಲರ ಒಂದು ರಕ್ತ ನಂಜುರೋಗ, ಹಿಂದೆ ಯಾವ ಚಿಹ್ನೆಯನ್ನೂ ತೋರಿಸದೆ ಕೋಳಿಗಳು ಮನೆ ಹಾಗೂ ಗೂಡುಗಳಲ್ಲಿ ಇದ್ದಕ್ಕಿದ್ದಂತೆ ಸತ್ತಾಗ ಈ ರೋಗದ ಬಗ್ಗೆ ಸಂಶಯಪಡಬಹುದು. ಪಾಶ್ಚುರೆಲ್ಲಾ – ಏವಿಸೆಪ್ಟಿಕ ಎಂಬ ಏಕಾಣುಜೀವಿಯೇ ಈ ರೋಗಕ್ಕೆ ಕಾರಣ. ಹೆಣಕೊಯ್ತದ ಪರೀಕ್ಷೆಯಲ್ಲಿ ಹೃದಯ ಹಾಗೂ ಕರುಳಿನ ಒಳಪದರಿನ ಕೆಳಗೆ ರಕ್ತ ಸೋರಿದ ಚಿಹ್ನೆಗಳು ಕಂಡುಬರುತ್ತವೆ. ಈಲಿ, ಪ್ಲೀಹ, ಮೂತ್ರಕೋಶ ಮತ್ತು ಹೃದಯಕೋಶಗಳಲ್ಲೂ ಉರಿತ ಉಂಟಾಗಿರುತ್ತದೆ. ಈ ರೋಗನಿದಾನ ಪ್ರಯೋಗಾಲಯದಲ್ಲಿ ಬಹಳ ಸುಲಭ; ಆದುದರಿಂದ ಅನುಮಾನ ಬಂದಲ್ಲೆಲ್ಲ ಈ ಕ್ರಮವನ್ನನುಸರಿಸಬೇಕು.

ಚಿಕಿತ್ಸೆ: ರೋಗದ ಬೆಳವಣಿಗೆ ಬಹಳ ತೀವ್ರವಾದುದರಿಂದ ಚಿಕಿತ್ಸೆಗೆ ಸಮಯ ಬಹಳ ಕಡಮೆ. ರೋಗ ಹರಡದಂತೆ ಪ್ರತಿಬಂಧಕ ಕ್ರಮಗಳನ್ನು ಮಾತ್ರ ಕೈಗೊಳ್ಳಬಹುದು. ಅಂಗೀಕೃತ ಸ್ವಚ್ಛತಾ ಪದ್ಧತಿಗಳನ್ನನುಸರಿಸುವುದು ಹಾಗೂ ರೋಗ ತಗುಲಬಹುದಾದ ಎಲ್ಲ ಕೋಳಿಗಳಿಗೂ ಮೊದಲು ಕೋಳಿ ಕಾಲರ ರಕ್ತನೀರನ್ನು ಕೊಟ್ಟು ವಾರದಿಂದ ಹತ್ತುದಿನಗಳ ನಂತರ ಕೋಳಿಕಾಲರ ಲಸಿಕೆ ಹಾಕುವುದು ಅತ್ಯುತ್ತಮ ಪ್ರತಿರೋಧಕ ಕ್ರಮ. ರೋಗ ನಿರೋಧಕ ಶಕ್ತಿ ತಾತ್ಕಾಲಿಕ ಹಾಗೂ ಆ ಕಾಲಕ್ಕೆ ಮಾತ್ರವಿರುತ್ತದೆ.

ಕ್ಷಯ: ಇದು ಮೈಕೊ ಬ್ಯಾಕ್ಟೀರಿಯಂ ಟ್ಯುಬರ್‌ಕ್ಯುಲೋಸಿನ್ (ಕೋಳಿ ಪ್ರಭೇದ) ಎಂಬ ಏಕಾಣುಜೀವಿಯಿಂದ ಉಂಟಾಗುವ ಒಂದು ಅತಿ ಸಾಂಕ್ರಾಮಿಕ ರೋಗ.

ಚಿಹ್ನೆಗಳು: ರೋಗಪೀಡಿತ ಕೋಳಿಮರಿಗಳು ಬಹಳ ಹಗುರವಾಗುತ್ತವೆ ಮತ್ತು ಎದೆ ಮೂಳೆ ಮೇಲೆ ಮಾಂಸವಿಲ್ಲದಂತಾಗುತ್ತದೆ. ಜುಟ್ಟು ಮತ್ತು ಜೋಲು ಮಾಂಸಲಗಳು ಬಿಳಿಚಿಕೊಳ್ಳುತ್ತವೆ. ರೋಗದ ಕೊನೆಯ ಹಂತಗಳಲ್ಲಿ ಕಾಲಿನ ಲಕ್ವ ಉಂಟಾಗಿ ಕುಂಟುವಿಕೆ ಪ್ರಾರಂಭವಾಗುತ್ತದೆ. ಹೆಣವನ್ನು ಕೊಯ್ದು ಪರೀಕ್ಷಿಸಿದಾಗ,

ಈಲಿ, ಪ್ಲೀಹ, ಕರುಳುಗಳು ಹಾಗೂ ಪುಪ್ಪುಸಗಳಲ್ಲಿ ಸೂಜಿಮೊನೆಯಿಂದ ಅವರೆಕಾಳು ತನಕದ ಗಾತ್ರದ ನೆರೆಬಿಳಿಗಂಟುಗಳು ಕಾಣುತ್ತವೆ.

ಚಿಕಿತ್ಸೆ: ಈ ರೋಗಕ್ಕೆ ಚಿಕಿತ್ಸೆಯಿಲ್ಲ. ಇಡೀ ಗುಂಪನ್ನು ಟ್ಯುಬರ್‌ಕ್ಯುಲಿನ್ ಪರೀಕ್ಷೆಗೆ ಒಳಪಡಿಸಿ, ರೋಗವನ್ನು ಹೊಂದಿರುವ ಕೋಳಿಗಳನ್ನು ಆದಷ್ಟು ಬೇಗ ಬೇರ್ಪಡಿಸಿ ನಾಶಪಡಿಸಬೇಕು.

ಪರಾವಲಂಬಿಗಳಿಂದ ಉಂಟಾಗುವ ರೋಗಗಳು

ದೇಶದ ವಾತಾವರಣ ಕೋಳಿ ಪರಾವಲಂಬಿಗಳ ಹರಡುವಿಕೆಗೆ ಸಹಕಾರಿಯಾಗಿದೆ. ಮುಖ್ಯವಾದ ಪರಾವಲಂಬಿಗಳನ್ನು ಕೆಳಗಿನಂತೆ ವರ್ಗೀಕರಿಸಬಹುದು :


(i) ಮುಂಜೀವಿ ವರ್ಗ ಪರಾವಲಂಬಿಗಳು
(ii) ಒಳಪರಾವಲಂಬಿಗಳು ಅಥವಾ ಕರುಳು ಹುಳುಗಳು ಅಥವಾ ಜಂತುಗಳು
(iii) ಹೊರ ಪರಾವಲಂಬಿಗಳು

ಈ ಪರಾವಲಂಬಿಗಳಿಂದ ಉಂಟಾಗುವ ರೋಗಗಳನ್ನು ಕೆಳಗೆ ಚರ್ಚಿಸಲಾಗಿದೆ:

ಮುಂಜೀವಿ ವರ್ಗ ಪರಾವಲಂಬಿಗಳು

ಮುಂಜೀವಿವರ್ಗದ ಗುಂಪಿನಲ್ಲಿ 'ಕಾಯ್ಸೀಜಾಣುಬೇನೆ' ಎಂಬ ತೀವ್ರತರ ಬೇನೆಯನ್ನುಂಟುಮಾಡುವ ಕಾಯ್ಸೀಜಾಣು (ಕಾಕ್ಸಿಡಿಯ) ಕೋಳಿ ಉದ್ಯಮದಲ್ಲಿ ಹೆಚ್ಚಿನ ಹಾನಿಯನ್ನುಂಟುಮಾಡುತ್ತದೆ. ಬೆಳೆಯುತ್ತಿರುವ ಎಳೆ ಕೋಳಿಗಳಲ್ಲಿ ಇದು ಚೈತನ್ಯವನ್ನು ಕುಗ್ಗಿಸುತ್ತದೆ, ಅಭಿವೃದ್ಧಿಯನ್ನು ಕುಗ್ಗಿಸುತ್ತದೆ. ಮೊಟ್ಟೆ ಇಡುವಿಕೆ ತಡವಾಗುವಂತೆ ಮಾಡುತ್ತದೆ ಮತ್ತು ಸಾವನ್ನೂ ಉಂಟುಮಾಡುತ್ತದೆ. ಮೊಟ್ಟೆ ಇಡುತ್ತಿರುವ ಗುಂಪಿನಲ್ಲಿ ಇದು ಮೊಟ್ಟೆ ಉತ್ಪಾದನೆಯನ್ನು ಕುಗ್ಗಿಸುತ್ತದೆ.

ಕಾಯ್ಸೀಜಾಣು ಬೇನೆಯನ್ನುಂಟುಮಾಡುವ ಜೀವಿಗಳು, ಜೀವಿವರ್ಗದಲ್ಲಿ ಅತಿ ಕೀಳುಮಟ್ಟದ ಒಂದೇ ಕೋಶದ, ಸೂಕ್ಷ್ಮದರ್ಶಕದಲ್ಲಿ ಮಾತ್ರ ನೋಡಬಹುದಾದ ಪ್ರಾಣಿ ಪರಾವಲಂಬಿಗಳು. ಇದರಲ್ಲಿ ಕೋಳಿಮರಿಗಳನ್ನು ಕಾಡುವ ಎಂಟು ಪ್ರಭೇದಗಳಿವೆ. ಇವುಗಳಲ್ಲಿ ಎರಡು ಉಳಿದವುಗಳಿಗಿಂತ ಹೆಚ್ಚು ಮರಣಕಾರಿ. ಇವುಗಳಲ್ಲಿ ಒಂದಾದ ಐಮೆರಿಯ ಟೆನೆಲ್ಲ ಕೋಳಿಮರಿಗಳ ಮೂಗರುಳನ್ನು ಬಾಧಿಸಿ (ಚಿತ್ರ 123) ಮೂಗರುಳಿನ ಕಾಯ್ಸೀಜಾಣುಬೇನೆ ಎಂದು ಕರೆಯಲ್ಪಡುವ, ಸಾಮಾನ್ಯವಾಗಿ ಕಂಡುಬರುವ ರೋಗವನ್ನುಂಟುಮಾಡುತ್ತದೆ. ಮೂರು ವಾರದಿಂದ ನಾಲ್ಕು ತಿಂಗಳುಗಳೊಳಗಿನ ಕೋಳಿಮರಿಗಳು ಸಾಮಾನ್ಯವಾಗಿ ಈ ರೋಗಕ್ಕೆ ತುತ್ತಾಗುತ್ತವೆ. ಐಮೆರಿಯ ಮೈಟಿಸ್ ಎಂಬ ಇನ್ನೊಂದು ಪ್ರಭೇದವು ಸಾಮಾನ್ಯವಾಗಿ ಬೆಳೆದ ಕೋಳಿಗಳ ಸಣ್ಣಕರುಳಿನ ಮುಂಭಾಗವನ್ನು ಆಕ್ರಮಿಸುತ್ತದೆ (ಚಿತ್ರ 124).



ಚಿತ್ರ 123: ಕಾಯ್ಬೀಜಾಣು ಬೇನೆ (ಮೂಗರುಳು ರೀತಿ)—ಮೂಗರುಳು ಪೀಡಿತವಾಗಿರುವುದನ್ನು ಕಾಣಬಹುದು.



ಚಿತ್ರ 124: ಕಾಯ್ಬೀಜಾಣು ಬೇನೆ (ಕರುಳಿನ ರೀತಿ)

ಕೋಳಿಮರಿಗಳನ್ನು ರೋಗದ ಸೋಂಕಿರುವ ಮನೆ, ಕೂಡುಕಡ್ಡಿ, ಹಿತ್ತಲು ಹಾಗೂ ಬಯಲುಗಳಲ್ಲಿ ಸಾಕಿದಾಗ ರೋಗ ಹಬ್ಬುತ್ತದೆ. ಈ ಕೆಳಗೆ ತೋರಿಸಿರುವ ಮಾರ್ಗಗಳಲ್ಲಿ ಒಂದು ಅಥವಾ ಹೆಚ್ಚು ಮಾರ್ಗಗಳಿಂದ ರೋಗ ಬೆರಕೆಯಾಗಬಹುದು:


(1) ಕಾಯ್ಬೀಜಾಣುಗಳ ತತ್ತಿಚೀಲ(ಊಸಿಸ್ಟ್) ಗಳನ್ನೊಳಗೊಂಡ ಕೋಳಿ ಮರಿಗಳ ಹಿಕ್ಕೆಯಿಂದ,

(2) ಇತರೆ ಕೋಳಿಗಳು ಅಥವಾ ಪ್ರಾಣಿಗಳು ಅಥವಾ ಕೆಲಸಗಾರರು ಅಥವಾ ಪ್ರೇಕ್ಷಕರುಗಳು ಯಾಂತ್ರಿಕವಾಗಿ ತಂದ ಕಾಯ್ಬೀಜಾಣುಗಳಿಂದ,

(3) ಹಿತ್ತಲು ಹಾಗೂ ಬಯಲುಗಳಲ್ಲಿನ ಕೋಳಿಗೊಬ್ಬರಗಳಿಂದ,

ಕಾಯ್ಬೀಜಾಣುವಿನ ಜೀವನ ಚಕ್ರ: ಕಾಯ್ಬೀಜಾಣುವಿನ ಜೀವನಚಕ್ರ ಸಂಕೀರ್ಣವಾದುದು (ಚಿತ್ರ 125). ಬೀಜಕಣವಾದ ತತ್ತಿಚೀಲವನ್ನು ಅದರ ಸೋಂಕಿನ ಸ್ಥಿತಿಯಲ್ಲಿ, ಕೋಳಿಮರಿಗಳು ಸೇವಿಸಿದಾಗ ಅದರಲ್ಲಿರುವ ಎಂಟು ಸೋಂಕಿಕ ಜೀವಿಗಳು ಕರುಳು ಪದರದ ಒಂದೊಂದು ಜೀವಕೋಶವನ್ನು ಪ್ರವೇಶಿಸುತ್ತವೆ. ಪ್ರತಿಯೊಂದು ಸೋಂಕಿಕ ಘಟಕವೂ 16 ಬಾರಿ ಹೆಚ್ಚಿ, ಜೀವಕೋಶವನ್ನು ಒಡೆದುಕೊಂಡು ಹೊರ ಬರುತ್ತವೆ. ನಂತರ ಅವು ಮತ್ತೆ 16 ಜೀವಕೋಶಗಳನ್ನು ಪ್ರವೇಶಿಸುತ್ತವೆ. ಅನಿರ್ದಿಷ್ಟವಾದ ಯಾವುದೋ ಒಂದು ಹಂತರದಲ್ಲಿ ಜೀವಿಗಳು ಹೆಚ್ಚುವುದು ನಿಂತು, ಗಂಡು ಹೆಣ್ಣು ಜೀವಿಗಳು ಉತ್ಪಾದನೆಯಾಗುವವರೆಗೆ ಮೇಲೆ ಹೇಳಿದ ರೀತಿ ಜೀವಿಗಳ ಹೆಚ್ಚುವಿಕೆ ಮುಂದುವರಿಯುತ್ತದೆ. ಈ ಘಟಕಗಳು ತತ್ತಿಚೀಲಗಳನ್ನು ಉತ್ಪಾದಿಸುತ್ತವೆ, ಅವು ಹಿಕ್ಕೆಯ ಮೂಲಕ ಹೊರಬೀಳುತ್ತವೆ. ತತ್ತಿಚೀಲಗಳು ಶಾಖ ಮತ್ತು ಕ್ರಿಮಿನಾಶಕಗಳ ಕ್ರಿಯೆಗೆ ಮಣಿಯದೆ ಉಳಿಯುತ್ತವೆ ಹಾಗೂ ಮಣ್ಣು ಮತ್ತು ಕೋಳಿಮನೆಗಳಲ್ಲಿ ಹಲವು ವರ್ಷಗಳು ಜೀವಿಸಿರಬಲ್ಲವು. ಹೊಸದಾಗಿ ಹೊರಬಿದ್ದಾಗ ತತ್ತಿಚೀಲವು ಸೋಂಕಿಕವಾಗಿರುವುದಿಲ್ಲ; ಆದರೆ ಸೂಕ್ತ ಶಾಖ ಹಾಗೂ ಆರ್ದ್ರ ಸ್ಥಿತಿಯಲ್ಲಿ 21 ಗಂಟೆಗಳಲ್ಲಿ ಬೀಜಕಣಗಳಾಗಿ ಸೋಂಕಿಕವಾಗುತ್ತವೆ.

(i) **ಮೂಗರುಳಿನ ಕಾಯ್ಬೀಜಾಣು ಬೇನೆ:** ಇದು ಒಂದು ಮರಣಕಾರಕ ರೋಗ. ಆದಾಗ್ಯೂ ಈ ರೋಗದಲ್ಲಿ ಉಳಿದ ಕೋಳಿಗಳು ಬಹುಬೇಗ ಚೇತರಿಸಿಕೊಳ್ಳುತ್ತವೆ. ಈ ರೋಗದ ಚಿಹ್ನೆ ಹಾಗೂ ಗಾಯಗಳು ರಕ್ತಯುಕ್ತ ಹಿಕ್ಕೆ, ಬಿಳುಚಿಕೊಂಡ ಮುಖ ಹಾಗೂ ಕಾಲು, ರಕ್ತಗೂಡಿದ ಕಂಡಿ, ರಕ್ತದಿಂದ ಹಿಗ್ಗಿದ ಮೂಗರುಳು ಅಥವಾ ಹಳದಿ ನೆರೆ ಬಣ್ಣದ ಗಿಣ್ಣನಂತಹ ಒಳಭಾಗ ಮತ್ತು ಇದ್ದಕ್ಕಿದ್ದಂತೆ ಸಾಯುವುದು ಇವುಗಳನ್ನು ಒಳಗೊಳ್ಳುತ್ತದೆ. ಮುಂದುವರಿದ ಸ್ಥಿತಿಗಳಲ್ಲಿ ಹೊಳಪಿಲ್ಲದ ಹಾಗೂ ಜೋತುಬಿದ್ದ ರೆಕ್ಕೆಗಳು, ಕೆದರಿದ ಗರಿಗಳು ಮತ್ತು ಸಮತೋಲವಿಲ್ಲದ ನಡಿಗೆ ಕಂಡುಬರುತ್ತದೆ.



ಚಿತ್ರ 125: ಕಾಯ್ಸೀಜಾಣು ಜೀವಿಯ ಜೀವನ ಚಕ್ರ.

[Days=ದಿನಗಳು. Coccidiostatic Agent Control=ಕಾಯ್ಸೀಜಾಣು ನಿರೋಧಕಗಳಿಂದ ನಿಯಂತ್ರಣ. Multiplies Indefinitely=ಅನಿಶ್ಚಿತಕಾಲ ಸಂಖ್ಯಾಭಿವೃದ್ಧಿ ಹೊಂದುತ್ತದೆ, Sanitation Control=ಸ್ವಚ್ಛತಾ ನಿಯಂತ್ರಣ. Producing Millions=ಲಕ್ಷಗಟ್ಟಳೆ ಉತ್ಪಾದನೆ, 21 hours minimum under ideal temperature and moisture conditions=ಸೂಕ್ತಶಾಖ ಹಾಗೂ ಆರ್ದ್ರತೆಗಳಲ್ಲಿ ಕನಿಷ್ಠ 21 ಗಂಟೆಗಳು]

(ii) **ಕರುಳಿನ ಕಾಯ್ಸೀಜಾಣು ಬೇನೆ:** ಮೇಲೆ ಹೇಳಿದ ಕಾಯ್ಸೀಜಾಣುಗಳ ಏಳು ಪ್ರಭೇದಗಳಲ್ಲಿ ಒಂದು ಅಥವಾ ಹೆಚ್ಚು ಪ್ರಭೇದಗಳಿಂದ ಈ ಕರುಳಿನ ಕಾಯ್ಸೀಜಾಣು ಬೇನೆ ಉಂಟಾಗಬಹುದು. ಈ ಎಲ್ಲ ಪ್ರಭೇದಗಳಿಂದ ಉಂಟಾಗುವ ಮುಖ್ಯ ಚಿಹ್ನೆಯೆಂದರೆ ಬಿಳಿಚಿಕೊಳ್ಳುವಿಕೆ. ಕೊಕ್ಕು ಮತ್ತು ಕಣಕಾಲುಗಳು ಬಿಳುಚಿಕೊಳ್ಳುತ್ತವೆ ಇಲ್ಲವೇ ಬೆಳ್ಳಗಾಗುತ್ತವೆ. ರೋಗಕ್ಕೆ ತುತ್ತಾದ ಭಾಗದಲ್ಲಿನ ಗಾಯಗಳು ರೋಗಕ್ಕೆ ಕಾರಣವಾದ ಪ್ರಭೇದವನ್ನವಲಂಬಿಸುತ್ತವೆ.

ಚಿಹ್ನೆಗಳನ್ನು ಗಮನಿಸುವುದರಿಂದ ಹಾಗೂ ಹಿಕ್ಕೆಯನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿ ಅದರಲ್ಲಿ ತತ್ತಿಚೀಲಗಳನ್ನು ಕಂಡುಕೊಳ್ಳುವುದರಿಂದ ಈ ಎರಡೂ ರೀತಿಯ ರೋಗಗಳ ನಿದಾನವನ್ನು ಸರಿಯಾಗಿ ಮಾಡಬಹುದು.

ಚಿಕಿತ್ಸೆ: ಕಾಯ್ಸಿಡಿಯಾಣು ಬೇನೆಯನ್ನು ನಿಯಂತ್ರಿಸಲು ಮೂರು ವರ್ಗಗಳಿವೆ. (1) ಸರಿಯಾದ ಸ್ವಚ್ಛತೆ (2) ನಿರೋಧಕವಾಗಿ ಕಾಯ್ಸಿಡಿಯಾಣು ಬಂಧಕ ಔಷಧಿಗಳನ್ನು ಉಪಯೋಗಿಸುವುದು ಮತ್ತು (3) ರೋಗಕ್ಕೆ ಚಿಕಿತ್ಸೆ.

ಸ್ವಚ್ಛತೆ: ಒಳ್ಳೆಯ ಆರೋಗ್ಯ ನಿಯಮಗಳು ಹಾಗೂ ಬಯಲಿನ ಉತ್ತಮ ನಿರ್ವಹಣೆಗಳು ಸೋಂಕಿನ ಸಾಧ್ಯತೆಯನ್ನು ಬಹಳಷ್ಟು ಕಡಮೆ ಮಾಡುತ್ತವೆ. ಕೋಳಿ ಮನೆಯ ನೆಲ ಮತ್ತು ಕೋಳಿಗಳನ್ನು ಸಾಕಲು ಉಪಯೋಗಿಸಿದ ಎಲ್ಲ ಸಲಕರಣೆಗಳನ್ನು ನಿಯತಕಾಲದಲ್ಲಿ ಬಿಸಿಯಾದ ತೀವ್ರ ಕ್ಷಾರಜಲದಿಂದ ಉಜ್ಜಿ ತೊಳೆಯಬೇಕು. ಮರಿಗಳನ್ನು ತಂತಿಬಲೆಯ ಮೇಲೆ ಸಾಕಿದಾಗ ಮತ್ತು ಬೆಳೆದ ಕೋಳಿಗಳನ್ನು ಹಿಂದೆ ಕೋಳಿಗಳನ್ನು ಬಿಟ್ಟಿರದ ಇಲ್ಲವೇ ನಂತರ ಅಗೆದು ಬೇಸಾಯಮಾಡಿರುವ ಬಯಲಲ್ಲಿ ಬಿಟ್ಟಾಗ ಬೇನೆಯ ಸಾಧ್ಯತೆ ಅತ್ಯಲ್ಪ.

ಕಾಯ್ಸಿಡಿಯಾಣು ಬಂಧಕ ಔಷಧಗಳ ನಿರೋಧಕ ಬಳಕೆ: ಕೆಲವು ಸಲ್ಫ ಗಳಂತಹ ಕಾಯ್ಸಿಡಿಯಾಣು ಬಂಧಕ ಔಷಧಗಳನ್ನು, ಕಾಯ್ಸಿಡಿಯಾಣು ಬೇನೆಯ ಸಂಭವ ಕಂಡಾಗ ಕೋಳಿಗಳ ಆಹಾರ ಹಾಗೂ ನೀರಿನಲ್ಲಿ ಸೇರಿಸಬೇಕು. ಈ ಔಷಧಿಗಳು ಕೋಳಿಗಳ ಶರೀರದಲ್ಲಿ ಜೀವಿಗಳು ಹೆಚ್ಚುವುದನ್ನು ತಡೆಗಟ್ಟುವುದರ ಮೂಲಕ ಕೋಳಿಗಳಲ್ಲಿ ರೋಗ ನಿರೋಧಕ ಶಕ್ತಿ ಉಂಟುಮಾಡುತ್ತವೆ.

ಚಿಕಿತ್ಸೆ: ಸ್ವಲ್ಪ ಔಷಧಗಳನ್ನು ರೋಗಪೀಡಿತ ಗುಂಪಿಗೆ ಕೊಟ್ಟರೆ ಉತ್ತಮ ಫಲಿತಾಂಶ ಕೊಡುತ್ತವೆ. ರೋಗಪೀಡಿತ ಕೋಳಿಗಳಿಗೆ ಸಲ್ಫಮೆಜಥಿನ್ ಮತ್ತು ಸಲ್ಫಕ್ವಿನಾಕ್ಸಲಿನ್‌ಗಳನ್ನು ಶೇಕಡಾ ½ ಪ್ರಮಾಣದಲ್ಲಿ ಮೂರರಿಂದ ಏಳುದಿನಗಳವರೆಗೆ ಕುಡಿಯುವ ನೀರು ಅಥವಾ ಮೇವಿನೊಂದಿಗೆ ಕೊಡಬೇಕು; ಇದನ್ನೇ ಪ್ರಾರಂಭ ದೆಸೆಯಲ್ಲಿ ಕೊಟ್ಟಾಗ ರೋಗ ಹೆಚ್ಚುವುದನ್ನು ತಡೆಯುತ್ತದೆ. ಸಲ್ಫಕ್ವಿನಾಕ್ಸಲಿನ್ ಅನ್ನು ಅದರ ಅತಿಕಡಮೆ ವಿಷಪ್ರಭಾವದಿಂದಾಗಿ ಬೇರೆಲ್ಲ ಸ್ವಲ್ಪ ಔಷಧಿಗಳಿಗಿಂತ ಹೆಚ್ಚು ಇಷ್ಟಪಡುತ್ತಾರೆ. ತಾರತಮ್ಯಜ್ಞಾನವಿಲ್ಲದ ಔಷಧಗಳ ಬಳಕೆ, ಅದರಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವುದು ಅಪಾಯಕರ; ಆದುದರಿಂದ ಇದನ್ನು ತಪ್ಪಿಸಬೇಕು.

ಔಷಧಗಳ ಸಹಾಯದಿಂದ ಕಾಯ್ಸಿಡಿಯಾಣು ಬೇನೆ ನಿಯಂತ್ರಣದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಕೆಲಸ ನಡೆದಿದೆ. ಹೆಚ್ಚುಹೆಚ್ಚು ಜೀವಿಗಳು ಒಳಹೊಗುವುದನ್ನು ತಪ್ಪಿಸಿದರೆ, ಕೋಳಿಗಳು ಆ ನಿರ್ದಿಷ್ಟ ಕಾಯ್ಸಿಡಿಯಾಣು ಪ್ರಭೇದದ ವಿರುದ್ಧ ನಿರೋಧಕ ಶಕ್ತಿಯನ್ನು ಹೊಂದುತ್ತವೆಂಬುದನ್ನು ತೋರಿಸಲಾಗಿದೆ.

ಡೀಪ್ ಲಿಟರ್ ವ್ಯವಸ್ಥೆಯಲ್ಲಿ ಕೋಳಿ ಸಾಕುವ ಪ್ರಯೋಗಗಳಿಂದ ಲಿಟರ್ ಒಣಸ್ಥಿತಿಯಲ್ಲಿರುವವರೆಗೂ ಈ ವ್ಯವಸ್ಥೆ ತತ್ತಿಚೀಲಗಳ ಸಂಖ್ಯೆಯನ್ನು ಕಡಮೆ

ಮಾಡುವುದೆಂದು ಕಂಡುಬಂದಿದೆ. ಹಾಗಲ್ಲದೆ ಲಿಟರ್‌ನಲ್ಲಿನ ಹೆಚ್ಚಿನ ತೇವಾಂಶ ಅವುಗಳ ಸಂಖ್ಯೆಯಲ್ಲಿನ ಹೆಚ್ಚಳಕ್ಕೆ ಕಾರಣವಾಗುತ್ತದೆ. ಲಿಟರ್ ಒಳಗಿನ ಶಾಖವು 125°F ಅಥವಾ ಇನ್ನೂ ಹೆಚ್ಚಿಗೆ ಆಗುವಂತೆ ಅದನ್ನು ಗುಡ್ಡೆ ಹಾಕುವುದು ಅಥವಾ ಒಣ ಲಿಟರ್‌ಅನ್ನು ಅಮೋನಿಯಾ ಕ್ರಿಯೆಗೆ ಒಳಪಡಿಸುವುದು ಕಾಯಿಬೀಜಾಣುಗಳ ತತ್ತಿಚೀಲಗಳನ್ನು ಪರಿಣಾಮಕಾರಿಯಾಗಿ ನಾಶಪಡಿಸುತ್ತದೆ.

ಒಳ ಪರಾವಲಂಬಿಗಳು

ಒಳ ಪರಾವಲಂಬಿಗಳು ಅಥವಾ ಕರುಳುಹುಳುಗಳು ಇಲ್ಲವೇ ಸಾಮಾನ್ಯವಾಗಿ ಬಳಕೆಯಲ್ಲಿರುವಂತೆ ಜಂತುಗಳು ಮೂರು ಗುಂಪಿನ ಪರಾವಲಂಬಿಗಳಿಂದಾಗಿವೆ. ಅವುಗಳೆಂದರೆ ಚಪ್ಪೆಹುಳು, ಜಂತುಹುಳು ಅಥವಾ ದುಂಡುಹುಳು ಮತ್ತು ಲಾಡಿಹುಳುಗಳು. ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

ದುಂಡುಹುಳುಗಳು: ಹೆಸರೇ ಹೇಳುವಂತೆ ಈ ಜಂತುಗಳು ಕೊಳವೆಯಾಕಾರವಾಗಿರುತ್ತವೆ. ಉದ್ದ 2 ರಿಂದ 5 ಅಂಗುಲಗಳು ಹಾಗೂ ದಪ್ಪ ಪೆನ್ಸಿಲ್ಲಿನಲ್ಲಿನ ಸೀಸದ ಗಾತ್ರದಷ್ಟು. ಲಾಡಿಹುಳುಗಳಿಗೆ ವ್ಯತಿರಿಕ್ತವಾಗಿ ಇವುಗಳ ಮೊಟ್ಟೆಗಳು ಕೋಳಿಗಳ ಶರೀರದೊಳಗೇ ಇಡಲ್ಪಟ್ಟು ನಂತರ ಹೊರಬರುತ್ತವೆ. ಈ ಮೊಟ್ಟೆಗಳನ್ನು ಇತರ ಕೋಳಿಗಳು ಸೇವಿಸಿದಾಗ ಪರಾವಲಂಬಿಗಳು ಅವುಗಳಿಗೂ ಹಬ್ಬುತ್ತವೆ. ಮೂರು ಪ್ರಭೇದಗಳು ಸಾಮಾನ್ಯ, ಅವುಗಳೆಂದರೆ ದೊಡ್ಡ ಮತ್ತು ಸಣ್ಣ ದುಂಡುಹುಳುಗಳು ಹಾಗೂ ಮೂಗರುಳ ಜಂತುಗಳು. ಇವು ಕರಳುಗಳಲ್ಲಿ ಲಾಡಿಹುಳುಗಳಿಗಿಂತ ಕೆಳಭಾಗದಲ್ಲಿರುತ್ತವೆ. ಕೆಲವು ಸಾರಿ ಅವು ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತವೆಂದರೆ ಕರುಳಿನ ನಾಳ ಮುಚ್ಚಿಹೋಗುತ್ತದೆ. ಇವು ಕರುಳಿನ ಗೋಡೆಗಳಿಗೆ ಹತ್ತಿಕೊಂಡಿರುವುದಿಲ್ಲ.

ದೊಡ್ಡ ದುಂಡುಹುಳುಗಳು: ಅಸ್ಕೇರಿಡಿಯ ಗ್ಯಾಲಿ ಎಂಬ ದೊಡ್ಡ ದುಂಡುಹುಳುವು 4 ರಿಂದ 5 ಅಂಗುಲಗಳಷ್ಟು ಉದ್ದವಿರಬಹುದು ಮತ್ತು ಇವುಗಳನ್ನು ಕರಳನ್ನು ಸೀಳಿದ ಕೂಡಲೆ ಸುಲಭವಾಗಿ ನೋಡಬಹುದು. ಹಿಕ್ಕೆಯೊಂದಿಗೆ ಹೊರಬಿದ್ದ ಇವುಗಳ ಮೊಟ್ಟೆ ಸೂಕ್ತ ವಾತಾವರಣದಲ್ಲಿ ಎರಡು ವಾರಗಳಲ್ಲಿ ಸೋಂಕಕವಾಗುತ್ತವೆ. ಕೋಳಿಮರಿಗಳು ಈ ಮೊಟ್ಟೆಗಳನ್ನು ಮೇವು ಹಾಗೂ ನೀರಿನೊಂದಿಗೆ ಸೇವಿಸುತ್ತವೆ. ಈ ರೀತಿ ರೋಗ ಹರಡುತ್ತ ಹೋಗುತ್ತದೆ.


ಮೂಗರುಳು ಹುಳುಗಳು: ಸಾಮಾನ್ಯ ದುಂಡುಹುಳುವಾದ ಹೆಟೆರಾಕಿಸ್ ಗ್ಯಾಲಿನ ಮರಿಗಳ ಮೂಗರುಳಿನಲ್ಲಿ ಕಂಡುಬರುತ್ತದೆ. ಇದು ಸುಮಾರು $\frac{1}{2}$ ಅಂಗುಲ ಉದ್ದವಾಗಿರುತ್ತದೆ.

ಮೂಗರುಳ ಹುಳುಗಳು ಸ್ವತಃ ನಿರಪಾಯಕರವಾದವು. ಆದರೆ ಇವು ಕರಿದಲೆ ರೋಗದ ವಾಹಕವಾಗಿರುವುದರಿಂದ ಅಪಾಯಕಾರಿ. ನಿಯಂತ್ರಣದಲ್ಲಿ ಉತ್ತಮ

ಸ್ವಚ್ಛತಾ ವ್ಯವಸ್ಥೆ ಮತ್ತು ಈ ಹುಳುಗಳನ್ನು ಪರಿಣಾಮಕಾರಿಯಾಗಿ ಹೊರಹಾಕುವ ಹಾಗೂ ಕೊಲ್ಲುವ ಶಕ್ತಿಯುಳ್ಳ ಫಿನೋಥಯಾಜೀನ್ ಅನ್ನು ನಾಲ್ಕು ಅಥವಾ ಆರು ವಾರಗಳಿಗೊಮ್ಮೆ ಉಪಯೋಗಿಸುವುದೂ ಸೇರಿದೆ.

ಚಿಕಿತ್ಸೆ: ದೊಡ್ಡ ಕೋಳಿಗಳಿಗೆ 0.5 ಗ್ರಾಂ ಹಾಗೂ ಮೂರು ತಿಂಗಳಿಗೂ ಕಡಮೆ ವಯಸ್ಸಿನ ಮರಿಗಳಿಗೆ ಇದರಲ್ಲಿ ಅರ್ಧದಷ್ಟು ಫಿನೋಥಯಾಜೀನ್ ಗುಳಿಗೆಯ ರೂಪದಲ್ಲಿ ಒಂದು ಬಾರಿ ಬಾಯಿಂದ ಕೊಡುವುದರ ಮೂಲಕ ಈ ಜಂತುಗಳೆಲ್ಲವನ್ನೂ ಹೊರಹಾಕಬಹುದು. ಐದು ಅಥವಾ ಆರು ತಿಂಗಳುಗಳ ನಂತರ ಇದೇ ಚಿಕಿತ್ಸೆಯನ್ನು ಪುನರಾವರ್ತಿಸಬಹುದು.

ಗುಂಪಿನ ಎಲ್ಲ ಕೋಳಿಗಳಲ್ಲೂ, ಜಂತು ನಾಶಮಾಡಬೇಕಾದಾಗ ಪ್ರತಿಕೋಳಿಗೂ ಪ್ರತ್ಯೇಕವಾಗಿ ಚಿಕಿತ್ಸೆ ಕೊಡಬೇಕಾದ ಈ ರೀತಿ ಸಾಧ್ಯವಿಲ್ಲ. ಹೆಚ್ಚು ತೃಪ್ತಿದಾಯಕ ವಾದ ಒಂದು ವಿಧಾನವೆಂದರೆ ಕೋಳಿಗಳ ಮೇವಿನಲ್ಲಿ ಪ್ರತಿ 50 ಪೌಂಡಿಗೆ 1 ಪೌಂಡ್



ಚಿತ್ರ 126: ಲಾಡಿಹುಳು—ಪರಾವಲಂಬಿಗಳು ಕರುಳಿನ ಲೋಳೆಪರೆಗೆ ಕಚ್ಚಿಕೊಂಡಿರುವುದನ್ನು ಕಾಣಬಹುದು


ನಂತೆ ತಂಬಾಕಿನ ಹುಡಿ ಬೆರಸಿ ಅದನ್ನು ಸುಮಾರು ಒಂದು ತಿಂಗಳ ಕಾಲ ಗುಂಪಿನ ಎಲ್ಲ ಕೋಳಿಗಳಿಗೂ ಮೇಯಿಸುವುದು. ಈ ಪದ್ಧತಿ ಪ್ರತಿ ಕೋಳಿಯನ್ನೂ ಪ್ರತ್ಯೇಕವಾಗಿ ಚಿಕಿತ್ಸೆಗೊಳಪಡಿಸುವ ಅವಶ್ಯಕತೆ ಇಲ್ಲದಂತೆ ಮಾಡುತ್ತದೆ, ಪ್ರತಿಕೋಳಿಗೂ ಪ್ರತ್ಯೇಕ ಚಿಕಿತ್ಸೆ ಕೊಡುವಷ್ಟು ಇದು ಪರಿಣಾಮಕಾರಿಯಲ್ಲದಿದ್ದರೂ ತೃಪ್ತಿದಾಯಕ ಪರಿಹಾರ ಒದಗಿಸುತ್ತದೆ.

ಲಾಡಿಹುಳು: ಲಾಡಿಹುಳುಗಳು ಖಂಡಖಂಡಗಳಾದ ಪಟ್ಟಿಯಂತಹ ಬಿಳಿಯ ಹುಳುಗಳು. ಇವು ದುಂಡುಹುಳುಗಳಂತಲ್ಲದೆ ಈ ಜಾತಿಯ ಹೆಚ್ಚಿನ ಪ್ರಭೇದಗಳು ತಲೆಯಲ್ಲಿ ಹೊಂದಿರುವ ಕೊಕ್ಕೆಯ ಸಹಾಯದಿಂದ ಕರುಳಿನ ಗೋಡೆಗೆ ಅಂಟಿಕೊಂಡಿರುತ್ತವೆ (ಚಿತ್ರ 126). ಕೋಳಿಗಳಲ್ಲಿ ವಾಸಿಸುವ ಹಲವು ಪ್ರಭೇದಗಳಿವೆ. ಅವು ಉದ್ದದಲ್ಲಿ ಬಹಳ ವ್ಯತ್ಯಾಸ ಹೊಂದಿವೆ. ಅತ್ಯಂತ ಚಿಕ್ಕಪ್ರಭೇದಗಳು $\frac{1}{16}$ ರಿಂದ $\frac{1}{8}$ ಅಂಗುಲದಷ್ಟಿದ್ದರೆ ದೊಡ್ಡವು 8 ರಿಂದ 10 ಅಂಗುಲ ಉದ್ದವಾಗಿರುತ್ತವೆ.

ಲಾಡಿಹುಳುಗಳು ಸಾಮಾನ್ಯವಾಗಿ ಕೋಳಿಯ ಕರುಳಿನ ಮೇಲಿನ ಮೂರನೆ ಒಂದು ಭಾಗದಲ್ಲಿರುತ್ತವೆ. ಇವುಗಳ ಮೊಟ್ಟೆಗಳು ನೇರವಾಗಿ ಆರೋಗ್ಯವಂತ ಕೋಳಿಗಳಲ್ಲಿ ತೊಂದರೆಯನ್ನುಂಟುಮಾಡಲಾರವು. ಈ ವಿಷಯದಲ್ಲಿ ಲಾಡಿಹುಳುಗಳು ದುಂಡುಹುಳುಗಳಿಂದ ಬೇರೆಯಾಗಿರುತ್ತವೆ. ಮೊದಲು ಜೀರುಂಡೆ, ಬಸವನ ಹುಳು, ಗೊಂಡೆಹುಳು, ಎರೆಹುಳು, ಹೇನು, ನೊಣ ಮೊದಲಾದ ಮಧ್ಯಂತರ ಕೀಟಗಳು ಈ ಮೊಟ್ಟೆಗಳನ್ನು ಸೇವಿಸುತ್ತವೆ, ನಂತರ ಆರೋಗ್ಯವಂತ ಕೋಳಿಗಳು ಈ ಕೀಟಗಳನ್ನು ತಿಂದಾಗ ಕೋಳಿಗಳೊಳಗೆ ಲಾಡಿಹುಳುಗಳು ಅಭಿವೃದ್ಧಿ ಹೊಂದುತ್ತವೆ.

ಚಿಹ್ನೆಗಳು: ದುಂಡುಹುಳು ಮತ್ತು ಲಾಡಿಹುಳುಗಳೆರಡರಿಂದಲೂ ಉಂಟಾಗುವ ಸಾಮಾನ್ಯ ಚಿಹ್ನೆಗಳು ಒಂದೇ ತೆರನಾಗಿರುತ್ತವೆ. ಕೋಳಿಗಳು ತೆಳ್ಳಗೆ ಒಣಗಿಕೊಳ್ಳುತ್ತವೆ. ಮುಂದುವರಿದ ಪ್ರಸಂಗಗಳಲ್ಲಿ ಅವು ಅಕ್ಷರತಃ 'ಮೂಳೆ-ಚಕ್ಕಳ'ವಾಗುತ್ತವೆ. ಪರಾವಲಂಬಿಗಳು ಕೋಳಿಗಳು ಸೇವಿಸಿದ ಆಹಾರ ಅವುಗಳಿಗೆ ಸಿಗದಂತೆ ಮಾಡುವುದಲ್ಲದೆ ಅವುಗಳಿಗೆ ಅಪಾಯಕಾರಿಯಾದ ನಂಜುಗಳನ್ನೂ ಉತ್ಪಾದಿಸುತ್ತವೆ; ಇದಲ್ಲದೆ, ಅವು ಕರುಳಿನಲ್ಲಿ ನಿರುತರ ಉರಿತ ಹಾಗೂ ಆಹಾರ ಚಲನೆಗೆ ತಡೆ ಉಂಟು ಮಾಡುತ್ತವೆ. ಬಹಳ ಮುಂದುವರಿದ ಪರಿಸ್ಥಿತಿಗಳಲ್ಲಿ ಕುಂಟುಕಾಲಿನ ದುರ್ಬಲತೆ ಹಾಗೂ ಲಕ್ವಗಳನ್ನು ಕಾಣಬಹುದು. ಸಾಮಾನ್ಯವಾಗಿ ಹಸಿವು ಚೆನ್ನಾಗಿರುತ್ತದೆ ಮತ್ತು ಭೇದಿಯಿರುವುದಿಲ್ಲ. ಸಾವು ಪ್ರಮಾಣವನ್ನೊಳಗೊಂಡಂತೆ ಪರಾವಲಂಬಿಗಳ ಪ್ರಭಾವ ಪ್ರಾಯಸ್ಥ ಕೋಳಿಗಳಿಗಿಂತ ಮರಿಗಳಲ್ಲಿ ಹೆಚ್ಚು.

ನಿರೋಧ ಹಾಗೂ ನಿಯಂತ್ರಣ: ಹುಳುಗಳ ಹರಡುವಿಕೆ ಹಾಗೂ ಒಳ ಸೇರುವಿಕೆಗೆ ಸಹಾಯಕರವಾಗುವ ಪರಿಸ್ಥಿತಿಗಳನ್ನು ತೊಡೆದುಹಾಕುವುದರಿಂದ, ಈ ಜಂತುಗಳಿಂದಾಗಬಹುದಾದ ನಷ್ಟಗಳನ್ನು ತಡೆಗಟ್ಟಬಹುದು. ಸ್ವಚ್ಛತೆ ಮತ್ತು



ಚಿತ್ರ 127: ಸಾಮಾನ್ಯ ಹೇನಿನ ಮೊಟ್ಟೆಗಳನ್ನು ತೋರಿಸುತ್ತಿರುವ ಗರಿ (ಫಾರ್ಮರ್ ಅಂಡ್ ಸ್ಟಾಕ್ ಬ್ರೀಡ

ಆರೋಗ್ಯಕ್ರಮಗಳು ಬಹುಮುಖ್ಯವಾದವು. ಗುಂಪಿನಲ್ಲಿ ಲಾಡಿಹುಳು ಉಳ್ಳ ಕೋಳಿಗಳು ಮೇಲ್ವಿಚಾರಣಾ ಪದ್ಧತಿಗಳಿಗೆ ದರ್ಪಣ.

ಗುಂಪಿನಲ್ಲಿ ಹೆಚ್ಚಿನ ಕೋಳಿಗಳು ಲಾಡಿಹುಳುಗಳನ್ನು ಹೊಂದಿರುವಾಗ ಅವುಗಳ ಮೊಟ್ಟೆಗಳು ಕೋಳಿ ಆವರಣದ ತುಂಬ ಹರಡಿರುತ್ತವೆ. ಸ್ವಚ್ಛತೆಯನ್ನು ಪರಾವಲಂಬಿ ನಿಯಂತ್ರಣದ ಮುಖ್ಯ ಮಾರ್ಗವೆಂದು ಪರಿಗಣಿಸಬೇಕು. ಆದುದರಿಂದ (1) ಕೋಳಿಮನೆಯಿಂದ ಹಿಕ್ಕೆಯನ್ನು ಆಗಾಗ್ಗೆ ತೆಗೆದು ಸರಿಯಾಗಿ ವಿಲೇವಾರಿ ಮಾಡಬೇಕು: (2) ಕೋಳಿಮರಿಗಳು ಹೋಗಬಹುದಾದಂತಹ ನೀರು ನಿಲ್ಲುವ ಜಾಗ ಅಥವಾ ತೇವದಿಂದ ಕೂಡಿದ ಜಾಗಗಳನ್ನು ಸರಿಯಾಗಿ ಭರ್ತಿಮಾಡಬೇಕು ಇಲ್ಲವೇ ನೀರು ಹರಿದುಹೋಗುವಂತೆ ಮಾಡಬೇಕು: (3) ಬಯಲುಗಳ ನಿಯತಕಾಲಿಕ ಬದಲಾವಣೆ ಮತ್ತು ಮತ್ತೆ ಕೋಳಿಗಳನ್ನು ಬಿಡುವ ಮೊದಲು ಆ ಜಾಗದ ಉಳುಮೆ ಹಾಗೂ ವ್ಯವಸಾಯ ಮಾಡಬೇಕು: (4) ಸರಿಯಾದ ವಾತಾಯನವಿಲ್ಲದಲ್ಲಿ ವ್ಯವಸ್ಥೆ ಮಾಡಬೇಕು ಹಾಗೂ ಕಡಮೆ ಜಾಗದಲ್ಲಿ ಹೆಚ್ಚು ಕೋಳಿಗಳನ್ನು ಗುಂಪುಗೂಡಿಸುವುದೇ ಮೊದಲಾದವುಗಳನ್ನು ತಪ್ಪಿಸಬೇಕು: (5) ಸ್ವಚ್ಛಮನೆ ಹಾಗೂ ಗೂಡುಗಳಿರಬೇಕು: ಸಾಕಷ್ಟು ಸಮತೋಲ ಆಹಾರ ಹಾಗೂ ಸ್ವಚ್ಛ ನೀರನ್ನು ಒದಗಿಸಬೇಕು ಮತ್ತು (6) ಸಾಮಾನ್ಯ ರೋಗವಾಹಕಗಳಾದ ಉಣ್ಣೆ. ಹೇನು. ನುಸಿ. ನೊಣ ಮತ್ತು ಬಸವನ ಹುಳುಗಳಿಗೆ ಕೋಳಿಯ ಹಿಕ್ಕೆ ಸಿಗದಂತೆ ನೋಡಿಕೊಳ್ಳಬೇಕು: ಈ ಹಲವು ಸಂಗತಿಗಳ ಕಡೆಗೆ ವಿಶೇಷ ಗಮನ ಕೊಡಬೇಕು. ಪ್ರತಿದಿನ ಆಂದಿನ ಹಿಕ್ಕೆಯನ್ನು ಹಾಕಿದ ಮೇಲೆ ಗೊಬ್ಬರದ ರಾಶಿಗೂ ಡಿ.ಡಿ.ಟಿ ಸಿಂಪರಣೆ ಮಾಡಬೇಕು.


ಚಿಕಿತ್ಸೆ: ಲಾಡಿಹುಳುಗಳನ್ನು ಹೊರಹಾಕುವುದು ದುಂಡುಹುಳುಗಳನ್ನು ಹೊರಹಾಕುವುದಕ್ಕಿಂತ ಕಷ್ಟದ ಕೆಲಸ ಮತ್ತು ಇದಕ್ಕೆ ತೀವ್ರತರ ಚಿಕಿತ್ಸೆ ಬೇಕಾಗುತ್ತದೆ. ಮೊದಲು ಕೋಳಿಗಳನ್ನು 12 ಗಂಟೆಗಳ ಕಾಲ ಉಪವಾಸವಿಡಬೇಕು. ನಂತರ 10 ರಿಂದ 15 ಗ್ರೈನ್‌ಗಳು ಕಮಾಲ ಪುಡಿಯನ್ನು ಗುಳಿಗೆ ರೂಪದಲ್ಲಿ ಕೊಡಬೇಕು. 1 : 10 (ಗ್ರೈನ್‌ಗಳು) ಪ್ರಮಾಣದಲ್ಲಿ ಹಸಿ ಅಡಕೆಪುಡಿ ಹಾಗೂ ಕಮಾಲ ಪುಡಿಯನ್ನು ಬೆರೆಸಿಕೊಡುವುದು ಹೆಚ್ಚು ಪ್ರಭಾವಕಾರಿಯೆಂದು ಕಂಡುಬಂದಿದೆ.

ಹೊರ ಪರಾವಲಂಬಿಗಳು

ಹೇನು. ಉಣ್ಣೆ. ನುಸಿ ಮತ್ತು ಚಿಗಟಗಳು ಸಾಮಾನ್ಯ ಹೊರಪರಾವಲಂಬಿಗಳು. ಇವು ಸಾಮಾನ್ಯವಾಗಿ ಕೋಳಿಗಳಿಗೆ ಹಾನಿಕಾರಕಗಳಾಗಿರುವುದಲ್ಲದೆ ಬಹಳ ನಷ್ಟವನ್ನೂ ಉಂಟುಮಾಡುತ್ತವೆ. ಹೇನಿನಂತಹ ಪರಾವಲಂಬಿಗಳು ತಮ್ಮ ಜೀವನ ಪರ್ಯಂತ ಪೂರ್ತಿ ತಮ್ಮ ಆತಿಥೇಯ ಪ್ರಾಣಿಗಳಿಗೇ ಅಂಟಿಕೊಂಡಿದ್ದು ಸಂಪರ್ಕದ ಮೂಲಕ ಮಾತ್ರ ಹರಡುತ್ತವೆ ಅಥವಾ ಉಣ್ಣೆ, ಚಿಗಟ ಮತ್ತು ನುಸಿಗಳಂತಹ ಪರಾವಲಂಬಿಗಳು ಸ್ವಚ್ಛಂದವಾಗಿ ಓಡಾಡುತ್ತವೆ.

ಕೋಳಿ ಉಣ್ಣೆ ಮತ್ತು ಸಾಮಾನ್ಯ ಕೆಂಪು ನುಸಿಗಳಂತಹ ಕೆಲವು ಪರಾವಲಂಬಿಗಳು, ದಿನದ ಸಮಯದಲ್ಲಿ ಅಡಗಿಕೊಂಡಿದ್ದು ರಾತ್ರಿಹೊತ್ತು ಮಾತ್ರ ಕೋಳಿಗಳ ಮೇಲೆ ಆಕ್ರಮಣ ನಡೆಸುತ್ತವೆ. ಆದುದರಿಂದ ಪರಾವಲಂಬಿಗಳ ವಿರುದ್ಧ ನಿರೋಧಕ್ರಮ ಕೈಗೊಳ್ಳಲು ಅವುಗಳ ನಡವಳಿಕೆ ಹಾಗೂ ಜೀವನಚಕ್ರಗಳ ಅರಿವು ಅಗತ್ಯ.

ಹೇನು: ಹೇನು ಕೋಳಿಗಳ ಅತಿಸಾಮಾನ್ಯ ಪರಾವಲಂಬಿ. ಇದು ರೆಕ್ಕೆ ಇಲ್ಲದ ನೆರೆ ಅಥವಾ ಹಳದಿ ಮಿಶ್ರಬಣ್ಣದ ಸಣ್ಣಕೀಟ. ಇದು ಮೇಲಿನಿಂದ ಕೆಳಕ್ಕೆ ಚಪ್ಪಟೆಯಾಗಿರುವ ಶರೀರ, ಮೊಂಡುತಲೆ ಮತ್ತು ಆರುಕಾಲುಗಳನ್ನು ಹೊಂದಿರುತ್ತದೆ. ಇದು ತನ್ನ ಪೂರ್ತಿ ಜೀವನಚಕ್ರವನ್ನು ಅತಿಥೇಯ ಕೋಳಿಯ ಮೇಲೆ ಪೂರ್ಣ ಸ್ವತಂತ್ರತೆಯಿಂದ ಓಡಾಡುತ್ತ ಕಳೆಯುತ್ತದೆ. ಇದು ಬಹಳ ಚಟುವಟಿಕೆಯ ಕೀಟ. ಒಂದು ಜೊತೆ ಹೇನು ಕೆಲವು ತಿಂಗಳುಗಳಲ್ಲೇ 1,20,000 ಮರಿಗಳನ್ನು ಉತ್ಪಾದಿಸ



ಚಿತ್ರ 128: ಕೋಳಿಗಳ ಮೇಲೆ ಹೇನು—ಅವುಗಳ ಜೀವನ ಚಕ್ರ ಹಾಗೂ ನಿಯಂತ್ರಣ.

Eggs=ಮೊಟ್ಟೆಗಳು. Become adult in 10 to 20 days=10 ರಿಂದ 20 ದಿನಗಳಲ್ಲಿ ವಯಸ್ಸಿಗೆ ಬರುತ್ತದೆ. Attached to feather. Hatched by heat of hen in about a week=ಗರಿಗಳಿಗೆ ಅಂಟಿಕೊಂಡಿದೆ. ಕೋಳಿಯ ಶಾಖದಿಂದ ಒಂದುವಾರದಲ್ಲಿ ಮರಿಯಾಗುತ್ತದೆ. Sodium fluoride exterminates all lice=ಸೋಡಿಯಂ ಫ್ಲೋರೈಡ್ ಎಲ್ಲ ಹೇನುಗಳನ್ನು ಕೊಲ್ಲುತ್ತದೆ. Dust or dip fowls=ಕೋಳಿಗಳಿಗೆ ಇದನ್ನು ಧೂಳಿಸಿ ಅಥವಾ ದ್ರಾವಣದಲ್ಲಿ ಅದ್ದಿ. Body=ಶರೀರ. Louse=ಹೇನು. Head louse=ತಲೆಹೇನು. Lays eggs on feathers=ಗರಿಗಳ ಮೇಲೆ ಮೊಟ್ಟೆಯಿಡುತ್ತದೆ. Lice feed on skin or feathers of fowl=ಹೇನು ಕೋಳಿ ಚರ್ಮ ಇಲ್ಲವೇ ಗರಿಗಳನ್ನು ಸೇವಿಸುತ್ತದೆ.

ಬಲ್ಲದು. ಪುಕ್ಕಕ್ಕೆ ಜೊಂಪೆಜೊಂಪೆಯಾಗಿ ಅಂಟಿಕೊಂಡಿರುವ (ಚಿತ್ರ 127) ಇಲ್ಲವೆ ಗೂಡುಗಳಲ್ಲಿರುವ ಮೊಟ್ಟೆಗಳ ಮೂಲಕ ಪರಾವಲಂಬಿಗಳು ಹರಡುತ್ತವೆ.

ಎರಡುವಿಧದ ಹೇನುಗಳಿವೆ. ಅವುಗಳೆಂದರೆ ಶರೀರದ ಹೇನು ಮತ್ತು ತಲೆ ಹೇನು. ಶರೀರದ ಹೇನುಗಳು ಹೆಚ್ಚಾಗಿ ರೆಕ್ಕೆಗಳ ಕೆಳಗೆ ಮತ್ತು ಗುದದ್ವಾರದ ಸುತ್ತ ವಾಸಿಸುತ್ತವೆ. ತಲೆ ಹೇನು, ತಲೆ ಮತ್ತು ಕುತ್ತಿಗೆಗೆ ಸೀಮಿತವಾಗಿರುತ ವೆ (ಚಿತ್ರ 128).

ಚಿಹ್ನೆಗಳು: ಹೇನುಗಳು ನಿರಂತರ ಉರಿತವನ್ನುಂಟುಮಾಡಿ ಕೋಳಿ ಯಾವಾಗಲೂ ಚಡಪಡಿಸುವಂತೆ ಮಾಡುತ್ತದೆ. ಇದರಿಂದಾಗಿ ಕೋಳಿಗಳಲ್ಲಿ ಹಸಿವು ಕಡಮೆಯಾಗಿ ಮೊಟ್ಟೆ ಉತ್ಪಾದನೆ ಕುಗ್ಗುತ್ತದೆ. ಇವುಗಳ ಕಾಟ ಅತಿ ಹೆಚ್ಚಾದಾಗ ಎಳೆ ಮರಿಗಳು ಸಾಯಬಹುದು.

ನಿಯಂತ್ರಣ ಮತ್ತು ಚಿಕಿತ್ಸೆ: ಹೇನುಗಳನ್ನು ನಾಶಪಡಿಸಲು ಬಹಳಷ್ಟು ಕೀಟನಾಶಕಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಪರಾವಲಂಬಿಗಳು ಹಾಗೂ ಅವುಗಳ ಮೊಟ್ಟೆಗಳು ಸಂಪೂರ್ಣವಾಗಿ ನಾಶವಾಗುವವರೆಗೆ ಪ್ರತಿ ಹತ್ತು ದಿನಕ್ಕೊಮ್ಮೆ ಈ ಔಷಧಗಳಿಂದ ಚಿಕಿತ್ಸೆಮಾಡಬೇಕು. ಪ್ರಯೋಗಿಸಿ ನೋಡಿರುವ ಕೆಲವು ಕೀಟನಾಶಕಗಳನ್ನು ಕೆಳಗೆ ಕೊಡಲಾಗಿದೆ:

(1) ನಿಕೋಟಿನ್ ಸಲ್ಫೇಟ್ (ಶೇಕಡ 40ರ ದ್ರಾವಣ) — ಇದನ್ನು ಕೋಳಿಗಳ ಕೂಡುಕಡ್ಡಿಯ ಮೇಲೆ ಸೂರ್ಯಾಸ್ತದ ಸಮಯದಲ್ಲಿ ಹಚ್ಚಿದರೆ ಕೋಳಿಗಳು ಕೂತಾಗ ಇದರ ಧೂಮ ಹೇನುಗಳನ್ನು ಸಾಯಿಸುತ್ತದೆ. ಇದು ಬೇಸಿಗೆಯಲ್ಲಿ ಅತ್ಯುತ್ತಮ ಫಲಿತಾಂಶ ಕೊಡುತ್ತದೆ. ಆದರೆ ಚಳಿಗಾಲದಲ್ಲಿ ಅಷ್ಟು ಪ್ರಭಾವಶಾಲಿಯಲ್ಲ.

(2) ಸೋಡಿಯಂ ಫ್ಲೋರೈಡ್ ದ್ರಾವಣ — ಒಂದು ಗ್ಯಾಲನ್ (5 ಸೇರು) ನೀರಿನಲ್ಲಿ ¾ ರಿಂದ 1 ಔನ್ಸ್ ಸೋಡಿಯಂ ಫ್ಲೋರೈಡ್ ಕರಗಿರುವ ಬಿಸಿ ದ್ರಾವಣ ಹೇನುಗಳಿರುವ ಕೋಳಿಗಳಿಗೆ ಉತ್ತಮವಾದ ಚಿಕಿತ್ಸೆ. ಕೋಳಿಗಳ ರೆಕ್ಕೆಗಳನ್ನು ಹಿಡಿದು ತಲೆ ಮೇಲಿರುವಂತೆ ಶರೀರವನ್ನು ಈ ದ್ರಾವಣದಲ್ಲಿ ಅದ್ದಬೇಕು. ½ ದಿಂದ 1 ನಿಮಿಷದಷ್ಟು ಕಾಲ ಅದ್ದಿದರೆ ಸಾಕು. ಕೊನೆಯಲ್ಲಿ ಒಂದು ಸಾರಿ ತಲೆಯನ್ನೂ ಬೇಗನೆ ಅದ್ದಿ ತೆಗೆಯಬೇಕು. ಈ ಚಿಕಿತ್ಸೆಯನ್ನು ಬಿಸಿಲಿರುವ ದಿನದಲ್ಲಿ ಮಾತ್ರ ಕೊಡಬೇಕು.

(3) ಡೆರಿಸ್ ದ್ರಾವಣ — ಸೋಡಿಯಂ ಫ್ಲೋರೈಡ್ ಬದಲು 1 ಗ್ಯಾಲನ್ ನೀರಿನಲ್ಲಿ ¼ ಔನ್ಸ್ ಡೆರಿಸ್ ಕರಗಿಸಿ, ದ್ರಾವಣವನ್ನು ಕೋಳಿಗಳನ್ನು ಅದ್ದಲು ಉಪಯೋಗಿಸಬಹುದು.

(4) ಮುಂದಿನ ಪುಟದಲ್ಲಿನ ಯಾವುದಾದರೊಂದು ಕೀಟನಾಶಕವನ್ನು ಕೋಳಿಗಳಿಗೆ ಧೂಳಿಸಬೇಕು :

(ಅ) 1000 ಭಾಗ ಬೂದಿಯೊಂದಿಗೆ ಒಂದು ಭಾಗ ಹೆಕ್ಸಕ್ಲಾನ್ ಅಥವಾ ಗ್ಯಾಮಕ್ಸೇನ್.

(ಆ) 20 ಭಾಗ ಬೂದಿಯಲ್ಲಿ ಒಂದು ಭಾಗ ಡಿ.ಡಿ.ಟಿ.

(ಇ) ಒಂದು ಭಾಗ ತುಂಬಾಕಿನ ಪುಡಿ, ಒಂದು ಭಾಗ ಗಂಧಕ ಮತ್ತು 10 ಭಾಗ ಬೂದಿಯ ಮಿಶ್ರಣ.

(ಈ) ದುರ್ಬಲಗೊಳಿಸದ ಸೋಡಿಯಂ ಫ್ಲೋರೈಡ್.

ಮೇಲಿನ ಯಾವುದಾದರೊಂದು ಪುಡಿಯ ಒಂದು ಚಿಟಿಕೆಯನ್ನು ರೆಕ್ಕೆಗಳ ಕೆಳಗೆ, ಗುದದ್ವಾರದ ಕೆಳಗೆ ಮತ್ತು ಕೋಳಿಗಳ ಎದೆ ಮತ್ತು ಕತ್ತುಗಳ ಮೇಲೆ ಇಡಬೇಕು ಅಥವಾ ಪುಡಿಯನ್ನು ಕೋಳಿಗಳ ಮನೆಯಲ್ಲಿ ಅಗಲಬಾಯಿನ ಪಾತ್ರೆಯೊಂದರಲ್ಲಿ ಧೂಳಿನ ಸ್ನಾನಕ್ಕಾಗಿ ಇಡಬಹುದು.

ತಲೆ ಹೇನುಗಳು ಸಾಮಾನ್ಯವಾಗಿ ತೊಂದರೆಕೊಡುತ್ತದೆ. ಇವುಗಳನ್ನು ದೂರ ಮಾಡುವುದು ಸ್ವಲ್ಪ ಕಷ್ಟ. ಹೇನುಗಳಿರುವ ಭಾಗದ ಮೇಲೆ ಗಂಧಕ ಮುಲಾಮು (4 ಭಾಗ ವ್ಯಾಸಲೀನ್ ಅಥವಾ ಹಂದಿಕೊಬ್ಬಿನಲ್ಲಿ 1 ಭಾಗ ಗಂಧಕ) ಹಚ್ಚುವುದರಿಂದ ಅವುಗಳನ್ನು ಕೊಲ್ಲಬಹುದು.

ಉಣ್ಣೆಗಳು: ಕೋಳಿ ಉಣ್ಣೆ (ಆರ್ಗಸ್ ಪರ್‌ಸಿಕಸ್) ದೇಶದ ದಕ್ಷಿಣ ಭಾಗ ಬಿಟ್ಟು ಉಳಿದೆಲ್ಲ ಭಾಗದಲ್ಲೂ ಕಂಡುಬರುವ ಹಾನಿಕಾರಕ ಪರಾವಲಂಬಿ ಕೀಟ. ಇದು ಕೋಳಿಗಳ ರಕ್ತ ಹೀರಿ ರಕ್ತಹೀನತೆ ಉಂಟುಮಾಡುವುದಲ್ಲದೆ, ಉಣ್ಣೆಜ್ವರ (ಸ್ಪೈರೋಕೀಟೋಸಿಸ್) ರೋಗವನ್ನೂ ಹರಡುತ್ತದೆ.

ಉಣ್ಣೆ ಸ್ವಭಾವತಃ ನಿಶಾಚರ ಮತ್ತು ಜಿಗಟು. ಇದು ಆಹಾರವಿಲ್ಲದೆ ಸುಮಾರು ಮೂರು ವರ್ಷಗಳ ಕಾಲ ಬದುಕಿರಬಲ್ಲದು. ವಸಂತ ಹಾಗೂ ಬೇಸಿಗೆ ಋತುಗಳಲ್ಲಿ ಇವು ತುಲನಾತ್ಮಕವಾಗಿ ಹೆಚ್ಚು; ಮತ್ತು ಹೆಚ್ಚು ಚುರುಕಾಗಿರುತ್ತವೆ. ಸಾಮಾನ್ಯವಾಗಿ ಕೋಳಿಗಳನ್ನು ಉಣ್ಣೆಗಳಿರುವ ಮನೆಗಳಲ್ಲಿಟ್ಟಾಗ ಅಥವಾ ಉಣ್ಣೆ ಇರುವ ಕೋಳಿಯನ್ನು ಗುಂಪಿಗೆ ಸೇರಿಸಿದಾಗ ಇವು ಹರಡುತ್ತವೆ.



ಚಿತ್ರ 129: ಉಣ್ಣೆ ನಿರೋಧಕ ಕೂಡುಗಂಬಿಗಳು.

ನಿರೋಧ ಹಾಗೂ ನಿಯಂತ್ರಣ: ಉಣ್ಣೆಗಳ ಹಾವಳಿ ಮತ್ತು ಸ್ಪೈರೊಕೀಟೋಸಿಸ್ ತೊಂದರೆ ತೀವ್ರವಾಗಿರುವ ಜಾಗಗಳಲ್ಲಿ ಉಣ್ಣೆನಿರೋಧಕ ಕೂಡುಕಡ್ಡಿಗಳನ್ನೊದಗಿಸಬೇಕು. ಕೂಡುಕಡ್ಡಿಗಳ ಕಾಲುಗಳಿಗೆ ಒಂದು ಬಟ್ಟಲನ್ನು ಜೋಡಿಸಿ (ಚಿತ್ರ 129) ಅದರಲ್ಲಿ ನೀರು ತುಂಬಿ ಅದರ ಮೇಲೆ ಒಂದು ತೆಳುಪದರ ಸೀಮೆಎಣ್ಣೆ ನಿಲ್ಲುವಂತೆ ಮಾಡಿ ಉಣ್ಣೆಗಳನ್ನು ನಿರೋಧಿಸಬಹುದು. ಕೂಡುಕಡ್ಡಿಯ ಕಾಲುಗಳ ಮೇಲೆ ಹತ್ತಿಬರುವ ಉಣ್ಣೆಗಳು ಬಟ್ಟಲಲ್ಲಿ ಬಿದ್ದು ಸಾಯುತ್ತವೆ. ಇಲ್ಲವಾದರೆ ಕೂಡುಕಡ್ಡಿಗಳನ್ನು ಚಾವಣಿಯಿಂದ ನೇತುಬಿಟ್ಟು ಆ ಕಂಬಿಗಳಿಗೆ ನೀರು ಮತ್ತು ಸೀಮೆಎಣ್ಣೆ ಇರುವ ಬಟ್ಟಲನ್ನು ಜೋಡಿಸಬಹುದು.

ಮೊಟ್ಟೆ ಅಥವಾ ಮರಿ ಉಣ್ಣೆಗಳನ್ನು ಹೊಂದಿರುವ ಕೋಳಿಗಳಿಗೆ ಶೇಕಡಾ 5ರ ಡಿ.ಡಿ.ಟಿ. ಧೂಳಿಸಬೇಕು ಇಲ್ಲವೆ 1000ದಲ್ಲಿ ಒಂದು ಭಾಗ ಗ್ಯಾಮಕ್ಸೀನ್ ನೀರಿನಲ್ಲಾಗಲಿ ಧೂಳಿನಂತಾಗಲಿ ಹಾಕಿ ಚಿಕಿತ್ಸೆ ಮಾಡಬಹುದು. ಈ ಎರಡೂ ಕೀಟನಾಶಕಗಳು ಉಣ್ಣೆ ಮರಿಗಳನ್ನು ಕೊಲ್ಲುತ್ತವೆ. ಸಾರ್ಸಾನ್ ಅಥವಾ ಬೇವಿನ ಎಣ್ಣೆಯೊಂದಿಗೆ (4 ಭಾಗಕ್ಕೆ 1 ಭಾಗ) ಸೀಮೆಎಣ್ಣೆ ಮಿಶ್ರಣ ಅಥವಾ ಮರಮಧ್ಯಗೂಡಿಸಿದ ಮಧ್ಯಸಾರವನ್ನು ಕೋಳಿಗಳ ಎಣ್ಣೆಮಿಶ್ರಣ ಅಥವಾ ಮರಮಧ್ಯಗೂಡಿಸಿದ ಮಧ್ಯಸಾರವನ್ನು ಕೋಳಿಗಳ ಉಣ್ಣೆ ಇರುವ ಭಾಗಕ್ಕೆ ಹಚ್ಚಿದರೆ, ಅದು ಮರಿಕೀಟಗಳ ಹಿಡಿತವನ್ನು ಕಡಮೆ ಮಾಡುತ್ತದೆ. ಆಗ ಸ್ವಲ್ಪ ಹತ್ತಿ ಅಥವಾ ಬಟ್ಟೆಯ ಸಹಾಯದಿಂದ ಮರಿಗಳನ್ನು ತೆಗೆಯಬಹುದು.


ಕೀಟನಾಶಕವನ್ನು ಪ್ರತಿಯೊಂದು ಸಂದಿ, ಬಿರುಕುಗಳಿಗೂ ಹಾಕುವುದು ಅಸಾಧ್ಯವಾದುದರಿಂದ, ವಯಸ್ಕ ಉಣ್ಣೆಗಳನ್ನು ಕೋಳಿಮನೆಯಿಂದ ದೂರಮಾಡುವುದು ಅಸಾಧ್ಯ. ಉಣ್ಣೆಗಳನ್ನು ನಾಶಮಾಡುವ ಅತ್ಯುತ್ತಮ ವಿಧಾನವೆಂದರೆ ಕೋಳಿಮನೆಯ ಭಾಗಗಳಿಗೆ ನೇರವಾಗಿ ಬೆಂಕಿ ಸೋಕಿಸುವುದು. ಆದಾಗ್ಯೂ ಕೋಳಿಮನೆಯ ಎಲ್ಲ ಭಾಗಗಳೂ ಉರಿಯದಂತಹ ಪದಾರ್ಥಗಳಿಂದ ಕಟ್ಟಿದ್ದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಕಬ್ಬಿಣದ ರಚನೆಗಳು ಮತ್ತು ಸಿಮೆಂಟ್ ಆಸ್ಬೆಸ್ಟಾಸ್ ತಗಡುಗಳಿಂದ ಕಟ್ಟಿದ ಕೋಳಿಮನೆ ಈ ರೀತಿಯ ಕ್ರಿಯೆಗೆ ಸಹಾಯಕವಾಗುತ್ತದೆ. ಬ್ಲೋಪೈಪ್ ಅಥವಾ ಏರೋಸಾಲ್ ಬರ್ನರ್ ಇದಕ್ಕಾಗಿ ಉಪಯೋಗಿಸಬಹುದು.

ಮರ ಮತ್ತು ಇಟ್ಟಿಗೆಗಳಿಂದ ಕಟ್ಟಿದ ಕೋಳಿಮನೆಗೆ ಪೂರ್ಣ ಸ್ವಚ್ಛಗೊಳಿಸಿದ ನಂತರ ಈ ಕೆಳಗಿನ ಮಿಶ್ರಣವನ್ನು ಸಿಂಪರಿಸಬೇಕು ಇಲ್ಲವೇ ಅದರಿಂದ ತೊಳೆಯಬೇಕು:

ಸೋಪ್	...	1 ಭಾಗ
ಸೀಮೆ(ಚಿಮಣಿ)ಎಣ್ಣೆ	...	3 ಭಾಗ
ಫಿನೈಲ್	...	3 ಭಾಗ
ಸುಡುನೀರು	...	93 ಭಾಗ
ಒಟ್ಟು		100 ಭಾಗ

ಈ ಹಾಲಂದವನ್ನು ಸುಡುವಂತಿರುವಾಗಲೇ ಉಪಯೋಗಿಸಬೇಕು. ಮಣ್ಣಿನ ಗೋಡೆ ಮತ್ತು ತೆಂಗಿನಗರಿ ಚಾವಣಿಯ ಕೋಳಿಮನೆಗಳಲ್ಲಿ ಉಣ್ಣೆ ನಿವಾರಣೆ ಮತ್ತಷ್ಟು ಕಷ್ಟ. ಕೋಳಿಗಳನ್ನು ಹಗಲಲ್ಲಿ ಬೇರೆ ಹೊಸಮನೆಗೆ ಸಾಗಿಸಿ ಹಳೆಮನೆಯನ್ನು ಸುಟ್ಟುಬಿಡುವುದು ಉತ್ತಮ.

ನುಸಿ: ಕೋಳಿಗಳನ್ನು ಆಕ್ರಮಿಸುವ ನುಸಿಗಳು ಸಾಮಾನ್ಯವಾಗಿ ಸಣ್ಣವು. ಹೇನುಗಳಿಗೆ ಮೂರುಜೊತೆ ಕಾಲುಗಳಿದ್ದರೆ ಇವುಗಳಿಗೆ ನಾಲ್ಕು ಜೊತೆ ಕಾಲುಗಳಿರುತ್ತವೆ. ಕೋಳಿ ನುಸಿಗಳ ಮೂರು ಪ್ರಭೇದಗಳು ಭಾರತದಲ್ಲಿ ಕಾಣಸಿಗುತ್ತದೆ. ಅವುಗಳೆಂದರೆ – ಕೆಂಪು ನುಸಿ, ಹಗರಿನ ಕಾಲಿನ ನುಸಿ ಮತ್ತು ಪುಕ್ಕ ತರಿಯುವ ನುಸಿ. ಅವುಗಳ ನಿಯಂತ್ರಣ ಮತ್ತು ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಕೆಳಗೆ ಚರ್ಚಿಸಲಾಗಿದೆ:



ಚಿತ್ರ 130: ಕೋಳಿಗಳ ಕೆಂಪು ನುಸಿ—ಇವುಗಳ ಜೀವನ ಚಕ್ರ ಹಾಗೂ ನಿಯಂತ್ರಣ.

3 to 7 Pearly white elliptical eggs=3 ರಿಂದ 7 ಅಂಡಾಕಾರದ ಮುತ್ತಿನ ಬಿಳಿ ಮೊಟ್ಟೆಗಳು. Hatch in 2 days in summer=ಬೇಸಿಗೆಯಲ್ಲಿ ಎರಡು ದಿನಗಳಲ್ಲಿ ಮೊಟ್ಟೆಯೊಡೆಯುತ್ತವೆ Become adult in 3 to 6 days=3 ರಿಂದ 6 ದಿನಗಳಲ್ಲಿ ವಯಸ್ಕವಾಗುತ್ತವೆ. Nymph=ಪೊರೆಹುಳು. Feeds on blood=ರಕ್ತ ಹೀರುತ್ತವೆ. Unfed adult (Light gray) ಹೊಟ್ಟೆಗಿಲ್ಲದ ವಯಸ್ಕ ಜೀವಿ (ತಿಳಿನರೆ), Full fed adult (Red)= ವಯಸ್ಕ ಜೀವಿ (ಕೆಂಪು), Lays eggs and breeds in cracks of roosts and nests=ಕೂಡುಕಂಬಿ ಮತ್ತು ಹಕ್ಕಿಗಳ ಬಿರುಕುಗಳಲ್ಲಿ ಮೊಟ್ಟೆ ಇಟ್ಟು ಮರಿ ಮಾಡುತ್ತದೆ. Kill the mite=ನುಸಿಗಳನ್ನು ಕೊಲ್ಲಿ. Paint roosts with carbolineum or heavy oil=ಕೂಡು ಕಂಬಿಗಳಿಗೆ ಕಾರ್ಬೊಲಿಯಂ ಅಥವಾ ಭಾರತೈಲ ಹಚ್ಚಬೇಕು.

ಕೆಂಪುನುಸಿ: ಕೂಡುಕಡ್ಡಿ ನುಸಿ ಎಂದೂ ಕರೆಯಲ್ಪಡುವ ಕೆಂಪು ನುಸಿ, ಉಣ್ಣೆಗಳಂತಹುದೇ ಸ್ವಭಾವಗಳನ್ನು ಹೊಂದಿದೆ. ಇದು ಹೆಚ್ಚು ಸಮಯವನ್ನು ಕೋಳಿ ಮನೆಗಳ ಬಿರುಕು ಸಂದಿಗಳಲ್ಲಿ ಕಳೆದು ರಾತ್ರಿ ವೇಳೆಯಲ್ಲಿ ಮಾತ್ರ ಕೋಳಿಗಳನ್ನು ಆಕ್ರಮಿಸುತ್ತದೆ. ಆದುದರಿಂದ ಕೆಂಪುನುಸಿಗಳನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳು ಉಣ್ಣೆಗಳ ನಿಯಂತ್ರಣಕ್ಕೆ ಹಿಂದೆ ವಿವರಿಸಿದ ಕ್ರಮ(ಚಿತ್ರ 130) ಗಳಂತೆಯೇ ಇರುತ್ತವೆ.


ಹಗರಿನ ಕಾಲಿನ ನುಸಿ: ಹಗರಿನ ಕಾಲಿನ ನುಸಿ ಬಹಳ ಸಣ್ಣದಾಗಿದ್ದು ಬರಿಗಣ್ಣಿಗೆ ಸುಲಭವಾಗಿ ಕಾಣುವುದಿಲ್ಲ. ಇವು ಕಾಲುಗಳ ಹಗರಿನ ಕೆಳಗೆ ಸೇರಿಕೊಂಡು ಉರಿಬಾವು ಹಾಗೂ ಊತವನ್ನುಂಟುಮಾಡುತ್ತವೆ (ಚಿತ್ರ 131). ಈ ಸ್ಥಿತಿಯನ್ನು ಹಗರಿನ ಕಾಲು ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ವಯಸ್ಸಾದ ಕೋಳಿಗಳು ಇದಕ್ಕೆ ಬಲಿಯಾಗುತ್ತವೆ. ಕಾಲನ್ನು ಕಚ್ಚಾ ಪೆಟ್ರೋಲಿಯಂ ಅಥವಾ ಸಮಪ್ರಮಾಣದಲ್ಲಿ ಸೀಮೆ(ಚಿಮಣಿ)ಎಣ್ಣೆ ಮತ್ತು ಉಪಯೋಗಿಸಿದ ಕ್ರಾಂಕ್‌ಕೇಸ್ ಎಣ್ಣೆಗಳ ಮಿಶ್ರಣದಲ್ಲಿ ಅದ್ದುವುದು ಒಳ್ಳೆಯ ಚಿಕಿತ್ಸೆ (ಚಿತ್ರ 132). ಅವಶ್ಯಕವಾದರೆ ಚಿಕಿತ್ಸೆಯನ್ನು ಒಂದು ತಿಂಗಳ ನಂತರ ಪುನರಾವರ್ತಿಸಬೇಕು. ಎಣ್ಣೆ ಚರ್ಮ ಹಾಗೂ ಪುಕ್ಕಗಳ ಮೇಲೆ ಬಿದ್ದರೆ ಬೊಬ್ಬೆಗಳಾಗುವುದರಿಂದ ಬೀಳದಂತೆ ಎಚ್ಚರವಹಿಸಬೇಕು. ಕೂಡುಕಂಬಿಯ ಮೇಲೆ ಕೋಳಿಗಳು ಕೂರುವ ಮೊದಲು ಕಾಲು ಒಣಗುವಂತೆ ಚಿಕಿತ್ಸೆಯನ್ನು ಬೆಳಿಗ್ಗೆ ಮಾಡಬೇಕು.

ಪುಕ್ಕ ತರಿಯುವ ನುಸಿ: ಪುಕ್ಕ ತರಿಯುವ ನುಸಿಯೂ ಬರಿಗಣ್ಣಿನಿಂದ ನೋಡಲು ಕಷ್ಟವಾಗುವಷ್ಟು ಸಣ್ಣದು. ನುಸಿಗಳು ಚರ್ಮದೊಳಗೆ ತೂರಿ ಗರಿಗಳ ಬುಡದಲ್ಲಿ ವಾಸಿಸುತ್ತವೆ. ಇದರಿಂದ ಉಂಟಾಗುವ ನಿರಂತರ ಉರಿತ ಅಥವಾ ನವೆ ಕೋಳಿಗಳು ಪುಕ್ಕವನ್ನು ಕಿತ್ತುಕೊಳ್ಳುವಂತೆ ಮಾಡುತ್ತದೆ.

ಒಂದು ಭಾಗ ಗಂಧಕ ಮತ್ತು ನಾಲ್ಕು ಭಾಗ ವ್ಯಾಸಲೀನ್ ಇರುವ ಮುಲಾಮನ್ನು ರೋಗಪೀಡಿತ ಭಾಗಕ್ಕೆ ಸವರುವುದು ಉತ್ತಮ ಚಿಕಿತ್ಸೆ. ಒಂದು ಗ್ಯಾಲನ್ ಬಿಸಿ ನೀರಿನಲ್ಲಿ ಒಂದು ಔನ್ಸ್ ಸೋಪು ಮತ್ತು ಮೂರು ಔನ್ಸ್ ಗಂಧಕವಿರುವ ದ್ರಾವಣದಲ್ಲಿ ಕೋಳಿಗಳನ್ನು ಅದ್ದುವುದನ್ನೂ ಬಿಸಿಲಿರುವಾಗ ಮಾಡಬಹುದು.

ಚಿಗಟೆಗಳು: ಚಿಗಟಗಳು ಮೂರು ಜೊತೆ ಕಾಲುಗಳುಳ್ಳ, ಚುರುಕಾದ, ಎಗರುವ, ದಟ್ಟಕಂದುಬಣ್ಣದಿಂದ ಕರಿಬಣ್ಣದವರೆವಿಗೂ ಇರುವ ಸಣ್ಣ ಕೀಟಗಳು. ಚಿಗಟದ ಶರೀರ ಪಕ್ಕದಿಂದ ಪಕ್ಕಕ್ಕೆ ಚಪ್ಪಟೆಯಾಗಿರುತ್ತದೆ.

ಸಾಮಾನ್ಯವಾಗಿ ಚಿಗಟಗಳ ಮೂರು ಪ್ರಭೇದಗಳು ಕೋಳಿಗಳನ್ನು ಕಾಡುತ್ತವೆ. ಇವುಗಳ ಪೈಕಿ ಸ್ಟಿಕ್ ಟೈಟ್ ಚಿಗಟ ಅತ್ಯಂತ ಹಾನಿಕಾರಿ. ಚಿಗಟಗಳು ಸಾಮಾನ್ಯವಾಗಿ



ಚಿತ್ರ 131: ಹಗರಿನ ಕಾಲು.



ಚಿತ್ರ 132: ಹಗರಿನ ಕಾಲಿಗೆ ಚಿಕಿತ್ಸೆ—ಉಪಯೋಗಿಸಿದ ಕ್ರಾಂಕೇಸ್ ಎಣ್ಣೆ ಹಾಗೂ ಚಿಮಣಿ ಎಣ್ಣೆಗಳ ಮಿಶ್ರಣದಲ್ಲಿ ಕಾಲುಗಳನ್ನು ಅದ್ದಲಾಗುತ್ತಿದೆ.

ಜುಟ್ಟು, ಜೋಲು ಮಾಂಸಲ ಮತ್ತು ಕಣ್ಣಿನ ಸುತ್ತಲ ಜಾಗಕ್ಕೆ ಬಲವಾಗಿ ಕಚ್ಚಿಕೊಳ್ಳುತ್ತವೆ. ಪರಾವಲಂಬಿಗಳ ಹೆಚ್ಚಳದಿಂದ ಮರಿಗಳು ಸಾಯುತ್ತವೆ; ಆದರೆ ವಯಸ್ಕ ಕೋಳಿಗಳಲ್ಲಿ ಉತ್ಪಾದನೆ ಅಸ್ತವ್ಯಸ್ತವಾಗಿ, ಬೆಳವಣಿಗೆ ನಿಂತುಹೋಗುತ್ತದೆ.

ನಿರೋಧ ಮತ್ತು ಚಿಕಿತ್ಸೆ: ಮರಿಗಳು ಹಿಕ್ಕೆ, ನೆಲ, ಗೋಡೆ ಸಂದುಗಳು ಮೊದಲಾದಲ್ಲಿ ವಾಸಮಾಡುವುದರಿಂದ, ಕೋಳಿ ಮನೆ ಮತ್ತು ಎಲ್ಲ ಸಲಕರಣೆಗಳನ್ನೂ ಶೇಕಡಾ 5ರ ಡಿ.ಡಿ.ಟಿ ಎಮಲ್ಶನ್ (ಹಾಲಂದ) ಅಥವಾ ಶೇಕಡಾ 2ರ ಕ್ರಿಯೊಸೋಟ್ ಎಣ್ಣೆಯಿಂದ ಚೆನ್ನಾಗಿ ಸ್ವಚ್ಛಮಾಡಬೇಕು: ಆದರೆ, ಸಿಂಪರಣೆಯಿಂದ ಆರ್ದ್ರ ಸ್ಥಿತಿ ಬರುವುದರಿಂದ ಥಂಡಿ ಮತ್ತು ಶೈತ್ಯಕಾಲದಲ್ಲಿ, ಅದರಲ್ಲೂ ಕೋಳಿಗಳು ಒಳಗೆ ಇರುವಾಗ ಈ ಕಾರ್ಯ ಮಾಡಬಾರದು. ಮತ್ತೊಂದು ವಿಧಾನವೆಂದರೆ 100 ಚದರ ಅಡಿ ನೆಲ ಜಾಗಕ್ಕೆ ½ ಪೌಂಡ್‌ನಂತೆ ಶೇಕಡಾ 10ರ ಡಿ.ಡಿ.ಟಿ ಪುಡಿಯನ್ನು ಉಪಯೋಗಿಸುವುದು. ಇದು ಉತ್ತಮ ಫಲಿತಾಂಶಗಳನ್ನು ಕೊಡುತ್ತದೆ.

ಶೇಕಡಾ 10ರ ಡಿ.ಡಿ.ಟಿ. ಅಥವಾ 'ರೊಟೆನಾನ್' ಇರುವ ಯಾವುದಾದರೊಂದು ಪುಡಿಯನ್ನು ಕೋಳಿಗಳ ಮೇಲೆ ಧೂಳಿಸುವುದು ಉತ್ತಮ ಚಿಕಿತ್ಸೆ.

ಶಿಲೀಂಧ್ರ(ಬೂಜು)ಗಳಿಂದ ಉಂಟಾಗುವ ರೋಗಗಳು

ಚಿಮುಕಣಬೇನೆ: ಚಿಮುಕಣಬೇನೆ ಶ್ವಾಸಕೋಶ ಮತ್ತು ಗಾಳಿಗೂಡುಗಳ ಅದರಲ್ಲೂ ರಕ್ಷಕಗಳಲ್ಲಿರುವ ಮರಿಗಳ ರೋಗ. ಬೂಜು ಬಂದ ಕರಡ ಮತ್ತು ಹುಲ್ಲುಗಳಲ್ಲಿ ಕಂಡುಬರುವ ಸಾಮಾನ್ಯ ಹಸುರು ಬೂಷ್ಟು (ಆಸ್ಪರ್‌ಜಿಲಸ್‌ನೈಗರ್)ವಿನಿಂದ ಈ ರೋಗ ಉಂಟಾಗುತ್ತದೆ. ಇಂತಹ ಹುಲ್ಲು ಅಥವಾ ಜೊರುಗಳನ್ನು ಲಿಟ್ಟರ್ ಆಗಿ ಉಪಯೋಗಿಸಿದಾಗ ಮತ್ತು ಬೂಜು ಬಂದ ಕಾಳುಗಳನ್ನು ಮೇಯಿಸಿದಾಗ ಶಿಲೀಂಧ್ರ ಉಚ್ಛ್ವಾಸದಲ್ಲಿ ಒಳಹೊಕ್ಕು ಈ ರೋಗವನ್ನುಂಟುಮಾಡುತ್ತದೆ.

ಚಿಹ್ನೆಗಳು: ಸಾಮಾನ್ಯ ಚಿಹ್ನೆಗಳೆಂದರೆ ನೆಗಡಿ, ಉಸಿರಾಟದ ಹೆಚ್ಚಳ ಹಾಗೂ ನಿಶ್ವಾಸದ ಸಮಯದಲ್ಲಿ ಒಂದು ರೀತಿಯ ಒಡಕು ಅಥವಾ ಗೊಗ್ಗರು ಶಬ್ದ. ರೋಗ ಹೆಚ್ಚಾದಂತೆ ಉಸಿರಾಟದ ತೊಂದರೆಯೂ ಹೆಚ್ಚುತ್ತ ಹೋಗುತ್ತದೆ ಮತ್ತು ಕೊನೆಗೆ ಕೋಳಿಗಳು ಉಸಿರುಕಟ್ಟಿ ಸಾಯುತ್ತವೆ.

ನಿರೋಧ: ಕೋಳಿಮನೆಗಳಲ್ಲಿ ಲಿಟ್ಟರ್ ಆಗಿ ಸ್ವಚ್ಛವಾದ ಹೊಳಪಾದ ಹುಲ್ಲು ಹಾಗೂ ಹುಡಿಯನ್ನು ಮಾತ್ರ ಉಪಯೋಗಿಸಬೇಕು. ಮೇವು ಬೂಷ್ಟಿನಿಂದ ಮುಕ್ತವಾಗಿರಬೇಕು. ಸತ್ತ ಕೋಳಿಗಳನ್ನು ಸುಡಬೇಕು.

ಜುಟ್ಟುಸಿಪ್ಪು (ಬಿಳಿಜುಟ್ಟು): ಜುಟ್ಟುಸಿಪ್ಪು ಸುಮಾರಾಗಿ ಸಾಮಾನ್ಯವಾದ ಸಾಂಸರ್ಗಿಕ ರೋಗ. ಜುಟ್ಟು, ಕಿವಿಹಾಲೆ ಹಾಗೂ ಜೋಲು ಮಾಂಸಲದ ಮೇಲೆ ಬಿಳಿ ಅಥವಾ ನೆರೆಬಣ್ಣದ ಚುಕ್ಕೆಗಳು ಉಂಟಾಗುವುದು ಈ ರೋಗದ ಮುಖ್ಯ ಲಕ್ಷಣ.

ಇದು ಅಕೋರಿಯಾನ್ ಗ್ಯಾಲಿನೇರಮ್ ಎಂಬ ಶಿಲೀಂಧ್ರದಿಂದ ಉಂಟಾಗುತ್ತದೆ ಮತ್ತು ಸಂಪರ್ಕದಿಂದ ಹಬ್ಬುತ್ತದೆ.

ಚಿಹ್ನೆಗಳು: ರೋಗ ಸಾಮಾನ್ಯವಾಗಿ ತಲೆಯಬುಡದ ಭಾಗದಲ್ಲಿ ಪ್ರಾರಂಭವಾಗುತ್ತದೆ. ಬಿಳಿ ಅಥವಾ ನೆರೆಬಣ್ಣದ ಚಿಕ್ಕಚುಕ್ಕೆಗಳು ಉಂಟಾಗಿ, ಇಡೀ ಜಾಗ ಅಸಮ ಮೇಲ್ಮೈನ, ಕೊಳಕು ಬಿಳಿ ಬಣ್ಣದ ಒರಟು, ಒಣ ಪರೆಗಳಿಂದ ಮುಚ್ಚಿಹೋಗುವವರೆಗೆ ಚುಕ್ಕೆಗಳು ಸಂಖ್ಯೆ ಹಾಗೂ ಗಾತ್ರದಲ್ಲಿ ಹೆಚ್ಚುತ್ತ ಹೋಗುತ್ತವೆ.

ಚಿಕಿತ್ಸೆ: ರೋಗಪೀಡಿತ ಭಾಗಕ್ಕೆ ಐಯೋಡಿನ್ ಟಿಂಚರ್ ಅಥವಾ ಶೇಕಡಾ 5ರ ಫಾರ್ಮಲಿನ್ ಹಚ್ಚುವುದನ್ನು ಶಿಫಾರಸ್ಸು ಮಾಡಲಾಗಿದೆ.

ಸಾಂಕ್ರಾಮಿಕವಲ್ಲದ ರೋಗಗಳು

ಮೇಲೆ ಹೇಳಿದ ಕಾರಣಗಳಿಂದಲ್ಲದೆ ಸಾಂಕ್ರಾಮಿಕವಲ್ಲದ ರೋಗಗಳಿಂದ ಕೂಡ ಕೋಳಿಗಳಲ್ಲಿ ಸಾವುನೋವುಗಳು ಉಂಟಾಗುತ್ತವೆ. ಅವುಗಳನ್ನು (ಅ) ದೋಷಯುತ ಮೇಯಿಸುವಿಕೆ, (ಆ) ವಾತಾವರಣದ ಅನಾರೋಗ್ಯಕರ ಪ್ರಭಾವಗಳು ಮತ್ತು (ಇ) ರೋಗ ಉತ್ತೇಜಕ ಅನುವಂಶಿಕ ಗುಣಗಳು, ಈ ತಲೆಬರಹಗಳಲ್ಲಿ ವಿವರಿಸಲಾಗಿದೆ.

ದೋಷಯುತ ಮೇಯಿಸುವಿಕೆ

ದೋಷಯುತ ಇಲ್ಲವೇ ಅಪರಿಪೂರ್ಣ ಮೇಯಿಸುವಿಕೆಯಿಂದ ಕೋಳಿಗಳಲ್ಲಿ ಹೆಚ್ಚಿನ ನಷ್ಟ ಸಂಭವಿಸಬಹುದು. ಅತಿ ಹೆಚ್ಚು ಅಥವಾ ಅತಿಕಡಮೆ ನಾರು ಪದಾರ್ಥ. ಅತಿಹೆಚ್ಚಿನ ಸಸಾರಜನಕ ಮತ್ತು ಕಾಳುಗಳು ಮತ್ತು ಬೂಷ್ಟುಹಿಡಿದ ಮೇವುಗಳನ್ನು ಉಪಯೋಗಿಸಬಾರದು. ಊಟ ತಿಂಡಿಗಳಲ್ಲಿ ಉಳಿದ, ಕೊಳೆಯಾದ ಪದಾರ್ಥಗಳನ್ನು ಕನಿಷ್ಠ. ಅರ್ಧಗಂಟೆಯಕಾಲ ಸರಿಯಾಗಿ ಕುದಿಸದೆ ಉಪಯೋಗಿಸಬಾರದು. ಸತ್ತ ಪ್ರಾಣಿಗಳ ಹಸಿಮಾಂಸ ಇಲ್ಲವೇ, ಕಾಡುಪ್ರಾಣಿ ಅಥವಾ ಕೋಳಿಗಳ ಕೊಳೆತ ಮಾಂಸವನ್ನು ಮೇಯಿಸಬಾರದು. ಕೋಳಿಗಳ ಸ್ವಾಭಾವಿಕ ಬೆಳವಣಿಗೆ ಹಾಗೂ ಉತ್ಪಾದನೆಗಳಿಗೆ ಅವಶ್ಯಕವಾದ ಎಲ್ಲ ಪದಾರ್ಥಗಳನ್ನೂ ಆಹಾರ ಸರಿಯಾದ ಪ್ರಮಾಣದಲ್ಲಿ ಹೊಂದಿರಬೇಕು. ಎಲುಮುರುಟು, ನ್ಯೂಟ್ರಿಷನಲ್ ರೂಪ್ ಮತ್ತು ಅರೂಪಗಳ ನ್ಯೂನತೆ ರೋಗಗಳಾದರೆ, ಕಾಲ್ಬೇನೆ ಮತ್ತು ಬೊಜ್ಜುಗಳು ಮೇವಿನಲ್ಲಿ ಒಂದು ನಿರ್ದಿಷ್ಟ ಪದಾರ್ಥದ ಹೆಚ್ಚಳದಿಂದ ಉಂಟಾಗುತ್ತವೆ.

ಸರಿಯಾಗಿ ರಚಿತವಾಗಿರುವ ಆಹಾರತೊಟ್ಟಿಗಳನ್ನು ಉಪಯೋಗಿಸಿ, ಆಹಾರವನ್ನು, ಹಿಕ್ಕೆ ಮತ್ತಿತರ ಕಲ್ಮಶಗಳಿಂದ ರಕ್ಷಿಸುವುದು ಅವಶ್ಯಕ. ಆಹಾರ ಪಾತ್ರೆಗಳನ್ನು ಆಗಾಗ್ಗೆ ಸ್ವಚ್ಛಮಾಡಬೇಕು. ಆಹಾರ ಇಟ್ಟ ಮನೆ ಗುಡಿಸಿ ಬಂದ ಆಹಾರವನ್ನು

ಮರಿಗಳಿಗೆ ಕೊಡಬಾರದು. ಮೇವನ್ನು ಕೈನಿಂದ ಕಲಸುವುದಕ್ಕಿಂತ ಯಾಂತ್ರಿಕವಾಗಿ ಕಲಸುವುದು ಉತ್ತಮ; ಏಕೆಂದರೆ, ಇದರಲ್ಲಿ ಆಹಾರಾಂಶಗಳೆಲ್ಲ ಚೆನ್ನಾಗಿ ಬೆರೆಯುವುದೇ ಅಲ್ಲದೆ ಇತರ ಕಲ್ಮಶಗಳು ಸೇರುವ ಅವಕಾಶವೂ ಕಡಮೆ. ಕೋಳಿಮನೆಯ ಹತ್ತಿರ ಆಹಾರವನ್ನು ಚೆಲ್ಲಿದ್ದರೆ ಅದು ರೋಗವಾಹಕಗಳಾದ ಇಲಿ, ಹೆಗ್ಗಣ ಹಾಗೂ ಕೋಳಿಗಳನ್ನು ಆಕರ್ಷಿಸುತ್ತದೆ. ದೋಷಯುತ ಮೇಯಿಸುವಿಕೆಯಿಂದ ಉಂಟಾಗುವ ಮುಖ್ಯ ರೋಗಗಳನ್ನು ಕೆಳಗೆ ವಿವರಿಸಲಾಗಿದೆ:

ನ್ಯೂಟ್ರಿಷನಲ್ ರೂಪ್ (A-ಜೀವಸತ್ವದ ಕೊರತೆ): ನ್ಯೂಟ್ರಿಷನಲ್ ರೂಪ್ ಸಾಂಕ್ರಾಮಿಕ ನೆಗಡಿಯನ್ನು ಹೋಲುವ ರೋಗ. ಆದರೆ ಇದು ಆಹಾರದಲ್ಲಿನ



ಚಿತ್ರ 133: ನ್ಯೂಟ್ರಿಷನಲ್ ರೂಪ್—ಜೀವಸತ್ವ ಕೊರತೆಯನ್ನು ತೋರಿಸುತ್ತಿರುವ ಕೋಳಿಯ ತಲೆ. ಕಣ್ಣಿನ ಕೆಳಗಿನ ಊತ ಕಣ್ಣು, ಮೂಗಿನಿಂದ ವಿಸರ್ಜನೆ ಹಾಗೂ ಕತ್ತರಿಸಿ ತೆರೆದಿರುವ ಪ್ರಾಣನಾಳದ ಕೋಶಿಕಗಳ ಊತವನ್ನು ಗಮನಿಸಿರಿ.

A - ಜೀವಸತ್ವದ ಕೊರತೆಯಿಂದ ಉಂಟಾಗುತ್ತದೆ. ಎಲ್ಲ ವಯಸ್ಸಿನ ಕೋಳಿಗಳೂ ಈ ರೋಗಕ್ಕೆ ಬಲಿಯಾಗಬಹುದು. ಈ ರೋಗ ಸಾಕಷ್ಟು ಹಸುರು ಮೇವು ಸಿಗದ ಬೇಸಿಗೆಯಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

ಚಿಹ್ನೆಗಳು: ಈ ರೋಗದ ಸಾಮಾನ್ಯ ಚಿಹ್ನೆಗಳೆಂದರೆ, ಬೆಳೆಯುತ್ತಿರುವ ಕೋಳಿಗಳಲ್ಲಿ ಕುಂಟು ಹಾಗೂ ತಟ್ಟಾಡುವಿಕೆ ಮತ್ತು ವಯಸ್ಕ ಕೋಳಿಗಳಲ್ಲಿ ಮೂಗು ಮತ್ತು ಕಣ್ಣುಗಳಿಂದ ಸೋರುವಿಕೆ ಹಾಗೂ ಕಣ್ಣುಗಳ ಕೆಳಗೆ ಊತ ಕಂಡುಬರುತ್ತವೆ.

ಸತ್ತ ನಂತರ ಕೊಯ್ದು ನೋಡಿದಲ್ಲಿ ಪ್ರಾನ್ನನ್ನಾಳದ ನಾಳಗಂಡಿಯ ಊತ (ಚಿತ್ರ 133), ಬಿಳಿಚಿಕೊಂಡ ಮೂತ್ರಜನಕಾಂಗ ಮತ್ತು ಮೂತ್ರಜನಕಾಂಗ ಹಾಗೂ ಮೂತ್ರನಾಳಗಳಲ್ಲಿ ಮೂತ್ರದ ಶೇಖರಣೆ ಕಂಡುಬರುತ್ತದೆ.

ನಿಯಂತ್ರಣ: ಆಹಾರದಲ್ಲಿ ತಾಜಾ ಹಸುರೆಲೆಗಳು ಮತ್ತು ಮುಸುಕಿನ ಜೋಳಗಳ ಪ್ರಮಾಣವನ್ನು ಹೆಚ್ಚಿಸುವುದು ಹಾಗೂ ನಂಬಿಗಾರ್ಹ ವ್ಯಾಪಾರಿಗಳಿಂದ ಕೊಂಡುಕೊಂಡ ಶಾರ್ಕ್ ಮೀನಿನ ಈಲಿ ಎಣ್ಣೆಯನ್ನು ಆಹಾರಕ್ಕೆ ಬೆರೆಸುವುದು ಈ ರೋಗಕ್ಕೆ ಉತ್ತಮ ನಿಯಂತ್ರಕ ವಿಧಾನ. ತೀವ್ರ ರೋಗಿಗಳಲ್ಲಿ ಚಿಕಿತ್ಸೆ ಫಲದಾಯಕ ವಲ್ಲ.

ಎಲುಮುರುಟು (D-ಜೀವಸತ್ವದ ಕೊರತೆ): ಎಲುಮುರುಟು ಅಥವಾ ರಾಕೈಟಿಸ್ ಬೆಳೆಯುತ್ತಿರುವ ಮರಿಗಳ ಮೂಳೆಗೆ ತಗಲುವ ಒಂದು ರೋಗ. ಇದು D -ಜೀವಸತ್ವ, ಸುಣ್ಣ ಅಥವಾ ರಂಜಕದ ಕೊರತೆಗಳಿಂದ ಉಂಟಾಗುತ್ತದೆ. ಕುಗ್ಗಿದ ಬೆಳವಣಿಗೆ, ಸೆಡೆತುಕೊಂಡ ನಡಿಗೆಯೊಡಗೂಡಿದ ಕುಂಟುವಿಕೆ, ಕಾಲಿನ ಮೂಳೆ ಮತ್ತು ಹಿಮ್ಮಡಿಗಳ ಊತ, ಪಕ್ಕೆಲಬುಗಳ ಕೊನೆಯಲ್ಲಿ ಮಣಿಗಟ್ಟುವಿಕೆ ಮೊದಲಾದವು ಈ ರೋಗದ ಕೆಲವು ಲಕ್ಷಣಗಳು. ಬೆನ್ನುಮೂಳೆ ಮತ್ತು ಎದೆಮೂಳೆಗಳ ಬಗ್ಗು ವಿಕೆಯೂ ಕಂಡುಬರಬಹುದು. ಕೋಳಿ ಆಹಾರಕ್ಕೆ ಮೂಳೆ (ಎಲುಬು) ಪುಡಿ ಮತ್ತು ಚಿಪ್ಪಿನ ಪುಡಿ ಸೇರಿಸುವುದು ಹಾಗೂ ಕೋಳಿಗಳನ್ನು ನೇರ ಬಿಸಿಲಿಗೆ ಬಿಡುವುದು ಉತ್ತಮ ಹಾಗೂ ಸುಲಭ ನಿಯಂತ್ರಣ ಕ್ರಮಗಳು. ಚಿಕಿತ್ಸೆ ಫಲಕಾರಿಯಲ್ಲ.

ಆರೂಪ ಅಥವಾ ಜಾರಿದ ಕಂಡರ(ಮ್ಯಾಂಗನೀಸ್ ಕೊರತೆ): ಆರೂಪ, ಜಾರಿದ ಕಂಡರ ಅಥವಾ 'ಕಾಲನ್ನು ವಿರೂಪಗೊಳಿಸುವ ದುರ್ಬಲತೆ' ಮ್ಯಾಂಗನೀಸ್ ಕೊರತೆ ಯಿಂದ ಬೆಳೆಯುತ್ತಿರುವ ಮರಿಗಳಲ್ಲಿ ಉಂಟಾಗುವ ಒಂದು ಪರಿಸ್ಥಿತಿ. ಹಿಮ್ಮಡಿ ಕೀಲು ಊದಿಕೊಳ್ಳುವಿಕೆ ಮೊದಲು ಕಂಡುಬರುವ ಚಿಹ್ನೆ. ಇದರ ನಂತರ, ಹಿಮ್ಮಡಿ ಕೀಲಿನಲ್ಲಿರುವ ಉದ್ದಮೂಳೆಗಳ ಕೆಳತುದಿ ಬಗ್ಗುತ್ತದೆ. ಇದು ಅಖಿಲಿಸ್ ಕಂಡರ ಒಳ ಅಥವಾ ಹೊರ ಪಾರ್ಶ್ವಕ್ಕೆ ಜಾರುವಿಕೆಗೆ ಕಾರಣವಾಗುತ್ತದೆ. ಇದರಿಂದಾಗಿ ಕಾಲಮೇಲಿನ ಹತೋಟಿ ತಪ್ಪುತ್ತದೆ.

ನಿಯಂತ್ರಣ: ನಿಯಂತ್ರಣದಲ್ಲಿ ಚಿಕಿತ್ಸೆಗಿಂತ ರೋಗಬರದಂತೆ ತಡೆಗಟ್ಟುವುದು ಮುಖ್ಯವಾದುದು. ವಿರೂಪತೆ ಕಂಡುಬಂದ ನಂತರ ರೋಗವನ್ನು ವಾಸಿಮಾಡ ಲಾಗುವುದಿಲ್ಲ. ಆಹಾರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮ್ಯಾಂಗನೀಸ್ ಸೇರಿಸುವುದ ರಿಂದ ರೋಗವನ್ನು ಉತ್ತಮವಾಗಿ ತಡೆಗಟ್ಟಬಹುದು. 1.7 ಪೌಂಡ್ ನೀರಾರಿದ ಮ್ಯಾಂಗನೀಸ್ ಸಲ್ಫೇಟ್ ಮತ್ತು 100 ಪೌಂಡ್ ಉಪ್ಪಿನ ಮಿಶ್ರಣವನ್ನು ತಯಾರಿಸಿ ಕೊಳ್ಳಬೇಕು. ಎಲ್ಲ ಪುಡಿ ಆಹಾರಗಳಲ್ಲೂ ಇದನ್ನು ಶೇಕಡಾ $\frac{1}{2}$ದಷ್ಟು ಮತ್ತು ಕಾಳಿನ ಪುಡಿ ಮಿಶ್ರಣವನ್ನು ಹೊಂದಿರುವ ಬೆಳವಣಿಗೆ ಹಾಗೂ ಪ್ರಾರಂಭಿಕ ಆಹಾರ

ಗಳಲ್ಲಿ ಶೇಕಡಾ 1ರಷ್ಟು ಸೇರಿಸಬೇಕು. ಅಕ್ಕಿ ತೌಡಿನಂತಹ ಅಕ್ಕಿಯ ಉಪಉತ್ಪನ್ನಗಳು ಮ್ಯಾಂಗನೀಸನ್ನು ಸಾಕಷ್ಟು ಹೊಂದಿರುವುದರಿಂದ, ಒಳ್ಳೆಯ ತೌಡು ಪುಡಿ ಮೇವಿನ ಘಟಕವಾಗಿದ್ದಾಗ ಬೇರೆ ಮ್ಯಾಂಗನೀಸನ್ನು ಸೇರಿಸುವ ಅವಶ್ಯಕತೆ ಇಲ್ಲ.


ಸ್ವಜಾತಿ ಭಕ್ಷಣೆ ಅಥವಾ ಪುಕ್ಕಕೀಳುವಿಕೆ: ಕೋಳಿಗಳಲ್ಲಿ ಕೆಲವು ಸಮಯಗಳಲ್ಲಿ ಕಂಡುಬರುವ, ಇತರ ಕೋಳಿಗಳ ಪುಕ್ಕ, ಮುಂಗಾಲು, ಗುದದ್ವಾರ, ಜುಟ್ಟು ಮತ್ತು ಶರೀರದ ಇತರ ಭಾಗಗಳನ್ನು ಕೀಳುವ ಹವ್ಯಾಸವನ್ನು ಸೂಚಿಸಲು ಸಾಮಾನ್ಯವಾಗಿ 'ಸ್ವಜಾತಿ ಭಕ್ಷಣೆ' ಎಂಬ ಪದವನ್ನು ಬಳಸುತ್ತಾರೆ.

ಇಕ್ಕಟ್ಟಾಗಿ ಕೂಡುವಿಕೆ, ಕೆಲಸವಿಲ್ಲದಿರುವಿಕೆ, ಮೇವಿನ ಕೊರತೆಗಳು, ಪುಕ್ಕಗಳ ಬುಡದಲ್ಲಿ ಪುಕ್ಕ ಉದುರಿಸುವ ನುಸಿಗಳ ಇರುವಿಕೆ ಮೊದಲಾದವು ಬಹುಶಃ ಸ್ವಜಾತಿ ಭಕ್ಷಣೆ ಅಥವಾ ಪುಕ್ಕಕೀಳುವಿಕೆಗೆ ಕಾರಣಗಳು.

ಚಿಕಿತ್ಸೆ: ಮೇಲಿನ ಕಾರಣಗಳನ್ನು ತೆಗೆಯುವುದರಿಂದ ಮತ್ತು ಮೇವಿನಲ್ಲಿ ಉಪ್ಪಿನ ಪ್ರಮಾಣವನ್ನು ಎರಡು ಮೂರು ದಿನಗಳವರೆಗೆ ಹೆಚ್ಚಿಸುವುದರಿಂದ ಪುಕ್ಕ ಕೀಳುವಿಕೆ ಮತ್ತು ಇತರ ದುರಭ್ಯಾಸಗಳನ್ನು ತಡೆಗಟ್ಟಬಹುದು. ಪೂರ್ಣಪುಡಿ ಮೇವಿನಲ್ಲಿ ಶೇಕಡಾ 2ರಷ್ಟು ಉಪ್ಪು ಸೇರಿಸಬೇಕು. ಆದರೆ ಪುಡಿ ಆಹಾರ ಹಾಗೂ ಕಾಳು ಎರಡನ್ನೂ ಮೇಯಿಸುವುದಾದರೆ, ಪುಡಿಮೇವಿಗೆ ಶೇಕಡಾ 4ರಷ್ಟು ಉಪ್ಪು ಸೇರಿಸಬೇಕು. ಹೆಚ್ಚಿನ ಕೋಳಿಗಳಲ್ಲಿ ಇದರ ಪ್ರಭಾವ ಆಶ್ಚರ್ಯಕರ; ಪರಿಣಾಮವನ್ನು ಕೆಲವೇ ಗಂಟೆಗಳಲ್ಲಿ ಕಾಣಬಹುದು.

ಉಪ್ಪಿನ ಚಿಕಿತ್ಸೆ ಮೂರು ದಿನಗಳಲ್ಲಿ ಸ್ವಜಾತಿ ಭಕ್ಷಣೆಯನ್ನು ತಪ್ಪಿಸದಿದ್ದರೆ, ಪ್ರತಿ ಕೋಳಿಯ ಕೊಕ್ಕಿನ ಮೇಲ್ದವಡೆಯ ತುದಿಯನ್ನು ಕತ್ತರಿಸುವುದು ಅವಶ್ಯಕವಾಗಬಹುದು. ಇದನ್ನು ಚೂಪಾದ ಚಾಕು ಅಥವಾ ಬಿಸಿ ಬೆಸುಗೆಕಡ್ಡಿ ಇಲ್ಲವೇ ಯಾಂತ್ರಿಕ ಕೊಕ್ಕು ಕತ್ತರಿಯಿಂದ ಮಾಡಬಹುದು. ಕೋಳಿಗಳಿಗೆ ತಿನ್ನಲು ಸಾಕಷ್ಟು ಸಿಗುವಂತೆ ಮತ್ತು ಕೆದಕುತ್ತ ಕಾಲಕಳೆಯಲು ಅನುವಾಗುವಂತೆ ಮೇವನ್ನು ಹೊಂದಿಸಬೇಕು. ಗುಂಪುಗೂಡಿಸುವಿಕೆಯನ್ನು ತಪ್ಪಿಸಬೇಕು. ಕೋಳಿಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು ಆಕ್ರಮಣಕಾರಿ ಹಾಗೂ ಗಾಯಗೊಂಡ ಕೋಳಿಗಳನ್ನು ಕೂಡಲೆ ಬೇರ್ಪಡಿಸಬೇಕು.

ಎರೆಚೀಲ ನಿರ್ಬಂಧ (ಬೆಣೆಗಟ್ಟಿದ ಎರೆಚೀಲ): ಎಲ್ಲೆ ಮೀರಿ ಹಿಗ್ಗಿದ ಮತ್ತು ಕ್ರಿಯಾರಹಿತ ಎರೆಚೀಲದ (ಚಿತ್ರ 134) ಸ್ಥಿತಿಯನ್ನು ಎರೆಚೀಲ ನಿರ್ಬಂಧ ಅಥವಾ ಬೆಣೆಗಟ್ಟಿದ ಎರೆಚೀಲ ಎನ್ನುತ್ತಾರೆ. ಹೆಚ್ಚಿಗೆ ತಿನ್ನುವುದರಿಂದ ಅಥವಾ ಒರಟಾದ ಮತ್ತು ಸುಲಭವಾಗಿ ಜೀರ್ಣವಾಗದ ಒಣಹುಲ್ಲು ಹಾಗೂ ನಾರು ಹೆಚ್ಚಾಗಿರುವ ಆಹಾರಗಳನ್ನು ನುಂಗಿದಾಗ ಈ ಪರಿಸ್ಥಿತಿ ಉಂಟಾಗುತ್ತದೆ.



ಚಿತ್ರ 134: ಎರೆಚೀಲ ನಿರ್ಬಂಧ (ಬಿಗಿಗಟ್ಟಿದ ಎರೆಚೀಲ).

ಚಿಹ್ನೆಗಳು: ಎರೆಚೀಲ ಬಹಳವಾಗಿ ಹಿಗ್ಗಿ ದೊಡ್ಡದಾಗಿರುತ್ತದೆ. ಗಟ್ಟಿಯಾಗಿ ಕಣಕದಂತೆ ಆಗುವಷ್ಟು ಬಿಗಿಯಾಗಿ ಪದಾರ್ಥಗಳು ಅದರೊಳಗೆ ತುಂಬಿಕೊಂಡಿರುತ್ತವೆ. ಕೋಳಿಗಳಲ್ಲಿ ಹಸಿವು ಇಲ್ಲದಂತಾಗುತ್ತದೆ ಮತ್ತು ಪರಿಹಾರ ಒದಗಿಸದಿದ್ದರೆ ಸಾಯುತ್ತವೆ.

ಚಿಕಿತ್ಸೆ: ಎರೆಚೀಲ ಹಾಗೂ ಗಂಟಲ್ಕುಳಿಯನ್ನು ಮೃದುವಾಗಿ ಅದುಮುವುದರಿಂದ ಮತ್ತು ಒಂದು ಮತ್ತು ಒಂದು ಚಹ ಚಮಚ ಹರಳೆಣ್ಣೆ ಕುಡಿಸುವುದರಿಂದ ಒಣಗಿರುವ ಪದಾರ್ಥವನ್ನು ಭಾಗಭಾಗವಾಗಿ ಒಡೆದು ಹೆಚ್ಚಿನ ಭಾಗವನ್ನು ಹೊರತೆಗೆಯಬಹುದು. ಈ ಚಿಕಿತ್ಸೆ ಜಯಪ್ರದವಾಗದಿದ್ದರೆ ಎರೆಚೀಲವನ್ನು ಚೂಪಾದ ಚಾಕುವಿನಿಂದ ಕೊಯ್ದು ಒಳಗಿನ ಪದಾರ್ಥವನ್ನು ಹೊರತೆಗೆಯಬಹುದು. ನಂತರ ಎರೆಚೀಲವನ್ನು ಸ್ವಚ್ಛ ಬಿಸಿನೀರಿನಿಂದ ತೊಳೆದು ಎರೆಚೀಲ ಹಾಗೂ ಹೊರಚರ್ಮದ ಬಾಯನ್ನು 3 ಅಥವಾ 4 ಹೊಲಿಗೆಗಳಿಂದ ಮುಚ್ಚಬೇಕು. ಈ ಉದ್ದೇಶಕ್ಕೆ ಸಾಮಾನ್ಯ ಹತ್ತಿದಾರ ಸಾಕು ಮತ್ತು ಗಾಯದ ಜಾಗಕ್ಕೆ ಐಯೋಡಿನ್ ಟಿಂಚರ್ ಹಚ್ಚಿದರೆ ಸಾಕು. ಮೊದಲ ಒಂದೆರಡು ದಿನಗಳು ಹಾಲು ಮತ್ತು ಮೊಟ್ಟೆಯಂತಹ ದ್ರವ ಆಹಾರಗಳನ್ನು ಮಾತ್ರ ಕೊಡಬೇಕು. ನಂತರ ನಿಧಾನವಾಗಿ ಮೃದು ಪುಡಿ ಆಹಾರ ಕೊಡುತ್ತ ಹೋಗಬೇಕು.

ವಾತಾವರಣದ ಪ್ರಭಾವಗಳು

ಕೋಳಿ ನಷ್ಟಗಳನ್ನು ತಪ್ಪಿಸಲು ಸರಿಯಾದ ವಾತಾವರಣ ಅವಶ್ಯಕ. ಕೋಳಿ ಮನೆಗಳು ರಕ್ಷಕಗಳು ಮೊದಲಾದವುಗಳನ್ನು ಸ್ವಚ್ಛವಾಗಿಡುವುದರ ಕಡೆಗೆ ಗಮನ ಕೊಡುವುದರಿಂದ ಹಲವು ರೋಗಗಳನ್ನು ತಡೆಗಟ್ಟಬಹುದು.

ಮರಿಗಳ ಸಾವನ್ನು ತಪ್ಪಿಸಲು ಕಾವುಕೊಡುವ ಯಂತ್ರದ ಸ್ವಚ್ಛತೆ ಬಹು ಮುಖ್ಯ. ಭ್ರೂಣಗಳ ಸಾವನ್ನು ತಪ್ಪಿಸಲು ಕಾವುಕೊಡುವ ಯಂತ್ರದೊಳಗೆ ಹಾಗೂ ಆ ಕೊಠಡಿಯಲ್ಲಿ ಸೂಕ್ತ ಶಾಖ ಹಾಗೂ ಶೈತ್ಯಾಂಶ ಇರಬೇಕಾದುದು ಅವಶ್ಯಕ. ಅಷ್ಟೇ ಅಲ್ಲದೆ ಮೊಟ್ಟೆಗಳನ್ನು ಸರಿಯಾಗಿಟ್ಟು ಕಾವುಕೊಡುವ ಸಮಯದಲ್ಲಿ ಆಗಾಗ್ಗೆ ತಿರುಗಿಸಬೇಕು. ಮರಿಮಾಡುವಿಕೆಯನ್ನು ವರ್ಷದ ಅನುಕೂಲಕರ ಕಾಲದಲ್ಲಿ ಮಾತ್ರ ಮಾಡಬೇಕು; ಅಂದರೆ, ಸಾಧ್ಯವಾದಮಟ್ಟಿಗೂ ಬೇಸಿಗೆ ಹಾಗೂ ಮಳೆಗಾಲಗಳನ್ನು ಬಿಡಬೇಕು. ವಿವಿಧ ಪ್ರದೇಶಗಳ ಸ್ಥಳೀಯ ಪರಿಸ್ಥಿತಿಗಳಿಗೆ ಅನುಸಾರವಾಗಿ ಮರಿ ಮಾಡುವಿಕೆಗೆ ಅತ್ಯುತ್ತಮ ಕಾಲವನ್ನು ನಿರ್ಧರಿಸಬೇಕು. ಬೇಸಿಗೆಯಲ್ಲಿ ಮರಿಯಾಗಲಿಟ್ಟ ಮೊಟ್ಟೆಗಳು ಸರಿಯಾಗಿ ಮರಿಯಾಗುವುದಿಲ್ಲ; ಅಲ್ಲದೆ, ತಡವಾಗಿ ಮರಿಯಾದವು ಸರಿಯಾಗಿ ಅಭಿವೃದ್ಧಿ ಹೊಂದುವುದಿಲ್ಲ. ಮಳೆಗಾಲದಲ್ಲಿ ಮರಿಯಾದವು 'ಕೊರೈಜ' (ನೆಗಡಿ) ರೋಗಕ್ಕೆ ಬಲಿಯಾಗುವ ಸಾಧ್ಯತೆ ಹೆಚ್ಚು. ಬೇಸಿಗೆ ಕಾಲದಲ್ಲಿ 'ಬೇಗೆ ಬಡಿತ'ದಿಂದ ರಕ್ಷಿಸಲು ಮರಿಗಳಿಗೆ ಸರಿಯಾದ ನೆರಳನ್ನೊದಗಿಸುವುದೂ ಅವಶ್ಯಕ.

ಮೊಟ್ಟೆ ನಿರ್ಬಂಧ: 'ಮೊಟ್ಟೆ ನಿರ್ಬಂಧ' ಸ್ಥಿತಿಯನ್ನು ಮೊಟ್ಟೆ ಇಡಲು ಪ್ರಾರಂಭ ಮಾಡಿದ ಮೊದಲಲ್ಲಿ ಹೇಂಟೆಗಳಲ್ಲಿ ಕಾಣಬಹುದು. ಮೊಟ್ಟೆ ಮಾರ್ಗ ಸಾಕಷ್ಟು ಹಿಗ್ಗುವುದಕ್ಕೆ ಮೊದಲೇ ದೊಡ್ಡಮೊಟ್ಟೆಗಳನ್ನಿಡುವ ಹವ್ಯಾಸ ಇದಕ್ಕೆ ಸಾಮಾನ್ಯ ಕಾರಣ. ಮೊಟ್ಟೆ ಮಾರ್ಗದ ಹಿಂತುದಿಯ ಉರಿಯೂತ, ಅಡಕುನಾಳ ಅಥವಾ ಗಂತಿಗಳು ಮೊಟ್ಟೆ ಹೊರಬರಲು ಅಡ್ಡಿ ಉಂಟುಮಾಡಿ, ಮೊಟ್ಟೆ ನಿರ್ಬಂಧ ಸ್ಥಿತಿಗೆ ಕಾರಣವಾಗುತ್ತವೆ.

ಚಿಹ್ನೆಗಳು: ಪೀಡಿತ ಕೋಳಿಗಳು ಚಡಪಡಿಸುತ್ತವೆ ಮತ್ತು ಗೂಡುಗಳಿಗೆ ಆಗಾಗ ಹೋಗಿ ಬರುತ್ತವೆ. ಅವು ಬಹಳ ಗಟ್ಟಿಯಾಗಿ ಮುಲುಕುತ್ತವೆ ಮತ್ತು ಗುದ ದ್ವಾರದ ಮೂಲಕ ಅಂಡನಾಳ ಪರಾವೃತವಾಗುವವರೆಗೆ ಮುಲುಕುತ್ತವೆ. ಇತರ ಕೋಳಿಗಳು ಪರಾವೃತಗೊಂಡ ಅಂಡನಾಳದಿಂದ ಆಕರ್ಷಿಸಲ್ಪಟ್ಟು ಅದನ್ನು ಕುಕ್ಕ ಬಹುದು. ಮೊಟ್ಟೆ ಹೊರಬರದಿದ್ದರೆ ಕೋಳಿ ಸಾಯುತ್ತದೆ.

ಚಿಕಿತ್ಸೆ: ಮೊಟ್ಟೆಯನ್ನು ಹೊರತೆಗೆಯುವುದು ಕ್ರಿಯಾಶೀಲ ಚಿಕಿತ್ಸೆ. ತೋರಬೆರಳನ್ನು ಗುದದ್ವಾರದಲ್ಲಿ ಒಳಗಿಟ್ಟು ಮತ್ತೊಂದು ಕೈನಿಂದ ಕೋಳಿಯ ಹೊಟ್ಟೆಯ ಮೇಲೆ ಒತ್ತಡಹಾಕಿ ಮೊಟ್ಟೆಯನ್ನು ಗುದದ್ವಾರದ ಕಡೆಗೆ ತಳ್ಳಬೇಕು; ಈ ಕಾರ್ಯಕ್ಕೆ ಒಳಗಿಟ್ಟಿರುವ ತೋರಬೆರಳು ಮೊಟ್ಟೆಗೆ ದಾರಿ ತೋರಿಸುವುದರ

ಮೂಲಕ ಸಹಾಯಮಾಡುತ್ತದೆ. ಗುದದ್ವಾರದಲ್ಲಿ ಮೊಟ್ಟೆಯ ಚಿಪ್ಪು ಕಂಡುಬಂದಾಗ ಅದನ್ನು ಯಾವುದಾದರೊಂದು ಚೂಪಾದ ಸಲಕರಣೆಯಿಂದ ಒಡೆದು ನಂತರ ಚೂರುಚೂರಾಗಿ ಹೊರತೆಗೆಯಬೇಕು.

ಕಂಡಿರೋಸುರಿಕೆ: ಕಂಡಿರೋಸುರಿಕೆ, ಕೋಳಿಗಳ ಮಲಕೂಪದ ಒಂದು ಸಾಮಾನ್ಯ ಹುಣ್ಣಾದ ಪರಿಸ್ಥಿತಿ. ಇದಕ್ಕೆ ಕಾರಣ ಸ್ಪಷ್ಟವಾಗಿಲ್ಲ. ಮಲಕೂಪ ಮತ್ತು ಕಂಡಿಯ ಉರಿಯೂತ ಉಂಟಾಗುತ್ತದೆ. ಕಂಡಿ ಸುತ್ತಲಿನ ಚರ್ಮ ಕೆಂಪಗೆ ಊದಿಕೊಂಡು ಹುಣ್ಣುಗಳನ್ನು ಹೊಂದಿರುತ್ತದೆ ಹಾಗೂ ಕೆಟ್ಟವಾಸನೆ ಬರುತ್ತಿರುತ್ತದೆ. ರೋಗಪೀಡಿತ ಕೋಳಿ ಆಗಾಗ್ಗೆ ವಿಶೇಷ ಶ್ರಮದಿಂದ ಕೆಟ್ಟವಾಸನೆಯಿಂದ ಕೂಡಿದ ಹಿಕ್ಕೆ ಹಾಗೂ ದ್ರವವನ್ನು ಹೊರಹಾಕುತ್ತಿರುತ್ತದೆ.

ಚಿಕಿತ್ಸೆ: ಚಿಕಿತ್ಸೆ ಪರಿಣಾಮಕಾರಿಯಲ್ಲ, ನರಳುತ್ತಿರುವ ಕೋಳಿಗಳನ್ನು ಸಾಯಿಸುವುದು ಉತ್ತಮ.

ಊದಿದ ಪಾದ (ಬಂಬಲ್ ಫುಟ್): ಹೆಸರೇ ಹೇಳುವಂತೆ ಇದು ಕೋಳಿಗಳ ಪಾದದ ಊತ ಇಲ್ಲವೇ ಕೀವುಗಂಟು. ಪಾದದ ಮೇಲಿನ ಚರ್ಮದ ಯಾವುದೇ ರೀತಿಯ ತರಚುವಿಕೆ, ಕೊಯ್ತ ಅಥವಾ ತೂತು, ರೋಗಕಾರಕ ಕ್ರಿಮಿಗಳಿಂದ ಸೋಂಕುಗೊಂಡು ಈ ಪರಿಸ್ಥಿತಿಗೆ ಕಾರಣವಾಗಬಹುದು.

ಚಿಹ್ನೆಗಳು ಮತ್ತು ಚಿಕಿತ್ಸೆ: ಪಾದದ ಮೆತ್ತೆ ಊದಿಕೊಳ್ಳುತ್ತದೆ ಮತ್ತು ಊತ ಬೆರಳುಗಳ ನಡುವಿನ ಭಾಗದಲ್ಲಿ ಪ್ರಮುಖವಾಗಿ ಕಾಣುತ್ತದೆ. ಕೋಳಿಗಳು ನಡೆಯಲಾರದಂತಾಗುತ್ತವೆ. ಊತವನ್ನು ಇರಿದು, ಗಾಯವನ್ನು ಚೆನ್ನಾಗಿ ಹೆರೆದ ನಂತರ ಅವಶ್ಯಕವಾದರೆ ಒಳಭಾಗವನ್ನು ಚೆನ್ನಾಗಿ ತೊಳೆಯಬೇಕು. ನಂತರ ಒಳಭಾಗಕ್ಕೆ ಐಓಡೀನ್ ಟಿಂಚರ್ ಅಥವಾ ಸಲ್ಫನಿಲಮೈಡ್ ಪೌಡರ್ ತುಂಬಿ ಪಟ್ಟಿ ಕಟ್ಟಬೇಕು. ಈ ರೀತಿ ಸ್ವಚ್ಛಮಾಡಿ ಪಟ್ಟಿಕಟ್ಟುವಿಕೆಯನ್ನು ಕನಿಷ್ಠ ಎರಡು ದಿನಕ್ಕೊಂದು ಸಾರಿಯಾದರೂ ಮಾಡಬೇಕು.

ಚರ್ಮದಡಿಯ ಗಾಳಿಯುಬ್ಬಟ: ಎದೆ ಮತ್ತು ಶರೀರದ ಇತರ ಭಾಗಗಳ ಚರ್ಮ ಗಾಳಿಯಿಂದ ಉಬ್ಬಿಬಿಡುತ್ತದೆ. ಇದು ಕೋಳಿಗೆ ಒಂದು ರೀತಿಯ ಊದಿದ ಲಕ್ಷಣವನ್ನು ಕೊಡುತ್ತದೆ.

ಬಹುಶಃ ಇದು ಗಾಳಿಗೂಡು ಅಥವಾ ಇತರ ಉಸಿರಾಟದ ಅಂಗಗಳು ಒಡೆದುಕೊಂಡು ಉಚ್ಛ್ವಾಸದ ಗಾಳಿ ಚರ್ಮದ ಕೆಳಗೆ ಸೇರಿಕೊಳ್ಳುವುದರಿಂದ ಉಂಟಾಗಬಹುದು. ದೋಷಯುತ ಕೆಪೊನೈಸಿಂಗ್ ಶಸ್ತ್ರಕ್ರಿಯೆಯ ನಂತರವೂ ಈ ಸ್ಥಿತಿಯನ್ನು ಕಾಣಬಹುದು.

ಚಿಕಿತ್ಸೆ: ದುರ್ಬಲ ಚರ್ಮದಡಿಯ ಗಾಳಿಯುಬ್ಬಟೆಗೆ ಯಾವ ಚಿಕಿತ್ಸೆಯೂ ಬೇಕಾಗಿಲ್ಲ. ಈ ಪರಿಸ್ಥಿತಿ ಕೆಲವು ದಿನಗಳಲ್ಲಿ ತಂತಾನೆ ಸರಿಹೋಗುತ್ತದೆ. ಆದಾಗ್ಯೂ ತೀವ್ರತರ ಪರಿಸ್ಥಿತಿಗಳಲ್ಲಿ ಚಿಕಿತ್ಸೆಮಾಡದೆ ಹೋದರೆ ಉಸಿರು ಕಟ್ಟಿಕೊಂಡು ಕೋಳಿ ಸಾಯುತ್ತದೆ. ಅಂತಹ ಸಂದರ್ಭಗಳಲ್ಲಿ ಮಾಡಬಹುದಾದ ಒಂದೇ ಚಿಕಿತ್ಸೆ ಎಂದರೆ ಗಾಳಿಯುಬ್ಬಟೆಯನ್ನು ಸೀಳಿ ಗಾಳಿಯನ್ನು ಹೊರಕ್ಕೆ ಹಿಸುಕುವುದು.

ಬೇಗೆ ಗೊದಗುದಿ (ಜಳಬಡಿತ): ಬೇಸಿಗೆ ಕಾಲದಲ್ಲಿ ಕೋಳಿಮನೆಗಳಲ್ಲಿ ಶಾಖ ವಿಪರೀತ ಹೆಚ್ಚುವುದು ಸಹಜ: ಇದು ಜಳಬಡಿತ ಅಥವಾ ಬೇಗೆ ಗೊದಗುದಿಗೆ ಕಾರಣ. ಹಗುರತಳಿಗಳಿಗಿಂತ ಭಾರವಾದ ತಳಿಗಳು ಇದಕ್ಕೆ ಬೇಗ ಬಲಿಯಾಗುತ್ತವೆ. ಬಲಿಯಾದ ಕೋಳಿಗಳಲ್ಲಿ ಉಸಿರಾಟ. ಶರೀರದ ಶಾಖ ಹೆಚ್ಚುತ್ತವೆ (109°–110°/c). ಗೊದಗುದಿಯು ಕೊನೆಗೆ ಸಾವಿನಲ್ಲಿ ಮುಕ್ತಾಯಗೊಳ್ಳುತ್ತದೆ.

ನರಳುತ್ತಿರುವ ಕೋಳಿಗಳನ್ನು ತಣ್ಣೀರಿನಲ್ಲಿ ಅದ್ದಬೇಕು. ಸಾಕಷ್ಟು ನೆರಳು, ಒಳ್ಳೆಯ ವಾತಾಯನ. ಸಾಕಷ್ಟು ನೀರು ಮತ್ತು ಗುಂಪುಗೂಡುವುದನ್ನು ತಪ್ಪಿಸಲು ಸಾಕಷ್ಟು ಜಾಗ ಒದಗಿಸುವುದೇ ಮೊದಲಾದವು ಜಳಬಡಿತವನ್ನು ತಪ್ಪಿಸಲು ಸಹಾಯ ಕಾರಿ. ಗೂಡುಗಳನ್ನು ರಚಿಸಲು ಲೋಹದ ತಗಡಿನ ಬಾಗಿಲುಗಳನ್ನು ಉಪಯೋಗಿಸ ಬಾರದು. ಕೋಳಿಗಳನ್ನು ಆಗಾಗ್ಗೆ ಗೂಡಿನಿಂದ ಹೊರಬಿಡುವುದು ಅದರಲ್ಲೂ ಬೇಸಿಗೆ ಕಾಲದಲ್ಲಿ ಬಹಳ ಒಳ್ಳೆಯ ಅಭ್ಯಾಸ.

ವಿಷಪ್ರಾಶನ: ವಿಷ ಸಸ್ಯ ಹಾಗೂ ಬೀಜಗಳು, ಕೋಳಿಮನೆಯಿಂದ ಇಲಿಗಳನ್ನು ದೂರಮಾಡಲು ಉಪಯೋಗಿಸಿದ ಇಲಿ ಪಾಷಾಣ, ಬೇಜವಾಬ್ದಾರಿಯಿಂದ ಬಿಟ್ಟ ಸೀಸದ ಪೈಂಟ್ ಮುಂತಾದವು ಕೋಳಿಗಳಿಗೆ ದೊರೆಯುವಂತಿರುವುದು ಸಾಮಾನ್ಯವಾಗಿ ವಿಷಪ್ರಾಶನಕ್ಕೆ ಕಾರಣಗಳು. ಕೆಲವುಸಾರಿ ಸಿಂಪರಣೆಗೆ ಉಪಯೋಗಿಸಿದ ಔಷಧ ಮೇವಿಗೆ ಸೇರಬಹುದು. ಇಂತಹ ಸಂದರ್ಭಗಳಲ್ಲಿ ಬಹಳಷ್ಟು ಸಾವುನೋವು ಸಂಭವಿ ಸುತ್ತವೆ.

ಕೋಳಿಗಳಲ್ಲಿ ವಿಷಪ್ರಾಶನವಾಗಬಹುದಾದ ಎಲ್ಲ ಕಾರಣಗಳನ್ನೂ ತಡೆಗಟ್ಟು ವುದೇ ಉತ್ತಮ ನಿಯಂತ್ರಣ.

ಅನುವಂಶಿಕ ಅಂಶಗಳು

ಕೋಳಿ ನಷ್ಟಗಳಲ್ಲಿ ಅನುವಂಶೀಯತೆ ಒಂದು ಮುಖ್ಯ ಪಾತ್ರ ವಹಿಸುತ್ತದೆ. ಪರಸ್ಪರ ಅವಲಂಬಿತ ಮೂರು ಅಂಶಗಳಾದ — ಅತಿಥಿಯ ಅನುವಂಶೀಯ ಶಕ್ತಿ, ರೋಗವನ್ನುಂಟುಮಾಡುವ ರೋಗಕಾರಕದ ಆಂತರಿಕ ಬಲ ಮತ್ತು ಅತಿಥಿ ಹಾಗೂ ರೋಗಕಾರಕಗಳ ಪರಸ್ಪರ ಕ್ರಿಯೆಯ ಮೇಲೆ ಮಹತ್ತರ ಪರಿಣಾಮವನ್ನುಂಟು ಮಾಡಬಲ್ಲ ವಾತಾವರಣ. ಇವುಗಳನ್ನು ಆಧುನಿಕ ರೋಗಶಾಸ್ತ್ರ ಗುರುತಿಸಿದೆ. ಹೆಚ್ಚು

ಉತ್ಪಾದನಾಶೀಲ ಮತ್ತು ರೋಗನಿರೋಧಕ ಪ್ರಭೇದಗಳನ್ನು ಉತ್ಪಾದಿಸುವ ಗುರಿಯುಳ್ಳ ಯಾವುದೇ ತಳಿಸಂವರ್ಧನ ಕಾರ್ಯದಲ್ಲಿ ಈ ತೊಡಕುಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು.

ಅನುವಂಶೀಯತೆ ಶಾಸ್ತ್ರದ ದೃಷ್ಟಿಯಿಂದ ಇದನ್ನು ಸಾಧಿಸುವ ಕಾರ್ಯಶೀಲ ಸಲಹೆಗಳೆಂದರೆ: (1) ಚೈತನ್ಯದ ದೃಷ್ಟಿಯಿಂದ ತಳಿ ಎಬ್ಬಿಸುವ ಗುಂಪಿನ ಆಯ್ಕೆ. ಅಂದರೆ ಮೊಟ್ಟೆಯೊಡೆದು ಮರಿಯಾದಂದಿನಿಂದ ತಳಿಎಬ್ಬಿಸುವ ಕೋಳಿಯಾಗಿ ಆಯ್ಕೆಯಾಗುವವರೆಗೆ ಕಂಡುಬರುವ ಚೈತನ್ಯದ ಎಲ್ಲ ಚಿಹ್ನೆಗಳ ಆಧಾರದ ಮೇಲಿನ ಆಯ್ಕೆ (2) ರೋಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾಯುತ್ತಿರುವ ಪೀಳಿಗೆಯುಳ್ಳ ಕೋಳಿಗಳನ್ನು (ಹೇಂಟೆ, ಹುಂಜಗಳೆರಡನ್ನೂ) ಉಪಯೋಗಿಸದಿರುವುದು — ಯಾವುದೇ ಕಾರಣದಿಂದ ಹೆಚ್ಚಿನ ಸಾವು ಉಂಟಾಗುತ್ತಿರುವ ವಂಶ ಅಥವಾ ಪ್ರಭೇದಗಳಿಗೆ ಸೇರಿದ ಕೋಳಿಗಳು.

ಗಂತಿಗಳು: ಕೋಳಿಗಳಲ್ಲಿ ಗಂತಿಗಳ ಸಂಭವ ಸಾಮಾನ್ಯ. ಗಂತಿಗಳ ಸಂಭವ ವಯಸ್ಸಿನೊಂದಿಗೆ ಹೆಚ್ಚುತ್ತದೆ. ಬೇರೆಲ್ಲ ಅಂಗ, ಊತಕಗಳಿಗಿಂತ ಮೊಟ್ಟೆ ತಯಾರು ಮಾಡುವ ಅಂಗ ಆದರಲ್ಲೂ ಅಂಡಾಶಯ ಗಂತಿಗಳಿಗೆ ಈಡಾಗುತ್ತದೆ. ಗಂತಿಗಳು ಹೊರ ಅಥವಾ ಒಳಗಂತಿಗಳಾಗಿರಬಹುದು. ಹೊರಗಂತಿಗಳನ್ನು ಸುಲಭವಾಗಿ ಗುರುತಿಸಬಹುದು. ಆದರೆ ಕೋಳಿಗಳು ಸಣ್ಣಗಾಗಿ, ಒಣಗಿಕೊಂಡು, ಜೋರಲುಬಿದ್ದಾಗ ಮಾತ್ರ ಒಳಗಂತಿಗಳನ್ನು ಪರೀಕ್ಷಿಸಬಹುದು.

ಚಿಕಿತ್ಸೆ ಮತ್ತು ನಿರೋಧ: ಹಲವು ಗಂತಿಗಳು ಗುಣದಲ್ಲಿ ಮರುಕಳಿಕಗಳಾದುದರಿಂದ ಕೋಳಿಗಳನ್ನು ಕೊಂದು ಹೆಣವನ್ನು ನಾಶಪಡಿಸಬೇಕು. ಕೆಲವು ರೀತಿಯ ಗಂತಿಗಳ ಬೆಳವಣಿಗೆಗೆ ಅನುವಂಶೀಯ ಈಡುಗುಣ ಸಹಕಾರಿಯಾಗಿರುತ್ತದೆಂದು ತೋರಿಸಲಾಗಿದೆ. ಆದುದರಿಂದ ಹೆಚ್ಚಿಗೆ ಗಂತಿ ಸಂಭವಗಳು ಕಂಡುಬಂದಿರುವ ವಂಶಗಳನ್ನು ತಳಿಎಬ್ಬಿಸುವ ಕಾರ್ಯಕ್ಕೆ ಉಪಯೋಗಿಸಬಾರದು.

ಅಧ್ಯಾಯ 12

ನಿರ್ವಹಣೆ

ಜಯಪ್ರದವಾಗಿ ಕೋಳಿಸಾಕಲು ಕೋಳಿಸಾಕಾಣಿಕೆ ಹಾಗೂ ಮೊಟ್ಟೆ ಉತ್ಪಾದನೆಯ ಮುಖ್ಯ ತತ್ವಗಳ ಪೂರ್ಣ ಅರಿವಿನಷ್ಟೇ, ಒಳ್ಳೆಯ ನಿರ್ವಹಣೆಯೂ ಮುಖ್ಯವಾದುದು. ಹಿಂದಿನ ಅಧ್ಯಾಯಗಳಲ್ಲಿ ಮೊದಲಿನ ತತ್ವಗಳ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಆದರೆ ಒಳ್ಳೆಯ ನಿರ್ವಹಣೆಯನ್ನು ಕಲಿಯಲು ಅನುಭವದಿಂದ ಮಾತ್ರ ಸಾಧ್ಯ. ತಳಿಎಬ್ಬಿಸುವಿಕೆ, ಕಾವುಕೊಡುವಿಕೆ ಮತ್ತು ರಕ್ಷಣೆ, ಮೇಯಿಸುವಿಕೆ, ವಸತಿ, ರೋಗ ನಿಯಂತ್ರಣ ಮೊದಲಾದ ಅಧ್ಯಾಯಗಳಲ್ಲಿ ಕೆಲವು ನಿರ್ವಹಣಾ ಅಭ್ಯಾಸಗಳನ್ನು ಆಗಲೇ ಚರ್ಚಿಸಿದೆ. ಆದಾಗ್ಯೂ ಅವುಗಳ ಪ್ರಾಮುಖ್ಯತೆಯನ್ನು ವಿಶದಪಡಿಸಲು, ಕೆಲವು ಅತಿಮುಖ್ಯ ಅಂಶಗಳನ್ನು ಇಲ್ಲಿ ಸ್ಮರಿಸಲಾಗುವುದು.

ಕೋಳಿ ನಿರ್ವಹಣೆ ವಿಷಯವನ್ನು ಅನುಕೂಲತೆಗಾಗಿ ಈ ಕೆಳಗಿನ ವರ್ಗಗಳಾಗಿ, ವಿಭಾಗಿಸಬಹುದು. (i) ಸಾಮಾನ್ಯ ನಿರ್ವಹಣೆ (ii) ಮರಿಗಳ ನಿರ್ವಹಣೆ (iii) ಮರಿಹೇಂಟೆ ಮತ್ತು ಮರಿಹುಂಜಗಳ ನಿರ್ವಹಣೆ (iv) ಹುಂಜಗಳ ನಿರ್ವಹಣೆ (v) ಮೊಟ್ಟೆ ಉತ್ಪಾದಕಗಳ ನಿರ್ವಹಣೆ (vi) ತಳಿಎಬ್ಬಿಸುವ ಗುಂಪಿನ ನಿರ್ವಹಣೆ ಮತ್ತು (vii) ಇತರ ನಿರ್ವಹಣೆ ಸಮಸ್ಯೆಗಳು. ಇವುಗಳನ್ನು ಕೆಳಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಸಾಮಾನ್ಯ ನಿರ್ವಹಣೆ

ಪ್ರಮಾಣಿತ ಸಾಮಗ್ರಿ: ಪ್ರಮಾಣಿತ ರೀತಿಯ ಸಾಕುವ ಸಾಮಗ್ರಿಗಳು ಹಾಗೂ ಕೋಳಿಮನೆಗಳನ್ನು ಉಪಯೋಗಿಸಬೇಕು. ಇದು ಕೆಲಸವನ್ನು ಕಡಮೆ ಮಾಡಲು ಮತ್ತು ಕಾರ್ಯಗಳನ್ನು ಸುಲಭವಾಗಿ ಯೋಚಿಸಲು ಸಹಾಯಮಾಡುತ್ತದೆ.

ಆರಾಮ: ಒಳ್ಳೆಯ ವಾತಾಯನದೊಂದಿಗೆ ಆರಾಮದಾಯಕ ಅನುಕೂಲಗಳನ್ನು ಒದಗಿಸಬೇಕು. ಕೋಳಿಮನೆಯಲ್ಲಿ ಕೋಳಿಗಳನ್ನು ಇಕ್ಕಟ್ಟಾಗಿ ಗುಂಪುಗೂಡಿಸಬಾರದು.

ಬೆಳೆಯುತ್ತಿರುವ ಹಾಗೂ ವಯಸ್ಕ ಕೋಳಿಗಳ ವಸತಿ: ಬೆಳೆಯುತ್ತಿರುವ ಮತ್ತು ವಯಸ್ಕ ಕೋಳಿಗಳಿಗೆ ಬೇರೆ ಬೇರೆ ವಸತಿ ಒದಗಿಸಬೇಕು. ವಯಸ್ಸನ್ನು ತಿಳಿದುಕೊಳ್ಳಲು ಒಂದು ದಿನದ ಮರಿಗಳಿಗೇ ಪಾದವನ್ನು ತೂತು ಮಾಡುವುದಕ್ಕಾಗಲಿ ಸೀಳುವುದಾಗಲಿ ಮಾಡಿ. ಮೊಟ್ಟೆ ಇಡುವ ಹೇಂಟೆಗಳನ್ನು ಎರಡನೇ ವರ್ಷಕ್ಕೆ ಉಳಿಸಿಕೊಂಡ ಕೇಂದ್ರಗಳಲ್ಲಿ (i) ಬೆಳೆಯುತ್ತಿರುವ ಕೋಳಿಗಳು (ii) ತಮ್ಮ ಮೊಟ್ಟೆ

ಉತ್ಪಾದನೆಯ ಮೊದಲನೆ ವರ್ಷದಲ್ಲಿರುವ ಮರಿಹೇಂಟೆಗಳು, ಮತ್ತು (iii) ಎರಡನೆ ವರ್ಷಕ್ಕಾಗಿ ಕಾಯ್ದಿಟ್ಟ ಹೇಂಟೆಗಳು ಇವೆಲ್ಲವಕ್ಕೂ ಬೇರೆ ಬೇರೆ ವಸತಿ ಒದಗಿಸಬೇಕು.

ಸಾಗಿಸಬಲ್ಲ ಮನೆಗಳು: ಸಾಗಿಬಸಲ್ಲ ಮನೆಗಳನ್ನು ಪ್ರತಿ 15 ದಿನಕ್ಕೊಮ್ಮೆ 10 ಗಜಗಳಷ್ಟು ಸಾಗಿಸಬೇಕು. ಸಾಗಿಸಬಲ್ಲ ಮನೆಗಳ ಕೆಳಗೆ ಹುಲ್ಲು ಒಣಗಿಹೋಗದಂತಿರಲು ಮನೆಯನ್ನು ಒಂದೇ ಜಾಗದಲ್ಲಿ 4 ವಾರಗಳಿಗಿಂತ ಹೆಚ್ಚಿಗೆ ಕಾಲ ಇಡಬಾರದು.



ಚಿತ್ರ 135: ಕಿಕ್ಕಿರಿದ ಕೋಳಿಮನೆ.

ಅರ್ಧತೀವ್ರ ಮನೆಗಳು ಹಾಗೂ ಮೇವುಗಾವಲುಗಳು: ಪ್ರತಿಕೋಳಿಗೆ ಮನೆಯಲ್ಲಿ 3–4 ಚದರಅಡಿ ನೆಲಜಾಗ ಮತ್ತು 20 ಚದರ ಗಜ ಮೇವುಗಾವಲು ಒದಗಿಸಬೇಕು.

ಮಡಚಬಲ್ಲ ಸಾಮಗ್ರಿಗಳು: 20′ × 5′ (100 ಚದರ ಅಡಿ) ಅಳತೆಯ ಮಡಚುವ ಮನೆ 25 ಕೋಳಿಗಳಿಗೆ ಸೂಕ್ತವಾದದ್ದು. ಇಂತಹ ಮನೆಯನ್ನು ಪ್ರತಿದಿನ ಜಾಗ ಬದಲಾಯಿಸಿದರೆ ಒಂದು ವರ್ಷಕ್ಕೆ 455 ಚದರ ಗಜ ಅಥವಾ 0.938 ಎಕರೆ ಭೂಮಿಯನ್ನು ಉಪಯೋಗಿಸಿಕೊಳ್ಳುತ್ತದೆ.

ಕೂಡುಗಂಬಿಗಳು: ಮನೆಯ ಹಿಂಭಾಗದಿಂದ ಕನಿಷ್ಠ 9 ಅಂಗುಲಗಳ ದೂರದಲ್ಲಿ ಕೂಡುಗಂಬಿಗಳನ್ನು ಜೋಡಿಸಿ. ತಳಿಗಳನ್ನವಲಂಬಿಸಿ ಕೂಡುಗಂಬಿಗಳ

ಮಧ್ಯೆ 12–14 ಅಂಗುಲ ಅಂತರವಿಡಬೇಕು. ದೊಡ್ಡತಳಿಗಳಿಗೆ ಕನಿಷ್ಠ 7ಅಂಗುಲ ಮತ್ತು ಸಣ್ಣತಳಿಗಳಿಗೆ ಕನಿಷ್ಠ 6 ಅಂಗುಲ ಕೂಡುಗಂಬಿ ಜಾಗವನ್ನೊದಗಿಸಬೇಕು.

ಮೊಟ್ಟೆ ಇಡುವ ಪೆಟ್ಟಿಗೆಗಳು: ಮೊಟ್ಟೆ ಇಡುವ ಪೆಟ್ಟಿಗೆಗಳ ಅನುಕೂಲತೆಯನ್ನು ಸಾಕಷ್ಟು ಒದಗಿಸಬೇಕು. ಇದು ಉಪಯೋಗಿಸುವ ಮೊಟ್ಟೆಗೂಡಿನ ರೀತಿಯನ್ನವಲಂಬಿಸುತ್ತದೆ. ಉದಾಹರಣೆಗೆ ಬೋನುಗೂಡುಗಳನ್ನು ಉಪಯೋಗಿಸಿದಾಗ 3 ಕೋಳಿಗಳಿಗೆ ಒಂದು ಗೂಡು ಸಾಕು. ತೆರೆದ ರೀತಿ ಒಂದು ಗೂಡಿನಲ್ಲಿ 4–5 ಕೋಳಿಗಳು ಮೊಟ್ಟೆ ಇಡಬಲ್ಲವು ಮತ್ತು ವಾಣಿಜ್ಯ ಗೂಡುಗಳಲ್ಲಿ ಪ್ರತಿ 100 ಕೋಳಿಗಳಿಗೆ 6 ಅಡಿ × 2 ಅಡಿ ಗೂಡು ಸಾಕು.

ಪ್ರಾರಂಭದ ಕಾರ್ಯಗಳು

ಮರಿಗಳನ್ನು ಬೆಳೆಸುವುದು: ಕೋಳಿಮನೆಗಳ ಹತ್ತಿರ. ಬೆಳೆಯುವ ಮರಿಗಳಿಗೆಂದೇ ಸ್ವಲ್ಪಜಾಗವನ್ನು ಕಾಯ್ದಿರಿಸಬೇಕು. ಇಲ್ಲಿಗೆ ಎಂದೂ ವಯಸ್ಕ ಕೋಳಿಗಳನ್ನು ಬಿಡಬಾರದು. ಮರಿಗಳ ಮೊದಲ 8 ವಾರಗಳ ಜೀವನದಲ್ಲಿ 1000 ಮರಿಗಳಿಗೆ 1 ಎಕರೆ ಜಾಗ ಸಾಕಾಗುತ್ತದೆ.

ಮುಂಗಡ ಯೋಜನೆಗಳು: ಕೇಂದ್ರದಲ್ಲಿ ಇರಿಸಿಕೊಳ್ಳುವ ತಳಿವಿಧ ಅಥವಾ ಸಂಕರಣ ಹಾಗೂ ದಿನದ ಮರಿಗಳನ್ನು ಪಡೆಯುವ ವಿಧಾನಗಳಲ್ಲಿ ಅನುಸರಿಸುವ ತಂತ್ರವನ್ನು ಮುಂಗಡವಾಗಿಯೇ ಯೋಚಿಸಬೇಕು.

ಮೊಟ್ಟೆಗಳನ್ನು ಮರಿಮಾಡುವುದರಿಂದ ಕೋಳಿಮರಿಗಳನ್ನು ಸಾಕುವುದು: ಮೊಟ್ಟೆಗಳಿಂದ ಮರಿಪಡೆಯುವ ಅಪೇಕ್ಷೆ ಇದ್ದರೆ 1–2 ವರ್ಷ ವಯಸ್ಸಿನ ಅತ್ಯುತ್ತಮ ಮೊಟ್ಟೆ ಉತ್ಪಾದಕಗಳಿಂದ ಮೊಟ್ಟೆಗಳನ್ನು ಆಯ್ದುಕೊಳ್ಳಬೇಕು. ಇನ್ನೂ ಕಡಮೆ ವಯಸ್ಸಿನ ಹೇಂಟೆಗಳನ್ನು ತಳಿಎಬ್ಬಿಸಲು ಉಪಯೋಗಿಸಲು ಯಾವ ಅಭ್ಯಂತರವೂ ಇಲ್ಲ: ಆದರೆ ಅವುಗಳನ್ನು ತಳಿಎಬ್ಬಿಸುವ ಗುಂಪಿಗೆ ಸೇರಿಸಬಹುದೇ, ಬಾರದೇ ಎಂಬುದಕ್ಕೆ ಮಾರ್ಗ ತೋರಿಸುವ. ದೈಹಿಕ ಹಾಗೂ ಇತರ ಲಕ್ಷಣಗಳು ಇನ್ನೂ ಅಭಿವೃದ್ಧಿ ಹೊಂದಿರುವುದಿಲ್ಲ, ಅಲ್ಲದೆ ಮರಿಹೇಂಟೆಗಳ ಮೊಟ್ಟೆಗಳು ಸಾಮಾನ್ಯವಾಗಿ ಸಣ್ಣದಾಗಿರುತ್ತವೆ. ಹೇಂಟೆಗಳ ಗೂಡಿನಲ್ಲಿ ಹುಂಜವನ್ನು ಬಿಟ್ಟ ವಾರದಿಂದ 10 ದಿನಗಳ ನಂತರ ಮೊಟ್ಟೆಗಳನ್ನು ಮರಿಮಾಡಲು ತೆಗೆದುಕೊಳ್ಳಬೇಕು. ಸಾಮಾನ್ಯವಾಗಿ ಹುಂಜವನ್ನು ತೆಗೆದ ನಂತರ ವಾರದವರೆಗೂ ಫಲೀಕೃತ ಮೊಟ್ಟೆಗಳು ಉತ್ಪಾದಿತವಾಗುತ್ತವೆ. ಅವುಗಳನ್ನೂ ತಳಿಎಬ್ಬಿಸಲು ತೆಗೆದುಕೊಳ್ಳಬಹುದು. ಸರಾಸರಿ ಗಾತ್ರದ (2 ಔನ್ಸ್). ಸರಿಯಾದ ಆಕಾರದ ಮತ್ತು ಒಂದೇ ಸಮನಾದ ಮೊಟ್ಟೆ ಚಿಪ್ಪುಳ್ಳ ಮೊಟ್ಟೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಬೇಸಿಗೆಕಾಲದಲ್ಲಿ 5 ದಿನಗಳಿಗಿಂತಲೂ. ಚಳಿಕಾಲದಲ್ಲಿ 10 ದಿನಗಳಿಗಿಂತಲೂ ಹಳೆಯದಾದ ಮೊಟ್ಟೆಗಳನ್ನು ಮರಿಮಾಡಲು ಇಡಬಾರದು.

ಮೇಯಿಸುವಿಕೆ

ಸಮತೋಲ ಮೇವು: ಸಮತೋಲ ಮೇವು ಕಾಳುಗಳು ಮತ್ತು ಪುಡಿ ಇಲ್ಲವ ಪೂರ್ಣ ಪುಡಿಯಾಗಿರಬಹುದು. ಇದು ಅವಶ್ಯಕ ಪ್ರಮಾಣದಲ್ಲಿ ಶರ್ಕರಪಿಷ್ಟಗಳು, ಸಸಾರಜನಕಗಳು (ಸಸ್ಯ ಹಾಗೂ ಪ್ರಾಣಿಜನ್ಯಗಳೆರಡೂ), ಖನಿಜಗಳು ಹಾಗೂ ಜೀವ ಸತ್ವಗಳನ್ನು ಹೊಂದಿರಬೇಕು. ಮರಿಗಳ ವಯಸ್ಸು ಮತ್ತು ಅವುಗಳನ್ನು ಸಾಕುತ್ತಿರುವ ಉದ್ದೇಶಗಳಿಗನುಸಾರವಾಗಿ ಮೇವು — ಶೇಕಡಾ 75–90 ಭಾಗ ಶರ್ಕರಪಿಷ್ಟಗಳು, 15–20 ಭಾಗ ಸಸಾರಜನಕಗಳು ಮತ್ತು 0.5 ಭಾಗ ಉಪ್ಪು ಸೇರಿದಂತೆ 5 ಭಾಗ ಖನಿಜಗಳನ್ನೂ ಹೊಂದಿರಬೇಕು.

ಮೇವಿನ ಬಳಕೆ: ಮೊಟ್ಟೆ ಉತ್ಪಾದಿಸುವ ಕೋಳಿ ದಿನಕ್ಕೆ 4 ರಿಂದ 6 ಔನ್ಸ್ ಅಥವಾ ವರ್ಷಕ್ಕೆ 91ರಿಂದ 137 ಪೌಂಡ್ ಆಹಾರ ತಿನ್ನುತ್ತದೆ. ಮರಿಗಳ ಮೇವಿನ ಬಳಕೆ ಅವುಗಳ ವಯಸ್ಸು ಹಾಗೂ ತಳಿಯನ್ನು ಅವಲಂಬಿಸಿರುತ್ತದೆ. ಸರಾಸರಿ ಆಹಾರದ ಅವಶ್ಯಕತೆ ಕೆಳಕಂಡಂತಿದೆ:

ಮೊಟ್ಟೆ ಇಡುವ ಕೋಳಿಗೆ ವರ್ಷಕ್ಕೆ ಒಂದು ಹಂಡ್ರಡ್‌ವೈಟ್ (112 ಪೌಂಡ್) ಆಹಾರ ಬೇಕಾಗುತ್ತದೆ; ಮರಿಯಾದಾಗಿನಿಂದ 24 ವಾರಗಳವರೆಗೆ $\frac{1}{4}$ ರಿಂದ $\frac{2}{7}$ ಹಂಡ್ರಡ್‌ವೈಟ್ (28–32 ಪೌಂಡ್) ಆಹಾರ ಪ್ರತಿಮರಿಗೆ ಬೇಕಾಗುತ್ತದೆ; 100 ಮರಿಗಳಿಗೆ ಮರಿಯಾದಾಗಿನಿಂದ ಎಂಟುವಾರಗಳವರೆಗೆ $3\frac{1}{2}-4$ ಹಂಡ್ರಡ್‌ವೈಟ್ (392–448 ಪೌಂಡ್) ಆಹಾರ ಬೇಕಾಗುತ್ತದೆ. ಅಂದರೆ ಒಂದು ಟನ್ ಆಹಾರ (i) 20 ಮೊಟ್ಟೆ ಇಡುವ ಕೋಳಿಗಳಿಗೆ ಒಂದು ವರ್ಷಕ್ಕೆ ಅಥವಾ (ii) ಮರಿಯಾದಾಗಿನಿಂದ 24 ವಾರಗಳವರೆಗೆ 80 ಹೇಂಟೆಗಳಿಗೆ ಅಥವಾ (iii) ಮರಿಯಾದಾಗಿನಿಂದ 8 ವಾರಗಳವರೆಗೆ 500 ಮರಿಗಳಿಗೆ ಸಾಕಾಗುತ್ತದೆ.

ನೀರಿನ ಅವಶ್ಯಕತೆ: ಎಲ್ಲಕಾಲದಲ್ಲೂ ಸಾಕಷ್ಟು ಶುದ್ಧ ನೀರು ಒದಗಿಸಬೇಕು. 100 ಕೋಳಿಗಳ ದಿನದ ಅವಶ್ಯಕತೆ ಎಂದರೆ: (i) ಮೊಟ್ಟೆ ಇಡುವ ಕೋಳಿಗಳಲ್ಲಿ 5–6 ಗ್ಯಾಲನ್ (ii) 4 ವಾರಗಳವರೆಗಿನ ಮರಿಗಳಿಗೆ ಸುಮಾರು $1\frac{1}{2}$ ಗ್ಯಾಲನ್ ಮತ್ತು (iii) 4ರಿಂದ 8 ವಾರಗಳ ವಯಸ್ಸಿನ ಕೋಳಿಗಳಿಗೆ 2–3 ಗ್ಯಾಲನ್.

ಚಿಪ್ಪಿನಪುಡಿ: ಚಿಪ್ಪಿನ ಪುಡಿಯ ಒಂದು ತೆರೆದ ಮೇವಿನ ತೊಟ್ಟಿಯನ್ನು ಯಾವಾಗಲೂ ಇಟ್ಟಿರಬೇಕು. ಆಹಾರವನ್ನು ನುರಿಸುವುದು ಮತ್ತು ಜೀರ್ಣಿಸಿಕೊಳ್ಳುವುದರಲ್ಲಿ ಚಿಪ್ಪಿನಪುಡಿ ಸಹಾಯಮಾಡುತ್ತದೆ, ಅಲ್ಲದೆ ಮರಿಗಳ ಮೂಳೆಬೆಳವಣಿಗೆ ಮತ್ತು ಚಿಪ್ಪಿನ ರಚನೆಗೆ ಬೇಕಾದ ಕ್ಯಾಲ್ಸಿಯಂ ಅನ್ನು ಒದಗಿಸುತ್ತದೆ. ಮೊಟ್ಟೆ ಇಡುವ ಒಂದುನೂರು ಕೋಳಿಗಳಿಗೆ ವರ್ಷಕ್ಕೆ 2 ಹಂಡ್ರಡ್‌ವೈಟ್ (224 ಪೌಂಡ್) ಸುಣ್ಣಕಲ್ಲು ಅಥವಾ ಆಸ್ಟರ್ ಚಿಪ್ಪಿನ ಪುಡಿ ಮತ್ತು 14 ಪೌಂಡ್ ಫ್ಲಿಂಟ್ ಪುಡಿ ಬೇಕಾಗುತ್ತದೆ.

ಮೇವಿನ ತೊಟ್ಟಿಯಲ್ಲಿ ಸ್ಥಳ: ಆಹಾರದ ತೊಟ್ಟಿಯ ಎರಡೂ ಕಡೆಯ ಜಾಗ ಲಭ್ಯವಿದ್ದಾಗ 100 ಕೋಳಿಗಳಿಗೆ ಬೇಕಾಗುವ ಸ್ಥಳಾವಕಾಶ ಕೆಳಕಂಡಂತಿದೆ:

	ಒಣಪುಡಿ ಮೇವಿನಲ್ಲಿ (ಅಡಿಗಳು)	ಆರ್ದ್ರಪುಡಿ ಮೇವು ಅಥವಾ ಕಾಳು ಮೇವು (ಅಡಿಗಳು)
ವಯಸ್ಕ ಕೋಳಿಗಳು	12	33
1–4 ವಾರದ ಮರಿಗಳು	3	7
4–8 ವಾರದ ಮರಿಗಳು	6	11
8–12 ವಾರದ ಮರಿಗಳು	8	17
12–20 ವಾರದ ಮರಿಗಳು	11	25

ಮರಿಗಳ ನಿರ್ವಹಣೆ

ಮರಿಗಳನ್ನು ಅವುಗಳ ಗುಣದ ಆಧಾರದ ಮೇಲೆ ಕೊಂಡುಕೊಳ್ಳಬೇಕಲ್ಲದೆ, ಬೆಲೆಯ ಆಧಾರದ ಮೇಲಲ್ಲ. ಮರಿಗಳ ಬೆಲೆ ತೊಡಗಿಸಬೇಕಾದ ಹಣದ ಅತಿ ಸ್ವಲ್ಪ ಭಾಗವನ್ನು ಮಾತ್ರ ಪ್ರತಿನಿಧಿಸುತ್ತದೆ. ಕೆಳಮಟ್ಟದ ಮರಿಗಳು ಯಾವಕಾಲದಲ್ಲೂ ಲಾಭದಾಯಕವಾಗುವುದಿಲ್ಲ. ಮರಿಗಳು ಆರೋಗ್ಯವಾಗಿರುವುವೆಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು. ಮಾತಾಪಿತೃಗಳ ಗುಂಪುಗಳ ಬಗ್ಗೆ ತಿಳಿದುಕೊಂಡು ಅವು ಯಾವುದೇ ರೋಗದಿಂದ ನರಳುತ್ತಿರಲಿಲ್ಲವೆಂದು ನಿಶ್ಚಯಮಾಡಿಕೊಳ್ಳಬೇಕು.

ಸ್ಥಳಾವಕಾಶ ಮತ್ತು ವಾತಾಯನ

ರಕ್ಷಕ ಮನೆಗಳನ್ನು ಸರಿಯಾಗಿ ರಚಿಸಿರಬೇಕು ಮತ್ತು ಮರಿಗಳಿಗೆ ಸ್ಥಳಾವಕಾಶ ಒದಗಿಸಲು ಸಾಕಷ್ಟು ದೊಡ್ಡದಾಗಿರಬೇಕು. ರಕ್ಷಕ ಮನೆಯಲ್ಲಿ ಪ್ರತಿ ಮರಿಗೆ ½ ಚದರ ಅಡಿ ಜಾಗ ಒದಗಿಸಬೇಕು. ಗುಂಪುಗೂಡುವುದನ್ನು ತಪ್ಪಿಸಿ ಮತ್ತು ಒಂದೇ ಹೋವರ್ ಕೆಳಗೆ ಹೆಚ್ಚು ಮರಿಗಳನ್ನು ಬಿಡಬಾರದು. 250 ಮರಿಗಳು ಅಥವಾ ಇನ್ನೂ ಸಣ್ಣ ಗುಂಪುಗಳಿಂದ ತೃಪ್ತಿದಾಯಕ ಫಲಿತಾಂಶ ದೊರೆಯುತ್ತದೆ. ರಕ್ಷಕ ಸಲಕರಣೆ ಒಳ್ಳೆಯ ಸ್ಥಿತಿಯಲ್ಲಿರಬೇಕು ಮತ್ತು ಯಾವಾಗಲೂ ಸ್ವಚ್ಛವಾಗಿರಬೇಕು.

ಮೇವಿನ ತೊಟ್ಟಿಗಳು ಹಾಗೂ ನೀರಿನ ಚಿಲುಮೆಗಳು: ಮರಿಗಳ ಬೆಳವಣಿಗೆಗೆ ತಕ್ಕಂತೆ ಮೇವಿನ ತೊಟ್ಟಿಗಳ ಹಾಗೂ ನೀರಿನ ಚಿಲುಮೆಗಳ ಸಂಖ್ಯೆಯನ್ನು ನಿಯಂತ್ರಿಸಬೇಕು. (ಸಾಮಾನ್ಯ ನಿರ್ವಹಣೆ ನೋಡಿರಿ).

ಸಾಕಷ್ಟು ಬಿಸಿಲು ಮತ್ತು ವಾತಾಯನ: ಕೋಳಿಮನೆಯಲ್ಲಿ ಸಾಕಷ್ಟು ಬಿಸಿಲು ಬೀಳುವಂತಿರಬೇಕು. ಇದು ಮನೆಯನ್ನು ಒಣಸ್ಥಿತಿಯಲ್ಲಿಟ್ಟು ರೋಗಗಳನ್ನು ನಿಯಂತ್ರಿಸಲು ಸಹಾಯಕವಾಗುತ್ತದೆ.

ರಕ್ಷಕ ಮನೆಗಳಲ್ಲಿ ಒಳ್ಳೆಯ ಗಾಳಿ ಸಂಚಾರವಿರಬೇಕು. ರಕ್ಷಕ ಮನೆಗಳಲ್ಲಿ ತಾರಸಿ ಹತ್ತಿರದ ವಾತಾಯನಗಳಷ್ಟೇ ಸಾಲದು, ಸ್ವಚ್ಛ ಗಾಳಿ ಒಳಬರಲೂ ಮಾರ್ಗ ಮಾಡಿಕೊಡಬೇಕು. ಕಿಟಕಿಗಳಲ್ಲಿ ಗಾಜಿನ ಬದಲು ಮಸ್ಲಿನ್ ಬಟ್ಟೆಹಾಕಿದ ಚೌಕಟ್ಟು ಗಳನ್ನು ಜೋಡಿಸಿದರೆ ಸಮಸ್ಯೆ ಪರಿಹಾರವಾಗುತ್ತದೆ. ವಾತಾವರಣ ಅನುಕೂಲಕರ ವಾಗಿದ್ದಾಗ ಇವುಗಳನ್ನು ತೆಗೆದುಬಿಡಬೇಕು.

ರಕ್ಷಕ ಮನೆಗಳು ಮತ್ತು ರಕ್ಷಕಗಳು

ಪ್ರಾರಂಭಿಕ ತಯಾರಿಗಳು: ಮರಿಗಳನ್ನು ತರುವುದಕ್ಕೆ 4 ಅಥವಾ 5 ದಿನ ಮೊದಲೆ ರಕ್ಷಕ ಮನೆಗಳನ್ನು ಚೆನ್ನಾಗಿ ತಿಕ್ಕಿತೊಳೆದು, ಕ್ರಿಮಿನಾಶಕಗಳನ್ನು ಸಿಂಪಡಿಸಿ ಉಪ ಯೋಗಕ್ಕೆ ಸಿದ್ಧಮಾಡಬೇಕು. ಕ್ರಿಮಿಗಳನ್ನು ನಾಶಮಾಡಲು ಒಳ್ಳೆಯ ಕ್ರಿಮಿನಾಶಕ ವನ್ನು ಉಪಯೋಗಿಸಬೇಕು. ಈ ಕೆಳಗಿನ ತಯಾರಿಕೆಗಳು ಸೂಕ್ತ: (i) 4 ಗ್ಯಾಲನ್ ನೀರಿನಲ್ಲಿ 1 ಪಿಂಟ್ ಕ್ರಿಸೋಲ್ (ii) 2 ಗ್ಯಾಲನ್ ನೀರಿನಲ್ಲಿ 1 ಪಿಂಟ್ ಫಾರ್ಮ ಲೀನ್ ಅಥವಾ (iii) 3 ಗ್ಯಾಲನ್ ನೀರಿನಲ್ಲಿ 1 ಪೌಂಡ್ ಕ್ಲೋರಿನ್‌ಯುಕ್ತ ಸುಣ್ಣ (ಶೇಕಡಾ 30 ಲಭ್ಯ ಕ್ಲೋರಿನ್‌ನೊಂದಿಗೆ). ಮರಿಗಳನ್ನು ರಕ್ಷಕ ಮನೆಯೊಳಗೆ ಬಿಡುವ 2 ದಿನ ಮೊದಲೇ ರಕ್ಷಕವನ್ನೂ ತೊಳೆದು ಕ್ರಿಮಿನಾಶಕಗಳನ್ನು ಸಿಂಪಡಿಸಿ ಸಿದ್ಧ ಮಾಡಿಟ್ಟಿರಬೇಕು.

ರಕ್ಷಕ ಬೇಲಿ: ಹೋವರ್‌ನ ಅಂಚಿನಿಂದ 3 ಅಡಿಗಳ ದೂರದಲ್ಲಿ ರಕ್ಷಕದ ಸುತ್ತ 1 ಅಡಿ ಎತ್ತರದ ಗಟ್ಟಿ ಪದಾರ್ಥದ ಬೇಲಿ ನಿರ್ಮಿಸಬೇಕು.

ಶಾಖ: ಹೋವರ್‌ನ ಕೊನೆಯಲ್ಲಿ ಶಾಖ ಮೊದಲವಾರದಲ್ಲಿ 90°F, ಎರಡನೆ ವಾರದಲ್ಲಿ 85°F ಮತ್ತು ಮೂರನೆ ವಾರದಲ್ಲಿ 80°F ಇರುವಂತೆ ಶಾಖವನ್ನು ನಿಯಂತ್ರಿಸಬೇಕು. ಬೇಸಿಗೆ ಕಾಲದಲ್ಲಿ ನಾಲ್ಕು ವಾರಗಳ ನಂತರ ಸುಮಾರಾದ ವಾತಾವರಣದಲ್ಲಿ 4ರಿಂದ 5 ವಾರಗಳಲ್ಲಿ, ಚಳಿಗಾಲದಲ್ಲಿ 6ರಿಂದ 7 ವಾರಗಳ ನಂತರ ಕೃತಕ ಶಾಖವನ್ನು ನಿಲ್ಲಿಸಿಬಿಡಬೇಕು.

ರಕ್ಷಕದಲ್ಲಿ ಮರಿಗಳ ವರ್ತನೆಯನ್ನು ಎಚ್ಚರಿಕೆಯಿಂದ ಗಮನಿಸಿ. ಥಂಡಿ ಅಥವಾ ಹೆಚ್ಚಿನ ಶಾಖ ಕೊಡುವಿಕೆಗಳನ್ನು ತಪ್ಪಿಸಬೇಕು. ಮರಿಗಳ ವರ್ತನೆ, ಉಳಿಸಿಕೊಳ್ಳ ಬೇಕಾದ ಸರಿಯಾದ ಶಾಖದ ಉತ್ತಮ ಸೂಚಿ. ಶಾಖ ಅತಿ ಕಡಮೆಯಾಗಿದ್ದರೆ ಮರಿಗಳು ಒಂದು ಮೂಲೆ ಅಥವಾ ಹೋವರ್‌ನ ಮಧ್ಯದಲ್ಲಿ ಗುಡ್ಡೆಹಾಕಿಕೊಳ್ಳು ತ್ತವೆ ಮತ್ತು ಶಾಖ ಬಹಳವಾಗಿದ್ದರೆ ಅವು ಮಧ್ಯದಿಂದ ದೂರವಾಗಿ ಚದುರಿಹೋಗು ತ್ತವೆ. ಶಾಖವು ಸೂಕ್ತವಾಗಿದ್ದರೆ ಮರಿಗಳು ಹೋವರ್‌ನ ಒಳ ಮತ್ತು ಹೊರ ಭಾಗಗಳಲ್ಲಿ ಸರಿಯಾಗಿ ಹರಡಿಕೊಂಡಿರುತ್ತವೆ.

ಲಿಟ್ಟರ್: ನೆಲವನ್ನು ಒಣಸ್ಥಿತಿಯಲ್ಲಿಡಲು ಸೂಕ್ತ ಲಿಟ್ಟರ್ ಉಪಯೋಗಿಸಬೇಕು. ಮರದ ಪೊಟ್ಟು, ಕತ್ತರಿಸಿದ ಒಣಹುಲ್ಲು, ಕಬ್ಬಿನ ಹಿಪ್ಪೆ, ಕಾಫಿಹೊಟ್ಟು, ಮರದ

ತೆಳುಪೊರೆಗಳು, ಕಡಲೆಕಾಯಿ ಸಿಪ್ಪೆ ಮತ್ತು ಮರಳನ್ನು ಉಪಯೋಗಿಸಬಹುದು. ಲಿಟ್ಟರ್ ಅನ್ನು ವಾರಕ್ಕೊಂದು ಸಾರಿ ಬದಲಾಯಿಸಬೇಕು. ಯಾವುದಾದರೂ ಸೋಂಕು ಅಥವಾ ಹೆಚ್ಚಿನ ತೇವವಿದ್ದರೆ ಇನ್ನೂ ಬೇಗನೆ ಬದಲಾಯಿಸಬೇಕು.

ಮರಿಗಳನ್ನು ಮೇಯಿಸುವಿಕೆ

ಮರಿಗಳನ್ನು ಸಾಮಾನ್ಯವಾಗಿ ಮರಿಯಾದ 36 ಗಂಟೆಗಳ ನಂತರ ರಕ್ಷಕ ಮನೆಯಲ್ಲಿ ಬಿಡಲಾಗುತ್ತದೆ. ಆ ಕೂಡಲೆ ಮರಿಗಳನ್ನು ಮೇಯಿಸಲು ಪ್ರಾರಂಭಿಸಬೇಕು. ಮೊದಲ ಎರಡು ಮೂರು ದಿನಗಳು ಮರಿಗಳು ಲಿಟ್ಟರ್ ತಿನ್ನುವುದನ್ನು ತಪ್ಪಿಸಲು ಮೇವನ್ನು ಸ್ವಚ್ಛವಾದ ಹಳೆಯ ವರ್ತಮಾನ ಪತ್ರಿಕೆಯ ಮೇಲಾಗಲಿ, ರಟ್ಟಿನ ಮೇಲಾಗಲಿ ಹಾಕಿಡಬೇಕು. ಮೂರನೆಯ ದಿನದ ನಂತರ ಎಲ್ಲಮರಿಗಳೂ ಏಕಕಾಲದಲ್ಲಿ ತಿನ್ನಲು ಸಾಧ್ಯವಾಗುವಷ್ಟು ದೊಡ್ಡದಾದ ಮೇವಿನ ತೊಟ್ಟಿ ಒದಗಿಸಬೇಕು. ರಕ್ಷಕ ಮನೆಯಲ್ಲಿ ಕೊಡುವ ಪ್ರಥಮ ಮೇವಿನಲ್ಲಿ ಸಣ್ಣಮರಳು ಅಥವಾ ಚೆನ್ನಾಗಿ ಪುಡಿಮಾಡಿದ ಕಲ್ಲು ಇಲ್ಲವೆ ಕಲ್ಲಿನ ಸಣ್ಣ ಕಣಗಳು ಮತ್ತು ಬಿಸಿ ನೀರು ಸೇರಿರಬೇಕು. ಎರಡು ಗಂಟೆಗಳ ಅವಧಿಯಲ್ಲಿ ಇದರ ಬದಲು ಸೂಕ್ತವಾದ ಪ್ರಾರಂಭಿಕ ಒಣಪುಡಿ ಮೇವನ್ನು ಒದಗಿಸಬೇಕು.

ರೋಗಗಳು ಮತ್ತು ಭಕ್ಷಕಗಳ ವಿರುದ್ಧ ರಕ್ಷಣೆ

ಕಾಯಿಲೆಬಿದ್ದ ಮರಿಗಳನ್ನು ತೆಗೆಯುವುದು: ರಕ್ಷಕದಲ್ಲಿನ ಮರಿಗಳನ್ನು ಆಗಾಗ್ಗ ಎಚ್ಚರಿಕೆಯಿಂದ ಗಮನಿಸುತ್ತಿರಬೇಕು. ಮಂಕಾಗಿ ಜೋಲುಬಿದ್ದ ಒಂಟಿಯಾದ ಅಥವಾ ಇತರ ರೀತಿಯಲ್ಲಿ ಅನಾರೋಗ್ಯವಾಗಿ ಕಂಡುಬರುವ ಮರಿಗಳನ್ನು ಕೂಡಲೆ ತೆಗೆದುಬಿಡಬೇಕು. ತೊಂದರೆಯ ಮೂಲವನ್ನು ಸರಿಯಾಗಿ ಪರಿಶೀಲಿಸಬೇಕು.

ಕಾಯಿಲೆ ಬಿದ್ದ ಮರಿಯ ಚಿಕಿತ್ಸೆ ಮಾಡಲು ಪ್ರಯತ್ನಿಸಬಾರದು. ಹಲವಾರು ಕೋಳಿ ರೋಗಗಳು ಚಿಕಿತ್ಸೆಯಿಂದ ಗುಣವಾಗುವುದಿಲ್ಲ; ವಸ್ತುಶಃ ರೋಗಪೀಡಿತ ಮರಿಗಳನ್ನು ಚಿಕಿತ್ಸೆಗಾಗಿ ಉಳಿಸಿಕೊಳ್ಳುವುದು ರೋಗ ಹರಡಲು ಸಹಕಾರಿಯಾಗುತ್ತದಷ್ಟೆ. ಚಿಕಿತ್ಸೆಗಿಂತ ತಡೆಗಟ್ಟುವುದು ಉತ್ತಮ. ಗುಂಪಿನಲ್ಲಿ ಸಾಂಕ್ರಾಮಿಕ ರೋಗದ ಸೋಂಕು ತಲೆದೋರುವ ಸೂಚನೆ ಕಂಡುಬಂದ ತಕ್ಷಣ ರೋಗನಿದಾನ ಮತ್ತು ತಿಳಿವಳಿಕೆಗಾಗಿ ತಜ್ಞರ ಸಹಾಯ ಪಡೆಯುವುದು ಅತ್ಯುತ್ತಮ.

ರಾನಿಕೇತ್ ರೋಗ ಮತ್ತು ಕೋಳಿ ಸಿಡುಬು: ಮರಿಗಳು ಆರು ವಾರಗಳಾದ ಕೂಡಲೆ ರಾನಿಕೇತ್ ವಿರುದ್ಧ ಹಾಗೂ ಎರಡು ತಿಂಗಳಾದ ಕೂಡಲೆ ಕೋಳಿ ಸಿಡುಬಿನ ವಿರುದ್ಧ ಎಲ್ಲ ಮರಿಗಳಿಗೆ ಚುಚ್ಚುಮದ್ದು ಹಾಕಿಸುವ ಪರಿಪಾಠ ಇಟ್ಟುಕೊಳ್ಳಬೇಕು. ಸರ್ಕಾರಿ ಪಶುವೈದ್ಯಕೀಯ ವಿಭಾಗ ಕೋಳಿಗಳಿಗೆ ಲಸಿಕೆಯ ಚುಚ್ಚುಮದ್ದು ಹಾಕಲು ಪೂರ್ಣ ಅನುಕೂಲತೆ ಹೊಂದಿದೆ.

ಸತ್ತಕೋಳಿಗಳ ವಿಲೇವಾರಿ: ಸತ್ತಕೋಳಿಗಳನ್ನು ಸುಡುವುದು ಅಥವಾ ಹೂಳುವುದರ ಮೂಲಕ ಸರಿಯಾಗಿ ವಿಲೇವಾರಿ ಮಾಡಬೇಕು. ಸತ್ತಕೋಳಿಗಳು ನಿಮ್ಮ ಗುಂಪಿಗೇ ಅಲ್ಲದೆ ನಿಮ್ಮ ಪಕ್ಕದವರ ಗುಂಪಿಗೂ ಹಾನಿಯ ಮೂಲವಾಗಬಹುದು.

ಸ್ವಚ್ಛ ಮೇವುಗಾವಲು: ಕೋಳಿಗಳನ್ನು ಪ್ರತಿಬಾರಿ ರಕ್ಷಕಮನೆಯಿಂದ ಮೇವುಗಾವಲಿಗೆ ಬಿಡುವಾಗ ಹಿಂದೆಂದೂ ಕೋಳಿಗಳನ್ನು ಬಿಡದಿರುವ ಹೊಸ ಬಯಲಿಗೆ ಬಿಡಬೇಕು. ವರ್ಷ ಎರಡು ವರ್ಷಗಳಿಗೊಮ್ಮೆ ಬಯಲಿಗೆ ವಿಶ್ರಾಂತಿ ಕೊಡಬೇಕು. ವಯಸ್ಕ ಕೋಳಿಗಳನ್ನು ಬಿಟ್ಟಿದ್ದು ಮುಂದೆ ಮರಿಗಳಿಗೆ ಉಪಯೋಗಿಸುವಂತಿದ್ದರೆ ಆ ಬಯಲನ್ನು ಉತ್ತು ಸುಣ್ಣಹಾಕಿ ಮತ್ತು ಸಾಧ್ಯವಾದರೆ ಬೇಸಾಯ ಮಾಡಬೇಕು.

ಭೇಟಿಗಾರರು: ಸಾಧ್ಯವಾದರೆ ರಕ್ಷಕಮನೆ ಮತ್ತು ಸಾಕುತಾಣಗಳಿಂದ ಭೇಟಿಕಾರರನ್ನು ದೂರವಾಗಿಡಬೇಕು. ಭೇಟಿಕಾರರ ಬಟ್ಟೆ, ಕೈ ಮತ್ತು ಕಾಲುಗಳಿಂದ ರೋಗಕಾರಕ ಕ್ರಿಮಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಡುವ ಸಾಧ್ಯತೆ ಇದೆ. ರಕ್ಷಕಮನೆ ಮತ್ತು ಸಾಕುತಾಣಗಳೊಳಗೆ ಹೋಗುವ ಮೊದಲು ಸಿಬ್ಬಂದಿವರ್ಗ ಬಾಗಿಲಲ್ಲಿ ಇಟ್ಟಿರುವ ಕ್ರಿಮಿನಾಶಕ ದ್ರಾವಣದಲ್ಲಿ ಪಾದರಕ್ಷೆ ಹಾಗೂ ಕಾಲುಗಳನ್ನು ಅದ್ದಬೇಕು. ಹೊರಗಿನಿಂದ ಸೋಂಕು ಬರುವ ಸಾಧ್ಯತೆಯನ್ನು ತಪ್ಪಿಸಲು ಕೂಲಿಗಾರರು ಸೇರಿದಂತೆ ಕೇಂದ್ರದ ಎಲ್ಲ ಕೆಲಸಗಾರರಿಗೂ ವಸತಿ ಒದಗಿಸುವುದು ಒಳ್ಳೆಯದು.

ಭಕ್ಷಕಗಳು: ಸರಿಯಾದ ವಸತಿ ಮತ್ತು ಮೇವುಗಾವಲುಗಳ ಮೇಲ್ಭಾಗವನ್ನು ತಂತಿಬಲೆಯಿಂದ ಮುಚ್ಚುವುದರಿಂದ ಮರಿಗಳನ್ನು ಅವುಗಳ ಸ್ವಾಭಾವಿಕ ಶತ್ರುಗಳಾದ ಕಾಗೆ, ಹದ್ದು, ಗಿಡುಗ, ಬೆಕ್ಕು, ನರಿ, ಇಲಿ, ಹಾವು, ಮುಂಗುಸಿ ಮೊದಲಾದವುಗಳಿಂದ ರಕ್ಷಿಸಬಹುದು.

ಗುಂಪು

ಲಿಂಗಗಳನ್ನು ಪ್ರತ್ಯೇಕಿಸುವುದು: ಲಿಂಗಗಳನ್ನು ಗುರುತಿಸುವುದು ಸಾಧ್ಯವಾದ ಕೂಡಲೆ ಹೇಂಟೆ ಮತ್ತು ಹುಂಜಗಳನ್ನು ಪ್ರತ್ಯೇಕಿಸಬೇಕು.

ಮರಿಗಳನ್ನು ಬೇರ್ಪಡಿಸುವುದು: ಎಳೆಮರಿಗಳನ್ನು ವಯಸ್ಕ ಕೋಳಿಗಳೊಂದಿಗೆ ಸೇರಿಸಬಾರದು. ವಯಸ್ಕ ಕೋಳಿಗಳು ಯಾವ ಬಾಹ್ಯ ಚಿಹ್ನೆಯನ್ನೂ ತೋರಿಸದೆ ರೋಗಕಾರಕ ಕ್ರಿಮಿಗಳನ್ನು ಹೊಂದಿರಬಹುದು. ಆದುದರಿಂದ ಇವುಗಳನ್ನು ಎಳೆಮರಿಗಳೊಂದಿಗೆ ಒಂದುಗೂಡಿಸಿದರೆ ಹಲವು ರೋಗಗಳು ಹರಡಬಹುದು.

ಗುಂಪಿನ ಗಾತ್ರ: ಬಹಳ ಹೆಚ್ಚಿಗೆ ಮರಿಗಳಿಂದ ಪ್ರಾರಂಭಿಸಬಾರದು. ತೃಪ್ತಿದಾಯಕವಾಗಿ ಮಾಡಬಹುದಾದ ಕೆಲಸಕ್ಕೆ ಮಿತಿ ಇದೆ. ಮರಿಗಳಿಗೆ ಹೆಚ್ಚಿನ ಗಮನ

ಅಗತ್ಯ. ಉದಾಸೀನ ಮಾಡಿದ ದೊಡ್ಡ ಗುಂಪಿಗಿಂತ ಸರಿಯಾದ ಗಮನ ಪಡೆದ ಸಣ್ಣಗುಂಪು ಒಳ್ಳೆಯ ಪ್ರತಿಫಲ ಕೊಡುತ್ತದೆ. ಆಳುಗಳಿಗೆ ವಹಿಸಿಕೊಟ್ಟ ಗುಂಪಿಗಿಂತ ಮಾಲೀಕನ ಉಸ್ತುವಾರಿಯಲ್ಲಿ ಬೆಳೆದ ಗುಂಪು ಹೆಚ್ಚಿನ ಲಾಭಕೊಡುತ್ತದೆ.

ಮರಿಹೇಂಟೆ ಮತ್ತು ಮರಿಹುಂಜಗಳ ನಿರ್ವಹಣೆ

ಮೇಲೆ ಹೇಳಿದ ನಿರ್ವಹಣಾ ಪದ್ಧತಿಗಳೆಲ್ಲವೂ ಮರಿಹೇಂಟೆ ಮತ್ತು ಮರಿ ಹುಂಜಗಳಿಗೂ ಅನ್ವಯಿಸುತ್ತವೆ. ಅಲ್ಲದೆ ಮರಿಹೇಂಟೆ, ಮರಿಹುಂಜಗಳನ್ನು ಸಾಕು ವಾಗ ಗಮನಿಸಬೇಕಾದ ಕೆಲವು ವಿಶೇಷ ಅಂಶಗಳಿವೆ. ಅವುಗಳನ್ನು ಕೆಳಗೆ ಕೊಡಲಾಗಿದೆ:

1. ಮರಿಹೇಂಟೆಗಳಿಗೆ ಒಳ್ಳೆಯ ಅವಕಾಶ ಕೊಡಬೇಕು:

(ಅ) ಗುರುತಿಸುವುದು ಸಾಧ್ಯವಾದ ಕೂಡಲೆ ಮರಿಹುಂಜಗಳನ್ನು ಬೇರ್ಪಡಿಸ ಬೇಕು.

(ಆ) ಮರಿಹೇಂಟೆಗಳಿಗೆ ಬೇಗ ವಿಶ್ರಾಂತಿಗೆ ಹೋಗುವಂತೆ ತರಪೇತಿಕೊಡಬೇಕು. ಲೆಗ್‌ಹಾರ್ನ್‌ಗಳಿಗೆ 4ರಿಂದ 5 ವಾರಗಳಲ್ಲಿ, ದೊಡ್ಡತಳಿಗಳಲ್ಲಿ 5ರಿಂದ 6 ವಾರಗಳಲ್ಲಿ — ಅವುಗಳ ಬೆಳವಣಿಗೆಗೆ ತಕ್ಕಂತೆ ವಿಶ್ರಾಂತಿ ಸ್ಥಳವನ್ನು ಹೆಚ್ಚಿಸಬೇಕು.

(ಇ) ಬಯಲಿನಲ್ಲಿ ಬೆಳೆದಿರುವ ಮರಗಳ ಮೇಲೆ ವಿಶ್ರಾಂತಿಗೆ ಕೂರದಂತೆ ನೋಡಿಕೊಳ್ಳಬೇಕು.

2. ಸ್ವಜಾತಿ ಭಕ್ಷಣೆ ತಪ್ಪಿಸಬೇಕು:

(ಅ) ಮನೆಗಳಲ್ಲಿ ಮತ್ತು ಸಾಕುತಾಣಗಳಲ್ಲಿ ಹಾಗೂ ಮೇಯುವಾಗ ಕೋಳಿ ಗಳು ಒಂದೇಕಡೆ ಗುಂಪುಗೂಡುವುದನ್ನು ತಪ್ಪಿಸಬೇಕು.

(ಆ) ಬೆಳೆಯುತ್ತಿರುವ ಮರಿಹೇಂಟೆಗಳು ಬೇಗ ಹೊರಗೆ ಹೋಗಲು ಬಿಡಬೇಕು.

(ಇ) ಎಲ್ಲ ಕಾಲದಲ್ಲೂ ಹಸುರು ಮೇವು ದೊರೆಯುವಂತೆ ಮಾಡಿ, ಒರಟಾದ ಹಸುರು ಮೇವನ್ನು ಕೊಡಬಾರದು ಮತ್ತು ಹಸುರು ಮೇವನ್ನು ಮುಚ್ಚಳವಿರುವ ಮೇವಿನ ತೊಟ್ಟಿಗಳಲ್ಲಿಡಬೇಕು.

(ಈ) ಮರಿಹೇಂಟೆಗಳು ಬೆಳೆದಂತೆ ಸ್ಥಳಾವಕಾಶ ಮತ್ತು ಸಲಕರಣೆಗಳನ್ನು ಹೆಚ್ಚಿಸಬೇಕು. ಎಂಟುವಾರದ ಮರಿಹೇಂಟೆ, ದಿನದ ಮರಿಯ ಹನ್ನೆರಡರಷ್ಟು ದೊಡ್ಡದು.

3. ಮರಿಹೇಂಟೆಗಳನ್ನು ಚೆನ್ನಾಗಿ ಮೇಯಿಸಬೇಕು:

(ಅ) ನೂರು ಮರಿಹೇಂಟೆಗಳಿಗೆ ಪುಡಿ ಆಹಾರದ ತೊಟ್ಟಿಗಳಲ್ಲಿ ಕನಿಷ್ಠ 16 ಅಡಿ ಗಳಷ್ಟು ತಿನ್ನುವ ಜಾಗ ಒದಗಿಸಬೇಕು.

(ಅ) ಯಾವಾಗಲೂ ಮೇವಿನ ತೊಟ್ಟಿಗಳಲ್ಲಿ ತಾಜಾ ಆಹಾರ ದೊರೆಯುವಂತೆ ನೋಡಿಕೊಳ್ಳಬೇಕು.

(ಇ) ಬೆಳೆಯುತ್ತಿರುವ ಮರಿಹೇಂಟೆಗಳಿಗೆ ಅವು ತಿನ್ನುವಷ್ಟೂ ಹಸುರು ಮೇವು ಒದಗಿಸಬೇಕು. ಬಲಿಯುವ ಕಾಲ ಸಮೀಪಿಸಿದಂತೆ ಬೆಳವಣಿಗೆಯ ವೇಗ ಹಾಗೂ ಸಾರಜನಕದ ಆವಶ್ಯಕತೆ ಕುಗ್ಗುತ್ತದೆ. ಆದುದರಿಂದ ಕಾಳು ಮತ್ತು ಪುಡಿ ಆಹಾರಗಳ ಪರಸ್ಪರ ಪ್ರಮಾಣ ಹೇಂಟೆ ಮೊಟ್ಟೆ ಇಡಲು ಪ್ರಾರಂಭಿಸುವ ಕಾಲಕ್ಕೆ 1 : 1 ಆಗುವಂತೆ ಕ್ರಮೇಣ ಹೆಚ್ಚಿಸಬೇಕು. ಇದು ಮೇಯಿಸುವ ವೆಚ್ಚವನ್ನು ಕಡಮೆ ಮಾಡುವುದಲ್ಲದೆ ಉತ್ತಮ ಹೇಂಟೆಗಳನ್ನು ತಯಾರುಮಾಡುತ್ತದೆ.

4. ಮರಿಹೇಂಟೆಗಳನ್ನು ಮೊಟ್ಟೆ ಇಡುವ ಮನೆಗೆ ಬದಲಾಯಿಸಬೇಕು:

(ಅ) ಮರಿಹೇಂಟೆಗಳು ಮೊಟ್ಟೆ ಇಡಲು ಪ್ರಾರಂಭಿಸುವ ಮೊದಲು ಅವು ಗಳನ್ನು ಮನೆಯೊಳಕ್ಕೆ ಬಿಡಬೇಕು. ಅವುಗಳನ್ನು ಮೊಟ್ಟೆ ಇಡುವ ಮನೆಯೊಳಕ್ಕೆ ಬಿಡುವ ಮೊದಲು ಅನಪೇಕ್ಷಣೀಯ ಹಾಗೂ ಕೆಳಮಟ್ಟದವನ್ನು ಬೇರ್ಪಡಿಸಬೇಕು.

(ಆ) ಮರಿಹೇಂಟೆಗಳನ್ನು ಮನೆಯಲ್ಲಾಗಲಿ, ವಿಶ್ರಾಂತಿ ಸ್ಥಳದಲ್ಲಾಗಲಿ ಗುಂಪು ಗೂಡಿಸಬಾರದು. ಪ್ರತಿ ಮರಿಹೇಂಟೆಗೂ ಒಂದು ಗಜ ಮೈದಾನದ ಜೊತೆಗೆ ಕನಿಷ್ಠ ಪಕ್ಷ 4 ಚದರ ಅಡಿ ನೆಲ ಜಾಗಬೇಕು.

ಹುಂಜಗಳ ನಿರ್ವಹಣೆ

ಮರಿಹೇಂಟೆಗಳನ್ನು ಸಾಕಲು ಅನುಸರಿಸುವ ನಿರ್ವಹಣಾ ತತ್ವ ಹಾಗೂ ಅಭ್ಯಾಸಗಳು ಹುಂಜಗಳಿಗೂ ಅನ್ವಯಿಸುತ್ತವೆ. ಲೈಂಗಿಕವಾಗಿ ಮರಿಹುಂಜಗಳು ಮರಿಹೇಂಟೆಗಳಿಗಿಂತ ಬೇಗ ಬೆಳವಣಿಗೆ ಹೊಂದುತ್ತವೆ; ಬೇರ್ಪಡಿಸದಿದ್ದರೆ ಮರಿ ಹೇಂಟೆಗಳ ಬೆಳವಣಿಗೆಗೆ ಅಡ್ಡಿಯಾಗುವಷ್ಟು ತೊಂದರೆ ಕೊಡುತ್ತವೆ.

ತಳಿಎಬ್ಬಿಸುವ ಹುಂಜಗಳ ಜೋಪಾಸನೆ: ಉತ್ತಮ ಪೀಳಿಗೆಯುಳ್ಳ ಮರಿಹುಂಜ ಗಳು ಹಾಗೂ ಗಟ್ಟಿಯಾದ ಆರೋಗ್ಯವಾಗಿರುವ ಮತ್ತು ಯಾವುದೇ ರೀತಿಯ ನ್ಯೂನತೆ ಇಲ್ಲದಿರುವ ಮರಿಹುಂಜಗಳನ್ನು ಬೇರ್ಪಡಿಸಿ ತಳಿಎಬ್ಬಿಸುವ ಕಾರ್ಯಕ್ಕಾಗಿ ಮರಿಹೇಂಟೆಗಳನ್ನು ಸಾಕಿದಂತೆಯೇ ಸಾಕಬೇಕು.

ದಿನದ ಮರಿಗಳ ಲಿಂಗ ನಿರ್ಣಯ: ಕೋಳಿಸಾಕಾಣಿಕೆ ಬಹಳ ಅಭಿವೃದ್ಧಿ ಹೊಂದಿ ರುವ ಹೊರದೇಶಗಳಲ್ಲಿ ಮಲಕೂಪದಲ್ಲಿರುವ ಒಂದು ಸೂಕ್ಷ್ಮರಚನೆಯ ಪರೀಕ್ಷೆ ಯಿಂದ ಗಂಡುಹೆಣ್ಣುಗಳನ್ನು ಗುರುತಿಸಬಲ್ಲ ತಜ್ಞರ ಸಹಾಯದಿಂದ, ದಿನದ ಮರಿ ಗಳ ಲಿಂಗ ನಿರ್ಣಯ ಮಾಡಲಾಗುತ್ತದೆ. ಗಂಡು ಮರಿಗಳಲ್ಲಿ ಹೆಣ್ಣುಮರಿಗಳಲ್ಲಿಲ್ಲ

ದಿರುವ ಒಂದು ಅಂಕುರಾಂಗವಿರುತ್ತದೆ; ಆದರೆ ಬಹಳ ಸಂದರ್ಭಗಳಲ್ಲಿ ಈ ವ್ಯತ್ಯಾಸ ಎಷ್ಟು ಸೂಕ್ಷ್ಮವಾಗಿರುತ್ತದೆಂದರೆ, ಅನುಭವಿತಜ್ಞ ಮಾತ್ರ ಆ ವ್ಯತ್ಯಾಸವನ್ನು ಗುರುತಿಸಿ ಲಿಂಗ ನಿರ್ಧರಿಸಬಲ್ಲ. ಇತ್ತೀಚಿಗೆ ದಿನದ ಮರಿಗಳಲ್ಲಿ ಲಿಂಗ ನಿರ್ಣಯಿಸ ಬಹುದಾದ ಯಂತ್ರಗಳನ್ನು ತಯಾರಿಸಲಾಗಿದೆ. ದಿನದ ಮರಿಗಳ ಲಿಂಗ ನಿರ್ಣಯ ವನ್ನು 'ಲಿಂಗಕ್ಕಂಟಿದ' ಅಥವಾ ನಿರ್ದಿಷ್ಟ ತಳಿಯ ಕೋಳಿಗಳನ್ನು ಒಂದುಗೂಡಿಸುವುದ ರಿಂದಲೂ ಮಾಡಬಹುದು. ಇದನ್ನು ತಳಿಎಬ್ಬಿಸುವಿಕೆ ಅಧ್ಯಾಯದಲ್ಲಿ ಆಗಲೇ ಚರ್ಚಿಸಲಾಗಿದೆ.

ದೇಶಿ ಗುಂಪಿನ ಉತ್ತಮೀಕರಣ: ಹೆಚ್ಚಾದ ಹುಂಜಗಳೆಲ್ಲವನ್ನೂ ಆಹಾರೋದ್ದೇಶ ಕ್ಕಾಗಿ ಉಪಯೋಗಿಸುವುದಾದರೆ, ಅತ್ಯುತ್ತಮವಾದ ತಳಿಎಬ್ಬಿಸುವ ಪದಾರ್ಥದ ನಷ್ಟವಾದಂತಾಗುತ್ತದೆ. ದೇಶದಲ್ಲಿ ಕೋಳಿಸಾಕಾಣಿಕೆ ಪೂರ್ಣ ಅಭಿವೃದ್ಧಿ ಹೊಂದಿದಾಗ ಇದು ಅವಶ್ಯಕವಾಗಬಹುದು. ಆದರೆ ಈಗ ಅವುಗಳನ್ನು ಸ್ಥಳೀಯ ತಳಿ (ದೇಶಿ)ಗಳ ಅಭಿವೃದ್ಧಿಗೆ ಉಪಯೋಗಿಸುವುದರಿಂದ ಹೆಚ್ಚಿನ ಕಾರ್ಯಸಾಧನೆಯಾಗುತ್ತದೆ. ದೇಶಿ ಹುಂಜಗಳನ್ನು ತೆಗೆಯುವುದರ ಜೊತೆಗೆ ಎಲ್ಲ ಕಡೆಗೂ ಇಂತಹ ಉತ್ತಮ ಹುಂಜ ಗಳನ್ನು ಹಂಚಿದ್ದೇ ಆದರೆ ದೇಶಿ ಕೋಳಿಗಳ ಮೊಟ್ಟೆ ಉತ್ಪಾದನೆಯಲ್ಲಿ ಗಣನೀಯ ಹೆಚ್ಚಳ ಕಂಡುಬರುತ್ತದೆ. ಈ ದಿಸೆಯಲ್ಲಿ ಸಕ್ರಮವಾಗಿ ಕೆಲಸಮಾಡುವ ಯಾವುದೇ ಯೋಜನೆಯಾಗಲಿ ಬಹಳ ಪ್ರಯೋಜನಕಾರಿ. ಸಾಮಾನ್ಯ ರೈತನ ಅಜ್ಞಾನ ಮತ್ತು ಬಡತನಗಳಿಂದ ಅವನು ಇಂತಹ ಹುಂಜಗಳನ್ನು ಕೊಂಡು ಅವುಗಳ ಉಪಯೋಗ ಪಡೆಯಲಾರದೆ ಹೋಗುವ ಸಾಧ್ಯತೆ ಇದೆ. ಈ ಕಾರಣಕ್ಕಾಗಿ ಅವುಗಳನ್ನು ಪೂರ್ಣ ಪುಕ್ಕಟೆಯಾಗಿ ಅಲ್ಲದಿದ್ದರೂ ಅತ್ಯಂತ ಕಡಮೆ ಬೆಲೆಗೆ ಕೊಡಬೇಕು. ತಳಿ ಅಭಿವೃದ್ಧಿ ಗಾಗಿ ಅವುಗಳನ್ನು ಮಾರುವ ಬೆಲೆ ಮತ್ತು ಅವುಗಳ ಉತ್ಪಾದನಾ ವೆಚ್ಚದಲ್ಲಿನ ವ್ಯತ್ಯಾಸವನ್ನು ಸರ್ಕಾರ ಸಹಾಯಧನವಾಗಿ ಕೊಡಬೇಕು.

ಮರಿಹುಂಜಗಳ ವಿನಿಮಯ: ಉತ್ತಮ ಹುಂಜಗಳನ್ನು ಉಚಿತವಾಗಿ ಕೊಡದೆ ಹೋದರೆ ಸಾಮಾನ್ಯವಾಗಿ ರೈತರು ಅವುಗಳನ್ನು ಹೊಂದಲು ನಿರಾಕರಿಸುವ ಸಾಧ್ಯತೆ ಇದೆ. ಆದರೆ ಹುಂಜಕ್ಕೆ ಹುಂಜ ಅಥವಾ ತೂಕಕ್ಕೆ ತೂಕದ ಆಧಾರದ ಮೇಲೆ ಸ್ಥಳೀಯ ಹುಂಜಗಳನ್ನು ಕೊಟ್ಟು ಉತ್ತಮ ಹುಂಜಗಳನ್ನು ಪಡೆಯಲು ಯಾವುದೇ ರೀತಿಯ ಶಂಕೆ ಇರಲಾರದು. ಈ ರೀತಿಯ ವ್ಯವಸ್ಥೆಗೆ ಪ್ರೋತ್ಸಾಹ ಕೊಡಬೇಕು. ಈ ರೀತಿ ವಿನಿಮಯದಲ್ಲಿ ಪಡೆದ ಸ್ಥಳೀಯ ಹುಂಜಗಳನ್ನು ಸಾಕಾಣಿಕೆ ಮತ್ತು ಸಾಗಾಣಿಕೆಗೆ ಏನನ್ನೂ ವೆಚ್ಚಮಾಡದೆ, ಸ್ಥಳೀಯವಾಗಿಯೇ ಆಹಾರೋದ್ದೇಶಕ್ಕಾಗಿ ಹರಾಜಿನ ಮೂಲಕ ವಿಲೇವಾರಿ ಮಾಡಬಹುದು.

ಯಾವುದೇ ರೀತಿಯ ಉತ್ತಮೀಕರಣ ಕಾರ್ಯ ಸಫಲವಾಗಲು ಎಲ್ಲ ಸ್ಥಳೀಯ ಹುಂಜಗಳನ್ನು ತೆಗೆಯುವುದು, ಹಳ್ಳಿಯಲ್ಲಿನ ಮೊಟ್ಟೆ ಉತ್ಪಾದಕಗಳ ಸಂಖ್ಯೆಗನುಗುಣ ವಾಗಿ ಸಾಕಷ್ಟು ಸಂಖ್ಯೆಯಲ್ಲಿ ಉತ್ತಮ ಹುಂಜಗಳನ್ನು ಸರಬರಾಜುಮಾಡುವುದು

ಮತ್ತು ಕೋಳಿಗಳ ಮೇವನ್ನು ಉತ್ತಮಗೊಳಿಸುವುದು ಇವುಗಳ ಪ್ರಾಮುಖ್ಯತೆಯ ಬಗ್ಗೆ ಹೆಚ್ಚಿಗೆ ಹೇಳುವುದು ಅನವಶ್ಯಕ. ಸಾಧ್ಯವಾದಮಟ್ಟಿಗೂ ಪ್ರತಿ ಪ್ರದೇಶಕ್ಕೂ ಅಲ್ಲಿಗೆ ಸೂಕ್ತವಾದ ಯಾವುದಾದರೊಂದು ತಳಿಯ ಉತ್ತಮ ಮರಿಹುಂಜಗಳನ್ನು ಹಂಚಬೇಕು.

ಈ ವ್ಯವಸ್ಥೆ ಕೆಲವು ರಾಜ್ಯಗಳಲ್ಲಿ ಉತ್ತಮವಾಗಿ ಕೆಲಸಮಾಡುತ್ತಿದೆ. ಆ ರಾಜ್ಯಗಳಲ್ಲಿ ಈ ಪದ್ಧತಿ ಹಳ್ಳಿಯ ಕೋಳಿಗಳ ಉತ್ತಮೀಕರಣಕ್ಕೆ ಸಾಕಷ್ಟು ನೆರವು ನೀಡಿದೆ. ಎಲ್ಲ ರಾಜ್ಯಗಳಲ್ಲಿ ಈ ದಿಸೆಯಲ್ಲಿ ತೀವ್ರ ಕಾರ್ಯ ಕೋಳಿ ಉತ್ಪಾದನೆಯನ್ನು ಹೆಚ್ಚಿಸಲು ಮಾರ್ಗಮಾಡಿಕೊಡುತ್ತದೆ.

ಬೀಜತೆಗೆದು ಬಲಿಸಿದ ಹುಂಜಗಳು: ತಳಿ ಎಬ್ಬಿಸಲಾಗಲಿ ಅಥವಾ ಉತ್ತಮೀಕರಣಕ್ಕಾಗಲಿ ಬೇಕಿಲ್ಲದ, ಹೆಚ್ಚಾದ ಮರಿಹುಂಜಗಳನ್ನು ವಿಲೇವಾರಿ ಮಾಡುವ ಮತ್ತೊಂದು ವಿಧಾನವೆಂದರೆ, ಅವುಗಳನ್ನು ಮೊದಲು ಬೀಜತೆಗೆದು ಬಲಿಸಿ ನಂತರ ಆಹಾರಕ್ಕಾಗಿ ಮಾರುವುದು. ಬೀಜತೆಗೆದ ಹುಂಜ ಮತ್ತು ಹುಂಜಗಳಲ್ಲಿ ಎತ್ತು ಮತ್ತು ಗೂಳಿಗಳಲ್ಲಿರುವ ಸಂಬಂಧವೇ ಇರುತ್ತದೆ. ಬೀಜತೆಗೆದ ಮರಿಹುಂಜ ತನ್ನ ಗಂಡು ನೋಟವನ್ನು ಕಳೆದುಕೊಂಡು ಮಂಕಾಗುತ್ತದೆ ಮತ್ತು ಬಹಳ ವೇಗವಾಗಿ ಕೊಬ್ಬುತ್ತದೆ. ಜುಟ್ಟು ಹಾಗೂ ಜೋಲುಮಾಂಸಲಗಳ ಬೆಳವಣಿಗೆ ಸ್ಥಗಿತವಾಗುತ್ತದೆ ಮತ್ತು ಬೀಜತೆಗೆದ ಮರಿಹುಂಜ, ಹುಂಜಗಳಂತೆ ಕೂಗುವುದಿಲ್ಲ. ಪೂರ್ಣ ಬೆಳೆದಾಗಲೂ ಇದರ ಮಾಂಸ ರುಚಿಯಾಗಿ ರಸವತ್ತಾಗಿರುತ್ತದೆ. ಬೀಜತೆಗೆಯುವಿಕೆಯ ಶಸ್ತ್ರಕ್ರಿಯೆಯನ್ನು 'ಮಾರಾಟ'ದ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಹುಂಜಗಳಿಗಿಂತ ಬೀಜತೆಗೆದು ಬಲಿಸಿದ ಹುಂಜಗಳನ್ನು ಆಹಾರೋದ್ದೇಶಕ್ಕೆ ಹೆಚ್ಚು ಜನ ಇಷ್ಟಪಡುತ್ತಾರೆ ಮತ್ತು ಅವಕ್ಕೆ ಹೆಚ್ಚಿನ ಬೆಲೆ ಬರುತ್ತದೆ. ಆದಾಗ್ಯೂ ಬೀಜ ತೆಗೆದು ಬಲಿಸಿದ ಹುಂಜದ ಮಾಂಸದ ಉತ್ತಮತೆಯ ಬಗ್ಗೆ ಸಾಕಷ್ಟು ಅರಿವು ಮೂಡಿಲ್ಲ.

ಮೊಟ್ಟೆ ಉತ್ಪಾದಕಗಳ ನಿರ್ವಹಣೆ

ಮೇಲೆ ವಿವಿಧ ತಲೆಬರಹಗಳೊಂದಿಗೆ ಚರ್ಚಿಸಲಾದ ಸಾಮಾನ್ಯ ನಿರ್ವಹಣಾ ಅಭ್ಯಾಸಗಳು, ಮೊಟ್ಟೆ ಉತ್ಪಾದಕಗಳ ನಿರ್ವಹಣೆಗೂ ಅನ್ವಯಿಸುತ್ತಿವೆ. ಆದಾಗ್ಯೂ ಕೆಳಗಿನ ಅಧಿಕ ಸೂಚನೆಗಳು ಉಪಯೋಗಕಾರಿ.

ಮೊಟ್ಟೆ ಇಡುವ ಮನೆಗಳು: ಮರಿಹೇಂಟೆಗಳು ಮೊಟ್ಟೆ ಇಡಲು ಪ್ರಾರಂಭ ಮಾಡುವ ಸ್ವಲ್ಪ ಮೊದಲು ಅವುಗಳನ್ನು ಮೊಟ್ಟೆ ಇಡುವ ಮನೆಗಳಿಗೆ ವರ್ಗಾಯಿಸಬೇಕು ಮತ್ತು ಮೊಟ್ಟೆ ಇಡುವ ಪುಡಿ ಆಹಾರವನ್ನೊದಗಿಸಬೇಕು. ಸಾಧ್ಯವಾದ

ಮಟ್ಟಿಗೂ ಮೊಟ್ಟೆ ಇಡುವ ಗುಂಪುಗಳ ಗಾತ್ರ ಸಮನಾಗಿರುವುದು ಉತ್ತಮ ಮತ್ತು ಪ್ರತಿಯೊಂದು ಮೊಟ್ಟೆ ಇಡುವ ಗುಂಪಿನಲ್ಲೂ ಒಂದೇ ವಯಸ್ಸಿನ ಹೇಂಟೆಗಳಿರುವುದು ಅಪೇಕ್ಷಣೀಯ. ಮರಿಹೇಂಟೆಗಳನ್ನು ವಯಸ್ಸಾದ ಹೇಂಟೆಗಳೊಂದಿಗೆ ಬೆರೆಸಬಾರದು, ಏಕೆಂದರೆ ಇದರಿಂದ ಹೊಸ ಹೇಂಟೆಗಳಿಗೆ ಜಂತು, ಹೇನು, ಉಣ್ಣೆ ಮೊದಲಾದವುಗಳಿಂದ ಅಪಾಯ ಉಂಟಾಗಬಹುದು.

ಮೊಟ್ಟೆ ಇಡುವ ಗುಂಪಿನ ಗಾತ್ರ: ನಿರ್ವಹಣಾ ಉದ್ದೇಶಗಳಿಗಾಗಿ ದೊಡ್ಡ ಗುಂಪುಗಳಿಗಿಂತ ಸಣ್ಣ ಗುಂಪುಗಳು ಅಪೇಕ್ಷಣೀಯ. ತಳಿಎಬ್ಬಿಸುವ ಗೂಡುಗಳಿಗೆ ಅದರಲ್ಲೂ ಪೀಳಿಗೆ ತಳಿಎಬ್ಬಿಸುವಿಕೆಯಲ್ಲಿ ಒಂದು ಗೂಡಿನಲ್ಲಿ ಹತ್ತಕ್ಕಿಂತ ಹೆಚ್ಚು ಕೋಳಿಗಳನ್ನಿಡುವುದು ಸೂಕ್ತವಲ್ಲ. ಗುಂಪು ಜೊತೆಗೂಡಿಸುವಿಕೆಯಲ್ಲಿ ಒಂದು ಗೂಡಿನಲ್ಲಿ 50 ಹೇಂಟೆಯವರೆಗೆ ಇಡಬಹುದು. ಬರಿ ತಿನ್ನುವ ಮೊಟ್ಟೆಗಳ ಉತ್ಪಾದನೆಯಾದರೆ ದೊಡ್ಡಮನೆಯಲ್ಲಿ 200–250 ಹೇಂಟೆಗಳನ್ನಿಡಬಹುದು.

ಮೊಟ್ಟೆ ಉತ್ಪಾದನೆ: ಮೊಟ್ಟೆ ಇಡುವ ಹೇಂಟೆಗಳ ಮುಖ್ಯ ಕೆಲಸ ಮೊಟ್ಟೆ ಉತ್ಪಾದಿಸುವುದು. ಸಾಮಾನ್ಯವಾಗಿ ಕಡಮೆ ಆಹಾರ ತಿನ್ನುವುದರಿಂದ ಮೊಟ್ಟೆ ಉತ್ಪಾದನೆ ಕುಗ್ಗುತ್ತದೆ. ಅಸಹಕಾರಿ ವಾತಾವರಣ ಹಾಗೂ ನಿರ್ವಹಣೆ ಪೂರಕ ಅಂಶಗಳು. ಮೊಟ್ಟೆ ಉತ್ಪಾದನೆ ಕುಗ್ಗುವ ಮುಖ್ಯ ಕಾರಣಗಳು ಮತ್ತು ಉತ್ಪಾದನೆಯನ್ನು ಉತ್ತಮಗೊಳಿಸುವ ನಿರ್ವಹಣಾ ಪದ್ಧತಿಗಳನ್ನು ಕೆಳಗೆ ವಿವರಿಸಲಾಗಿದೆ:

ಹವಾಮಾನದಲ್ಲಿ ತೀವ್ರತರ ಬದಲಾವಣೆಗಳು: ಬೇಸಿಗೆ ತಿಂಗಳುಗಳಲ್ಲಿ ಅತಿ ಹೆಚ್ಚಿನ ಶಾಖ, ಚಳಿಗಾಲದಲ್ಲಿ ಬೆಟ್ಟ ಪ್ರದೇಶಗಳ ಅತಿ ಥಂಡಿಗಾಳಿ ಮತ್ತು ತೀರ ಪ್ರದೇಶಗಳ ಮಳೆಗಾಲದ ಜಡಿಮಳೆಗಳಂತಹ ಕಠಿಣ ಹವಾಮಾನಗಳಲ್ಲಿ ಸಾಮಾನ್ಯವಾಗಿ ಹೇಂಟೆಗಳು ತಮಗೆ ಅವಶ್ಯಕವಿದ್ದಷ್ಟು ಮೇವನ್ನು ತಿನ್ನುವುದು ಸಾಧ್ಯವಿಲ್ಲದಿರುವುದರಿಂದ ಮೊಟ್ಟೆ ಉತ್ಪಾದನೆ ಕುಗ್ಗುತ್ತದೆ. ಆರಾಮದಾಯಕ ವಸತಿ ಸೌಲಭ್ಯಗಳನ್ನೊದಗಿಸುವುದರಿಂದ ಇದನ್ನು ಸರಿಪಡಿಸಬಹುದು. ಇದನ್ನು ಹಿಂದೆಯೇ 'ವಸತಿ' ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಆಹಾರದಲ್ಲಿ ಬದಲಾವಣೆಗಳು: ಅಸಮತೋಲ ಮತ್ತು ರುಚಿ ಇಲ್ಲದ ಆಹಾರ ಕೊಡಬಾರದು. ಅಸಮತೋಲ ಆಹಾರ, ಹೇಂಟೆ ಅತ್ಯಂತ ಹೆಚ್ಚಿಗೆ ಮೊಟ್ಟೆ ಉತ್ಪಾದಿಸಲು ಬೇಕಾಗುವ ಎಲ್ಲ ಅವಶ್ಯಕ ಆಹಾರಾಂಶಗಳನ್ನು ಒದಗಿಸಲಾರದು ಮತ್ತು ರುಚಿ ಇಲ್ಲದ ಮೇವನ್ನು ಕೋಳಿಗಳು ಕಡಮೆ ತಿನ್ನುತ್ತವೆ. ಇವೆರಡರಿಂದಲೂ ಉತ್ಪಾದನೆ ಕುಗ್ಗುತ್ತದೆ.

ಕಡಮೆ ಸಸಾರಜನಕ ಹೊಂದಿರುವ ಆಹಾರ: ಮೊಟ್ಟೆ ಉತ್ಪನ್ನ ಕುಗ್ಗದಂತಿರಲು ಮೊಟ್ಟೆ ಉತ್ಪಾದಿಸುವ ಸಮತೋಲ ಪುಡಿ ಆಹಾರ ಇತರ ಪದಾರ್ಥ

ಗಳೊಂದಿಗೆ ಶೇಕಡಾ 15 ಭಾಗ ಸಸಾರಜನಕ ಹೊಂದಿರಬೇಕು. ಕಡಮೆ ಸಸಾರಜನಕ ವಿರುವ ಆಹಾರ ಮೊಟ್ಟೆ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮ ಮಾಡುತ್ತದೆ.

ಕಡಮೆ ಆಹಾರ: ಮೊಟ್ಟೆ ಇಡಲು ಬೇಕಾದಷ್ಟು ಆಹಾರ ದೊರೆಯದೆ ಹೋದಾಗ ಹೇಂಟೆಗಳು ತಮ್ಮ ಅತ್ಯುತ್ತಮ ಉತ್ಪಾದನೆಯನ್ನು ಕೊಡಲಾರವು ಎಂಬುದು ನಿರ್ವಿವಾದ. ಎಲ್ಲ ಕಾಲದಲ್ಲೂ ಆಹಾರ ತೊಟ್ಟಿಗಳು ತುಂಬಿರುವಂತೆ ನೋಡಿಕೊಂಡು ಮೊಟ್ಟೆ ಇಡುವ ಕೋಳಿಗಳು ತಮಗೆ ಬೇಕಾದಷ್ಟು ಆಹಾರ ತಿನ್ನು ವಂತೆ ಮಾಡುವುದು ಉತ್ತಮ ನಿರ್ವಹಣಾ ತತ್ವ. ಮೊಟ್ಟೆ ಇಡುವ ಹೇಂಟೆಗೆ ದಿನಕ್ಕೆ 4ರಿಂದ 6 ಔನ್ಸ್ ಆಹಾರ ಬೇಕಾಗುತ್ತದೆ.

ಮೇಯುವ ಜಾಗದ ಕೊರತೆ: ಮೊಟ್ಟೆ ಇಡುವ ಮನೆ ಅಥವಾ ಗೂಡು ಗಳಲ್ಲಿ ಪ್ರತಿಹೇಂಟೆಗೂ ಕನಿಷ್ಠ 3 ಅಂಗುಲದಷ್ಟು ಜಾಗವಿರುವಂತೆ ಆಹಾರ ತೊಟ್ಟಿ ಗಳನ್ನೊದಗಿಸಬೇಕು.

ಸಾಕಾಗದ ಅಥವಾ ಅನಿಶ್ಚಿತ ನೀರಿನ ಸರಬರಾಯಿ: ಮೊಟ್ಟೆಗಳು ಶೇಕಡಾ 66 ಭಾಗ ನೀರನ್ನು ಹೊಂದಿರುತ್ತವೆ. ಆದುದರಿಂದ ಅವುಗಳ ಉತ್ಪಾದನೆಗೆ ಮತ್ತು ಇತರ ಶರೀರ ಕ್ರಿಯೆಗಳಿಗೆ ಹೇಂಟೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬೇಕು.

ನ್ಯೂನ ವಾತಾಯನ: ನ್ಯೂನ ವಾತಾಯನ ಮನೆಯನ್ನು ಅಹಿತಕರವಾಗಿ ಮಾಡುತ್ತದೆ. ಆದುದರಿಂದ ಮೊಟ್ಟೆ ಇಡುವ ಮನೆಯಲ್ಲಿ ಸರಿಯಾಗಿ ವಾತಾಯನ ವಿರುವಂತೆ ಗಮನವಹಿಸಬೇಕು.

ರೋಗಗಳು ಮತ್ತು ಪರಾವಲಂಬಿಗಳು: ಸಾಂಕ್ರಾಮಿಕ ಮತ್ತು ಇತರ ರೋಗಗಳು ಹಾಗೂ ಪರಾವಲಂಬಿ (ಹೊರ ಮತ್ತು ಒಳ) ಸೋಂಕುಗಳು ಮೊಟ್ಟೆ ಉತ್ಪಾದನೆಗೆ ಅಡ್ಡಿಯುಂಟುಮಾಡುತ್ತವೆ. 'ರೋಗಗಳು ಮತ್ತು ಅವುಗಳ ಹತೋಟಿ' ಅಧ್ಯಾಯಗಳಲ್ಲಿ ಸೂಚಿಸಿರುವ ಹತೋಟಿ ಹಾಗೂ ನಿರೋಧ ಕ್ರಮಗಳನ್ನು ಅನುಸರಿಸ ಬೇಕು.

ಕೋಳಿಗಳ ಸ್ಥಳ ಬದಲಾವಣೆ: ಮರಿ ಹೇಂಟೆಗಳನ್ನು ಅವುಗಳು ಮೊಟ್ಟೆ ಇಡಲು ಪ್ರಾರಂಭಿಸಬಹುದೆಂದು ಅಂದಾಜುಮಾಡಲಾಗಿರುವ ದಿನಕ್ಕಿಂತ 3–4 ವಾರ ಮೊದಲೆ ಮೊಟ್ಟೆ ಇಡುವ ಮನೆಗೆ ಬದಲಾಯಿಸಬೇಕು. ಅವುಗಳು ಹೊಸ ಪರಿಸರಕ್ಕೆ ಹೊಂದಿಕೊಳ್ಳಲು ಇದರಿಂದ ಸಾಕಷ್ಟು ಅವಕಾಶ ದೊರೆಯುತ್ತದೆ. ಮೊಟ್ಟೆ ಉತ್ಪಾದಕ ಗಳು ತಮ್ಮ ವಾತಾವರಣದ ಬದಲಾವಣೆಗಳಿಗೆ ಬಹಳ ಸೂಕ್ಷ್ಮವಾಗಿರುತ್ತವೆ. ಅಂತಹ ಬದಲಾವಣೆಗಳು ಅವುಗಳ ಉತ್ಪಾದನಾ ಸಾಮರ್ಥ್ಯದ ಮೇಲೆ ಕೆಟ್ಟ ಪರಿಣಾಮ ಮಾಡುತ್ತವೆ. ಅವು ಒಂದು ಬಾರಿ ಯಾವುದಾದರೊಂದು ಪರಿಸರಕ್ಕೆ ಹೊಂದಿ

ಕೊಂಡು ಮೊಟ್ಟೆ ಇಡಲು ಪ್ರಾರಂಭಿಸಿದ ಮೇಲೆ ಸಾಧ್ಯವಾದ ಮಟ್ಟಿಗೂ ಅವುಗಳ ಸ್ಥಳ ಬದಲಾವಣೆ ಮಾಡಬಾರದು.

ಕೋಳಿಗಳನ್ನು ಒರಟಾಗಿ ನೋಡಿಕೊಳ್ಳುವುದು: ಕೋಳಿಗಳು ಬಹಳ ಪುಕ್ಕಲು ಸ್ವಭಾವದವು. ಅವುಗಳನ್ನು ಅಟ್ಟಿಸಿಕೊಂಡು ಹೋಗುವುದು, ಹಿಡಿಯುವುದು ಮೊದಲಾದ ಯಾವುದೇ ರೀತಿಯಾದ ಕಾರ್ಯಗಳಿಂದ ಸುಲಭವಾಗಿ ಹೆದರಿಬಿಡುತ್ತವೆ. ಯಾವುದೇ ರೀತಿಯ ಭಯದ ಫಲಿತಾಂಶವೆಂದರೆ ಆಹಾರ ತಿನ್ನುವ ಪ್ರಮಾಣ ಕುಗ್ಗಿ ಮೊಟ್ಟೆ ಉತ್ಪಾದನೆ ಇಳಿಮುಖವಾಗುವುದು. ಪರೀಕ್ಷೆ, ಬೇರ್ಪಡಿಸುವಿಕೆ ಅಥವಾ ಚಿಕಿತ್ಸೆಗೆ ಹಿಡಿಯಲೇಬೇಕಾದ ಕೋಳಿಗಳನ್ನು ರಾತ್ರಿಹೊತ್ತು ಅವು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಹಿಡಿಯಬೇಕು ಇಲ್ಲವೆ 'ಬೇರ್ಪಡಿಸುವಿಕೆ' ಅಧ್ಯಾಯಗಳಲ್ಲಿ ವಿವರಿಸಲಾದ ಹಿಡಿಯುವ ಪೆಟ್ಟಿಗೆಯ ಸಹಾಯದಿಂದ ಹಿಡಿಯಬೇಕು.

ನೋಡಿಕೊಳ್ಳುವವನ ಬದಲಾವಣೆ: ಸಾಮಾನ್ಯವಾಗಿ ಕೋಳಿಗಳು ಅದರಲ್ಲೂ ಮೊಟ್ಟೆ ಇಡುವ ಕೋಳಿಗಳು ನೋಡಿಕೊಳ್ಳುವವನ ಬದಲಾವಣೆಗೆ ಬಹಳ ಸೂಕ್ಷ್ಮ. ನೋಡಿಕೊಳ್ಳುವವನು ಹೊಸಬನಾದರೆ ಪರಕೀಯನೆಂದು ಪರಿಗಣಿಸುತ್ತವೆ. ಇದರಿಂದಾಗಿ ಆಹಾರ ತಿನ್ನುವುದರಲ್ಲಿ ಗಣನೀಯ ಇಳಿತ ಉಂಟಾಗಿ ಅದಕ್ಕೆ ಅನುರೂಪವಾಗಿ ಉತ್ಪಾದನೆ ಕುಗ್ಗುತ್ತದೆ.

ತಳಿಎಬ್ಬಿಸುವ ಗುಂಪಿನ ನಿರ್ವಹಣೆ

ಜಯಪ್ರದವಾಗಿ ತಳಿಎಬ್ಬಿಸುವ ಅಭ್ಯಾಸದಲ್ಲಿ ನಿರ್ವಹಣಾ ಅಂಶಗಳ ಪ್ರಾಮುಖ್ಯತೆಯನ್ನು ಹಿಂದಿನ ಅಧ್ಯಾಯ ಒಂದರಲ್ಲಿ ಚರ್ಚಿಸಲಾಗಿದೆ. ತಳಿಎಬ್ಬಿಸುವ ಗುಂಪಿಗೆ ವಿಶೇಷವಾಗಿ ಅನ್ವಯಿಸುವ ಕೆಲವು ನಿರ್ವಹಣಾ ಅಂಶಗಳಿವೆ. ಅವುಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

ಹುಂಜ ಮತ್ತು ಹೇಂಟೆಗಳ ಪರಸ್ಪರ ಪ್ರಮಾಣ: ಗುಂಪಿನಲ್ಲಿ ಹೇಂಟೆಗಳಿಗೆ ಸಂಬಂಧಿಸಿದಂತೆ ಅತಿಹೆಚ್ಚು ಅಥವಾ ಅತಿ ಕಡಮೆ ಹುಂಜಗಳಿಂದ ಉತ್ಪಾದನೆ ಕುಗ್ಗುತ್ತದೆ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಅತ್ಯುತ್ತಮ ಫಲಿತಾಂಶಗಳಿಗೆ ಸರಾಸರಿ ಪ್ರಮಾಣ, ಮೆಡಿಟರೇನಿಯನ್ ತಳಿಗಳಿಗೆ 15ಕ್ಕೆ 1 ಅಥವಾ ಹೇಂಟೆಗಳ ಸಂಖ್ಯೆ 25ರವರೆಗೂ ಇರಬಹುದು; ಅಮೆರಿಕನ್ ಮತ್ತು ಇಂಗ್ಲಿಷ್ ತಳಿಗಳು 10 ಅಥವಾ 15ಕ್ಕೆ ಒಂದು ಮತ್ತು ಏಷಿಯದ ತಳಿಗಳು 10ಕ್ಕೆ ಒಂದು.

ತಳಿಎಬ್ಬಿಸುವ ಹುಂಜಗಳ ಪೋಷಾಣೆ: ತಳಿಎಬ್ಬಿಸಲು ಉಪಯೋಗಿಸಿದಾಗ 'ಹುಂಜ ಅರ್ಧಗುಂಪಿಗೆ ಸಮ' ಆದುದರಿಂದ ಅದು ಹೆಚ್ಚು ಗಮನವನ್ನು ಪಡೆಯಬೇಕು. ಹುಂಜ ಸಾಕಷ್ಟು ಮೇವು ತಿನ್ನುವಂತೆ ನೋಡಿಕೊಳ್ಳುವಲ್ಲಿ ವಿಶೇಷ ಗಮನ ಅಗತ್ಯ. ಏಕೆಂದರೆ ಹಲವಾರು ಹುಂಜಗಳು ಚೈತನ್ಯಯುತವಾಗಿ ಉಳಿಯಲು

ಬೇಕಾಗುವಷ್ಟನ್ನೂ ತಿನ್ನದೆ ಪೂರ್ಣಗಮನವನ್ನು ಹೇಂಟೆಗಳಿಗೇ ಕೊಡುತ್ತಿರುತ್ತವೆ. ಹುಂಜಗಳನ್ನು ಹೇಂಟೆಗಳಿಂದ ಪ್ರತ್ಯೇಕವಾಗಿ ಮೇಯಿಸುವುದು ಒಳ್ಳೆಯದು.

ಹೇಂಟೆಗಳ ಬೆನ್ನಿಗೆ ಅಪಾಯ ತಪ್ಪಿಸಲು ಹುಂಜದ ಕಾಲಿನ ಗಡುಸು ಚಾಚು ಮತ್ತು ಪಂಜ, ತುದಿ ಮತ್ತು ಪಕ್ಕಗಳಲ್ಲಿ ಮೊಂಡಾಗಿರುವಂತೆ ನೋಡಿಕೊಳ್ಳಬೇಕು. ಪಾದಗಳನ್ನು ಪರೀಕ್ಷಿಸಿ ತೃಪ್ತಿದಾಯಕವಾಗಿ ಜೊತೆಗೂಡಲು ಅಡ್ಡಿಯಾಗುವಂತೆ ಊದಿದ ಪಾದ ಮತ್ತು ಏನಾದರೂ ಇತರ ತೊಂದರೆಗಳಿಲ್ಲವೆಂದು ಖಾತ್ರಿಮಾಡಿಕೊಳ್ಳ ಬೇಕು. ಆಗಾಗ್ಗೆ ಸೋಡಿಯಂ ಫ್ಲೋರೈಡ್ ಮತ್ತು ಇತರ ಕೀಟನಾಶಕಗಳನ್ನು ಹಚ್ಚಿ ಹುಂಜಗಳನ್ನು ಹೇನು, ನುಸಿ, ಚಿಗಟ ಮತ್ತು ಉಣ್ಣೆಗಳಿಲ್ಲದಂತೆ ನೋಡಿಕೊಳ್ಳ ಬೇಕು. ಏಕೆಂದರೆ, ಈ ಹೊರ ಪರಾವಲಂಬಿಗಳು ಹುಂಜಗಳಿಂದ ಇಡೀ ಗುಂಪಿಗೆ ವೇಗವಾಗಿ ಹರಡುವ ಸಾಧ್ಯತೆ ಇರುತ್ತದೆ.

ತಳಿಎಬ್ಬಿಸುವ ವಯಸ್ಸು: ಓಳಿಗೆ ಪರೀಕ್ಷೆಯ ಮೂಲಕ ಒಳ್ಳೆಯ ಹುಂಜವನ್ನು ಗುರುತಿಸಿದ ಮೇಲೆ, ಅದು ಒಳ್ಳೆಯ ಫಲವಂತಿಕೆಯನ್ನು ಕೊಡುತ್ತಿರುವಷ್ಟು ಕಾಲ ಉಪಯೋಗಿಸಬೇಕು ಅಥವಾ ಚಿಕ್ಕ ಹುಂಜಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಫಲವಂತಿಕೆಯ ದೃಷ್ಟಿಯಿಂದ ಹುಂಜಗಳಲ್ಲಿ ಮೊದಲಿನ ವರ್ಷ ಸಾಮಾನ್ಯವಾಗಿ ಅತ್ಯುತ್ತಮವಾದುದು. ಎರಡನೆ ವರ್ಷದ ನಂತರ ಹೆಚ್ಚಿನವು ಕೆಲಸಕ್ಕೆ ಬರುವುದಿಲ್ಲ.

ಹೇಂಟೆಗಳಲ್ಲಿ ಮರಿಯಾಗುವಿಕೆ ಮತ್ತು ಮರಿಗಳ ಗಾತ್ರದ ದೃಷ್ಟಿಯಿಂದ ವರ್ಷದ ಹೇಂಟೆಗಳು ಮರಿಹೇಂಟೆಗಳಿಗಿಂತ ಉತ್ತಮ ಎಂಬ ದೃಷ್ಟಿಯನ್ನು ಈಗಿರುವ ಸಾಕ್ಷಿಗಳು ದೃಢಪಡಿಸುತ್ತವೆ. ಅನುವಂಶಿಕವಾಗಿ ಮುಂದೆ ಹೇಂಟೆಯಾದ ಮೇಲೆ ಕೊಡುವ ಫಲಿತಾಂಶವನ್ನೇ ಮರಿಹೇಂಟೆಯೂ ಕೊಡಬೇಕು; ಆದರೆ ಮರಿಹೇಂಟೆಗಳು ಹೇಂಟೆಗಳಿಗಿಂತ ಸಣ್ಣ ಮೊಟ್ಟೆಗಳನ್ನಿಡುವುದರಿಂದ ಅದರಿಂದ ಬರುವ ಮರಿಗಳು ಸಣ್ಣವಾಗಿರುತ್ತವೆ ಹಾಗೂ ಮರಿಹೇಂಟೆಗಳು ಮೊದಲವರ್ಷದ ಚಳಿಗಾಲದಲ್ಲಿ ಹೆಚ್ಚಿನ ಮೊಟ್ಟೆ ಉತ್ಪಾದಿಸುವುದರಿಂದ ತಳಿಎಬ್ಬಿಸಲು ಮರಿಹೇಂಟೆಗಳಿಗಿಂತ ಹೇಂಟೆಗಳನ್ನು ಉಪಯೋಗಿಸುವುದು ಸೂಕ್ತ. ಹೇಂಟೆಗಳ ವಿಷಯದಲ್ಲಿನ ಅನುಕೂಲತೆ ಎಂದರೆ ಅವುಗಳ ಉತ್ಪಾದನಾ ಶಕ್ತಿ ಗೊತ್ತಿರುತ್ತದೆ. ತಳಿಎಬ್ಬಿಸಲು ಕೋಳಿಗಳನ್ನು ಆಯ್ಕೆ ಮಾಡಲು ಇದು ಬಹಳ ಮುಖ್ಯವಾದುದು.

ಮೊಟ್ಟೆಗಳ ಫಲವಂತಿಕೆ: ಜೊತೆಗೂಡಿದ 24 ಗಂಟೆಗಳಲ್ಲಿ ಹೇಂಟೆ ಫಲೀಕೃತ ಮೊಟ್ಟೆ ಇಡುವ ಸಾಧ್ಯತೆ ಇದೆ. ಆದರೆ ಮೊಟ್ಟೆಗಳನ್ನು ಮರಿಮಾಡಲು ಶೇಖರಿ ಸುವಷ್ಟು ಗುಂಪಿನಲ್ಲಿ ಫಲೀಕೃತ ಮೊಟ್ಟೆಗಳ ಸಂಖ್ಯೆ ಹೆಚ್ಚಬೇಕಾದರೆ ಇನ್ನೂ ಹೆಚ್ಚಿನ ಕಾಲಕಳೆಯಬೇಕು. ಉತ್ತಮವಾದ ಫಲವಂತಿಕೆ ಮಟ್ಟವನ್ನು ಪಡೆಯಲು ಉಪ ಯೋಗಿಸುವ ತಳಿಗಳಿಗನುಸಾರವಾಗಿ ಜೊತೆಗೂಡಿಸಿದ 7 ರಿಂದ 10 ದಿನಗಳ ನಂತರ ಮರಿಮಾಡಲು ಶೇಖರಿಸಬೇಕು.

ಜೊತೆಗೂಡಿಸುವ ವಿಧಾನಗಳು: ಫಲೀಕೃತ ಮೊಟ್ಟೆಗಳನ್ನು ಪಡೆಯಲು ಹಲವು ರೀತಿಯ ಜೊತೆಗೂಡಿಸುವ ಪದ್ಧತಿಗಳನ್ನು ಅನುಸರಿಸಬಹುದು. ಅವುಗಳೆಂದರೆ: (i) ಆವರಣ(ರೊಪ್ಪ)ದೊಳಗೆ ಜೊತೆಗೂಡಿಸುವಿಕೆ (ii) ಗುಂಪಿನಲ್ಲಿ ಜೊತೆಗೂಡಿಸುವಿಕೆ (iii) ಹುಂಜಗಳ ಗುಂಪಿನಲ್ಲಿ ಜೊತೆಗೂಡಿಸುವಿಕೆ (iv) ಪರ್ಯಾಯ ಹುಂಜಗಳು ಮತ್ತು (v) ಕೃತಕ ವೀರ್ಯಾವ್ಯಾಪನೆ ಇವುಗಳನ್ನು ತಳಿಎಬ್ಬಿಸುವಿಕೆ ಅಧ್ಯಾಯಗಳಲ್ಲಿ ಹಿಂದೆಯೇ ಚರ್ಚಿಸಲಾಗಿದೆ.

ಇತರ ನಿರ್ವಹಣಾ ಸಮಸ್ಯೆಗಳು

ಈಗಾಗಲೆ ಚರ್ಚಿಸಿರುವ ಸಮಸ್ಯೆಗಳಲ್ಲದೆ ಕೋಳಿಸಾಕಣೆದಾರ ಎದುರಿಸಬೇಕಾದ ಇತರ ಹಲವು ಸಮಸ್ಯೆಗಳಿವೆ. ಅವುಗಳಲ್ಲಿ ಅತಿಮುಖ್ಯವಾದವುಗಳೆಂದರೆ: (i) ಕಾವು ಕೂರುವ ಮನೋಭಾವವಿರುವ ಹೇಂಟೆಗಳ ನಿರ್ವಹಣೆ (ii) ಮೊಟ್ಟೆ ಉತ್ಪಾದನೆಯನ್ನು ವಿವಿಧ ಕಾಲಗಳಿಗೆ ಹಂಚುವುದು (iii) ಮೊಟ್ಟೆ ಇಡುವ ಪಂಜರ ಅಥವಾ ಬ್ಯಾಟರಿಗಳು ಮತ್ತು (iv) ಕೋಳಿಗೊಬ್ಬರದ ವಿಲೇವಾರಿ.

ಕಾವುಕೂರುವ ಮನೋಭಾವದ ಹೇಂಟೆಗಳ ನಿರ್ವಹಣೆ: ಹೇಂಟೆಗಳು ಕಾವು ಕೂರುವ ಮನೋಭಾವ ತೋರಿಸಿದ ಕೂಡಲೆ ಅವುಗಳನ್ನು ಗುಂಪಿನಿಂದ ಪ್ರತ್ಯೇಕಿಸಬೇಕು ಮತ್ತು ಸಾಧ್ಯವಾದಷ್ಟು ಬೇಗ ಮೊಟ್ಟೆ ಇಡಲು ಪ್ರಾರಂಭ ಮಾಡುವಂತೆ ಮಾಡಬೇಕು. ಅವು ವಿಶ್ರಾಂತಿ ತೆಗೆದುಕೊಳ್ಳಲು ಸಾಧ್ಯವಾಗದಂತೆ ತಂತಿಬಲೆಯ ತಳವಿರುವ ಕೋಳಿಹಂಜರದಲ್ಲಿ ಇವುಗಳನ್ನು ಕೂಡುವುದರ ಮೂಲಕ ಇದನ್ನು ಸಾಧಿಸಬಹುದು.

ಮೊಟ್ಟೆ ಉತ್ಪಾದನೆಯ ಹಂಚಿಕೆ: ಹೆಚ್ಚಿನ ಮೊಟ್ಟೆ ಉತ್ಪಾದಕಗಳು ವರ್ಷದ ವಸಂತ ಋತುವಿನಂತಹ ಕಾಲದಲ್ಲಿ ಚೆನ್ನಾಗಿ ಉತ್ಪಾದಿಸಿ ಇತರ ಕಾಲಗಳಲ್ಲಿ ಅಷ್ಟು ಚೆನ್ನಾಗಿ ಉತ್ಪಾದಿಸದಿರುವುದು, ಗರಿಯುಚುರ್ಚುವ ಕಾಲದಲ್ಲಿ ಸ್ವಲ್ಪಕಾಲ ಉತ್ಪಾದನೆ ನಿಲ್ಲಿಸುವುದು ಸ್ವಾಭಾವಿಕ. ವರ್ಷಪೂರ್ತಿ ಮೊಟ್ಟೆ ಉತ್ಪಾದನೆಯನ್ನು ಉತ್ತಮವಾದ ಒಂದೇ ಮಟ್ಟದಲ್ಲಿ ಉಳಿಸಿಕೊಳ್ಳುವುದು ಅಪೇಕ್ಷಣೀಯ. ಇದು ಉತ್ತಮ ತಳಿಎಬ್ಬಿಸುವಿಕೆಯಿಂದ ಸಾಧಿಸಬೇಕಾದುದಾದರೂ, ಉತ್ತಮವಾದ ನಿರ್ವಹಣಾ ಪದ್ಧತಿಗಳಿಂದ, ಮೊಟ್ಟೆ ಉತ್ಪಾದನೆಯನ್ನು ಒಂದು ನಿರ್ದಿಷ್ಟ ಕಾಲದ ಪೂರ್ತ ಸಮನಾಗಿ ಹಂಚುವುದು ಸಾಧ್ಯ.

ಬಲವಂತ ಗರಿಯುಚುರ್ಚುವಿಕೆ: ಚಳಿಗಾಲದಲ್ಲಿ ಮೊಟ್ಟೆ ಉತ್ಪಾದನೆ ಕಡಮೆಯಾಗುವುದಕ್ಕೆ ಮೊದಲೇ ಹೇಂಟೆಗಳು ಬೇಗ ಗರಿಯುಚುರ್ಚುವಂತೆ ಮಾಡಿ ಅವು ಪುನಃ ಬೇಗ ಉತ್ಪಾದನೆಯಲ್ಲಿ ತೊಡಗುವಂತೆ ಮಾಡುವುದು ನಿರ್ವಿವಾದವಾಗಿ ಮೊಟ್ಟೆ ಉತ್ಪಾದನೆಯ ಸಮಹಂಚಿಕೆಯ ಮೇಲೆ ಪ್ರಭಾವ ಬೀರುತ್ತದೆ. ಈ ಯೋಜನೆ

ತಾತ್ವಿಕವಾಗಿ ಬಹಳ ಉತ್ತೇಜನೀಯ. ಆದರೆ ಪ್ರಾಯೋಗಿಕವಾಗಿ ಇದು ಸೋಲುತ್ತದೆ. ಏಕೆಂದರೆ ಬೇಕಾದಾಗ ಗರಿಯುರ್ಚುವಂತೆ ಮಾಡುವುದು ಸುಲಭ; ಆದರೆ ಬೇಕಾದ ಕಾಲದಲ್ಲಿ ಹೇಂಟೆ ಉನ್ನತವಾಗಿ ಉತ್ಪಾದಿಸುವಂತೆ ಮಾಡುವುದು ಅಸಾಧ್ಯ. ಆದಾಗ್ಯೂ ಈ ಪದ್ಧತಿ ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚು ಹೆಚ್ಚು ಜನ ಕೋಳಿ ಸಾಕಾಣಿಕೆದಾರರ ಮೆಚ್ಚಿಗೆ ಪಡೆಯುತ್ತಿದೆ ಮತ್ತು ಇದರ ಬಗ್ಗೆ ಹೆಚ್ಚಿನ ಅಧ್ಯಯನ ಆಗತ್ಯ.

ಇದಕ್ಕೆ ಕೋಳಿಗಳ ಆಹಾರವನ್ನು ಬದಲಾಯಿಸಿ ಜೂನ್ ಮತ್ತು ಜುಲೈಗಳ ನಡುವೆ ಸ್ವಲ್ಪಕಾಲ ಪುಡಿ ಆಹಾರ ಅಥವಾ ಪೂರಕ ಸಸಾರಜನಕವಿಲ್ಲದ ಬರಿಕಾಳುಗಳನ್ನು ಕೊಡಬೇಕು. ಎಂಟುವಾರಗಳ ವಿಶ್ರಾಂತಿಕಾಲದ ನಂತರ ಕೋಳಿಗಳಿಗೆ ಮೊದಲಿನ ಆಹಾರವನ್ನೇ ಕೊಡಬೇಕು. ಆ ಕಾಲದಲ್ಲಿ ಮೊಟ್ಟೆ ಉತ್ಪಾದನೆಗೆ ಉತ್ತೇಜನ ಕೊಡಲು ರಾತ್ರಿಹೊತ್ತು ಕೃತ್ರಿಮ ಬೆಳಕನ್ನೊದಗಿಸಬೇಕು. ಈ ಪ್ರಯೋಗದಲ್ಲಿ ಕೋಳಿಸಾಕಣೆದಾರರೆಲ್ಲರ ಅನುಭವವೂ ಒಂದೇ ಆಗಿಲ್ಲವಾದರೂ ಇದರ ಬಗ್ಗೆ ಹೆಚ್ಚಿನ ಪ್ರಯೋಗಗಳು ಆಗತ್ಯ. ಆದಾಗ್ಯೂ ಈ ಪದ್ಧತಿ ಅನುವಂಶಿಕವಾಗಿ ಕಡಮೆ ಉತ್ಪಾದಕಗಳನ್ನು ಉತ್ತಮ ಉತ್ಪಾದಕಗಳನ್ನಾಗಿ ಬದಲಾಯಿಸುತ್ತದೆಂದು ತಿಳಿಯಬಾರದು.

ಮೊಟ್ಟೆ ಇಡುವ ಪಂಜರಗಳು ಅಥವಾ ಬ್ಯಾಟರಿಗಳು: ಮೊಟ್ಟೆ ಇಡುವ ಹೇಂಟೆಗಳನ್ನು ಪ್ರತ್ಯೇಕ ಪಂಜರ ಅಥವಾ ಬ್ಯಾಟರಿಗಳಲ್ಲಿಡುವ ಅಭ್ಯಾಸ ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚೆಚ್ಚು ಜನಪ್ರಿಯವಾಗುತ್ತಿದೆ. ಮೊಟ್ಟೆ ಇಡುವ ಬ್ಯಾಟರಿಗಳು, ಮೊಟ್ಟೆ ಇಡುವ ಕೋಳಿಗಳನ್ನಿಡಲು ಸೂಕ್ತವಲ್ಲದ ಮನೆಗಳಲ್ಲೂ ಕೋಳಿಗಳನ್ನಿಡಲು ಸಾಧ್ಯಮಾಡಿಕೊಡುವುದಲ್ಲದೆ ಜಾಗದ ಅವಶ್ಯಕತೆ ಮತ್ತು ಸಾವಿನ ಸಂಖ್ಯೆಯನ್ನು ಕಡಮೆ ಮಾಡುತ್ತವೆ. ಸ್ವಜಾತಿ ಭಕ್ಷಣೆ, ಆರ್ದ್ರಲಿಟ್ಟರ್, ಬೋನುಗೂಡು ಮೊದಲಾದ ನಿರ್ವಹಣಾ ಸಮಸ್ಯೆಗಳಿಗೂ ಮೊಟ್ಟೆ ಇಡುವ ಪಂಜರ ಅಥವಾ ಬ್ಯಾಟರಿ ಪರಿಹಾರ ಒದಗಿಸುತ್ತದೆ. ಇದರ ಅನಾನುಕೂಲತೆಗಳೆಂದರೆ: (i) ಸೀಳುಬಿಟ್ಟ ಮೊಟ್ಟೆಗಳ ಶೇಕಡಾ ಹೆಚ್ಚಳ (ii) ಆಗಾಗ್ಗೆ ಹಿಕ್ಕೆ ತೆಗೆದು ಸ್ವಚ್ಛಮಾಡುವ ಅವಶ್ಯಕತೆ (iii) ಪಂಜರ ಅಥವಾ ಬ್ಯಾಟರಿಗಳಲ್ಲಿರುವ ಮೊಟ್ಟೆ ಉತ್ಪಾದಕಗಳ ಆಹಾರದ ವಿಶೇಷ ಅವಶ್ಯಕತೆಗಳ ಕಡೆಗೆ ಗಮನ ಮತ್ತು (iv) ಸತ್ತ, ಉತ್ಪಾದನೆ ನಿಲ್ಲಿಸಿದ ಇಲ್ಲವೇ ಬೇರ್ಪಡಿಸಲ್ಪಟ್ಟ ಕೋಳಿಗಳ ಜಾಗಗಳನ್ನು ಕೂಡಲೆ ಭರ್ತಿಮಾಡಬೇಕಾದ ಅವಶ್ಯಕತೆ.

ಕೋಳಿಗೊಬ್ಬರದ ವಿಲೇವಾರಿ: ಕೋಳಿಗೊಬ್ಬರ ಕೋಳಿಸಾಕಾಣಿಕೆಯ ಒಂದು ಬೆಲೆಬಾಳುವ ಉಪಉತ್ಪನ್ನ. ಈ ಉತ್ಪನ್ನಕ್ಕೆ ಗಮನಕೊಡುವುದು ಬಹಳ ಲಾಭದಾಯಕವೆಂದು ಹಲವು ಸಾಕಣೆದಾರರು ಮನಗಂಡಿದ್ದಾರೆ. ಕೋಳಿಗೊಬ್ಬರ ಮಲ ಮಾತ್ರವಲ್ಲದೆ ಮೂತ್ರಪಿಂಡಗಳ ವಿಸರ್ಜನೆಯನ್ನೂ ಹೊಂದಿರುವುದರಿಂದ ಇದು

ಇತರ ಸಾಕುಪ್ರಾಣಿಗಳ ಗೊಬ್ಬರಕ್ಕಿಂತ ಬಹಳ ಹೆಚ್ಚು ಸಾರಜನಕವನ್ನು ಹೊಂದಿರುತ್ತದೆ. ಆದುದರಿಂದ ಕೋಳಿಗೊಬ್ಬರ ಬಹಳ ಬೆಲೆಬಾಳುವ ಗೊಬ್ಬರ. ಆದರೆ ಅದರ ಪೂರ್ಣ ಲಾಭ ಪಡೆಯಲು ಅದನ್ನು ಸರಿಯಾಗಿ ಶೇಖರಿಸಬೇಕು. ಸರಿಯಾಗಿ ಶೇಖರಿಸದೆ ಅದರ ಹೆಚ್ಚಿನ ಬೆಲೆ ಹಾಳಾಗುತ್ತಿದೆ.

ಕೋಳಿಗಳಿಂದ ತಯಾರಾಗುವ ಸರಾಸರಿ ತಾಜಾ ಗೊಬ್ಬರದ ಪ್ರಮಾಣ ಕೆಳ ಕಂಡಂತಿದೆ: ವರ್ಷಕ್ಕೆ ಮೊಟ್ಟೆ ಇಡುವ 100 ಕೋಳಿಗಳಿಂದ — 10 ಟನ್‌ಗಳು (280 ಮಣಗಳು); ಮರಿಯಾದಾಗಿನಿಂದ 6 ತಿಂಗಳವರೆಗೆ 100 ಮರಿಗಳಿಂದ — 25 ಹಂಡ್ರಡ್‌ವೈಟ್ (35 ಮಣಗಳು).

ಲಿಟ್ಟರ್ ಜೊತೆ ಬೆರೆಯದ 1 ಟನ್ (28 ಮಣ) ತಾಜಾ ಗೊಬ್ಬರ ಸುಮಾರು 20 ಪೌಂಡ್ ಸಾರಜನಕ, 16 ಪೌಂಡ್ ಸುಲಭವಾಗಿ ದೊರೆಯುವ ಫಾಸ್‌ಫೋರಿಕ್ ಆಮ್ಲ ಮತ್ತು 8 ಪೌಂಡ್ ಪೊಟ್ಯಾಷ್ ಹೊಂದಿರುತ್ತದೆ; ಕೋಳಿಗೊಬ್ಬರ ಕೊಟ್ಟಿಗೆಗೊಬ್ಬರದ 24 ಪಟ್ಟು ಸಾರಜನಕ ಮತ್ತು 4 ಪಟ್ಟು ಫಾಸ್‌ಫೋರಿಕ್ ಆಮ್ಲವನ್ನು ಹೊಂದಿರುತ್ತದೆ; ಆದರೆ ಪೊಟ್ಯಾಷ್ ಅನ್ನು ಸ್ವಲ್ಪ ಕಡಮೆ ಪ್ರಮಾಣದಲ್ಲಿ ಹೊಂದಿರುತ್ತದೆ.

ಕೋಳಿಗೊಬ್ಬರದ ಗುಣವನ್ನು ಉಳಿಸಿಕೊಳ್ಳಲು ಅದನ್ನು ಮರದ ಹೊಟ್ಟು ಅಥವಾ ಅಷ್ಟೇ ನುಣ್ಣಗೆ ಪುಡಿಮಾಡಿರುವ ನೀರು ಹೀರುವ ಗುಣವುಳ್ಳ ಲಿಟ್ಟರ್ ಜೊತೆ ಬೆರೆಸಬೇಕು. ಪ್ರತಿದಿನ ಸ್ವಚ್ಛಮಾಡಿದ ಮೇಲೆ ಈ ಒಣಪುಡಿಯನ್ನು ಹಿಕ್ಕೆ ಹಲಗೆಯ ಮೇಲೆ ಹರಡುವುದರಿಂದ ಇದನ್ನು ಸಾಧಿಸಬಹುದು. ಇದರೊಂದಿಗೆ *100 ಹೇಂಟೆಗಳಿಂದ ದಿನಕ್ಕೆ ಉಂಟಾಗುವ ಗೊಬ್ಬರಕ್ಕೆ 3 ಪೌಂಡ್‌ನಷ್ಟು* ಸೂಪರ್ ಫಾಸ್ಫೇಟ್ ಸೇರಿಸಿದರೆ ಗೊಬ್ಬರದ ಗುಣ ಹೆಚ್ಚುವುದಲ್ಲದೆ, ವಾಸನೆ ಕಡಮೆಯಾಗುತ್ತದೆ. ಕೋಳಿಗೊಬ್ಬರ ಲಾನ್ (ಹುಲ್ಲು ಮೈದಾನ) ಮತ್ತು ತೋಟಗಳಿಗೆ ಅತ್ಯುತ್ತಮವಾದದ್ದು.

ಅಧ್ಯಾಯ 13

ಮಾರಾಟ

1961ರ ಗಣತಿಯ ಪ್ರಕಾರ ಭಾರತದಲ್ಲಿನ ಕೋಳಿಗಳ ಒಟ್ಟು ಸಂಖ್ಯೆ 1,160 ಲಕ್ಷಗಳು. ಇವುಗಳಲ್ಲಿ ಸುಮಾರು 400 ಲಕ್ಷ ಒಂದು ವರ್ಷಕ್ಕೆ ಸುಮಾರು 53 ಮೊಟ್ಟೆ ಉತ್ಪಾದಿಸುವ ಶಕ್ತಿವುಳ್ಳ ಹೇಂಟೆಗಳು. ಇಷ್ಟು ಕಡಮೆಯಾದ ಉತ್ಪಾದನಾ ಮಟ್ಟದಲ್ಲೂ ವಾರ್ಷಿಕ ಮೊಟ್ಟೆ ಉತ್ಪಾದನೆ ಸುಮಾರು 19,000 ಲಕ್ಷ ಮೊಟ್ಟೆಗಳು. ಇದರ ಮಾರಾಟದ ಬೆಲೆ 15 ಕೋಟಿ ರೂಪಾಯಿಗಳಿಗೂ ಹೆಚ್ಚಾಗುತ್ತದೆ. ತಿನ್ನಲು ಉಪಯೋಗಿಸುವ ಕೋಳಿಗಳ ಬೆಲೆಯನ್ನು ನಿರ್ಧರಿಸಿಲ್ಲ. ಏನೇ ಆದರೂ ಅದು ಮೊಟ್ಟೆಗಿಂತ ಕಡಮೆಯಾಗಲಾರದು. ಇಡೀ ಪ್ರಪಂಚದಲ್ಲಿ ಉತ್ಪಾದಿಸಲಾಗುವ ಮರಿ ಮತ್ತು ಮೊಟ್ಟೆಗಳ ಸಂಖ್ಯೆ ಕ್ರಮವಾಗಿ 11,56,650 ಮತ್ತು 763,73,10,000 ಲಕ್ಷಗಳು* ಆದುದರಿಂದ ಉತ್ಪಾದನಾ ಸಾಮರ್ಥ್ಯ ಕಡಮೆಯಾದರೂ ಸ್ಥೂಲವಾಗಿ ಪ್ರಪಂಚದ ಕೋಳಿಮರಿಗಳ ಸಂಖ್ಯೆಯ $\frac{1}{10}$ಕ್ಕೂ ಹೆಚ್ಚು

ಕೋಷ್ಟಕ 23

ಕೆಲವು ದೇಶಗಳಲ್ಲಿ ಕೋಳಿಮರಿ ಹಾಗೂ ಮೊಟ್ಟೆಗಳ ಸಂಖ್ಯೆ (1953)

ದೇಶ	ಮರಿಗಳು (ಲಕ್ಷಗಳಲ್ಲಿ)	ಮೊಟ್ಟೆಗಳು (ಲಕ್ಷಗಳಲ್ಲಿ)	ಷರಾ
ಕೆನಡ	385	42,000	
ಅಮೆರಿಕ	4,297	6,17,040	
ಡೆನ್‌ಮಾರ್ಕ್	247	21,550	
ಫ್ರಾನ್ಸ್	700	80,000	1952ಕ್ಕೆ
ಪಶ್ಚಿಮ ಜರ್ಮನಿ	513	55,000	
ಇಂಗ್ಲೆಂಡ್	881	62,000	
ಚೀಣ	1,946	—	1950ಕ್ಕೆ
ಜಪಾನ್	366	51,400	
ಭಾರತ	970	17,000	
ಪಾಕಿಸ್ಥಾನ್	590	—	1952ಕ್ಕೆ

ಮರಿಗಳನ್ನು ನಾವು ಈ ದೇಶದಲ್ಲಿ ಹೊಂದಿದ್ದೇವೆ. ಹತ್ತು ಪ್ರಮುಖ ದೇಶಗಳಲ್ಲಿ ಕೋಳಿ ಸಂಖ್ಯೆ ಹಾಗೂ ವಾರ್ಷಿಕ ಮೊಟ್ಟೆ ಉತ್ಪಾದನೆಯನ್ನು ಕೋಷ್ಟಕ 23ರಲ್ಲಿ ಕೊಡಲಾಗಿದೆ.

---

* Poultry Science Journal, Vol. 10, 1954, pp. 146—49.

ಭಾರತದಲ್ಲಿ ಹೆಚ್ಚಿನ ಕೋಳಿ ಸಂಖ್ಯೆ ಇದ್ದರೂ ವೈಯಕ್ತಿಕ ಸರಾಸರಿ ಉತ್ಪಾದನೆ ಕಡಮೆ ಇರುವುದರಿಂದ ಒಟ್ಟು ಮೊಟ್ಟೆ ಉತ್ಪಾದನೆ ಕಡಮೆ. ಇಡೀ ಪ್ರಪಂಚದ ಸರಾಸರಿ ತೆಗೆದುಕೊಂಡರೆ ಒಂದು ವರ್ಷಕ್ಕೆ ಒಂದು ಹೇಂಟೆ 120 ಮೊಟ್ಟೆಗಳನ್ನಿಟ್ಟರೆ. ದೇಶಿ (ಸ್ಥಳೀಯ) ಹೇಂಟೆ ವರ್ಷಕ್ಕೆ ಕೇವಲ 53 ಮೊಟ್ಟೆಗಳನ್ನಿಡುತ್ತದೆ. ಹೊರದೇಶ ದಿಂದ ತರಿಸಿಕೊಂಡ ಗುಂಪಿನಿಂದ ತಳಿಎಬ್ಬಿಸಿದ 'ಉತ್ತಮೀಕರಿಸಿದ' ಹೇಂಟೆಗಳು ವರ್ಷಕ್ಕೆ ಸರಾಸರಿ 103 ಮೊಟ್ಟೆಗಳನ್ನಿಡುತ್ತವೆ, ಆದರೆ ಇಂತಹ ಹೇಂಟೆಗಳ ಸಂಖ್ಯೆ ಅತ್ಯಲ್ಪ ಹಾಗೂ ಮೊಟ್ಟೆ ಇಡುವ ಒಟ್ಟು ಕೋಳಿಗಳ ಶೇಕಡಾ 1.25ನ್ನು ದಾಟುವು ದಿಲ್ಲ.

ಭಾರತದಲ್ಲಿ ಕೋಳಿ ಸಂಗೋಪನೆ: ಭಾರತದಲ್ಲಿ ಕೋಳಿ ಸಾಕಾಣಿಕೆ ಮುಖ್ಯವಾಗಿ ಹಳ್ಳಿಗಳಲ್ಲಿ ಸಾಂದ್ರೀಕೃತವಾಗಿದೆ. ಇದು ಸಂತಸದ ಸಂಗತಿ. ಗ್ರಾಮಗಳಲ್ಲಿ ಒಬ್ಬ ರೈತನ ಬಳಿ ಇರುವ ಸರಾಸರಿ ಕೋಳಿಗಳ ಸಂಖ್ಯೆ ಸುಮಾರು ಆರು, ಅವುಗಳನ್ನು ಸಾಕುವ ರೀತಿ ಎಳ್ಳಷ್ಟೂ ಸೂಕ್ತವಾಗಿಲ್ಲ. ರೋಗ ಮೊದಲಾದವುಗಳಿಂದ ಹೇಂಟೆ ಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಯುವುದರಿಂದ ಪ್ರತಿವರ್ಷವೂ ಹೊಸ ಹೇಂಟೆಗಳನ್ನು ಮೊಟ್ಟೆ ಇಡುವ ಗುಂಪಿಗೆ ಸೇರುತ್ತವೆ. ಮಾರುಕಟ್ಟೆ ದೂರದಲ್ಲಿರುವುದರಿಂದ ಉತ್ಪಾದಕರ ಸ್ಥಳೀಯ ಉಪಯೋಗಕ್ಕಾಗಿಯೇ ಮೊಟ್ಟೆಗಳನ್ನು ಉಳಿಸಿಬಿಡುವುದೇ ಪರಿಪಾಠ. ನಗರವಾಸಿಗಳ ಉಪಯೋಗಕ್ಕಾಗಿಯೇ ಸುಮಾರು ಶೇಕಡಾ 60ರಷ್ಟು ಮೊಟ್ಟೆಗಳು ಮಾರುಕಟ್ಟೆಗೆ ಬರುತ್ತವೆಂದು ಅಂದಾಜುಮಾಡಲಾಗಿದೆ. ಇಂದಿನ ಅವ್ಯ ವಸ್ಥಿತ ಉತ್ಪಾದನಾ ಪರಿಸ್ಥಿತಿಗಳಲ್ಲೂ ಈ ಮೊಟ್ಟೆಗಳ ಒಟ್ಟು ಬೆಲೆ 9 ಕೋಟಿ ರೂಪಾಯಿಗಳಿಗೂ ಹೆಚ್ಚು.

ಮೊಟ್ಟೆಗಳನ್ನು ಮನೆ ಉಪಯೋಗಕ್ಕಾಗಿ, ಕೇಕ್ ಮೊದಲಾದವುಗಳ ತಯಾರಿಕೆ ಗಾಗಿ ಮತ್ತು ಇತರ (ಔದ್ಯೋಗಿಕ) ಉದ್ದೇಶಗಳಿಗಾಗಿ ಹೀಗೆ ಮೂರು ವಿಧವಾಗಿ ಉಪಯೋಗಿಸುತ್ತಾರೆ. ಈ ದೇಶದ ನಗರವಾಸಿಗಳು ಉಪಯೋಗಿಸುವ ಒಟ್ಟು ಮೊಟ್ಟೆಗಳಲ್ಲಿ ಶೇಕಡಾ 95 ಭಾಗ ಮನೆಗಳಲ್ಲಿ ತಿನ್ನಲು ಮತ್ತು ಅಡಿಗೆಮಾಡಲು ಉಪಯೋಗಿಸಲ್ಪಡುತ್ತದೆ, ಉಳಿದ ಶೇಕಡಾ 5 ಭಾಗದಲ್ಲಿ ಹೆಚ್ಚಿನ ಭಾಗ ಕೇಕ್ ಮೊದಲಾದವುಗಳ ತಯಾರಿಕೆಗೆ ಉಪಯೋಗಿಸಲ್ಪಡುತ್ತದೆ. ಹೊಳಪು ಕೊಡುವಿಕೆ, ಪುಸ್ತಕಗಳಿಗೆ ರಟ್ಟುಗಟ್ಟುವಿಕೆ, ಔಷಧಗಳ ತಯಾರಿಕೆ, ಚರ್ಮಹದಮಾಡುವಿಕೆ ಮೊದ ಲಾದುವಕ್ಕೆ ಉಪಯೋಗಿಸುವ ಮೊಟ್ಟೆಗಳ ಸಂಖ್ಯೆ ಸದ್ಯಕ್ಕೆ ತುಲನಾತ್ಮಕವಾಗಿ ಬಹಳ ಕಡಮೆ.

ವ್ಯಾಪಾರ ದೃಷ್ಟಿಯಲ್ಲಿ ನಗರಗಳ ಅವಶ್ಯಕತೆ ಬಹುಮುಖ್ಯವಾದುದು. ಮಾರು ಕಟ್ಟೆಗೆ ಬರುವ ಮೊಟ್ಟೆಗಳ ಹೆಚ್ಚು ಭಾಗ ಮಾನವ ಆಹಾರವಾಗಿಯೇ ಉಪಯೋಗಿ ಸಲ್ಪಡುತ್ತದೆಂಬುದು ಮೇಲಿನ ವಿಷಯಗಳಿಂದ ಸ್ಪಷ್ಟವಾಗುತ್ತದೆ.

ಮಾರಾಟದ ಸಮಸ್ಯೆಗಳು: ಗ್ರಾಹಕರಿಗೆ ಮೊಟ್ಟೆಗಳ ಮೇಲಿನ ಆಸಕ್ತಿ ಅವುಗಳ ಗುಣಮಟ್ಟವನ್ನೇ ಅವಲಂಬಿಸಿದೆ. ಆದುದರಿಂದ ಮೊಟ್ಟೆಗಳ ಮೂಲಗುಣಮಟ್ಟ ವ್ಯತ್ಯಸ್ಥಗೊಳ್ಳದಂತೆ ಅವನ್ನು ಗ್ರಾಹಕರಿಗೆ ತಲುಪಿಸುವುದು ಮೊಟ್ಟೆಗಳ ಮಾರಾಟ ದಲ್ಲಿನ ಗುಟ್ಟಾಗಿದೆ.

ಮೊಟ್ಟೆಗಳ ಶೇಖರಣೆ ಮತ್ತು ನಿರ್ವಹಣೆಯಲ್ಲಿಯ ದೋಷಗಳಿಂದ ಪ್ರತಿವರ್ಷ 50 ಲಕ್ಷಕ್ಕೂ ಹೆಚ್ಚು ರೂಪಾಯಿಗಳು ಮೊಟ್ಟೆ ವ್ಯಾಪಾರದಲ್ಲಿ ನಷ್ಟವಾಗುತ್ತಿದೆ ಎಂದು ಲೆಕ್ಕಹಾಕಲಾಗಿದೆ. ಭಾರತ ಸರಕಾರ, ಆಹಾರ ಮತ್ತು ಕೃಷಿ ಮಂತ್ರಾಲಯದ ಮಾರಾಟ ನಿರ್ದೇಶನಾಲಯದವರು ಸಂಗ್ರಹಿಸಿದ ಸುದ್ದಿಗಳ ಪ್ರಕಾರ * ಕಲೆಹಾಕುವಿಕೆಯ ದೋಷ ಒಂದರಿಂದಲೇ ಸುಮಾರು 14 ಲಕ್ಷ ರೂಪಾಯಿಗಳಷ್ಟು ನಷ್ಟ ಪ್ರತಿವರ್ಷ ಉಂಟಾಗುತ್ತಿದೆಯೆಂದು ನಂಬಲಾಗಿದೆ. ಈ ರೀತಿಯ ನಷ್ಟ ಮುಖ್ಯವಾಗಿ ಇಂದಿನ ಅಸಮರ್ಪಕ ಸಾಕಾಣಿಕಾ ಪದ್ಧತಿಗಳಿಂದಾದುದು, ಉತ್ತಮ ವಸತಿ ಹಾಗೂ ಮೊಟ್ಟೆ ಇಡುವ ಗೂಡುಗಳನ್ನೊದಗಿಸುವುದರಿಂದ ಈ ನಷ್ಟವನ್ನು ಗಣನೀಯವಾಗಿ ಕಡಮೆ ಮಾಡಬಹುದು. ಸಂಕಲನ, ಸಾಗಾಣಿಕೆ ಮತ್ತು ಹಂಚಿಕೆಗಳ ಕಾಲದಲ್ಲಿ ಒಡೆದು ಹೋಗುವ ಪ್ರಮಾಣವೂ ಹೆಚ್ಚು ಮತ್ತು ಇದರಿಂದ ವರ್ಷಕ್ಕೆ 15 ಲಕ್ಷ ರೂಪಾಯಿಗಳ ನಷ್ಟ ಸಂಭವಿಸುತ್ತದೆ. ಇದಕ್ಕೆ ಮುಖ್ಯಕಾರಣ ಅತೃಪ್ತಿಕರ ಪೆಟ್ಟಿಗೆ ಹಾಗೂ ಪ್ಯಾಕಿಂಗ್. ಉತ್ತಮವಾದ ಪೆಟ್ಟಿಗೆಗಳು ಮತ್ತು ಸೂಕ್ತ ಪ್ಯಾಕಿಂಗ್ ಪದಾರ್ಥಗಳ ಉಪಯೋಗದಿಂದ ಈ ನಷ್ಟವನ್ನು ಕಡಮೆಮಾಡಬಹುದು.


ಸಾಗಾಣಿಕೆ ಮತ್ತು ಮಾರಾಟದ ಅವಧಿಯಲ್ಲಿ ಕೆಡುವ ಮೊಟ್ಟೆಗಳಿಂದ ವರ್ಷಕ್ಕೆ 28 ಲಕ್ಷ ರೂಪಾಯಿಗಳ ನಷ್ಟ ಉಂಟಾಗಬಹುದೆಂದು ಲೆಕ್ಕಹಾಕಲಾಗಿದೆ. ಮೊಟ್ಟೆ ಕೆಡಲು ಕಾರಣಗಳಾದ ಕೆಲವು ಅಂಶಗಳೆಂದರೆ (1) ಬಿಸಿ ಹವಾಮಾನ (2) ಬಿಸಿ ಜಾಗಗಳಲ್ಲಿ ಶೇಖರಣೆ (3) ಕೊಳೆಯಾದ ಮೊಟ್ಟೆಗಳು (4) ಫಲೀಕೃತ ಮೊಟ್ಟೆಗಳು (5) ಮಟ್ಟವಿಂಗಡಿಸದ ಮೊಟ್ಟೆಗಳು ಮತ್ತು (6) ದೋಷಯುತ ಪ್ಯಾಕ್ ಮಾಡುವಿಕೆ ಮತ್ತು ನಿರ್ವಹಣೆ.

ಸರಿಯಾಗಿ ನೋಡಿಕೊಳ್ಳದಿದ್ದರೆ ಮೊಟ್ಟೆಗಳು ಬಹುಬೇಗ ಕೆಡುತ್ತವೆ. ಫಲೀಕೃತ ಮೊಟ್ಟೆಗಳು ಅಫಲೀಕೃತ ಮೊಟ್ಟೆಗಳಿಗಿಂತ ಬೇಗ ಕೆಡುತ್ತವೆ, ಅದರಲ್ಲೂ ಬೇಸಿಗೆಯ ಬಿಸಿಹವೆಯಲ್ಲಿ ಇನ್ನಷ್ಟು ಬೇಗ ಕೆಡುತ್ತವೆ (ಚಿತ್ರ 136). ಬಿಸಿ ಹವೆಯಲ್ಲಾಗುವ ಭ್ರೂಣದ ಬೆಳವಣಿಗೆ ಇದಕ್ಕೆ ಕಾರಣ, ಮೊಟ್ಟೆಯನ್ನು ಉಪಯೋಗಿಸದೆ ಹೆಚ್ಚು ಕಾಲ ಬಿಟ್ಟಷ್ಟೂ ಅದು ಹೆಚ್ಚು ಕೆಡುತ್ತದೆ.

ಮೊಟ್ಟೆಗಳ ಗುಣಮಟ್ಟದ ನಿರ್ಣಯ: ಮೊಟ್ಟೆಗಳನ್ನು ಒಡೆಯದೆ ದೀಪಕ್ಕೆ ಹಿಡಿದು ಪರೀಕ್ಷೆ ಮಾಡುವುದರಿಂದ ಮೊಟ್ಟೆಗಳ ಒಳಗಿನ ಪದಾರ್ಥಗಳ ಗುಣಮಟ್ಟ ವನ್ನು ಸಾಮಾನ್ಯವಾಗಿ ನಿರ್ಧರಿಸಬಹುದು. ಮೊಟ್ಟೆಗಳನ್ನು ಒಂದು ಕತ್ತಲೆ ಕೋಣೆ

---

*Report on the Marketing of Eggs and Poultry.




ಚಿತ್ರ 136: ಮೊಟ್ಟೆಗಳ ಗುಣಮಟ್ಟದ ಮೇಲೆ ಶಾಖದ ಪ್ರಭಾವ.

Germ growth starts here=ಭ್ರೂಣದ ಬೆಳವಣಿಗೆ ಇಲ್ಲಿಂದ ಪ್ರಾರಂಭವಾಗುತ್ತದೆ, Eggs freeze here=ಮೊಟ್ಟೆಗಳು ಇಲ್ಲಿ ಗಡ್ಡೆಕಟ್ಟುತ್ತವೆ. Temperature of egg when laid=ಮೊಟ್ಟೆ ಇಟ್ಟಾಗಿನ ಅದರ ಶಾಖ, Cool eggs to this temperature range=ಈ ಮಟ್ಟಕ್ಕೆ ಮೊಟ್ಟೆಗಳನ್ನು ತಂಪು ಮಾಡಿಡಬೇಕು. Interior quality=ಕೀಳು ಮಟ್ಟದವು, Inedible=ಅಯೋಗ್ಯವಾದವು.

ಯಲ್ಲಿ ಮೊಟ್ಟೆಯ ಬೆಳಕಿನ ಪರೀಕ್ಷೆಯ ಸಲಕರಣೆಯ ಸಹಾಯದಿಂದ ಪರೀಕ್ಷಿಸಬಹುದು (ಚಿತ್ರ 137, 138). ಇದು ಒಂದು ಪಕ್ಕದಲ್ಲಿ ಸುಮಾರಾಗಿ ಮೊಟ್ಟೆಯ ಆಕಾರದ ಕಿಂಡಿ ಇರುವ ಮರದ ಅಥವಾ ತಗಡಿನ ಪೆಟ್ಟಿಗೆಯನ್ನೊಳಗೊಂಡ ಸುಲಭ ಸಾಧನ. ಪರೀಕ್ಷಿಸಬೇಕಾದ ಮೊಟ್ಟೆಗಳನ್ನು ಒಂದರ ನಂತರ ಒಂದರಂತೆ ಕಿಂಡಿಯಲ್ಲಿಟ್ಟು ಹಾದುಬರುವ ಬೆಳಕಿನಿಂದ ಮೊಟ್ಟೆಯ ಒಳಗಿನ ಪದಾರ್ಥಗಳನ್ನು ಪರೀಕ್ಷಿಸುತ್ತಾರೆ.

ಸರಿಯಾದ ತಾಜಾ ಮೊಟ್ಟೆಯನ್ನು ಪರೀಕ್ಷಿಸಿದಾಗ, ಮಸುಕಾದ ಬಂಡಾರದ ನೆರಳೂ, ಅಗಲವಾದ ತುದಿಯಲ್ಲಿ ಗಾಳಿ ಜಾಗವಿಲ್ಲದಿರುವುದೂ ಕಾಣುತ್ತದೆ. ಯಾವುದೇ ರೀತಿಯ ವ್ಯತ್ಯಾಸವಿದ್ದರೂ ಗುರುತಿಸಿ ಗುಣಮಟ್ಟವನ್ನು ಲೆಕ್ಕಹಾಕಬಹುದು. ಮಾರುವ ಮೊಟ್ಟೆಗಳನ್ನು ಈ ರೀತಿಯ ಪರೀಕ್ಷೆಗೆ ಒಳಪಡಿಸುವುದು ಕೆಟ್ಟ ಮೊಟ್ಟೆಗಳನ್ನು

ಪ್ರತ್ಯೇಕಿಸುವುದಕ್ಕೆ ಅಲ್ಲದೆ, ಮೊಟ್ಟೆಗಳನ್ನು ಅವುಗಳ ಗುಣಮಟ್ಟದ ಮೇಲೆ ವಿಭಾಗಿಸಲೂ ಅವಶ್ಯಕ.



ಚಿತ್ರ 137: ಮನೆಯಲ್ಲೇ ಮಾಡಿದ ಮೊಟ್ಟೆ ಬೆಳಕಿನ ಪರೀಕ್ಷಕ.

ದೋಷಯುತ ಚಿಪ್ಪುಗಳು: ಎಚ್ಚರಿಕೆಯಿಂದ ನಿರ್ವಹಿಸಿದ ಮೊಟ್ಟೆಗಳಿಗಿಂತ ಬೇಜವಾಬ್ದಾರಿಯಿಂದ ನಿರ್ವಹಿಸಿದ ಮೊಟ್ಟೆಗಳು ಹೆಚ್ಚು ಕೆಡುತ್ತವೆ. ನಿರ್ವಹಣೆಯಲ್ಲಿ ಆದ ಸಣ್ಣ ಬಿರುಕುಗಳನ್ನು ಹಾಗೆ ಕಾಣುವುದು ಸಾಧ್ಯವಿಲ್ಲದಿದ್ದರೂ ಬೆಳಕಿನ ಪರೀಕ್ಷೆಯಿಂದ ಸುಲಭವಾಗಿ ಕಾಣಬಹುದು. ಅಂತಹ ಮೊಟ್ಟೆಗಳನ್ನು 'ಕುರುಡು ಪಾರ್ಶ್ವ'ಗಳು ಎಂದು ಕರೆಯುತ್ತಾರೆ. ಒಳ ಪದಾರ್ಥಗಳು ಸೋರುತ್ತಿರುವ ಮೊಟ್ಟೆಗಳನ್ನು 'ಸೋರುಕ'ಗಳು ಎಂದು ಕರೆಯುತ್ತಾರೆ. ಇಂತಹ ಮೊಟ್ಟೆಗಳನ್ನು ಗುರುತಿಸಲು ಯಾವ ಪರೀಕ್ಷೆಯೂ ಬೇಡ. ಬಿರುಕು ಬಿಟ್ಟ ಮೊಟ್ಟೆಗಳೆಲ್ಲವನ್ನೂ ತೆಗೆದುಬಿಡಬೇಕು.

ಗಾಳಿಕೋಶಗಳು: ಗಾಳಿಕೋಶದ ಆಳ ಮೊಟ್ಟೆ ಹಳತಾದ ಮಟ್ಟವನ್ನು ನಿರ್ಧರಿಸುತ್ತದೆ. ಸುಮಾರು ಒಂದುದಿನದ ಸಾಮಾನ್ಯ ಮೊಟ್ಟೆ ತಂಪಾದ ಜಾಗದಲ್ಲಿಟ್ಟಿದ್ದಾಗ ಸುಮಾರು $\frac{1}{8}$ ಅಂಗುಲ ಆಳವಾದ ಗಾಳಿಕೋಶವನ್ನು ಹೊಂದಿರುತ್ತದೆ. ಮೊಟ್ಟೆಯನ್ನು ಹೆಚ್ಚುಕಾಲ ಇಟ್ಟಷ್ಟೂ ಗಾಳಿಕೋಶ ದೊಡ್ಡದಾಗುತ್ತದೆ. ಮಾರಾಟದ ಮೊಟ್ಟೆಗಳ ಬೆಳಕಿನ ಪರೀಕ್ಷೆಯಲ್ಲಿ ಗಾಳಿಕೋಶದ ಗಾತ್ರ ಮುಖ್ಯವಾದ ಅಂಶ. ಏಕೆಂದರೆ ಇದು ಮೊಟ್ಟೆಗಳನ್ನು ಇಟ್ಟ ರೀತಿಯನ್ನೇ ಅಲ್ಲದೆ ಮೊಟ್ಟೆಯು ಎಷ್ಟು ದಿನದಿಂದ ಇಡಲ್ಪಟ್ಟಿದೆ ಎಂಬುದನ್ನೂ ಸೂಚಿಸುತ್ತದೆ.



ಚಿತ್ರ 138: ಮೊಟ್ಟೆ ಬೆಳಕಿನ ಪರೀಕ್ಷಕ (ಸುಧಾರಿತ ರೀತಿ).

ರಕ್ತಗಡ್ಡೆಗಳು: ಕೆಲವು ಬಾರಿ ಮೊಟ್ಟೆಗಳನ್ನು ಬೆಳಕಿನ ಪರೀಕ್ಷೆಮಾಡಿದಾಗ ಬಂಡಾರದ ಮೇಲೆ ರಕ್ತದ ಗಡ್ಡೆಗಳು ಕಂಡುಬರುತ್ತವೆ. ಈ ಗಡ್ಡೆ ಬಹುಶಃ ಅಂಡಾಶಯ ಅಥವಾ ಅಂಡನಾಳದಲ್ಲಿ ಯಾವುದಾದರೊಂದು ರಕ್ತನಾಳ ಒಡೆದುದರಿಂದ ಉಂಟಾಗುತ್ತದೆ. ಒಮ್ಮೊಮ್ಮೆ ರಕ್ತದಿಂದ ಸಾಂದ್ರ ಮತ್ತು ತಿಳಿ ಬಿಳಿಗಳೆರಡೂ ಕೆಂಪು ಛಾಯೆಯನ್ನು ಹೊಂದಿರುತ್ತವೆ. ಇಂತಹ ಮೊಟ್ಟೆಗಳನ್ನು ತಿರಸ್ಕರಿಸಬೇಕು.

ರಕ್ತ ಉಂಗುರಗಳು ಮತ್ತು ಪಿಂಡ ಬೆಳವಣಿಗೆ: ಫಲೀಕೃತ ಮೊಟ್ಟೆಯಲ್ಲಿ ಪಿಂಡ ಸುಮಾರು 69°F ನಲ್ಲಿ ಬೆಳೆಯತೊಡಗುತ್ತದೆ. ಭ್ರೂಣಗಳು ಕೆಲವುದಿನ ಬೆಳೆದು ಸತ್ತಾಗ ಅದರ ರಕ್ತ ಸಣ್ಣ ಉಂಗುರದಂತೆ ಶೇಖರಣೆಯಾಗಿ, ಅಂತಹ ಮೊಟ್ಟೆಯನ್ನು ಬೆಳಕಿನ ಪರೀಕ್ಷೆಗೆ ಒಳಪಡಿಸಿದಾಗ ಬಂಡಾರದ ಮೇಲೆ ರಕ್ತ ಉಂಗುರ ಕಂಡುಬರುತ್ತದೆ. ಬೇಸಿಗೆಕಾಲದಲ್ಲಿ ಸಾಮಾನ್ಯವಾದ 69°F ನಲ್ಲಿ ಮೊಟ್ಟೆಗಳನ್ನು ಶೇಖರಿಸಿದಾಗ

ಸಾಮಾನ್ಯವಾಗಿ ಭ್ರೂಣ ಬೆಳೆಯತೊಡಗುತ್ತದೆ. ಹಳ್ಳಿಗಳಲ್ಲಿ ಯಾವಾಗಲೂ ಹುಂಜ, ಹೇಂಟೆಗಳು ಜತೆಯಲ್ಲಿ ಇರುವುದರಿಂದ ಉತ್ಪನ್ನವಾಗುವ ಎಲ್ಲ ಮೊಟ್ಟೆಗಳಿಗೂ ಫಲೀಕರಿಸಿರುವುದರಿಂದ, ಈ ಪರಿಸ್ಥಿತಿ ಈ ದೇಶದಲ್ಲಿ ಬೇಸಿಗೆಕಾಲದಲ್ಲಿ ಸಾಮಾನ್ಯವಾದದ್ದು. ಆದುದರಿಂದ ಮೊಟ್ಟೆಗಳನ್ನು 68°Fಗೂ ಕೆಳಗಿನ ಶಾಖದಲ್ಲಿ ಶೇಖರಿಸಿಡಬೇಕಾದದ್ದು ಅತ್ಯಾವಶ್ಯಕ, ಮೊಟ್ಟೆಗಳ ಗುಣಮಟ್ಟವನ್ನು ಉಳಿಸಿಕೊಳ್ಳಲು ಸುಮಾರು 55°F ಶಾಖ ಅತ್ಯಂತ ಸೂಕ್ತವಾದದ್ದು.

ಬಂಡಾರ ಮತ್ತು ಬಿಳಿಲೋಳೆಯ ಇಳಿಗುಂಡುವಿಕೆ: ತಾಜಾ ಮೊಟ್ಟೆಯಲ್ಲಿ ಬಂಡಾರ ಸರಿಯಾಗಿ ಮಧ್ಯದಲ್ಲಿರಬೇಕು ಮತ್ತು ಕುದಿಸಿದಾಗಲೂ ಅದು ತನ್ನ ಸ್ಥಾನವನ್ನು ಉಳಿಸಿಕೊಳ್ಳುತ್ತದೆ. ಹಳತಾದ ಮೊಟ್ಟೆಗಳಲ್ಲಿ ಸಾಮಾನ್ಯವಾಗಿ ಬಂಡಾರ ಮಧ್ಯದಲ್ಲಿರುವುದಿಲ್ಲ; ಹೊಸದಾದ ಮತ್ತು ಒಳ್ಳೆಯ ಮೊಟ್ಟೆಯನ್ನು ಒಡೆದು ಒಂದು ಸಮತಲ ಪಾತ್ರೆಗೆ ಹಾಕಿದಾಗ ಬಿಳಿಲೋಳೆಯ ಮಧ್ಯೆ ಬಂಡಾರ ಉಬ್ಬಿನಿಂತಿರುತ್ತದೆ ಹಾಗೂ ಸಾಂದ್ರಬಿಳಿಲೋಳೆ ಅತ್ಯಂತ ಕಡಮೆ ತೆಳುಬಿಳಿಲೋಳೆಯೊಂದಿಗೆ ಬಂಡಾರವನ್ನು ಸುತ್ತುವರೆದು ಕಡಮೆ ಜಾಗವನ್ನು ಆಕ್ರಮಿಸಿಕೊಳ್ಳುತ್ತದೆ. ಕೀಳು ದರ್ಜೆಯ ಮೊಟ್ಟೆಯನ್ನು ಇದೇ ರೀತಿ ಮಾಡಿದಾಗ ಅದು ಹೆಚ್ಚಿನ ಜಾಗಕ್ಕೆ ಹರಡಿಕೊಳ್ಳುತ್ತದೆ. ಕೆಟ್ಟುಹೋದ ಮೊಟ್ಟೆಗಳಲ್ಲಿ ಸಾಂದ್ರಬಿಳಿಲೋಳೆ ಇರುವುದೇ ಇಲ್ಲ; ತೆಳುಬಿಳಿಲೋಳೆ ಅಗಲವಾಗಿ ಹರಡಿಕೊಳ್ಳುತ್ತದೆ. ಬಂಡಾರವೂ ಚಪ್ಪಟೆಯಾಗಿ ಹರಡಿಕೊಳ್ಳುತ್ತದೆ.

ಮೊಟ್ಟೆ ಇಟ್ಟಾಗ ಅದರ ಶಾಖ ಸುಮಾರು 104°F. ಬೇಸಿಗೆಕಾಲದಲ್ಲಿ ಅದನ್ನು ಗೂಡಿನಿಂದ ಕೂಡಲೆ ತೆಗೆಯದೆ ಹೋದರೆ ಮೊಟ್ಟೆ ಇಟ್ಟ ಕೆಲವೇ ಗಂಟೆಗಳಲ್ಲಿ ಸಾಂದ್ರ ಬಿಳಿಲೋಳೆ ವಿಭಜನೆ ಹೊಂದತೊಡಗುತ್ತದೆ. ಉತ್ತರ ದೇಶಗಳ ಬೇಗೆಯಂತಹ ತೀವ್ರ ಬಿಸಿಲಿನ ಕಾಲಗಳಲ್ಲಿ ಮೊಟ್ಟೆಗಳನ್ನು ಕೂಡಲೆ ಶೈತ್ಯೀಕರಿಸದೆ ಗೂಡುಗಳಲ್ಲಿಡಲು ಬಿಟ್ಟರೆ ಅವು ಬಹುಬೇಗ ಇಳಿಗುಂದುತ್ತವೆ. ಮೊಟ್ಟೆಗಳನ್ನಿಟ್ಟಿರುವ ಕೊಠಡಿಯ ಶಾಖ ಹೆಚ್ಚಿದಷ್ಟೂ, ಗಾಳಿ ಒಣಗಿದ್ದಷ್ಟೂ ಬೇಗ ಮೊಟ್ಟೆಗಳು ಇಳಿಗುಂದುತ್ತವೆ. ಮೊಟ್ಟೆಗಳನ್ನು ಬಿಸಿಲಿಗಿಡುವುದರಿಂದಾಗಲಿ, ಬಿಸಿಯಾದ ಕೋಣೆಯಲ್ಲಿ ಹೆಚ್ಚು ಕಾಲ ಶೇಖರಿಸುವುದರಿಂದಾಗಲಿ ಮೊಟ್ಟೆಗಳ ಶಾಖ ಹೆಚ್ಚಿಸಿದರೆ, ಸಾಂದ್ರಬಿಳಿಲೋಳೆ ವಿಭಜನೆ ಹೊಂದಿ ಇಡೀ ಬಿಳಿಲೋಳೆ ನೀರಂತೆ ಕಾಣುತ್ತದೆ. ಈ ರೀತಿ ಹೆಚ್ಚಿನ ಇಳಿಗುಂದಿದ ಸ್ಥಿತಿಯಲ್ಲಿರುವ ಮೊಟ್ಟೆಗಳನ್ನು 'ನೀರುಬಿಳಿ' ಮೊಟ್ಟೆಗಳು ಎಂದು ಕರೆಯುತ್ತಾರೆ. ಬೆಳಕಿನ ಪರೀಕ್ಷೆ ಮಾಡಿದಾಗ ಇವುಗಳಲ್ಲಿ ಬಂಡಾರ ದಟ್ಟವಾಗಿ ಕಾಣಿಸುತ್ತದೆ ಮತ್ತು ಬಿಳಿಯಲ್ಲಿ ಸುಲಭವಾಗಿ ತಿರುಗುತ್ತದೆ. ಇವುಗಳನ್ನು 'ಲಘು ತೇಲು' ಅಥವಾ 'ಸ್ಥೂಲ ತೇಲು'ಗಳೆಂದು ಕರೆಯುತ್ತಾರೆ.

ಏಕಾಣುಜೀವಿಯ ಕೆಡುಬೆರಕೆ: ಮೊಟ್ಟೆ ಚಿಪ್ಪು ಸಾಮಾನ್ಯವಾಗಿ ಏಕಾಣುಜೀವಿಯ ಕೆಡುಬೆರಕೆಯನ್ನು ತಡೆಗಟ್ಟುವುದರಿಂದ ತಾಜಾ ಮೊಟ್ಟೆಗಳ ಘಟಕಗಳು ಸಾಮಾನ್ಯ

ವಾಗಿ ಏಕಾಣುಜೀವಿಗಳನ್ನು ಹೊಂದಿರುವುದಿಲ್ಲ. ವಿಶೇಷತಃ ಮೊಟ್ಟೆಗಳನ್ನು ಬಿಸಿಯಾದ ಆರ್ದ್ರಸ್ಥಿತಿಯಲ್ಲಿ ಶೇಖರಿಸಿಟ್ಟಾಗ, ಚಿಪ್ಪಿಗೆ ಅಂಟಿಕೊಂಡಿರುವ ಹಿಕ್ಕೆ ಮೊದಲಾದ ಕೊಳಕು ಪದಾರ್ಥಗಳು ಏಕಾಣುಜೀವಿ ಕೆಡುಬೆರಕೆಗೆ ಮಾರ್ಗಮಾಡಿಕೊಡುತ್ತವೆ. ಬಿರುಕುಬಿಟ್ಟ ಚಿಪ್ಪು ಏಕಾಣುಜೀವಿ ಮೊಟ್ಟೆಯೊಳಕ್ಕೆ ಹೋಗಿ ಕೆಡುಬೆರಕೆಯಾಗಲು ಆಸ್ಪದ ಕೊಡಬಹುದು. ಏಕಾಣುಜೀವಿ ವಿಭಜನೆ ಮುಂದುವರಿದರೆ ಒಂದಲ್ಲ ಒಂದು ರೀತಿಯ ಕೊಳೆತ ಪ್ರಾರಂಭವಾಗುತ್ತದೆ. ಇಂತಹ ಕೆಡುಬೆರಕೆಯಾದ ಮೊಟ್ಟೆಗಳು ಆಹಾರಕ್ಕೆ ಯೋಗ್ಯವಾದುವಲ್ಲ.

ಇತರ ವಾಸನೆಗಳ ಹೀರಿಕೆ: ಮೊಟ್ಟೆ ಚಿಪ್ಪು ಮತ್ತು ಚಿಪ್ಪು ಪದರಗಳ ಸರಂಧ್ರ ಗುಣದಿಂದ ವಾಸನೆಗಳು ಹಾಗೂ ಸ್ವಾದಗಳು ಒಳಕ್ಕೆ ಹೋಗಿ ಮೊಟ್ಟೆ ಘಟಕಗಳನ್ನು ಹೊಲಗೆಡಿಸುವ ಸಾಧ್ಯತೆ ಉಂಟು. ಆದ್ದರಿಂದ ಉಗ್ರವಾಸನೆ ಇರುವ ಪದಾರ್ಥಗಳೊಂದಿಗೆ ಮೊಟ್ಟೆ ಸಂಪರ್ಕ ಹೊಂದಬಾರದು.

ಉತ್ತಮ ಗುಣದ ಮೊಟ್ಟೆಗಳ ಉತ್ಪಾದನೆ: ಮೊಟ್ಟೆ ಇಟ್ಟನಂತರ ಅದರ ಗುಣವನ್ನು ಉತ್ತಮಗೊಳಿಸುವುದು ಸಾಧ್ಯವಿಲ್ಲ. ಆದುದರಿಂದ ಕೋಳಿಗುಂಪಿನ ಮಾಲೀಕರು, ಉತ್ತಮ ಮಟ್ಟದ ಮೊಟ್ಟೆಗಳ ಉತ್ಪನ್ನವನ್ನು ಖಚಿತಗೊಳಿಸುವ ಕ್ರಮಗಳನ್ನು ಕೈಗೊಳ್ಳಬೇಕಾದುದು ಅವಶ್ಯಕ. ಸರಿಯಾದ ತಳಿಎಬ್ಬಿಸುವಿಕೆ, ಮೇಯಿಸುವಿಕೆ ಮತ್ತು ನಿರ್ವಹಣಾ ಅಭ್ಯಾಸಗಳನ್ನು ಅನುಸರಿಸುವುದರಿಂದ ಅತ್ಯುತ್ತಮ ಮಟ್ಟದ ಮೊಟ್ಟೆಗಳನ್ನು ಉತ್ಪಾದಿಸುವುದು ಸಾಧ್ಯ. ನಂತರ ಸರಿಯಾದ ಶೇಖರಣೆ, ಜೋಡಣೆ ಹಾಗೂ ಸಾಗಾಣಿಕೆಗಳೂ ಅಪೇಕ್ಷಣೀಯ ಗುಣಗಳನ್ನು ಸಾಧ್ಯವಾದ ಮಟ್ಟಿಗೂ ಉಳಿಸಿಕೊಳ್ಳಲು ಸಹಾಯಮಾಡುತ್ತವೆ ಮತ್ತು ಹೆಚ್ಚಿನ ನಷ್ಟವನ್ನು ತಡೆಗಟ್ಟುತ್ತವೆ. ಈ ರೀತಿಯ ವ್ಯವಸ್ಥೆಗಳಿಲ್ಲದಿದ್ದರೆ ಬಹಳ ನಷ್ಟವಾಗುತ್ತದೆ.

ಮೊಟ್ಟೆಗಳನ್ನು ನಿರ್ವಹಿಸುವುದು: ಕೋಳಿಗಳನ್ನು ದೊಡ್ಡ ಪ್ರಮಾಣದಲ್ಲಿ ಸಾಕಿದಾಗ ಮೊಟ್ಟೆಗಳನ್ನು ಚಳಿಗಾಲದಲ್ಲಿ ದಿನಕ್ಕೆ ಕನಿಷ್ಠಪಕ್ಷ ಮೂರುಸಾರಿ, ಬೇಸಿಗೆಯಲ್ಲಿ ಸಾಧ್ಯವಾದಷ್ಟು ಸಾರಿ ಸಂಗ್ರಹಿಸಬೇಕು. ಇದು ಮೊಟ್ಟೆಗಳು ಕೊಳೆಯಾಗುವುದು ಗೂಡಿನಲ್ಲೇ ಒಡೆದುಹೋಗುವುದು ಅಥವಾ ಕಾವೇರುವುದನ್ನು ತಪ್ಪಿಸುತ್ತದೆ.

ತಂತಿಬುಟ್ಟಿಗಳು, ಸರಂಧ್ರ ಬಕೀಟು, ಉತ್ತಮ ವಾತಾಯನವುಳ್ಳ ಮರದ ಪೆಟ್ಟಿಗೆ ಅಥವಾ ಬುಟ್ಟಿಗಳು ಮೊಟ್ಟೆಗಳನ್ನಿಡಲು ಅತ್ಯುತ್ತಮವಾದವುಗಳು. ಸಾಮಾನ್ಯ ಲೋಹದ ಬಕೀಟುಗಳು ಅಥವಾ ಮರದ ಪೆಟ್ಟಿಗೆಗಳಲ್ಲಿಟ್ಟ ಮೊಟ್ಟೆಗಳಿಗಿಂತ ಇಂತಹವುಗಳಲ್ಲಿಟ್ಟ ಮೊಟ್ಟೆಗಳು ಎರಡರಷ್ಟು ವೇಗವಾಗಿ ವಾತಾವರಣದ ಶಾಖಕ್ಕೆ ತಣ್ಣಗಾಗುತ್ತವೆ. ಉತ್ತಮ ಮೊಟ್ಟೆವಾಹಕದ ಪಕ್ಕ ಹಾಗೂ ತಳಗಳು ಗಟ್ಟಿಯಾಗಿರಬೇಕು. ಇದರಲ್ಲಿ ಮೊಟ್ಟೆ ತುಂಬಿ ಹಿಡಿ ಹಿಡಿದು ಎತ್ತಿದಾಗ ಮೊಟ್ಟೆಗಳು ಒಡೆಯುವಂತೆ ಬಗ್ಗಬಾರದು.

ಕೊಳಕು ಮೊಟ್ಟೆಗಳು: ಕೊಳಕು ಮೊಟ್ಟೆಗಳನ್ನು ಮಾರಬಾರದು. ಇತರ ಆಹಾರ ಪದಾರ್ಥಗಳಂತೆಯೇ ಮೊಟ್ಟೆಗಳೂ ಅವುಗಳ ನೋಟದಿಂದ ಹೆಚ್ಚಾಗಿ ವ್ಯಾಪಾರ ವಾಗುತ್ತವೆ. ಆದುದರಿಂದ ಅವು ಒಂದು ಚುಕ್ಕೆಯೂ ಇಲ್ಲದಷ್ಟು ಸ್ವಚ್ಛವಾಗಿರಬೇಕು. ಮೊಟ್ಟೆಗಳು ಸ್ವಲ್ಪ ಕೊಳೆಯಾಗಿದ್ದಾಗ ಸ್ವಚ್ಛವಾದ ತೇವದ ಬಟ್ಟೆಯಿಂದ ಒರಸಿ ಸ್ವಚ್ಛಮಾಡಬಹುದು. ಮೊಟ್ಟೆಗಳನ್ನು ತೊಳೆಯುವುದರಿಂದ ಅದರ ಮೇಲಿನ ರಕ್ಷಕಪರೆ ಹೋಗಿ ಅದರೊಳಗಿನ ನೀರಿನಂಶ ಹೆಚ್ಚಾಗಿ ಆವಿಯಾಗುತ್ತದೆ. ಹೆಚ್ಚಿನ ಕೊಳೆಯನ್ನು ಹೋಗಲಾಡಿಸಲು ತೊಳೆಯುವುದಕ್ಕಿಂತ ಉಕ್ಕಿನ ತಂತಿ ಬ್ರಷ್, ನವುರಾದ ಉಪ್ಪು ಕಾಗದ ಅಥವಾ ಕುರುಂದದ ಪುಡಿ ಹಚ್ಚಿದ ಬಟ್ಟೆ ಉತ್ತಮ. ದೊಡ್ಡ ಉತ್ಪಾದನಾ ಅಥವಾ ಸಂಗ್ರಹಾಲಯಗಳಲ್ಲಿ ಯಾಂತ್ರಿಕವಾಗಿ ಸ್ವಚ್ಛಮಾಡುವುದು ಸಮಯವನ್ನೂ ಉಳಿಸುತ್ತದೆ ಮತ್ತು ಪರಿಣಾಮಕಾರಿಯಾಗುತ್ತದೆ.

ಸ್ವಚ್ಛ ಮೊಟ್ಟೆಗಳ ಉತ್ಪಾದನೆ ಮತ್ತು ಧೂಳು ತಡೆಗಟ್ಟಲು ಸ್ವಚ್ಛ ಲಿಟ್ಟರ್ ಮತ್ತು ಸ್ವಚ್ಛ ಗೂಡುಗಳು ಅವಶ್ಯಕ. ಪ್ರತಿ 5 ಅಥವಾ 6 ಹೇಂಟೆಗಳಿಗೆ ಒಂದು ಗೂಡು ಒದಗಿಸಬೇಕು ಲಿಟ್ಟರ್ ಒಣಸ್ಥಿತಿಯಲ್ಲಿಡುವುದು ಬಹುಮುಖ್ಯ.

ಮೊಟ್ಟೆಗುಣರಕ್ಷಣೆ: ಮೊಟ್ಟೆಗಳ ಗುಣವನ್ನು ಸಾಧ್ಯವಾದಮಟ್ಟಿಗೂ ಹೊಸ ದಾಗಿ ಇಟ್ಟಾಗಿನ ಮಟ್ಟದಲ್ಲಿ ಉಳಿಸಿಕೊಳ್ಳುವುದು ಮಾರಾಟದ ದೃಷ್ಟಿಯಿಂದ ಬಹು ಮುಖ್ಯವಾದುದು. ಆದಾಗ್ಯೂ ಈ ಸಮಸ್ಯೆಗೆ ಅನೇಕ ತೊಡಕುಗಳಿವೆ. ಅದರಲ್ಲೂ ಹಳ್ಳಿ ಪರಿಸ್ಥಿತಿಯ ಮೊಟ್ಟೆ ಉತ್ಪಾದನೆಯಲ್ಲಿ ಈ ರೀತಿ ತೊಂದರೆಗಳು ಬಹಳ. ಮೊಟ್ಟೆಗಳನ್ನು ರಕ್ಷಿಸಲು ಈ ಕೆಳಗಿನ ಪದ್ಧತಿಗಳು ಉಪಯೋಗಕಾರಿ.

ಅಫಲೀಕೃತ ಮೊಟ್ಟೆಗಳ ಉತ್ಪಾದನೆ: ಮೊಟ್ಟೆ ಉತ್ಪಾದನೆಯಾದ ಘಳಿಗೆಯಿಂದ ಮೊಟ್ಟೆಗುಣರಕ್ಷಣೆಕಾರ್ಯ ಪ್ರಾರಂಭವಾಗುತ್ತದೆ. ಫಲೀಕೃತ ಮೊಟ್ಟೆಗಳ ಬದಲಿಗೆ ಅಫಲೀಕೃತ ಮೊಟ್ಟೆಗಳ ಉತ್ಪಾದನೆ ಮೊಟ್ಟೆಗುಣರಕ್ಷಣೆಯಲ್ಲಿ ಹೆಚ್ಚಿನ ಸಹಾಯ ಮಾಡುತ್ತದೆ. ತಳಿಎಬ್ಬಿಸುವ ಕಾಲದಲ್ಲಿ ಬಿಟ್ಟು ಬೇರೆಕಾಲದಲ್ಲಿ ಹುಂಜಗಳನ್ನು ಹೇಂಟೆ ಗಳಿಂದ ದೂರವಿಡುವುದರಿಂದ ಇದನ್ನು ಸಾಧಿಸಬಹುದು. ಹೇಂಟೆಗಳು ಮೊಟ್ಟೆ ಇಡಲು ಹುಂಜಗಳು ಅವಶ್ಯಕ ಎಂಬ ತಪ್ಪು ಅಭಿಪ್ರಾಯ ಕೆಲವರಿಗಿದೆ. ಹೇಂಟೆ ಗಳು ಹುಂಜಗಳಿಲ್ಲದೆಯೂ ಮೊಟ್ಟೆಗಳನ್ನಿಡುತ್ತವೆ; ಅಂತಹ ಮೊಟ್ಟೆಗಳು ಫಲೀಕರಿಸು ವುದಿಲ್ಲ. ಬೇಸಿಗೆ ಪ್ರಾರಂಭವಾದ ಕೂಡಲೆ ವಾತಾವರಣದ ಪರಿಸ್ಥಿತಿ ಸೂಕ್ತವಾಗುವ ವರೆಗೆ ಸಾಧ್ಯವಾದ ಕಡೆಗಳಲ್ಲೆಲ್ಲ ಹುಂಜಗಳನ್ನು ಹೇಂಟೆಗಳಿಂದ ಪ್ರತ್ಯೇಕಿಸಬೇಕು. ಆದಾಗ್ಯೂ ಇಂದು ಹಳ್ಳಿಗಳಲ್ಲಿ ಕೋಳಿ ಸಾಕುತ್ತಿರುವ ರೀತಿಯಲ್ಲಿ ಇದು ಎಲ್ಲ ಕಾಲ ದಲ್ಲೂ ಸಾಧ್ಯವಲ್ಲ. ಸ್ವಲ್ಪಕಾಲ ಕೂಡ ಹುಂಜಗಳನ್ನು ಹೇಂಟೆಗಳಿಂದ ದೂರ ಮಾಡುವುದು ಸಾಧ್ಯವಿಲ್ಲದ ಕಡೆ, ಮೊಟ್ಟೆಗಳ ಅಫಲೀಕರಣವನ್ನು ಶಿಫಾರಸ್ಸು ಮಾಡಲಾಗಿದೆ.

ಅಫಲೀಕರಣ: 135°F ನಿಂದ 140°F ನ ಒಳಗಿನ ಶಾಖದಲ್ಲಿರುವ ನೀರಿನಲ್ಲಿ ಮೊಟ್ಟೆಗಳನ್ನು 15 ನಿಮಿಷಕಾಲ ಇಡುವುದರಿಂದ ಅಫಲೀಕರಣವನ್ನು ಮಾಡಬಹುದು.

ಮೊಟ್ಟೆಯ ಘಟಕಗಳಿಗೆ ಯಾವುದೇ ರೀತಿಯ ತೊಂದರೆಯನ್ನೂ ಮಾಡದೆ ಒಳಗಿನ ಭ್ರೂಣವನ್ನು ಮಾತ್ರ ಕೊಲ್ಲಲು ಈ ಶಾಖ ಸರಿಯಾದುದು. ಅಫಲೀಕರಣಗೊಂಡ ಮೊಟ್ಟೆಗಳಲ್ಲಿ ಭ್ರೂಣದ ಬೆಳವಣಿಗೆ ಆಗುವುದು ಸಾಧ್ಯವಿಲ್ಲದಿರುವುದರಿಂದ ಇವು ಅಫಲೀಕೃತ ಮೊಟ್ಟೆಗಳಷ್ಟೇ ಉತ್ತಮವಾದವು. ಅಫಲೀಕರಣಗೊಂಡ ಮೊಟ್ಟೆಗಳು ಹೆಚ್ಚುಕಾಲ ಮತ್ತು ಉತ್ತಮವಾಗಿ ಉಳಿಯುತ್ತವೆ.


ಒಂದು ಉದ್ದವಾದ ಅಗಲ ಬಾಯಿ ತವರ ಅಥವಾ ಅಲ್ಯುಮಿನಿಯಂನ ಸಾಮಾನ್ಯ ಡಬ್ಬದಲ್ಲಿ $\frac{2}{3}$ ಭಾಗ ನೀರು ತುಂಬಿ ಒಲೆಯ ಮೇಲೆ ಕಾಯಿಸಲಾಗುತ್ತದೆ. ಬೆರಳನ್ನು 10 ಸೆಕೆಂಡಿಗೂ ಹೆಚ್ಚುಕಾಲ ಅದರಲ್ಲಿ ಅದ್ದಿದಾಗ ಸುಡುವ ಅನುಭವ ವಾದಾಗ ಶಾಖ 135°F ಆಗಿರಬಹುದೆಂದು ತೀರ್ಮಾನಿಸಬಹುದು. ಸರಿಯಾದ ಶಾಖವನ್ನು ಉಷ್ಣಮಾಪಕದ ಸಹಾಯದಿಂದ ಗುರುತಿಸುವುದು ಸಾಧ್ಯವಾದರೆ ಉತ್ತಮ. ಈ ಸಂದರ್ಭದಲ್ಲಿ ಡಬ್ಬದ ಮೇಲೆ ಮುಚ್ಚಳಮುಚ್ಚಿ ಕೆಳಗಿಳಿಸಬೇಕು. ಅಫಲೀಕರಣಗೊಳಿಸಬೇಕಾದ ಮೊಟ್ಟೆಗಳನ್ನು ತೆರೆದ ಬುಟ್ಟಿಯಲ್ಲಿಟ್ಟು, ತಂತಿ ಬುಟ್ಟಿ ಯಾದರೆ ಮತ್ತೂ ಒಳ್ಳೆಯದು — ಮೊಟ್ಟೆಗಳು ಪೂರ್ಣವಾಗಿ ಮುಳುಗುವಂತೆ ಡಬ್ಬ ದಲ್ಲಿಡಬೇಕು. ಮೊಟ್ಟೆಗಳನ್ನು 15 ನಿಮಿಷಗಳಕಾಲ ಬಿಟ್ಟು ನಂತರ ತಂಪಾದ ಜಾಗದಲ್ಲಿ ಶೇಖರಿಸಿಡಬೇಕು. ಈ ಪದ್ಧತಿಯನ್ನು ಹಳ್ಳಿಯ ಸಹಕಾರಿ ಸಂಘಗಳಲ್ಲಿ ಸುಲಭವಾಗಿ ಅನುಸರಿಸಬಹುದು. ಒಂದು ಪಕ್ಕ ಕತ್ತರಿಸಿದ 4 ಗ್ಯಾಲನ್ ಅಳತೆಯ ಖಾಲಿ ಸೀಮೆಎಣ್ಣೆ ಡಬ್ಬವನ್ನು ಉಪಯೋಗಿಸಬಹುದು. ಇದು ದಿನಕ್ಕೆ 500 ಮೊಟ್ಟೆಗಳನ್ನು ಅಫಲೀಕರಣಗೊಳಿಸಲು ಸಾಕಾಗುತ್ತದೆ. ಇದಲ್ಲದೆ ಸಹಕಾರಿ ಸಂಘ ಗಳಲ್ಲಿ ತಂತಿಬುಟ್ಟಿಗಳು ಹಾಗೂ ಒಂದು ಉಷ್ಣಮಾಪಕ ಇಟ್ಟಿದ್ದರೆ ಸಾಕು. ಅಫಲೀಕರಣಗೊಂಡ ಮೊಟ್ಟೆಗಳು ಉತ್ಪಾದಕನಿಗೆ ಹೆಚ್ಚಿನ ಲಾಭ ತರುವ ನಿರೀಕ್ಷೆ ಇರುವುದರಿಂದ ಈ ಸಲಕರಣೆಗಳಿಗೆ ಮಾಡುವ ಅಲ್ಪ ವೆಚ್ಚ ಲಾಭದಾಯಕವಾದದ್ದು.

ಹೆಚ್ಚಿನ ಸಂಖ್ಯೆಯ ಮೊಟ್ಟೆಗಳೊಂದಿಗೆ ವ್ಯವಹರಿಸುವ ಸುವ್ಯವಸ್ಥಿತ ಮಾರುಕಟ್ಟೆ ಕೇಂದ್ರಗಳಲ್ಲಿ ಅಫಲೀಕರಣ ಮಾಡಬೇಕಾದ ಹೆಚ್ಚಿನ ಸಂಖ್ಯೆಯ ಮೊಟ್ಟೆಗಳನ್ನು ಅಲ್ಪವೆಚ್ಚದಿಂದ ಮತ್ತು ದಕ್ಷರೀತಿಯಲ್ಲಿ ಅಫಲೀಕರಿಸಲು ಸಾಧ್ಯವಾಗುವಂತೆ ದೊಡ್ಡ ಅಫಲೀಕರಣ ಕೇಂದ್ರವನ್ನು ಸ್ಥಾಪಿಸುವುದು ಅಪೇಕ್ಷಣೀಯ. ಯಾಂತ್ರಿಕವಾಗಿ ನೀರು ತಿರುಗಿಸುವ ಸಾಧ್ಯತೆ ಇರುವ ಕೆಲವು ನೀರಿನ ತೊಟ್ಟಿಗಳು, ವಿದ್ಯುತ್ತಿನಿಂದ ಕಾಯಿಸುವ ವ್ಯವಸ್ಥೆ (ಸಾಧ್ಯವಾದ ಕಡೆಗಳಲ್ಲಿ) ಮತ್ತು ಮೊಟ್ಟೆಗಳನ್ನು ಅದ್ದಲು ಕೆಲವು ತಂತಿಬುಟ್ಟಿ ಗಳನ್ನೊಳಗೊಂಡಂತೆ ಅಫಲೀಕರಣ ಕೇಂದ್ರಗಳನ್ನು ಕಡಮೆ ವೆಚ್ಚದಲ್ಲಿ ನಿರ್ಮಿಸಬಹುದು. ಇಂತಹ ಕೇಂದ್ರಕ್ಕೆ ಒಂದು ಶೀತಾಗಾರವನ್ನೂ ಸೇರಿಸುವುದು ಸಾಧ್ಯವಾದರೆ ಅದು ಮೊಟ್ಟೆ ಸಂರಕ್ಷಣೆಯ ಸಲಕರಣೆಗಳ ಅವಶ್ಯಕತೆಯನ್ನು ಪೂರೈಸುತ್ತದೆ.

ಮೊಟ್ಟೆಗಳ ಶೀತಲೀಕರಣ: 68°F ಗಿಂತಲೂ ಹೆಚ್ಚಿನ ಶಾಖ ಭ್ರೂಣದ ಬೆಳ ವಣಿಗೆಗೆ ಸಹಕಾರಿಯಾದುದರಿಂದ, ಮೊಟ್ಟೆಗುಣ ಬೇಗ ಹಾಳಾಗಲು ಕಾರಣವಾಗು

ತ್ತದೆ ಎಂದು ಆಗಲೇ ಹೇಳಲಾಗಿದೆ. 68°F ಗಿಂತ ಕಡಮೆ ಶಾಖ ಮೊಟ್ಟೆಗಳ ತಾಜಾತನವನ್ನು ದೀರ್ಘಗೊಳಿಸಲು ಸಹಕಾರಿಯಾಗುತ್ತದೆ. ಚಳಿಗಾಲದಲ್ಲಿ ಭ್ರೂಣದ ಬೆಳವಣಿಗೆಯನ್ನು ನಿಲ್ಲಿಸುವಷ್ಟು ಕೆಳಮಟ್ಟದ ಶಾಖವಿರುವ ಜಾಗಗಳಲ್ಲಿ ಮೊಟ್ಟೆಗಳನ್ನು ಶೀತಲಗೊಳಿಸುವ ಪ್ರತ್ಯೇಕ ವ್ಯವಸ್ಥೆ ಬೇಕಾಗಿಲ್ಲ. ಶೀತಾಗಾರಗಳು ಅತಿ ಸೂಕ್ತವಾದವುಗಳೆಂಬುದು ನಿರ್ವಿವಾದ; ಆದಾಗ್ಯೂ ಸುವ್ಯವಸ್ಥಿತ ಮೊಟ್ಟೆ ಮಾರಾಟ ಕೇಂದ್ರಗಳಿಲ್ಲದ ಕಡೆಗಳಲ್ಲಿ ಶೀತಲೀಕರಣದ ಅನುಕೂಲಗಳು ವೈಯಕ್ತಿಕ ಉತ್ಪಾದಕವನ್ನು ತಲುಪಬೇಕೆಂದು ನಿರೀಕ್ಷಿಸುವುದು ಅಸಾಧ್ಯ. ಸಾಧ್ಯವಾದಮಟ್ಟಿಗೂ ಶಾಖವನ್ನು ಕುಗ್ಗಿಸುವಂತಹ ಕೆಲವು ಸಾಮಾನ್ಯವಾದ ಗೃಹನಿರ್ಮಿತ ಸಲಕರಣೆಗಳನ್ನು ಉಪಯೋಗಿಸುವುದು ಸಾಧ್ಯ. ಹಳ್ಳಿ ಪರಿಸ್ಥಿತಿಗಳಲ್ಲಿ ಅನುಸರಿಸಬಹುದಾದ ಅಂತಹ ಕೆಲವು ಕಡಮೆ ವೆಚ್ಚದ ವ್ಯವಸ್ಥೆಗಳನ್ನು ಕೆಳಗೆ ವಿವರಿಸಲಾಗಿದೆ:


ಶೀತ ಕೊಠಡಿ: ಎಲ್ಲ ಬಾಗಿಲುಗಳಿಗೂ ಒದ್ದೆ ಗೋಣಿಚೀಲಗಳನ್ನು ನೇತುಬಿಟ್ಟು ಮತ್ತು ನೆಲದ ಮೇಲೆ ಆಗಾಗ್ಗೆ ನೀರು ಚಿಮುಕಿಸಿ ಸಾಧ್ಯವಾದಮಟ್ಟಿಗೂ ಶಾಖವನ್ನು ಕಡಮೆಮಾಡಿರುವ ಕೊಠಡಿಯಲ್ಲಿ ಮೊಟ್ಟೆಗಳನ್ನಿಡಬೇಕು. ಚಾವಣಿಗೆ ಲಗತ್ತಿಸಿದ ವಿದ್ಯುತ್ ಪಂಖ ಕೊಠಡಿಯ ಶೈತ್ಯತೆಗೆ ಪೂರಕವಾಗುತ್ತದೆ.



ಚಿತ್ರ 139: ಮನೆಯಲ್ಲೇ ಮಾಡಿದ ಮೊಟ್ಟೆ ಶೀತಕಾರಕ.

ನೆಲಮಾಳಿಗೆ ಕೊಠಡಿ: ಸೂಕ್ತ ಕೊಠಡಿ ಇಲ್ಲದಿರುವ ಕಡೆ ನೆಲಮಾಳಿಗೆ ಕೊಠಡಿ ಅಥವಾ ತಗ್ಗು ಮೊಟ್ಟೆಗಳನ್ನಿಡಲು ಸಾಕಷ್ಟು ಕೆಳಮಟ್ಟದ ಶಾಖವನ್ನೊದಗಿಸ ಬಹುದು.

ಮಡಕೆ: ಒಂದುವಾರದ ಮೊಟ್ಟೆಗಳನ್ನು ಹಿಡಿಸುವಷ್ಟು ದೊಡ್ಡದಾದ ಮಡಕೆ ಯನ್ನು ಅರ್ಧದವರೆಗೆ ಮರಳಿನಲ್ಲಿ ಹೂತು ಆ ಮರಳಿನ ಮೇಲೆ ಆಗಾಗ್ಗೆ ನೀರು



ಚಿತ್ರ 140: ಗ್ರಾಮೀಣ ಪರಿಸ್ಥಿತಿಗಳಲ್ಲಿ ಕಡಮೆ ವೆಚ್ಚದಲ್ಲಿ ಮೊಟ್ಟೆ ಶೇಖರಿಸುವ ವಿಧಾನ.

ಚಿಮುಕಿಸುವುದರಿಂದ ಅದನ್ನು ತಣ್ಣಗಿಡಬಹುದು. ಜಿಸುಗಿಬಂದ ತೇವ ನೇರವಾಗಿ ಮೊಟ್ಟೆಗಳಿಗೆ ತಟ್ಟದಂತೆ ಮಡಕೆಯ ತಳದಲ್ಲಿ ಒಂದು ಪದರ ಸ್ವಚ್ಛವಾದ ಒಣ ಹುಲ್ಲನ್ನು ಹಾಸಬೇಕು. ಗಾಳಿ ಹಾಗೂ ತೇವಾಂಶ ಸರಾಗವಾಗಿ ಆಡುವಂತೆ ಮಡಕೆ ಬಾಯನ್ನು ರಂಧ್ರಯುತಮುಚ್ಚಳ ಅಥವಾ ಮಲ್‌ಬಟ್ಟೆಯಿಂದ ಮುಚ್ಚಬೇಕು

(ಚಿತ್ರ 140). ಮಡಕೆಯನ್ನು ಮನೆಯ ಒಳ್ಳೆಯ ವಾತಾಯನವಿರುವ ಹಾಗೂ ಚೆನ್ನಾಗಿ ಗಾಳಿಯಾಡುವ ಜಾಗದಲ್ಲಿಡಬೇಕು. ಈ ಸಾಮಾನ್ಯ ಸಲಕರಣೆ ಕನಿಷ್ಠ 10°F ನಷ್ಟು ಶಾಖವನ್ನು ಕಡಮೆಮಾಡಬಲ್ಲದು.

ಗೃಹನಿರ್ಮಿತ ಶೀತಕ: ಸ್ವಲ್ಪ ಹೆಚ್ಚಿನ ವೆಚ್ಚವನ್ನು ಭರಿಸುವುದು ಸಾಧ್ಯವಾಗುವುದಾದರೆ, ಉತ್ಪಾದಕನ ಮನೆ ಹಾಗೂ ಮೊಟ್ಟೆ ಮಾರಾಟವನ್ನೂ ಕೈಗೊಳ್ಳುವ ಹಳ್ಳಿಯ ಸಹಕಾರಿ ಸಂಘಗಳಲ್ಲಿ ಅಷ್ಟೇ ಪ್ರಭಾವಶಾಲಿಯಾದ ಆದರೆ ಹೆಚ್ಚು ಸ್ವಚ್ಛವಾದ ಗೃಹನಿರ್ಮಿತ ಶೀತಕವನ್ನು ಸ್ಥಾಪಿಸಬಹುದು. ಇದು ಎರಡು ಅಥವಾ ಹೆಚ್ಚಿಗೆ ಬಡುಗಳಿರುವ, ನಾಲ್ಕೂಕಡೆ ತೆರೆದಿರುವ 4 ಅಡಿ ಎತ್ತರದ 3 ಅಡಿ ಚಚೌಕವಾದ ಮರದಪಟ್ಟಿಗೆಯಿಂದಾಗಿರುತ್ತದೆ (ಚಿತ್ರ 139). ಚೌಕಟ್ಟಿನ ಮೇಲಿರುವ ನೀರಿನ ತಟ್ಟೆಯಲ್ಲಿ ಒಂದು ತುದಿ ಮುಳುಗಿರುವ ಒದ್ದೆ ಗೋಣಿತಾಟನ್ನು ನಾಲ್ಕೂ ಕಡೆಗಳಿಗೆ ಸುತ್ತಬೇಕು. ಚೌಕಟ್ಟಿನೊಳಗಿನ ಶಾಖ ಸಾಕಷ್ಟು ಕೆಳಮಟ್ಟದಲ್ಲಿದ್ದು ಮೊಟ್ಟೆಗಳು ಕೆಡದಂತಿರಲು ಸಹಾಯಮಾಡುತ್ತದೆ.

ಘನೀಕರಿಸಿದ ಮೊಟ್ಟೆಗಳು: ಅನುಕೂಲತೆಗಳಿದ್ದರೆ, ಘನೀಕರಿಸುವಿಕೆ ಮೊಟ್ಟೆ ರಕ್ಷಣೆಯ ಒಂದು ಅತ್ಯುತ್ತಮ ವಿಧಾನ. ಬಂಡಾರ ಮತ್ತು ಬಿಳಿಲೋಳೆಗಳನ್ನು ಪ್ರತ್ಯೇಕಿಸಿ ಇಲ್ಲವೆ ಬೆರಸಿ ಘನೀಕರಿಸಿ ರಕ್ಷಿಸಬಹುದು; ಇದು ಸೂಕ್ಷ್ಮಜೀವಾಣುಗಳ ಬೆಳವಣಿಗೆಯನ್ನು ತಡೆಗಟ್ಟುತ್ತದೆ. ಘನೀಕರಿಸಿದ ಮೊಟ್ಟೆಗಳು ಅವಲಂಬನೀಯ ಮತ್ತು ಇದನ್ನು ಐಸ್‌ಕ್ರೀಮ್, ಮಯೋನೀಸ್ ಮತ್ತು ಮಿಠಾಯಿಗಳಂತಹ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ವಿಶೇಷವಾಗಿ ಉಪಯೋಗಿಸುತ್ತಾರೆ.

ಒಣಗಿಸಿದ ಮೊಟ್ಟೆಗಳು: ಘನೀಕರಿಸುವುದಕ್ಕಿಂತ ಹೆಚ್ಚು ಸುಲಭವಾದ ಮೊಟ್ಟೆ ರಕ್ಷಣಾವಿಧಾನವೆಂದರೆ ಮೊಟ್ಟೆಗಳನ್ನು ಒಣಗಿಸುವುದು. ಒಣಗಿಸಿದ ಮೊಟ್ಟೆಗಳನ್ನು ಹೆಚ್ಚಿನ ಶಾಖದಲ್ಲೂ ಹಲವಾರು ತಿಂಗಳುಗಳ ಕಾಲ ದಾಸ್ತಾನು ಮಾಡಬಹುದು. ಈ ಗುಣದಿಂದಾಗಿ ಹಾಗೂ ಅವುಗಳಿಗೆ ಶೀತಕಾರಕಗಳ ಅವಶ್ಯಕತೆ ಇಲ್ಲದಿರುವುದರಿಂದ ಅವುಗಳನ್ನು ಹೆಚ್ಚುದೂರಗಳಿಗೆ ಸಾಗಿಸಬಹುದು. ಅತ್ಯಂತ ಲಾಭಕರವಾದ ಒಣಗಿಸಿದ ಮೊಟ್ಟೆಗಳ ರಫ್ತು ವ್ಯಾಪಾರವನ್ನು ಚೀನ ಬೆಳೆಸಿದೆ.

ಮೊಟ್ಟೆಗಳನ್ನು ಒಣಗಿಸಲು ಮೂರು ಪದ್ಧತಿಗಳಿವೆ: ಪಟ್ಟಿ ಸಿಂಪರಣೆ ಹಾಗೂ ತಟ್ಟೆ ಪದ್ಧತಿಗಳು; ಹಾಲನ್ನು ಒಣಗಿಸಲು ಉಪಯೋಗಿಸುವಂತಹುದೇ ಕ್ರಮವನ್ನು ಇದಕ್ಕೂ ಅನುಸರಿಸಬಹುದು. ಇಡೀ ಮೊಟ್ಟೆ ಇಲ್ಲವೆ ಬಂಡಾರ ಮತ್ತು ಬಿಳಿಲೋಳೆಗಳನ್ನು ಪ್ರತ್ಯೇಕವಾಗಿ ಒಣಗಿಸಬಹುದು. ಇಡೀ ಮೊಟ್ಟೆ, ಬೇಕರಿ ಉತ್ಪನ್ನಗಳಿಗೆ; ಬಂಡಾರ, ಪುಡಿಗಳಿಗೆ ಮತ್ತು ಬಿಳಿಲೋಳೆ ಮಿಠಾಯಿಗಳಿಗೆ ಉಪಯೋಗಕಾರಿ.

ಕೆಳಮಟ್ಟದ ಮೊಟ್ಟೆ ಉತ್ಪನ್ನ ಮತ್ತು ಅತೃಪ್ತಿದಾಯಕ ಮಾರುಕಟ್ಟೆ ಅನುಕೂಲತೆಗಳಿರುವ ಈಗಿನ ಕಾಲದಲ್ಲಿ ಘನೀಕರಣ ಮತ್ತು ಒಣಗಿಸುವಿಕೆಗಳಿಂದ ಮೊಟ್ಟೆ ರಕ್ಷಣೆ ಮತ್ತು ದಾಸ್ತಾನಿನ ಬಗ್ಗೆ ನಮಗೆ ಆಸಕ್ತಿಯಿಲ್ಲ.

ಮನೆಗಳಲ್ಲಿ ಮೊಟ್ಟೆ ರಕ್ಷಣೆ

ಮೊಟ್ಟೆಗಳನ್ನು ಸ್ವಲ್ಪಕಾಲ ದಾಸ್ತಾನುಮಾಡಲು ಸಾಮಾನ್ಯವಾಗಿ ಯಾವ ವಿಶೇಷ ಪದ್ಧತಿಗಳನ್ನೂ ಅನುಸರಿಸುವುದಿಲ್ಲ. ಮೊಟ್ಟೆಗಳನ್ನು ಬುಟ್ಟಿಗಳಲ್ಲಿಟ್ಟು ಮನೆಯ ತಂಪಾದ ಜಾಗದಲ್ಲಿಡಬೇಕು; ಕತ್ತಲೆಕೋಣೆ ಹೆಚ್ಚು ಸೂಕ್ತ.

ಕೆಲವು ಸಂದರ್ಭಗಳಲ್ಲಿ ಹಸಿಬೇವಿನ ಸೊಪ್ಪು (ಹೈದರಾಬಾದ್), ಹಸಿ ಶಿಶಮ್ ಎಲೆಗಳು (ಪಂಜಾಬ್ ಮತ್ತು ಉತ್ತರ ಪ್ರದೇಶ), ಉಪ್ಪುನೇರಳೆ ಸೊಪ್ಪು (ಪಂಜಾಬ್ ಮತ್ತು ಉತ್ತರ ಪ್ರದೇಶ), ಬತ್ತದ ಹೊಟ್ಟು ಅಥವಾ ತೌಡು (ಕೇರಳ), ಉಪ್ಪು (ಮದ್ರಾಸ್), ಆರ್ದ್ರ ಮರಳು (ಬಿಹಾರ್ ಮತ್ತು ಒರಿಸ್ಸ), ಇದ್ದಲಪುಡಿ ಅಥವಾ ಬೆಂದಸುಣ್ಣ(ಮಧ್ಯಪ್ರದೇಶ)ಗಳಂತಹ ಸ್ಥಳಜನ್ಯ ಪದಾರ್ಥಗಳನ್ನು ಮೊಟ್ಟೆಗಳ ದಾಸ್ತಾನಿಗೆ ಉಪಯೋಗಿಸುತ್ತಾರೆ. ಈ ಪದಾರ್ಥಗಳನ್ನು ಮೊಟ್ಟೆಗಳೊಂದಿಗೆ ಪೆಟ್ಟಿಗೆಯಲ್ಲಿ ಅಥವಾ ಕೊಠಡಿಯ ಒಂದು ಮೂಲೆಯಲ್ಲಿ ರಾಶಿಯಾಗಿ ಹಾಕುತ್ತಾರೆ. ಈ ಹೆಚ್ಚಿನ ಪದಾರ್ಥಗಳು ಹಳ್ಳಿಯಲ್ಲಿ ಬಿಟ್ಟಿಯಾಗಿ ಸಿಗುವುದಾದರೂ ಆಗಲೇ ಹೇಳಿದಂತೆ, ಈ ಪದಾರ್ಥಗಳ ಮೊಟ್ಟೆರಕ್ಷಣಾಶಕ್ತಿಯ ಬಗ್ಗೆ ತಿಳಿದಿರುವುದು ಅತ್ಯಲ್ಪ. ಉದಾಹರಣೆಗೆ ಹಸಿಬೇವಿನ ಸೊಪ್ಪು ಮೊಟ್ಟೆಗಳ ಮೇಲೆ ಶೀತಲ ಪ್ರಭಾವ ಬೀರುತ್ತದೆಂದು ಹೇಳಲಾಗಿದೆ. ಆದರೆ ಅದು ಮೊಟ್ಟೆಗಳಿಗೆ ಕಹಿ ವಾಸನೆಯನ್ನು ಕೊಡುತ್ತದೆ. ಬತ್ತದ ಹೊಟ್ಟು ಪ್ರಯೋಜನಕಾರಿಯೆಂದು ಹೇಳಲಾಗುತ್ತದೆ; ಆದರೆ ಸ್ವಲ್ಪ ತೇವಾಂಶ ವಿದ್ದರೂ ಮೊಟ್ಟೆಗಳಿಗೆ ವಿಶಿಷ್ಟವಾಸನೆ ಕೊಡುವುದರ ಜತೆಗೆ ಚಿಪ್ಪಿನ ಮೇಲೆ ಅಸಹ್ಯವಾದ ಮಚ್ಚೆಗಳನ್ನುಂಟುಮಾಡುತ್ತದೆ.

ಮೊಟ್ಟೆಗಳು ಧಾರಾಳವಾಗಿ ಸಿಗುತ್ತಿರುವ ಕಾಲದಲ್ಲಿ ಅವುಗಳ ರಕ್ಷಣೆ ಹಾಗೂ ಮೊಟ್ಟೆಗಳ ಅಭಾವವಿರುವ ಅಕಾಲದಲ್ಲಿ ಅವುಗಳ ಬಳಕೆ, ಕೋಳಿಗಳನ್ನು ಸಾಕಿರಲಿ ಇಲ್ಲದಿರಲಿ, ಒಳ್ಳೆಯ ಬುದ್ಧಿವಂತಿಕೆ. ರಕ್ಷಿಸಿ ಇಡಲು ಮೊಟ್ಟೆಗಳು ತಾಜಾ, ಸ್ವಚ್ಛ ಮತ್ತು ಅಫಲೀಕೃತ ಅಥವಾ ಅಫಲೀಕರಣಗೊಳಿಸಿದವುಗಳಾಗಿರಬೇಕು. ಮಿತವ್ಯಯಕಾರಿ ಹಾಗೂ ಪ್ರಭಾವಶಾಲಿಯಾದ ಮೂರು ವಿಧಾನಗಳನ್ನು ಕೆಳಗೆ ವಿವರಿಸಲಾಗಿದೆ:

ತೈಲರಕ್ಷಿತ ಮೊಟ್ಟೆಗಳು: ಮೊಟ್ಟೆಗಳನ್ನು ನಸು ಬಿಸಿಯಾದ ಎಣ್ಣೆಯಲ್ಲಿ ಅದ್ದಿ, ಒಳ್ಳೆಯ ಮೊಟ್ಟೆಗಳು ಹೆಚ್ಚುಕಾಲ ಚೆನ್ನಾಗಿರುವಂತೆ ಮಾಡುವ ಪದ್ಧತಿ ಮೊಟ್ಟೆ ರಕ್ಷಣೆಯ ಉತ್ತಮ ವಿಧಾನ. ಮೊಟ್ಟೆಗಳ ರಂಧ್ರಗಳನ್ನು ಮುಚ್ಚಿ ಆವಿಯಾಗುವಿಕೆ ಮತ್ತು ಇಂಗಾಲಾಮ್ಲಗಳ ನಷ್ಟವನ್ನು ತಡೆಗಟ್ಟುವುದು ಈ ರೀತಿ ಎಣ್ಣೆಯಲ್ಲಿ ಅದ್ದುವುದರ ಮೂಲ ಉದ್ದೇಶ. ಮೊಟ್ಟೆ ಇಟ್ಟಮೇಲೆ ಮಾರಾಟಕ್ಕೆ ಮೊದಲು ಸಾಧ್ಯವಾದಷ್ಟೂ ಬೇಗ ಈ ರೀತಿ ಎಣ್ಣೆಯಲ್ಲಿ ಅದ್ದಬೇಕು. ಎಣ್ಣೆ, ಬಣ್ಣ, ವಾಸನೆ ಮತ್ತು ರುಚಿ ಇಲ್ಲದ್ದಾಗಿರಬೇಕು. ಕೊಬ್ಬರಿ ಎಣ್ಣೆಯನ್ನು ಜಯಪ್ರದವಾಗಿ ಉಪಯೋಗಿಸಲಾಗಿದೆ.

ಸೋಡಿಯಂ ಸಿಲಿಕೇಟ್ ವಿಧಾನ: ಮನೆ ಉಪಯೋಗಕ್ಕಾಗಿ ಮೊಟ್ಟೆಗಳನ್ನು ರಕ್ಷಿಸುವ ವಿಧಾನಗಳಲ್ಲಿ ಸೋಡಿಯಂ ಸಿಲಿಕೇಟ್ ವಿಧಾನ ಅತ್ಯುತ್ತಮವಾದುದೆಂದು ಪರಿಗಣಿಸಲ್ಪಟ್ಟಿದೆ. 15 ಡಜನ್ ಮೊಟ್ಟೆಗಳನ್ನು ರಕ್ಷಿಸಲು ಬೇಕಾಗುವ ಪದಾರ್ಥ ಗಳೆಂದರೆ 8 ಗ್ಯಾಲನ್ ಹಿಡಿಯುವ ಮಡಕೆ ಅಥವಾ ಜಾಡಿ, ½ ಕ್ವಾರ್ಟ್ ಸೋಡಿಯಂ ಸಿಲಿಕೇಟ್ ಮತ್ತು 9 ಕ್ವಾರ್ಟ್ ಕುದಿದ ನೀರು.

ಕುದಿದ ನೀರು ಆರಿದ ಮೇಲೆ ಮಡಕೆ ಅಥವಾ ಜಾಡಿಗೆ ಬಗ್ಗಿಸಿ (ಮಡಕೆ ಅಥವಾ ಜಾಡಿ ಸ್ವಚ್ಛವಾಗಿರಬೇಕು), ಇದಕ್ಕೆ ಸೋಡಿಯಂ ಸಿಲಿಕೇಟ್ ಸೇರಿಸಿ ಒಂದು ಕಡ್ಡಿಯ ಸಹಾಯದಿಂದ ಚೆನ್ನಾಗಿ ಕಲಕಬೇಕು. ಎಲ್ಲ ಮೊಟ್ಟೆಗಳೂ ಸಂಪೂರ್ಣವಾಗಿ ಮುಳುಗುವಂತೆ ನಿಧಾನವಾಗಿ ಎಚ್ಚರಿಕೆಯಿಂದ ಮೊಟ್ಟೆಗಳನ್ನು ಒಳಕ್ಕಿಡಬೇಕು. ಜಾಡಿ ಅಥವಾ ಮಡಕೆಯ ಮೇಲೆ ಮುಚ್ಚಿ ತಂಪಾದ ಜಾಗದಲ್ಲಿಡಬೇಕು.

ಸುಣ್ಣದ ತಿಳಿಪದ್ಧತಿ: ಸುಣ್ಣದ ತಿಳಿ ತೃಪ್ತಿದಾಯಕವಾಗಿ ಸೋಡಿಯಂ ಸಿಲಿಕೇಟ್ ದ್ರಾವಣದ ಸ್ಥಾನವನ್ನಾಕ್ರಮಿಸಬಲ್ಲದು. 5 ಪೌಂಡ್ ಸುಣ್ಣವನ್ನು 10 ಪೌಂಡ್ ನೀರಿನಲ್ಲಿ ಬೆರೆಸಿ ಇದನ್ನು ತಯಾರಿಸಬಹುದು. ಮಿಶ್ರಣವನ್ನು ರಾತ್ರಿ ಎಲ್ಲ ತಿಳಿಗಟ್ಟಲು ಬಿಟ್ಟು ಮೇಲಿನ ತಿಳಿಯನ್ನು ಸೋಡಿಯಂ ಸಿಲಿಕೇಟ್ ದ್ರಾವಣದಂತೆಯೇ ಉಪ ಯೋಗಿಸಬಹುದು. ದ್ರಾವಣದ ಮೇಲೆ ಸ್ವಲ್ಪ ಖನಿಜ ತೈಲವನ್ನು ಹಾಕುವುದರಿಂದ ಆವಿಯಾಗುವಿಕೆಯನ್ನು ತಪ್ಪಿಸಬಹುದು. ಪಾತ್ರೆಯನ್ನು ತಂಪಾದ ಜಾಗದಲ್ಲಿಡಬೇಕು.

ಅಫಲೀಕೃತ ತಾಜಾ ಮೊಟ್ಟೆಗಳನ್ನು ಉಪಯೋಗಿಸಿದಲ್ಲಿ ಸೋಡಿಯಂ ಸಿಲಿಕೇಟ್ ದ್ರಾವಣ ಅಥವಾ ಸುಣ್ಣದ ತಿಳಿಯಲ್ಲಿ ರಕ್ಷಿಸಿದ ಮೊಟ್ಟೆಗಳು ಹಲವು ತಿಂಗಳು ಕಾಲ ಅತ್ಯುತ್ತಮ ಸ್ಥಿತಿಯಲ್ಲಿರುತ್ತವೆ. ಅವಶ್ಯಕತೆಗೆ ತಕ್ಕಂತೆ ಅವುಗಳನ್ನು ತೆಗೆದು ಕುದಿಸು ವುದೊಂದನ್ನು ಬಿಟ್ಟು ಬೇರಾವ ರೀತಿಯಲ್ಲಿ ಬೇಕಾದರೂ ಉಪಯೋಗಿಸಬಹುದು. ಸೂಜಿಯಿಂದ ಸಣ್ಣದೊಂದು ತೂತುಮಾಡದಿದ್ದಲ್ಲಿ ಕುದಿಸಿದಾಗ ಚಿಪ್ಪು ಒಡೆಯುತ್ತದೆ. ಸೋಡಿಯಂ ಸಿಲಿಕೇಟ್ ದ್ರಾವಣ ಅಥವಾ ಸುಣ್ಣದ ತಿಳಿಯಲ್ಲಿ ರಕ್ಷಿಸಬೇಕಾದ ಮೊಟ್ಟೆ ಗಳನ್ನು ತೊಳೆಯಬೇಕು.

ಮೊಟ್ಟೆಗಳ ದರ್ಜೆವಾರು ವಿಂಗಡಣೆ

ಸಾಮಾನ್ಯವಾಗಿ ಸಣ್ಣಮೊಟ್ಟೆಗಳಿಗಿಂತ ದೊಡ್ಡಮೊಟ್ಟೆಗಳಿಗೆ ಹೆಚ್ಚಿನ ಬೆಲೆ ಸಿಗುತ್ತದೆ; ಆದರೆ ಗಾತ್ರವನ್ನು ಬಿಟ್ಟರೆ ಮೊಟ್ಟೆಯ ಬೆಲೆ ಅದರ ಗುಣಮಟ್ಟವನ್ನು ಅವಲಂಬಿಸುತ್ತದೆ. ಚಿಪ್ಪಿನ ಹೊರಭಾಗ ಸ್ವಚ್ಛವಾಗಿ ಏನೂ ಕಲೆಗಳಿಲ್ಲದಂತಿರಬೇಕು. ಮೊಟ್ಟೆ ಸಹಜವಾದ ಆಕಾರ ಹಾಗೂ ರಚನೆಯಿಂದಿರಬೇಕು. 'ಬೆಳಕಿನ ಪರೀಕ್ಷೆ'ಯಿಂದ ಮಾತ್ರ ತೃಪ್ತಿದಾಯಕವಾಗಿ ತೀರ್ಮಾನಿಸಬಹುದಾದ ಒಳಗಿನ ಗುಣಮಟ್ಟ ರಕ್ತ ಚುಕ್ಕೆಗಳು ಅಥವಾ ಉಂಗುರಗಳಂತಹ ದೋಷಗಳಿಂದ ಮುಕ್ತವಾಗಿರಬೇಕು. ಬಂಡಾರ

ಮಧ್ಯದಲ್ಲಿರಬೇಕು; ಮಿತಪಾರದರ್ಶಕವಾಗಿ, ಮಂಕಾದ ಹೊರರೇಖೆಯನ್ನು ಹೊಂದಿದ್ದು ಅಕ್ಷದಲ್ಲಿ ಸುಲಭವಾಗಿ ಅಲುಗಾಡದಂತಿರಬೇಕು. ಅಗಲವಾದ ತುದಿಯಲ್ಲಿರುವ ಗಾಳಿ ಜಾಗ ಮೊಟ್ಟೆ ಹಳೆಯದಾದಂತೆ ದೊಡ್ಡದಾಗುತ್ತದೆ. ಆದುದರಿಂದ ತಾಜಾ ಮೊಟ್ಟೆ ಗಳಲ್ಲಿ ಗಾಳಿಜಾಗ ಚಿಕ್ಕದಾಗಿರಬೇಕು.

ದರ್ಜೆವಾರು ವಿಂಗಡಣೆಯ ಪ್ರಯೋಜನಗಳು: ವಿಶೇಷತಃ ಹಳ್ಳಿಪ್ರದೇಶಗಳಲ್ಲಿ, ಉತ್ಪಾದಕರು ಹಾಗೂ ಮಾರಾಟಗಾರರಿಂದ ಸಗಟು ಹಂಚಿಕೆದಾರರು ಗಾತ್ರವನ್ನು ಗಣನೆಗೆ ತೆಗೆದುಕೊಳ್ಳದೆ ಮೊಟ್ಟೆಗಳನ್ನು ಒಟ್ಟಿಗೆ ಕೊಂಡುಕೊಳ್ಳುವುದು ಸಾಮಾನ್ಯ ರೂಢಿ. ಗುಣಮಟ್ಟದ ಆಧಾರದ ಮೇಲೆ ಈ ಮೊಟ್ಟೆಗಳು ಸಗಟು ಹಂಚಿಕೆದಾರರಿಂದ ವಿಂಗಡಿಸಲ್ಪಟ್ಟು ದರ್ಜೆಗಳ ಮೇರೆಗೆ ವಿವಿಧ ಬೆಲೆಗಳಿಗೆ ಮಾರಲ್ಪಡುತ್ತವೆ. ಈ ಅಂಶದ ಮೇಲೆ ನಡೆಸಿದ ಮಾರಾಟದ ಸರ್ವೇಕ್ಷಣೆಯಿಂದ ಗ್ರಾಹಕನ ತುದಿಯಲ್ಲಿ ಹಂಚಿಕೆದಾರ ಮಾಡುವ ದರ್ಜೆವಾರು ವಿಂಗಡಣೆ ಶೇಕಡಾ 8ಕ್ಕೂ ಹೆಚ್ಚು ಭಾಗ ಪ್ರತಿಫಲಕ್ಕೆ ಕಾರಣವಾಗುತ್ತದೆ. ಗುಣಮಟ್ಟ ನಿಷ್ಕರ್ಷೆ ಹಾಗೂ ವಿಂಗಡಣೆಯಿಂದ ಬರುವ ಲಾಭ, ಹಂಚಿಕೆದಾರನ ಬದಲು ಉತ್ಪಾದಕನಿಗೆ ಬರಬೇಕಾದ್ದು ನ್ಯಾಯ. ಗ್ರಾಹಕ ಕೇಂದ್ರಗಳಿಗೆ ಕಳಿಸುವ ಮುನ್ನ ಮೊಟ್ಟೆಗಳನ್ನು ದರ್ಜೆವಾರು ವಿಂಗಡಿಸಿ ಪ್ಯಾಕ್ ಮಾಡುವುದರಿಂದ ಶೇಕಡಾ 15ರಿಂದ 20ರಷ್ಟು ಹೆಚ್ಚಿನ ಪ್ರತಿಫಲ ಪಡೆಯ ಬಹುದೆಂದು ಕಂಡುಬಂದಿದೆ. ಮೊಟ್ಟೆ ಮಾರಾಟ ಸರ್ವೇಕ್ಷಣೆ ವರದಿಯ ಪ್ರಕಾರ, ಸಾಗಾಣಿಕೆಯಲ್ಲಿ ಹಾಳಾಗುವ ಮೊಟ್ಟೆಗಳನ್ನು ಸ್ಥಳೀಯವಾಗಿ ತಾಜಾ ಎಂದು ಮಾರ ಬಹುದು ಮತ್ತು ದೂರದ ಮಾರುಕಟ್ಟೆಗೆ ಕಳುಹಿಸಿಕೊಟ್ಟಾಗ ಸಂಪೂರ್ಣವಾಗಿ ಉಪ ಯೋಗಕ್ಕೆ ಅನರ್ಹವಾಗುವ ಸ್ವಲ್ಪ ಬಿರುಕು ಬಿಟ್ಟ, ಸ್ವಲ್ಪ ಹಳೆಯದಾದ ಮೊಟ್ಟೆ ಗಳನ್ನು ಸ್ಥಳೀಯವಾಗಿ ಯುಕ್ತಬೆಲೆಗೆ ಮಾರುವುದರಿಂದ ಈ ಶೇಕಡಾ 15ರಿಂದ 20ರಷ್ಟು ಹೆಚ್ಚು ಪ್ರತಿಫಲ ಬರುತ್ತದೆ. ವಿಂಗಡಿಸಿದ ಮೊಟ್ಟೆಗಳಿಗೆ ಹೆಚ್ಚಿನ ಲಾಭ ಬರುವುದರ ಜೊತೆಗೆ ತಾಜಾ ಅಲ್ಲದ ಹಾಗೂ ಒಡೆದ ಮೊಟ್ಟೆಗಳನ್ನು ಸ್ಥಳದಲ್ಲೇ ಉಳಿಸಿಕೊಳ್ಳುವುದರಿಂದ ಸಾಗಾಣಿಕಾ ವೆಚ್ಚದಲ್ಲಿ ಉಳಿತಾಯವಾಗುತ್ತದೆ.

ನಿರ್ದಿಷ್ಟ ದರ್ಜೆಗಳು: ವ್ಯವಸ್ಥಿತ ದರ್ಜೆವಾರು ವಿಂಗಡಣೆಯನ್ನು ನಿರ್ದಿಷ್ಟ ದರ್ಜೆಗಳ ಆಧಾರದ ಮೇಲೆ ಮಾಡಬೇಕು (ಚಿತ್ರ141). ಪ್ರಥಮ ದರ್ಜೆಯ ಮೊಟ್ಟೆಗಳು ಎಲ್ಲ ಕಡೆಗಳಲ್ಲೂ ಅದೇ ಹೆಸರಿನಿಂದ ಕರೆಯಲ್ಪಡಬೇಕು; ಅದೇ ರೀತಿ ಎರಡನೆ ಹಾಗೂ ಮೂರನೆ ದರ್ಜೆ ಮೊಟ್ಟೆಗಳು ನಿರ್ದಿಷ್ಟ ಗುರುತುಗಳನ್ನು ಹೊಂದಿರ ಬೇಕು ಹಾಗೂ ಇದು ಎಲ್ಲ ಗ್ರಾಹಕರಿಗೂ ಗೊತ್ತಿರಬೇಕು. ಭಾರತ ಸರ್ಕಾರ, ವ್ಯವಸಾಯ ಉತ್ಪನ್ನ (ದರ್ಜೆವಾರು ವಿಂಗಡಣೆ ಮತ್ತು ಮಾರಾಟ) ಕಾನೂನು 1937ರಲ್ಲಿ ಅಗ್‌ಮಾರ್ಕ್ ಮೊಟ್ಟೆಗಳಿಗೆ ವಿಶೇಷ 'ಎ' ದರ್ಜೆ, 'ಬಿ' ದರ್ಜೆ ಹಾಗೂ 'ಸಿ' ದರ್ಜೆಗಳೆಂದು ಹೆಸರುಕೊಟ್ಟು ಕಾನೂನು ಮಾಡಿದೆ.

ಸರ್ಕಾರಿ ಕೇಂದ್ರಗಳಲ್ಲಿ ಹಾಗೂ ಇರುವ ಕೆಲವು ಮಾರಾಟ ಕೇಂದ್ರಗಳಲ್ಲಿ ಅಗ್‌ಮಾರ್ಕ್ ದರ್ಜೆವಾರು ವಿಂಗಡಣೆ ಬಿಟ್ಟು ಹಳ್ಳಿಗಳಲ್ಲಿ ಈ ದಿಸೆಯಲ್ಲಿ ಏನೂ



ಚಿತ್ರ 141: ಮೊಟ್ಟೆಗಳ ದರ್ಜೆವಾರು ವಿಂಗಡಣೆ.

ಕೆಲಸವಾಗಿಲ್ಲ. ಕೋಳಿಸಾಕಾಣಿಕೆ ಲಾಭದಾಯಕವಾದ ಗೃಹಕೈಗಾರಿಕೆಯಾಗಿ ಅಭಿವೃದ್ಧಿ ಹೊಂದಲು ಈಗಿರುವುದಕ್ಕಿಂತ ಉತ್ತಮವಾದ ಮಾರಾಟದ ವ್ಯವಸ್ಥೆ ಬಹು ಅವಶ್ಯಕ. ಈ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಗ್ರಾಮೀಣ ಸಹಕಾರಿ ಸಂಸ್ಥೆಗಳು ಸರಿಯಾದವುಗಳು: ಹೆಚ್ಚಿನ ಲಾಭ ಬರಲು ಅವರ ಮೂಲಕ ಮಾರಾಟವಾಗುವ ಎಲ್ಲ ಮೊಟ್ಟೆಗಳ ದರ್ಜೆವಾರು ವಿಂಗಡಣೆ ಅವಶ್ಯಕ.

ಅಗ್‌ಮಾರ್ಕ್ ಪ್ರಮಾಣದ ದರ್ಜೆಗಳು: ವ್ಯವಸಾಯ ಉತ್ಪನ್ನಗಳ ನಿಯಮಾವಳಿ 1937ರಲ್ಲಿ ಹೇಳಲಾದ ವಿವಿಧ **ಅಗ್‌ಮಾರ್ಕ್** ದರ್ಜೆಗಳು ಮತ್ತು **ಅಗ್‌ಮಾರ್ಕ್** ಮೊಟ್ಟೆಗಳನ್ನು ವಿಂಗಡಿಸುವ ವಿಧಾನಗಳನ್ನು ಭಾರತ ಮತ್ತು ಬರ್ಮಾಗಳಲ್ಲಿ ಮೊಟ್ಟೆಗಳ ಮಾರಾಟಕ್ಕೆ ಸಂಬಂಧಿಸಿದಂತೆ 'ಭಾರತದಲ್ಲಿ ವ್ಯವಸಾಯ ಮಾರುಕಟ್ಟೆಗಳ ವರದಿ'ಯನ್ನು ಮುಂದಿನ ಪುಟದಲ್ಲಿ ಉಲ್ಲೇಖಿಸಲಾಗಿದೆ (ಮಾರಾಟ ಶ್ರೇಣಿಗಳು ಸಂ. 9, 1938). **ಅಗ್‌ಮಾರ್ಕ್** ವಿವರಗಳನ್ನೂ ಕೆಳಗೆ ಕೊಡಲಾಗಿದೆ:

ಭಾರತದಲ್ಲಿ ಉತ್ಪನ್ನವಾಗುವ ಮೊಟ್ಟೆಗಳ (ಕೋಳಿ ಮತ್ತು ಬಾತುಕೋಳಿ) ದರ್ಜೆಹೆಸರು ಹಾಗೂ ಗುಣಮಟ್ಟದ ವಿವರಣೆ

ದರ್ಜೆ ಹೆಸರು	ಗುಣಮಟ್ಟದ ವಿವರಣೆ			
	ಕೋಳಿಮೊಟ್ಟೆಗಳು		ಬಾತುಕೋಳಿ ಮೊಟ್ಟೆಗಳು	
	ಕನಿಷ್ಠ* ತೂಕ (ಔನ್ಸ್)	ಸ್ಥಿತಿ	ಕನಿಷ್ಠ ತೂಕ (ಔನ್ಸ್)	ಸ್ಥಿತಿ
ವಿಶೇಷ	$1-\frac{7}{8}$	ಮೊಟ್ಟೆಗಳನ್ನು ಯಾವುದೇ ವಿಧಾನದಿಂದ ಶೇಖರಿಸಿರಬಾರದು; ವಾಸನೆ ಇಲ್ಲದಿರಬೇಕು. ಚಿಪ್ಪು ಸ್ವಚ್ಛವಾಗಿ ಕಲೆ ಇಲ್ಲದೆ ದೃಢವಾಗಿ ಸರಿಯಾದ ಆಕಾರ ಹೊಂದಿರಬೇಕು. ಒಳಗಿನ ಪದಾರ್ಥಗಳು ದೋಷರಹಿತವಾಗಿರಬೇಕು. ಬಂಡಾರ ಮಧ್ಯದಲ್ಲಿರಬೇಕು. ಮಿತಪಾರದರ್ಶಕ ಅಥವಾ ಸ್ಪಷ್ಟವಾಗಿಲ್ಲದೆ ಮಸುಕಾಗಿ ಕಾಣುವಂತಿದ್ದು ಅಲುಗಾಡುವಂತಿರಬೇಕು; ಬಿಳಿಲೋಳೆ ಮಿತಪಾರದರ್ಶಕವಾಗಿ ಸ್ವಚ್ಛವಾಗಿರಬೇಕು ಮತ್ತು ಗಾಳಿಜಾಗ ಅಂಗುಲದ $\frac{1}{8}$ ಭಾಗಕ್ಕಿಂತ ಹೆಚ್ಚಿರಬಾರದು.	$2\frac{1}{2}$	ಮೊಟ್ಟೆಗಳನ್ನು ಯಾವುದೇ ವಿಧದಿಂದ ಶೇಖರಿಸಿರಬಾರದು. ಚಿಪ್ಪು ಯಾವುದೇ ರೀತಿಯ ಕಲೆ ಇಲ್ಲದೆ ಸ್ವಚ್ಛವಾಗಿ ದೃಢವಾಗಿರಬೇಕು. ಬಂಡಾರ ಮಧ್ಯದಲ್ಲಿದ್ದು ಕಾಣುವಂತಿರಬೇಕು, ಆದರೆ ಸಾಂದ್ರವಾಗಿರಬಾರದು ಮತ್ತು ಅಲುಗಾಡುವಂತಿರಬೇಕು. ಬಿಳಿಲೋಳೆ ಮಿತಪಾರದರ್ಶಕವಾಗಿದ್ದು ನೀರಿನಂತಿರದೆ ಗಟ್ಟಿಯಾಗಿರಬೇಕು.
A	$1-\frac{3}{4}$		$2\frac{1}{2}$	
B	$1-\frac{1}{2}$		2	
C	$1-\frac{1}{4}$		$1\frac{3}{4}$	

*ವಿಂಗಡಿಸುವಲ್ಲಿ ಆಕಸ್ಮಿಕವಾಗಿ ಆಗಬಹುದಾದ ತಪ್ಪಿಗಾಗಿ ಯಾವುದೇ ಮೊಟ್ಟೆಯಲ್ಲಿ 1 ಡ್ರಾಂ ತೂಕದ ವ್ಯತ್ಯಾಸವನ್ನು ಮಾಫಿಮಾಡಬಹುದು.

ಗುಣಮಟ್ಟದ ವಿವರಣೆ*

ಮೇಲಿನ ಪಟ್ಟಿಯ 3ನೇ ಕಾಲಂನಲ್ಲಿ 'ಅಗ್‌ಮಾರ್ಕ್' ಮೊಟ್ಟೆಗಳ ಒಳಗಿನ ಗುಣಮಟ್ಟದ ತಪಶೀಲು ಕೊಡಲಾಗಿದೆ. ಅವುಗಳು ದೊಡ್ಡ ಮತ್ತು ಸಣ್ಣ ಮೊಟ್ಟೆ

*ಇಲ್ಲಿ ಉಪಯೋಗಿಸಿದ ಕೆಲವು ಪದಗಳು "ಹ್ಯಾಂಡ್ ಬುಕ್ ಆಫ್ ಅಫಿಷಿಯಲ್ ಯುನೈಟೆಡ್ ಸ್ಟೇಟ್ಸ್ ಸ್ಟ್ಯಾಂಡರ್ಡ್ಸ್ ಫಾರ್ ಇಂಡಿವಿಜುಯಲ್ ಎಗ್" ಎಂಬ ಪುಸ್ತಕದಿಂದ ಎರವು ಪಡೆದವುಗಳಾಗಿವೆ.

ಗಳಲ್ಲಿ ಒಂದೇರೀತಿ ಇದ್ದು ಕೋಳಿ ಮತ್ತು ಬಾತಿನ ಮೊಟ್ಟೆಗಳಲ್ಲಿ ಸ್ವಲ್ಪ ವ್ಯತ್ಯಾಸ ಹೊಂದುತ್ತವೆ.

(i) **ಚಿಪ್ಪುಸ್ವಚ್ಛ:** ಹೊರಗಿನ ಪದಾರ್ಥಗಳಿಲ್ಲದೆ, ಕಲೆಗಳು ಅಥವಾ ಬಣ್ಣ ಗುಂದುವಿಕೆ ಇಲ್ಲದಿರುವುದನ್ನು ಸ್ವಚ್ಛಚಿಪ್ಪು ಎಂದು ಕರೆಯುತ್ತೇವೆ. **ದೃಢ**— ಕಣ್ಣಿಗೆ ಕಾಣುವ ಅಥವಾ ಕಾಣದ ಬಿರುಕುಗಳಿಲ್ಲದ ಚಿಪ್ಪನ್ನು ದೃಢ ಎಂದು ಕರೆಯುತ್ತೇವೆ. **ಸಹಜರಚನೆ ಮತ್ತು ಆಕಾರ**—ಒಳ್ಳೆಯ ಸಮನಾದ ರಚನೆ ಮತ್ತು ಸಹಜ ಆಕಾರ ಹೊಂದಿರುವುದನ್ನು ಸಹಜ ಚಿಪ್ಪು ಎನ್ನುತ್ತಾರೆ.

(ii) **ಬಂಡಾರ ಮಧ್ಯ:** ಈ ಬಂಡಾರ ಮೊಟ್ಟೆಯ ಮಧ್ಯದಲ್ಲಿರುತ್ತದೆ ಮತ್ತು ಮೊಟ್ಟೆಯನ್ನು ತಿರುಗಿಸಿದಾಗ ಅಷ್ಟಾಗಿ ಅಲುಗಾಡುವುದಿಲ್ಲ. ಅಸ್ಪಷ್ಟ **ಹೊರರೇಖೆ**—ದೀಪದ ಮುಂದೆ ಹಿಡಿದು ಪರೀಕ್ಷಿಸಿದಾಗ ಈ ಬಂಡಾರದ ಆಕಾರ ಸ್ಪಷ್ಟವಾಗಿ ಕಾಣಿಸುವುದಿಲ್ಲ. **ಸುಲಭಚಲನಶೀಲ**—ಮೊಟ್ಟೆಯನ್ನು ದೀಪದ ಎದುರಿಗೆ ತಿರುಗಿಸಿದಾಗ ಸುಲಭವಾಗಿ ಚಲಿಸಿ ಚಿಪ್ಪಿನ ಮೈಭಾಗಕ್ಕೆ ಹತ್ತಿರವಾಗಿ ಬರುವಂತಹುದನ್ನು ಸುಲಭಚಲನಶೀಲವೆನ್ನುವರು.

(iii) **ಬಿಳಿಲೋಳೆಮಿತಪಾರದರ್ಶಕ ಮತ್ತು ಸ್ವಚ್ಛ:** ದೀಪದ ಮುಂದೆ ದಟ್ಟ ಆಕಾರಗಳಾಗಿ ಕಾಣುವ ಬಣ್ಣಗೆಡುವಿಕೆ ಇಲ್ಲದಿರುವ ಬಿಳಿಲೋಳೆ.

(iv) **ಗಾಳಿಜಾಗ $\frac{3}{8}$ ಅಂಗುಲಕ್ಕೂ ಕಡಮೆ ಆಳ:** ಮೊಟ್ಟೆಯನ್ನು ಅದರ ಸಹಜ ರೀತಿಯಲ್ಲಿಟ್ಟಾಗ ಮೊಟ್ಟೆಯ ಅಗಲವಾದ ತುದಿಯಿಂದ ಗಾಳಿಜಾಗದ ತಳದವರೆಗಿನ ಆಳವನ್ನು ಗಾಳಿಜಾಗದ ಆಳವೆನ್ನುವರು. ಇದು ಅಂಗುಲದ $\frac{3}{8}$ ಭಾಗಕ್ಕೂ ಹೆಚ್ಚಿರಬಾರದು.

ಅಗ್‌ಮಾರ್ಕ್ F ಬಾತುಕೋಳಿ ಮೊಟ್ಟೆಯ ಗುಣವಿವರಣೆ

(i) **ಬಂಡಾರ, ಕಾಣುವಂತಿರಬೇಕು; ಆದರೆ, ಸಾಂದ್ರವಾಗಿರಬಾರದು:** ದೀಪದ ಮುಂದೆ ತಿರುಗಿಸಿದಾಗ ಚಲಿಸುವ ಬಂಡಾರ ಚಿಪ್ಪಿನ ಹತ್ತಿರ ಬಂದಾಗ ಸಾಂದ್ರವಾಗಿಯಾಗಲಿ ದಟ್ಟ ನೆರಳಿನಂತಾಗಲಿ ಕಾಣಬೇಕು.

(ii) **ಬಿಳಿಲೋಳೆಗಟ್ಟಿ:** ಬಂಡಾರ ಮೊಟ್ಟೆಯ ಮಧ್ಯದಿಂದ ಸ್ವಲ್ಪ ಮಾತ್ರ ಚಲಿಸಲು ಅಸ್ಪದ ಕೊಡುವಷ್ಟು ದಟ್ಟ ಅಥವಾ ಮಂದವಾಗಿರುವ ಬಿಳಿಲೋಳೆಯನ್ನು ಗಟ್ಟಿ ಬಿಳಿಲೋಳೆ ಎನ್ನುವರು. **ನೀರಿನಂತಲ್ಲದ**—ತೆಳುವಲ್ಲದ, ಮಂದವಾಗಿಲ್ಲದ ಮತ್ತು ಮೊಟ್ಟೆಯನ್ನು ದೀಪದ ಎದುರಿಗೆ ತಿರುಗಿಸಿದಾಗ ದಟ್ಟನೆರಳು ಉಂಟುಮಾಡುವ ಬಿಳಿಲೋಳೆ.

ಅಗ್‌ಮಾರ್ಕ್ ಮೊಟ್ಟೆಗಳನ್ನು ದರ್ಜೆವಾರು ವಿಂಗಡಿಸುವ ಸಾಮಾನ್ಯ ವಿಧಾನ

ದರ್ಜೆವಾರು ವಿಂಗಡಿಸುವುದರಲ್ಲಿ ಸಮಯ ವ್ಯರ್ಥವಾಗದಂತೆ ನೋಡಿಕೊಳ್ಳು ವುದು ಬಹುಮುಖ್ಯ. ದರ್ಜೆವಾರು ವಿಂಗಡಣಾ ಕೇಂದ್ರದಲ್ಲಿ ಕೆಲಸವನ್ನು ಕೆಳಗಿನ ಆರು ಅನುಕೂಲಕರ ಹಂತಗಳಲ್ಲಿ ವಿಭಾಗಿಸಿಕೊಂಡಿರುವುದು ಕಂಡುಬಂದಿದೆ.

ಮೊದಲ ಹಂತ — ಬಿರುಕು ಬಿಟ್ಟ ಮೊಟ್ಟೆಗಳನ್ನು ವಿಂಗಡಿಸಿ, ಇತರ ಮೊಟ್ಟೆ ಗಳನ್ನು ಸ್ವಚ್ಛಗೊಳಿಸುವುದು: ಹಳ್ಳಿಯ ಮೊಟ್ಟೆಗಳು ದರ್ಜೆವಾರು ವಿಂಗಡಣೆ ಸಾಧ್ಯವಿಲ್ಲದಂತಹ ಕೊಳಕಾದ, ಪೆಟ್ಟುಬಿದ್ದ ಮೊಟ್ಟೆಗಳನ್ನೂ ಹೊಂದಿರುವುದರಿಂದ ಪ್ರಾರಂಭದಲ್ಲೇ ಅವುಗಳನ್ನು ವಿಂಗಡಿಸಿಬಿಡುವುದು ಅವಶ್ಯಕ. ಈ ಕೆಲಸವನ್ನು ಕೈಯಿಂದಲೇ ಮಾಡಬೇಕು; ಇದಕ್ಕೆ ಕೆಲವು ನಿಮಿಷಗಳು ಮಾತ್ರ ಬೇಕಾಗುತ್ತವೆ. ಕಾನೂನಿನನ್ವಯ ಮೊಟ್ಟೆಚಿಪ್ಪು ಯಾವುದೇ ಕಲೆ ಇಲ್ಲದೆ ಸ್ವಚ್ಛವಾಗಿರಬೇಕು; ದೃಢ ವಾಗಿದ್ದು ಸಹಜ ರಚನೆ ಹಾಗೂ ಆಕಾರವನ್ನು ಹೊಂದಿರಬೇಕು. ಒದ್ದೆ ಫೆಲ್ಟ್ ಬಟ್ಟೆ ಯಿಂದ ಮೊಟ್ಟೆಗಳನ್ನು ಸ್ವಚ್ಛಗೊಳಿಸಬೇಕು; ಆದರೆ ತೇವಾಂಶವಿರದಂತೆ ಎಚ್ಚರ ವಹಿಸಬೇಕು. ಸ್ವಲ್ಪ ಅಭ್ಯಾಸವಿರುವ ಸಹಾಯಕ, ಗಂಟೆಗೆ 700ರಿಂದ 1000 ಮೊಟ್ಟೆಗಳನ್ನು ಸ್ವಚ್ಛಗೊಳಿಸಬಲ್ಲ.

ಮೊಟ್ಟೆ ಸ್ವಚ್ಛಗೊಳಿಸುವ ಯಂತ್ರವನ್ನೂ ಉಪಯೋಗಿಸಬಹುದು. ಕೈಚಾಲಿತ ಯಂತ್ರ ಗಂಟೆಗೆ 1500 ಮೊಟ್ಟೆಗಳನ್ನು ಸ್ವಚ್ಛಗೊಳಿಸಿ ಒಣಗಿಸಬಲ್ಲದು. ಆದಾಗ್ಯೂ ದಿನಕ್ಕೆ 5000ಕ್ಕೂ ಹೆಚ್ಚು ಮೊಟ್ಟೆಗಳನ್ನು ಮಾರುವ ವರ್ತಕರು ಮಾತ್ರ ಸ್ವಚ್ಛ ಮಾಡುವ ಯಂತ್ರ ಉಪಯೋಗಿಸಬಹುದು.

ಎರಡನೆಯ ಹಂತ — ಬೆಳಕಿನ ಪರೀಕ್ಷೆ: ಪ್ರಕಾಶಮಾನವಾದ ದೀಪದ ಸಹಾಯ ದಿಂದ ಈ ಬೆಳಕಿನ ಪರೀಕ್ಷೆ ಮಾಡಲ್ಪಡುತ್ತದೆ. ಹೆಚ್ಚಿನ ಜಾಗಗಳಲ್ಲಿ ವಿದ್ಯುಚ್ಛಕ್ತಿ ಇಲ್ಲದಿರುವುದರಿಂದ, ಲೋಹದ ಗೌಸು ಹಾಕಿದ ಪೆಟ್ರೋಮ್ಯಾಕ್ಸ್ ದೀಪವನ್ನು ಬೆಳಕಿನ ಪರೀಕ್ಷೆಗೆ ಉಪಯೋಗಿಸುತ್ತಾರೆ. ಕರಿಪರದೆಯಿಂದ ಕತ್ತಲು ಮಾಡಿರುವ ಒಂದು ಮೂಲೆಯಲ್ಲಿ ಈ ದೀಪವನ್ನಿಡಬೇಕು. ಮೊಟ್ಟೆಯ ಅಗಲವಾದ ಜಾಗ ಮೇಲಕ್ಕೆ ಬರುವಂತೆ ಹೆಬ್ಬೆರಳು ಹಾಗೂ ಮೊದಲ ಎರಡು ಬೆರಳುಗಳ ನಡುವೆ ಹಿಡಿದು, ದೀಪಕ್ಕೆ ಸಾಧ್ಯವಾದಷ್ಟು ಹತ್ತಿರವಾಗಿ, ಕಣ್ಣಿನಿಂದ 1 ಅಡಿ ದೂರದಲ್ಲಿ ಹಿಡಿದುಕೊಳ್ಳಬೇಕು. ಒಳಗಿನ ಪದಾರ್ಥಗಳು ತಿರುಗುವಂತೆ ಮೊಟ್ಟೆಯನ್ನು ಒಂದು ಬಾರಿ ವೇಗವಾಗಿ ತಿರುಗಿಸಬೇಕು. ವಿರುದ್ಧ ದಿಕ್ಕಿನಲ್ಲೂ ಒಂದು ಬಾರಿ ತಿರುಗಿಸ ಬಹುದು. ಕಾನೂನಿನ ಪ್ರಕಾರ ಮೊಟ್ಟೆಯೊಳಗಿನ ಪದಾರ್ಥಗಳು ದೋಷರಹಿತ ವಾಗಿರಬೇಕು; ಬಂಡಾರ ಮಧ್ಯದಲ್ಲಿರಬೇಕು ಮತ್ತು ಸುಲಭವಾಗಿ ಚಲಿಸುವಂತಿರ ಬೇಕು; ಬಿಳಿಲೋಳೆ ಮಿತಪಾರದರ್ಶಕವಾಗಿದ್ದು ಸ್ವಚ್ಛವಾಗಿರಬೇಕು; ಗಾಳಿಜಾಗ ಆಳ

ದಲ್ಲಿ ಅಂಗುಲದ $\frac{3}{8}$ ಭಾಗಕ್ಕಿಂತ ಹೆಚ್ಚಿರಬಾರದು. ಸಾಮಾನ್ಯವಾಗಿ ತಾಜಾಮೊಟ್ಟೆಯನ್ನು ಬೆಳಕಿನ ಪರೀಕ್ಷೆಮಾಡಿದಾಗ ಒಳಗಿನ ಇಡೀ ಪದಾರ್ಥಗಳು ಕೆಂಪುಮಿಶ್ರಿತ ಹಳದಿಯಾಗಿ ಕಾಣುತ್ತವೆ. ಆದರೆ ಸೂಕ್ಷ್ಮವಾಗಿ ನೋಡಿದರೆ ಅಗಲವಾದ ತುದಿಯಲ್ಲಿ ಗಾಳಿಜಾಗ ಮತ್ತು ಮಧ್ಯದಲ್ಲಿ ಬಂಡಾರದ ನೆರಳು ಕಾಣಿಸುತ್ತವೆ.

ದರ್ಜೆ ಅವಶ್ಯಕತೆಗಳು ಸರಿಯಾಗಿ ತಿಳಿದಿದ್ದಾಗ ಒಬ್ಬ ಸಹಾಯಕ ಗಂಟೆಗೆ ಹೆಚ್ಚಲ್ಲದಿದ್ದರೂ 600ರಿಂದ 900 ಮೊಟ್ಟೆಗಳನ್ನು ಬೆಳಕಿನ ಪರೀಕ್ಷೆ ಮಾಡಬಲ್ಲ.

ಮೂರನೆ ಹಂತ — ದರ್ಜೆವಾರು ವಿಂಗಡಣೆ: ದೃಢವಾದ ಬಿರುಕು ಬಿಡದ ಮೊಟ್ಟೆಗಳನ್ನು ಸ್ವಚ್ಛಗೊಳಿಸಿ ತಾಜಾತನಕ್ಕೆ ಪರೀಕ್ಷೆ ಮಾಡಿದ ಮೇಲೆ ಕಾನೂನಿಗೆ ತಕ್ಕಂತೆ ಅವುಗಳನ್ನು ವಿವಿಧ ದರ್ಜೆಗಳಿಗೆ ವಿಂಗಡಿಸಬೇಕು. ದರ್ಜೆವಾರು ವಿಂಗಡಣೆಯನ್ನು ವಿವಿಧ ಆಳತೆಗಳ ಯಂತ್ರಗಳ ಸಹಾಯದಿಂದ ಮಾಡಬಹುದು. ಗಂಟೆಗೆ 2000 ದಿಂದ 3000 ಮೊಟ್ಟೆಗಳನ್ನು ದರ್ಜೆವಾರು ವಿಂಗಡಿಸುವ ಯಂತ್ರಕ್ಕೆ 400 ರಿಂದ 1000 ರೂಪಾಯಿಗಳಾಗುತ್ತವೆ. ದಿನಕ್ಕೆ 1000 ಮೊಟ್ಟೆಗಳನ್ನು ನಿರ್ವಹಿಸುವ ವರ್ತಕರುಗಳಿಗೆ ಈ ರೀತಿಯ ಯಂತ್ರಗಳು ಹೆಚ್ಚು ಸೂಕ್ತ. ದಿನಕ್ಕೆ 3000 ಮೊಟ್ಟೆಗಳನ್ನು ನಿರ್ವಹಿಸುವವರಿಗೆ 20 ರೂಪಾಯಿಗೆ ಒಂದು ಸಣ್ಣ, ಸರಳ ಯಂತ್ರವಿದೆ.

ನಾಲ್ಕನೆ ಹಂತ — ದರ್ಜೆವಾರು ವಿಂಗಡಿಸಿದ ಮೊಟ್ಟೆಗಳಿಗೆ ಗುರುತು ಅಥವಾ ಮುದ್ರೆಹಾಕುವುದು: ದರ್ಜೆಹೆಸರಾದ ವಿಶೇಷ A. B ಮತ್ತು C ಅಕ್ಷರಗಳು $\frac{1}{4}$ ಅಂಗುಲಕ್ಕಿಂತ ವ್ಯಾಸವಿಲ್ಲದ ವೃತ್ತದ ಮಧ್ಯದಲ್ಲಿರಬೇಕು, ಮೊಟ್ಟೆಯ ಮೇಲೆ 'ಅಗ್‌ಮಾರ್ಕ್' ಎಂಬ ಪದವಿರಬೇಕು; ಅಲ್ಲದೆ ದರ್ಜೆ ಹೆಸರನ್ನು ಸ್ಪಷ್ಟವಾಗಿ ಚಿಪ್ಪಿನ ಮೇಲೆ ರಬ್ಬರ್ ಸ್ಟ್ಯಾಂಪ್ ಸಹಾಯದಿಂದ ಹಾಕಬೇಕು. ಮೊಟ್ಟೆಗಳನ್ನು ಮೆತ್ತೆ ಇರುವ ತಟ್ಟೆಯಲ್ಲಿಟ್ಟು ಜಾಗರೂಕತೆಯಿಂದ ಗುರುತು ಹಾಕಬೇಕು.

ಐದನೆ ಮತ್ತು ಆರನೆ ಹಂತಗಳು — ಪ್ಯಾಕ್‌ಮಾಡುವಿಕೆ ಮತ್ತು 'ಅಗ್‌ಮಾರ್ಕ್' ಚೀಟಿ ಹಾಕುವಿಕೆ: ಪ್ಯಾಕಿಂಗಿಗೆ ಸಂಬಂಧಪಟ್ಟ ಕಾನೂನೆಂದರೆ 'ವಸ್ತುಗಳು ಸ್ವಚ್ಛವಾಗಿ ಉದ್ದೇಶಕ್ಕೆ ಸೂಕ್ತವಾಗಿರಬೇಕು.' ಪ್ಯಾಕಿಂಗ್ ವಸ್ತುಗಳನ್ನು ಉಪಯೋಗಿಸಿದಾಗ ಅವು ಸ್ವಚ್ಛ ಹಾಗೂ ಒಣ ಆಗಿರಬೇಕು ಮತ್ತು ಮೊಟ್ಟೆಗಳಿಗೆ ಬೇಕಿಲ್ಲದ ವಾಸನೆಯನ್ನು ಕೊಡುವಂತಹ ವಾಸನೆಯನ್ನು ಹೊಂದಿರಬಾರದು. ಸಾಧ್ಯವಾದ ಮಟ್ಟಿಗೂ ಕೋಳಿ ಮತ್ತು ಬಾತಿನ ಮೊಟ್ಟೆಗಳನ್ನು ಪ್ರತ್ಯೇಕವಾಗಿ ಪ್ಯಾಕ್‌ಮಾಡಬೇಕು. ಒಂದಕ್ಕಿಂತ ಹೆಚ್ಚು ದರ್ಜೆಯ ಮೊಟ್ಟೆಗಳನ್ನು ಒಂದರಲ್ಲೇ ಪ್ಯಾಕ್‌ಮಾಡುವುದಾದರೆ ವಿವಿಧ ದರ್ಜೆಗಳ ಮಧ್ಯೆ ಒಂದು ಪದರ ಸ್ವಚ್ಛವಾದ ಕಾಗದ ಅಥವಾ ಹುಲ್ಲನ್ನು ಹಾಸಬೇಕು.

ಮೇಲಿನ ಎಲ್ಲ ಕಾರ್ಯಗಳೂ ಮುಗಿದ ಮೇಲೆ 'ಅಗ್‌ಮಾರ್ಕ್' ಹೆಸರಿನ ಚೀಟಿಯನ್ನು ಮೊಟ್ಟೆಗಳ ಪ್ರತಿ ಪ್ಯಾಕೆಟ್ಟಿಗೂ ಸೀಸದ ಮೊಹರಿನ ಸಹಾಯದಿಂದ

ಹಾಕಬೇಕು. ವಿವಿಧ ದರ್ಜೆ ಮೊಟ್ಟೆಗಳಿಗೆ ಬೇರೆ ಬೇರೆ ಬಣ್ಣದ ಹೆಸರಿನ ಚೀಟಿಗಳಿವೆ. ಅವುಗಳ ಮೇಲೆ (1) ದರ್ಜೆ ಹೆಸರು (ವಿಶೇಷ A, B ಮತ್ತು C), (2) ಮೊಟ್ಟೆಗಳ ಸಂಖ್ಯೆ, (3) ಅವುಗಳ ತೂಕ, (4) ಪ್ಯಾಕ್‌ಮಾಡಿದ ಕೇಂದ್ರದ ಹೆಸರು, ಮತ್ತು (5) ಕಳುಹಿಸುವ ದಿನ.

ಪ್ಯಾಕಿಂಗ್: ಮೊಟ್ಟೆಗಳನ್ನು ಸರಿಯಾಗಿ ಪ್ಯಾಕ್‌ಮಾಡುವುದು ಉತ್ತಮ ಮಾರಾಟ ಹಾಗೂ ಅಧಿಕ ಲಾಭಕ್ಕೆ ಅವಶ್ಯಕ. ದುರದೃಷ್ಟವಶಾತ್ ಈ ಅಂಶವನ್ನು ಕಡೆಗಣಿಸಲಾಗುತ್ತಿದೆ ಮತ್ತು ಪ್ಯಾಕಿಂಗ್ ಅನ್ನು ಸಾಮಾನ್ಯವಾಗಿ ಬುಟ್ಟಿಗಳಲ್ಲಿ ಮಾಡಲಾಗುತ್ತದೆ. ಅವು ಸುಲಭವಾಗಿ ಮುರಿಯುವಂತಹವುಗಳಾದುದರಿಂದ ಒಳಗಿನ ಪದಾರ್ಥಗಳಿಗೆ ರಕ್ಷಣೆ ಸಿಗುವುದಿಲ್ಲ. ಯಾವುದೇ ರೀತಿಯ ಪ್ಯಾಕಿಂಗ್ ಪದಾರ್ಥದ ರಕ್ಷಣೆ ಇಲ್ಲದೆ ಮೊಟ್ಟೆಗಳನ್ನು ಬುಟ್ಟಿಯಲ್ಲಿಡುವುದು ಸಾಮಾನ್ಯ ಅಭ್ಯಾಸ. ಬುಟ್ಟಿಗಳು ಗಟ್ಟಿ ಇಲ್ಲದಿರುವುದರಿಂದ ಕೆಲವು ಮೊಟ್ಟೆಗಳನ್ನಾದರೂ ಒಡೆಯದೆ ಬುಟ್ಟಿಯನ್ನೆತ್ತು



ಚಿತ್ರ 142: ಮೊಟ್ಟೆಗಳನ್ನು ಪ್ಯಾಕ್ ಮಾಡಲು ಉಪಯೋಗಿಸುವ ಉತ್ತಮ ದರ್ಜೆಯ ಬುಟ್ಟಿಗಳು.

ವುದು ಅಸಾಧ್ಯ. ಇದು ಸಾಮಾನ್ಯವಾಗಿ ಉತ್ತರದ ಕಡೆ ಉಪಯೋಗಿಸುವ ಬುಟ್ಟಿಗಳಿಗೆ ಅನ್ವಯಿಸುತ್ತದೆ. ಇಲ್ಲಿ ಸಾಮಾನ್ಯವಾಗಿ ಶೇಕಡಾ 10ರಿಂದ 30 ಭಾಗ ಮೊಟ್ಟೆಗಳು ಸಾಗಾಣಿಕೆಯಲ್ಲಿ ಒಡೆಯುತ್ತವೆಂದು ಅಂದಾಜುಮಾಡಲಾಗಿದೆ. ದೋಷಯುತ ಬುಟ್ಟಿಗಳಿಂದ ವರ್ಷಕ್ಕೆ 15 ಲಕ್ಷ ರೂಪಾಯಿಗಳು ನಷ್ಟವಾಗುತ್ತದೆಂದು ಅಂದಾಜುಮಾಡಲಾಗಿದೆ.

ಆದುದರಿಂದ ಗಟ್ಟಿಯಾದ ಬುಟ್ಟಿಗಳು ಹಾಗೂ ಉತ್ತಮ ಪ್ಯಾಕಿಂಗ್ ಪದಾರ್ಥಗಳ ಬಳಕೆಯನ್ನು ಜನಪ್ರಿಯಗೊಳಿಸುವ ದಾರಿಯಲ್ಲಿ ಹೆಚ್ಚಿನ ಕೆಲಸ ಆಗಬೇಕಾದ್ದಿದೆ. ದಕ್ಷಿಣದ ಕಡೆ ಉಪಯೋಗಿಸುವ ಬುಟ್ಟಿಗಳು ಉತ್ತಮವೆಂದು ಕಂಡುಬಂದಿದೆ. ಅವು ಹೆಚ್ಚು ಗಟ್ಟಿಯಾಗಿರುತ್ತವೆ ಮತ್ತು ಬೊಂಬಿನ ಮುಚ್ಚಳಗಳನ್ನು ಹೊಂದಿರುತ್ತವೆ. ಇಂತಹ ಬುಟ್ಟಿಗಳಲ್ಲಿ ಸ್ವಲ್ಪ ಒಣಹುಲ್ಲಿನ ಉಪಯೋಗದಿಂದ ದಕ್ಷಿಣದಲ್ಲಿ ಕಡಮೆ ಮೊಟ್ಟೆಗಳು ಒಡೆಯಲು ಮುಖ್ಯಕಾರಣ. ವಿಶೇಷವಾಗಿ ಉಪ್ಪುನೀರಿನಲ್ಲಿಟ್ಟ ಮೊಟ್ಟೆಗಳನ್ನು ಪ್ಯಾಕ್‌ಮಾಡಲು ಯಾವಾಗಲಾದರೊಮ್ಮೆ ಮಡಕೆ ಅಥವಾ ಜಾಡಿಗಳನ್ನೂ ಉಪಯೋಗಿಸುತ್ತಾರೆ. ಪ್ರಾರಂಭದಲ್ಲಿ ಬೇಕಾಗುವ ಹೆಚ್ಚಿನ ಹಣದಿಂದಾಗಿ ಮರದಪೆಟ್ಟಿಗೆಗಳನ್ನು ಕೆಲವು ಕಡೆಗಳಲ್ಲಿ ಮಾತ್ರ ಉಪಯೋಗಿಸುತ್ತಾರೆ. ಮತ್ತೆ ಪ್ಯಾಕಿಂಗಿಗೆ ಉಪಯೋಗಿಸಲು ಪೆಟ್ಟಿಗೆಗಳನ್ನು ಹಿಂದಕ್ಕೆ ತರಿಸಿಕೊಳ್ಳುವ ಯಾವುದೇ ರೀತಿಯ ವ್ಯವಸ್ಥೆಯಲ್ಲಿ ಖಾಲಿಪೆಟ್ಟಿಗೆ ಸಾಗಾಣಿಕೆಯ ಹೆಚ್ಚಿನ ವೆಚ್ಚವಲ್ಲದೆ, ಪೆಟ್ಟಿಗೆ ಹಿಂದಕ್ಕೆ ಬಾರದಿರುವ ಭಯವೂ ಉಂಟು. ಬುಟ್ಟಿ, ಪೆಟ್ಟಿಗೆಗಳನ್ನು ಅಭಿವೃದ್ಧಿಗೊಳಿಸಿ ಸರಿಯಾಗಿ ಪ್ಯಾಕ್ ಮಾಡುವುದರಿಂದ, ಮೊಟ್ಟೆಗಳು ಒಡೆಯುವುದು ತಪ್ಪುವುದರ ಮೂಲಕ ಶೇಕಡಾ 5ರಷ್ಟು ನಿವ್ವಳಲಾಭ ಬರುವುದೆಂದು ಕಂಡುಬಂದಿದೆ. ಈ ಲಾಭವನ್ನು ದರ್ಜೆವಾರು ವಿಂಗಡಿತ ಮೊಟ್ಟೆಗಳ ಮಾರಾಟದಿಂದ ಬರುತ್ತದೆಂದು ಅಂದಾಜು ಮಾಡಲಾಗಿರುವ ಶೇಕಡಾ 20ರಷ್ಟು ಹೆಚ್ಚು ಲಾಭದೊಂದಿಗೆ ಸೇರಿಸಿ ಯೋಚಿಸಿದಾಗ, ದರ್ಜೆವಾರು ವಿಂಗಡಣೆ ಹಾಗೂ ಪ್ಯಾಕಿಂಗ್ ಕೇಂದ್ರಗಳನ್ನು ಸ್ಥಾಪಿಸುವುದು ಅತಿ ಅಪೇಕ್ಷಣೀಯವಾಗಿ ಕಂಡುಬರುತ್ತದೆ.

ಕೋಳಿಗಳ ಮಾರಾಟ

ತಿನ್ನುವುದಕ್ಕಾಗಿ ಕೋಳಿಮಾರಾಟ ಪಾಶ್ಚಿಮಾತ್ಯ ದೇಶಗಳಲ್ಲಿರುವಂತೆ ಭಾರತದಲ್ಲಿ ವಿಶೇಷ ಪರಿಣತೆಯ ಕೆಲಸವಾಗಿಲ್ಲ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕೋಳಿಗಳನ್ನು ಕೋಳಿರೋಗದ ಭಯ ಕಂಡುಬಂದಾಗ ಹಳ್ಳಿಯೊಳಗಾಗಲಿ ಅಥವಾ ಪಕ್ಕದ ಹಳ್ಳಿಯಲ್ಲಾಗಲೀ ಮಾರುತ್ತಾರೆ. ರೋಗದ ಸೋಂಕಿರುವ ಹಳ್ಳಿಗಳಿಂದ ಕೋಳಿಗಳನ್ನು ಸೋಂಕಿಲ್ಲದ ಜಾಗಗಳಿಗೆ ಕೊಂಡುಕೊಂಡಾಗ ಅಲ್ಲಿಯ ಕೋಳಿಗಳಿಗೂ ಸೋಂಕು ಹಬ್ಬುತ್ತದೆ. ಆದುದರಿಂದ ಕೋಳಿಮಾರಾಟ, ರೋಗಹರಡುವಿಕೆ ಹಾಗೂ ಅದರಿಂದಾಗುವ ನಷ್ಟಗಳಿಗೆ ಮುಖ್ಯ ಕಾರಣವಾಗುತ್ತದೆ.

ಕೆಲವು ಸಾರಿ ಗುಂಪಿನಲ್ಲಿ ಹೆಚ್ಚಿಂದು ಕಂಡುಬರುವ ಕೋಳಿಗಳನ್ನು ಮಾರುತ್ತಾರೆ. ಅಲ್ಲದೆ, ಯಾವಾಗಾದರೊಮ್ಮೆ ಮನೆಖರ್ಚಿಗೆ ಬೇಕಾಗುವ ಹಣಕ್ಕಾಗಿ ಕೋಳಿಗಳನ್ನು ವಾರದ ಸಂತೆಯಲ್ಲಿ ಮಾರುತ್ತಾರೆ. ಅವುಗಳಿಗೆ ದೊರೆಯುವ ಸರಾಸರಿ ಬೆಲೆ, ಕಾಲ ಹಾಗೂ ಸ್ಥಳಕ್ಕೆ ಅನುಗುಣವಾಗಿ ಬಹಳ ವ್ಯತ್ಯಾಸವಾಗುತ್ತದೆ; ಆದರೆ ಈ ಬೆಲೆ ಯಾವಾಗಲೂ ಅವುಗಳನ್ನು ಕೇಂದ್ರಗಳಲ್ಲಿ ಬೆಳೆಸಲು ಬೇಕಾಗುವ ವೆಚ್ಚಕ್ಕಿಂತ ಕಡಮೆ ಯಾಗಿರುತ್ತದೆ. ರೈತರು ಅವುಗಳನ್ನು ಸಾಕಲು ಏನನ್ನೂ ವೆಚ್ಚಮಾಡುವುದಿಲ್ಲವೆಂಬು ದನ್ನು ಪರಿಗಣಿಸಿದಾಗ ಅದಕ್ಕೆ ಸಿಗುವ ಬೆಲೆಯನ್ನು ನಿವ್ವಳಲಾಭವೆಂದೇ ಹೇಳಬೇಕು.

ಬ್ರಾಯಲರ್ ಉತ್ಪಾದನೆ: ಆದುದರಿಂದ ಸ್ವಚ್ಛತಳಿ ಮಾಂಸದ ಕೋಳಿ ಅಥವಾ ಬ್ರಾಯಲರ್‌ಗಳನ್ನು ಮಾರುಕಟ್ಟೆಗೆ ಕಳುಹಿಸಲು ಪ್ರಯತ್ನಿಸುವ ಪರಿಣತ ಕೋಳಿ ಸಾಕಣೆದಾರ ಕನಿಷ್ಠ ಬೆಲೆಯ ಹಳ್ಳಿಕೋಳಿಗಳ ಜತೆ ಸ್ಪರ್ಧಿಸಲಾರ. ಈ ಹಳ್ಳಿ ಕೋಳಿಗಳು ಪೇಟೆ ಮಾರುಕಟ್ಟೆ ಇಲ್ಲವೆ ದಳ್ಳಾಳಿಗಳಿಂದ ಗ್ರಾಹಕರನ್ನು ತಲಪುತ್ತವೆ. ಭಾರತದ ಸಾಮಾನ್ಯ ಗ್ರಾಹಕನಿಗೆ ಬ್ರಾಯಲರ್‌ನಂತಹ ಉತ್ತಮತಳಿ ಕೋಳಿಗಳ ಉತ್ತಮ ಗಾತ್ರ ಹಾಗೂ ತೂಕಗಳ ಬಗ್ಗೆ ಹೆಚ್ಚಿನ ಆಸಕ್ತಿ ಇಲ್ಲ. ಅಷ್ಟೇ ಅಲ್ಲದೆ ಕಡಮೆ ಬೆಲೆಯದಾಗಿರುವುದರ ಜತೆಗೆ ಅವನ ಮನೆಯ ಒಪ್ಪತ್ತಿನ ಊಟಕ್ಕೆ ಸರಿಯಾಗಿ ಸಾಕಾಗುವುದರಿಂದ ಅವನು ದೇಶಿ ಕೋಳಿಯನ್ನೇ ಅಪೇಕ್ಷಿಸುತ್ತಾನೆ. ರೆಫ್ರಿಜಿರೇಟರ್ ಅಥವಾ ಶೀತಾಗಾರಗಳ ಅನುಕೂಲತೆ ಇಲ್ಲದ ಸಂದರ್ಭಗಳಲ್ಲಿ ಬೇಯಿಸಿದ ಅಥವಾ ಹಸಿಯ ಮಾಂಸವನ್ನು ಮುಂದಿನ ಊಟದ ಕಾಲಕ್ಕೆಂದು ಉಳಿಸಿಡುವುದು ಸಾಧ್ಯವಿಲ್ಲ. ಆದುದರಿಂದ ಒಪ್ಪತ್ತಿನ ಊಟಕ್ಕಿಂತ ಹೆಚ್ಚಾಗುವ ಕೋಳಿಯ ತೂಕ ಅವನಿಗೆ ಅನಪೇಕ್ಷಣೀಯ. ಆದುದರಿಂದ ಪಾಶ್ಚಿಮಾತ್ಯ ದೇಶಗಳಲ್ಲಿ ಲಾಭದಾಯಕವಾಗಿರುವ ಆಹಾರಕ್ಕಾಗಿ ಬ್ರಾಯಲರ್ ಅಥವಾ ಉತ್ತಮಗೊಳಿಸಿದ ಕೋಳಿ ಉದ್ಯಮ ಸದ್ಯದಲ್ಲಿ ನಮ್ಮ ದೇಶದಲ್ಲಿ ಹೆಚ್ಚಿನ ಲಾಭದ ಮಾರ್ಗವಾಗುವ ಸೂಚನೆ ಕಂಡುಬಂದಿಲ್ಲ.

ಹೆಚ್ಚಾದ ಕೋಳಿಗಳ ವಿಲೇವಾರಿ: ಹಳ್ಳಿಗಳಲ್ಲಿ ಹೆಚ್ಚಾದ ಕೋಳಿಗಳನ್ನು ಮಾರುವುದು ದೊಡ್ಡ ಸಮಸ್ಯೆಯಲ್ಲ; ಆದರೆ ದಳ್ಳಾಳಿಗಳು ಹಾಗೂ ಮಧ್ಯಸ್ಥಗಾರರ ಕಾರ್ಯದಿಂದಾಗಿ ಅವುಗಳಿಗೆ ಸಿಗುವ ಬೆಲೆ ಬಹಳಷ್ಟು ವ್ಯತ್ಯಾಸವಾಗುತ್ತದೆ. ಸಾಮಾನ್ಯ ವಾಗಿ ಜೀವಂತ ಕೋಳಿಗಳನ್ನು ಮಾರಲಾಗುತ್ತದೆ. ಗ್ರಾಹಕರು ಅನಪೇಕ್ಷಿತ ಭಾಗ ಗಳನ್ನು ತೆಗೆದುಹಾಕಿದ ಅಥವಾ ರಕ್ಷಿಸಿಟ್ಟ ಮಾಂಸವನ್ನು ಅಷ್ಟಾಗಿ ಇಷ್ಟಪಡುವುದಿಲ್ಲ. ಜೀವಂತ ಕೋಳಿಗಳನ್ನು ಗ್ರಾಹಕ ಪ್ರದೇಶದಲ್ಲಿ ಮಾರಿ ಗ್ರಾಮೀಣ ಉತ್ಪಾದಕರಿಗೆ ಹೆಚ್ಚಿನ ಪ್ರತಿಫಲವನ್ನು ತಂದುಕೊಡುವಲ್ಲಿ ಗ್ರಾಮೀಣ ಸಹಕಾರಿ ಸಂಘಗಳು ಹೆಚ್ಚಿನ ಪಾತ್ರವಹಿಸಲು ಅವಕಾಶವಿದೆ. ಬರಿ ಸಂಖ್ಯೆಗಳ ಮೇಲಲ್ಲದೆ ಅವುಗಳ ತೂಕದ ಮೇಲೆ ಬೆಲೆ ನಿಷ್ಕರ್ಷವಾಗಬೇಕು.

ಆದರೆ ಈಗಾಗಲೆ ಹೇಳಿದ ಕಾರಣಗಳಿಂದಾಗಿ ವಾಣಿಜ್ಯ ಕೋಳಿಕೇಂದ್ರಗಳಲ್ಲಿ ಹೆಚ್ಚಾದ ಕೋಳಿಗಳ ಮಾರಾಟ ಹಲವು ಸಮಸ್ಯೆಗಳನ್ನೆದುರಿಸಬೇಕಾಗಿದೆ. ಇಂತಹ

ಗುಂಪಿನಲ್ಲಿ, ಬೇರ್ಪಡಿಸಿದ ಕೋಳಿಗಳು, ಹೆಚ್ಚಾದ ಕೋಳಿಗಳು ಹಾಗೂ ಮರಿಹುಂಜ ಗಳು ಸೇರಿರುತ್ತವೆ. ಬೇರ್ಪಡಿಸುವಿಕೆಯಲ್ಲಿ ತೆಗೆಯಲ್ಪಡುವ ಕೋಳಿಗಳು ಲಾಭ ದಾಯಕವಾದವುಗಳಲ್ಲವಾದುದರಿಂದ ಅವುಗಳ ಸಾಕಾಣಿಕ ವೆಚ್ಚ ಸಾಕಾಣಿಕ ಕೇಂದ್ರದ ಆರ್ಥಿಕತೆಗೆ ಧಕ್ಕೆ ಉಂಟುಮಾಡುತ್ತದೆ. ಆದುದರಿಂದ ಅವುಗಳನ್ನು ಬಂದ ಬೆಲೆಗೆ ಮಾರುವುದು ಲಾಭದಾಯಕ. ತಳಿ ಅಭಿವೃದ್ಧಿಗೆ ಸೂಕ್ತವಾದ ಹೆಚ್ಚಿನ ಕೋಳಿ ಗಳನ್ನು ಸರಿಯಾದ ಬೆಲೆಗೆ ಮಾತ್ರ ಮಾರಬೇಕು.

ಹೆಚ್ಚಾದ ಮರಿಹುಂಜಗಳ ವಿಲೇವಾರಿ: ಬೆಳೆಯುತ್ತಿರುವ ಮರಿಗಳಲ್ಲಿ ಶೇಕಡಾ 50ರಷ್ಟು ಮರಿಹುಂಜಗಳಿರುತ್ತವೆ. ಲಿಂಗ ವಿಭೇದ ಬಾಹ್ಯನೋಟಕ್ಕೆ ಕಾಣುವವರೆಗೂ ಇವುಗಳನ್ನು ಹೇಂಟೆಗಳೊಂದಿಗೇ ಸಾಕಬೇಕಾಗುತ್ತದೆ. ಲೆಗ್‌ಹಾರ್ನ್‌ನಂತಹ ಮೆಡಿಟ ರೇನಿಯನ್ ತಳಿಗಳು ಅಥವಾ ಸಣ್ಣ ತಳಿಗಳಲ್ಲಿ ಮರಿಗಳು 4.5 ವಾರಗಳಷ್ಟು ದೊಡ್ಡ ವಾದಾಗ ಲಿಂಗ ವಿಭೇದ ತಿಳಿಯುತ್ತದೆ; ಆದರೆ ರ್ಹೋಡ್ ಐಲೆಂಡ್‌ರೆಡ್‌ನಂತಹ ದೊಡ್ಡ ತಳಿಗಳಲ್ಲಿ 8ರಿಂದ 9 ವಾರಗಳಾಗುವವರೆಗೆ ಲಿಂಗ ಲಕ್ಷಣಗಳು ಕಾಣುವುದಿಲ್ಲ. ತಳಿಎಬ್ಬಿಸುವ ಕಾರ್ಯಕ್ಕೆ ಕೆಲವು ಹುಂಜಗಳನ್ನು ಮಾತ್ರ ಉಪಯೋಗಿಸುವುದರಿಂದ, ಬಹಳಷ್ಟು ಮರಿಹುಂಜಗಳು ಹೆಚ್ಚಾಗುತ್ತವೆ; ಅತಿ ಅವಶ್ಯಕ ಕಾಲಕ್ಕಿಂತ ಹೆಚ್ಚಿಗೆ ಇವುಗಳನ್ನು ಸಾಕುವುದರಿಂದ ಆಹಾರ ನಷ್ಟವಾಗುತ್ತದೆ.

ಮರಿಹುಂಜಗಳು ಅವುಗಳಿಗೆ ತಿನ್ನಿಸಿದ ಆಹಾರಕ್ಕನುಗುಣವಾಗಿ ಬೆಲೆ ಪಡೆಯು ವುದಿಲ್ಲ. ಹೇಂಟೆಗಳನ್ನು ಸಾಕಲು ಲಾಭದಾಯಕವಾಗಿ ಉಪಯೋಗಿಸಬಹುದಾದ ಬೆಳೆಬಾಳುವ ಜಾಗವನ್ನೂ ಇವು ಆಕ್ರಮಿಸಿಕೊಳ್ಳುತ್ತವೆ. ಆದುದರಿಂದ ಸಾಧ್ಯ ವಾದಷ್ಟೂ ಬೇಗ ಮರಿಹುಂಜಗಳ ವಿಲೇವಾರಿ ಮಾಡಬೇಕು — ಯಾವುದೇ ಕಾರಣ ದಿಂದಲೂ ಅವುಗಳನ್ನು 12ರಿಂದ 16 ವಾರಗಳಿಗಿಂತ ಹೆಚ್ಚಿಗೆ ಕಾಲ ಇಟ್ಟುಕೊಳ್ಳ ಬಾರದು.

ಕೇಪನ್ ಉತ್ಪಾದನೆ

ಕೇಪನೈಸೇಶನ್ ಎಂಬ ವಿಧಾನದಿಂದ ಬೀಜ ತೆಗೆದ ಹುಂಜಗಳನು ಕೇಪನ್‌ಗಳು ಎಂದು ಕರೆಯುತ್ತಾರೆ. ಸದ್ಯಕ್ಕೆ ಬೀಜ ತೆಗೆದ ಹುಂಜಗಳಿಗೆ ಬೀಜ ತೆಗೆಯದ ಹುಂಜಗಳಿಗಿಂತ ಹೆಚ್ಚಿನ ಬೆಲೆ ಬರುವುದಿಲ್ಲವಾದರೂ, ಹೆಚ್ಚಾದ ಮರಿಹುಂಜಗಳ ವಿಲೇವಾರಿ ವಿಷಯ ಚರ್ಚಿಸುವಾಗ ಕೇಪನೈಸೇಶನ್ ಬಗ್ಗೆಯೂ ಚರ್ಚಿಸುವುದು ಅಗತ್ಯ.

ಕೇಪನ್ ಉತ್ಪಾದನೆಯ ಆರ್ಥಿಕತೆ: ಕೇಪನ್‌ಗಳೂ ಮರಿಹುಂಜಗಳಷ್ಟೇ ವೇಗ ವಾಗಿ ಬೆಳೆಯುತ್ತವೆ. ಆದರೆ ಮರಿಹುಂಜಗಳಿಗಿಂತ ಹೆಚ್ಚುಕಾಲ ಬೆಳೆಯುತ್ತವೆ. ಆರು ತಿಂಗಳುಗಳವರೆಗೆ ಮರಿಹುಂಜ ಹಾಗೂ ಕೇಪನ್‌ಗಳ ತೂಕದಲ್ಲಿ ಗಣನೀಯ

ವ್ಯತ್ಯಾಸವಿರುವುದಿಲ್ಲ. ಅನಂತರ ಮರಿಹುಂಜಗಳಲ್ಲಿ ಬಹಳ ಕಡಮೆ ಬೆಳವಣಿಗೆ ಕಂಡುಬರುತ್ತದೆ ಮತ್ತು ಮಾಂಸ ಗಡುಸಾಗುತ್ತದೆ; ಆದರೆ, ಕೇಪನ್ ಆ ನಂತರವೂ ಮೈತುಂಬುತ್ತಾ ಹೋಗುತ್ತದೆ. ಅಲ್ಲದೆ, ಮಾಂಸ ಮೃದುವಾಗಿಯೇ ಉಳಿಯುತ್ತದೆ. ಕೇಪನ್‌ಗಳ ಮಾಂಸದ ಉತ್ತಮ ಗುಣಮಟ್ಟದಿಂದಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಅದಕ್ಕೆ ಹೆಚ್ಚಿನ ಬೇಡಿಕೆ ಇದೆ. ಮಾಂಸ ಉತ್ತಮ ರುಚಿ, ಮೃದುತ್ವ ಮತ್ತು ಒಳ್ಳೆಯ ರಚನೆಯನ್ನು ಹೊಂದಿರುತ್ತದೆ. ಬೇರೆ ದೇಶಗಳಲ್ಲಿ ಕೇಪನ್‌ಗಳಿಗೆ ಹೆಚ್ಚಿನ ಬೆಲೆ ಬರುತ್ತದೆ. ಅಂತಹ ಕಡೆಗಳಲ್ಲಿ ಅದರ ಉತ್ಪಾದನೆ ಸೂಕ್ತವಾದದ್ದು. ಆದಾಗ್ಯೂ ಆಗಲೇ ಹೇಳಿದ ಕಾರಣಗಳಿಂದಾಗಿ ಭಾರತದಲ್ಲಿ ಅದಷ್ಟು ಬೇಗ, ಏನೇ ಆದರೂ 4 ತಿಂಗಳುಗಳ ಒಳಗೆ ಹೆಚ್ಚಾದ ಮರಿಹುಂಜಗಳನ್ನು ವಿಲೇವಾರಿ ಮಾಡುವುದು ಲಾಭ ದಾಯಕ. ಕೇಪನ್‌ಗಳು ಕೂಡಿಹಾಕುವಿಕೆಗೆ ಹೊಂದಿಕೊಳ್ಳುತ್ತವೆ; ಮರಿಹುಂಜಗಳಂತೆ ಬೇರೆಯವುಗಳ ಜತೆ ಜಗಳವಾಡುವುದಿಲ್ಲ ಅಥವಾ ತೊಂದರೆ ಕೊಡುವುದಿಲ್ಲ. ಆದಾಗ್ಯೂ ಈ ವಯಸ್ಸಿನಲ್ಲಿ ಕೇಪನ್‌ಗಳು ಮರಿಹುಂಜಗಳಿಗಿಂತ ಹೆಚ್ಚಿಗೆ ತೂಕವನ್ನೇನೂ ಹೊಂದಿರುವುದಿಲ್ಲ.


ಮರಿಹುಂಜಗಳಿಗೆ ಕೇಪನೈಸ್ ಮಾಡಲು ಸರಿಯಾದ ವಯಸ್ಸೆಂದರೆ ಅವುಗಳು 10ರಿಂದ 12 ವಾರ ವಯಸ್ಸಿನವಾಗಿರುವಾಗ. ಆರೋಗ್ಯವಾಗಿ ಚುರುಕಾಗಿರುವ ಹುಂಜಗಳನ್ನು ಮಾತ್ರ ಕೇಪನೈಸ್ ಮಾಡಬೇಕು. ಲೆಗ್‌ಹಾರ್ನ್‌ಗಳಂತಹ ಹಗುರ ತಳಿಗಳಿಗಿಂತ ಪ್ಲೈಮೂತ್ ರಾಕ್ ಐಲ್ಯಾಂಡ್‌ರೆಡ್‌ಗಳಂತಹ ಭಾರದ ತಳಿಗಳು ಹೆಚ್ಚು ತೃಪ್ತಿದಾಯಕ ಕೇಪನ್‌ಗಳಾಗುತ್ತವೆ.

ಶಾಸ್ತ್ರೀಯ ಕೇಪನೈಸೇಶನ್ : ತಾಂತ್ರಿಕತೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಕೆಲವು ಹುಂಜಗಳಲ್ಲಿ ಅಭ್ಯಾಸಮಾಡಿದ ಮೇಲೆ ಶಾಸ್ತ್ರೀಯ ಕೇಪನೈಸೇಶನ್ ಸುಲಭ ವಾದ ಕಾರ್ಯ. ಪ್ರಾರಂಭದಲ್ಲಿ ಅಭ್ಯಾಸಿಯು ಮಾಂಸಕ್ಕಾಗಿ ಕೊಯ್ಯಲು ತೆಗೆದಿಟ್ಟಿರುವ ಹುಂಜದ ಮೇಲೆ ಅಥವಾ ಜೀವಂತ ಹುಂಜಗಳ ಮೇಲೆ ಮಾಡುವ ಮೊದಲು ಸತ್ತ ಹುಂಜಗಳ ಮೇಲೆ ಈ ಶಸ್ತ್ರಕ್ರಿಯೆ ಮಾಡಬಹುದು.

ಈ ಕೆಳಗಿನ ಸಲಕರಣೆಗಳು ಅವಶ್ಯಕ. ಅವುಗಳನ್ನು ಸ್ಥಳೀಯವಾಗಿ ಮಾಡಿಸ ಬಹುದು; ಇಲ್ಲವೆ, ಕೋಳಿ ಸಲಕರಣೆಗಳು ಅಥವಾ ಪಶುವೈದ್ಯಕೀಯ ಉಪಕರಣಗಳಲ್ಲಿ ವ್ಯವಹರಿಸುವ ಸಂಸ್ಥೆಯಲ್ಲಿ ಉತ್ತಮ ದರ್ಜೆಯ ಕೇಪನೈಸಿಂಗ್ ಸಲಕರಣೆಗಳನ್ನು ಕೊಳ್ಳಬಹುದು (ಚಿತ್ರ 143).

(1) ವೃಷಣಗಳನ್ನು ತೆಗೆಯಲು ಒಂದು ಜೊತೆ ಇಕ್ಕುಳ ಅಥವಾ ಗೋಚಿಕ.

(2) ಶಸ್ತ್ರಕ್ರಿಯೆ ಕಾಲದಲ್ಲಿ ಗಾಯದ ಬಾಯನ್ನು ತೆರೆದಿರಿಸಲು ಒಂದು ಜೊತೆ ಹರಡಿಕ ಅಥವಾ ಹಿಂದೆಳೆಕಗಳು.



ಚಿತ್ರ 143: ಕೇಪನ್ನೈಸಿಂಗ್ ಸಾಧನ ಸಾಮಾಗ್ರಿಗಳು.

(3) ಕರಳುಗಳು ಮತ್ತು ಹೊಟ್ಟೆಯ ಇತರ ಅಂಗಗಳನ್ನು ಮುಚ್ಚಿರುವ ತೆಳುಪೊರೆ – ಹೊರಬಿಗೆ ಪೊರೆಯನ್ನು ಹರಿಯಲು ಒಂದು ಚೂಪಾದ ತುದಿಯ ಕೊಕ್ಕೆ.

(4) ಹೊಟ್ಟೆಯ ಕುಳಿಯೊಳಕ್ಕೆ ಆಕಸ್ಮಾತ್ ಬೀಳಬಹುದಾದ ಪುಕ್ಕ ಮುಂತಾದ ಹೊರಪದಾರ್ಥಗಳನ್ನು ತೆಗೆಯಲು ಒಂದು ಜೊತೆ ಇಕ್ಕುಳ.

(5) ಹೊಟ್ಟೆ ಕೊಯ್ಯಲು ಹರಿತವಾದ ಒಂದು ಚಾಕು.


(6) ಹುಂಜವನ್ನು ಕಟ್ಟಿ ಹಿಡಿತದಲ್ಲಿಡಲು ಅವಶ್ಯಕ ಬಲ ಹಾಗೂ ಅಳತೆಯ ದಾರ. ಒಬ್ಬ ಸಹಾಯಕನಿದ್ದರೆ ಇದು ಬೇಕಿಲ್ಲ.

ಕೇಪನ್ನೈಸ್ ಮಾಡಬೇಕಾದ ಹುಂಜಗಳಿಗೆ ಶಸ್ತ್ರಕ್ರಿಯೆಗೆ ಮೊದಲು 24 ಗಂಟೆಗಳ ಕಾಲ ಏನೂ ಆಹಾರ ಕೊಡಬಾರದು. ಆಹಾರದಿಂದ ತುಂಬಿದ ಕರಳುಗಳು ವೃಷಣಕ್ಕೆ ಅಡ್ಡಿಬರುವುದರಿಂದ ಇದು ಅವಶ್ಯಕ. ನೀರು ಹೆಚ್ಚಿಗೆ ಕುಡಿದರೆ ಶರೀರ ದ್ರವಗಳು ಹೆಚ್ಚಿ ರಕ್ತಸುರಿತ ಹೆಚ್ಚುವುದರಿಂದ ನೀರನ್ನೂ ಕೊಡದಿರುವುದು ಒಳ್ಳೆಯದು.

ಈ ಶಸ್ತ್ರಕ್ರಿಯೆಯನ್ನು ಸೂರ್ಯನ ಬೆಳಕು ಚೆನ್ನಾಗಿರುವ ಕಡೆ, ಕಟ್ಟಡದಿಂದ ಹೊರಗೆ ಮಾಡುವುದು ಒಳ್ಳೆಯದು. ಯಾವುದಾದರೂ ಮರ ಅಥವಾ ಕಟ್ಟಡದ ನೆರಳಿನಲ್ಲಿ ಮಾಡುವುದು ಸೂಕ್ತ. ಈ ಶಸ್ತ್ರಕ್ರಿಯೆಯನ್ನು ತಿರುಗಿಸಿ ಹಾಕಿದ ಡಬ್ಬ, ಎತ್ತರವಾದ ಮರದಪೆಟ್ಟಿಗೆ ಅಥವಾ ಮೇಜಿನ ಮೇಲೆ ಮಾಡಬಹುದು.

ಹುಂಜವನ್ನು ಹಿಡಿದುಕೊಳ್ಳಲು ಸಹಾಯಕನಿಲ್ಲದಿದ್ದರೆ, ಎರಡು ರೆಕ್ಕೆ ಮತ್ತು ಎರಡು ಕಾಲುಗಳನ್ನು ಕಟ್ಟಿ ಅದಕ್ಕೆ ತೂಕಹಾಕಿ, ಆ ತೂಕವನ್ನು ಡಬ್ಬ ಅಥವಾ ಮೇಜಿನ ಅಂಚಿನಿಂದ ನೇತುಬಿಟ್ಟು, ಹುಂಜಗಳನ್ನು ನಿಯಂತ್ರಿಸಬಹುದು.

ಶಸ್ತ್ರಕ್ರಿಯೆ ನಡೆಸಬೇಕಾದ ಜಾಗ ಕೊನೆಯ ಎರಡು ಪಕ್ಕೆಲುಬುಗಳ ನಡುವಣ ಜಾಗ (ಚಿತ್ರ 144). ಇದನ್ನು ಟೊಂಕದ ಮುಂದೆ ಕಾಣಬಹುದು. ಈ ಜಾಗದಲ್ಲಿ ಚರ್ಮ ಕಾಣುವಂತೆ ಕೆಲವು ಪುಕ್ಕಗಳನ್ನು ಕೀಳಬೇಕು ಮತ್ತು ಸುತ್ತಲಿನ ಪುಕ್ಕಗಳು ತೊಂದರೆಮಾಡದಂತೆ ಅವುಗಳನ್ನು ಒದ್ದೆಮಾಡಬೇಕು.




ಚಿತ್ರ 144: ಕೇಪನ್ನೈಸೇಶನ್‌ನ ಮೊದಲ ಹಂತ—ಕೊನೆ ಎರಡು ಪಕ್ಕೆಲುಬುಗಳ ನಡುವೆ ಚರ್ಮ ಹಾಗೂ ಸ್ನಾಯುಗಳನ್ನು ಕತ್ತರಿಸುವುದು.

ಶಸ್ತ್ರಕ್ರಿಯೆಗೆ ಮೊದಲು ಸಲಕರಣೆಗಳನ್ನು ಕುದಿಸುವುದು ಒಳ್ಳೆಯ ಅಭ್ಯಾಸ: ಆಗ ಕ್ರಿಮಿನಾಶಕಗಳ ಅವಶ್ಯಕತೆ ಬೀಳುವುದಿಲ್ಲ. ಕೆಲವು ಹುಂಜಗಳ ಶಸ್ತ್ರಕ್ರಿಯೆ ಆದ ಮೇಲೆ ರಕ್ತ ಹಾಗೂ ಕೊಳೆಯನ್ನು ತೆಗೆಯಲು ಸಲಕರಣೆಗಳನ್ನು ಸ್ವಚ್ಛವಾದ ಸುಡು ನೀರಿನಲ್ಲಿ ಅದ್ದಬೇಕು.

ಹೊಟ್ಟೆಯ ಕುಳಿಯನ್ನು ತೆರೆಯುವ ಎರಡು ವಿಧಾನಗಳಿವೆ. ಅವುಗಳನ್ನು ಕೆಳಗೆ ವಿವರಿಸಲಾಗಿದೆ:

(1) ಎಡಗೈ ಮಧ್ಯದ ಬೆರಳಿನಿಂದ ಕೊನೆಯ ಪಕ್ಕೆಲುಬುಗಳ ನಡುವಿನ ಜಾಗದ ಮೇಲಿನ ಚರ್ಮವನ್ನು ಪಕ್ಕಕ್ಕೆ ತಳ್ಳಬೇಕು. ಅದೇ ಕೈಯಿನ ತೋರಬೆರಳಿನಿಂದ ಟೊಂಕಕ್ಕೆ ಹತ್ತಿರವಾದ ಕೊನೆಯ ಎರಡು ಪಕ್ಕೆಲುಬುಗಳನ್ನು ಗುರುತಿಸಬೇಕು. ಚಾಕುವಿನ ಚೂಪಾದ ತುದಿಯನ್ನು ಎದೆಮೂಳೆಯ ಕಡೆಗೆ ಎಳೆಯುವುದರ ಮೂಲಕ ಹೊಟ್ಟೆಕುಳಿಯನ್ನು ಪ್ರವೇಶಿಸಲು ಈ ಎರಡು ಮೂಳೆಗಳ ನಡುವಿನ ಚರ್ಮ ಹಾಗೂ ಸ್ನಾಯುಗಳನ್ನು ಕತ್ತರಿಸಬೇಕು. ಶಸ್ತ್ರ ಚಿಕಿತ್ಸಕನಿಗೆ ಹೊಂದುವಷ್ಟು ಆಳತೆಯ ಕೊಯ್ತ ಮಾಡಬಹುದು; ಆದರೆ, ಸಾಮಾನ್ಯವಾಗಿ ಇದು $1\frac{1}{2}$ ಅಂಗುಲಕ್ಕೂ ಹೆಚ್ಚು ಉದ್ದವಾಗಿರಬಾರದು.



ಚಿತ್ರ 145: ಎರಡನೆ ಹಂತ: ಇಕ್ಕುಳ ಒಳಗಿಡಲು ಆಸ್ಪದವಾಗುವಂತೆ ಪಕ್ಕೆಲುಬುಗಳನ್ನು ಅಗಲಿಸಲು ಹರಡಿಕವನ್ನಿಡುವುದು

(2) ಚರ್ಮವನ್ನು ಒಂದು ಪಕ್ಕಕ್ಕೆ ತಳ್ಳಿ ಕೊನೆ ಎರಡು ಪಕ್ಕೆಲುಬುಗಳ ಜಾಗದಲ್ಲಿ ಕತ್ತರಿಸಬೇಕು. ಆಗ ಹೊಟ್ಟೆಯ ಓರೆ ಸ್ನಾಯು ಕಂಡುಬರುತ್ತದೆ. ಈ ಸ್ನಾಯುವನ್ನು ಹಿಂದೆಳೆಕ ಅಥವಾ ಕೊಕ್ಕೆಯ ಸಹಾಯದಿಂದ ಪಕ್ಕಕ್ಕೆಳೆದಾಗ ಪಕ್ಕೆಲುಬುಗಳ ನಡುವಣ ಜಾಗ ಕಂಡುಬರುತ್ತದೆ. ಈಗ ಕೊನೆಯಿಂದ ಎರಡನೆಯ ಪಕ್ಕೆಲುಬಿನ ಹತ್ತಿರವಿರುವ ರಕ್ತನಾಳ ಹಾಗೂ ಹೊಟ್ಟೆಯ ಓರೆ ಸ್ನಾಯುವಿಗೆ ಅಪಾಯವಾಗದಂತೆ ಕೊನೆ ಪಕ್ಕೆಲುಬುಗಳ ನಡುವಣ ಜಾಗದಲ್ಲಿರುವ ಸ್ನಾಯುಗಳನ್ನು ಕೊಯ್ಯಬೇಕು.

ಗೋಚುಕ ಅಥವಾ ಇಕ್ಕುಳ ಹಿಡಿಯುವಷ್ಟು ಬಾಯಿಬಿಡುವಂತೆ ಪಕ್ಕೆಲುಬುಗಳನ್ನು ದೂರದೂರಕ್ಕೆ ತಳ್ಳಲು ಈಗ ಹರಡಿಕವನ್ನು ಒಳಕ್ಕೆ ಸೇರಿಸಬೇಕು (ಚಿತ್ರ 145). ಈಗ ಕಂಡುಬರುವ ಹೊರಬಿಗೆಪರೆಯನ್ನು ಅದು ಹೊಟ್ಟೆ ಹಾಗೂ ಪಕ್ಕೆಲುಬುಗಳ ನಡುವಿನ ಜಾಗದ ಸ್ನಾಯುಗಳ ಕೊಯ್ತದಲ್ಲಿ ಈವರೆವಿಗೂ ಹರಿದಿಲ್ಲದಿದ್ದರೆ ಕೊಕ್ಕೆಯಿಂದ ಹರಿಯಬೇಕು. ಆಗ ಕರಳುಗಳು ಕಂಡುಬರುತ್ತವೆ. ಅವುಗಳನ್ನು ಒಂದು ಬೆದಕಡ್ಡಿಯ ಸಹಾಯದಿಂದ ಪಕ್ಕಕ್ಕೆ ತಳ್ಳಿದರೆ ವೃಷಣಗಳು ಕಂಡುಬರುತ್ತವೆ.



ಚಿತ್ರ 146: ಮೂರನೆ ಹಂತ: ವೃಷಣವನ್ನು ತೆಗೆಯುವುದು (ಕೃಷಿ ವಿಭಾಗ, ಮನಿಲದ 'ಪೌಲ್ಟ್ರಿರೈಸಿಂಗ್' ವಿಂಗಡಣೆ)

ವೃಷಣಗಳ ಹುರುಳಿಯಾಕಾರದಿಂದ ಅವುಗಳನ್ನು ಗುರುತಿಸಬಹುದು, ಬಣ್ಣ ಸಾಮಾನ್ಯವಾಗಿ ಹಳದಿ; ಗಾತ್ರ ಮರಿಹುಂಜದ ವಯಸ್ಸಿಗೆ ತಕ್ಕಂತೆ ವ್ಯತ್ಯಾಸ ಹೊಂದುತ್ತದೆ. ಗೋಚುಕ(ಚಿತ್ರ 146) ಇಲ್ಲವೆ ಇಕ್ಕುಳಗಳ ಸಹಾಯದಿಂದ ತೆಗೆಯಬಹುದು. ಇದರಲ್ಲಿ ಮೊದಲನೆಯದು ನಿರಪಾಯಕಾರಿ. ಇಕ್ಕುಳಗಳಿಂದ ದೊಡ್ಡ ರಕ್ತನಾಳಗಳಿಗೆ ಪೆಟ್ಟಾಗಿ ಸಾವು ಸಂಭವಿಸುವ ಸಾಧ್ಯತೆ ಉಂಟು. ಗೋಚುಕವನ್ನು

ಉಪಯೋಗಿಸಿದಾಗ, ಸಲಕರಣೆಯನ್ನು ವೀರ್ಯನಾಳಕ್ಕೆ ಹಾಕಿ ವೃಷಣವನ್ನು ತೆಗೆಯಬಹುದು. ನಂತರ ಸ್ವಲ್ಪ ತಿರಚು(ತಿರುಗಿಸು)ತ್ತ ಎಳೆಯುವುದರಿಂದ ವೃಷಣ ಬೇರ್ಪಡುತ್ತದೆ.

ಇಡೀ ವೃಷಣವನ್ನು ತೆಗೆಯುವುದು ಅತಿ ಅವಶ್ಯಕ; ಇಲ್ಲದಿದ್ದರೆ ಉಳಿದ ಸ್ವಲ್ಪ ಭಾಗ ಅಭಿವೃದ್ಧಿ ಹೊಂದಿ ಹುಂಜವೂ ಅಲ್ಲದೆ ಕೇಪನ್ ಅಲ್ಲದೆ ಇಬ್ಬಂದಿ ಉಂಟಾಗುತ್ತದೆ. ಯಾವುದೇ ರೀತಿಯಲ್ಲೂ ಹುಂಜಕ್ಕಿಂತ ಉತ್ತಮವಲ್ಲದ ಇದು ಅನಪೇಕ್ಷಿತ.

ಮತ್ತೊಂದು ವೃಷಣವನ್ನೂ ಇದೇ ಕೊಯ್ತದಿಂದ ತೆಗೆಯಬಹುದು; ಆದರೆ ಇದಕ್ಕೆ ಹೆಚ್ಚಿನ ಅನುಭವ, ಅಭ್ಯಾಸಗಳು ಬೇಕು. ಆದುದರಿಂದ ಅನನುಭವಿಕರು ವೃಷಣಗಳನ್ನು ಎರಡು ಕಡೆಗಳಿಂದ ಪ್ರತ್ಯೇಕವಾಗಿ ತೆಗೆಯುವುದು ಸೂಕ್ತ; ಏಕೆಂದರೆ, ಇದರಲ್ಲಿ ಅಪಾಯದ ಸಾಧ್ಯತೆ ಕಡಮೆ.

ಕೋಳಿಗಳಲ್ಲಿ ನಂಜಿನ ಸೋಂಕು ಆಗದೆ ಇರುವುದರಿಂದ ಹಾಗೂ ಶಸ್ತ್ರಕ್ರಿಯೆ ಮೇಜಿನಿಂದ ಬಿಟ್ಟಕೂಡಲೆ ಸ್ನಾಯುಗಳ ಗಾಯ ಚರ್ಮದಿಂದ ತನ್ನಷ್ಟಕ್ಕೆ ತಾನೇ ಮುಚ್ಚಿಹೋಗುವುದರಿಂದ ಗಾಯಕ್ಕೆ ಹೊಲಿಗೆ ಹಾಕುವುದನ್ನು ಶಿಫಾರಸ್ಸು ಮಾಡುವುದಿಲ್ಲ; ಅದು ಅಗತ್ಯವೂ ಅಲ್ಲ. ಕೆಲವೇ ದಿನಗಳಲ್ಲಿ ಯಾವ ತೊಂದರೆಯೂ ಇಲ್ಲದೆ ಗಾಯ ಮಾದು ಹುಂಜಗಳು ಪೂರ್ಣವಾಗಿ ಚೇತರಿಸಿಕೊಳ್ಳುತ್ತವೆ.

ಶಸ್ತ್ರಕ್ರಿಯೆಯ ನಂತರ ಉಪಕರಣಗಳನ್ನು ಅವುಗಳ ಪೆಟ್ಟಿಗೆಯಲ್ಲಿಡುವ ಮೊದಲು ಸ್ವಚ್ಛವಾಗಿ ತೊಳೆದು ಚೆನ್ನಾಗಿ ಒಣಗಿಸಬೇಕು.

ಶಸ್ತ್ರಕ್ರಿಯೆಯ ನಂತರ ಹುಂಜಗಳನ್ನು ಸಾಧ್ಯವಾದ ಮಟ್ಟಿಗೂ ಸೂಕ್ಷ್ಮವಾಗಿ ನೋಡಿಕೊಳ್ಳಬೇಕು. ಅವುಗಳನ್ನು ಪೆಟ್ಟುಗಳಾಗಬಹುದಾದ ಗೂಡುಗಳಲ್ಲಿಡದೆ ಪ್ರತ್ಯೇಕವಾಗಿಡಬೇಕು. ಶಸ್ತ್ರಕ್ರಿಯೆಯ ನಂತರ 2 ಗಂಟೆಗಳ ಕಾಲ ಅವುಗಳನ್ನು ಗಮನಿಸುತ್ತಿರಬೇಕು; ರಕ್ತಸುರಿತದಿಂದ ತೀವ್ರ ದುರ್ಬಲತೆಯನ್ನು ತೋರುವ ಹುಂಜಗಳನ್ನು ಕೊಂದುಬಿಡಬೇಕು. ಇವುಗಳು ಹಾಗೂ ಶಸ್ತ್ರಕ್ರಿಯೆಯ ಸಂದರ್ಭದಲ್ಲಿ ಸಾಯಬಹುದಾದವುಗಳನ್ನು ಆಹಾರಕ್ಕೆ ಉಪಯೋಗಿಸಬಹುದು. ಕೆಲವು ದಿನಗಳ ಕಾಲ ಅವುಗಳಿಗೆ ಮೃದುವಾದ ಆಹಾರ ಹಾಗೂ ಬೇಕಾದಷ್ಟು ನೀರು ಮಾತ್ರ ಕೊಡಬೇಕು. ಒಂದು ವಾರದ ನಂತರ ಕೇಪನ್ ಅನ್ನು ಕ್ರಮೇಣ ದಿನನಿತ್ಯದ ಆಹಾರದಲ್ಲಿ ತೊಡಗಿಸಬಹುದು.

ಹೆಚ್ಚಿನ ಸಂಖ್ಯೆಯಲ್ಲಿ ಹೊರದೇಶೀಯರು ಮತ್ತು ಕ್ರಿಶ್ಚಿಯನ್ನರೂ ಇರುವ ದೊಡ್ಡ ಊರುಗಳಲ್ಲಿ ಅದರಲ್ಲೂ ಕ್ರಿಸ್‌ಮಸ್ ಸಮಯದಲ್ಲಿ ಬೇರೆ ಕೋಳಿಗಳಿಗಿಂತ ಕೇಪನ್‌ಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಅಂತಹ ಪಟ್ಟಣಗಳ ಸಮೀಪದಲ್ಲಿರುವ

ಸಾಕಾಣಿಕಾ ಕೇಂದ್ರಗಳವರು ಕ್ರಿಸ್‌ಮಸ್ ಹೊತ್ತಿಗೆ ತಯಾರಾಗುವಂತೆ, ಅವರ ಹೆಚ್ಚಿನ ಮರಿಹುಂಜಗಳನ್ನು ಕೇಪನ್‌ಗಳಾಗಿ ಪರಿವರ್ತಿಸುವುದು ಲಾಭದಾಯಕ.

ರಾಸಾಯನಿಕ ಕೇಪನೈಸೇಶನ್: ಶಸ್ತ್ರಕ್ರಿಯೆ ಮಾಡದೆ ರಾಸಾಯನಿಕಗಳ ಸಹಾಯದಿಂದ ಮರಿಹುಂಜಗಳನ್ನು ಕೇಪನೈಸ್ ಮಾಡಬಹುದು. 'ಸ್ಟಿಲ್‌ಬೆಸ್ಟ್ರಾಲ್ ಡೈಪ್ರೋಪಿಯೋಮೇಟ್'ನಂತಹ ಬೆದೆಜನಕ ಅಥವಾ ಸ್ತ್ರೀಚೋದಕಗಳನ್ನು ಮಾತ್ರೆ ರೂಪದಲ್ಲಿ ಚರ್ಮದ ಕೆಳಗಿಡುವುದರಿಂದ ಇದನ್ನು ಮಾಡಬಹುದು. ಮಾತ್ರೆಯನು ತಲೆಗೆ ಸಾಧ್ಯವಾದಷ್ಟೂ ಹತ್ತಿರದಲ್ಲಿ ವಿಶೇಷ ಪಿಚಕಾರಿಯ ಮೂಲಕ ಇಲ್ಲವೆ ಚಾಕುವಿನಿಂದ ಒಂದು ಸಾಮಾನ್ಯ ಬಾಯಿ ಮಾಡಿ ಒಳಗಿಡಬಹುದು, ಚಾಕುವಿನಿಂದ ಮಾಡಿದ ಗಾಯವನ್ನು ಒಂದು ಹೊಲಿಗೆ ಹಾಕಿ ಮುಚ್ಚಬಹುದು ಇಲ್ಲವೆ ಹಾಗೆಯೇ ಬಿಡಬಹುದು. ಈ ರೀತಿ ಮಾಡಿದ ಮರಿಹುಂಜಗಳೂ ಶಸ್ತ್ರಕ್ರಿಯೆಯಿಂದ ಕೇಪನ್ ಮಾಡಿದ ಮರಿಹುಂಜಗಳಂತೆಯೇ ಹುಂಜದ ಲಕ್ಷಣಗಳನ್ನು ಕಳೆದುಕೊಳ್ಳತೊಡಗುತ್ತವೆ. ಒಳಗಿಟ್ಟ ಕೃತಕ ಚೋದಕ ಎಷ್ಟು ದಿನ ಉಳಿಯಬಲ್ಲದು ಎಂಬುದನ್ನು ಅವಲಂಬಿಸಿ ಅದರ ಗುಣ ಇರುವವರೆಗೂ ಗಂಡು ಚೋದಕಗಳ ಪ್ರಭಾವ ಕಂಡುಬರುವುದಿಲ್ಲ. ಆದರೆ ಒಳಗಿಟ್ಟ ಚೋದಕದ ಪ್ರಭಾವ ಮುಗಿದ ಕೂಡಲೆ ಹುಂಜದ ಲಕ್ಷಣ ಕಾಣತೊಡಗುತ್ತದೆ. ಸಾಮಾನ್ಯವಾಗಿ ಪ್ರಭಾವ 3 ತಿಂಗಳಕಾಲ ಕಂಡುಬರುತ್ತದೆ. ಆ ಕಾಲದಲ್ಲಿ ಮರಿಹುಂಜ ಮೈಗೂಡುತ್ತ ಹೋಗುತ್ತದೆ ಮತ್ತು ಕೇಪನ್‌ನ ಎಲ್ಲ ಗುಣಗಳನ್ನೂ ತೋರಿಸುತ್ತದೆ. ಆದಾಗ್ಯೂ ಈ ಕಾಲದ ನಂತರ ಮೈಗೂಡುವಿಕೆ ಅತ್ಯಲ್ಪ.

ರಾಸಾಯನಿಕದಿಂದ ಕೇಪನೈಸ್ ಮಾಡಿದ ಮರಿಹುಂಜವನ್ನು ಆಹಾರಕ್ಕಾಗಿ ಉಪಯೋಗಿಸುವಾಗ ಮಾತ್ರ ಇಟ್ಟಿರುವ ಭಾಗವನ್ನು ಎಚ್ಚರಿಕೆಯಿಂದ ತೆಗೆದು ಬಿಸಾಡಬೇಕು. ಏಕೆಂದರೆ ಚೋದಕಗಳು ಗ್ರಾಹಕರ ಮೇಲೆ ಕೆಟ್ಟ ಪರಿಣಾಮಮಾಡಬಹುದು. ಇದರಿಂದಲೇ ಬೇಯಿಸುವುದಕ್ಕೆ ಮೊದಲೇ ಕತ್ತರಿಸಿ ಬಿಸಾಡಲು ಅನುಕೂಲವಾಗುವಂತೆ ಮಾತ್ರೆಯನ್ನು ತಲೆಯ ತಳಭಾಗದಲ್ಲಿ ಸಾಧ್ಯವಾದಷ್ಟೂ ಮೇಲಿಡಬೇಕು.

ಪಾರಿಭಾಷಿಕ ಶಬ್ದಕೋಶ

ಅ

ಅಗಸೆ, ಚೊಗಚೆ — Sesbania grandiflora
ಅಡಕುನಾಳ — Stricture
ಅಡ್ಡಕೊಯ್ತ — Cross section
ಅಡ್ಡತಳಿ — Mongrel
ಅಡ್ಡಾದಿಡ್ಡಿ — Random
ಅಡ್ಡಾದಿಡ್ಡಿ ಮಾದರಿ ಪರೀಕ್ಷೆ — Random sample test
ಅನುವರ್ತನ ಶೀಲ — Pliable
ಅನುವಂಶೀಯ — Genetic
ಅನುವಂಶೀಯ ಈಡುಗುಣ — Hereditary predisposition
ಅನುಷಂಗಿಕ — Accessory
ಅನುಷಂಗಿಕ ಆಹಾರಾಂಶ — Accessory food factor
ಅನ್ನನಾಳ — Alimentary tract
ಅನ್ನಾಂಗ, ಜೀವಸತ್ವ — Vitamin
ಅಫಲೀಕರಣ — Defertilization
ಅಫಲೀಕೃತ — Infertile
ಅರೂಪ — Perosis
ಅಲಮಾರು — Cabinet
ಅಲೆಮಾರಿ ರಕ್ಷಕ — Hover
ಅವಧಿಕ ಶಾಖ — Critical temperatuıe
ಅಳಿಲು ಬಾಲ — Squirrel tail

ಆ

ಆಘಾತ ಹೀರುಕ — Shock absorber
ಆದ್ಯವಸ್ಥ — Rudimentary
ಆಯ್ಕೆ — Selection
ಆಲಿಕೆ — Funnel

ಇ

ಇಕ್ಕುಳ — Forceps
ಇಳಿಗುಂದುವಿಕೆ — Deterioration
ಇಂಗಾಲಾಮ್ಲ — Carbon dioxide

ಈ

ಈಲಿ — Liver

ಉ

ಉತ್ತಮೀಕರಣ — Grading
ಉತ್ಪಾದನಾ ಸಾಮರ್ಥ್ಯ — Fecundity
ಉಪಪ್ರಭೇದ — Sub-species
ಉರಿಮಾಡುವ ಬಾಯಿ — Stoke hole
ಉರಿಯೂತ — Inflamation
ಉರುಟುನುಚ್ಚು — Midllings
ಉರುವಲು — Fuel
ಉಷ್ಣಸಮಸ್ಥಿತಿ ರಚನೆ — Thermostatic contrivance
ಉಸಿರ್ನಾಳ — Trachea

ಊ

ಊದಾ — Willow
ಊದಿದ ಪಾದ — Bumble foot

ಎ

ಎರೆಚೀಲ — Crop
ಎರೆಹುಳು — Earth worm
ಎಲುಗುಳಿ — Sinus
ಎಲುಮುರುಟು — Rickets
ಎಲುವು(ಬು) — Bone

ಏ

ಏಕಾಣುಜೀವಿ — Bacterium

ಒ

ಒಣಗಿಸಿದ ರಕ್ತ — Dried blood
ಒಪ್ಪಾರುರೀತಿ — Lean-to-type
ಒಳತಳಿಎಬ್ಬಿಕೆ — In breeding
ಒಂಟಿಜುಟ್ಟು — Single comb

ಅಂ

ಅಂಗೀಕೃತ ವ್ಯಾಪಾರೀ ಕುಕ್ಕುಟ ಕೇಂದ್ರ — Accredited commercial form

ಅಂಟುಜಾಡ್ಯ, ಸಾಂಕ್ರಾಮಿಕ ರೋಗ	Infectious disease
ಅಂಡ	Ova
ಅಂಡನಾಳ	Oviduct
ಅಂಡಾಶಯ	Ovary
ಅಂತಃಸಂಕರಣ	In-crossing
ಕ	
ಕಟ್ಯಸ್ಥಿ	Hip bone
ಕಡಲೆ	Gram
ಕತ್ತರಿ ಸಂಕರಣ, ಶಿಲುಬೆ ಸಂಕರಣ	Criss-crossing
ಕಪ್ಪುಮಣ್ಣು	Clay soil
ಕರಡಪೆಟ್ಟಿಗೆ ರಕ್ಷಣೆ	Hay box brooding
ಕರಿದಲೆ	Black head
ಕ್ರಮ	System
ಕಾಯಿಸುವ ಸುರುಳಿ	Heating Coil
ಕಾಯ್ಬೀಜಾಣು	Coccidia
ಕಾಲಿನ ಬಲೆ	Web
ಕಾಲುಪಟ್ಟಿ	Leg band
ಕಾಲ್ಬೇನೆ	Gout
ಕಾವುಕೂರುವ ಮನೋವೃತ್ತಿ	Broodiness
ಕಾವುಕೊಡುವ ಯಂತ್ರ	Incubator
ಕಾವುಕೊಡುವಿಕೆ	Incubation
ಕಾವುಜೇಡಿ	Fire clay
ಕಿಗ್ಗತ್ತು	Isthamus
ಕಿವಿಹಾಲೆ	Ear lobe
ಕೀಪ	Infundibulum
ಕುಡುಗರಿ	Sickle feather
ಕುದುರೆ ಮಸಾಲೆ	Lucerne
ಕುರುಡು ಪಾರ್ಶ್ವ	Blind cheek
ಕುಲಾವಿ ಬಾಲ	Wig tail
ಕುಳಿಮೇವು	Silage
ಕೂಡುಗಂಬಿ	Perch
ಕೂಪ	Follicle
ಕೂಳೆಮಾಂಸ	Meat offal
ಕೃತಕ ವೀರ್ಯಾವಾಪನೆ	Artificial insemination
ಕೆಡುಬೆರಕೆ	Contamination
ಕೈಗವಸು	Hand gloves
ಕೊಕ್ಕರೆ ರೋಗ	Ranikhet disease
ಕೊಕ್ಕೆ	Hook
ಕೊಬ್ಬುಯುತ ಈಲಿ	Fatty liver
ಕೋಳಿ	Fowl
ಕೋಳಿಕಾಲರ ರಕ್ತನೀರು	Fowl cholera serum
ಕೋಳಿ ಪಾರ್ಶ್ವ ವಾಯು(ಲಕ್ವ)	Fowl paralysis
ಕೋಳಿ ಸಿಡುಬು	Fowl pox
ಕಂಡಿ ರೋಸುರಿಕೆ	Vent gleet
ಖ	
ಖನಿಜ	Mineral
ಗ	
ಗಟ್ಟಿನಾರು	Crude fibre
ಗಡುಸು ಚಾಚು	Spur
ಗರ್ಭಾಶಯ	Uterus
ಗರಸು	Gravel
ಗರಿ	Feather
ಗರಿಯುರ್ಚು	Moult
ಗಾಳಿಕೋಶ	Air cell
ಗಾಳಿಗೂಡು	Air sinus
ಗಾಳಿಚೀಲ	Air sac
ಗಾಳಿಜಾಗ	Air space
ಗಾಳಿ ಪೊಟ್ಟಣ	Air pocket
ಗಾಳಿಯುಬ್ಬಟೆ	Emphysema
ಗುದ	Cloaca
ಗುರುತುಪಟ್ಟಿ	Label
ಗುಲಾಬಿ ಜುಟ್ಟು	Rose comb
ಗೂಡು, ಹಕ್ಕೆ	Nest
ಗೆದ್ದಲು ಹುಳು	White ant
ಗೆಣಸು	Sweet Potato
ಗೋಚಿಕ	Scoop
ಗೋಣಿತಾಟು	Gunny cloth
ಗೋಧಿ ಹೊಟ್ಟು, ಬೂಸ	Bran
ಗೊಂಡೆ ಹುಳು	Slug
ಗಂಟಲ್ಕುಳಿ	Gullet

ಗಂತಿ	Tumour, wart
ಗಂಧಕ	Sulpher
ಗ್ರಂಥಿಯುಕ್ತ ಜಠರ	Proventriculus

ಚ

ಚಟ್ಟೆಹುಳು	Flat worm
ಚವಳು	Saline
ಚಾಲಕ	Motor
ಚಿಗಟ	Flea
ಚಿಪ್ಪಿನ ಪುಡಿ	Sheel grit
ಚಿಪ್ಪು	Shell
ಚಿಪ್ಪು ಸೀಳುವಿಕೆ	Pipping
ಚಿಮುಕಣ ಬೇನೆ	Aspergillosis
ಚಿಲುಮೆ	Fountain
ಚೋದಕ	Hormone

ಜ

ಜಗಲಿ	Platform
ಜಘನಾಸ್ಥಿ	Pubic bone
ಜನ್ಮವೃತ್ತಾಂತ	Parentage
ಜನಪೊರೆ	Vitelline membrane
ಜಲಯುಕ್ತ	Hydrated
ಜಳಬಡಿತ	Heat stroke
ಜಾರಿದ ಕಂಡರ	Stipped tendon
ಜಾರುದ್ವಾರ	Slide door
ಜೀರುಂಡೆ	Beetle
ಜೀವಾಣು	Organism
ಜೀವಾಣು ಬಿಲ್ಲೆ	Germinal disc
ಜುಟ್ಟು	Comb
ಜೊತೆಗೂಡಿಸುವಿಕೆ	Mating
ಜೋಲುಬಿದ್ದ	Lopped
ಜೋಲುಮಾಂಸಲ	Wattle

ತ

ತತ್ತಿಚೀಲ	Oocyst
ತಲೆಗ	Magnum
ತಳಗಟ್ಟು	Keel
ತಳಿ	Breed
ತಳಿಎಬ್ಬಿಸುವಿಕೆ	Breeding
ತಳಿಗಾರ	Breeder
ತಾಡಪತ್ರೆ	Canvas
ತಿರುಚಿಕೊಂಡ	Twisted
ತ್ರಿಕೋನಾಕಾರ	Gable
ತೀವ್ರತೆ	Intensity
ತುಪ್ಪುಳ	Fluff
ತೋಕೆಗೋಧಿ	Oats
ತೌಡು	Rice bran
ತಂತಿಬಲೆ	Wire mesh

ದ

ದಟ್ಟಕಂದು	Chocolate
ದಾಟುವ ಕಂಡಿ	Pop hole
ದ್ವಾರ	Vent
ದುರಾರ್ಗರುಳು	Duodenum
ದೃಢತೆ	Persistancy
ದೋಷಯುತ ಮೇಯಿಸುವಿಕೆ	Malnutrition
ದಂಶಕ	Rodent
ದುಂಡುಹುಳು	Round worm

ಧ

ಧ್ವನಿನಾಳ	Larynx
ಧಾನ್ಯ ಗ್ಲೂಟೆನ್ ಆಹಾರ	Corn gluten meal

ನ

ನಮೂನೆ	Type
ನಾಡಬೇಲ	Leucaena glauca
ನಾರಗಸೆ ಬೀಜ	Linseed
ನಾರು	Fibre
ನಾಳಗಂಡಿ	Lumen
ನಿರೋಧಕ	Insulator
ನಿರ್ವಾತ ಸ್ವಚ್ಛಕ	Vacuum cleaner
ನಿರ್ವೀರ್ಯತನ	Sterility
ನೀರ್ಗಲ್ಲೊಣಗಿಸಿದ	Freeze-dried
ನೀರಾರಿದ	Anhydrous
ನೀರುಣಿಕ	Waterer
ನೀರುದಾಟದ	Water-proof
ನುಚ್ಚು	Shorts
ನುಸಿ	Mite
ನೆರೆ ಬಿಳಿಗಂಟು	Greyish white nodule

ಪ

ಪಕ್ಕದಿಂದ ಪಕ್ಕಕ್ಕೆ ಮಟ್ಟವಾದ	Even-span
ಪಟಿಕ	Alum
ಪಟ್ಟೆಯುಕ್ತ	Barred
ಪರ್ಯಾಯ	Alternate
ಪರಸ್ಪರ ಪುನರಾವರ್ತಕ ಆಯ್ಕೆ	Reciprocal recurrent selection
ಪರಾವಲಂಬಿ	Parasite
ಪರಾವೃತ	Prolapse
ಪರಿಣಾಮ	Effect
ಪರಿಸರಣೀಯ	Environmental
ಪರೀಕ್ಷಾ ಕಂಡಿ	Inspection window
ಪಶುವೈದ್ಯಕೀಯ ಜೈವಿಕ ಉತ್ಪನ್ನಗಳ ಸಂಸ್ಥೆ	Veterinary biological products institute
ಪಳಾಸ್ತ್ರ	Plaste.
ಪಂಜ	Claw
ಪ್ರತಿಜೀವಿ	Antibiotic
ಪ್ರಭೇದ	Species
ಪ್ರಾಣಿ ಉದ್ಯೋಗ ಪರಿಷತ್ತು	Bureau of animal industry
ಪ್ರಾಣಿಜನ್ಯ ಸಸಾರಜನಕ ಅಂಶ	Animal protein factor
ಪ್ರಾನ್ನಾಳ	Oesophagus
ಪ್ರಾರಂಭಿಕ	Starter
ಪಿತ್ತಕೋಶ	Gall bladder
ಪೀಪಾಯಿ	Barrel
ಪೀಳಿಗೆ	Progeny, generation
ಪ್ಲೀಹ	Spleen
ಪುಕ್ಕ ತರಿಯುವ ನುಸಿ	Depluming mite
ಪುಡಿ	Mash
ಪೊಳ್ಳು	Cavity
ಪೋಷಕ ತಾಣ (ಮರಿಗಳ ತಟ್ಟೆ)	Nursery
ಪಂಖ	Fan

ಫ

ಫಲವತ್ತತೆ	Fertility
ಫಲೀಕರಣ	Fertilization
ಫಲೀಕೃತ	Fertilised

ಬ

ಬಟ್ಟಲು ಹಿಡುಕ	Capsule holder
ಬಟಾಣಿ ಜುಟ್ಟು	Pea comb
ಬಟ್ಟಿಗಷ್ಟು	Distillery sludge
ಬಡು	Shelf, Rack
ಬಸವನ ಹುಳು	Snail
ಬಾಲಕಾಪು	Tail covert
ಬಾಹ್ಯಸಂಕರಣ	Out crossing
ಬಿರುಗಾಳಿ ಲಾಂದ್ರ	Hurricane lantern
ಬಿಸಿ ಬೆಸುಗೆಕಡ್ಡಿ	Hot soldering iron
ಬಿಸಿರಕ್ಷಕ (ಬಿಸಿಬುಟ್ಟಿ)	Warm brooder
ಬಿಳಿಲೋಳೆ	Albumen
ಬೀಜಕಣ	Spore
ಬೀಜಬಿಂದು	Germ spot
ಬುಡಕಟ್ಟು	Race
ಬುರುಡೆ	Bulb
ಬೂಜು	Mould
ಬೆದಕಡ್ಡಿ	Probe
ಬೆದೆಜನಕ	Oestrogen
ಬೆಳಕಿನ ಪರೀಕ್ಷೆ	Candling
ಬೇಗೆ ಗೊದಗುದಿ	Heat prostration
ಬೇಗೆ ಬಡಿತ	Sun stroke
ಬೇರ್ಪಡಿಸುವಿಕೆ	Culling
ಬೊಜ್ಜು	Obesity
ಬೋನುಹಕ್ಕಿ	Trap nest
ಬಂಜೆತನ	Barrenness
ಬಂಡಾರ	Yolk

ಭ

ಭಕ್ಷಕ	Predator
ಭ್ರೂಣ	Embryo

ಮ

ಮಜ್ಜಿಗೆ	Butter milk
ಮಧ್ಯಂತರ ಕೀಟ	Intermediate host
ಮರಮದ್ಯ ಗೂಡಿಸಿದ ಮಧ್ಯಸಾರ	Methylated spirit
ಮರಳುಗೋಡು	Sandy loam
ಮರಿಮಾಡುವ ಹಾಸು	Hatching bed
ಮರಿಯಾಗುವ ಶಕ್ತಿ	Hatchability
ಮರಿಹುಂಜ	Cockerel
ಮರಿಹೇಂಟೆ	Pullet
ಮಾಂಸಲಿ	Pancreas
ಮಿಶ್ರತಳಿ	Cross breed
ಮೀನು ಪುಡಿ	Fish meal
ಮೀನೆಣ್ಣೆ	Fish liver oil
ಮುಚ್ಚಳ	Damper
ಮುತ್ತಿನ ಕಣ್ಣು	Pearly eye
ಮುಮ್ಮಾರ್ಗ ಸಂಕರಣ	Three way crossing
ಮುರಿಗರುಳು	Ileum
ಮುಂಜೀವಿವರ್ಗ	Protozoa
ಮೂಗರುಳು	Caecum
ಮೂತ್ರಜನಕಾಂಗ	Kidney
ಮೂತ್ರನಾಳ	Ureter
ಮೂಲ ಹಳ್ಳಿ	Key village
ಮೃದ್ಯಚಿಕಾರಕ	Broiler
ಮೇಯಿಸುವಿಕೆ	Feeding
ಮೇವ್ಣಿಕ	Feeder
ಮೊಟ್ಟೆತಟ್ಟೆ	Egg tray

ಯ

ಯವೆ	Barley
ಯಾಂತ್ರಿಕ ಕೊಕ್ಕು ಕತ್ತರಿ	Mechanical debeaker
ಯೋನಿ	Vagina

ರ

ರಕ್ಷಕ	Brooder
ರಕ್ತಾಹಾರ	Blood meal
ರಜ್ಜು	Cord
ರಸಮಟ್ಟ	Spirit level
ರಾಜ್ಯನಿಯಂತ್ರಿತ ಕೇಂದ್ರ	State controlled station
ರಾಜ್ಯ ಹತೋಟಿಯ ಮೊಟ್ಟೆಯಿಡುವ ಪರೀಕ್ಷೆ	State oontrolled laying test
ರಾಷ್ಟ್ರೀಯ ಸಂಶೋಧನಾ ಸಂಸ್ಥೆ	National Research Council
ರೆಕ್ಕೆಪಟ್ಟಿ	Wing band
ರೇಷ್ಮೆಹುಳು	Silk worm
ರಂಜಕ	Phosphorus

ಲ

ಲಕ್ವ	Paralysis
ಲಘು ತೇಲು	Light float
ಲಾಡಿಹುಳು	Tape worm
ಲಿಂಗ ಸಂಬಂಧೀ ಗುಣ	Sex linked charactor
ಲೋಹದ ಜಾಲರಿ	Expanded metal
ಲೋಳೆಗೀವು	Muco-purulent

ವ

ವರ್ಗ	Class
ವರ್ಣದ್ರವ್ಯ	Pigment
ವಾತಾಯನ	Ventilater
ವಿಭೇದ	Strain
ವಿಭೇದಗಳ ಹೊಂದಾಣಿಕೆ ಪರೀಕ್ಷೆ	Testing strains for combinability
ವಿವಿಧತೆ	Variety
ವಿಷಕಣ	Virus
ವೃಷಣ	Testes
ವೈಯಕ್ತಿಕತೆ	Individuality
ವೈಯಕ್ತಿಕ ಬೇರ್ಪಡಿಸಿದ ಮಟ್ಟ	Independent culling level
ವೈಶಿಷ್ಟ್ಯ	Characteristic
ವಂಶವಾಹಿ	Gene

ವಂಶವಾಹಿ ರಚನೆ	Genetic make up
ವಂಶಾವಳಿ	Pedigree

ಶ

ಶರ್ಕರಪಿಷ್ಟ	Carbohydrate
ಶಲ್ಕ	Scale
ಶಾರ್ಕ್ ಈಲಿ ಎಣ್ಣೆ	Shark liver oil
ಶ್ವಾಸಕೋಶ ಉರಿಯೂತ	Pneumonia
ಶಿಲೀಂಧ್ರ	Fungi
ಶೀತ	Cold
ಶೀತರಕ್ಷಣೆ	Cold brooding
ಶೀತಲೀಕರಣ ವಿಭಾಗ	Cooling compartment
ಶುಕ್ರ	Sperm
ಶುಕ್ರವಾಹಿಕ	Vas deference
ಶುಕ್ರಾಣು	Spermatozoa
ಶೋಫ	Oedema
ಶಂಕಾಕೃತಿಯ ಮರೆ	Conical shade

ಸ

ಸಜ್ಜೆ	Bajra
ಸಮತೋಲ	Balanced
ಸಮುದಾಯ	Colony
ಸರಾಸರಿ	Mean
ಸವೆ	Fray
ಸಸಾರಜನಕ	Protein
ಸಸ್ತನಿ	Mammal
ಸ್ಥಳಜನ್ಯ	Local
ಸ್ವಚ್ಛ ಮೊಟ್ಟೆ	Clear egg
ಸ್ವಜಾತಿ ಭಕ್ಷಣೆ	Cannibalism
ಸ್ವಭಾವ	Temperment
ಸಾಕುಯಂತ್ರ	Rearer
ಸಾಧನ ಸಾಮಗ್ರಿ	Equipment
ಸಾಪೇಕ್ಷ ಸಾಂದ್ರತೆ	Specific gravity
ಸಾಮರ್ಥ್ಯ	Potentiality
ಸಾರೀಕರಣ	Concentration
ಸಾಲು ತಳಿಎಬ್ಬಿಕೆ	Line breeding
ಸಾಂಕ್ರಾಮಿಕ	Infectious
ಸಾಂಸರ್ಗಿಕ	Contagious
ಸ್ನಾಯು	Muscle
ಸಿಂಪಿಚಿಪ್ಪು	Oyster shell
ಸ್ಥಿತಿ ಸ್ಥಾಪಕತ್ವ	Elasticity
ಸ್ತ್ರೀ ಬೀಜಕೋಶ	Blastodisc
ಸುಣ್ಣಕಲ್ಲು	Limestone
ಸೂಕ್ಷ್ಮಜೀವಿ	Micro-organism
ಸ್ಥೂಲತೇಲು	Heavy float
ಸೆಣಬು	Sunnhemp
ಸೋರುಕ	Leaker
ಸೋಂಕಿಕ	Infective
ಸೋಂಕು	Infection
ಸಂಕರ	Cross
ಸಂಕರ ಸತ್ವ	Hybrid vigour
ಸಂಕರತಳಿ, ಅತ್ಯುತ್ಪಾದಕ ತಳಿ	Hybrid
ಸಂತತಿ ಪರೀಕ್ಷೆ	Progeny test
ಸಂಭೋಗ	Copulation

ಹ

ಹಕ್ಕಿಪೆಟ್ಟಿಗೆ	Nest box
ಹಗರಿನ ಕಾಲಿನ ನುಸಿ	Scaly-leg mite
ಹತ್ತರಿಪುಡಿ	Wood shaving
ಹರಡಿಕ	Spreader
ಹಳದಿ ವರ್ಣದ್ರವ್ಯ	Xanthophyll
ಹಾಲೆ	Lobe
ಹಾಲೊಡಕು ನೀರು, ಮಸ್ತು	Whey
ಹಾಲಂದ	Emulsion
ಹಿಕ್ಕೆ	Dropping
ಹಿಕ್ಕೆ ತಟ್ಟೆ	Dropping board
ಹಿಡಿಯುವ ಕೊಕ್ಕೆ	Catching hook
ಹಿಡಿಯುವ ಪೆಟ್ಟಿಗೆ	Catching crate
ಹೀರು	Absorb
ಹಿಂದೆಳೆಕ	Retractor
ಹುಟ್ಟೆಸಿಪ್ಪು	Favus
ಹುಂಜ	Cock
ಹುಂಜಕಾಳಗ	Cock fight
ಹೂಮರಿಪರೆ ಆರ್ದ್ರಲಸಿಕೆ	Chickmembrane wet vaccine

ಹೆಬ್ಬೆರಳ ಗುರುತು	Thumb mark	ಹೊಗೆಯಾಡಿಸುವುದು	Fumigation
ಹೇನು	Lice	ಹೊರಚರ್ಮ	Epidermis
ಹೇಂಟೆ	Hen	ಹೊರಬಿಗೆಪರೆ	Peritoneum
ಹೇಂಟೆ-ದಿನ	Hen-day	ಹಂಜರ	Coop

ಆಧಾರ ಗ್ರಂಥಗಳು

1. Altenburg, Edgar, 1945, 'Genetics'. Henry Holt and Company, Inc., New York.

2. Ayivor, V.F.K. and Hellins, C.E.K., 1953, 'Poultry-Keeping in the Tropics'. Oxford University Press, London.

3. Barger, E. H. and Card, L. E., 1949, 'Diseases and Parasites of Poultry'. Henry Kimpton, London.

4. Beebe William, 1918–22, 'A Monograph of the Pheasants'. **4 Vols.** Witherby & Co., New York.

5. Benjamin, E. W., Pierce, H. C., and Termohlen, 1959, 'Marketing Poultry Products'. John Wiley & Sons, Inc., New York.

6. Biester, H. E. and Schwarte, L. H., 1948, 'Diseases of Poultry'. Collegiate Press, Inc., of Iowa State College, Ames, Iowa.

7. Blount, W. P., 1947, 'Diseases of Poultry', Bailliere, Tindall & Cox, London.

8. Bradley, O. Charnock, 1938, 'The Structure of the Fowl'. Oliver and Boyd, Edinburgh.

9. Brown, Edward, 1906, 'Races of Domestic Poultry'. Edward Arnold & Co., London.

10. Brown, Edward, 1929, 'Poultry Breeding and Production'. Ernest Benn Ltd., London.

11. Card, Leslie E. and Henderson, Melvin, 1937, 'Farm Poultry Production'. Interstate Printing Co., Danville, Ill.

12. Charles, T. Burr and Stuart, Homer O., 1936, 'Commercial Poultry Farming'. Interstate Printing Co., Danville, Ill.

ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

ಮಾರಾಟಕ್ಕೆ ದೊರೆಯುವ ಪುಸ್ತಕಗಳು

1.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ I)	ಸಾದಾ ಪ್ರತಿ	5–00
2.	ಕೀಟ ಹತೋಟಿ	(ದ್ವಿತೀಯ ಮುದ್ರಣ)	10–00
3.	ಕೃಷಿ ರಸಾಯನ ಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	ಸಾದಾ ಪ್ರತಿ	3–75
		ಕ್ಯಾಲಿಕೊ ಪ್ರತಿ	5–00
4.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	ಸಾದಾ ಪ್ರತಿ	12–00
		ಕ್ಯಾಲಿಕೊ ಪ್ರತಿ	15–00
5.	ರೈತರ ನೆಚ್ಚುಮೆಚ್ಚಿನ ಮರಗಳು	ಸಾದಾ ಪ್ರತಿ	12–00
		ಕ್ಯಾಲಿಕೊ ಪ್ರತಿ	15–00
6.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ II)	ಸಾದಾ ಪ್ರತಿ	9–00
		ಕ್ಯಾಲಿಕೊ ಪ್ರತಿ	12–00
7.	ಮಣ್ಣು ಮತ್ತು ನೀರು ನಿರ್ವಹಣೆ	ಸಾದಾ ಪ್ರತಿ	12–00
		ಕ್ಯಾಲಿಕೊ ಪ್ರತಿ	15–00
8.	ಮಣ್ಣು	ಸಾದಾ ಪ್ರತಿ	9–00
		ಕ್ಯಾಲಿಕೊ ಪ್ರತಿ	12–00
9.	ಕೃಷಿ ಸಹಕಾರ	ಸಾದಾ ಪ್ರತಿ	5–00
		ಕ್ಯಾಲಿಕೊ ಪ್ರತಿ	8–00
10.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	ಸಾದಾ ಪ್ರತಿ	12–00
		ಕ್ಯಾಲಿಕೊ ಪ್ರತಿ	15–00
11.	ಗೋಸಂಪತ್ತು	ಸಾದಾ ಪ್ರತಿ	5–00
		ಕ್ಯಾಲಿಕೊ ಪ್ರತಿ	8–00
12.	ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು	ಸಾದಾ ಪ್ರತಿ	6–00
		ಕ್ಯಾಲಿಕೊ ಪ್ರತಿ	9–00
13.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	ಸಾದಾ ಪ್ರತಿ	14–00
		ಕ್ಯಾಲಿಕೊ ಪ್ರತಿ	17–00
14.	ಪಶುವೈದ್ಯಕೀಯ ವಿಜ್ಞಾನ	ಸಾದಾ ಪ್ರತಿ	6–00
		ಕ್ಯಾಲಿಕೊ ಪ್ರತಿ	9–00
15.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	ಸಾದಾ ಪ್ರತಿ	6–50
		ಕ್ಯಾಲಿಕೊ ಪ್ರತಿ	9–50
16.	ಟ್ರಾಕ್ಟರು ಹಾಗೂ ಟ್ರಾಕ್ಟರುಗಳನ್ನು	ಸಾದಾ ಪ್ರತಿ	6–00
	ಸುಸ್ಥಿತಿಯಲ್ಲಿಡುವ ಕ್ರಮಗಳು	ಕ್ಯಾಲಿಕೊ ಪ್ರತಿ	10–00
17.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ III)	ಸಾದಾ ಪ್ರತಿ	8–00
		ಕ್ಯಾಲಿಕೊ ಪ್ರತಿ	12–00

36. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ
37. ತೆಂಗು, ಅಡಕೆ ಹಾಗೂ ಇತರ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ
38. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ

ಅಚ್ಚಿನಲ್ಲಿರುವ ಪ್ರಕಟಣೆಗಳು

39. ಭಾರತೀಯ ಗ್ರಾಮೀಣ ರೈತ ಯುವಕ ಸಂಘಗಳ ಸಂಘಟನೆ
40. ಸಸ್ಯ ಸಾಮ್ರಾಜ್ಯ
41. ಭಾರತದಲ್ಲಿ ಜೇನುಸಾಕಣೆ
42. ಜೇನುಸಾಕಣೆ
43. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ
44. ಸಾವಯುವ ರಸಾಯನಶಾಸ್ತ್ರ ಪ್ರವೇಶಿಕೆ
45. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ 2)
46. ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ
47. ತರಕಾರಿ ಬೆಳೆಗಳ ಕೀಟನಿಯಂತ್ರಣ
48. ಕಲ್ಲುನಾರು ಗಿಡಗಳು
49. ಎಣ್ಣೆಕಾಳಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ
50. ಸಾಕುಪ್ರಾಣಿಗಳ ಭ್ರೂಣಶಾಸ್ತ್ರ
51. ರೇಖಾತ್ಮಕ ಬೀಜಗಣಿತ
52. ಹತ್ತಿ (ನೂಲು) ಮತ್ತು ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ